ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ
ಪಿಎಚ್.ಡಿ. ಮಹಾಪ್ರಬಂಧ

ಕನ್ನಡ ಮಹಿಳಾ ಹರಿದಾಸರು–ಒಂದು ಅಧ್ಯಯನ ”

ಸಂಶೋಧನಾ ವಿದ್ಯಾರ್ಥಿನಿ

ಶ್ರೀಮತಿ ವಾಣಿಶ್ರೀ ಬಿ.ಎಂ.

ಮಾರ್ಗದರ್ಶಕರು:

ಡಾ॥ ಅನಂತಪದ್ಮನಾಭ ರಾವ್

ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನಾ ಕೇಂದ್ರ,
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು–560 019.

2014

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ
ಪಿಎಚ್.ಡಿ. ಮಹಾಪ್ರಬಂಧ

" ಕನ್ನಡ ಮಹಿಳಾ ಹರಿದಾಸರು–ಒಂದು ಅಧ್ಯಯನ "

ಸಂಶೋಧನಾ ವಿದ್ಯಾರ್ಥಿನಿ

ಶ್ರೀಮತಿ ವಾಣಿಶ್ರೀ ಬಿ.ಎಂ.

ಮಾರ್ಗದರ್ಶಕರು:

ಡಾ|| ಅನಂತಪದ್ಮನಾಭ ರಾವ್

ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನಾ ಕೇಂದ್ರ,
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು–560 019.

2014

ಘೋಷಣಾ ಪತ್ರ

ಡಾ॥ ಅನಂತಪದ್ಮನಾಭರಾವ್‌ರವರ ಮಾರ್ಗದರ್ಶನದಲ್ಲಿ 'ಕನ್ನಡ ಮಹಿಳಾ ಹರಿದಾಸರು–ಒಂದು ಅಧ್ಯಯನ' ಎಂಬ ವಿಷಯವನ್ನು ಕುರಿತು ನಾನು ಸಂಶೋಧನಾ ಅಧ್ಯಯನ ನಡೆಸಿ ಪಿಎಚ್.ಡಿ. ಪದವಿಗಾಗಿ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದು 2014ನೇ ಸಾಲಿನಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಸಲ್ಲಿಸುತ್ತಿದ್ದೇನೆ.

ಈ ಮಹಾಪ್ರಬಂಧದ ವಿಷಯ ಅಥವಾ ಇದರ ಯಾವುದೇ ಭಾಗವು ಈ ಮೊದಲು ಬೇರಾವುದೇ ಪದವಿಗಾಗಲೀ ಅಥವಾ ಇತರೆ ಉದ್ದೇಶಗಳಿಗಾಗಲೀ, ಬಿಡಿಯಾಗಿ ಇಲ್ಲವೇ ಇಡಿಯಾಗಿ ಪ್ರಕಟವಾಗಿಲ್ಲವೆಂದು ಈ ಮೂಲಕ ಘೋಷಿಸುತ್ತೇವೆ.

ಸಂಶೋಧನಾ ವಿದ್ಯಾರ್ಥಿ

(ವಾಣಿಶ್ರೀ ಬಿ.ಎಂ.)

ಸ್ಥಳ: ಬೆಂಗಳೂರು
ದಿನಾಂಕ: 17–1–2014

ದೃಢೀಕರಣ ಪತ್ರ

ಶ್ರೀಮತಿ ವಾಣಿಶ್ರೀ ಬಿ.ಎಂ., ಅವರು ನನ್ನ ಮಾರ್ಗದರ್ಶನದಲ್ಲಿ 'ಕನ್ನಡ ಮಹಿಳಾ ಹರಿದಾಸರು–ಒಂದು ಅಧ್ಯಯನ' ಎಂಬ ವಿಷಯವನ್ನು ಕುರಿತು ಸಂಶೋಧನಾ ಅಧ್ಯಯನ ನಡೆಸಿ ಪಿಎಚ್.ಡಿ. ಪದವಿಗಾಗಿ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದು 2014ನೇ ಸಾಲಿನಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಸಲ್ಲಿಸಿದ್ದಾರೆ.

ಪ್ರಸ್ತುತ ವಿಷಯವನ್ನು ಕುರಿತು ಇಡಿಯಾಗಿ ಅಥವಾ ಬಿಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲ. ಇಲ್ಲಿ ನಿರೂಪಿಸಿರುವ ಅಂಶಗಳು ಸಂಶೋಧನಾತ್ಮಕವಾಗಿದ್ದು, ಈ ಪ್ರಬಂಧವು ಪಿಎಚ್.ಡಿ ಪದವಿಗೆ ಅರ್ಹವಾಗಿದೆ ಎಂದು ನಾನು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ॥ ಅನಂತಪದ್ಮನಾಭರಾವ್)

ಸ್ಥಳ: ಬೆಂಗಳೂರು
ದಿನಾಂಕ: 17-1-2014

ಪರಿವಿಡಿ

1. ಅಧ್ಯಯನದ ಉದ್ದೇಶ

2. ಪ್ರಮುಖ ಮಹಿಳಾ ಹರಿದಾಸರು

3. ಆಧುನಿಕ ಮಹಿಳಾ ಹರಿದಾಸರು

4. ಮಹಿಳಾ ಹರಿದಾಸರ ಕೀರ್ತನೆಗಳ ವಸ್ತು ವಿನ್ಯಾಸ:

4.1 ದೇವತಾ ತಾರತಮ್ಯ
4.2 ಗುರುಗಳು, ಯತಿಗಳು, ದಾಸರು
4.3 ನಿಂದಾ ಸ್ತುತಿಗಳು
4.4 ದಶಾವತಾರ
4.5 ನದೀ ಸ್ತೋತ್ರಗಳು
4.6 ತತ್ವ ವಿಚಾರ
4.7 ನೀತಿ ನಿರೂಪಣೆ
4.8 ಆತ್ಮ ನಿವೇದನೆ
4.9 ತೀರ್ಥ ಕ್ಷೇತ್ರ
4.10 ವಿಶೇಷ ಕೀರ್ತನೆಗಳು

5. ದೀರ್ಘ ಕೃತಿಗಳು (ಖಂಡ ಕಾವ್ಯಗಳು):

5.1 ರಾಮಾಯಣ ಪ್ರಸಂಗಗಳು
5.2 ಮಹಾಭಾರತ ಪ್ರಸಂಗಗಳು
5.3 ಭಾಗವತ ಪ್ರಸಂಗಗಳು
5.4 ಜಾನಪದ ಅಂಶಗಳು
5.5 ಪೌರಾಣಿಕ ಕಥನ ಕಾವ್ಯಗಳು
5.6 ಐತಿಹಾಸಿಕ ವ್ಯಕ್ತಿಗಳ ಹಾಗೂ ಇತರೆ ದೀರ್ಘ ಕೀರ್ತನೆಗಳು

6. ಸಂಪ್ರದಾಯದ ಹಾಡುಗಳು:

6.1 ವ್ರತ ಕಥೆ–ಪೂಜಾ ವಿಧಾನ ಪದ್ಧತಿ
6.2 ಷೋಡಷ ಕರ್ಮಗಳು–ಆ ಸಂದರ್ಭದ ಧಾರ್ಮಿಕ ಸಂಪ್ರದಾಯಗಳು
6.3 ಸ್ಥಳೀಯ ಸಂಪ್ರದಾಯಗಳು
6.4 ಬೀಗರ ಹಾಡುಗಳು

ಅನುಬಂಧ–2:
ಅಂಕಿತ ಪದಗಳು

ಅನುಬಂಧ–3:
ಅಪ್ರಕಟಿತ ಕೃತಿಗಳು

ಅನುಬಂಧ–4:
ಪೀಳಿಗೆಗಳು

11. ಸಹಾಯಕ ಸಾಹಿತ್ಯ:
11.1 ಗ್ರಂಥಸೂಚಿ
11.2 ಇಂಗ್ಲೀಷ್ ಗ್ರಂಥಗಳು
11.3 ಲೇಖನಗಳು

ಅಧ್ಯಾಯ-1

ಅಧ್ಯಯನದ ಉದ್ದೇಶ:

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕವಯತ್ರಿಯರ ಸಂಖ್ಯೆ ತೀರಾ ಕಡಿಮೆ. ಕನ್ನಡ ಕವಿ ಚರಿತೆಯ ಮೂರು ಸಂಪುಟಗಳಲ್ಲಿ ದಾಖಲಾಗಿರುವ 1148 ಮಂದಿ ಕವಿಗಳಲ್ಲಿ ಕವಯತ್ರಿಯರ ಸಂಖ್ಯೆ ಕೇವಲ 42. ಇದೇ ಮಾತು ಹರಿದಾಸ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಸುಮಾರು 200 ಮಂದಿ ಹರಿದಾಸರಲ್ಲಿ 20 ಜನ ದಾಸ ಮಹಿಳೆಯರು ಸಹ ಸಿಗುವುದಿಲ್ಲ ಎಂಬ ಅಭಿಪ್ರಾಯವಿದೆ. ಇದು ಸಾಹಿತ್ಯ ಚರಿತ್ರೆಗಳಲ್ಲಿ ದೊರೆಯುವ ದಾಖಲೆ. ಆದರೆ ವಾಸ್ತವವಾಗಿ 18, 19 ಮತ್ತು 20ನೆಯ ಶತಮಾನಗಳ ಅವಧಿಯಲ್ಲಿ ಸಾಕಷ್ಟು ಸಂಖ್ಯೆಯ ಮಹಿಳಾ ಹರಿದಾಸರ ಹೆಸರುಗಳು ದೊರೆಯುತ್ತವೆ. ತಮ್ಮ ಪೂರ್ವಿಕರ ಕೀರ್ತನೆಗಳ ರಕ್ಷಣೆ, ಬಳಕೆ ಮತ್ತು ಸ್ವಂತ ಸಾಹಿತ್ಯ ರಚನೆ ಈ ಮೂರು ಬಗೆಗಳಲ್ಲಿ ಮಹಿಳೆಯರ ಕೊಡುಗೆ ಗಮನಾರ್ಹವಾದುದು. ಸಂಪ್ರದಾಯ ರಕ್ಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು, ಹರಿದಾಸರ ಆಚಾರ-ವಿಚಾರಗಳನ್ನು ಗೌರವಿಸುತ್ತಾ, ಕೀರ್ತನೆಗಳನ್ನು ಹಾಡುತ್ತಾ, ಅದೇ ಮಾದರಿಯಲ್ಲಿ ತಾವೂ ಸಾಹಿತ್ಯ ರಚಿಸುತ್ತಾ ಮಹಿಳೆಯರು ವಿಶಿಷ್ಟ ರೀತಿಯಲ್ಲಿ ದಾಸ ಸಾಹಿತ್ಯದ ಪ್ರಗತಿಗೆ ಕಾರಣರಾಗಿದ್ದಾರೆ. ಹರಿದಾಸ ಪರಂಪರೆ, ಸಂಸ್ಕೃತಿ ಉಳಿಸಿ ಬೆಳೆಸಲು ಶ್ರಮಿಸಿದ್ದಾರೆ.

ಭಕ್ತಿ ಸಾಹಿತ್ಯಗಳಾದ ವಚನ ಮತ್ತು ದಾಸ ಸಾಹಿತ್ಯಗಳಲ್ಲಿ ಪುರುಷರೊಡನೆ ಸ್ತ್ರೀಯರೂ ಕೃತಿ ರಚನೆ ಮಾಡಿದ್ದಾರೆ. ಆದರೆ ಶಿವಶರಣೆಯರನ್ನು ಗುರುತಿಸಿದಷ್ಟು ದಾಸ ಮಹಿಳೆಯರನ್ನು ಗುರುತಿಸಲಾಗಿಲ್ಲ. ದಾಸ ಸಾಹಿತ್ಯ ರಚನೆಯಲ್ಲಿ ಸುಮಾರು 16ನೆಯ ಶತಮಾನದಿಂದಲೂ ಮಹಿಳೆಯರು ಪಾಲ್ಗೊಂಡಿದ್ದರೂ, ಸಾಹಿತ್ಯ ಚರಿತ್ರೆಯಲ್ಲಿ 20ನೆಯ ಶತಮಾನದವರೆಗೆ ಹೆಳವನಕಟ್ಟೆ ಗಿರಿಯಮ್ಮ ಮತ್ತು ಹರಪನಹಳ್ಳಿ ಭೀಮವ್ವನವರನ್ನು ಮಾತ್ರ ಗುರುತಿಸಲಾಗಿದೆ. 'ಭೀಮೇಶ ಕೃಷ್ಣ' ಅಂಕಿತದ ಹಾಡುಗಳು ಪ್ರಸಿದ್ಧವಾಗಿದ್ದರೂ, ಅದನ್ನು ರಚಿಸಿದವರು ಭೀಮವ್ವನವರೆಂದು ತಿಳಿದಿರಲಿಲ್ಲ. ಬೆಂಗಳೂರು ವಿಶ್ವವಿದ್ಯಾಲಯವು 1975ರಲ್ಲಿ ಪ್ರಕಟಿಸಿರುವ 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಮಾಲಿಕೆಯ 'ಕೀರ್ತನಕಾರರು ಸಂಪುಟದಲ್ಲಿ ಗಿರಿಯಮ್ಮನ ಪ್ರಸ್ತಾಪ ಮಾತ್ರ ಕಂಡು ಬರುತ್ತದೆ. ಕನ್ನಡ ಕವಿ ಚರಿತೆಯ 3ನೇ ಸಂಪುಟದಲ್ಲಿ 19ನೇ ಶತಮಾನದ ಹಲವಾರು ದಾಸರ ಹೆಸರುಗಳಿದ್ದರೂ ಭೀಮವ್ವನ ಹೆಸರಿಲ್ಲ. 1933ರಲ್ಲಿ ಪ್ರಕಟವಾದ ಬೇಲೂರು ಕೇಶವದಾಸರ 'ಕರ್ನಾಟಕ ಭಕ್ತ ವಿಜಯ' ಗ್ರಂಥದಲ್ಲೂ ಭೀಮವ್ವನ ಪ್ರಸ್ತಾಪವಿಲ್ಲ. 1939ರಲ್ಲಿ ಎ.ಪಿ. ಕರಮಾರಕರ್ ಮತ್ತು ಎನ್.ಬಿ. ಕಲಮದಾನಿಯವರಿಂದ ರಚಿಸಲಾದ "The Mystic Teachings of Haridasas of Karnataka" ಗ್ರಂಥದಲ್ಲಿ ಗಲಗಲಿ ಅವ್ವ, ಹೆಳವನಕಟ್ಟೆ ಗಿರಿಯಮ್ಮ ಮತ್ತು ಭೀಮವ್ವನವರನ್ನು

"Female Saints" ಎಂದು ಗುರುತಿಸಲಾಗಿದೆಯಾದರೂ ಗಿರಿಯಮ್ಮನ ವಿವರಣೆ ಮಾತ್ರ ಇದೆ. 1966ರಲ್ಲಿ ಎಂ.ವಿ. ಕೃಷ್ಣರಾವ್‌ರವರ "Purandaradasa and The Haridasa Movement" ಎಂಬ ಗ್ರಂಥವು ಕರ್ನಾಟಕ ವಿಶ್ವವಿದಾಲಯದ ಪ್ರಕಟಣೆಯಾಗಿದ್ದು ಇದರಲ್ಲಿ ಯಾವ ಮಹಿಳಾ ಹರಿದಾಸರ ಉಲ್ಲೇಖವೂ ಇಲ್ಲ. ಹರಿದಾಸರ ಬಗ್ಗೆ ಅಧ್ಯಯನ ನಡೆಸುವವರಿಗೆಲ್ಲ ಆಕರ ಗ್ರಂಥವಾಗಿರುವ ಈ ಇಂಗ್ಲಿಷಿನ ಪ್ರೌಢ ಗ್ರಂಥದಲ್ಲಿ ದಾಸ ಮಹಿಳೆಯರಿಲ್ಲ. ಎಚ್.ಕೆ. ವೇದವ್ಯಾಸಾಚಾರ್ಯರ ಕೃತಿ 'ಕರ್ನಾಟಕದ ಹರಿದಾಸ'ರಲ್ಲಿಯೂ ಗಿರಿಯಮ್ಮನ ಪ್ರಸ್ತಾಪ ಮಾತ್ರವಿದೆ. ಇದರಲ್ಲಿ ಗಿರಿಯಮ್ಮ ವಿಜಯದಾಸರ ಸಮಕಾಲೀನಳೆಂದು ಅಭಿಪ್ರಾಯಪಡಲಾಗಿದೆ.

ದಾಸ ಸಾಹಿತ್ಯದ ದ್ವಿತೀಯ ಘಟ್ಟವನ್ನು 'ವಿಜಯದಾಸ ಯುಗ' ಎಂದು ಪರಿಗಣಿಸಲಾಗುತ್ತದೆ. ಈ ಸಮಯವನ್ನು ದಾಸ ಸಾಹಿತ್ಯದ ಪುನರುಜ್ಜೀವನ ಯುಗವೆಂದೂ ಹೇಳಲಾಗುತ್ತದೆ. ಹಾಗೆಯೇ ಡಾ॥ ವರದರಾಜಾರಾವ್‌ರವರು ಸುವರ್ಣಯುಗ ಎಂತಲೂ ಕರೆದಿದ್ದಾರೆ. ವಿಜಯದಾಸರು ಮತ್ತು ಅವರ ಕೃತಿಗಳು ದಾಸ ಸಾಹಿತ್ಯದ ಮುಖ್ಯ ಅಂಗ. ವಿಜಯದಾಸರು ಮೊದಲ ಘಟ್ಟದ ದಾಸವರೇಣ್ಯರುಗಳನ್ನು, ಅವರ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಿ, ಶಿಷ್ಯ ಪರಂಪರೆ ಬೆಳೆಸಿದರು. ಅವರಲ್ಲಿ ಹರಿದಾಸಿಯರೂ ಇದ್ದಾರೆ.

ವಿಜಯದಾಸರು ತಮ್ಮ ಒಂದು ಕೀರ್ತನೆಯಲ್ಲಿ ಹರಿದಾಸಿಯರನ್ನು ನೆನೆದಿರುವುದು ವಿಶೇಷ 'ಸಂತರನ ಸ್ಮರಿಸಿ ಜನರು' ಎಂಬ ಕೀರ್ತನೆಯಲ್ಲಿ

ಪುತ್ರ ಪೌತ್ರರ ಕೂಡಿ ಜ್ಞಾನದಲಿ ಇಪ್ಪ ಚ
ರಿತ್ರಾರಾ ಮಹಿಮೆ ಕೊಂಡಾಡಿದವರ ವಿ
ಚಿತ್ರವನು ಪೊಗಳುವ **ದಾಸ ದಾಸಿಯರ** ಪದ
ಸ್ತೋತ್ರ ಮಾಡಿರೋ ಆವಾಗ

ವಿಜಯದಾಸರು 'ದಾಸದಾಸಿಯರೆಂದು' ಹೇಳಿರುವುದು ಅವರ ಸಮಕಾಲೀನ ಹರಿದಾಸರಲ್ಲಿ ಹರಿದಾಸಿಯರೂ ಇದ್ದ ಬಗೆಗೆ ಬೆಳಕು ಚೆಲ್ಲುತ್ತದೆ. ವಿಜಯದಾಸರ ಕಾಲ 1682ರಿಂದ 1755. ಅಪ್ಪನವರ ಕಾಲ 1670–1760. ಹೀಗಾಗಿ ವಿಜಯದಾಸರು ಗಲಗಲಿ ಅವ್ವನವರ ಬಗ್ಗೆ ಹೇಳಿರಬಹುದಾದ ಸಾಧ್ಯತೆಯಿದೆ. ಅಲ್ಲದೆ 'ದಾಸಿಯರು' ಎಂಬ ಬಹುವಚನಪ್ರಯೋಗ ಇತರ ಹರಿದಾಸಿಯರೂ ಇದ್ದಿರಬಹುದಾದ ಸಾಧ್ಯತೆಯನ್ನು ಸೂಚಿಸುತ್ತದೆ.

ಸರೋಜಿನಿ ಮಹಿಷಿಯವರ ಪ್ರೌಢ ಪ್ರಬಂಧ 'ಕರ್ನಾಟಕ ಕವಯತ್ರಿಯರು' ಎಂಬ ಗ್ರಂಥದಲ್ಲಿ ಭೀಮವ್ವ ಪ್ರಮುಖವಾಗಿ ಗುರುತಿಸಲ್ಪಟ್ಟಿದ್ದಾರೆ. ಇನ್ನೂ ಕೆಲವು ಅಜ್ಞಾತ ದಾಸ ಮಹಿಳೆಯರ ಬಗ್ಗೆ ಉಲ್ಲೇಖಿಸಿದ್ದಾರೆ. ಅನಂತೆರದಲ್ಲಿ ಪಂಡರೀನಾಥಾಚಾರ್ಯ ಗಲಗಲಿಯವರು 'ಮಾಧ್ವ ವಾಙ್ಮಯ ತಪಸ್ವಿಗಳು' ಗ್ರಂಥದಲ್ಲಿ ಕೆಲವು ದಾಸ ಮಹಿಳೆಯರನ್ನು ಪರಿಚಯಿಸಿದ್ದಾರೆ. ಇತ್ತೀಚೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ 'ಸಮಗ್ರ ದಾಸ ಸಾಹಿತ್ಯ' ಸಂಪುಟಗಳಲ್ಲಿ ಸುಮಾರು ಹದಿನಾಲ್ಕು ದಾಸ ಮಹಿಳೆಯರನ್ನು ಗುರುತಿಸಿ ಅವರ ಕೃತಿಗಳನ್ನು ಪ್ರಕಟಿಸಲಾಗಿದೆ. ಭೀಮವ್ವ, ಗಿರಿಯಮ್ಮ, ಅಂಬಾಬಾಯಿ, ಜೀವೂಬಾಯಿ, ನಂಜನಗೂಡು ತಿರುಮಲಾಂಬಾ, ಸರಸ್ವತಿಬಾಯಿ ಮೊದಲಾದವರ ಸಾಹಿತ್ಯ ಕೃತಿಗಳು ಮಹಿಳಾ ಹರಿದಾಸ ಸಾಹಿತ್ಯದ ವ್ಯಾಪ್ತಿಯನ್ನು ಹಿಗ್ಗಿಸಿವೆ. ಆದರೂ ಇವರ ಎಲ್ಲ ಕೃತಿಗಳೂ ಪ್ರಕಟವಾಗಿಲ್ಲ. ಈಗ ಪ್ರಕಟವಾಗಿರುವ ಮಹಿಳಾ ಹರಿದಾಸ ಸಾಹಿತ್ಯಕ್ಕಿಂತಲೂ ಮೂರು ನಾಲ್ಕು ಪಟ್ಟು ಕೃತಿಗಳು, ಕೃತಿಕಾರರು ಅಜ್ಞಾತರಾಗಿಯೇ ಉಳಿದಿದ್ದಾರೆ. ತಂದೆಮುದ್ದುಮೋಹನವಿಠಲ ದಾಸರಿಂದ ಅಂಕಿತ ಪಡೆದ 1160 ಹರಿದಾಸರಲ್ಲಿ ಸುಮಾರು 426 ಮಂದಿ ಮಹಿಳೆಯರಿದ್ದಾರೆ. 20ನೇ ಶತಮಾನದ ನಮ್ಮ ಸಮಕಾಲೀನರಾದ ಕೋಲಾರ ಪದ್ಮಾಬಾಯಿ, ದೊಡ್ಡಿ ಸುಧಾಬಾಯಿ, ದಡಿಗದಲಕ್ಷ್ಮೀನರಸಮ್ಮ, ಮೈಸೂರಿನ ಕೃಷ್ಣಾಬಾಯಿ ಮೊದಲಾದ ಸುಮಾರು 28 ಮಂದಿ ದಾಸ ಮಹಿಳೆಯರಿದ್ದಾರೆ. ಇವರಲ್ಲಿ ಕೆಲವರನ್ನು ಹೊರತು ಪಡಿಸಿದರೆ ಇತರರ ಕೃತಿಗಳು ಸಾಹಿತ್ಯ ವಲಯದಲ್ಲಿ ದಾಖಲಾಗಿಲ್ಲ. ಇವರೆಲ್ಲರ ಪ್ರಕಟಿತ, ಅಪ್ರಕಟಿತ ಹರಿದಾಸ ಸಾಹಿತ್ಯವನ್ನು ಅಧ್ಯಯನ ಮಾಡಿ, ಧರ್ಮ, ಸಂಪ್ರದಾಯ, ಸಾಹಿತ್ಯ ಇವುಗಳ ರಕ್ಷಣೆಯಲ್ಲಿ ಮಹಿಳಾ ಹರಿದಾಸರ ಪಾತ್ರವೇನೆಂಬುದನ್ನು ಗುರುತಿಸುವುದು ಅಧ್ಯಯನದ ಉದ್ದೇಶ.

ಮಹಿಳಾ ಹರಿದಾಸರು ಹರಿದಾಸ ಸಂಪ್ರದಾಯದಂತೆಯೇ ಕೃತಿಗಳನ್ನು ರಚಿಸಿದ್ದಾರೆ. ಹರಿದಾಸರಲ್ಲಿ ತಾರತಮ್ಯಕ್ಕೆ ಮಹತ್ವವಿದೆ. ಅಂತೆಯೇ ದಾಸ ಮಹಿಳೆಯರು ಶ್ರೀಹರಿ, ಲಕ್ಷ್ಮೀದೇವಿ, ಬ್ರಹ್ಮ, ವಾಯುದೇವರು ಹೀಗೆ ಹಲವು ದೇವ ದೇವತೆಗಳನ್ನು ತಮ್ಮ ಕೃತಿಗಳಲ್ಲಿ ತಾರತಮ್ಯಾನುಸಾರ ಸ್ತುತಿಸಿದ್ದಾರೆ. ಸಾಮಾಜಿಕ ವಿಚಾರಗಳು, ನೀತಿ ಬೋಧೆಯೂ ಇದೆ. ಬಿಡಿ ಕೀರ್ತನೆಗಳೇ ಅಲ್ಲದೆ ಖಂಡ ಕಾವ್ಯಗಳನ್ನೂ ದಾಸ ಮಹಿಳೆಯರು ರಚಿಸಿದ್ದಾರೆ. ರಾಮಾಯಣ, ಮಹಾಭಾರತ, ಭಾಗವತ, ಜಾನಪದ ಕಥನಗಳು ಮತ್ತು ಪೌರಾಣಿಕ ಪ್ರಸಂಗಗಳು ಇವರ ದೀರ್ಘ ಕೀರ್ತನೆಗಳ ವಸ್ತುಗಳಾಗಿವೆ.

ಹಿಂದಿನಿಂದಲೂ ಬಂದ ಸಂಪ್ರದಾಯದಂತೆ ಸ್ತ್ರೀಯರಿಗೆ ವೇದಾಧಿಕಾರವಿಲ್ಲ. ವೇದ ಮಂತ್ರಗಳನ್ನು ಪಠಿಸುತ್ತಾ ವ್ರತಗಳನ್ನು ಮಾಡುವಂತಿಲ್ಲ. ಈಗಿನಂತೆ ಪುರೋಹಿತರನ್ನು ಮನೆಗೆ ಕರೆಸಿ ಪೂಜೆ ಮಾಡಿಸುವ ಪರಿಪಾಠವೂ, ಸೌಕರ್ಯವೂ ಇರಲಿಲ್ಲ. ಅಂತಹ ಸಂದರ್ಭದಲ್ಲಿ ದಾಸ ಮಹಿಳೆಯರು ಸಂಪ್ರದಾಯದ

ಹಾಡುಗಳನ್ನು ಮಹಿಳೆಯರಿಗಾಗಿಯೇ ರಚಿಸಿದರು. ಪೂಜಾ ವಿಧಾನ, ಕತೆ, ಫಲಶೃತಿ, ಎಲ್ಲವೂ ಹಾಡಿನಲ್ಲೇ ಇರುತ್ತಿತ್ತು. ಷೋಡಶ ಕರ್ಮಗಳಲ್ಲಿ ಮಂತ್ರ ಸಹಿತವಾದ ಆಚರಣೆಗಳು ಆಚಾರ್ಯ ಮುಖೇನ ನಡೆದರೆ, ಮಂತ್ರರಹಿತವಾದ ಆಚರಣೆಗಳಿಗೆ ದಾಸ ಮಹಿಳೆಯರ ಹಾಡು ರಚನೆಯಾಯಿತು. ಪ್ರತಿಯೊಂದು ಮಂಗಳ ಕಾರ್ಯದ ಅಗತ್ಯಕ್ಕೆ ತಕ್ಕಂತೆ ಹಾಡುಗಳನ್ನು ಮಹಿಳೆಯರು ರಚಿಸಿದರು. ತಮ್ಮ ತಮ್ಮ ಪ್ರಾಂತ್ಯಗಳ ಸ್ಥಳೀಯ ಸಂಪ್ರದಾಯಗಳನ್ನು ಕೃತಿಗಳಲ್ಲಿ ದಾಖಲಿಸಿದರು. ದಾಸ ಮಹಿಳೆಯರ ಭಾಷಾ ಪ್ರೌಢಿಮೆ, ಶಬ್ದ ಸಂಪತ್ತು ನೀತಿ ನಿರೂಪಣೆ ಯಾವ ಹರಿದಾಸರಿಗೂ ಕಡಿಮೆಯಿಲ್ಲ. ಜನಪದ ಪ್ರಕಾರಗಳನ್ನು ಒಳಗೊಂಡಂತೆ ವಿವಿಧ ಛಂದಸ್ಸುಗಳಲ್ಲಿ ಕೃತಿ ರಚನೆ ಮಾಡಿರುವುದು 'ಕುರಿತೋದದ' ಇವರ ವೈಶಿಷ್ಟ್ಯ.

ಹತ್ತೊಂಬತ್ತನೇ ಶತಮಾನದ ಆರಂಭದ ದಶಕದ ಕೊನೆಯಲ್ಲಿ ಬ್ರಿಟಿಷ್ ಸರ್ಕಾರವು ಹೆಣ್ಣು ಮಕ್ಕಳಿಗಾಗಿ ಶಾಲೆಗಳನ್ನು ಆರಂಭಿಸಿದ ನಂತರ ತೀರ ಕಡಿಮೆ ಸಂಖ್ಯೆಯಲ್ಲಿಯಾದರೂ ಸ್ತ್ರೀಯರಿಗೆ ವಿದ್ಯಾಭ್ಯಾಸ ದೊರೆಯಲಾರಂಭಿಸಿತು. ಮನೆಯಿಂದ ಹೊರಗೇ ಬರಲಾಗದ ಪ್ರಪಂಚದ ಆಗುಹೋಗುಗಳ ಬಗ್ಗೆ ಮಾಹಿತಿಯೇ ಇಲ್ಲದೆ ಇದ್ದ ಸ್ತ್ರೀಯರಿಗೆ ಇದರಿಂದ ಪ್ರೋತ್ಸಾಹ ದೊರಕಿತು. ಮನೆಯ ನಾಲ್ಕು ಗೋಡೆಗಳ ಮಧ್ಯೆ ಉಳಿದ ಸ್ತ್ರೀಯರು ತಮ್ಮ ಕುಟುಂಬ, ಸಂಪ್ರದಾಯ ಮತ್ತು ಸಂಸ್ಕೃತಿ ರಕ್ಷಣೆಗಳ ಬಗೆಗಿನ ಕೃತಿಗಳನ್ನು ಮಾತ್ರ ರಚಿಸಿದ್ದರು. ಜವಾಬ್ದಾರಿಗಳು, ಕಟ್ಟುಪಾಡುಗಳು, ಬದುಕನ್ನೇ ಹೊಸಕುವ ಮೌಢ್ಯಗಳು, ಅನಿಷ್ಟ ಸಂಪ್ರದಾಯಗಳು, ಸಾಮಾಜಿಕ ಪಕ್ಷಪಾತ ನ್ಯಾಯ, ಸ್ತ್ರೀಯರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮುಖ್ಯ ತೊಡಕಾಗಿದ್ದವು. ಅವರ ಬರವಣಿಗೆ ಕೇವಲ ಕುಟುಂಬ ಸಂಪ್ರದಾಯಗಳಿಗೆ ಸೀಮಿತವಾಗಿತ್ತು. ಅವರ ಉತ್ಸಾಹವನ್ನು ಹತ್ತಿಕ್ಕುವ ಆ ಕಾಲದ ಪ್ರತಿಕೂಲ ಪರಿಸ್ಥಿತಿಯಲ್ಲೂ ಸ್ತ್ರೀಯರು ಎದೆಗುಂದದೆ ಸಾಹಿತ್ಯ ರಚನೆಯನ್ನು ಮಾಡಿದ್ದಾರೆ. ಹೊರ ಪ್ರಪಂಚದ ಮಹತ್ವದ ವಿಷಯಗಳನ್ನು ಮನೆಯ ಹೊಸ್ತಿಲಿನೊಳಗಿನಿಂದಲೇ ಗಮನಿಸಿ ಸಾಹಿತ್ಯದಲ್ಲಿ ಬಳಸಿಕೊಂಡಿದ್ದಾರೆ.

ಈ ಅಧ್ಯಯನದಲ್ಲಿ 'ಹರಿದಾಸಿ' ಎಂಬ ಪದವನ್ನು ಬಳಸಿಕೊಂಡಿಲ್ಲ. ಹರಿದಾಸಿ ಎಂಬ ಪದವು ವಿಜಯದಾಸರು ಕೃತಿಯಲ್ಲಿ ಬಂದಿದ್ದರೂ, ಅದರ ಬಳಕೆ ವ್ಯಾಪಕವಾಗಿ ಆಗಿಲ್ಲ. ದಾಸ ಸಾಹಿತ್ಯ ಸಂಪುಟಗಳಲ್ಲಿಯೂ 'ಮಹಿಳಾ ಹರಿದಾಸರು' ಎಂಬ ಉಲ್ಲೇಖವೇ ಇದೆ. ಶ್ರೀಹರಿಗೆ ಸಕಲ ಜೀವರೂ ದಾಸರೇ, ಆದರೂ 'ಹರಿದಾಸಿ' ಪದ ಹೆಚ್ಚಾಗಿ ಬಳಕೆಯಲ್ಲಿಲ್ಲ. ಈ ಕೆಳಗಿನ ಗ್ರಂಥಗಳಲ್ಲಿ 'ಹರಿದಾಸಿ' ಪದದ ಉಲ್ಲೇಖವಿಲ್ಲ.

1. ಎಚ್ಚೆಸ್ಕೆಯವರು ಸಂಪಾದಿಸಿರುವ ದಾಸ ಸಾಹಿತ್ಯ ದರ್ಶನ ಭಾಗ-1ರಲ್ಲಿ ಡಾ॥ ಅಕ್ಕ ಮಹಾದೇವಿಯವರು ಮಹಿಳಾ ಹರಿದಾಸರನ್ನು 'ದಾಸ ಸಾಹಿತ್ಯದ ಮಹಿಳಾ ಕೃತಿಕಾರರು' ಎಂದು ಗುರುತಿಸಿದ್ದಾರೆ.
2. 'ಕರ್ನಾಟಕ ಹರಿದಾಸರು' ಗ್ರಂಥದಲ್ಲಿ ಎಚ್.ಕೆ. ವೇದವ್ಯಾಸಾಚಾರ್ಯರು ಗಿರಿಯಮ್ಮನ ವಿವರಗಳನ್ನು ನೀಡಿದ್ದು 'ಆಕೆ ಮಹಾ ಭಗವದ್ಭಕ್ತಳು' ಎಂದು ಹೇಳಿದ್ದಾರೆ. ಹರಿದಾಸಿ ಪದದ ಬಳಕೆ ಇಲ್ಲ.
3. 'ಹರಿದಾಸ ಸಾಹಿತ್ಯ ಸಾರ' ಗ್ರಂಥದಲ್ಲಿ ಜಿ. ವರದರಾಜರಾವ್‌ರವರು ಗಿರಿಯಮ್ಮನನ್ನು 'ಸ್ವಭಾವತಃ ದೈವ ಭಕ್ತೆ' ಎಂದಿದ್ದಾರೆ.
4. ಡಾ॥ ಶ್ರೀನಿವಾಸ ಹಾವನೂರು ಅವರು 'ಹೊಸಗನ್ನಡದ ಅರುಣೋದಯ' ಗ್ರಂಥದಲ್ಲಿ ದಾಸ ಸಾಹಿತ್ಯದ ಕವಿಯತ್ರಿಯರು ಎಂಬ ಪದಪುಂಜವನ್ನೇ ಬಳಸಿದ್ದಾರೆ.
5. ಡಾ॥ ನೀ.ಕೃ. ರಾಮಶೇಷನ್‌ರವರು ತಮ್ಮ ಪಿಎಚ್.ಡಿ. ಪ್ರಬಂಧ 'ಹರಿದಾಸ ಆಂದೋಲನ' ಗ್ರಂಥದಲ್ಲಿ 'ದಾಸ ಸಾಹಿತ್ಯದ ಕವಯತ್ರಿ', 'ಮಹಿಳಾ ಕೃತಿಕಾರರು' ಎಂಬ ಪ್ರಯೋಗವನ್ನು ಮಾಡಿದ್ದಾರೆ.
6. '19ನೆ ಶತಮಾನದ ಹರಿದಾಸ ಸಾಹಿತ್ಯ' ಎಂಬ ಪಿಎಚ್.ಡಿ. ಪ್ರಬಂಧದಲ್ಲಿ ಡಾ॥ ಅನಂತಪದ್ಮನಾಭರಾವ್‌ರವರೂ ಸಹ 'ಹರಿದಾಸಿ' ಪದವನ್ನು ಬಳಸಿಲ್ಲ.
7. 'ಅಜ್ಞಾತ ಕವಯತ್ರಿಯರು' ಎಂಬ ಗ್ರಂಥದಲ್ಲೂ 'ದಾಸ ಮಹಿಳೆಯರು', 'ಮಹಿಳಾ ಹರಿದಾಸರು' ಎಂಬ ಪ್ರಯೋಗವೇ ಇದೆ.

ಈ ಮೇಲಿನ ಉಲ್ಲೇಖಗಳಿಂದ 'ಹರಿದಾಸಿ' ಪದದ ಬಳಕೆ ಹೆಚ್ಚಾಗಿಲ್ಲವೆಂಬ ಅಂಶ ತಿಳಿದು ಬರುತ್ತದೆ. ಸಾಂಪ್ರದಾಯಿಕವಾಗಿ ಬಂದ 'ಮಹಿಳಾ ಹರಿದಾಸರು' ಎಂಬ ಶೀರ್ಷಿಕೆಯನ್ನು ಈ ಅಧ್ಯಯನಕ್ಕೆ ಕೊಡಲಾಗಿದೆ. ಹಿಂದಿನ ಅನೇಕ ಗ್ರಂಥಗಳಲ್ಲಿ ಉಲ್ಲೇಖವಾಗಿರುವ ಪದಪುಂಜಗಳನ್ನು ಅನುಸರಿಸಿರುವುದರಿಂದ 'ಹರಿದಾಸಿ' ಪದ ಈ ಅಧ್ಯಯನದಲ್ಲಿ ಬಳಕೆಯಾಗಿಲ್ಲ. ಹರಿದಾಸರು ಎಂದರೆ ಪುರುಷ ಹರಿದಾಸ/ಮಹಿಳಾ ಹರಿದಾಸರು ಎರಡೂ ಆಗಿರಬಹುದು. ಎಂ.ಆರ್. ಲಕ್ಷ್ಮೀದೇವಿಯವರು ಪ್ರಥಮ ಹರಿದಾಸಿ ಗಲಗಲಿ ಅವ್ವನವರು ಎಂದು ಗ್ರಂಥದಲ್ಲಿ 'ಹರಿದಾಸಿ' ಪದವನ್ನು ಬಳಸಿದ್ದಾರೆ. ಆದರೆ ಈ 'ಹರಿದಾಸಿ' ಪದ ಶೃತಿ ಸಹ್ಯವೂ ಆಗಲ್ಲ, ಜನಪ್ರಿಯವೂ ಆಗಿಲ್ಲ.

ಶ್ರೀಪಾದ ರಾಜರಿಂದ ಪ್ರಾರಂಭವಾದ ಹರಿದಾಸ ಸಾಹಿತ್ಯವು, ವ್ಯಾಸರಾಜರು, ವಾದಿರಾಜರ ಕಾಲದಲ್ಲೂ ಮುಂದುವರೆಯಿತು. ಪುರಂದರದಾಸರು ಮತ್ತು ಕನಕದಾಸರಿಂದ ಹರಿದಾಸ ಸಾಹಿತ್ಯದ ಬೆಳವಣಿಗೆ ಮೇರು ಶಿಖರ ಮುಟ್ಟಿದರೂ, ವಿಜಯನಗರದ ಪತನದ ನಂತರ ರಾಜಕೀಯ ವೈಪರೀತ್ಯಗಳಿಂದ ಸ್ಥಗಿತವಾಗಿತ್ತು. ಈ ನಿಲುಗಡೆ ತಾತ್ಕಾಲಿಕವಾಗಿದ್ದು ವಿಜಯದಾಸರ ಕಾಲದಲ್ಲಿ ಪುನರುತ್ಥಾನವಾಯಿತು.

ಇದನ್ನೇ ದಾಸ ಸಾಹಿತ್ಯದ ದ್ವಿತೀಯ ಘಟ್ಟ ಎಂದು ಗುರುತಿಸಲಾಗಿದೆ. ಮಂತ್ರಾಲಯ ದಾಸ ಸಾಹಿತ್ಯದ ಕೇಂದ್ರವಾಗಿದ್ದು ಈ ಕಾಲದಲ್ಲಿಯೇ. ಹೀಗೆ ಮುಂದುವರಿದ ದಾಸ ಸಾಹಿತ್ಯ ವಾಹಿನಿಯಲ್ಲಿ ಗೋಪಾಲದಾಸರು, ಪ್ರಾಣೇಶದಾಸರು, ಜಗನ್ನಾಥದಾಸರು, ಪ್ರಸನ್ನವೆಂಕಟದಾಸರು, ಮೋಹನದಾಸರು, ತಿಮ್ಮಣ್ಣದಾಸರು, ಇತ್ಯಾದಿ ಅನೇಕ ದಾಸರು ಆಗಿ ಹೋಗಿದ್ದಾರೆ. ಅವರ ಪರಂಪರೆಯಲ್ಲಿ ತಂದೆಮುದ್ದುಮೋಹನವಿಠಲದಾಸರು ಮತಾಂತರ, ಪರಕೀಯ ಹಾವಳಿಗಳಿಂದ ಕಂಗೆಟ್ಟು ಅಸ್ತವ್ಯಸ್ತವಾಗಿದ್ದ ಸಮಾಜ ಜೀವನದಲ್ಲಿ ಅತ್ಯಧಿಕ ಮಂದಿಗೆ ಅಂಕಿತ ನೀಡಿ ದಾಸ ಸಾಹಿತ್ಯ ಪರಂಪರೆ ಉಳಿಯಲು ಕಾರಣರಾದರು.

ಹರಿದಾಸ ಪಂಥವು ಮಹಿಳೆಯರಿಗೂ ಮುಕ್ತವಾಗಿತ್ತು. ಸುಬ್ಬರಾಯದಾಸರು, ಗುರುಗೋವಿಂದ ವಿಠಲದಾಸರು, ಉರಗಾದ್ರಿ ವಿಠಲದಾಸರು ಅಧಿಕ ಸಂಖ್ಯೆಯಲ್ಲಿ ಮಹಿಳೆಯರಿಗೆ ಅಂಕಿತ ನೀಡಿದ್ದಾರೆ. ಮೊದಲ ದಾಸ ಮಹಿಳೆ ಗಲಗಲಿ ಅವ್ವನವರಿಂದ ಮೊದಲುಗೊಂಡು, ಗಿರಿಯಮ್ಮ, ಭೀಮವ್ವ, ಯದುಗಿರಿಯಮ್ಮ, ನಾಡಿಗರ ಶಾಂತಿಬಾಯಿ, ಓರವಾಯಿ ಲಕ್ಷ್ಮೀದೇವಮ್ಮ, ಸರಸ್ವತಿಬಾಯಿ, ನಂಜನಗೂಡು ತಿರುಮಲಾಂಬಾ, ಸರಸಾಬಾಯಿ, ಬಳ್ಳಾರಿ ರಾಧಾಬಾಯಿ, ಕಳಸದ ಸುಂದರಮ್ಮ, ಗುಂಡಮ್ಮ, ಅಂಬಾಬಾಯಿ, ನಿಡಗುರುಕಿ ಜೀವೂಬಾಯಿ, ಇತ್ಯಾದಿ ಮಹಿಳೆಯರು ಹರಿದಾಸ ಸಾಹಿತ್ಯ ಉಳಿಸಿ, ಬೆಳೆಸುವ ಕಾರ್ಯ ಮಾಡಿದ್ದಾರೆ. ಕೋಲಾರ ಪದ್ಮಾಬಾಯಿ, ದೊಡ್ಡಿ ಸುಧಾಬಾಯಿ, ರುಕ್ಮಿಣಿ ಗಿರಿಮಾಜಿ, ಇಂದಿರಾಬಾಯಿ ಕಟ್ಟಿ, ಪಿ.ವಿ. ಕೃಷ್ಣಾಬಾಯಿ, ಬೆಲ್ಲಾಲ ಬೊಮ್ಮಸಂದ್ರದ ಭಾಗೀರಥಮ್ಮ, ದಡಿಗದ ಲಕ್ಷ್ಮೀನರಸಮ್ಮ, ಮಂಜುಳಾ ಸುಬ್ಬರಾವ್ ಇವರುಗಳನ್ನು ಹೆಸರಿಸಬಹುದು.

ಹರಿದಾಸರನ್ನು ಕುರಿತು ನಡೆದಿರುವಂತೆ, ದಾಸ ಮಹಿಳೆಯರ ಕುರಿತಾದ ಸಂಶೋಧನೆಗಳು ನಡೆದಿಲ್ಲ. ಗಲಗಲಿ ಅವ್ವ, ಭೀಮವ್ವ ಮತ್ತು ನಂಜನಗೂಡು ತಿರುಮಲಾಂಬಾ ಅವರ ಬಗೆಗೆ ಮಾತ್ರ ಸಂಶೋಧನೆಗಳಾಗಿವೆ. ಸಮಗ್ರವಾಗಿ ಒಂದು ಅಧ್ಯಯನ ನಡೆದಿಲ್ಲ. ಇಲ್ಲಿ ಮಹಿಳೆಯರ ದಾಸ ಸಾಹಿತ್ಯವನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಈ ಅಧ್ಯಯನ ನಡೆಸಲಾಗಿದೆ. ಇದು ವಚನಕಾರ್ತಿಯರು ಮತ್ತು ದಾಸ ಮಹಿಳೆಯರ ತೌಲನಿಕ ಅಧ್ಯಯನವಲ್ಲ. ಶೈವ–ವೈಷ್ಣವ ಭಕ್ತಿಗಳ ನಡುವೆ ಇರುವ ಸೂಕ್ಷ್ಮ ಅಂತರವನ್ನು ತೌಲನಿಕವಾಗಿ ಅಭ್ಯಸಿಸಿಲ್ಲ.

18–19ನೇ ಶತಮಾನಗಳಲ್ಲಿ ಹಲವಾರು ಮಹಿಳೆಯರು ಕೀರ್ತನ ಸಾಹಿತ್ಯ ರಚಿಸಿದ್ದಾರೆ. ಆದರೆ ಇವರು ದಾಸ ಮಹಿಳೆಯರಲ್ಲ. ಕೈವಾರ ನಾರಾಯಣಪ್ಪ, ಅಂಜನಪ್ಪ ಸ್ವಾಮಿ ಮುಂತಾದವರ ಶಿಷ್ಯೆಯರು ಕೀರ್ತನ ಸಾಹಿತ್ಯ ರಚಿಸಿದ್ದರೂ ದಾಸ ಪಂಥಕ್ಕೆ ಸೇರಿದವರಲ್ಲ. ಒಟ್ಟಾರೆಯಾಗಿ ಭಕ್ತಿ ಸಾಹಿತ್ಯದಲ್ಲಿ ಇವರನ್ನು ಗುರುತಿಸಬಹುದಾದರೂ ಇವರೆಲ್ಲ ದಾಸ ಮಹಿಳೆಯರಲ್ಲ. ಇವರ ರಚನೆಗಳು ದಾಸ ಸಾಹಿತ್ಯದ ಶಿಸ್ತಿಗೆ ಬದ್ಧವಾಗಿಲ್ಲದ ಕಾರಣ ಇವರನ್ನು ದಾಸ ಮಹಿಳೆಯರೆಂದು ಗುರುತಿಸಲಾಗಿಲ್ಲ. ಅವಧೂತರು, ಹರಿದಾಸರು, ತತ್ವ ಪದಕಾರಕರು, ಶಿವ ದಾಸರು, ಬೇರೆ ಬೇರೆಯೇ ಆಗಿರುವುದರಿಂದ ಕೀರ್ತನೆ ರಚಿಸಿದವರೆಲ್ಲರೂ ಹರಿದಾಸರಲ್ಲ.

ಮಹಿಳಾ ಹರಿದಾಸರು ತಮ್ಮೆಲ್ಲ ಇತಿಮಿತಿಗಳ ಹೊರತಾಗಿಯೂ ಸಂಸ್ಕೃತಿ, ಸಂಪ್ರದಾಯದ ಉಳಿವಿಗೆ ಪ್ರಯತ್ನಿಸಿದ್ದಾರೆ. ಅವರ ಸಾಹಿತ್ಯವು ಒಂದು ರೀತಿಯಲ್ಲಿ ಹಿಂದೂ ಧರ್ಮದ ಅನೌಪಚಾರಿಕ ಕಲಿಕಾ ಮಾಧ್ಯಮ. ಮಹಿಳೆಯರ ವ್ಯಕ್ತಿತ್ವದ ಬೆಳವಣಿಗೆಗೆ ಬೇಕಾದ ಶಿಕ್ಷಣವನ್ನು ಇದು ಪರೋಕ್ಷವಾಗಿ ನೀಡುತ್ತದೆ. ತಾವು ಕೇಳಿದ ಭಾರತ, ಭಾಗವತ, ಪುರಾಣ ಮತ್ತು ಭಗವದ್ಗೀತೆಗಳ ಸಾರವನ್ನು ಹಾಡಿನ ಮೂಲಕ ಕನ್ನಡದಲ್ಲಿ ಸಾಮಾನ್ಯರಿಗೆ ತಿಳಿಸುವುದು ಇವರ ಉದ್ದೇಶ. ಸಾಹಿತ್ಯ, ಸಂಗೀತ, ತತ್ವ ಬೋಧನೆ ಇದರ ಪ್ರಮುಖ ಆಶಯಗಳು. ಇಲ್ಲಿ ಒಂದು ಸಮುದಾಯದಿಂದ ಮತ್ತೊಂದು ಸಮುದಾಯಕ್ಕೆ ಸಂಸ್ಕಾರಗಳ ವರ್ಗಾವಣೆ ಹಾಡುಗಳ ರೂಪದಲ್ಲಿ ಆಗಿದೆ. ಹಾಡುಗಳು ಮನಸ್ಸನ್ನು ಮುಟ್ಟಬೇಕಾದರೆ ಸಂಗೀತದ ಲಾಲಿತ್ಯ ಇದ್ದರೆ ಮಾತ್ರ ಸಾಧ್ಯ. ಸ್ಮರಣ ಶಕ್ತಿ, ಪದ ಸಂಪತ್ತು, ನೆನಪಿನ ಕೋಶದಿಂದ ತತ್‌ಕ್ಷಣದಲ್ಲಿ ಸ್ಮೃತಿಗೆ ತಂದುಕೊಂಡು ಸಮಯೋಚಿತವಾಗಿ ಹೊಸ ಸಂದರ್ಭದಲ್ಲಿ ಬಳಸುವುದನ್ನು ಇಲ್ಲಿ ಗುರುತಿಸಬಹುದು.

ಸಂಸ್ಕಾರವನ್ನು ಬೆಳೆಸಿ, ಸಂಪ್ರದಾಯವನ್ನು ಉಳಿಸುವಲ್ಲಿ ಮಹಿಳಾ ಹರಿದಾಸರ ಪಾತ್ರ ಹಿರಿದು. ವ್ರತ ಕಥೆ, ಪೂಜಾವಿಧಾನಗಳು, ಪೌರಾಣಿಕ ಹಿನ್ನೆಲೆಯ ಕೃತಿಗಳನ್ನು ಅಧ್ಯಯನ ಮಾಡಿ, ಅಜ್ಞಾತರ ಜೀವನ, ಕೃತಿಗಳನ್ನು ಸಾಹಿತ್ಯ ಚರಿತ್ರೆಗೆ ಸೇರಿಸುವುದು ಈ ಅಧ್ಯಯನದ ಉದ್ದೇಶಗಳಲ್ಲೊಂದು. ದಾಸ ಸಾಹಿತ್ಯದ ಸಾಮಾನ್ಯ ಆಶಯಗಳನ್ನು ಮಹಿಳಾ ಹರಿದಾಸರು ಮುಂದುವರೆಸಿದ ರೀತಿ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಬೇಕು. ಈ ಮೂಲಕ ಸಾಹಿತ್ಯ ಚರಿತ್ರೆಯಲ್ಲಿ ಲುಪ್ತವಾಗಿರುವ ಭಾಗಗಳಿಗೆ ಆಕರ ಸಾಮಗ್ರಿಗಳನ್ನು ಒದಗಿಸಬೇಕು ಎಂಬುದೂ ಈ ಅಧ್ಯಯನದ ಉದ್ದೇಶಗಳಲ್ಲೊಂದು.

ಖಳ

ಅಧ್ಯಾಯ-2

ಪ್ರಮುಖ ಮಹಿಳಾ ಹರಿದಾಸರು

ವಚನ ಮತ್ತು ದಾಸ ಸಾಹಿತ್ಯಗಳು ಭಕ್ತಿ ಸಾಹಿತ್ಯದ ವಿಶಿಷ್ಟ ರಚನೆಗಳು. ಈ ಎರಡೂ ಬಗೆಯ ಸಾಹಿತ್ಯ ರಚನೆಯಲ್ಲಿ ಪುರುಷರೊಂದಿಗೆ ಸ್ತ್ರೀಯರ ಕೊಡುಗೆಯೂ ಉಲ್ಲೇಖನಾರ್ಹವಾದದ್ದು.

ಡಾ॥ ಶ್ರೀನಿವಾಸ ಹಾವನೂರರು "**ಪ್ರಥಮ ಹರಿದಾಸಿ ಯಾರು**?" ಎಂಬ ಲೇಖನದಲ್ಲಿ ಕೆಲವು ಹರಿದಾಸ ಮಹಿಳೆಯರನ್ನು ಆದ್ಯರೆಂದು ಗುರುತಿಸುತ್ತಾರೆ. ಪುರಂದರದಾಸರ ಪತ್ನಿ ಸರಸ್ವತಿಬಾಯಿ, ಮಗಳು ರುಕ್ಮಿಣಿಬಾಯಿ ಆದ್ಯರೆಂದು ಹೇಳಲಾದರೂ "ಇವರ ಹಾಡುಗಳು ಪುರಂದರದಾಸರ ಹಾಡುಗಳಲ್ಲಿ ಸೇರಿಕೊಂಡಿದ್ದು, ಈ ಹಾಡುಗಳು ಇವರವೇ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.[1]" ಹಾಗಾಗಿ ಇವರನ್ನು ಆದ್ಯರೆಂದು ಹೇಳಲು ಸಾಧ್ಯವಿಲ್ಲ. ಅಲ್ಲದೆ ಅಂದಿನ ಕಾಲದಲ್ಲಿ ಮಹಿಳೆಯರಿಗೆ ದಾಸದೀಕ್ಷೆ ನೀಡಿ ಅವರು ಸಾಹಿತ್ಯ ರಚನೆ ಮಾಡಿದ ನಿದರ್ಶನಗಳಿಲ್ಲ. ಈಗ ಲಭ್ಯವಿರುವ ಕೆಲವು ಆಧಾರಗಳಿಂದ 'ಗಲಗಲಿ ಅವ್ವ'ನವರನ್ನು ಮೊದಲ ದಾಸ ಮಹಿಳೆ ಎಂದು ಪರಿಗಣಿಸಬಹುದಾಗಿದೆ ಎಂದು ಡಾ॥ ಶ್ರೀನಿವಾಸ ಹಾವನೂರ ಅವರ ಅಭಿಪ್ರಾಯ.

1. ಗಲಗಲಿ ಅವ್ವ (1670–1760):

17ನೆಯ ಶತಮಾನದ ಹರಿದಾಸರಲ್ಲಿ ಕಾಖಂಡಕಿ ಮಹಿಪತಿರಾಯರು, ಪ್ರಸನ್ನ ವೆಂಟಕದಾಸರು ಮತ್ತು ವಿಜಯದಾಸರು ಪ್ರಮುಖರು. ಅದೇ ಸಮಯದಲ್ಲಿ ಕೃಷ್ಣವೇಣಿ ನದಿಯ ದಡದ ಗಲಗಲಿ ಗ್ರಾಮದ ಆಚಾರ್ಯರ ಮನೆತನದಲ್ಲಿ ಹೆಣ್ಣು ಮಗಳೊಬ್ಬರು ಕನ್ನಡದಲ್ಲಿ ಸಾಹಿತ್ಯ ರಚನೆ ಮಾಡಿರುವುದು ಬೆಳಕಿಗೆ ಬಂದಿರಲಿಲ್ಲ. ಮೊದಲ ಬಾರಿಗೆ ಶ್ರೀಹನುಮಂತ ತಾಸಗಾಂವಕರರವರು ನಂತರ ಇತ್ತೀಚೆಗೆ ಪ್ರೊ॥ ಎಂ.ಆರ್. ಲಕ್ಷ್ಮೀದೇವಿಯವರು ಅವ್ವನವರ ಬಗ್ಗೆ, ಅವರ ಸಾಹಿತ್ಯದ ಬಗ್ಗೆ ವಿಶೇಷ ಅಧ್ಯಯನ ನಡೆಸಿದ್ದಾರೆ. ಸಮಗ್ರ ದಾಸ ಸಾಹಿತ್ಯ ಸಂಪುಟಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟವಾದ ಮೇಲೆ ಅವ್ವನವರ ಕೃತಿಗಳು ಬೆಳಕಿಗೆ ಬಂದವು.

ಬಾಗಲಕೋಟೆ ಜಿಲ್ಲೆಯ ಕೃಷ್ಣಾ ತೀರದ ಗ್ರಾಮ ಗಲಗಲಿ. ಇಲ್ಲಿಯ ಪಂಡಿತರು ನಾಡಿನಾದ್ಯಂತ ಖ್ಯಾತಿ ಪಡೆದವರು. 'ಕೃಷ್ಣವೇಣಿಯಂತೆ ಪಾಂಡಿತ್ಯವೂ ಇವರ ಮನೆತನಕ್ಕೆ ಹರಿದು ಬಂದಿದೆ. ಪಾಂಡಿತ್ಯಕ್ಕೆ ಮನ್ನಣೆಯಾಗಿ ಅನೇಕ ಜಹಗೀರಗಳು, ವರ್ಷಾಸನ, ಬಿರುದು-ಬಾವಲಿಗಳು ಇಂದಿಗೂ ಕಂಡು ಬರುತ್ತಿವೆ. ಆದಿಲಶಾಹಿ ನಿಜಾಮರು, ಪೇಶ್ವೆ, ಮರಾಠರು, ರಾಣಿ ಸರಕಾರ, ಮೈಸೂರು ಅರಸರಿಂದ, ಈಗ ಭಾರತ

ಸರ್ಕಾರದಿಂದ, ಹೀಗೆ ಅಂದಿನಿಂದ ಇಂದಿನವರೆಗೂ ಅವ್ಯಾಹತವಾಗಿ ಲಭ್ಯವಾಗಿದೆ.[2]" ತಲೆತಲಾಂತರಗಳಿಂದಲೂ ಆ ವಂಶ ಪಾಂಡಿತ್ಯಕ್ಕೆ ಹೆಸರುವಾಸಿಯಾಗಿದೆ.

ಗಲಗಲಿ ವಂಶದ ಮೂಲ ಪುರುಷ ಶ್ರೀಕೂರ್ಮತೀರ್ಥರ ಪರಂಪರೆಯಲ್ಲಿ ಬಂದ ಮುದ್ಗಲಾಚಾರ್ಯರು ಘನ ವಿದ್ವಾಂಸರು. ಗೋದಾವರಿ ತೀರದ ಗಂಗಾಖೇಡ ಈ ಮನೆತನದ ಮೂಲ ಸ್ಥಾನ. ಮುದ್ಗಲಾಚಾರ್ಯರು ಸೇನೆ ಕಟ್ಟಿಕೊಂಡು ಅಗತ್ಯವಿದ್ದ ರಾಜರುಗಳಿಗೆ ನೆರವಾಗುತ್ತಿದ್ದ ಶೂರ ಸೇನಾಧಿಪತಿಗಳೂ ಆಗಿದ್ದರು. "ಇಂಥ ಶೂರರು ಮಹಾಪಂಡಿತರಾಗಿ ಋಷಿಜೀವನ ಸಾಗಿಸಿದ್ದೂ ಒಂದು ಮಹಾ ತಿರುವೇ ಎನ್ನಬಹುದು.[3]" ಶ್ರೀವಾದಿರಾಜತೀರ್ಥರಿಂದ ಅನುಗ್ರಹಿತರಾಗಿ ಶ್ರೀರುಕ್ಮಿಣೀಸತ್ಯಭಾಮಾ ಸಮೇತ ಕೃಷ್ಣನ ವಿಗ್ರಹವನ್ನು ಪಡೆದಿದ್ದರು. ಇಂತಹ ಮುನಿಸದೃಶ ಮುದ್ಗಲಾಚಾರ್ಯರ ಧರ್ಮಪತ್ನಿ ಅವ್ವನವರು. ಮುದ್ಗಲಾಚಾರ್ಯರನ್ನು ಎಲ್ಲರೂ 'ಅಪ್ಪನವರು' ಎಂದೇ ಕರೆಯುತ್ತಿದ್ದು, ಅವರ ಪತ್ನಿ ಅವ್ವನವರೆಂದು ಹೆಸರಾದರು.

ಅವ್ವನವರ ಮೂಲ ಹೆಸರು ರಮಾಬಾಯಿ. ಕೊಪ್ಪಳ ಜಿಲ್ಲೆಯ ಭೋಗಾಪುರ ಗ್ರಾಮದ ಶ್ಯಾನುಭೋಗರ ಮಗಳು. ಅವ್ವನವರ ಕಾಲದ ಬಗ್ಗೆ ಶ್ರೀಹಣಮಂತ ತಾಸಗಾಂವಕರ ಅವರ ಅಭಿಪ್ರಾಯಗಳು ಹೀಗಿವೆ:

1. ಅವ್ವನವರು ತಮ್ಮ ಹಾಡನ್ನು ಭಾವ ಸಂವತ್ಸರ ಜೇಷ್ಠ ಬಹುಳ ಪಂಚಮಿ, ಬುಧವಾರ ಬರೆದು ಮುಗಿಸಿದ್ದಾರೆ. ಎಫಿಮೆರಿಸ್ ಪ್ರಕಾರ 1695 ಮೇ 22 ಆಗುತ್ತದೆ. ಆದ್ದರಿಂದ ಅವರ ಜನನ ಸುಮಾರು ಕ್ರಿ.ಶ. 1650 ಎನ್ನಬಹುದು. ಅವರಿಗೆ ಹನ್ನೆರಡನೇ ವಯಸ್ಸಿಗೆ ಲಗ್ನವಾಗಿದ್ದರಿಂದ ಅವರ ವಿವಾಹ ಕ್ರಿ.ಶ. 1662ರಲ್ಲಿ ಜರುಗಿರಬಹುದು. ಅವರು ತಮ್ಮ ಜೀವನದ ಪರಿಪಕ್ವ ಕಾಲದಲ್ಲಿ ಹಾಡು ರಚಿಸಿರಬಹುದಾದ್ದರಿಂದ ಕೃತಿ ರಚನಾ ಕಾಲ 1695 ಆಗಿರಬೇಕು.

2. ದೊಡ್ಡ ಕೃಷ್ಣರಾಜ ಒಡೆಯರಿಂದ ಅವ್ವನವರು ಸನ್ಮಾನಿತರಾಗಿದ್ದರು. ಮೈಸೂರು ದೊಡ್ಡ ಕೃಷ್ಣರಾಜ ಒಡೆಯರ ಕಾಲ ಕ್ರಿ.ಶ. 1714–1732.

3. 1640–1705ರ ಅವಧಿಯಲ್ಲಿದ್ದ ಮಹಿಪತಿದಾಸರು ಅವ್ವನವರ ಸಮಕಾಲೀನರು. ಈ ಎಲ್ಲದರ ಹಿನ್ನೆಲೆಯಲ್ಲಿ ಅವ್ವನವರ ಕಾಲ ಕ್ರಿ.ಶ. ಸುಮಾರು 1650–1705 ಎನ್ನಬಹುದು ಎಂದಿದ್ದಾರೆ.

4. 1927ರಲ್ಲಿ ಬೆಳಗಾಂನಿಂದ ಅವ್ವನವರ ಹಾಡುಗಳು ಮುದ್ರಿತವಾಗಿವೆ. ಇದು ಅವ್ವನವರು ಬರೆದಿಟ್ಟಿದ್ದ ಹಸ್ತಪ್ರತಿಯಿಂದ ಅಚ್ಚು ಮಾಡಿದ್ದು ಅಂದರೆ 18ನೇ ಶತಮಾನದ ಪ್ರತಿಯೇ ಇಲ್ಲಿ ಅಚ್ಚಾಗಿದೆ ಎನ್ನಬಹುದು. ಬಾಳಬೋಧಲಿಪಿಯಲ್ಲಿ (ದೇವನಾಗರಿ) ಅಚ್ಚಾದ್ದರಿಂದ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಅವರ ಕೀರ್ತನೆಗಳು ಪ್ರಚಾರವಾಗಲು ಆಗಲಿಲ್ಲ ಎನಿಸುತ್ತದೆ.

ಎಂ.ಆರ್. ಲಕ್ಷ್ಮೀದೇವಿಯವರು ತಾಸಗಾಂವಕರರವರು ಸೂಚಿಸಿರುವ ಕಾಲವನ್ನು ಪುನರ್ಪರಿಶೀಲನೆ ಮಾಡುವ ಅಗತ್ಯವಿದೆ ಎನ್ನುತ್ತಾರೆ. ತಾಸಗಾಂವಕರರವರು ಅವ್ವನವರ ಮುಯ್ಯದ ಹಾಡಿನಲ್ಲಿ ಅವರೇ ಬರೆದಿರುವಂತೆ

ಜೇಷ್ಠ ಬಹುಳ ಉತ್ಕೃಷ್ಠ ಪಂಚಮಿ ತಿಥಿ
ಶ್ರೇಷ್ಠವಾಗಿದ್ದ ಬುಧವಾರ । ಈ ಕವನ ಶ್ರೀ
ಕೃಷ್ಣಗರ್ಪಿಸಿದೆ ಹರುಷಾಗಿ
ಭಾವ (ಯುವ?) ಸಂವತ್ಸರದಿ ದೇವಾದಿದೇವನ
ಪಾವನವಾದ ಚರಿತೆಯನ್ನು ರಚಿಸಿದೆ [4]

ಎಂದು ತಿಳಿಸುತ್ತಾರೆ. ಇದನ್ನು ಲಕ್ಷ್ಮೀದೇವಿಯವರು ಯುವ ಸಂವತ್ಸರವೇ ಸರಿಯಿರಬಹುದು ಎನ್ನುತ್ತಾರೆ.

ಒಮ್ಮೆ ಮುದ್ಗಲಾಚಾರ್ಯರು ತಮ್ಮ ವಿದ್ವಾಂಸ ಪುತ್ರರೊಡನೆ ಮೈಸೂರಿಗೆ ಹೋಗಿದ್ದರು. ತಮ್ಮ ಪಾಂಡಿತ್ಯದಿಂದ ರಾಜಾಸ್ಥಾನದ ಅನೇಕ ಪಂಡಿತರನ್ನು ಸೋಲಿಸಿ ಗೌರವ, ಮನ್ನಣೆಗಳನ್ನು ಪಡೆದು ಹಿಂತಿರುಗುವಾಗ ಭೋಗಾಪುರದ ಶಾನುಭೋಗರ ಮನೆಯಲ್ಲಿ ತಂಗಿದ್ದರು. ಅಲ್ಲಿ ಶಾನುಭೋಗರ ಮಗಳು ರಮಾಬಾಯಿಯನ್ನು ಕಂಡ ಆಚಾರ್ಯರು ವಿವಾಹವಾಗ ಬಯಸಿದರು. ಹನ್ನೆರಡು ವರ್ಷದ ರಮಾಬಾಯಿಯನ್ನು ವಯೋವೃದ್ಧರಾದ ಆಚಾರ್ಯರು ಕೇವಲ ಧಾರ್ಮಿಕ ಆಸಕ್ತಿಗಾಗಿ ಮದುವೆಯಾಗ ಬಯಸಿದರು. ಅಂದಿನ ಸಾಮಾಜಿಕ ಪರಿಸರದಲ್ಲಿ ಚಿಕ್ಕ ವಯಸ್ಸಿಗೇ ವಿವಾಹ ಮಾಡುವುದು ಸಾಮಾನ್ಯ ಸಂಗತಿಯಾಗಿತ್ತು. ಆಚಾರ್ಯರೂ ಸಹ ಆಕೆಯ ಭವಿಷ್ಯವನ್ನು ಕಡೆಗಣಿಸುವಷ್ಟು ಸ್ವಾರ್ಥಿಗಳಾಗಿರಲಿಲ್ಲ. ಅವರು ತಮ್ಮ ವಿದ್ವಾಂಸ ಪುತ್ರರಿಗೆ ತಮ್ಮ ಉದ್ದೇಶ ತಿಳಿಸಿ ಅವರ ಸಮ್ಮತಿ ಪಡೆದು ತಮ್ಮ ನಂತರ ಆಕೆಗೆ ಮಕ್ಕಳೇ ಧಾರ್ಮಿಕ ಶಿಕ್ಷಣ ನೀಡಿ ಮುಂದಿನ ಬದುಕಿಗೆ ದಾರಿ ಮಾಡಬೇಕೆಂದೂ ಕೇಳಿಕೊಂಡರು. ಮಕ್ಕಳೂ ಸಹ ಆಚಾರ್ಯರ ಉದ್ದೇಶ ತಿಳಿದು ಸಮ್ಮತಿಸಿದರು.

ಮಕ್ಕಳನ್ನು ಒಪ್ಪಿಸಿದ ನಂತರ ಶಾನುಭೋಗರಲ್ಲಿ ಈ ವಿಚಾರ ತಿಳಿಸುತ್ತಾರೆ. ಬಡತನದಿಂದ ಮಗಳ ವಿವಾಹ ಮಾಡಲಾರದೆ ತೊಳಲುತ್ತಿದ್ದ ರಮಾಬಾಯಿಯ ತಂದೆ ಆಚಾರ್ಯರ ಮಾತಿನಿಂದ ಅಚ್ಚರಿ ಹೊಂದಿ

ವಯಸ್ಸಾದ ಅವರಿಗೆ ಮಗಳನ್ನು ಕೊಡಲು ಮನಸ್ಸು ಬಾರದೆ ಸಂದಿಗ್ಧಕ್ಕೆ ಸಿಲುಕಿದರು. ದೊಡ್ಡ ಮೊತ್ತದ ಕನ್ಯಾ ಶುಲ್ಕವನ್ನು ಬೇಡಿಕೆಯಾಗಿ ಇಟ್ಟರು. ಆಚಾರ್ಯರು ಕೊಡಲು ಸಿದ್ಧರಾದಾಗ ಶಾನುಭೋಗರು ಮಾತಿಗೆ ಕಟ್ಟುಬಿದ್ದು ಇಕ್ಕಟ್ಟಿಗೆ ಸಿಲುಕಿದರು. ತಂದೆ ತಾಯಿಯರ ಸಮಸ್ಯೆಯನ್ನು ಬಾಲಕಿಯೇ ಪರಿಹರಿಸಿದಳು. "ಈ ಬಾಲೆಯೂ ವಿವಾಹವಾಗಲು ಸಂತೋಷದಿಂದ ಒಪ್ಪುತ್ತಾಳೆ. ತನ್ನನ್ನು ಉದ್ಧಾರ ಮಾಡಿದರು, ಇದರಿಂದ ನಿಮ್ಮ ಋಣ ತೀರಿತು ಎನ್ನುತ್ತಾ ಆಚಾರ್ಯರ ಮೈಮೇಲಿನ ಉತ್ತರೀಯವನ್ನು ಪಡೆದು ಉಟ್ಟುಕೊಳ್ಳುತ್ತಾಳೆ.[5]" ಆಚಾರ್ಯರೊಡನೆ ಹೊರಡಲು ಸಿದ್ಧಳಾದಳು.

ಆಚಾರ್ಯರ ಗ್ರಾಮ ಕುಮದ್ವತೀ ನದೀ ತೀರದ ಕುಪ್ಪೆಲೂರಿಗೆ ಹಿಂತಿರುಗಿದಾಗ ವಿವಾಹ ನಡೆಯುತ್ತದೆ. ಅನಂತರ ಎಂಟೇ ದಿನಕ್ಕೆ ಆಚಾರ್ಯರು ತೀರಿಕೊಳ್ಳುತ್ತಾರೆ. ಅವ್ವನವರು ಬಾಲಕಿಯಾಗಿದ್ದರೂ ಇದರಿಂದ ವಿಚಲಿತರಾಗದೆ ಮಕ್ಕಳೊಡನೆ ಆಚಾರ್ಯರ ಮೂಲ ಮನೆಯಿದ್ದ ಗಲಗಲಿಯಲ್ಲಿ ವಾಸವಾದರು. ತಮ್ಮ ಮಲಮಕ್ಕಳಿಂದ ಕನ್ನಡ–ಸಂಸ್ಕೃತ, ಶಾಸ್ತ್ರ, ಸಾಹಿತ್ಯ ಮೊದಲಾದವುಗಳನ್ನು ಕಲಿತು ಪಾಂಡಿತ್ಯ ಗಳಿಸಿದರು. "ನಿತ್ಯ ಕೃಷ್ಣಾ ಸ್ನಾನ, ಪಾಠ ಪ್ರವಚನ, ಭಾರತ, ಭಾಗವತ, ರಾಮಾಯಣಾದಿ ಪುರಾಣಗಳ ಶ್ರವಣ, ಮಕ್ಕಳಿಂದ ಶಾಸ್ತ್ರ ತಿಳುವಳಿಕೆ"[6] ಮುಂತಾದವುಗಳಿಂದ ಅವರ ಜೀವನ ಸಾಗುತ್ತದೆ. ಆಧ್ಯಾತ್ಮ ಜೀವನದಲ್ಲೇ ಕಾಲಹರಣ ಮಾಡುತ್ತ ಮಾಧ್ವ ತತ್ವಗಳ, ವೇದೋಪನಿಷತ್ತುಗಳ ಗೂಢ ತತ್ವಗಳನ್ನು ಸರಳವಾಗಿ ಕನ್ನಡದಲ್ಲಿ ಹಾಡುತ್ತಾ ಕೃತಿಗಳನ್ನು ರಚಿಸಿದರು. ಆ ಊರಿನ ಹೆಣ್ಣು ಮಕ್ಕಳು ಇವರ ಹಾಡುಗಳನ್ನು ನಿತ್ಯವೂ ಹಾಡುತ್ತಿದ್ದರು. "ಹತ್ತಿರದ ನರಸಿಂಹದೇವರ ಹಾಗೂ ಅಶ್ವತ್ಥ ವೃಕ್ಷಕ್ಕೆ ಪ್ರದಕ್ಷಿಣೆ ಹಾಕುತ್ತಾ ಶ್ರದ್ಧೆ, ಭಕ್ತಿಗಳಿಂದ ಅನ್ನುತ್ತಿದ್ದರು, ಬಾಯಿಪಾಠ ಬರುತ್ತಿದ್ದವು. ಇದು ತೋಂಡಿ ಸಾಹಿತ್ಯ."[7]

ಅವ್ವನವರು ಸ್ವಯಂ ಪ್ರತಿಭಾವಂತರು. ಬಾಲ್ಯದಲ್ಲಿಯೇ ತಂದೆಯ ಸಂಕಟ ಪರಿಹರಿಸುವ ಜಾಣ್ಮೆ ತೋರಿದವರು. ಪತಿ ವಿಯೋಗವಾದರೂ ಧೃತಿಗೆಡದೆ ಮಕ್ಕಳಿಂದ ಉನ್ನತ ಶಿಕ್ಷಣ ಪಡೆದರು. ಅವ್ವನವರ ಪಾಂಡಿತ್ಯದ ನಿದರ್ಶನಕ್ಕಾಗಿ ಕೆಲವು ಘಟನೆಗಳನ್ನು ಇಲ್ಲಿ ಉಲ್ಲೇಖಿಸಬಹುದು. ಉತ್ತರಾದಿ ಮಠದ ಶ್ರೀಸತ್ಯಧರ್ಮ ತೀರ್ಥರು ಅವ್ವನವರ ದೌಹಿತ್ರರು. ಅವ್ವನವರ ಪಾಂಡಿತ್ಯದ ಬಗ್ಗೆ ಅವರಿಗೆ ಬಹಳ ವಿಶ್ವಾಸ. ಒಮ್ಮೆ ಅವರ ಕೆಲವು ಶಿಷ್ಯರು, ವಿದ್ವಾಂಸರು ತಮ್ಮ ಕೆಲವು ಸಂಶಯಗಳನ್ನು ಶ್ರೀಗಳಲ್ಲಿ ಬಿನ್ನವಿಸಿಕೊಂಡರು. ಆಗ ಸ್ವಾಮಿಗಳು ತಾವೇ ಆ ಸಮಸ್ಯೆಗಳನ್ನು ಬಿಡಿಸಲು ಸಮರ್ಥರಾಗಿದ್ದರೂ, ಆ ಪಂಡಿತರ ಅಹಂಕಾರ ಮುರಿಯಲು ಅವ್ವನವರ ಬಳಿಗೆ ಕಳುಹಿಸಿದರು. ಗುರುಗಳ ಮಾತು ಮೀರಲಾರದೆ ಪಂಡಿತರು ಅವ್ವನವರ ಬಳಿ ಹೋದರು. ಆಗ ಅವ್ವನವರು ವಿದ್ವಾಂಸರುಗಳಿಗೆ ಉಚಿತ ಮರ್ಯಾದೆ ಮಾಡಿ ಅವರು ಬಂದ ಕಾರಣ

ಳಿದು ವಿನಯದಿಂದಲೇ ಸುಧಾ ಗ್ರಂಥದಲ್ಲಿ ಅವರ ಸಮಸ್ಯೆಗಳಿಗೆ ಎಲ್ಲಿ ಪರಿಹಾರವಿದೆ ಎನ್ನುವುದನ್ನು ಳಿಸಿದರು. ಅವ್ವನವರ ಪಾಂಡಿತ್ಯಕ್ಕೆ ಬೆರಗಾದ ಪಂಡಿತರು ಅವರನ್ನು ಹೊಗಳುತ್ತಾ ಹೊರಟು ಹೋದರು. ಂದಿನಿಂದಲೂ ಸಮಾಜದಲ್ಲಿ ನಡೆದುಬಂದಂತೆ ಸ್ತ್ರೀಯರಿಗೆ ಹೆಚ್ಚಿನ ಸ್ವಾತಂತ್ರ್ಯ ದಕ್ಕಿರಲಿಲ್ಲ. ವಿಧವೆಯರ ಾಡಂತೂ ಕೇಳುವವರೇ ಇರಲಿಲ್ಲ. ಆದರೆ ಅವ್ವನವರು ಬಾಲವಿಧವೆಯಾಗಿದ್ದರೂ ಅವರಿಗೆ ಸಕಲ ುರ್ಯಾದೆಗಳು ಲಭಿಸಿದ್ದವು. ಒಬ್ಬ ಯತಿಗಳು ತಮ್ಮ ಶಿಷ್ಯರಾದ ಪಂಡಿತರನ್ನು ಶಾಸ್ತ್ರಾರ್ಥ ವಿಚಾರಕ್ಕೆ ಅವ್ವನವರ ಬಳಿಗೆ ಕಳುಹಿಸಿದರೆಂದರೆ ಅದು ಅವರ ಉನ್ನತ ಸಂಸ್ಕೃತಿಯನ್ನು ತೋರುತ್ತದೆ. ಹೆಣ್ಣನ್ನು ಕೇವಲ ಅಡುಗೆ ಮನೆಗೆ ಸೀಮಿತಗೊಳಿಸಿದ್ದ ಸಾಮಾಜಿಕ ಪರಿಸರದಲ್ಲೂ ಒಬ್ಬ ಹೆಣ್ಣಿಗೆ ಅದರಲ್ಲೂ ಬಾಲ ವಿಧವೆಗೆ ಅವರು ತೋರಿದ ಗೌರವ ಉಲ್ಲೇಖನಾರ್ಹ.

"ಅವ್ವನವರು ಯತಿಗಳೋಪಾದಿಯಲ್ಲಿ ತಮ್ಮ ಶಿಷ್ಯರಿಂದೊಡಗೂಡಿ ಸಂಚಾರ ಕೈಗೊಳ್ಳುತ್ತಿದ್ದರು. ೀರ್ಥಕ್ಷೇತ್ರ ಸಂದರ್ಶಿಸುತ್ತಿದ್ದರು. ಕಾಶಿ ಪಟ್ಟಣದಲ್ಲಿ ಬಹಳಷ್ಟು ಕಾಲ ವಾಸಿಸುತ್ತಿದ್ದಂತೆಯೂ ತಿಳಿದು ುರುತ್ತದೆ."[8] ಒಮ್ಮೆ ಮೈಸೂರಿಗೆ ಬಂದಿದ್ದಾಗ ಪ್ರಾಣ ದೇವರ ಗುಡಿಯಲ್ಲಿ ತಂಗಿದ್ದರು. ಮಹಾರಾಜರ ೈವಭಕ್ತಿ, ಶಾಸ್ತ್ರ ಶ್ರದ್ಧೆ ಕೇಳಿ ರಾಜರನ್ನು ಭೇಟಿಯಾಗಲು ಬಯಸಿದರು. ಮೂರು ತಿಂಗಳು ಕಳೆದರೂ ಭೇಟಿ ಾಧ್ಯವಾಗಲಿಲ್ಲ. ಆಗ ಅವ್ವನವರು ಆ ಗುಡಿಯಲ್ಲಿ ಸಂಪೂರ್ಣ ಭಾಗವತವನ್ನು ರಂಗವಲ್ಲಿಯಲ್ಲಿ ಿಡಿಸಿದರು. ಗುಡಿಗೆ ಯಾರೇ ಬಂದರೂ ಅದನ್ನು ನೋಡಿ ಕೊಂಡೇ ಹೋಗುವಂತೆ ತಮ್ಮ ಶಿಷ್ಯರ ಮೂಲಕ ವ್ಯವಸ್ಥೆ ಮಾಡಿದರು. ಈ ವಿಷಯ ತಿಳಿದು ಅರಮನೆಯ ಆಚಾರ್ಯರು ಬಂದು ಅದನ್ನು ೋಡಿ ಅವ್ವನವರ ಹಿರಿಮೆಯನ್ನು ಮಹಾರಾಜರಿಗೆ ವಿಜ್ಞಾಪಿಸಿದರು. ಅರಸರು ಕೂಡಲೇ ಪಲ್ಲಕ್ಕಿ ಕಳುಹಿಸಿ ಅವ್ವನವರನ್ನು ಅರಮನೆಗೆ ಕರೆಸಿಕೊಂಡರು. ಅವ್ವನವರಿಂದ ವೇದಾಂತ ಉಪದೇಶಗಳನ್ನು ಕೇಳಿ ಅರಸರಿಗೆ ಆನಂದವಾಯಿತು. ಹಿಂದೆ ಮುದ್ಗಲಾಚಾರ್ಯರಿಗೆ ತೋರಿದ್ದಕ್ಕಿಂತ ಹೆಚ್ಚಾಗಿ ಮರ್ಯಾದೆ ನೀಡಿ ಸನ್ಮಾನಿಸಿ ಗೌರವಯುತವಾಗಿ ಕಳುಹಿಸಿಕೊಟ್ಟರು.

ಅವ್ವನವರ ಪ್ರತಿಭೆಯನ್ನು ಗುರುತಿಸುವ ಇನ್ನೊಂದು ಪ್ರಸಂಗ ಹೀಗಿದೆ. ಪುಣೆಯ ಪೇಶ್ವೆಯರ ಆಸ್ಥಾನದಲ್ಲಿ ನಡೆದ ವಿದ್ವತ್ ಸಭೆಯೊಂದರಲ್ಲಿ ಅವ್ವನವರ ಪಂಡಿತಪುತ್ರರು ಔತ್ತರೇಯ ಪಂಡಿತರೊಡನೆ ವಾಕ್ಯಾರ್ಥ ನಡೆಸಿದರು. ಅವರು ಸೋಲುವ ಸಂದರ್ಭ ಉಂಟಾಯಿತು. ಆಗ ಅವ್ವನವರು ಪುತ್ರರ ಜೊತೆ ೇರಿಕೊಂಡು ಆ ಪಂಡಿತರನ್ನು ಸೋಲಿಸಿ ದಕ್ಷಿಣದ ಪಂಡಿತರ ಮರ್ಯಾದೆ ಕಾಪಾಡಿದರು. ಕೋಟಿ ಪ್ರಮೇಯವನ್ನು ಬಿಡಿಸಿದ ಅವ್ವನವರ ಸಾಮರ್ಥ್ಯಕ್ಕೆ ಬೆರಗಾದ ಪೇಶ್ವೆಯವರು ಉಚಿತ ಗೌರವ ನೀಡಿ ಾಯಂ ಮಾಸಾಶನ ಹಾಕಿಕೊಟ್ಟರು.

ಅವ್ವನವರ ಕೃತಿಗಳು:

ಅವ್ವನವರ ಕೃತಿಗಳು ಇತರ ದಾಸರ ಕೃತಿಗಳಂತೆ ಇಲ್ಲ. ಮುಯ್ಯದ ಹಾಡುಗಳಲ್ಲೇ ವರ್ಣನೆಗಳು, ಸಂಭಾಷಣೆಗಳು, ನಿಂದಾಸ್ತುತಿಗಳು ಕಂಡು ಬರುತ್ತವೆ. ಆತ್ಮ ಶೋಧನೆ, ಲೋಕನೀತಿ, ತತ್ವಗಳನ್ನು ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಿಲ್ಲ. "ಅವ್ವನವರ ಕೃತಿಗಳ ಮೇಲೆ ದಾಸ ಕೂಟದ ಆದ್ಯ ಹರಿದಾಸರ ಹಾಡುಗಳ ಪ್ರಭಾವ ಕಂಡು ಬರುವುದಿಲ್ಲ. ಆದರೆ ವಾದಿರಾಜರ 'ಲಕ್ಷ್ಮೀಶೋಬಾನೆ' ಮತ್ತು 'ವೈಕುಂಠ ವರ್ಣನೆ'ಗಳನ್ನು ನೆನಪಿಸುವ ಮಾದರಿಯಲ್ಲಿ ಮುಯ್ಯದ ಪದಗಳು ರಚಿತವಾಗಿವೆ."[9]

ಅವ್ವನವರ ಅಂಕಿತಗಳಲ್ಲೂ ಏಕರೂಪತೆ ಇಲ್ಲ. ರಾಮೇಶ, ರಮೇಶ, ರಮಿಯರಸು ಎಂಬ ಅಂಕಿತಗಳಿವೆ. "ಅವ್ವನವರು ಗುರುಗಳಿಂದ ಅಂಕಿತ ಪಡೆದಿರಲಾರರು. ತಾವೇ ಅಂಕಿತವನ್ನು ಇಟ್ಟುಕೊಂಡಿರಬೇಕು ಅಥವಾ ಸ್ವಪ್ನಾಂಕಿತವಾಗಿರಬೇಕು. 'ಮುಯ್ಯದ ಹಾಡುಗಳು', 'ಮೋರೆಗೆ ನೀರು ತಂದ ಹಾಡು', 'ಶೃಂಗಾರ ತಾರತಮ್ಯ' ಅವ್ವನವರ ರಚನೆಗಳು. 'ಜೋಗುಳದ ಹಾಡು', 'ಸೇತುಬಂಧದ' ಹಾಡು ಅವ್ವನವರವೇ ಎಂಬುದಕ್ಕೆ ಭಿನ್ನಾಭಿಪ್ರಾಯಗಳಿವೆ. ಹಲವಾರು ಸ್ತೋತ್ರಗಳನ್ನು ಅವ್ವ ರಚಿಸಿದ್ದಾರೆ. ಭಾರತ, ಭಾಗವತಗಳನ್ನು ಸಂಪೂರ್ಣವಾಗಿ ಕನ್ನಡದಲ್ಲಿ ರಚಿಸಿರುವುದಾಗಿ ತಿಳಿದು ಬರುತ್ತದೆ. ಹರಿ ಸರ್ವೋತ್ತಮತ್ವ, ತಾರತಮ್ಯ ರಚನೆಗಳು, ನದೀ ಸ್ತೋತ್ರ, ತತ್ವ ನಿರೂಪಣೆಯ ಹಾಡುಗಳನ್ನು ಮುಯ್ಯದ ಹಾಡುಗಳಲ್ಲೇ ಬರೆದಿದ್ದಾರೆ. ನಿಂದಾಸ್ತುತಿಗಳೂ ಇವೆ. ಅವ್ವನವರು ಸ್ವತಃ ಕೀರ್ತನೆಗಳನ್ನು ಬರೆದಿರಲಾರರೆಂದು ಅಭಿಪ್ರಾಯವಿದೆ. ಅವರ ಶಿಷ್ಯೆ ಪ್ರಯಾಗವ್ವ ಸಂಗ್ರಹಿಸಿರಬಹುದು ಅಥವಾ ಹಾಡು ಹೇಳಿಸಿಕೊಂಡವರು ತಾವೇ ಹಾಡುತ್ತಾ ಪ್ರಸಾರ ಮಾಡಿರಬಹುದು.

ಅವ್ವನವರು ಚಿಕ್ಕ ವಯಸ್ಸಿನಲ್ಲಿ ಪತಿಯನ್ನು ಕಳೆದುಕೊಂಡವರು. ಆದರೂ ಅವರ ಕೃತಿಗಳಲ್ಲಿ ಸಾಂಸಾರಿಕ ಜಗಳ, ಬದುಕಿನ ನೋವು, ಸಂಕಟ, ತೊಳಲಾಟಗಳು ಕಂಡು ಬರುವುದಿಲ್ಲ. ಇತರ ದಾಸ ಮಹಿಳೆಯರಂತೆ ಬಡತನದ ಬಗ್ಗೆ ಜೀವನದ ದುರ್ಭರತೆಯನ್ನು ಕುರಿತಂತೆ ರಚನೆಗಳನ್ನು ಮಾಡಿಲ್ಲ. ತನ್ನ ತಂದೆಯ ವಯಸ್ಸಿನ ಮಕ್ಕಳಿಗೆ ಮಲತಾಯಿಯಾಗಿ ಅವರ ಆಶ್ರಯದಲ್ಲಿ ಪಾಂಡಿತ್ಯಗಳಿಸಿ ಬದುಕಿನ ಬಗ್ಗೆ ಬೇಸರವೇ ಇರಲಿಲ್ಲವೆ ಎಂಬ ಪ್ರಶ್ನೆ ಮೂಡುತ್ತದೆ. ರಾಜಾನುಗ್ರಹ ಪಡೆದಿದ್ದ ಉನ್ನತ ಕುಟುಂಬಕ್ಕೆ ಸೇರಿದ ಅವ್ವ ಸಾಮಾನ್ಯ ಮಡಿ ಹೆಂಗಸರಂತೆ ದಾರುಣ ಬದುಕು ಸಾಗಿಸುವ ಅಗತ್ಯವಿರಲಿಲ್ಲ. ಗೃಹ ಜೀವನದಲ್ಲಿ ಬಾಲವಿಧವೆಯರು ಅನುಭವಿಸುವ ಗೋಳನ್ನು ಕಂಡಾಗ ಅವ್ವ ಅದೃಷ್ಟವಂತರು ಎನ್ನಬಹುದು. ಜೀವನದಲ್ಲಿ ಕಹಿಪ್ರಸಂಗಗಳು ಅವರನ್ನು ಹೆಚ್ಚಾಗಿ ಕಾಡಿರಲಾರವು.

2. ಹೆಳವನ ಕಟ್ಟೆ ಗಿರಿಯಮ್ಮ–(1665–1715):

ಗಿರಿಯಮ್ಮನ ಹುಟ್ಟೂರು ಧಾರವಾಡ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ರಾಣೇಬೆನ್ನೂರು. ತಂದೆ ಬಿಷ್ಟಪ್ಪ ಜೋಯಿಸ, ತಾಯಿ ತುಂಗಮ್ಮ. ಸಂಪ್ರದಾಯಸ್ಥ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ ಈಕೆಯ ತವರು ಮನೆಯ ದೈವ ಮೈಲಾರಲಿಂಗ. ಚಿತ್ರದುರ್ಗ ಜಿಲ್ಲೆಯ ಹರಿಹರ ತಾಲ್ಲೂಕಿನ ಮಲೆಬೆನ್ನೂರಿನ ಶ್ಯಾನುಭೋಗರಾದ ಕೃಷ್ಣಪ್ಪನವರ ಮಗ ತಿಪ್ಪರಸ ಗಿರಿಯಮ್ಮನ ಪತಿ. ಲೌಕಿಕ ಜೀವನಕ್ಕೆ ವಿಮುಖಳಾದ ಗಿರಿಯಮ್ಮ ತನ್ನ ಪತಿಗೆ ಇನ್ನೊಂದು ವಿವಾಹ ಮಾಡಿಸಿದಳೆಂಬ ಪ್ರತೀತಿಯಿದೆ. ಹರಿಹರರನ್ನು ಸಮಾನವಾಗಿ ಕಾಣುವ ಭಾಗವತ ಮಾರ್ಗದವಳಾದ ಗಿರಿಯಮ್ಮನ ಆರಾಧ್ಯ ದೈವ ಹೆಳವನಕಟ್ಟೆ ರಂಗನಾಥಸ್ವಾಮಿ. ಈಕೆಯ ಅಂಕಿತಗಳು 'ಹೆಳವನ ಕಟ್ಟೆ ರಂಗ' ಮತ್ತು 'ಹೆಳವನಕಟ್ಟೆ ವೆಂಕಟ'. ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ರೀತಿಯಲ್ಲಿ ಪ್ರಸಿದ್ಧಳಾದ ಗಿರಿಯಮ್ಮನ ಕಾಲ ಇನ್ನೂ ಅನಿರ್ದಿಷ್ಟವಾಗಿಯೇ ಇದೆ. ತನ್ನ ತಂದೆ, ಪತಿಯನ್ನು ಬಿಟ್ಟರೆ ಇನ್ನಿತರ ವೈಯಕ್ತಿಕ ವಿವರಗಳು ಆಕೆಯ ಯಾವ ಕೃತಿಯಲ್ಲೂ ಇಲ್ಲ.

ಈಗ ದೊರೆತಿರುವ ಆಧಾರಗಳಿಂದ ಆಕೆ ಕ್ರಿ.ಶ. 18ನೆಯ ಶತಮಾನದ ಪೂರ್ವಾರ್ಧದಲ್ಲಿ ಬದುಕಿದ್ದಳೆಂದು ತರ್ಕಿಸಲಾಗಿದೆ. ಗಿರಿಯಮ್ಮನ ಕಾಲವನ್ನು ನಿರ್ಣಯಿಸುವಲ್ಲಿ ಎರಡು ವೃತ್ತಾಂತಗಳನ್ನು ಪ್ರಸ್ತಾಪಿಸಲಾಗುತ್ತದೆ.

1. ಹರಿದಾಸ ಪ್ರಮುಖರಲ್ಲಿ ಒಬ್ಬರಾದ ಶ್ರೀಗೋಪಾಲದಾಸರು ಗಿರಿಯಮ್ಮನಿಗೆ ಅಂಕಿತ, ಬಾಲಗೋಪಾಲನ ಮೂರ್ತಿ ನೀಡಿ ಅನುಗ್ರಹಿಸಿದ್ದರೆಂಬ ಮಾತಿದೆ. ಗೋಪಾಲದಾಸರ ಕಾಲ ಕ್ರಿ.ಶ. 1721–63.
2. ಮಂತ್ರಾಲಯ ಮಠದ ಪೀಠಾಧಿಪತಿಗಳಾಗಿದ್ದ ಶ್ರೀ ಸುಮತೀಂದ್ರ ತೀರ್ಥರು ಮಲೆಬೆನ್ನೂರಿಗೆ ಬಂದಿದ್ದಾಗ ಸ್ವಾಮಿಗಳ ಶಿಷ್ಯರು ಗಿರಿಯಮ್ಮನನ್ನು ಶ್ರೀಗಳ ದರ್ಶನಕ್ಕೆ ನಿರ್ಬಂಧಿಸಿದರೆಂದು, ಸ್ವತಃ ಸ್ವಾಮಿಗಳೇ ಆಕೆಯನ್ನು ಕರೆದು ತೀರ್ಥ ನೀಡಿದರೆಂಬ ಪ್ರತೀತಿ ಇದೆ. ಈ ಸಂದರ್ಭದಲ್ಲಿ ಶ್ರೀಗಳು ಪೂಜಿಸುತ್ತಿದ್ದ ಶ್ರೀಮೂಲರಾಮನ ಮೂರ್ತಿಯನ್ನು ನೋಡಿ ಗಿರಿಯಮ್ಮ ಒಂದು ಕೀರ್ತನೆ ರಚಿಸಿ ಹಾಡುತ್ತಾಳೆ. ಅದರಲ್ಲಿ

> ಮದನಕೋಟಿ ಮೋಹನಾಂಗ । ಮಾಧವ ಪುಣ್ಯ ಚರಿತ ।
> ಕರುಣಕೃಪಾಂಗ ಹೆಳವನಕಟ್ಟೆ ನಿಲಯ ವೆಂಕಟ ಶ್ರೀರಂಗ ।
> ಸದಾನಂದ ಸುಮತೀಂದ್ರ ಹೃದಯ ಪಂಕಜ ಭೃಂಗ ।[10]
> ಕದನವಿಕ್ರಮ ಬಾಹುಕೋದಂಡ ಧೃತ ಸೀತಾ

ಗಿರಿಯಮ್ಮ ಸುಮತೀಂದ್ರತೀರ್ಥರನ್ನು ಭೇಟಿಯಾದ ಸಂದರ್ಭದ ಉಲ್ಲೇಖ ಇದು. ಶ್ರೀಸುಮತೀಂದ್ರತೀರ್ಥರು ಯತಿಗಳಾಗಿದ್ದ ಕಾಲ ಕ್ರಿ.ಶ. 1692–1725. ಇದನ್ನು ದೃಢೀಕರಿಸುವಂತೆ ಶ್ರೀಸುಮತೀಂದ್ರರನ್ನು ಕುರಿತ ಶಿಲಾಶಾಸನವೊಂದು ದೊರೆತಿದ್ದು ಗಿರಿಯಮ್ಮನ ಕಾಲದ ಬಗ್ಗೆ ಸ್ಪಷ್ಟನೆ ನೀಡಲು ಸಹಾಯ ಮಾಡುತ್ತದೆ.

ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿನ ಕಸಬಾ ಹೋಬಳಿಯ ದ್ಯಾಮವ್ವನಹಳ್ಳಿ ಶಾಸನದಲ್ಲಿ ಸುಮತೀಂದ್ರರ ಉಲ್ಲೇಖವಿದೆ.[11]. ಈ ಶಾಸನವನ್ನು ಹಾಕಿಸಿದವನು ಬರಮಣ್ಣ ನಾಯಕ. ಚಿತ್ರದುರ್ಗ ಸಂಸ್ಥಾನವನ್ನು ಕ್ರಿ.ಶ. 1686ರಿಂದ 1721ರವರೆಗೆ ಆಳಿದ ಪಾಳೆಯಗಾರ. ಈ ಶಾಸನವನ್ನು 'ಶಾಲಿವಾಹನ ಶಕ 1633ರ ಖರನಾಮ ಸಂವತ್ಸರದ ಚೈತ್ರ ಶುದ್ಧ 15ರಂದು ಚಂದ್ರಗ್ರಹಣ ಪುಣ್ಯ ಕಾಲದಲ್ಲಿ, ಬರಮಣ್ಣ ನಾಯಕರು, ಕುಂಭಕೋಣ ಮಠದ ಶ್ರೀಸುಮತೀಂದ್ರ ಸ್ವಾಮಿಗಳವರಿಗೆ, ಅವರು ಪೂಜಿಸುತ್ತಿದ್ದ ರಘುಪತಿ ದೇವರ ಸೇವೆಯ ಸಲುವಾಗಿ, ಕಣಕುಪ್ಪಿ ಸೀಮೆಯ ಬಿದರಕೆರೆ ಹೊಲಬಿನ ಚುಕ್ಕಣ್ಣನ ದೇಮವ್ವನಹಳ್ಳಿ ಗ್ರಾಮವನ್ನು ಸರ್ವಮಾನ್ಯವಾಗಿ ಕೊಟ್ಟಿರುವುದಾಗಿ ತಿಳಿಸುತ್ತದೆ. ಇದರ ಕಾಲ ಕ್ರಿ.ಶ. 1711. ಈ ಸಂದರ್ಭದಲ್ಲಿಯೇ ಸುಮತೀಂದ್ರರು ದ್ಯಾಮವ್ವನಹಳ್ಳಿಗೆ ಬಂದಿದ್ದರೆಂದೂ, ಆ ಸಂದರ್ಭದಲ್ಲಿ ಗಿರಿಯಮ್ಮ ಮತ್ತು ಸುಮತೀಂದ್ರ ತೀರ್ಥರ ಭೇಟಿಯಾಗಿರಬಹುದೆಂದು ಭಾವಿಸಬಹುದು. ಈ ಕಾರಣದಿಂದ ಗಿರಿಯಮ್ಮ 1665ರಿಂದ 1715ರ ಅವಧಿಯಲ್ಲಿ ಜೀವಿಸಿದ್ದಿರಬಹುದೆಂದು ಹೇಳಬಹುದು.

ಗೋಪಾಲದಾಸರು ಗಿರಿಯಮ್ಮ ಭೇಟಿಯಾಗಿದ್ದರೆಂಬ ವಿಷಯಕ್ಕೆ ಬಂದರೆ ಇವರಿಬ್ಬರ ಕೃತಿಗಳಲ್ಲೂ ಆ ಬಗೆಗೆ ಉಲ್ಲೇಖವಿಲ್ಲ. ಇವರ ಭೇಟಿ ಕೇವಲ ವೃತ್ತಾಂತ ರೂಪದ ಹೇಳಿಕೆಯಾಗಿದೆ. ಗೋಪಾಲದಾಸರು ಗಿರಿಯಮ್ಮನ ಭೇಟಿಯಾಗಿ ಅಂಕಿತ ನೀಡಿರುವರೆಂಬುದಕ್ಕೂ ಆಧಾರವಿಲ್ಲ.

ಕ್ರಿ.ಶ. 1711ರಲ್ಲಿಯೇ ಸುಮತೀಂದ್ರತೀರ್ಥರಿಂದ ಗೌರವಿಸಲ್ಪಟ್ಟ ಗಿರಿಯಮ್ಮ ಕ್ರಿ.ಶ. 1721ರಲ್ಲಿ ಜನಿಸಿದ ಗೋಪಾಲದಾಸರಿಂದ ಅನುಗ್ರಹ ಪಡೆದದ್ದು ಅಸಂಗತವಾಗುತ್ತದೆ.

ಸುಮತೀಂದ್ರ ತೀರ್ಥರು ಎರಡನೆಯ ಮತ್ತು ಕೊನೆಯ ಬಾರಿಗೆ ಚಿತ್ರದುರ್ಗ ಪ್ರಾಂತ್ಯಕ್ಕೆ ಬಂದದ್ದು ಕ್ರಿ.ಶ. 1711ರಲ್ಲಿ. ಆ ಸಂದರ್ಭದಲ್ಲಿ ಸ್ವಾಮಿಗಳ ಪೂಜಾ ಮೂರ್ತಿ ರಾಮನ ಮೇಲೆ ಕೀರ್ತನೆ ರಚಿಸಿ ಸ್ವಾಮಿಗಳಿಗೆ ಪ್ರತಿ ಗೌರವ ತೋರಿದ್ದ ಗಿರಿಯಮ್ಮ ಆ ಹೊತ್ತಿಗಾಗಲೇ ಆ ಪ್ರಾಂತ್ಯದಲ್ಲೆಲ್ಲಾ ಹೆಸರು ಪಡೆದ ಮಹಿಳೆಯಾಗಿರಬೇಕು.

ಗೋಪಾಲದಾಸರ ಭೇಟಿಯ ವಿಷಯವನ್ನು ಗಿರಿಯಮ್ಮ ಎಲ್ಲೂ ಪ್ರಸ್ತಾಪಿಸಿಲ್ಲ. ಅಂಕಿತ ನೀಡಿದ್ದರೆ ಗುರುಗಳನ್ನು ಬಹುಶಃ ಗಿರಿಯಮ್ಮ ಪ್ರಸ್ತಾಪಿಸದೇ ಇರಲು ಸಾಧ್ಯವಿಲ್ಲ. ಈ ಕಾರಣಗಳಿಂದ ಗೋಪಾಲದಾಸರು ಮತ್ತು ಗಿರಿಯಮ್ಮ ಭೇಟಿಯಾಗಿರಬಹುದೆಂಬ ವಿಚಾರ ಸಂಗತವೆನಿಸುವುದಿಲ್ಲ.

ಗಿರಿಯಮ್ಮನ ತಂದೆ ತಾಯಿಗಳ ಬಗ್ಗೆ ಹೆಚ್ಚು ವಿವರಗಳು ತಿಳಿದುಬರುವುದಿಲ್ಲ. ತಾಯಿ ತುಂಗಮ್ಮ ತಂದೆ 'ಭಿಷ್ಠಪ್ಪ ಜೋಯಿಸ' ಮತ್ತು ಭೀಷ್ಮಪ್ಪ ಜೋಯಿಸ ಎಂದು ಎರಡು ರೂಪಗಳನ್ನು ಕೊಡಲಾಗಿದೆ. ಭಿಷ್ಠಪ್ಪ, ಭೀಷ್ಮಪ್ಪ ಇವು ಅಪರೂಪದ ಹೆಸರುಗಳು. ವಿಷ್ಣಪ್ಪ ಎಂಬುದು ಬಿಟ್ಟಪ್ಪ, ಭಿಷ್ಠಪ್ಪ ಎಂಬ ರೂಪಾಂತರವಾಗಿರುವ ಸಾಧ್ಯತೆಯೂ ಕಡಿಮೆ. ಗಿರಿಯಮ್ಮ 'ಲವಕುಶರ ಕಥೆ'ಯಲ್ಲಿ ತನ್ನ ತಂದೆ ಮತ್ತು ಪತಿಯ ವಿವರಗಳನ್ನು ನೀಡುತ್ತಾಳೆ.

> ವೇದ ಪುರಾಣದ ವಾಕ್ಸಿದ್ಧಿ ಪಡೆದಂಥ
> ಶ್ರೀಧರನರಸಿ ಶ್ರೀಗೋತ್ರ
> ವೇದ ಮೂರ್ತಿ ಕೊಂಡಪ್ಪನ ಪುತ್ರಿನಿ
> ವೇದಿಸುವೆ ಲವಕುಶರ ಕಥೆಯ [12]

ಗಿರಿಯಮ್ಮನ ತಂದೆಯ ಹೆಸರು ಕೊಂಡಪ್ಪ. ತೆಲುಗಿನ ಕೊಂಡಪ್ಪನೇ ಕನ್ನಡದ ಬೆಟ್ಟಪ್ಪ. ಬೆಟ್ಟಪ್ಪ ನಾಮ ಪದವನ್ನು ಸಂಸ್ಕೃತೀಕರಣಗೊಳಿಸಿದ ಪಂಡಿತರು ಇದನ್ನು ಭಿಷ್ಠಪ್ಪ ಎಂದು ಪರಿವರ್ತಿಸಿರಬೇಕು. ಸಾಲದ್ದಕ್ಕೆ ಜೋಯಿಸ ಎಂಬ ವೃತ್ತಿ ವಾಚಕವನ್ನೂ ಅಂಟಿಸಿರಬೇಕು. ಈ ಕೊಂಡಪ್ಪ ಅಥವಾ ಬೆಟ್ಟಪ್ಪ ತೆಲುಗು ಮೂಲದ ಭಾಗವತ ಸಂಪ್ರದಾಯದ ವಿದ್ವಾಂಸನಿರಬೇಕು. ತಂದೆಯಂತೆಯೇ ಈಕೆಯ ಪತಿಯೂ ವಿದ್ವಾಂಸನೇ. ವೇದ ಪುರಾಣಗಳಲ್ಲಿ ವಾಕ್ಸಿದ್ಧಿ ಪಡೆದವನು. ಅವನ ಹೆಸರು ಶ್ರೀಧರ. ಬಹುಶಃ ತಿಪ್ಪರಸ ರೂಢನಾಮವಿರಬೇಕು. ಈತ ಶ್ರೀವತ್ಸ ಗೋತ್ರದವನು. ಚಿತ್ರದುರ್ಗ, ಚನ್ನಗಿರಿ, ಮಲೆಬೆನ್ನೂರು ಸುತ್ತಮುತ್ತಲಿನ ನಾಡಿಗ ಮನೆತನದ ಕುಟುಂಬಗಳವರು ತಾವು ಗಿರಿಯಮ್ಮನ ವಂಶಸ್ಥರೆಂದು ಸಂಬಂಧಿಗಳೆಂದು ಹೇಳಿಕೊಳ್ಳುತ್ತಾರೆ. ಇವರು ಕೂಡ ಶ್ರೀವತ್ಸ ಗೋತ್ರದವರೇ, ಮೂಲತಃ ಇವರೆಲ್ಲ ತೆಲುಗು ಮೂಲದ ಆರುವೇಲು ಬ್ರಾಹ್ಮಣರು. ಆಂಧ್ರದ ತೆಲಂಗಾಣ ಪ್ರಾಂತ್ಯದ ಇಂದ್ರಗಂಟಿ ಎಂಬ ಪ್ರದೇಶದಿಂದ ಬಂದವರು. ಕಾಲಕ್ರಮದಲ್ಲಿ ಇವರ ಕೆಲವು ಗುಂಪುಗಳು ಮಾಧ್ವ ಮಠಗಳಲ್ಲಿ ತಮ್ಮನ್ನು ಗುರುತಿಸಿಕೊಂಡವು. ಅವರಲ್ಲಿ ಬಹಳ ಮಂದಿ ಭಾಗವತ ಸಂಪ್ರದಾಯದವರಾಗಿದ್ದು ಶೈವ, ವೈಷ್ಣವ ಸಂಪ್ರದಾಯಗಳನ್ನು ಅನುಸರಿಸುತ್ತಾರೆ. ಗಿರಿಯಮ್ಮನ ಮನೆಯವರು ಭಾಗವತ ಸಂಪ್ರದಾಯಿಗಳಾಗಿದ್ದು, ಶೃಂಗೇರಿ ಮಠದ ಗುರುಪರಂಪರೆಯನ್ನು ಗೌರವಿಸುತ್ತಿದ್ದರು. ಇದಕ್ಕೆ ಪೂರಕವಾಗಿ ಗಿರಿಯಮ್ಮ 'ಲವಕುಶರ ಕಾಳಗ'ದಲ್ಲಿ ಪ್ರಾರ್ಥನಾ ಸ್ತೋತ್ರ ಹೀಗಿದೆ:

ಹರಿಹರಬ್ರಹ್ಮತ್ರಿಮೂರ್ತಿಗಳ ಬಲಗೊಂಡು
ಗುರುಶೃಂಗೇರಿಯ ನೆನೆದು ।
ಮನದಲ್ಲಿ ಇಷ್ಟದೇವತೆಗಳ ಬಲಗೊಂಡು
ಪೊಗಳುವೆ ರಾಮರ ಕಥೆಯ [13]

ಎಂದು ಹೇಳಲಾಗಿದೆ. ಆದರೆ ಟಿ.ಕೆ. ಇಂದೂಬಾಯಿಯವರು ಸಂಪಾದಿಸಿರುವ 'ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು' ಎಂಬ ಗ್ರಂಥದಲ್ಲಿ 'ಗುರು ಸತ್ಯಬೋಧರ ನೆನೆದು' ಎಂಬ ಪಾಠಾಂತರವಿದೆ. ಸತ್ಯಬೋಧ ತೀರ್ಥರ ಕಾಲ 1744–1793. ಇದನ್ನು ಗಮನಿಸಿ ಇಂದೂಬಾಯಿಯವರು ಗಿರಿಯಮ್ಮ ಸತ್ಯಬೋಧರು ಪೀಠಾಧಿಪತಿಗಳಾಗಿದ್ದ ಆರಂಭದ ವರ್ಷದಲ್ಲಿ ಇದ್ದರೆಂದು ಅಭಿಪ್ರಾಯ ಪಡುತ್ತಾರೆ. ಲವಕುಶರ ಕಥೆಯ 25 ನುಡಿಗಳ ಅಪೂರ್ಣ ಆಕರವೊಂದರ ಆಧಾರದಿಂದ ಶ್ರೀಮತಿ ಇಂದೂಬಾಯಿಯವರು ಈ ಅಭಿಪ್ರಾಯಕ್ಕೆ ಬಂದಿದ್ದಾರೆ. 1972ರಲ್ಲೇ ಲವಕುಶರ ಕಥೆಯ ಪೂರ್ಣ ಪಾಠ 'ಪ್ರಬುದ್ಧ ಕರ್ನಾಟಕ'ದ ಎರಡು ಸಂಚಿಕೆಗಳಲ್ಲಿ ಪ್ರಕಟವಾಗಿದೆ. ಇದನ್ನು ಇಂದೂಬಾಯಿಯವರು ಗಮನಿಸಿದಂತಿಲ್ಲ. ಹಾಗೆಯೇ ಕರ್ನಾಟಕ ಸರ್ಕಾರದ ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ಸಮಗ್ರ ದಾಸ ಸಾಹಿತ್ಯ ಸಂಪುಟಗಳಲ್ಲಿ ಗಿರಿಯಮ್ಮನ ಹಾಡುಗಳಲ್ಲಿ ಲವಕುಶರ ಕಾಳಗವನ್ನು ಪ್ರಥಮ ಬಾರಿಗೆ ಪೂರ್ಣ ರೂಪದಲ್ಲಿ ಪ್ರಕಟಿಸಿರುವುದಾಗಿ ಸಂಪಾದಕರಾದ ಲೀಲಾವತಿ ಎಸ್. ರಾವ್ ತಿಳಿಸಿರುತ್ತಾರೆ. ಇದೂ ಸತ್ಯವಲ್ಲ. ಪ್ರಥಮವಾಗಿ ಪ್ರಕಟವಾಗಿರುವುದು 1972 ಮೇಲೆ ಹೇಳಿದ ಪ್ರಬುದ್ಧ ಕರ್ನಾಟಕ ಎರಡು ಸಂಚಿಕೆಗಳಲ್ಲಿ. ಅನಂತಪದ್ಮನಾಭರವರು ಇದರ ಸಂಪಾದಕರು. ಆದರೆ ಇಲ್ಲಿ ಗಿರಿಯಮ್ಮನ ಹೆಸರಿನ ಪ್ರಸ್ತಾಪವಿಲ್ಲ. ಯಶೋದೆ ಎಂಬ ಕವಯಿತ್ರಿ ಇದನ್ನು ಬರೆದಿರಬಹುದೆಂದು ಊಹಿಸಲಾಗಿದೆ. 'ಅರಿತು ಮರೆತು ಯಶೋದೆ ಹೇಳಿದ ಕಥೆ' ಎಂಬ ಮಾತನ್ನು ಆಧರಿಸಿ, ಇದನ್ನು ಯಶೋದೆ ಎಂಬ ಕವಯತ್ರಿ ಬರೆದಿರಬೇಕೆಂದು, ಆಕೆಯೊಬ್ಬ ಜಾನಪದ ಕವಯತ್ರಿ ಆಗಿರಬಹುದೆಂದು ಸಂಪಾದಕರು ಊಹಿಸುತ್ತಾರೆ.

ಇದರ ಕರ್ತೃ ಯಶೋದೆ ಎಂಬ ಕವಯತ್ರಿ ಅಲ್ಲ. ಯಶೋದೆ ಎಂಬುದು ಕೇವಲ ಊಹೆ. ಯಶೋದೆ ಕೃಷ್ಣನಿಗೆ ಹೇಳಿದ ಲವ ಕುಶರ ಕಥೆಯನ್ನು ಗಿರಿಯಮ್ಮ ಸಾಂಗತ್ಯದಲ್ಲಿ ನಿರೂಪಿಸಿದ್ದಾಳೆ.

ಗಿರಿಯಮ್ಮನ ಮನೆಯವರು ಭಾಗವತ ಧರ್ಮಾವಲಂಬಿಗಳಾಗಿದ್ದು, ಶೃಂಗೇರಿ ಮಠ ಮತ್ತು ಮಂತ್ರಾಲಯ ಮಠಗಳೆರಡಕ್ಕೂ ಗೌರವದಿಂದ ನಡೆದುಕೊಳ್ಳುತ್ತಿದ್ದವರು. ಆದ್ದರಿಂದ 'ಲವಕುಶರ ಕಾಳಗ'ದಲ್ಲಿ 'ಗುರು ಶೃಂಗೇರಿಯ ನೆನೆದು' ಎಂಬುದೇ ಮೂಲ ಪಾಠವಾಗಿರಬೇಕು. ಸತ್ಯಬೋಧರ ಕಾಲಕ್ಕೂ ಗಿರಿಯಮ್ಮನ ಕಾಲಕ್ಕೂ ಸಂಬಂಧವೇ ಇಲ್ಲ. ಗಿರಿಯಮ್ಮನನ್ನು ಒಬ್ಬ ಸಂಪ್ರದಾಯಸ್ಥ ಮಾಧ್ವ ಮಹಿಳೆಯಾಗಿ

ಗುರುತಿಸಬೇಕೆಂಬ ನಿಷ್ಠೆಯುಳ್ಳವರು ಯಾರೋ 'ಗುರು ಸತ್ಯಬೋಧರ ನೆನೆದು' ಎಂಬ ಪಾಠಾಂತರವನ್ನು ಸೃಷ್ಟಿಸಿರಬೇಕು.

ಇಲ್ಲಿ ಗಮನಿಸಬೇಕಾದದ್ದು 'ಹರಿಹರ ಬ್ರಹ್ಮತ್ರಿಮೂರ್ತಿಯ ಬಲಗೊಂಡು ಗುರು ಶೃಂಗೇರಿಯ ನೆನೆದು' ಎಂಬ ಪಾಠ. ಗಿರಿಯಮ್ಮ ಶೃಂಗೇರಿಯನ್ನು ಸಂದರ್ಶಿಸಿದಾಗ ಅಲ್ಲಿನ ವಿದ್ಯಾಶಂಕರ ದೇವಾಲಯದಲ್ಲಿ ಹರಿಹರಬ್ರಹ್ಮರ ಜೊತೆಗೆ ಶೃಂಗೇರಿಯ ಗುರುಗಳ ಸಾನ್ನಿಧ್ಯವೂ ಸೇರಿರುವುದನ್ನು ನೆನೆದು ಆ ನೆನಪಲ್ಲೇ ಆಕೆ ಪ್ರಾರ್ಥನಾ ಪದ್ಯ ರಚಿಸಿರಬೇಕು. ಭಾಗವತ ಸಂಪ್ರದಾಯದ ಒಬ್ಬ ಮಹಿಳೆಗೆ ಉತ್ತರಾದಿ ಮಠದ ಮಾಧ್ವ ಯತಿಗಳ ಬಗ್ಗೆ ತಿಳಿದಿರಲು ಸಾಧ್ಯವಿಲ್ಲ. ಕಾಲ ವ್ಯತ್ಯಾಸವೂ ಅಪಾರವಾಗಿ ಇರುವುದರಿಂದ 'ಗುರು ಸತ್ಯಬೋಧರ ನೆನೆದು' ಎಂಬುದು ಕಲ್ಪಿತ ಪಾಠ. ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–1ರ ಗಿರಿಯಮ್ಮನ ಹಾಡುಗಳು ಗ್ರಂಥದ 'ಲವಕುಶರ ಕಾಳಗ'ದ 3ನೇ ಪದ್ಯದಲ್ಲಿ 'ಗುರು ಮಧ್ವರಾಯರ ನೆನೆದು' ಎಂಬ ಪಾಠವಿದೆ. ಆದರೆ ಗಿರಿಯಮ್ಮ ವಾಯುದೇವರನ್ನು ಸ್ತುತಿಸುವಾಗ ಹನುಮಂತನ ಬಗೆಗೆ ಮಾತ್ರ ಹೇಳುತ್ತಾಳೆ. ಅವತಾರತ್ರಯದ ಕಲ್ಪನೆ ಗಿರಿಯಮ್ಮನಲ್ಲಿಲ್ಲ. ಹಾಗಾಗಿ 'ಗುರು ಮಧ್ವರ ನೆನೆದು' ಎಂದು ಆಕೆ ಹೇಳಿರಲು ಸಾಧ್ಯವಿಲ್ಲ. ಹರಿಹರರನ್ನು ಸಮಾನವಾಗಿ ಕಾಣುವ ಕೀರ್ತನೆಗಳನ್ನು ಗಿರಿಯಮ್ಮ ರಚಿಸಿರುವುದಿದೆ. ಈ ಕಾರಣಗಳಿಂದ ಗಿರಿಯಮ್ಮ ಭಾಗವತ ಧರ್ಮದ ಅನುಯಾಯಿಗಳ ಮನೆತನದವಳೆಂದು ಹೇಳುವುದು ಸೂಕ್ತ.

ಗಿರಿಯಮ್ಮನ 51 ಕೀರ್ತನೆಗಳು ದೊರೆತಿವೆ. ಉದ್ಧಾಳೀಕನ ಕಥೆ, ಶಂಕರಗಂಡನ ಹಾಡು, ಸೀತಾ ಕಲ್ಯಾಣ, ಚಂದ್ರಹಾಸನ ಕಥೆ, ಬ್ರಹ್ಮಕೊರವಂಜಿ, ಲವಕುಶರ ಕಾಳಗ ಎಂಬ ದೀರ್ಘ ಕೃತಿಗಳನ್ನು ರಚಿಸಿದ್ದಾಳೆ. ಕೃಷ್ಣ ಕೊರವಂಜಿಯನ್ನು ರಚಿಸಿದ್ದು ಅದು ಅಪೂರ್ಣ ಕೃತಿಯಾಗಿ ಉಳಿದಿದೆ.

3. ಹರಪನಹಳ್ಳಿ ಭೀಮವ್ವ: (1823–1903):

ದಾಸ ಸಾಹಿತ್ಯ ವಾಹಿನಿಯಲ್ಲಿ ಗುರುತಿಸಲಾಗಿದ್ದ ದಾಸ ಮಹಿಳೆಯರಲ್ಲಿ ಗಿರಿಯಮ್ಮ ಮತ್ತು ಭೀಮವ್ವ ಪ್ರಮುಖರು. ಹರಪನಹಳ್ಳಿ ಭೀಮವ್ವ ಹುಟ್ಟಿದ್ದು ಕ್ರಿ.ಶ. 1823ರ ಜುಲೈ 6 ಭಾನುವಾರದಂದು. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ನಾರಾಯಣ ದೇವರ ಕೆರೆ ಅವ್ವನ ಜನ್ಮಸ್ಥಳ. ತಂದೆ ರಘುನಾಥಾಚಾರ್ಯ. ತಾಯಿ ರಾಘಮ್ಮ. ಭೀಮವ್ವನ ಜನ್ಮ ನಾಮ ಕಮಲಾಕ್ಷಿ.

ಭೀಮವ್ವ ಬಾಲ್ಯದಿಂದಲೂ ಹರಿದಾಸರ ಹಾಡುಗಳನ್ನು ಕೇಳುತ್ತಲೇ ಬೆಳೆದಾಕೆ. ಅವಳ ತಾತ ಜೋಯಿಸ ವೆಂಕಪ್ಪಾಚಾರ್ಯರೂ ಹರಿದಾಸರಾಗಿದ್ದರು. ಇದರಿಂದ ಪ್ರಭಾವಿತಳಾದ ಭೀಮವ್ವನ ದೈವೀಶ್ರದ್ಧೆ ಇಮ್ಮಡಿಯಾಯಿತು. ಭೀಮವ್ವ ಓದು ಬರಹ ತಿಳಿಯದ ನಿರಕ್ಷರಕುಕ್ಷಿ. "ಮನೆಯಲ್ಲಿನ ಭಕ್ತಿ ಪರಿಸರ,

ಪುರಾಣ ಕಥೆಗಳನ್ನು ಕೇಳುವುದು ಹಾಗೂ ಗೌರಿ ಪೂಜೆ, ಶ್ರಾವಣ ಮಾಸದ ಹಾಡುಗಳಲ್ಲಿ ಭಾಗವಹಿಸುವುದು ಮತ್ತು ನಿರಂತರ ಹರಿ ಭಜನೆಯೇ ಆಕೆಯ ಭಕ್ತಿ ಸಾಹಿತ್ಯಕ್ಕೆ ಪ್ರೇರಣೆ ಹಾಗೂ ಸ್ಫೂರ್ತಿ".[14]

ರಾಯದುರ್ಗ ತಾಲ್ಲೂಕಿನ ಹಿರೇಸಮುದ್ರ ಗ್ರಾಮದ ಕುಲಕರ್ಣಿ ಮನೆತನದ ಗೋಪಾಲಪ್ಪನವರ ಮಗ ಮುನಿಯಪ್ಪನೊಡನೆ ಭೀಮವ್ವನ ವಿವಾಹವಾಯಿತು. ಮುನಿಯಪ್ಪನವರ ತಾತ ಮೋನಪ್ಪಯ್ಯ ಹರಪನಹಳ್ಳಿ ಸಂಸ್ಥಾನದ ದಿವಾನರಾಗಿ ಅನೇಕ ಜನಹಿತ ಕಾರ್ಯಗಳನ್ನು ಕೈಗೊಂಡಿದ್ದರು. ಮುನಿಯಪ್ಪ ಮೈಸೂರು ಸರ್ಕಾರದ ಇಲಾಖೆಯೊಂದರಲ್ಲಿ ಸುಬೇದಾರನಾಗಿ ಕೆಲಸ ಮಾಡುತ್ತಿದ್ದನು. ಮುನಿಯಪ್ಪನ ನಾಲ್ಕನೇ ಪತ್ನಿಯಾಗಿ ಭೀಮವ್ವ ವಿವಾಹದ ನಂತರ ಕೃಷ್ಣಾಬಾಯಿ ಆದಳು. ಇಬ್ಬರು ಮಕ್ಕಳನ್ನು ಪಡೆದು ನಂತರ ಸಾಂಸಾರಿಕ ಜೀವನದಲ್ಲಿ ನಾನಾ ರೀತಿಯ ಕಷ್ಟಗಳನ್ನು ಎದುರಿಸಬೇಕಾಯಿತು. ಮದುವೆಯಾದ 15ನೇ ವರ್ಷದಲ್ಲಿ ವೈಧವ್ಯ ಪ್ರಾಪ್ತವಾಯಿತು. ಆ ದುಃಖ ಭೀಮವ್ವನ ಮನಸ್ಸನ್ನು ಹರಿಧ್ಯಾನದ ಕಡೆಗೆ ವಾಲಿಸಿತು. ಮಕ್ಕಳ ಲಾಲನೆ, ಪಾಲನೆ, ಹರಿಭಜನೆಯಿಂದ ಜೀವನ ನಡೆಯತೊಡಗಿತು. ಇಲ್ಲಿಂದ ಭೀಮವ್ವನ ಜೀವನದ ದಿಕ್ಕು ಬದಲಾಯಿತು.

ಚಿಕ್ಕ ವಯಸ್ಸಿನಲ್ಲಿ ನಾನಾ ರೀತಿಯ ಕಷ್ಟಗಳನ್ನು ಅನುಭವಿಸಿ, ವೈಧವ್ಯದ ಬವಣೆಗಳನ್ನು ಸಹಿಸುತ್ತಾ ಸಾಧನೆ ಮಾಡಿದ್ದು ಭೀಮವ್ವನ ವೈಶಿಷ್ಟ್ಯ. ಭೀಮವ್ವನ ಜೀವನದ ಮಹತ್ವ ಪೂರ್ಣ ವಿಚಾರಗಳನ್ನು ಹಾಗೂ ಹಾಡುಗಳನ್ನು ದಾಖಲಿಸಲಾದ ಕೈ ಬರಹದ ಪ್ರತಿಯಲ್ಲಿ ಆಕೆಗೆ ಸ್ವಪ್ನಾಂಕಿತವಾದ ಘಟನೆಯನ್ನು ಕಾಣಬಹುದು.

"ಒಂದು ದಿನ ಮಧ್ಯಾಹ್ನ ಮನೆಯಲ್ಲಿ ಭೀಮಕ್ಕ ಒಬ್ಬಳೇ ಮಲಗಿರುವಾಗ ಸ್ವಪ್ನದಲ್ಲಿ ಒಂದು ವಿಶಿಷ್ಟ ದೃಶ್ಯ ಗೋಚರಿಸಿತು. ತಾನೊಂದು ಅರಣ್ಯದಲ್ಲಿ ಮರದ ಕೆಳಗೆ ಮಲಗಿರುವಂತೆಯೂ ಒಬ್ಬ ತಂಬೂರಿ ಧರಿಸಿದ ಬ್ರಾಹ್ಮಣನು ಬಂದು ಅಲ್ಲಿದ್ದ ಕೃಷ್ಣಸರ್ಪಕ್ಕೆ ತನ್ನ ನಾಲಿಗೆಯ ಮೇಲೆ ಮೂರು ಅಕ್ಷರ ಬರೆಯುವಂತೆ ನಿರ್ದೇಶಿಸಿದಾಗ ಆ ಸರ್ಪ ಹಾಗೆಯೇ ಬರೆಯಿತು. ಅಂದಿನಿಂದ ಆಗಾಗ್ಗೆ ಅಪ್ರಯತ್ನವಾಗಿಯೇ ಹಾಡುಗಳು ಸ್ಫುರಿಸಲು ಪ್ರಾರಂಭವಾಯಿತು. ಹಾಗೆ ಮೊದಲು ಬಂದ ಹಾಡು ರಕ್ಷಿಸಬೇಕೆನ್ನ ಲಕ್ಷ್ಮೀನರಸಿಂಹನ ಭಕ್ತನೆ ಎಂಬುದು."[15] ಭೀಮವ್ವ ತನಗೆ ತೋಚಿದ ಹಾಡುಗಳನ್ನು ಹೇಳಲು ಸಂಕೋಚಪಟ್ಟು ಸುಮ್ಮನಿದ್ದಾಗ ಆಕೆಗೆ ಹೊಟ್ಟೆ ನೋವು, ತಲೆ ನೋವುಗಳನ್ನು ಅನುಭವಿಸಬೇಕಾಯಿತು. ಮನೆಯ ಹಿರಿಯರು ಭೀಮವ್ವ ಹಾಡು ಮಾಡುವುದನ್ನು ಮೊದಲಿಗೆ ನಿರ್ಬಂಧಿಸಿದರು. ಆಕೆ ಅನುಭವಿಸುತ್ತಿದ್ದ ವೇದನೆ ನೋಡಲಾರದೆ ದೇವರನ್ನು ಪ್ರಾರ್ಥಿಸಿ 'ಸ್ವಪ್ನ ಫಲ'ದಂತೆ ನಡೆದುಕೊಳ್ಳಲು ಸೂಚಿಸುತ್ತಾರೆ. ತವರಿನ ಹೆಸರು ಭೀಮವ್ವ ಮತ್ತು ಅತ್ತೆ ಮನೆಯ ಹೆಸರು ಕೃಷ್ಣಾಬಾಯಿ ಸೇರಿ 'ಭೀಮೇಶಕೃಷ್ಣ' ಅಂಕಿತದಲ್ಲಿ ಭೀಮವ್ವನ ಕೃತಿಗಳು ರಚಿತವಾದವು.

ಭೀಮವ್ವ ರಾತ್ರಿ ಕನಸಿನಲ್ಲಿ ಕಂಡ ಪ್ರಸಂಗಗಳನ್ನು ಹಾಡಿನ ರೂಪದಲ್ಲಿ ಹಾಡುತ್ತಿದ್ದಳಂತೆ. ಕುಳಿತಲ್ಲೇ ಹಾಡು ಕಟ್ಟುವ ಕಲೆ ಭೀಮವ್ವನಿಗೆ ಸಿದ್ಧಿಸಿತ್ತು. ಇದಕ್ಕೆ ಪೂರಕವಾಗಿ ಮುಯ್ಯದ ಹಾಡಿನ ಹುಟ್ಟಿನ ಬಗೆ ಒಂದು ಪ್ರಸಂಗವಿದೆ. "ಹರಪನಹಳ್ಳಿಯ ಒಬ್ಬರ ಮನೆಯಲ್ಲಿ ಮುಯ್ಯ ನೋಡಲಿಕ್ಕೆ ಹೋಗಿದ್ದ ಭೀಮವ್ವನನ್ನು ರಮಾಬಾಯಿ, ಎನ್ನುವವರು ಎಲ್ಲರೂ ಹೇಳಿಕೊಳ್ಳುವಂತಹ ಒಳ್ಳೆಯ ಮುಯ್ಯದ ಹಾಡು ಮಾಡೆಂದು ಪ್ರಾರ್ಥಿಸಿದಾಗ ಅದೇ ರಾತ್ರಿಯೇ ಭೀಮವ್ವನಿಗೆ 'ಏಕದಂತಾಗೇ ನಮೋಯೆಂದು ಕೇಳುವ ಶ್ರೀಕಾಂತ ಹರಿಯಾ ಚರಿತಾವುಕೋಲೇ,' ಎಂಬ ಅನೇಕ ಧ್ವನಿ-ವಿನ್ಯಾಸಗಳ ಮುಯ್ಯದ ಹಾಡು ಮೂಡಿ ಬಂತು. ಭಗವದ್ಭಕ್ತಿ, ಶೃಂಗಾರ ಸಾಹಿತ್ಯ ಚಮತ್ಕಾರ ವೈವಿಧ್ಯ, ರಾಗ ತಾಳಾದಿ ವಿಶಿಷ್ಟ ಸಂಪತ್ತುಳ್ಳ ಈ ಹಾಡು ಇಂದಿಗೂ ಕನ್ನಡ ಹರಿದಾಸ ಸಾಹಿತ್ಯದಲ್ಲಿ ಅಪೂರ್ವವೆಂದೇ ಪರಿಗಣಿತವಾಗಿದೆ."[16] ಇದರಂತೆ ಉರುಟಣೆ ಹಾಡು, ಕುಚೇಲನ ಕಥೆ ಮುಂತಾದ ಅನೇಕ ಹಾಡುಗಳು ಭೀಮವ್ವನ ಸ್ವಪ್ನದಲ್ಲಿ ಮೂಡಿ ಲಿಖಿತ ರೂಪಕ್ಕೆ ಬಂದವುಗಳೇ.

ಹರಪನಹಳ್ಳಿಯ ಹತ್ತಿರದ ತಿಮ್ಮಲಾಪುರ ಗ್ರಾಮದ ವೆಂಕಟರಮಣನ ಗುಡಿಗೆ ಭೀಮವ್ವ ಪ್ರತಿ ಶನಿವಾರ ಹೋಗುತ್ತಿದ್ದಳು. ತಿಮ್ಮಲಾಪುರದ ವೆಂಕಟೇಶ ಈಕೆಯ ಆರಾಧ್ಯ ದೈವ. ಹರಪನಹಳ್ಳಿಯ ಹೊಸಳ್ಳಿ ಹನುಮಂತ, ಪ್ರಸನ್ನ ವೆಂಕಟೇಶ ಭೀಮವ್ವನ ಇಷ್ಟ ದೈವಗಳು. ಬೊಮ್ಮಗಟ್ಟಿ ಹುಲಿಕುಂಟೇಶ, ಮೊದಲಘಟ್ಟದ ಆಂಜನೇಯ, ಯಂತ್ರೋದ್ಧಾರಕ, ಆದವಾನಿ ಮಂಗರಾಯನನ್ನು ಕುರಿತು ಈಕೆ ಹಲವಾರು ಹಾಡುಗಳನ್ನು ರಚಿಸಿದ್ದಾಳೆ. ಭೀಮವ್ವ ಪ್ರಯಾಗ, ಕಾಶಿ, ಗಯಾ, ಉಡುಪಿ, ತಿರುಪತಿ, ಮಂತ್ರಾಲಯ, ಕೊಲ್ಹಾಪುರ, ಪಂಢರಾಪುರ, ಮಳಖೇಡ, ಮುಂತಾದ ಕ್ಷೇತ್ರಗಳನ್ನು 1895ರಲ್ಲಿ ಸಂದರ್ಶಿಸಿ ಅಲ್ಲಿನ ಕ್ಷೇತ್ರ ಮೂರ್ತಿ, ಕ್ಷೇತ್ರ ಮಹಿಮೆಯ ಬಗ್ಗೆ ಹಾಡುಗಳನ್ನು ರಚಿಸಿದ್ದಾಳೆ.

ಬದುಕಿನ ಹಾದಿಯುದ್ದಕ್ಕೂ ಭೀಮವ್ವನಿಗೆ ದಕ್ಕಿದ್ದು ನೋವು ಮಾತ್ರ. ಅಂದಿನ ಸಮಾಜ ಮಡಿ ಹೆಣ್ಣು ಮಕ್ಕಳನ್ನು ಸಂಪ್ರದಾಯದ ಹೆಸರಿನಲ್ಲಿ ಬಂಧನಕ್ಕೆ ಒಳಪಡಿಸಿತ್ತು. ಬದುಕಿನ ಸಂಧ್ಯಾಕಾಲದಲ್ಲೂ ಭೀಮವ್ವನ ಜೀವನೋತ್ಸಾಹ ಕಡಿಮೆಯಾಗಿರಲಿಲ್ಲ. ತನ್ನ ಬದುಕಿನ ಅಂತ್ಯದ ವರೆಗೂ ಆಕೆ ಹಾಡುಗಳನ್ನು ಮಾಡುತ್ತಲೇ ಇದ್ದಳು. ಜೀವನದ ಬವಣೆಯೆಲ್ಲವೂ ಹಾಡಾಗಿತ್ತು. ಶಾಲಿವಾಹನ ಶಕೆ 1824 ಶುಭಕೃತ ನಾಮ ಸಂವತ್ಸರ ಪುಷ್ಯ ಶುದ್ಧ ತ್ರಯೋದಶಿ (1903) ರಲ್ಲಿ ಭೀಮವ್ವ ಸ್ವರ್ಗಸ್ಥಳಾದಳು.

ಭೀಮವ್ವನಿಗೆ ಪುರಾಣ ಮಹಾಕಾವ್ಯಗಳ ಪೂರ್ಣ ಪರಿಚಯವಿತ್ತು. ಸಂಪ್ರದಾಯದ ಹಾಡುಗಳನ್ನು ರಚಿಸುವಲ್ಲಿ ಆಕೆ ಸಿದ್ಧ ಹಸ್ತಳು. ಆಕೆಯ ಕೀರ್ತನೆಗಳಲ್ಲಿ ಸಾಂಸಾರಿಕ ವಲಯದ ಸೂಕ್ಷ್ಮ ವಿಚಾರಗಳು ಆ ಕಾಲದ ಬ್ರಾಹ್ಮಣ ವರ್ಗದ ಸಾಂಸಾರಿಕ ಪರಿಸರ, ಶಾಸ್ತ್ರ ಸಂಪ್ರದಾಯಗಳು, ರೀತಿ-ನೀತಿಗಳ ಚಿತ್ರಣವನ್ನು

ಗುರುತಿಸಬಹುದು. ಓದು ಬರಹ ಬಾರದಿದ್ದರೂ ಪುರಾಣಗಳನ್ನು ಕೇಳಿ, ನಾಟಕಗಳನ್ನು ನೋಡಿದ ಮಾತ್ರಕ್ಕೇ ಅವುಗಳನ್ನು ಆಧರಿಸಿ ವಿಪುಲ ಸಾಹಿತ್ಯ ರಚನೆ ಮಾಡಿರುವ ಅವ್ವನ ಅಸಾಮಾನ್ಯ ಗ್ರಹಣ ಶಕ್ತಿ, ಸ್ಮರಣ ಶಕ್ತಿ, ಧಾರಣ ಶಕ್ತಿ, ಪ್ರತಿಭಾ ಸಂಪನ್ನತೆ ಗಮನಾರ್ಹವಾದವು. ಯಾವ ರೀತಿಯ ಪ್ರಚಾರಕ್ಕೂ ಬಯಸದೆ ಸ್ವಂತ ಸಮಾಧಾನಕ್ಕಾಗಿ ಕೃತಿ ರಚಿಸಿದ ಭೀಮವ್ವ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಪೂರ್ವ ಮಹಿಳಾ ಹರಿದಾಸರ ಸಾಲಿನಲ್ಲಿ ನಿಲ್ಲುತ್ತಾಳೆ.

4. <u>ಯದುಗಿರಿಯಮ್ಮ: (1828–1908):</u>

ವೇದಾಂತ ತತ್ವದ ಮೂರು ಶಾಖೆಗಳಾದ ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತಗಳಲ್ಲಿ ಶ್ರೀಮಧ್ವಾಚಾರ್ಯರು ಪ್ರತಿಪಾದಿಸಿದ ದ್ವೈತ ತತ್ವವು ಶ್ರೀಹರಿಸರ್ವೋತ್ತಮತ್ವವನ್ನು ಎತ್ತಿ ಹಿಡಿಯುತ್ತದೆ. ಅಂತೆಯೇ ವಿಶಿಷ್ಟಾದ್ವೈತದಲ್ಲೂ ಶ್ರೀಹರಿ ಪಾರಮ್ಯವನ್ನೇ ಹೇಳಲಾಗುತ್ತದೆ. ವಿಶಿಷ್ಟಾದ್ವೈತ ಪರಂಪರೆಯಲ್ಲಿ ಸಾಹಿತ್ಯ ರಚನೆ ಮಾಡಿದ ಮಹಿಳೆಯರು ಯದುಗಿರಿಯಮ್ಮ ಮತ್ತು ನಂಜನಗೂಡು ತಿರುಮಲಾಂಬ.

ಸಂಪ್ರದಾಯಸ್ಥ ಶ್ರೀವೈಷ್ಣವ ಕುಟುಂಬದಲ್ಲಿ 1828ರಲ್ಲಿ ಯದುಗಿರಿಯಮ್ಮ ಜನಿಸಿದರು. ಶಾಲೆಗೆ ಸೇರಿ ವಿದ್ಯಾಭ್ಯಾಸ ನಡೆಸಲು ಅವಕಾಶವಿರಲಿಲ್ಲ. ಬೆಂಗಳೂರಿನ ತುಳಸೀ ತೋಟದ ದೇವಸ್ಥಾನ ಇವರ ಕಾರ್ಯಕ್ಷೇತ್ರವಾಗಿತ್ತು. ಬಳೇಪೇಟೆಯ ಸುಗ್ರೀವ ವೆಂಕಟರಮಣ ದೇವಸ್ಥಾನ, ತುಪ್ಪದಾಂಜನೇಯ, ತುಳಸೀತೋಟದ ದೇವಾಲಯ, ಕೋಟೆ ವೆಂಕಟರಮಣ ದೇವಾಲಯಗಳ ಪರಿಸರದಲ್ಲೇ ಬೆಳೆದ ಯದುಗಿರಿಯಮ್ಮನವರಿಗೆ ಹಾಡುಗಳನ್ನು ರಚಿಸುವುದು ಸಹಜವೇ ಆಗಿತ್ತು. ತೆಲುಗು ಪ್ರಾಂತ್ಯಗಳಲ್ಲಿ ಶ್ರೀರಾಮಧ್ಯಾನದ ಪರಿಪಾಠ ಮಾಡಿಸಿದ್ದ ತುಳಸೀರಾಮದಾಸರ ಪ್ರಭಾವ ಅವ್ವನವರ ಮೇಲೆ ಆಗಿರಬಹುದು.

ಔಪಚಾರಿಕ ಶಿಕ್ಷಣದಿಂದ ವಂಚಿತರಾದರೂ ಓದಿ ಅರ್ಥ ಮಾಡಿಕೊಳ್ಳುವ ಮಟ್ಟಿಗೆ ಇವರು ಕಲಿತಿದ್ದರು. ಕನ್ನಡ, ತಮಿಳು, ತೆಲುಗು ಭಾಷೆಗಳನ್ನು ಓದಲು ಬರುತ್ತಿತ್ತು. ತುಳಸೀ ತೋಟದ ಪ್ರವಚನ–ಹರಿ ಸಂಕೀರ್ತನೆ, ಹಾಡುಗಳ ರಚನೆಗೆ ಪ್ರೇರಣೆ ಒದಗಿಸಿದವು. ಯದುಗಿರಿಯಮ್ಮನವರ ಹಾಡಿಲ್ಲದೆ ಯಾವ ಶುಭ ಕಾರ್ಯವೂ ನಡೆಯದೆಂಬ ಮಟ್ಟಿಗೆ ಆಕೆ ಪ್ರಸಿದ್ಧರಾಗಿದ್ದರು. ಸೌಲಭ್ಯಗಳು ಸಮರ್ಪಕವಾಗಿರದ ಆ ಕಾಲದಲ್ಲಿಯೂ ಇಡೀ ಭಾರತ ಯಾತ್ರೆ ಮಾಡಿದ್ದಾರೆ. ಬದರಿ, ಸೇತುರಾಮೇಶ್ವರ, ಶ್ರೀರಂಗ, ಕಂಚಿ, ಉಡುಪಿ, ಮೇಲುಕೋಟೆ, ಶ್ರೀವಿಲ್ಲಿಪುತ್ತೂರು, ಶ್ರೀಪೆರಂಬುದೂರು ಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲಿನ ದೇವತೆಗಳ ಸ್ತುತಿ ಮಾಡಿದ್ದಾರೆ.

ಯದುಗಿರಿಯಮ್ಮನವರ ಸುಮಾರು 74 ಕೀರ್ತನೆಗಳಿವೆ. ಇವರ ಕೃತಿಗಳಲ್ಲಿ ಪ್ರಪತ್ತಿಭಾವ, ವಿಶಿಷ್ಟಾದ್ವೈತ ತತ್ವದ ತಿರುಳು, ಶ್ರೀವೈಷ್ಣವ ಪರಿಭಾಷೆಗಳನ್ನು ಕಾಣಬಹುದು. ಇವರ ಅಂಕಿತ 'ಮುದ್ದು ವೆಂಕಟ' ಹಾಗೂ 'ವೆಂಕಟಕೃಷ್ಣ'. ಅಂಕಿತ ದೊರಕಿದ ಬಗ್ಗೆ ನೀಡಿದ ಗುರುಗಳ ಬಗ್ಗೆ ತಿಳಿದು ಬಂದಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ಸಮಗ್ರ ದಾಸ ಸಾಹಿತ್ಯ ಸಂಪುಟಗಳಲ್ಲಿ ಯದುಗಿರಿಯಮ್ಮನವರ 52 ಕೀರ್ತನೆಗಳು ಮತ್ತು 4 ದೀರ್ಘ ಕೃತಿಗಳು ಪ್ರಕಟವಾಗಿವೆ.

1. ಭಾಗವತ ಸಂಗ್ರಹ 12 ಸ್ಕಂಧಗಳ 1163 ನುಡಿಗಳ ದೀರ್ಘ ರಚನೆ.
2. ಶ್ರೀರಾಮಧ್ಯಾನ–ರಾಮಾಯಣದ ಕೀರ್ತನ ರೂಪದ ಕೃತಿ. 108 ನುಡಿಗಳು. ಇದಕ್ಕೆ ಮಂಗಳ ನುಡಿ ಶ್ರೀಮದ್ರಾಮಾಯಣ ಮಂಗಳಂ 55 ನುಡಿಗಳ ನೀಳ್ಗವನ.
3. ಶ್ರೀರಂಗ ಮಹಾತ್ಮಮ್–ಶ್ರೀರಂಗದ ಕ್ಷೇತ್ರ ಮೂರ್ತಿ ಶ್ರೀರಂಗನಾಥನ ಉತ್ಸವ, ಕೈಂಕರ್ಯಾದಿಗಳನ್ನು ದಾಖಲಿಸುವ ಕೃತಿ.
4. ಕೊಠಾರೋತ್ಸವ: ರಾತ್ರಿ ವೇಳೆಯಲ್ಲಿ ಶ್ರೀವೈಷ್ಣವ ದೇವಾಲಯಗಳಲ್ಲಿ ನಡೆಯುವ ಪುಳಿಯೋಗರೆ ನೈವೇದ್ಯ. ಇದು ಎಲ್ಲ ಶ್ರೀವೈಷ್ಣವ ಆಲಯಗಳಲ್ಲಿ ನಡೆಯುವ ಸಾಂಪ್ರದಾಯಿಕ ಉತ್ಸವ.

ಸಾಂಪ್ರದಾಯಿಕತೆ, ಸದಾಚಾರ, ಆಚಾರ್ಯ ಗೌರವ, ಸಾಹಿತ್ಯ ರಚನೆ, ಕವಿತ್ವ ಎಲ್ಲವೂ ಇವರ ಕೃತಿಗಳಲ್ಲಿ ಕಂಡು ಬರುವುದರಿಂದ ಯದುಗಿರಿಯಮ್ಮನವರನ್ನು ಶ್ರೀವೈಷ್ಣವ ಹರಿದಾಸರ ಸಾಲಿನಲ್ಲಿ ಪ್ರಮುಖ ಕೀರ್ತನಕಾರ್ತಿಯಾಗಿ ಗುರುತಿಸಲಾಗಿದೆ.

5. <u>ನಾಡಿಗರ ಶಾಂತಿಬಾಯಿ: (1860–1901):</u>

ಶಾಂತಿಬಾಯಿಯವರು ಜನಿಸಿದ್ದು ಶಿವಮೊಗ್ಗ ಜಿಲ್ಲೆಯ ಸಾಗರದ ಕೊಪ್ಪ ಗ್ರಾಮದಲ್ಲಿ. ತಂದೆ ಕೊಪ್ಪ ವೆಂಕಟೇಶಯ್ಯ. ವೆಂಕಟೇಶಯ್ಯನವರು ವೃತ್ತಿಯಲ್ಲಿ ವಕೀಲರಾಗಿದ್ದರು. ಶಾಂತಿಬಾಯಿಯವರಿಗೆ ತಂದೆಯೇ ಗುರು. ಇವರಿಗೆ ಸಂಗೀತ ಹಾಗೂ ಇತರ ಕಲೆಗಳಲ್ಲಿ ಬಹಳ ಆಸಕ್ತಿಯಿತ್ತು. ಇವರ ಪತಿ ಶ್ರೀಕೃಷ್ಣರಾವ್. ಭಟ್ಕಳದ ಸುಪ್ರಸಿದ್ಧ ಕವಿಗಳಾಗಿದ್ದ ಅಪ್ಪಯ್ಯ 'ನಾಡಘರ' ಮನೆತನದವರು. ಸಂಸಾರ ಜೀವನದಲ್ಲಿ ನಾನಾ ರೀತಿಯ ವಿಪತ್ತುಗಳನ್ನು ಎದುರಿಸಿದ ಶಾಂತಿಬಾಯಿಯವರ ಮನಸ್ಸು ಆಧ್ಯಾತ್ಮದತ್ತ ತಿರುಗಿತು. ಇವರ ಇಷ್ಟ ದೈವ ವಿಠಲ ಮತ್ತು ದತ್ತಾತ್ರೇಯ. ಭಟ್ಕಳದ ನಾಡಘರ ದೇವಸ್ಥಾನದ ಜೀರ್ಣೋದ್ಧಾರ ಮಾಡಿಸಿ ಉತ್ಸವದ ಪರಂಪರೆ ಹಾಕಿಕೊಟ್ಟರು. ಕನ್ನಡ ಮತ್ತು ಮರಾಠಿಗಳಲ್ಲಿ ಭಕ್ತಿ ಸಾಹಿತ್ಯ ರಚಿಸಿದ್ದಾರೆ. ಅಭಂಗಗಳನ್ನು ರಚಿಸಿರುವರೆಂಬ ಮಾತಿದೆ.

ಇವರ ಅಂಕಿತ "ಶಾಂತಿ ಪಾಲಿಪ ಗುರು", ಇವರ ಕೀರ್ತನೆಗಳಲ್ಲಿ ಬಹಳಷ್ಟು ಹಳಗನ್ನಡವಿದೆ. ಆತ್ಮ ನಿವೇದನಾತ್ಮಕ ಕೃತಿಗಳೇ ಹೆಚ್ಚು. ಇವರ 27 ಕೀರ್ತನೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಕಟಿಸಿರುವ ಸಮಗ್ರ ದಾಸ ಸಾಹಿತ್ಯ ಸಂಪುಟಗಳಲ್ಲಿ ದಾಖಲಾಗಿವೆ.

6. <u>ಓರವಾಯಿ ಲಕ್ಷ್ಮೀದೇವಮ್ಮ (1865–1950):</u>

ಬಳ್ಳಾರಿಯ ಪ್ರಸಿದ್ಧ ವೈಷ್ಣವ ಮನೆತನಗಳಲ್ಲಿ 'ಓರವಾಯಿ' ಎಂಬುದೂ ಒಂದು. ಈ ಮನೆತನಕ್ಕೆ ಸೇರಿದ ಲಕ್ಷ್ಮಣರಾಯರು ಸೊಂಡೂರಿನ ದಿವಾನರಾಗಿದ್ದರು. ಅವರ ಪತ್ನಿಯ ಹೆಸರು ಗೋದಾವರಿಬಾಯಿ. ಇವರ ಮಗಳು ಲಕ್ಷ್ಮೀದೇವಮ್ಮ. ಇವರ ಜನನ 1865ರಲ್ಲಿ ಆಯಿತು. ಶಾಲೆಗೆ ಕಳಿಸದೇ ಮನೆಯಲ್ಲಿಯೇ ಕನ್ನಡ, ಸಂಸ್ಕೃತಗಳ ಅಭ್ಯಾಸ ನಡೆಯಿತು. ಮಣಿಮಂಜರಿ, ಮಧ್ವವಿಜಯ ಗ್ರಂಥಗಳ ಪಾಠವಾಗಿತ್ತು. ಅಪ್ಪನ ಮನೆಯಲ್ಲಿ ಆಗಾಗ ಶ್ರೀಗಳು ಬಂದು ಹೋಗುತ್ತಿದ್ದರು. ಪಂಡಿತರ ವಿದ್ವದ್ಗೋಷ್ಠಿಗಳು, ಸ್ವಯಂ ಪಠನ ಮಾಡಿದ್ದ ಗ್ರಂಥಗಳು ಇವುಗಳಿಂದಾಗಿ ಲಕ್ಷ್ಮೀದೇವಮ್ಮನವರಿಗೆ ಸಾಹಿತ್ಯ ಕೃಷಿ ಸಹಜವೇ ಆಗಿತ್ತು.

ಅಂದಿನ ಕಾಲದಲ್ಲಿ ಪ್ರಚಲಿತವಿದ್ದಂತೆ ಐದನೇ ವರ್ಷದಲ್ಲಿಯೇ ಬಾಲ್ಯ ವಿವಾಹವಾಯಿತು. ಹನ್ನೊಂದು ವರ್ಷದ ಓರವಾಯಿ ಮಧ್ವರಾಯ ಈಕೆಯ ಪತಿ. ವಿವಾಹಾನಂತರ ತಾಯಿಯಿಂದ ಪೂಜೆ–ಸಂಪ್ರದಾಯ, ಹಾಡು ಇತ್ಯಾದಿಗಳ ಅಭ್ಯಾಸವಾಯಿತು. ಭೀಮವ್ವನವರ ಸಂಪ್ರದಾಯದ ಹಾಡುಗಳಿಂದ ಪ್ರಭಾವಿತರಾಗಿದ್ದರು. ಮಧ್ವರಾಯರ ವಿದ್ಯಾಭ್ಯಾಸ ಮುಗಿದು ಗುತ್ತಿಯಲ್ಲಿ ವಕೀಲಿ ವೃತ್ತಿ ಆರಂಭಿಸಿದ್ದರು. ಲಕ್ಷ್ಮೀದೇವಮ್ಮನವರಿಗೆ ಮಗುವಾಗಿ ಅದು ಅಲ್ಪಕಾಲದಲ್ಲೇ ತೀರಿ ಹೋಯಿತು. ನಂತರ ಮಧ್ವರಾಯರ ತಂಗಿಯ ಮಗನನ್ನು ದತ್ತಕ ತೆಗೆದುಕೊಂಡರು. ಗುತ್ತಿಯಲ್ಲಿ ನೆಲೆಸಿದ್ದರಿಂದ ಲಕ್ಷ್ಮೀದೇವಮ್ಮನವರು 'ಗುತ್ತೆವ್ವ' ಎಂದೇ ಹೆಸರಾಗಿದ್ದರು. ಮಧ್ವರಾಯರು ಗುತ್ತಿಯಿಂದ ಆದವಾನಿಗೆ ವೃತ್ತಿ ಬದಲಾಯಿಸಿದರು. ಅಲ್ಲಿ ಮಧ್ವರಾಯರು ನಾಟಕ ಕಂಪೆನಿಗಳಿಗೆ ಪ್ರೋತ್ಸಾಹ ನೀಡಿ ತಾವೂ ನಾಟಕಗಳಲ್ಲಿ ಭಾಗವಹಿಸುತ್ತಿದ್ದರು. ಇವರ ಎಲ್ಲ ಚಟುವಟಿಕೆಗಳಿಗೆ ಲಕ್ಷ್ಮೀದೇವಮ್ಮನವರ ಸಹಕಾರವಿತ್ತು. ಲಲಿತಕಲೆಗಳಲ್ಲಿ ಲಕ್ಷ್ಮೀದೇವಮ್ಮ ಪರಿಣತಿ ಹೊಂದಿದ್ದರು. ಗೃಹ ವೈದ್ಯವೂ ಇವರಿಗೆ ತಿಳಿದಿತ್ತು. ಸನ್ನಿಪಾತ ಜ್ವರ, ಅಪಸ್ಮಾರ ಮುಂತಾದ ಕಾಯಿಲೆಗಳಿಗೆ ಮದ್ದು ನೀಡುತ್ತಿದ್ದರು.

ಲಕ್ಷ್ಮೀದೇವಮ್ಮನವರ 21 ಕೀರ್ತನೆಗಳು, 12 ದೀರ್ಘ ಕೀರ್ತನೆಗಳು ದೊರೆತಿವೆ. (1) ಜಲಕ್ರೀಡೆ, (2) ಗೊಲ್ಲತಿಹಾಡು, (3) ಚೀಳಿನಹಾಡು, (4) ದ್ರೌಪದಿ ವಸ್ತ್ರಾಪಹರಣ, (5) ಸಕ್ಕೂಬಾಯಿಕಥೆ, (6) ಶ್ರೀಕೃಷ್ಣಬಾಲಲೀಲೆ, (7) ರಾಮದೇವರ ಹಾಡು (8) ಶ್ರೀಸತ್ಯನಾರಾಯಣ ಕಥಾ (9) ಸ್ವರ್ಣಗೌರೀಕಥೆ (10) ಮಂಗಳಗೌರೀ ಹಾಡು, (11) ಸೌಗಂಧಿಕಾ ಪುಷ್ಪ, (12) ದಿವಸೀ ಹಾಡು ಇವರ ಅಂಕಿತ 'ನರಸಿಂಹವಿಠಲ'. ಇವರ ಕೃತಿಗಳಲ್ಲಿ ಭೀಮವ್ವನವರ ಪ್ರಭಾವವಿದೆ. ವಿಷಯ ಒಂದೇ ಆದರೂ ನಿರೂಪಣಾ ಶೈಲಿ ಭಿನ್ನವಾಗಿದೆ. ಬಳ್ಳಾರಿಯ ಗಡಸು ಭಾಷೆ, ತೆಲುಗು ಶಬ್ದಗಳ ಬಳಕೆ, ಇವರ ಕೃತಿಗಳಲ್ಲಿ ಕಂಡು ಬರುತ್ತದೆ. ಹೆಚ್ಚಿನ ವಿದ್ಯಾಭ್ಯಾಸ ಮಾಡದಿದ್ದರೂ ಇವರ ಕೃತಿಗಳಲ್ಲಿ "ಆದಿಪ್ರಾಸ, ಅಂತ್ಯಪ್ರಾಸ, ಯತಿ, ಗಣ, ಮಾತ್ರೆಗಳಿಂದ ಬದ್ಧವಾಗಿದೆ. ಹೆಚ್ಚಾಗಿ ಸಾಂಗತ್ಯ ರಗಳೆಗಳನ್ನು ಉಪಯೋಗಿಸಿದ್ದಾರೆ. ಪ್ರಕೃತಿ ವರ್ಣನೆ, ಶೃಂಗಾರ, ವಿಪ್ರಲಂಬ, ವೀರ, ಶೋಕ, ಕರುಣ ಇತ್ಯಾದಿ ರಸಗಳು ಚೇತೋಹಾರಿಯಾಗಿವೆ. ಉಪಮೆ, ಶ್ಲೇಷಾಲಂಕಾರಗಳು ಹೇರಳ" 17.

7. <u>ಸರಸಾಬಾಯಿ: (1882–1984):</u>

ಸರಸಾಬಾಯಿಯವರು ಗೌಡಗೆರೆ ತಾಲೂಕಿನ ಬಾಪು ಗ್ರಾಮದಲ್ಲಿ 1882ರಲ್ಲಿ ಜನಿಸಿದರು. ಬಾಪ್ರ ಹನುಮಂತರಾಯರು ತಂದೆ, ತಾಯಿ ಕಾವೇರಿ. ಆರು ಜನ ಅಕ್ಕ–ತಂಗಿಯರು ಮತ್ತು ಮೂರು ಜನ ಅಣ್ಣತಮ್ಮಂದಿರ ದೊಡ್ಡ ಕುಟುಂಬ.

ಚಿತ್ರದುರ್ಗದ ಪ್ರಸಿದ್ಧ ಕ್ರಿಮಿನಲ್ ನ್ಯಾಯಾಧೀಶರಾಗಿದ್ದ ಎಂ.ಬಿ. ಕೃಷ್ಣರಾಯರು ಇವರ ಪತಿ. ಸರಸಾಬಾಯಿ ಅವರ ಮೂರನೇ ಪತ್ನಿ. ಎಂಟು ಜನ ಮಕ್ಕಳಲ್ಲಿ ಐದು ಜನ ಗಂಡುಮಕ್ಕಳು. 1934ರಲ್ಲಿ ಪತಿ ವಿಯೋಗದ ನಂತರ ದುಃಖತಪ್ತ ಮನಸ್ಸು ಆಧ್ಯಾತ್ಮದೆಡೆಗೆ ತಿರುಗಿತು. ದೇವರಾಯನದುರ್ಗದ ತಂದೆಮುದ್ದುಮೋಹನವಿಠಲರಿಂದ 'ರಮಾವಲ್ಲಭ ವಿಠಲ' ಅಂಕಿತವನ್ನು ಪಡೆದರು. ನೂರು ವರ್ಷಗಳಿಗೂ ಅಧಿಕ ಕಾಲ ಜೀವಿಸಿದ್ದರು. ಐದು ತಲೆಮಾರುಗಳನ್ನು ಕಂಡಿದ್ದವರು. ಸುಮಾರು 40 ಬಾರಿ ಭಾಗವತ ಓದಿ ಮಂಗಳ ಮಾಡಿದ್ದರೆಂದು ತಿಳಿದುಬರುತ್ತದೆ. 1984ರಲ್ಲಿ ನಿಧನರಾದರು.

ಇವರ ಕೀರ್ತನೆಗಳು ಬಹಳ ಸರಳವಾದ ಶೈಲಿಯಲ್ಲಿವೆ. ಭಕ್ತಿಗೆ ಹೆಚ್ಚು ಪ್ರಾಧಾನ್ಯವಿದೆ. ಇವರ 13 ಕೀರ್ತನೆಗಳು ಸಮಗ್ರವಾದ ಸಾಹಿತ್ಯ ಸಂಪುಟಗಳಲ್ಲಿ ಪ್ರಕಟವಾಗಿವೆ. ಉರಗಾದ್ರಿ ವಿಠಲ ದಾಸರು ಹಾಗೂ ಅನೇಕ ಮುಖ್ಯ ದಾಸಕೂಟದವರ ಸಂಪರ್ಕ ಇವರಿಗೆ ಇದ್ದುದಾಗಿ ತಿಳಿದುಬರುತ್ತದೆ.

8. ನಂಜನಗೂಡು ತಿರುಮಲಾಂಬಾ: (1887–1982):

ತಿರುಮಲಾಂಬಾರವರು ಮಾರ್ಚ್ ತಿಂಗಳ 25ನೇ ತಾರೀಖು 1887ರಲ್ಲಿ ನಂಜನಗೂಡಿನಲ್ಲಿ ಜನಿಸಿದರು. ತಂದೆ ವೆಂಕಟಕೃಷ್ಣ ಅಯ್ಯಂಗಾರ್. ತಾಯಿ ಅಲಮೇಲಮ್ಮ. ಮೂವರು ಸೋದರಿಯರು ಮತ್ತು ಒಬ್ಬ ಸೋದರ ಇದ್ದ ಕುಟುಂಬ ಇವರದ್ದು. ಚಿಕ್ಕ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು ಮಲತಾಯಿಯ ರಕ್ಷಣೆಯಲ್ಲಿ ಬೆಳೆದರು. ತಂದೆ ವಕೀಲರಾಗಿದ್ದರು. ಸಂಪ್ರದಾಯಸ್ಥ ಶ್ರೀವೈಷ್ಣವ ಕುಟುಂಬದಲ್ಲಿ ಜನಿಸಿದ್ದ ತಿರುಮಲಾಂಬಾ ಚಿಕ್ಕ ವಯಸ್ಸಿನಲ್ಲೇ ಕೊಳ್ಳೇಗಾಲದ ನರಸಿಂಹ ಅಯ್ಯಂಗಾರ್‌ರವರೊಂದಿಗೆ ವಿವಾಹವಾಯಿತು. ನಾಲ್ಕೇ ವರ್ಷದಲ್ಲಿ ವೈಧವ್ಯ ಪ್ರಾಪ್ತವಾಯಿತು. ತವರಿಗೆ ಹಿಂದಿರುಗಿದ ಮಗಳನ್ನು ಕಂಡು ಅವರ ತಂದೆಗೆ ನೋವುಂಟಾದರೂ ಸಂಪ್ರದಾಯಸ್ಥ ಮನಸ್ಸು ಮರು–ವಿವಾಹಕ್ಕೆ ಸಮ್ಮತಿಸಲಿಲ್ಲ. ಆದರೂ ಸಂಪ್ರದಾಯಕ್ಕೆ ವಿರುದ್ಧವಾಗಿ ಸಕೇಶಿಯಾಗಿರಲು ಸಮ್ಮತಿಸಿದರು. ಚಿಕ್ಕ ಪ್ರಾಯದ ಮಗಳ ಮನಸ್ಸಿಗೆ ಶಾಂತಿ ಸಮಾಧಾನ ತುಂಬಲು ಉತ್ತಮ ಗ್ರಂಥಗಳನ್ನು ತಂದು ಕೊಡುವುದೇ ಅಲ್ಲದೇ ತಿರುಮಲಾಂಬಾರಿಗೆ ಅರ್ಥವಾಗದ ವಿಚಾರಗಳನ್ನು ತಿಳಿ ಹೇಳಿ ಭವಿಷ್ಯದ ಬಗ್ಗೆ ಭರವಸೆ ಮೂಡಿಸುತ್ತಿದ್ದರು. "ತಮಗೆ ಚಿತ್ತ ಸ್ಥೈರ್ಯ ಬರಲು ತಂದೆಯ ಪ್ರೋತ್ಸಾಹವೇ ಕಾರಣ ಎಂದು ತಿರುಮಲಾಂಬಾ ಹೇಳಿದ್ದಾರೆ. ಅವರ ವಿದ್ಯಾಭ್ಯಾಸ ಶಾಲಾ–ಕಾಲೇಜುಗಳಲ್ಲಾಗದೆ ಮನೆಯಲ್ಲೇ ಮುಂದುವರೆಯಿತು." 18. ತಮ್ಮ ಬಂಧುಗಳಾದ ಅಪ್ರಮೇಯ ಅಯ್ಯಂಗಾರರಿಂದ ಸಂಸ್ಕೃತ, ತಂದೆ ಮತ್ತು ಅವರ ತಮ್ಮಂದಿರಿಂದ ಇಂಗ್ಲೀಷ್ ಕಲಿತರು. ತಮಿಳು, ತೆಲುಗು, ಗುಜರಾತಿ ಭಾಷೆಯ ಪತ್ರಿಕೆಗಳನ್ನು ಓದಿ ಚರ್ಚಿಸುವಷ್ಟರ ಮಟ್ಟಿಗೆ ಪ್ರಭುತ್ವ ಸಂಪಾದಿಸಿದರು. ಮಗಳಿಗೆ ನೆಲೆ ಕಲ್ಪಿಸಲು ಹಾತೊರೆಯುತ್ತಿದ್ದ ತಂದೆಗೆ ಮಗಳ ಕಲಿಕೆ, ಪ್ರತಿಭೆ ಕಂಡು ಸಂತಸವಾಯಿತು. ಗ್ರಂಥ ಪಠನ, ಓದು, ಕಲಿಕೆಯಲ್ಲಿ ಕಾಲ ಕಳೆಯುತ್ತಿದ್ದರು.

ತಿರುಮಲಾಂಬಾರವರು 'ಶೇಷಗಿರೀಶ', 'ಶೇಷಶಯನ', 'ಶೇಷಶೈಲವಾಸ', 'ಶೇಷಗಿರಿವರ', 'ಶೇಷಾದ್ರಿನಾಥ', 'ಶೇಷಶೈಲಧಾಮ ಮತ್ತು 'ಶೇಷಾಚಲನಿಲಯ' ಎಂಬ ಅಂಕಿತಗಳಿಂದ ಕೃತಿಗಳನ್ನು ರಚಿಸಿದ್ದಾರೆ. ಹರಿದಾಸ ಕೃತಿಗಳೇ ಅಲ್ಲದೆ ಸುಮಾರು 14 ಸಾಮಾಜಿಕ ಕಾದಂಬರಿಗಳು, ಎರಡು ಪತ್ತೇದಾರಿ ಕಾದಂಬರಿಗಳು, ನಾಟಕಗಳು, ಕಥಾ ಸಂಕಲನಗಳು, ಕವಿತಾ ಸಂಕಲನಗಳು, ಯಕ್ಷಗಾನ, ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ತಿರುಮಲಾಂಬಾ 20ನೇ ಶತಮಾನದ ಪ್ರಥಮ ಕನ್ನಡ ಲೇಖಕಿ ಎಂದೇ ಹೆಸರಾಗಿದ್ದಾರೆ. ಲೇಖಕಿ, ಪತ್ರಕರ್ತೆ, ಸಂಪಾದಕಿ, ಪ್ರಕಾಶಕಿ ಹಾಗೂ ಸಮಾಜಸೇವಕಿಯಾಗಿ ಬಹುಮುಖ ಸೇವೆ ಸಲ್ಲಿಸಿದ್ದಾರೆ. ಅಂದಿನ ಕಾಲದಲ್ಲಿಯೇ 'ಕರ್ನಾಟಕ ನಂದಿನಿ', 'ಸನ್ಮಾರ್ಗದರ್ಶಿನಿ' ಎಂಬ ಎರಡು ಪತ್ರಿಕೆಗಳನ್ನು ನಡೆಸುತ್ತಿದ್ದರು. ಸನ್ಮಾರ್ಗ ಗ್ರಂಥ ಮಾಲೆಯ ಸ್ಥಾಪಕಿಯಾಗಿದ್ದರು. ಅವರ ಕೃತಿಗಳು

‘ಸತೀಹಿತೈಷಿಣಿ’ ಮತ್ತು ‘ನಂದಿನಿ’ ಗ್ರಂಥ ಮಾಲೆಯಲ್ಲಿ ಪ್ರಕಟವಾಗುತ್ತಿದ್ದವು. ಮೈಸೂರು, ಬೊಂಬಾಯಿ, ಮದರಾಸು ಸರ್ಕಾರದ ವಿದ್ಯಾ ಇಲಾಖೆ ನಗದು ಬಹುಮಾನ, 1980ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಶಸ್ತಿ, 1981ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಇವರಿಗೆ ಸಂದಿವೆ. ಸ್ವತಃ ವೈಧವ್ಯದ ನೋವು ಸಂಕಟಗಳನ್ನು ಅನುಭವಿಸಿದ್ದ ತಿರುಮಲಾಂಬಾ ತಮ್ಮ ಸಾಹಿತ್ಯದಲ್ಲಿ ವಿಧವೆಯರಿಗೆ ಸಾಂತ್ವನ ನೀಡಿದ್ದಾರೆ. ‘ವಿಧವಾ ತತ್ವ’ ಎಂಬ ವಿಚಾರಶೀಲ ಪ್ರಬಂಧ ರಚಿಸಿದ್ದರು. ವಿಧವೆಯರ ಬಗ್ಗೆ ಇವರಿಗೆ ಅನುಕಂಪ ಇದ್ದರೂ ಪುನರ್ವಿವಾಹಕ್ಕೆ ಪುರಸ್ಕಾರ ನೀಡಲಿಲ್ಲ. ವಿಧವಾ ವಿವಾಹವನ್ನು ‘ಸ್ವೈರಾಲಾಪ’ ಎಂದೇ ಕರೆದರು. ಬ್ರಹ್ಮಚರ್ಯವನ್ನೇ ಪ್ರತಿಪಾದಿಸಿದರು. ಆದರೆ ವಿಧವೆಯರು ಹೇಗೆ ತಮ್ಮ ಆತ್ಮ ಬಲವನ್ನು ಹೆಚ್ಚಿಸಿಕೊಳ್ಳಬೇಕು ಎಂಬುದನ್ನು, ವಿಧವೆಯರನ್ನು ಕಂಡು ಸಮಾಜ ಮೂದಲಿಸಿದಾಗ ಆಗುವ ನೋವನ್ನು ಚಿತ್ರಿಸಿದರು. ಸಂಚಿ ಹೊನ್ನಮ್ಮನಂತೆ ಇವರೂ ಪತಿಧರ್ಮ ಮತ್ತು ಪತ್ನಿಯರ ಧರ್ಮದ ಬಗ್ಗೆ ಹೇಳುತ್ತಾರೆ.

ಇವರ ಹರಿದಾಸ ಸಾಹಿತ್ಯ ಕೃತಿ ‘ಭಕ್ತಿ ಗೀತಾವಳಿ’. ಇದರಲ್ಲಿನ ಕೀರ್ತನೆಗಳಲ್ಲಿ ಪರಮಾತ್ಮನ ಗುಣಗಳ ವರ್ಣನೆಯಿದೆ. ಹಾಗೆಯೇ ನಿಂದಾಸ್ತುತಿಗಳನ್ನೂ ರಚಿಸಿದ್ದಾರೆ. ಇವರ ಇನ್ನೊಂದು ಕೃತಿ ‘ಭದ್ರಗೀತಾವಲಿ.’ ವಧು–ವರರ ಪರಸ್ಪರ ಉರುಟಣೆಯ ಸೀಸಪದ್ಯಗಳ ನಡುವೆ ಸಂಪ್ರದಾಯದ ಕೀರ್ತನೆಗಳು ಇವೆ. ಹರಿಯ ನಿಂದಾ ಸ್ತುತಿ ಈ ಕೃತಿಯ ಉದ್ದೇಶ.

20ನೇ ಶತಮಾನದ ಕನ್ನಡದ ಪ್ರಥಮ ಲೇಖಕಿಯಾಗಿ, ಪತ್ರಕರ್ತೆ, ಸಂಪಾದಕಿ, ಪ್ರಕಾಶಕಿ ಮತ್ತು ಸಮಾಜ ಸೇವಕಿಯಾಗಿ, 95 ವರ್ಷಗಳ ಸುದೀರ್ಘ ಜೀವನವನ್ನು ನಡೆಸಿ 31–8–1982ರಲ್ಲಿ ನಿಧನರಾದರು. ‘ಕರ್ನಾಟಕ ಮಹಿಳೆಯರು’ ಎಂಬ ಲೇಖಕಿಯರ ಪರಿಚಯದ ಪುಸ್ತಕದಲ್ಲಿ ಇವರ ಕುರಿತಾದ ಮಾಹಿತಿಯಿದೆ. ಇವರ ಕುರಿತು ಪಿಎಚ್.ಡಿ ಪ್ರೌಢ ಪ್ರಬಂಧ ರಚಿತವಾಗಿದೆ.

9. ಬಳ್ಳಾರಿ ರಾಧಾಬಾಯಿ: (1889–1976):

ರಾಧಾಬಾಯಿಯವರು 1889ರಲ್ಲಿ ಮದನಪಲ್ಲಿಯಲ್ಲಿ ಜನಿಸಿದರು. ತಂದೆ ಅನಂತರಾಯರು, ತಾಯಿ ಇಂದಿರಾಬಾಯಿ. ಇವರದು ಬಂಕಾಪುರದ ಮನೆತನ. ರಾಧಾಬಾಯಿಯವರಿಗೆ 15ನೇ ವರ್ಷದಲ್ಲಿ ಶ್ರೀನಿವಾಸರಾಯ ಎಂಬುವರೊಡನೆ ವಿವಾಹವಾಯಿತು. ಹರಪನಹಳ್ಳಿಯವರಾದ ಇವರು ಕಡಪಾದಲ್ಲಿ ಓವರ್ಸಿಯರ್ ಆಗಿದ್ದರು. ರಾಧಾಬಾಯಿಯವರಿಗೆ ಆರು ಜನ ಗಂಡು ಮತ್ತು ಮೂರು ಹೆಣ್ಣು ಮಕ್ಕಳು.

ರಾಧಾಬಾಯಿ ಸಂಗೀತ, ಕನ್ನಡ ಮತ್ತು ಸಂಸ್ಕೃತವನ್ನು ಮನೆಯಲ್ಲೇ ಅಭ್ಯಾಸ ಮಾಡಿದ್ದರು. ಕುಶಲಕಲೆಗಳಲ್ಲಿ ಇವರಿಗೆ ಪ್ರಾವೀಣ್ಯವಿತ್ತು. ಮದುವೆಗೆ ಬೇಕಾಗುವ ಅಲಂಕರಣ ಸಾಮಗ್ರಿಗಳನ್ನು ಮಾಡಿಕೊಡುತ್ತಿದ್ದರು. “ಬೆಂಗಳೂರಿನಲ್ಲಿ ಮದುವೆ–ಮುಂಜಿಗಳಲ್ಲಿ ಬೇಕಾಗುವ ಅಲಂಕರಣ ಸಾಮಗ್ರಿಗಳನ್ನು

ಮೊಟ್ಟ ಮೊದಲಿಗೆ ಪರಿಚಯಿಸಿದವರೆಂದರೆ ರಾಧಾಬಾಯಿಯವರೆ"[19]. ಈ ಕಲೆಯನ್ನು ಅನೇಕ ತರುಣಿಯರಿಗೆ ಕಲಿಸಿ ಅವರೆಲ್ಲರೂ ಅದನ್ನೇ ಉದ್ಯೋಗವಾಗಿಸಿಕೊಂಡು ಮುಂದುವರೆದಿದ್ದಾರೆ. ಗೃಹವೈದ್ಯವೂ ರಾಧಾಬಾಯಿಯವರಿಗೆ ತಿಳಿದಿತ್ತು.

ಮಡಿ, ಆಚಾರ, ಸಂಪ್ರದಾಯಗಳನ್ನು ನಿಷ್ಠೆಯಿಂದ ಪಾಲಿಸುತ್ತಿದ್ದ ರಾಧಾಬಾಯಿಯವರಿಗೆ 80ನೇ ವಯಸ್ಸಿನಲ್ಲಿ ದೇವರನಾಮಗಳನ್ನು ಬರೆಯಲು ಸ್ವಪ್ನದಲ್ಲಿ ಪ್ರೇರಣೆಯಾಯಿತು. ಅಂದಿನಿಂದ ತಮ್ಮ ಬದುಕಿನ ಕೊನೆಯವರೆಗೂ ದೇವರ ನಾಮಗಳನ್ನು ರಚಿಸಿದರು. ಪ್ರಸ್ತುತ 35 ಕೀರ್ತನೆಗಳು ಮಾತ್ರ ದೊರಕಿವೆ. ಹರಿದಾಸ ಸಂಪ್ರದಾಯದಂತೆ ಎಲ್ಲ ದೇವ ದೇವತೆಯರ ಮೇಲೆ ಕೃತಿಗಳನ್ನು ರಚಿಸಿಲ್ಲ. ಶ್ರೀನಿವಾಸ, ಮಹಾಲಕ್ಷ್ಮಿ, ಹನುಮಂತ, ಮಧ್ವರಾಯರ ಕುರಿತ ಒಂದೆರಡು ಹಾಡುಗಳ ಹೊರತು ಮಿಕ್ಕೆಲ್ಲ ರಾಘವೇಂದ್ರ ತೀರ್ಥರನ್ನು ಕುರಿತವಾಗಿವೆ. ಆರ್ತಭಾವ ಇವರ ಕೀರ್ತನೆಗಳಲ್ಲಿ ಕಂಡು ಬರುತ್ತದೆ. ಇವರಿಗೆ ಅಂಕಿತ ನೀಡಿದವರ ಬಗ್ಗೆ ಮಾಹಿತಿಯಿಲ್ಲ. 'ವೆಂಕಟವಿಠಲ', 'ಶ್ರೀರಾಘವೇಂದ್ರ' ಅಂಕಿತಗಳಲ್ಲಿ ಕೃತಿ ರಚಿಸಿದ್ದಾರೆ. ಸರಳ ಕನ್ನಡದಲ್ಲಿ ಬಳ್ಳಾರಿಯ ಆಡು ಮಾತಿನಲ್ಲಿ ಹಾಡುಗಳನ್ನು ಬರೆದಿದ್ದಾರೆ. ಈ ಹಾಡುಗಳಲ್ಲಿ ಛಂದಸ್ಸಿನ ನಿರ್ಬಂಧ ಕಾಣುವುದಿಲ್ಲ. ರಾಧಾಬಾಯಿಯವರು ತಮ್ಮ 87ನೇ ವಯಸ್ಸಿನಲ್ಲಿ ನಿಧನರಾದರು.

10. ಕಳಸದ ಸುಂದರಮ್ಮ:

ಕಳಸದ ಸುಂದರಮ್ಮನವರ ವಿಚಾರ ಅಷ್ಟಾಗಿ ತಿಳಿದು ಬಂದಿಲ್ಲ. ಕೃತಿಗಳನ್ನು ನೋಡಿದರೆ ಒಳ್ಳೆಯ ಸಂಪ್ರದಾಯಸ್ಥ ಕುಟುಂಬದವರೆಂದು ಹೇಳಬಹುದು. ಇವರ 30 ಕೀರ್ತನೆಗಳು ದೊರೆತಿದ್ದು ಕೃಷ್ಣನ ಕುರಿತ ಹಾಡುಗಳೇ ಹೆಚ್ಚಾಗಿವೆ. ನಾಮ ಮುದ್ರೆಗಳನ್ನು ಧರಿಸುವ ಕ್ರಮವನ್ನು ಒಂದು ಕೀರ್ತನೆಯಲ್ಲಿ ಹೇಳಿದ್ದಾರೆ. ಇವರ ಅಂಕಿತ 'ಕಾಳಿಯ ಮರ್ದನ ಕೃಷ್ಣ'. ಕೃಷ್ಣನ ಬಾಲಲೀಲೆಗಳನ್ನು, ಆತ್ಮ ನಿವೇದನೆ, ಲೋಕ ನೀತಿ, ಉಡುಪಿ ಅಷ್ಟಮಠದ ಯತಿಗಳ ಕುರಿತ ಕೃತಿಗಳನ್ನು, ಉದಯರಾಗವನ್ನೂ ರಚಿಸಿದ್ದಾರೆ.

ಭಗವಂತನ ಅವತಾರಗಳು, ನವವಿಧ ಭಕ್ತಿ, ಇತರ ದೇವತೆಗಳ ಸ್ತುತಿ ಸಾಮಾನ್ಯವಾಗಿ ದಾಸ ಸಾಹಿತ್ಯದಲ್ಲಿ ಕಾಣಬರುವುದು ಸಹಜ. ಆದರೆ ಒಬ್ಬ ಮಹಿಳೆ ದೇಹ, ಆತ್ಮದ ಶುದ್ಧಿಗಾಗಿ ಭಗವಂತನ ಲಾಂಛನಗಳನ್ನು ಧರಿಸಬೇಕಾದ ಕ್ರಮ ಮತ್ತು ಧಾರಣೆಯ ಫಲಗಳ ಬಗ್ಗೆ ವಿಸ್ತೃತವಾಗಿ ಬರೆದಿರುವುದು ಇವರ ವಿಶೇಷತೆ ಆಗಿದೆ.

11. ಶ್ರೀಮತಿ ಗುಂಡಮ್ಮ: (1891–1966):

ಚಿತ್ರದುರ್ಗದ 'ಮಠದ ಕೇರಿ' ವೆಂಕೋಬಾಚಾರ್ಯ ಹಾಗೂ ತುಳಸಮ್ಮ ದಂಪತಿಯ ಮಗಳು ಗುಂಡಮ್ಮ. 1891ರಲ್ಲಿ ಇವರ ಜನನ. ಮನೆಯ ಹತ್ತಿರದ ನಾರ್ಮಲ್ ಶಾಲೆಯಲ್ಲಿ ವಿದ್ಯಾಭ್ಯಾಸ ನಡೆಯುತ್ತಿತ್ತು. ಶಾಲೆಯಲ್ಲಿ ಎಲ್ಲ ಚಟುವಟಿಕೆಗಳಲ್ಲೂ ಮುಂದಾಗಿ ತನ್ನ ಮಧುರ ಕಂಠದಿಂದ ಇತರರನ್ನು ರಂಜಿಸುತ್ತಿದ್ದಳು. ಶಾಲೆಯಲ್ಲಿ ಪುಟ್ಟಾಚಾರ್ಯರು ಗುರುಗಳಾಗಿದ್ದರು. ಬಾಲ್ಯ ವಿವಾಹದ ರೂಢಿಯಿದ್ದ ಆ ಕಾಲದಲ್ಲಿ ಏಳು ವರ್ಷದ ಗುಂಡಮ್ಮನ ವಿವಾಹ ಆಕೆಯ ಮೆಚ್ಚಿನ ಗುರುಗಳಾದ 22ರ ಹರೆಯದ ಪುಟ್ಟಾಚಾರ್ಯರೊಂದಿಗೆ ನಿಶ್ಚಯವಾಯಿತು. ಅಲ್ಲಿಗೆ ಆಕೆಯ ಶಾಲಾ ಜೀವನ ಕೊನೆಯಾಯಿತು. ಗೌರಿ ಪೂಜೆ, ತುಳಸೀ ಪೂಜೆ, ವ್ರತಾದಿಗಳನ್ನು ತಾಯಿ ಕಲಿಸತೊಡಗಿದ್ದರು.

ಪೆನುಗೊಂಡೆ ಪುಟ್ಟಾಚಾರ್ಯರು ಅಂಗವೈಕಲ್ಯ, ಉಬ್ಬಸರೋಗದಿಂದ ಬಳಲುತ್ತಿದ್ದರೂ ಅವರ ಪರೋಪಕಾರ ಬುದ್ಧಿ ಅರಿತು ಗುಂಡಮ್ಮ ಅವರ ಎಲ್ಲ ಕಾರ್ಯಗಳಲ್ಲಿ ಭಾಗಿಯಾದಳು. ದಂಪತಿಗಳು ದಾನಧರ್ಮಾದಿಗಳನ್ನು ಮಾಡುತ್ತಾ ಯಾರೇ ಸಹಾಯ ಬೇಡಿದರೂ ಇಲ್ಲವೆನ್ನುತ್ತಿರಲಿಲ್ಲ. ಪುಟ್ಟಾಚಾರ್ಯರು ಜಮೀನ್ದಾರರೂ ಆಗಿದ್ದರಿಂದ ಸಮಾಜಸೇವೆಗೆ ತೊಡಕಾಗಲಿಲ್ಲ. ನಾಲ್ಕು ಗಂಡು, ನಾಲ್ಕು ಹೆಣ್ಣು ಮಕ್ಕಳಾದರು. ಗುಂಡಮ್ಮನವರಿಗೂ ಭೀಮವ್ವನವರಂತೆ ಕನಸಿನಲ್ಲಿ ಹಾಡುಗಳು ಸ್ಫುರಿಸುತ್ತಿದ್ದವು. 'ಪರಮಪ್ರಿಯ' ಸುಬ್ಬರಾಯದಾಸರು ಒಮ್ಮೆ ಇವರ ಮನೆಗೆ ಬಂದು ಗುಂಡಮ್ಮನಿಗೆ 'ರುಕ್ಮಿಣೀಶ ವಿಠಲ' ಮತ್ತು ಅವರ ಪತಿಗೆ 'ಜಯಪ್ರದವಿಠಲ' ಅಂಕಿತ ನೀಡಿದರು. ಗುಂಡಮ್ಮನವರ ಹತ್ತು ಹನ್ನೆರಡು ಹಾಡುಗಳು ಮಾತ್ರ ದೊರೆತಿವೆ.

ಎರಡನೇ ತರಗತಿಯನ್ನೂ ಸರಿಯಾಗಿ ಮುಗಿಸದ ಗುಂಡಮ್ಮ 'ಸಾಧ್ವಿ ಗುಂಡಮ್ಮ' ಎಂದೇ ಪ್ರಸಿದ್ಧರು. ಇವರ ಕೆಲವೇ ಕೃತಿಗಳು ಮಧ್ವ ಸಿದ್ಧಾಂತಕ್ಕೆ ಅನುಗುಣವಾಗಿ ರಚನೆಯಾಗಿವೆ. ಇವರು ತಮ್ಮ 75ನೇ ವಯಸ್ಸಿನಲ್ಲಿ ನಿಧನರಾದರು.

12. ಸರಸ್ವತಿಬಾಯಿ: (1900–1982):

ನೆಲಮಂಗಲದ ಸಂಪ್ರದಾಯಸ್ಥ ಮಾಧ್ವ ಕುಟುಂಬಕ್ಕೆ ಸೇರಿದ ವಾಸುದೇವಾಚಾರ್ಯ, ರುಕ್ಮಿಣೀಬಾಯಿ ದಂಪತಿಗಳ ಮಗಳು ತುಳಸೀಬಾಯಿ. ಜನನ ಕ್ರಿ.ಶ. 1900ರ ಆಸುಪಾಸು. ತುಳಸಾಬಾಯಿಯ ಸೋದರರು ಸಂಸ್ಕೃತದಲ್ಲಿ ಪ್ರಕಾಂಡ ಪಂಡಿತರು. ಆದ್ದರಿಂದ ಆಕೆಗೆ ಪೂಜೆ, ಪ್ರಾರ್ಥನೆ, ಪುರಾಣ, ಭಾಗವತ. ರಾಮಾಯಣ, ಭಾರತಗಳ ಪಠಣ ಮತ್ತು ಪರಿಚಯ ವಿವರವಾಗಿಯೇ ಆಗಿತ್ತು. ತಂದೆ ಅಕಾಲ ಮೃತ್ಯುವಿಗೆ ತುತ್ತಾಗಿ ಸೋದರ ಮಾವ ರಾಮರಾಯರ ಆಶ್ರಯಕ್ಕೆ ಬಂದರು. ನಾಲ್ಕನೇ ತರಗತಿ ಓದುತ್ತಿದ್ದಾಗ

ವ್ಯಾಸಾಚಾರ್ಯ ಎಂಬುವವರೊಂದಿಗೆ ವಿವಾಹವಾಯಿತು. ದೇಶಸ್ಥ ಬ್ರಾಹ್ಮಣರ ಪದ್ಧತಿಯಂತೆ ತುಳಸೀಬಾಯಿಯ ಹೆಸರು ಸರಸ್ವತೀಬಾಯಿ ಎಂದಾಯಿತು. ಸ್ವತಃ ವಿದ್ವಾಂಸರೂ ಅಮಲ್ದಾರರೂ ಆಗಿ ಪ್ರಸಿದ್ಧರಾಗಿದ್ದ ಮುತ್ಯಾ ನರಸಿಂಹಾಚಾರ್ಯ ಇವರ ಮಾವನವರು. ತವರಿನಲ್ಲಿ ಚಿಕ್ಕಂದಿನಿಂದಲೂ ಬಂದ ಸಂಪ್ರದಾಯದಂತೆ ಇಲ್ಲಿಯೂ ಪುರಾಣ, ಭಾಗವತಾದಿಗಳ ಅಧ್ಯಯನಕ್ಕೆ ಇಂಬು ದೊರಕಿತು. ಇವರಿಗೆ ಆರು ಜನ ಮಕ್ಕಳು, ಒಂದು ಮಗುವನ್ನು ಕಳೆದುಕೊಂಡು ದುಃಖಿತರಾಗಿ ಭಗವಂತನ ಕುರಿತ ಕೀರ್ತನೆಗಳನ್ನು ರಚಿಸುತ್ತಾ ಹೋದರು. ಸಾಗರ ಕಟ್ಟೆ ಮಠಾಧೀಶರಾದ ಶ್ರೀಪ್ರದ್ಯುಮ್ನ ತೀರ್ಥರಿಂದ 'ಶ್ರೀಶ್ರೀನಿವಾಸ' ಅಂಕಿತ ಪ್ರಾಪ್ತವಾಯಿತು. ಮುಂದೆ ನೂರಾರು ಹಾಡು, ಸಂಪ್ರದಾಯದ ಹಾಡುಗಳನ್ನು, ಖಂಡ ಕಾವ್ಯಗಳನ್ನು ರಚಿಸಿದರು.

ಕರಕುಶಲ ವಸ್ತುಗಳ ತಯಾರಿಕೆ, ನಾಟಿ ವೈದ್ಯ, ಉಳುಕು ಮಂತ್ರ, ದೃಷ್ಟಿ ಮಂತ್ರಗಳನ್ನೂ ಈಕೆ ಕಲಿತಿದ್ದರು. ಹಿಂದಿ, ಮರಾಠಿ, ತೆಲುಗು, ತಮಿಳು ಭಾಷೆಗಳನ್ನು ಕಲಿತಿದ್ದರು. ಮರಾಠಿ ಮತ್ತು ತೆಲುಗಿನಲ್ಲಿಯೂ ಕೃತಿ ರಚನೆ ಮಾಡಿದ್ದಾರೆ. 150 ಹಾಡುಗಳು, 5 ದೀರ್ಘ ಕೃತಿಗಳು ಪ್ರಕಟವಾಗಿವೆ. ಸರಸ್ವತಿ ಬಾಯಿಯವರು 1982ರಲ್ಲಿ ದೈವಾಧೀನರಾದರೆಂದು ತಿಳಿದುಬರುತ್ತದೆ.

ತಿರುಪತಿಯ ತಿಮ್ಮಪ್ಪ ಇವರ ಇಷ್ಟ ದೈವ. ಇವರ ಕೃತಿಗಳಲ್ಲಿ ಭಕ್ತಿಭಾವವೇ ಅಧಿಕ. ಶ್ರೀನಿವಾಸ ಕಲ್ಯಾಣ, ಕೃಷ್ಣ ಲೀಲೆ, ಪ್ರಹ್ಲಾದ ಚರಿತ್ರೆ, ಪ್ರಮೀಳ ಕಾಳಗ ಅವರ ದೀರ್ಘ ಕೃತಿಗಳು. 'ಕೃಷ್ಣ ಲೀಲೆ' ಕೃಷ್ಣನ ಜನನ, ಬಾಲ್ಯ, ಬಾಲ ಲೀಲೆಗಳನ್ನು ಲಾವಣಿ ಮಟ್ಟಿನಲ್ಲಿ ಹೇಳುವ ಕೃತಿ.

13. <u>ಶ್ರೀಮತಿ ಅಂಬಾಬಾಯಿ: (1902–1945):</u>

ತಂದೆಮುದ್ದುಮೋಹನವಿಠಲದಾಸರಿಂದ ಅಂಕಿತ ಪಡೆದವರೆಲ್ಲರೂ ಕೀರ್ತನೆಗಳನ್ನು ರಚಿಸಿಲ್ಲ. ಆದರೆ ಹರಿದಾಸ ಪಂಥವನ್ನು ಬೆಳೆಸಿದರು. ಬೆಂಗಳೂರು, ದೇವರಾಯನದುರ್ಗ, ಚಿತ್ರದುರ್ಗ ಪ್ರಾಂತ್ಯಗಳಲ್ಲಿ ದಾಸಕೂಟ ಬೆಳೆಯಲು ಕಾರಣರಾದರು. ತಂದೆ ಮುದ್ದುಮೋಹನ ವಿಠಲರು ಅನೇಕ ಮಹಿಳೆಯರಿಗೆ ದಾಸ ದೀಕ್ಷೆ ನೀಡಿ ಅಂಕಿತವಿತ್ತಿದ್ದಾರೆ. ಅವರಲ್ಲಿ ಕೆಲವರು ಮಾತ್ರ ದಾಸ ಸಾಹಿತ್ಯ ರಚಿಸಿದರು. ಅವರಲ್ಲಿ ಶ್ರೀಮತಿ ಅಂಬಾಬಾಯಿ ಒಬ್ಬರು. "ದಾಸ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆಯನ್ನು ಸಮೀಕ್ಷಿಸುವಾಗ ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ ಇವರಂತೆಯೇ ಗಮನಿಸಬೇಕಾದ ದಾಸ ಸಾಹಿತ್ಯದ ಮತ್ತೊಂದು ಮೇರು ಪ್ರತಿಭೆ ಶ್ರೀಮತಿ ಅಂಬಾಬಾಯಿಯವರು. ತಂದೆಮುದ್ದುಮೋಹನದಾಸರ ಶಿಷ್ಯೆಯಾದ ಇವರು ರಚಿಸಿರುವ

ಕೀರ್ತನ ಸಾಹಿತ್ಯ ಗಾತ್ರದಲ್ಲೂ, ಪಾತ್ರದಲ್ಲೂ ಮೌಲಿಕವಾಗಿದ್ದು, ಮಹಿಳಾ ಸಾಹಿತ್ಯದಲ್ಲಿ ಉಲ್ಲೇಖನೀಯವಾಗಿದೆ."[20]

ಅಂಬಾಬಾಯಿಯವರು ಹುಟ್ಟಿದ್ದು ಚಿತ್ರದುರ್ಗದಲ್ಲಿ. ತಮ್ಮ ಜನ್ಮ ದಿನವನ್ನು 'ಅನಂತನ ಕಥಾಸಾರ' ಎಂಬ ಹಾಡಿನಲ್ಲಿ ಸ್ವತಃ ಅಂಬಾಬಾಯಿಯವರೇ ತಿಳಿಸಿದ್ದಾರೆ. ಶೋಭನಕೃತು ಸಂವತ್ಸರದ ಕಾರ್ತೀಕ ಶುದ್ಧ ದಶಮಿ 1902 ಎಂದು ಡಾ॥ ಅನಂತಪದ್ಮನಾಭರವರು ಖಚಿತ ಪಡಿಸುತ್ತಾರೆ. ಅಂಬಾಬಾಯಿಯವರ ತಂದೆ ಭೀಮಸೇನರಾಯರು, ತಾಯಿ ಭಾರತೀಬಾಯಿ (ವೆಂಕಮ್ಮ). ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವೇ ಇರದ ಕಾಲದಲ್ಲೂ ಇವರ ತಂದೆ ನಾಲ್ಕನೇ ತರಗತಿಯವರೆಗೆ ಓದಿಸಿದರು. 10ನೇ ವರ್ಷದಲ್ಲಿ ಕಾಲ ಸ್ಥಿತಿಯಂತೆ ಗೋಪಾಲಪುರದ ಹನುಮಂತಾಚಾರ್ಯ ಎಂಬ ಹುಡುಗನೊಂದಿಗೆ ವಿವಾಹವಾಯಿತು. 12ನೆಯ ವಯಸ್ಸಿನಲ್ಲಿ ಪ್ಲೇಗಿನ ಕಾರಣದಿಂದ ತಂದೆಯನ್ನೂ, ಗಂಡನನ್ನೂ ಒಂದೇ ದಿನ ಕಳೆದುಕೊಳ್ಳಬೇಕಾಯಿತು. ಚಿಕ್ಕ ವಯಸ್ಸಿನಿಂದಲೇ ಸಂಕಷ್ಟಗಳನ್ನು ಅನುಭವಿಸುತ್ತಾ ತಂಗಿ, ತಮ್ಮನ ಆಶ್ರಯದಲ್ಲಿ ಬದುಕನ್ನು ಕಳೆದರು. ಮನೆಗೆಲಸ, ಮಕ್ಕಳ ಲಾಲನೆ ಪಾಲನೆ, ಇವುಗಳ ಜೊತೆಯಲ್ಲಿ ಪೂಜೆ, ವ್ರತ, ಪಾರಾಯಣ, ಅಧ್ಯಯನ, ಇತ್ಯಾದಿ ಧಾರ್ಮಿಕ ಪ್ರವೃತ್ತಿ ಬೆಳೆಸಿಕೊಂಡರು. ತಂದೆ ಮುದ್ದುಮೋಹನ ವಿಠಲರಿಂದ 'ಗೋಪಾಲಕೃಷ್ಣವಿಠಲ' ಅಂಕಿತವನ್ನು ಪಡೆದರು. ಅಂಬಾಬಾಯಿಯವರ ಕುಟುಂಬದ ಸದಸ್ಯರೂ ಸಹ ಅಂಕಿತ ಪಡೆದವರೇ ಆಗಿದ್ದರು. ಅಂಕಿತ ಪಡೆದ ನಂತರ ಹರಿದಾಸರಿಗೆ ಉಚಿತವಾದ ಧರ್ಮಕರ್ಮಗಳ ಆಚರಣೆ ಪ್ರಾರಂಭವಾಯಿತು. ಕೃತಿ ರಚನೆ, ಭಜನೆ ಇವರ ನಿತ್ಯ ಬದುಕಿನ ಭಾಗವಾದವು. ಹರಿದಾಸರಂತೆ ತಾಳ ತಂಬೂರಿಗಳನ್ನು ಹಿಡಿದು ಜೋಳಿಗೆ ಧರಿಸಿ ಕಾಲಿಗೆ ಗೆಜ್ಜೆ ಕಟ್ಟಿ ದಾಸ ವೃತ್ತಿ ನಡೆಸಿದ ಮಹಿಳೆ ಇವರೊಬ್ಬರೇ ಇರಬೇಕು. "ಅಂಬಾಬಾಯಿಯವರು ಹರಿದಾಸರಂತೆಯೇ ವೇಷ ಭೂಷಣಗಳನ್ನು ತೊಟ್ಟರು. ಕಾವಿಯ ವಸ್ತ್ರ, ಕಾಲಿಗೆ ಗೆಜ್ಜೆ, ಕೊರಳಿಗೆ ತುಳಸೀ ಮಾಲೆ, ಬಗಲಿಗೆ ತಂಬೂರಿ, ಜೋಳಿಗ ಇತ್ಯಾದಿ ಪರಿಕರಗಳನ್ನು ಧರಿಸಿ ಹರಿದಾಸರಾಗಿ ಸಂಚರಿಸತೊಡಗಿದರು."[21] ಹರಿ, ಗುರು ಸೇವೆಗೆ ತಮ್ಮ ಬದುಕನ್ನು ಅರ್ಪಿಸಿಕೊಂಡರು. ತೀರ್ಥ ಕ್ಷೇತ್ರ ಯಾತ್ರೆಗಳನ್ನು ನಿರಂತರ ಮಾಡುತ್ತಿದ್ದರು.

ಅಂಬಾಬಾಯಿಯವರು ಆಶುಕವಯತ್ರಿ. ಸಂಚಾರ ಕಾಲದಲ್ಲಿ ಪ್ರತಿದಿನ ರಚಿಸುತ್ತಿದ್ದ ಹಾಡುಗಳನ್ನು ಆಸಕ್ತ ಮಹಿಳೆಯರಿಗೆ ಹೇಳಿಕೊಡುತ್ತಿದ್ದರು. ತಮ್ಮ 28ನೆಯ ವಯಸ್ಸಿನಲ್ಲಿ ಭಕ್ತಿ ಸಾಹಿತ್ಯ ರಚನೆ ಪ್ರಾರಂಭಿಸಿದ ಅಂಬಾಬಾಯಿ ಅಪಾರ ಸಂಖ್ಯೆಯ ಕೃತಿಗಳನ್ನು ರಚಿಸಿದ್ದಾರೆ. 'ಪರಮಾರ್ಥ ಚಂದ್ರೋದಯ' ಪತ್ರಿಕೆಯಲ್ಲಿ ಅವರ ಕೆಲವು ಕೃತಿಗಳು ಪ್ರಕಟವಾಗಿದ್ದವು. ಸುಮಾರು 300 ಕೀರ್ತನೆಗಳಿವೆ. ಶ್ರೀಹರಿಯ ಸ್ತುತಿಗಳೇ ಅಧಿಕ. ತೀರ್ಥಕ್ಷೇತ್ರ ಸ್ತುತಿಗಳೂ ಹೆಚ್ಚಾಗಿಯೇ ಇವೆ. ಹರಿದಾಸ ಸ್ತುತಿಯ ಹಾಡುಗಳಲ್ಲಿ ತಂದೆ ಮುದ್ದುಮೋಹನ

ವಿಠಲರನ್ನು ಕುರಿತ ಹಾಡುಗಳೇ ಅಧಿಕವಾಗಿವೆ. ಆತ್ಮ ಶೋಧನೆ, ಲೋಕ ನೀತಿ, ತತ್ವ ನಿರೂಪಣೆ, ಕಥನಾತ್ಮಕ ಹಾಡುಗಳು, ವಿಶೇಷ ಸಂದರ್ಭದ ಹಾಡುಗಳು, ನದೀ ಸ್ತುತಿಗಳು, ಇವರ ಕೀರ್ತನೆಗಳಲ್ಲಿ ಸೇರಿವೆ. ಭಾಷೆ, ಲಯಜ್ಞಾನ, ವಿವಿಧ ಛಂದೋ ರೂಪಗಳನ್ನು ಬಳಸಿರುವ ರೀತಿ, ಪುರಾಣ ಪ್ರಜ್ಞೆಗಳಿಂದ ಇವರ ಕೃತಿಗಳು ವಿಶಿಷ್ಟವೆನಿಸಿವೆ. ಅಂಬಾಬಾಯಿಯವರು ಸುಮಾರು 17 ದೀರ್ಘ ಕೃತಿಗಳನ್ನು ರಚಿಸಿದ್ದಾರೆ.

ಅಂಬಾಬಾಯಿ ತಾವು ರಚಿಸಿದ ಹಾಡುಗಳನ್ನು ಇತರ ಹೆಣ್ಣು ಮಕ್ಕಳಿಗೂ ಹೇಳಿಕೊಡುತ್ತಿದ್ದರು. ತಮ್ಮ ದೌರ್ಭಾಗ್ಯಕ್ಕೆ ಮೊದ ಮೊದಲು ಕೊರಗುತ್ತಿದ್ದರೂ ಅಂಕಿತ ದೊರೆತ ನಂತರ ತಮ್ಮ ಬದುಕನ್ನು ಹರಿ ಸೇವೆಗೆ ಸಮರ್ಪಿಸಿಕೊಂಡು ವೈರಾಗ್ಯ ಭಾವ ತಾಳಿದ್ದರು. ಒಬ್ಬ ಮಹಿಳೆಯಾದರೂ ಹರಿದಾಸರ ಸಂಪ್ರದಾಯಗಳನ್ನು ಅನುಸರಿಸುತ್ತಾ ಗೋಪಾಳ, ತೀರ್ಥಕ್ಷೇತ್ರ ದರ್ಶನ ಮುಂತಾದವುಗಳಿಂದ ಜೀವನ ಸವೆಸಿದರು. ತೀರ್ಥಯಾತ್ರೆಯನ್ನು 'ವಿಜಯ ಯಾತ್ರೆ' ಎಂದೇ ಅಂಬಾಬಾಯಿ ಕರೆಯುತ್ತಿದ್ದರು. ತಮ್ಮ ಗುರುಗಳ ಮರಣ ಅವರನ್ನು ಧೃತಿಗೆಡಿಸಿತು. ಆಗ ತೀರ್ಥ ಯಾತ್ರೆ ಹೊರಟ ಅಂಬಾಬಾಯಿ ಜಲ ಸಮಾಧಿಯಾಗಿ ನಿಧನರಾದರೆಂದು ತಿಳಿದು ಬರುತ್ತದೆ. 43 ವರ್ಷಗಳ ಬದುಕಿನಲ್ಲಿ ಅನೇಕ ಆಘಾತಗಳನ್ನು ಎದುರಿಸಿದ ಅಂಬಾಬಾಯಿ ತಮ್ಮ ಕೃತಿಗಳ ಮೂಲಕ ದುಃಖ ತಡೆಯುವ ಶಕ್ತಿ ಬೆಳೆಸಿಕೊಂಡಿದ್ದರು. ಲೌಕಿಕದಲ್ಲಿ ಸಿಗದ ಸುಖವನ್ನು ಆಧ್ಯಾತ್ಮ ಪ್ರಪಂಚದಲ್ಲಿ ಕಂಡುಕೊಂಡರು.

14. <u>ನಿಡಗುರುಕಿ ಜೀವೂಬಾಯಿ: (1897–1983):</u>

ಕೋಲಾರ ಜಿಲ್ಲೆ, ಚಿಂತಾಮಣಿ ತಾಲ್ಲೂಕಿನ ನಿಡಗುರುಕಿ ಎಂಬ ಹಳ್ಳಿಯಲ್ಲಿದ್ದ ಶ್ಯಾನುಭೋಗರಾದ ದೇಶಮುಖ ರಾಮಚಂದ್ರರಾಯರು ಮತ್ತು ಅವರ ಪತ್ನಿ ರಮಾಬಾಯಿಯವರ ಮಗಳು ಜೀವೂಬಾಯಿ. 1897 ನವೆಂಬರ್ 18ರ ಗುರುವಾರ ಇವರ ಜನ್ಮ ದಿನ. ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದ ಜೀವೂಬಾಯಿಗೆ ಪೂಜೆ, ವ್ರತ, ನೇಮಗಳು ಬದುಕಿನ ರೀತಿ ನೀತಿಯಾಗಿದ್ದವು. ಸಣ್ಣ ಹಳ್ಳಿಯಾದ ನಿಡಗುರಕಿಯಲ್ಲಿ ಪಾಠಶಾಲೆ ಇರಲಿಲ್ಲ. ತಂದೆಯವರಿಂದ ಜೀವೂಬಾಯಿ ಓದು, ಬರಹ ಕಲಿತರು. ಪಿಟೀಲು ವಿದ್ವಾಂಸರಾದ ರಾಮಚಂದ್ರರಾಯರು ಮಗಳಿಗೆ ದೇವರ ನಾಮಗಳನ್ನು ಹಾಡಲು ಕಲಿಸಿದ್ದರು. ತಾಯಿಯೂ ಅನೇಕ ಹಾಡುಗಳನ್ನು ಕಲಿಸಿದ್ದರು. ಅಂದಿನ ಸಮಾಜದ ರೀತಿ ನೀತಿಯಂತೆ 10ನೇ ವಯಸ್ಸಿಗೆ ಸೋದರ ಮಾವನೊಂದಿಗೆ ವಿವಾಹವಾಯಿತು. 11ನೇ ವಯಸ್ಸಿನಲ್ಲಿ ವೈಧವ್ಯ ಪ್ರಾಪ್ತಿಯಾಯಿತು.

ಹಳ್ಳಿಯ ಬದುಕಿನಲ್ಲಿ ಮನೆಕೆಲಸ, ಗೋಸೇವೆ, ಹರಿಸೇವೆಗೆ ಹೆಣ್ಣು ಮಕ್ಕಳ ಬಸಿರು–ಬಾಣಂತನಗಳಂತಹ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಬಿಡುವಿನಲ್ಲಿ ಕಥೆ ಪುಸ್ತಕಗಳನ್ನು

ಓದುತ್ತಿದ್ದರು. ಸ್ವತಃ ಕತೆ ಬರೆಯುವ ಪ್ರಯತ್ನ ಮಾಡಿದರೂ ಅವುಗಳಲ್ಲಿ ಅವರಿಗೆ ಆಸಕ್ತಿ ಉಂಟಾಗಲಿಲ್ಲ. ಕ್ರಮೇಣ ರಾಮಾಯಣ, ಮಹಾಭಾರತ, ಭಾಗವತಗಳನ್ನು ಓದುತ್ತಾ ಅವುಗಳನ್ನು ಆಧರಿಸಿ ದೊಡ್ಡ ದೊಡ್ಡ ಹಾಡುಗಳನ್ನು ಬರೆಯತೊಡಗಿದರು. ತಾಯಿಯ ಮರಣಾನಂತರ ಹಳ್ಳಿಯಿಂದ ಬಂದು ಬೆಂಗಳೂರು, ಮೈಸೂರುಗಳಲ್ಲಿ ವಾಸ ಮಾಡಿದರು. ಅನೇಕ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿದರು. ಒಮ್ಮೆ 'ಪರಮಪ್ರಿಯ' ಸುಬ್ಬರಾಯದಾಸರ ಶಿಷ್ಯರಾದ ಉರಗಾದ್ರಿವಿಠಲದಾಸರು ಹಾಸನಕ್ಕೆ ಬಂದಿದ್ದಾಗ ಜೀವೂಬಾಯಿಯವರಿಗೆ ಅವರನ್ನು ಕಾಣುವ ಅವಕಾಶವಾಯಿತು. ಉರಗಾದ್ರಿ ವಿಠಲದಾಸರಿಂದ 'ಕಮಲನಾಭವಿಠಲ' ಅಂಕಿತ ಪ್ರದಾನವಾಯಿತು. ಆನಂತರ ಜೀವೂಬಾಯಿಯವರು ಅನೇಕ ಕೀರ್ತನೆಗಳನ್ನು, ಹರಿಕಥೆಯನ್ನು ಹೋಲುವ ಹಲವು ಕಥಾ ಕೀರ್ತನೆಗಳನ್ನು ರಚಿಸಿದ್ದಾರೆ. ಜೀವೂಬಾಯಿಯವರು 9–6–1983ರಂದು ದೈವಾಧೀನರಾದರು.

ಜೀವೂಬಾಯಿಯವರು 170 ಕೀರ್ತನೆಗಳನ್ನು, 10 ದೀರ್ಘಕೃತಿಗಳನ್ನು ರಚಿಸಿದ್ದಾರೆ. ಉಗಾಭೋಗ, ಸುಳಾದಿಗಳನ್ನು ರಚಿಸಿಲ್ಲ. ಹಾಡುಗಳಲ್ಲಿ ಪಲ್ಲವಿ, ಅನುಪಲ್ಲವಿ, ನುಡಿಗಳನ್ನು ನಿರ್ದೇಶಿಸಿಲ್ಲ. ನಿಯಮಗಳನ್ನು ಅಷ್ಟಾಗಿ ಪಾಲಿಸಿಲ್ಲ. ಜೀವೂಬಾಯಿಯವರ ಕೃತಿಗಳಲ್ಲಿ ತಾರತಮ್ಯವನ್ನು ಅನುಸರಿಸಲಾಗಿದೆ. ದಶಾವತಾರಗಳು, ಬಾಲಲೀಲೆಗಳು, ದೇವ, ದೇವತೆಗಳು ಮತ್ತು ಗುರುಗಳನ್ನು ಸ್ತುತಿಸಿದ್ದಾರೆ. ಇವರು ರಚಿಸಿದ ಮೊದಲ ಹಾಡು ತಮ್ಮ ಗುರುಗಳಾದ ಉರಗಾದ್ರಿವಿಠಲದಾಸರ ಕುರಿತದ್ದು. ಕೊನೆಯ ಹಾಡು ಉರಗಾದ್ರಿವಿಠಲದಾಸರ ಶಿಷ್ಯರಾದ ತಂದೆ ವೆಂಕಟೇಶವಿಠಲರನ್ನು ಕುರಿತಾಗಿದೆ. ಹಸೆಗೆ ಕರೆಯುವುದು, ಆರತಿ ಎತ್ತುವುದು, ಬಾಗಿಲು ಕಟ್ಟುವುದು, ಉಡಿ ತುಂಬುವುದು, ಜೋಗುಳ, ಮಂಗಳ ಇತ್ಯಾದಿ ಸಂಪ್ರದಾಯದ ಹಾಡುಗಳಲ್ಲಿ ಅವರಿಗಿದ್ದ ಧಾರ್ಮಿಕ ಸಂಪ್ರದಾಯದ ಅರಿವು, ಶ್ರದ್ಧೆಗಳು ಕಂಡುಬರುತ್ತವೆ.

ಇವರ ವಿಶಿಷ್ಟ ರಚನೆಗಳಾದ ಹುಣಸೆಹಣ್ಣಿನ ಹಾಡು, ನೀರಿನ ಮಹತ್ವ ತಿಳಿಸುವ ಹಾಡು, 60 ಸಂವತ್ಸರಗಳ ಹೆಸರನ್ನು ಬಳಸಿ ರಚಿಸಿರುವ ಹಾಡು ದಾಸ ಸಾಹಿತ್ಯದ ಯಾವ ವಿಭಾಗಕ್ಕೂ ಸೇರುವುದಿಲ್ಲ. ಹುಣಸೇ ಹಣ್ಣಿಗೆ ಸಮನಾದ ಹಣ್ಣಿಲ್ಲ ಎಂದು ಹೇಳು ಅದರ ಅಗತ್ಯವನ್ನು ಒತ್ತಿ ಹೇಳುತ್ತಾರೆ. ನೀರಿನ ಹಾಡಿನಲ್ಲಿ ನೀರಿನ ಮಹತ್ವವನ್ನು ತಿಳಿಸುತ್ತಾರೆ. ನವವಿಧ ಭಕ್ತಿ ಎಂಬ 9 ನುಡಿಗಳ ಹಾಡಿನಲ್ಲಿ ಭಕ್ತಿಯ ಒಂಭತ್ತು ವಿಧಗಳಲ್ಲಿ ಹರಿಯನ್ನು ಹೇಗೆ ಒಲಿಸಿಕೊಳ್ಳಬಹುದೆಂಬ ವಿವರಗಳಿವೆ.

ಜೀವೂಬಾಯಿಯವರ ಕೃತಿಗಳಲ್ಲಿ ಬೇಕಾದಷ್ಟು ವೈವಿಧ್ಯಗಳಿವೆ. ಅವರ ಕವಿತಾ ಸಾಮರ್ಥ್ಯ, ಸಹಜ ಪ್ರತಿಭೆ, ಪುರಾಣ, ಪುಣ್ಯ ಕಥೆಗಳ ಅರಿವು, ಸಂಪ್ರದಾಯ, ಆಚಾರ ವಿಚಾರಗಳಲ್ಲಿ ಬಗೆಗಿನ ನಿಷ್ಠೆ ಅವರ ಕೃತಿಗಳಲ್ಲಿ ವ್ಯಕ್ತವಾಗುತ್ತವೆ.

ಅಡಿ ಟಿಪ್ಪಣಿ

ಲೇಖಕರ ಹೆಸರು	ಕೃತಿಯ ಹೆಸರು	ಪುಟ ಸಂಖ್ಯೆ
1. ಎಂ.ಆರ್. ಲಕ್ಷ್ಮೀದೇವಿ	ಗಲಗಲಿ ಅವ್ವ	ಪುಟ–8
2. ಹಣಮಂತ ತಾಸಗಾಂವಕರ್	ಗಲಗಲಿ ಅವ್ವ	ಪುಟ–6
3. ಅದೇ		ಪುಟ–8
4. ಹಣಮಂತ ತಾಸಗಾಂವಕರ್	ಸಮಗ್ರ ದಾಸ ಸಾಹಿತ್ಯ, ಸಂ–7, ಗಲಗಲಿ ಅವ್ವ	ಪುಟ–25
5. ಹಣಮಂತ ತಾಸಗಾಂವಕರ್	ಗಲಗಲಿ ಅವ್ವ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು	ಪುಟ–10
6. ಅದೇ		ಪುಟ–11
7. ಅದೇ		ಪುಟ–3
8. ಅದೇ		ಪುಟ–12
9. ಅನಂತಪದ್ಮನಾಭರಾವ್	ಗಲಗಲಿ ಅವ್ವ	ಮುನ್ನುಡಿ
10. ಲೀಲಾವತಿ ಎಸ್. ರಾವ್	ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು, ಸಂ–18, ಭಾಗ–1	ಪುಟ–20
11. ಶ್ರೀರಾಘವೇಂದ್ರ ಸ್ವಾಮಿಗಳ ಮಠ	ಮಾಧ್ವ ಮಠಗಳ ಶಾಸನಗಳು, ಸಂ–1	ಪುಟ–137
12. ಅನಂತಪದ್ಮನಾಭರಾವ್	ಪ್ರಬುದ್ಧ ಕರ್ನಾಟಕ ಸಂಪುಟ–53, ಸಂಚಿಕೆ–4	ಪುಟ–21
13. ಅದೇ		ಪುಟ–22
14. ಜಿ. ಪವನಕುಮಾರ	ಹೂವ ಕೊಡೆ ತಾಯೆ	ಪುಟ–24
15. ಸರಿತಾ ಕುಸುಮಾಕರ ದೇಸಾಯಿ	ಭೀಮೇಶ ಕೃಷ್ಣ	ಪುಟ–14
16. ಅದೇ		ಪುಟ–18
17. ದಿ॥ ಕೃಷ್ಣಾಚಾರ್ಯ ಹ. ಕಾಖಂಡಕಿ	ವಿಜಯ ಸಂಪದ, ನವೆಂಬರ್, 2011	ಪುಟ–18
18. ಚಿ.ನ. ಮಂಗಳಾ	ನಂಜನಗೂಡು ತಿರುಮಲಾಂಬಾ	ಪುಟ–25
19. ರುಕ್ಮಿಣಿ ಗಿರಿಮಾಜಿ	ಬಳ್ಳಾರಿ ರಾಧಾಬಾಯಿಯವರ ಕೀರ್ತನೆಗಳು, ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4	ಪುಟ–78
20. ಅನಂತಪದ್ಮನಾಭರಾವ್	ಅಂಬಾಬಾಯಿಯವರ ಕೀರ್ತನೆಗಳು, ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–3	ಪುಟ–24
21. ಅದೇ		ಪುಟ–29

೩೦೮

ಅಧ್ಯಾಯ-3

ಆಧುನಿಕ ಮಹಿಳಾ ಹರಿದಾಸರು

ಗಲಗಲಿ ಅವ್ವನವರಿಂದ ಪ್ರಾರಂಭವಾದ ದಾಸ ಮಹಿಳೆಯರ ದಾಸ ಸಾಹಿತ್ಯ ಸೇವೆ ಇಂದಿಗೂ ಮುಂದುವರೆದುಕೊಂಡು ಬಂದಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ಸಂಪುಟಗಳಲ್ಲಿ ಉಲ್ಲೇಖಿಸಲಾದ ದಾಸ ಮಹಿಳೆಯರೇ ಅಲ್ಲದೆ ಇನ್ನೂ ಅನೇಕ ಮಹಿಳೆಯರು ದಾಸ ಸಾಹಿತ್ಯ ರಚನೆ ಮಾಡಿದ್ದಾರೆ, ಮಾಡುತ್ತಿದ್ದಾರೆ. ಇವರಲ್ಲಿ ಎಷ್ಟೋ ಮಹಿಳೆಯರು ಅಜ್ಞಾತರಾಗಿಯೇ ಉಳಿದಿದ್ದಾರೆ. ಕಾಲದ ಕಟ್ಟು ಪಾಡುಗಳನ್ನು ಮೀರಿ ಇಂದು ಈ ಮಹಿಳೆಯರು ವಿದ್ಯಾವಂತರಾಗಿ ನಾನಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೆಯೇ ಕೆಲವರು ಪ್ರಚಾರ ಬಯಸದೆ ತಮ್ಮ ಕೃತಿಗಳು ಕೇವಲ ಆತ್ಮ ತೃಪ್ತಿಗಾಗಿ ಎಂಬ ಮನೋಭಾವದಿಂದ ಅಜ್ಞಾತರಾಗಿ ಉಳಿದಿದ್ದಾರೆ. ಈ ಹಿನ್ನೆಲೆಯಲ್ಲಿ ಆಧುನಿಕ ದಾಸ ಮಹಿಳೆಯರನ್ನು ಪರಿಚಯಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

1. ವೆಂಕಟ ಸುಬ್ಬಮ್ಮ: (1819-1899):

ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ಕವಿ ಹಾಗೂ ಹರಿದಾಸನಾದ ಪಾರ್ತಿ ಸುಬ್ಬ ಶ್ಯಾನುಭೋಗರ ಕುಟುಂಬಕ್ಕೆ ಸೇರಿದ ಸ್ಥಾನಿಕ ಬ್ರಾಹ್ಮಣನಾಗಿದ್ದನು. ಆತನ ಮೊಮ್ಮಗಳೇ ವೆಂಕಟ ಸುಬ್ಬಮ್ಮ. ಆಕೆಯನ್ನು 'ಸುಬ್ಬಿ' ಎಂದೇ ಕರೆಯುತ್ತಿದ್ದರು. ಸುಮಾರು 1819ರಲ್ಲಿ ಈಕೆಯ ಜನನ. ತಂದೆ ತಾಯಿಯರ ವಿವರ ತಿಳಿದು ಬರುವುದಿಲ್ಲ. ಈಕೆ ಕುಂಬಳೆ ಸಮೀಪದ ಕೋಟಕುಂಜೆಯ ಬಳಿಯ ದೇಶಮಂಗಲದಲ್ಲಿ ವಾಸಿಸಿದ್ದಂತೆ ತಿಳಿದು ಬರುತ್ತದೆ. ಇವರ ಮನೆತನದ ದೈವ ಮಡಿಕೇರಿಯ ಓಂಕಾರೇಶ್ವರ. ಆಶು ಕವಿತ್ವ ಈಕೆಯ ವೈಶಿಷ್ಟ್ಯ. ವೆಂಕಟ ಸುಬ್ಬಮ್ಮನ ಸುಮಾರು 24 ಕೀರ್ತನೆಗಳು ದೊರೆತಿದ್ದು ಅದನ್ನು ಶ್ರೀಮತಿ ಜಿ.ಕೆ. ಶ್ರೀಮತಿರಾವ್‌ರವರು ಸಂಪಾದಿಸಿ ಪ್ರಕಟಿಸಿದ್ದಾರೆ. ವೆಂಕಟ ಸುಬ್ಬಮ್ಮನ ಅಂಕಿತ 'ದಾಸಿ ಸುಬ್ಬಿ', 'ವೆಂಕಟ ಸುಬ್ಬಿ.'

ವೆಂಕಟಸುಬ್ಬಮ್ಮ ಕೀರ್ತನೆಗಳನ್ನು ರಚಿಸಿರುವುದು ಸ್ಪಷ್ಟವಾಗಿದೆ. ಆದರೆ ಇದು ಶುದ್ಧ ಹರಿದಾಸ ಸಾಹಿತ್ಯವಲ್ಲ. ಸಾಮಾನ್ಯವಾಗಿ ಹರಿದಾಸ-ದಾಸಿಯರು ಶ್ರೀಹರಿಯ ನಾಮಗಳನ್ನೇ ಅಂಕಿತವಾಗಿ ಬಳಸುವುದು ವಾಡಿಕೆ. ಅದಕ್ಕೆ ಕೆಲವು ಅಪವಾದಗಳೂ ಉಂಟು. ಆದರೆ ವೆಂಕಟ ಸುಬ್ಬಮ್ಮ ಕೀರ್ತನೆಗಳನ್ನು ತಮ್ಮ ಹೆಸರಿನಲ್ಲೇ ರಚಿಸಿದ್ದಾರೆ.

2. ರುಕ್ಮಿಣಿಬಾಯಿ: (1845–1940):

ರುಕ್ಮಿಣಿಬಾಯಿ ಜನಿಸಿದ್ದು ಪಿರಿಯಾಪಟ್ಟಣದಲ್ಲಿ. 1845ನೇ ಇಸವಿಯಲ್ಲಿ. ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿ ಎಂಟನೇ ವರ್ಷಕ್ಕೆ ಕೃಷ್ಣರಾಯರೊಡನೆ ವಿವಾಹವಾದರು. ಒಬ್ಬನೇ ಮಗ ಎರಡು ವರ್ಷದವನಿದ್ದಾಗ ಪತಿ ವಿಯೋಗವಾಯಿತು. ವೃದ್ಧಾಪ್ಯದಲ್ಲಿ ಮಗನನ್ನೂ ಕಳೆದುಕೊಂಡರು. ಮೊಮ್ಮಕ್ಕಳ ಆಶ್ರಯದಲ್ಲಿ ಬೆಂಗಳೂರಿನಲ್ಲಿ ನೆಲೆಸಿದರು. ಶ್ರೀತಂದೆ ಮುದ್ದುಮೋಹನ ವಿಠಲದಾಸರಿಂದ "ಸೀತಾಪತಿವಿಠಲ" ಅಂಕಿತ ಪಡೆದರು. 1940ರಲ್ಲಿ ಶಿವಮೊಗ್ಗದಲ್ಲಿ ತಮ್ಮ ಮೊಮ್ಮಗನ ಮನೆಯಲ್ಲಿ ನಿಧನರಾದರು. ಅಂಬಾಬಾಯಿಯವರು "ಸೀತಾಪತಿವಿಠಲದಾಸಳ ನಿರ್ಯಾಣಪದ" ಎಂಬ ದೀರ್ಘ ಕೃತಿಯಲ್ಲಿ ರುಕ್ಮಿಣೀಬಾಯಿಯವರ ಜೀವನ ಚಿತ್ರಣ ನೀಡಿದ್ದಾರೆ.

ರುಕ್ಮಿಣಿಬಾಯಿಯವರು ಲಕ್ಷ್ಮೀನರಸಿಂಹ ಸ್ತೋತ್ರದಲ್ಲಿ ತಮ್ಮ ಇಬ್ಬರು ಗುರುಗಳ ಪ್ರಸ್ತಾಪ ಮಾಡಿದ್ದಾರೆ. ಸಾಗರಕಟ್ಟೆ ಮಠಾಧೀಶರಾದ ಶ್ರೀಪ್ರದ್ಯುಮ್ನತೀರ್ಥರು ಹಾಗೂ ಶ್ರೀತಂದೆ ಮುದ್ದುಮೋಹನವಿಠಲರು.

ನಿಷ್ಠೆ ನೇಮವಂತರಾದ
ಶ್ರೇಷ್ಠ ಶ್ರೀಪ್ರದ್ಯುಮ್ನತೀರ್ಥ
ರಿಟ್ಟು ಮಮತೆ ಕೊಟ್ಟರಾಜ್ಞೆಯನ್ನು ಸಾಗರ
ಕಟ್ಟೆ ಯತಿಗಳವರ ಕರುಣ
ತೊಟ್ಟು ಬರೆದ ಕೃತಿಯು ಇದನು
ನಿಷ್ಠೆಯಿಂದ ಪಠಿಸುವರಿಗೆ ಇಷ್ಟ ಪ್ರಾಪ್ತಿಯು

ತಂದೆ ಮುದ್ದುಮೋಹನರೆಂ
ತೆಂದು ಮೆರೆದರೆನ್ನ ಗುರುಗ
ಳಿಂದ ಬಂದ ಕವನ ಶಕ್ತಿ ಕೃಪೆಯ ಬಲದಲಿ
ನಿಂದು ಮನದಿ ನುಡಿಸೆ ಹರಿಯು
ಛಂದದಿಂದ ಬರೆದೆನಲ್ಲ
ದೆಂದಿಗೆನ್ನ ದೆನ್ನದಲ್ಲವೆಂದು ಅರ್ಪಿಸೆ [1]

3. ಮುಳಿಯ ಮೂಕಾಂಬಿಕೆ: (1870–1942):

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಪುಣಚ ಗ್ರಾಮದ ಮಲೆತ್ತಡ್ಕ ಮನೆತನ ಆರ್ಥಿಕ, ಸಾಮಾಜಿಕವಾಗಿ, ಧಾರ್ಮಿಕವಾಗಿ ಹೆಸರಾಂತ ಮನೆತನ. 'ಚಕ್ರಕೋಡಿ' ವಂಶಜರಾದ ಶ್ರೀ ಶಾಮಶಾಸ್ತ್ರಿ ಮತ್ತು ಗೌರಮ್ಮ ದಂಪತಿಗಳ ಮಗಳು ಮೂಕಾಂಬಿಕೆ. ಅವರದ್ದು ಸಮಷ್ಟಿ ಕುಟುಂಬ. ಇಂತಹ ಸಿರಿವಂತ ಮನೆಗಳಲ್ಲಿ ಮನೆಯಲ್ಲಿಯೇ ಪಾಠ ಹೇಳಿ ಕೊಡುವ ಉಪಾಧ್ಯಾಯರುಗಳಿರುತ್ತಿದ್ದರು. ಈ ಸೌಲಭ್ಯ ಮನೆಯ ಗಂಡು ಮಕ್ಕಳಿಗೆ ಸೀಮಿತವಾಗಿತ್ತು. ಹೆಣ್ಣು ಮಕ್ಕಳು ವಿದ್ಯೆಗಿಂತ ಅಡುಗೆ, ಹಾಡು, ಹಸೆ ಕಲಿತರೆ ಸಾಕೆಂಬ

ಅಭಿಪ್ರಾಯವಿದ್ದಿತು. ಮೂಕಾಂಬಿಕೆಗೆ ವಿದ್ಯೆ ಕಲಿಯಲು ಅವಕಾಶವಿರದಿದ್ದರೂ ಸಂಸ್ಕೃತ, ಕನ್ನಡ, ಗಣಿತ ಪಾಠಗಳು ನಡೆಯುವಾಗ ಕೇಳಿ ಸಾಕಷ್ಟು ಕಲಿತರು. ಕನ್ನಡ–ಸಂಸ್ಕೃತ ಎರಡೂ ಅವರಿಗೆ ಒಲಿದವು. ಅವರ ಹಿರಿಮನೆಯಲ್ಲಿ ರಾಮಾಯಣ, ಭಾಗವತ, ಭಾರತ, ಇತ್ಯಾದಿ ಗ್ರಂಥಗಳ ಪಠನೆ, ಅರ್ಥ–ವಿವರಣೆ ದಿನ ನಿತ್ಯ ನಡೆಯುತ್ತಿತ್ತು. ಹಳ್ಳಿಯ ಮಧ್ಯಿನಲ್ಲಿಯೂ ಆ ಮನೆಯವರಿಗೆ ಪಾಂಡಿತ್ಯವಿತ್ತು. ಇಂತಹ ಪರಿಸರದಲ್ಲಿ ಬೆಳೆದ ಮೂಕಾಂಬಿಕೆ ಲಿಪಿ ಕಲಿಯದಿದ್ದರೂ ಶ್ರವಣ ಮಾತ್ರದಿಂದ ಹಳಗನ್ನಡ, ಸಂಸ್ಕೃತ ಕಲಿತರು.

ಅಂದಿನ ಕಾಲದ ಪದ್ಧತಿಯಂತೆ ತೀರ ಚಿಕ್ಕ ವಯಸ್ಸಿಗೆ ಮುಳಿಯ ಕೃಷ್ಣಭಟ್ಟರೊಂದಿಗೆ ಮದುವೆಯಾಯಿತು. ಮುಳಿಯವೂ ಹೆಸರಾಂತ ಮನೆತನವೇ ಆಗಿತ್ತು. ಪತಿಯ ಮನೆಯಲ್ಲೂ ಸಂಪ್ರದಾಯ, ಆಚರಣೆಗಳು ತವರಿನಂತೆಯೇ ಇದ್ದವು. ಮೂಕಾಂಬಿಕೆಗೆ ಐವರು ಮಕ್ಕಳಾದರು. ವೈಭವದ ದಿನಗಳು ಕಳೆದು ಬಡತನ ಪ್ರಾಪ್ತವಾಯಿತು. ಅದೂ ಸಾಲದೆಂಬಂತೆ ಪತಿ ವಿಯೋಗವೂ ಆಯಿತು. ವಿಧವೆಯ ಬದುಕು ದುರ್ಭರವಾದ ಅಂದಿನ ಸಾಮಾಜಿಕ ಸನ್ನಿವೇಶದಲ್ಲಿ ಮೂಕಾಂಬಿಕೆ ಧೈರ್ಯಗೆಡದೆ ಸಂಸಾರದಲ್ಲಿ ತೊಡಗಿಸಿಕೊಂಡರು. ದೈವಭಕ್ತಿ, ಸಾಹಿತ್ಯ ಸೃಷ್ಟಿಯತ್ತ ಹೊರಳಿದರು.

ಮೂಕಾಂಬಿಕೆಗೆ ಬರೆಯಲು ಬರುತ್ತಿರಲಿಲ್ಲವಾದ ಕಾರಣ ಅವರ ಮೂರನೇ ಮಗ ಕೇಶವಭಟ್ಟರು ಮತ್ತೋರ್ವ ಸಂಬಂಧಿ ಸುಬ್ಬರಾಯ ಎನ್ನುವವರು ಮೂಕಾಂಬಿಕೆಯ ಲಿಪಿಕಾರರಾಗಿದ್ದರು. ವಿವಾಹ ಸಂದರ್ಭಗಳಲ್ಲಿ ಮೂಕಾಂಬಿಕೆಯವರ ಹಾಡುಗಳಿಗೆ ಬಹಳ ಬೇಡಿಕೆಯಿತ್ತು. "ಕನ್ನಡದ ಕೋಗಿಲೆಯೆಂದೇ ಹೆಸರಾದ ಪಂಡಿತ ಮುಳಿಯ ತಿಮ್ಮಪ್ಪಯ್ಯನವರಿಗೆ ಮೂಕಾಂಬಿಕೆ ವಾವೆಯಲ್ಲಿ ಚಿಕ್ಕಮ್ಮನಾಗಿದ್ದರು. ಈ ಕವಯತ್ರಿ ಚಿಕ್ಕಮ್ಮನ ಬಗ್ಗೆ ತಿಮ್ಮಪ್ಪಯ್ಯನವರಿಗೆ ಬಹಳ ಅಭಿಮಾನ."[2]

ಮೂಕಾಂಬಿಕೆ ಸಾಹಿತ್ಯ ರಚನೆಗೆ ತೊಡಗಿದ್ದು ಪತಿಯ ಮರಣದ ನಂತರ. ಮೂಕಾಂಬಿಕೆಯವರ ಎಲ್ಲ ಕೃತಿಗಳೂ ಲಭ್ಯವಿಲ್ಲ. 'ಕೊಲ್ಲೂರ ಒಡತಿ ಮೂಕಾಂಬೆ.' 'ಕಾಂತೆ ಮೂಕಾಂಬೆ' ಇವರ ಅಂಕಿತಗಳು. ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಲೇಖಕಿಯರು ಎಂಬ ಗ್ರಂಥದಲ್ಲಿ ಕರ್ನಾಟಕ ಲೇಖಕಿಯರ ಸಂಘದ ತ್ರೈಮಾಸಿಕ 'ಲೇಖಕಿ' ಯಲ್ಲಿ ಅವರ ಬಗ್ಗೆ ಲೇಖನಗಳು ಪ್ರಕಟವಾಗಿವೆ. ಇವರ ಎಲ್ಲ ಕೃತಿಗಳೂ ಅಪ್ರಕಟಿತವಾಗಿವೆ. ಶ್ರೀಹರಿ ಲೀಲಾಮೃತ, ಧ್ರುವ ಚರಿತ್ರೆ, ಗಜೇಂದ್ರಮೋಕ್ಷ, ಸೀತಾಕಲ್ಯಾಣ, ಮೃಗಸಂಧಿ, ದ್ರೌಪದೀ ವಸ್ತ್ರಾಪಹರಣ, ಪ್ರದೋಷ ಮಹಿಮೆ, ಶ್ರೀರಾಮಚರಿತ, ಬಾಲಲೀಲೆ–ಬಿಲ್ಲ ಹಬ್ಬ, ಕಂಸ ವಧೆ. ಇವರ ದೀರ್ಘ ಕೃತಿಗಳು. ಶ್ರೀಮಹಿಷಮರ್ಧಿನಿ ಸ್ತುತಿ ಸಂಸ್ಕೃತ ರಚನೆ, ಪಾರ್ವತಿ, ಸರಸ್ವತಿ, ಶಾಸ್ತಾರ ಸ್ತುತಿಗಳು. ಹಲವಾರು ಸಂಪ್ರದಾಯದ ಹಾಡುಗಳು ಇವರ ಕೃತಿಗಳು. ಮೂಕಾಂಬಿಕೆಯವರ ಕೃತಿಗಳನ್ನು ಅವರ ಮೊಮ್ಮಗಳೇ ಆದ ಲೇಖಕಿ ಗಂಗಾ ಪಾದೇಕಲ್‌ರವರು ಸಂಪಾದಿಸಿದ್ದು 74ನೆಯ ಅಖಿಲ ಭಾರತ ಕನ್ನಡ

ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ, ಉಡುಪಿ, ಇವರು ಪ್ರಕಟಿಸಿದ್ದಾರೆ. ಮೂಕಾಂಬಿಕೆಯವರ ಕೃತಿಗಳಲ್ಲಿ ದೈವ ಭಕ್ತಿಯನ್ನು ಹೆಚ್ಚಾಗಿ ಕಾಣಬಹುದು. ತಮ್ಮ 72ನೇ ವಯಸ್ಸಿನಲ್ಲಿ ಏಪ್ರಿಲ್ 1942ರಲ್ಲಿ ಮೂಕಾಂಬಿಕೆ ನಿಧನರಾದರು.

4. <u>ಸರಪಾಡಿ ಗಂಗಮ್ಮ: (1905–1985):</u>

ಸರಪಾಡಿ ಗ್ರಾಮದ ಅಗ್ರಹಾರದಲ್ಲಿದ್ದ ಶ್ರೀರಾಮ ಮಯ್ಯ ಕಾವೇರಮ್ಮ ದಂಪತಿಗಳ ಮೂರನೇ ಮಗಳು ಗಂಗಮ್ಮ. ಜನನ 1905ನೇ ಇಸವಿ ಸೆಪ್ಟೆಂಬರ್. ಭಾಗವತ ಸಂಪ್ರದಾಯಸ್ಥರಾದ ತಂದೆ ಹೆಸರಾಂತ ಜ್ಯೋತಿಷಿಗಳಾಗಿದ್ದರು, ಅಧ್ಯಾಪಕರೂ ಆಗಿದ್ದರು. ಪ್ರಾಥಮಿಕ ಶಿಕ್ಷಣ ಗಂಗಮ್ಮನವರಿಗೆ ದೊರೆತಿತ್ತು. ಉಜಿರೆಯ ಕೃಷಿಕರಾದ ವೆಂಕಟರಮಣಯ್ಯನವರ ಜೊತೆಯಲ್ಲಿ ಗಂಗಮ್ಮನವರ ವಿವಾಹವಾಯಿತು. ಎರಡು ಮಕ್ಕಳಾದ ನಂತರ ಚಿಕ್ಕ ವಯಸ್ಸಿಗೇ ವೈಧವ್ಯ ಪ್ರಾಪ್ತವಾಯಿತು. ಆಕೆ ಸ್ವಪ್ರಯತ್ನದಿಂದಲೇ ಉಡುಪಿಯಲ್ಲಿ ಶಿಕ್ಷಕ ತರಬೇತಿ ಪಡೆದರು. 1931ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಶಾಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ಸೇರ್ಪಡೆಯಾದರು. ಸಂಗೀತದಲ್ಲಿ ಆಸಕ್ತಿ ಹೊಂದಿದ್ದ ಗಂಗಮ್ಮ ಮದ್ರಾಸಿನ ಸಂಗೀತ ಅಕಾಡೆಮಿಯಲ್ಲಿ ಪ್ರವೇಶ ಪಡೆದು ಸಂಗೀತಾಭ್ಯಾಸ ಆರಂಭಿಸಿದರು. ಜೀವನದ ಕಹಿ ಅನುಭವಗಳಿಂದ ಆಧ್ಯಾತ್ಮದತ್ತ ಮನ ಸರಿಯಿತು.

ಗಂಗಮ್ಮನವರ ಅಂಕಿತ 'ಗಂಗಾಜನಕ'. ನಿವೃತ್ತ ಜೀವನದಲ್ಲಿ ನೂರಾರು ಕೃತಿಗಳನ್ನು ರಚಿಸಿದ್ದಾರೆ. 'ಪ್ರಭಾತ' ಮತ್ತು 'ಧಾರವಾಡ ಪತ್ರಿಕೆ' ಗಳಲ್ಲಿ ಲೇಖನಗಳು ಪ್ರಕಟವಾಗಿವೆ. ಗಂಗಮ್ಮನವರಿಗೆ ಸ್ವಪ್ನಾಂಕಿತವಾಗಿರಬೇಕು. ಇವರ ಹಲವು ಭಕ್ತಿ ಗೀತೆಗಳು 'ಭಕ್ತಿ ಗೀತಾಂಜಲಿ' ಹೆಸರಿನಲ್ಲಿ 1973ರಲ್ಲಿ ಪ್ರಕಟಗೊಂಡಿವೆ. ಕೀರ್ತನೆಗಳೇ ಅಲ್ಲದೆ ಆಧ್ಯಾತ್ಮಿಕ ಸಾಹಿತ್ಯ "ಪರಬ್ರಹ್ಮನ ಅರಿವು ಮಾನವನ ಗುರಿ" ಗ್ರಂಥವು 1975ರಲ್ಲಿ ಪ್ರಕಟವಾಗಿದೆ. ಸುಮಾರು ಮುನ್ನೂರು ರಚನೆಗಳನ್ನು ಸಂಗ್ರಹಿಸಿರುವ ಬಿ.ಕೆ. ಶ್ರೀಮತಿರಾವ್‌ರವರು 278 ಹಾಡುಗಳನ್ನು 'ಭಕ್ತಿ ಗಂಗಾಲಹರಿ' ಎಂಬ ಗ್ರಂಥದಲ್ಲಿ ಪ್ರಕಟಿಸಿದ್ದಾರೆ.

29 ವರ್ಷಗಳು ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆಗೈದು 1960ನೇ ಅಕ್ಟೋಬರ್‌ನಲ್ಲಿ ನಿವೃತ್ತರಾದರು. ವಿಶ್ರಾಂತ ಜೀವನದಲ್ಲಿ ಹಲವಾರು ಕೀರ್ತನೆಗಳನ್ನು ರಚಿಸಿದರು. 19ನೇ ಮಾರ್ಚ್ 1985ರಂದು ತಮ್ಮ 80ನೇ ವಯಸ್ಸಿನಲ್ಲಿ ನಿಧನರಾದರು. ಪ್ರಾಸ, ಲಯ, ಶಬ್ದಾಡಂಬರಗಳಿಲ್ಲದ ಗಂಗಮ್ಮನವರ ಕೃತಿಗಳು ಕೇವಲ ಆತ್ಮ ತೃಪ್ತಿಗಾಗಿ ರಚಿತವಾದವುಗಳಾಗಿವೆ. ಗಣಪತಿ, ಶಾರದೆ, ಆಂಜನೇಯ, ರಾಘವೇಂದ್ರರು, ಶ್ರೀಹರಿಯನ್ನು ತಮ್ಮ ಕೀರ್ತನೆಗಳಲ್ಲಿ ಸ್ತುತಿಸಿದ್ದಾರೆ. ದೇವರನ್ನು ಹೊಗಳುವ, ನಿಂದಾಸ್ತುತಿ, ಪ್ರಸಾದ ಬೇಡುವ ಹಾಡು ಹೀಗೆ ವಿವಿಧ ರೀತಿಯ ಕೃತಿಗಳು ಇವರಿಂದ ರಚಿತವಾಗಿದೆ. ಪ್ರಾಸ

ಬದ್ಧವಲ್ಲದಿದ್ದರೂ ಅರ್ಥ ಬದ್ಧವಾದ ಇವರ ಹಾಡುಗಳಲ್ಲಿ ಅನನ್ಯ ಭಕ್ತಿ, ಕಳಕಳಿ, ದಾಸ್ಯ ಭಾವ ಕಂಡು ಬರುತ್ತದೆ.

5. **ಪಿ.ವಿ. ಕೃಷ್ಣಾಬಾಯಿ: (1913–1995):**

ಚಿತ್ರದುರ್ಗದ ಶ್ರೀರಾಮರಾಯರು ಮತ್ತು ಸೀತಮ್ಮ ದಂಪತಿಗಳ ಪುತ್ರಿಯಾಗಿ 1913ರಲ್ಲಿ ಕೃಷ್ಣಾಬಾಯಿ ಜನಿಸಿದರು. ಹೆಣ್ಣು ಮಕ್ಕಳಿಗೆ ವಿದ್ಯೆ ಬೇಡವೆಂಬ ಧೋರಣೆ ಇದ್ದ ಕಾಲದಲ್ಲಿ ಕೃಷ್ಣಾಬಾಯಿ ಅಜ್ಜಿಯೊಂದಿಗೆ ತುಳಸೀಪೂಜೆ, ದೇವರನಾಮ, ಮನೆಗೆಲಸ ಕಲಿತರು. ಕೃಷ್ಣಾಬಾಯಿ ತಮ್ಮ 5ನೇ ವಯಸ್ಸಿನಿಂದಲೇ ಹಾಡುಗಳನ್ನು ರಚಿಸುತ್ತಿದ್ದರು. 'ಚಿತ್ರದುರ್ಗ ನಿಲಯ' ಎಂಬ ಅಂಕಿತ ಹಾಕಿ ಹಲವಾರು ಹಾಡುಗಳನ್ನು ಬರೆದಿದ್ದು ಅವು ಉಪಲಬ್ಧವಿಲ್ಲ. ಕೃಷ್ಣಾಬಾಯಿಗೆ 2ನೇ ತರಗತಿಗೇ ವಿದ್ಯಾಭ್ಯಾಸ ಮುಗಿಯಿತು. 11ನೇ ವಯಸ್ಸಿನಲ್ಲಿ ಯಳಂದೂರಿನಲ್ಲಿದ್ದ ಪ್ರಮೇಯ ವೆಂಕಟರಮಣಾಚಾರ್ಯರೊಂದಿಗೆ ಇವರ ವಿವಾಹವಾಯಿತು. ಆ ಸಮಯದಲ್ಲಿ ಅವರ ತಂದೆ ಟಿ. ನರಸೀಪುರದಲ್ಲಿ ಕೆಲಸದಲ್ಲಿದ್ದರು. 13ನೇ ವಯಸ್ಸಿನಲ್ಲಿ ಕೃಷ್ಣಾಬಾಯಿ ಟಿ. ನರಸೀಪುರದಿಂದ ಯಳಂದೂರಿನ ಗಂಡನ ಮನೆಗೆ ಪ್ರಯಾಣ ಬೆಳಸಿದರು. ಕೃಷ್ಣಾಬಾಯಿಯವರ ಪತಿ ಮೋಜಣಿದಾರರಾಗಿದ್ದು ಕಾರಣಾಂತರಗಳಿಂದ ಆ ಕೆಲಸ ಬಿಟ್ಟು ಮಾಧ್ಯಮಿಕ ಶಾಲೆಯಲ್ಲಿ ಕನ್ನಡ ಪಂಡಿತರಾಗಿ ಸೇರಿದರು. ಅತ್ತೆಯ ಮನೆಯಲ್ಲಿ ಹಲವಾರು ಕಟ್ಟುಪಾಡುಗಳಿಗೆ ಒಳಗಾದರೂ ತಾಳ್ಮೆಯಿಂದಲೇ ಜೀವನ ನಡೆಸಿದರು.

ಕೃಷ್ಣಾಬಾಯಿಯವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು. ಪತ್ನಿಯ ಆಶುಕವಿತ್ವದ ಬಗ್ಗೆ ತಿಳಿದ ವೆಂಕಟರಮಣಾಚಾರ್ಯರು 'ಶ್ರೀಶ್ವೇತಾದ್ರೀಶ' ಮತ್ತು 'ಸಿತಗಿರಿ ನರಸಿಂಹ' ಅಂಕಿತಗಳಿಂದ ಕೃತಿ ರಚನೆ ಮಾಡಲು ತಿಳಿಸಿದರು. ಉತ್ತರ ಮತ್ತು ದಕ್ಷಿಣ ಭಾರತ ಯಾತ್ರೆಗಳನ್ನು ಕೃಷ್ಣಾ ಬಾಯಿ ಮಾಡಿದ್ದಾರೆ. 1963ರಲ್ಲಿ ಕೃಷ್ಣಾಬಾಯಿ ಪತಿಯನ್ನು ಕಳೆದುಕೊಂಡರು. ನಂತರ ಮೈಸೂರಿಗೆ ಬಂದು ನೆಲೆಸಿದರು. ಶ್ರೀಜಗನ್ನಾಥದಾಸರ 'ಹರಿಕಥಾಮೃತಸಾರ'ವನ್ನು ಅಧ್ಯಯನ ಮಾಡಿದ್ದರು. ಅನೇಕ ಕಠಿಣವ್ರತಗಳನ್ನು ತಮ್ಮ ಜೀವನದಲ್ಲಿ ನಡೆಸಿ 1995ನೇ ಜನವರಿ 27ರಂದು ನಿಧನರಾದರು.

ಪಿ.ವಿ. ಕೃಷ್ಣಾಬಾಯಿಯವರು ತೀರ್ಥಯಾತ್ರೆಯನ್ನು ವ್ಯಾಪಕವಾಗಿ ಮಾಡಿದ್ದಾರೆ. ಆಯಾ ಕ್ಷೇತ್ರ ಮೂರ್ತಿಗಳು, ಸ್ಥಳ ಮಹಾತ್ಮೆ, ನದಿ, ಬೆಟ್ಟ, ಪ್ರಕೃತಿ ವರ್ಣನೆ, ಇತ್ಯಾದಿಗಳನ್ನು ತಮ್ಮ ಕೃತಿಗಳಲ್ಲಿ ಮಾಡಿದ್ದಾರೆ. ಬ್ರಹ್ಮಣ್ಯ ತೀರ್ಥರ ಚರಿತ್ರೆ (42 ನುಡಿ), ಬಿಳಿಗಿರಿರಂಗನಾಥನ ಚರಿತ್ರೆ (5 ಅಧ್ಯಾಯ), ಸೇತುಬಂಧ (100 ನುಡಿ), ತಲಕಾಡು ಮಹಾತ್ಮೆ, ಶ್ವೇತಾಚಲ ಮಹಾತ್ಮೆ, ಮಹಿಷಮರ್ಧಿನಿ ಸ್ತೋತ್ರ, ಇತ್ಯಾದಿಗಳು ಇವರ ದೀರ್ಘ ಕೃತಿಗಳು. ಅನೇಕ ಕೀರ್ತನೆಗಳು, ಮಂಗಳದ ಹಾಡು, ಬೀಗರ ಹಾಡು, ಸಂಪ್ರದಾಯದ ಹಾಡು, ವ್ರತಕಥೆ

ಹಾಡುಗಳನ್ನು ರಚಿಸಿದ್ದಾರೆ. ತ್ರಿಪದಿ, ಷಟ್ಪದಿ, ರಗಳೆ, ಲಾವಣಿ, ಪ್ರಶ್ನೋತ್ತರ, ಸುವ್ವಾಲಿ ಸಾಂಗತ್ಯ, ಛಂದಸ್ಸುಗಳನ್ನು ಈಕೆ ಬಳಸಿದ್ದಾರೆ. ವಿವಿಧ ಧ್ವನಿ ಲಯ ರಾಗಗಳಲ್ಲಿ ಸ್ವತಃ ಹಾಡುತ್ತಿದ್ದರು. ಭಕ್ತಿ, ಆರ್ತಭಾವ, ನೀತಿ, ಸಮರ್ಪಣಾಭಾವ ಇವರ ಕೃತಿಗಳಲ್ಲಿ ಕಂಡು ಬರುತ್ತವೆ.

6. **ಸರಸ್ವತಿ ರಾಜವಾಡೆ: (1913–1994):**

ಉಡುಪಿಯ ಸಮೀಪದ ಕಟ್ಪಂಗೇರಿಯ ಹತ್ತಿರದ ಬಳಂಜಾಲ ಎಂಬ ಹಳ್ಳಿಯಲ್ಲಿ ಸರಸ್ವತಿಯವರು 3ನೇ ಅಕ್ಟೋಬರ್ 1913ರಂದು ಜನಿಸಿದರು. ತಂದೆ ನಾರಾಯಣರಾಯರು ಹರಿಕಥೆ ದಾಸರು. ಸರಸ್ವತಿ ರಾಜವಾಡೆ ಮೂರು ವರ್ಷದವರಾಗಿದ್ದಾಗ ತಂದೆ ತೀರಿಕೊಂಡರು. ತಾಯಿ ಮತ್ತು ಅಜ್ಜಿಯ ಜೊತೆಗೆ ಸರಸ್ವತಿ ಬೆಳೆದರು. ಕೇವಲ ಎರಡನೆಯ ತರಗತಿಗೆ ವಿದ್ಯಾಭ್ಯಾಸ ಮುಗಿಯಿತು. ಹೊಟ್ಟೆ ಪಾಡಿಗಾಗಿ ಹೂ ಮಾರುವ, ಪರಿಚಾರಿಕೆ ಮಾಡುವ, ನಾಟಕಗಳಲ್ಲಿ ಅಭಿನಯಿಸುವ ಕೆಲಸ ಮಾಡಿದರು.

ಕ್ರಿ.ಶ. 1928ರಲ್ಲಿ 14 ವರ್ಷದ ಸರಸ್ವತಿಗೆ 51 ವರ್ಷದ ಅಂಬಿಕಾಪತಿರಾಯ್‌ಶಾಸ್ತ್ರಿ ರಾಜವಾಡೆಯವರೊಡನೆ ವಿವಾಹವಾಯಿತು. ಸರಸ್ವತಿ ಅವರ 2ನೇ ಹೆಂಡತಿ. ಪತಿ ಪತ್ನಿಯರ ನಡುವೆ 37 ವರ್ಷಗಳ ಅಂತರವಿತ್ತು. ಸಿಂಗಾಪುರದಲ್ಲಿ ಅಕೌಂಟೆಂಟ್ ಜನರಲ್ ಆಗಿದ್ದ ಅಂಬಿಕಾಪತಿಯವರು ಪತ್ನಿ ಸರಸ್ವತಿಯನ್ನು ಅಲ್ಲಿಗೆ ಕರೆದೊಯ್ದರು. ಅಲ್ಲಿ ಅವರ ಮನೆಯಲ್ಲಿ ಅಂದಿನ ಕಾಲದಲ್ಲೇ ಸಾವಿರಾರು ರೂಪಾಯಿ ಬಾಳುವ ಗ್ರಂಥಗಳನ್ನು ಹೊಂದಿದ ಲೈಬ್ರರಿಯಿತ್ತು. ಸರಸ್ವತಿ ಸದಾ ಓದಿನಲ್ಲಿ ಕಾಲ ಕಳೆಯುತ್ತಿದ್ದರು. ಸಿಂಗಾಪುರದಲ್ಲಿರುವಾಗಲೇ ತಮಿಳು ಕಲಿತು ಪತ್ರಿಕೆಯೊಂದಕ್ಕೆ ಕಥೆ ಬರೆದರು. ಆ ಕಥೆಗೆ ಬಹುಮಾನವೂ ಲಭಿಸಿತು. ಕನ್ನಡದಲ್ಲೂ ಲೇಖನ, ಕಥೆಗಳನ್ನು ಬರೆಯಲು ಪ್ರಾರಂಭಿಸಿದರು. ನಿವೃತ್ತಿಯ ನಂತರ ರಾಜವಾಡೆಯವರು ಬೆಂಗಳೂರಿಗೆ ಬಂದು ನೆಲೆಸಿದರು. ತಾವೇ ಸರಸ್ವತಿಯವರಿಗೆ ಪಾಠ ಹೇಳಿಕೊಟ್ಟು ಲೋವರ್ ಸೆಕೆಂಡರಿ ಪರೀಕ್ಷೆಗೆ ಓದಿಸಿದರು. ರ್‍ಯಾಂಕ್ ಪಡೆದ ಪತ್ನಿಗೆ ನಂತರದಲ್ಲಿ ಪಂಡಿತರಿಂದ ಸಂಸ್ಕೃತ, ಸಂಗೀತ ಪಾಠಗಳು ನಡೆದವು.

1ನೇ ಸೆಪ್ಟೆಂಬರ್ 1941ರಂದು ರಾಜವಾಡೆಯವರು ತೀರಿಕೊಂಡರು. ಮುಂದೆ 35 ವರ್ಷಗಳ ನಂತರ 11ನೇ ಮಾರ್ಚ್ 1976ರಂದು ಚಿಟ್ಪಾಡಿಯಲ್ಲಿ ಶಾರದಾಂಬೆಗೆ ಗುಡಿ ಕಟ್ಟಿಸಿ ಪ್ರತಿಷ್ಠಾಪನೆ ಮಾಡಿದರು. ಸೋದೆಯ ಶ್ರೀವಾದಿರಾಜರನ್ನು ಸರಸ್ವತಿಯವರು ಅನನ್ಯ ಭಕ್ತಿಯಿಂದ ಸೇವಿಸುತ್ತಿದ್ದರು. ಸೋದೆಗೆ ಹೋದಾಗಲೇ 'ಗಿರಿಬಾಲೆ' ಎಂಬ ಅಂಕಿತ ಹೊಳೆದು ಅದೇ ಅಂಕಿತದಿಂದ ಕೃತಿಗಳನ್ನು ರಚಿಸಲು ಪ್ರಾರಂಭಿಸಿದರು.

ಸರಸ್ವತಿ ರಾಜವಾಡೆಯವರ ಕೃತಿಗಳು:

- ಶ್ರೀಮಧ್ವಾವೀ ಸಮೀರ ಶ್ರೀವಾದಿರಾಜಗುರುವರಸ್ತವನಾಂಜಲಿ
- ಉಡುಪಿ ಶ್ರೀಶಾರದಮ್ಮನವರ ಸ್ತುತಿಗಳು
- ಆಹುತಿ ಇತ್ಯಾದಿ ಕಥೆಗಳು
- ಶ್ರೀಮದ್ಭಾವೀಸಮೀರ ಶ್ರೀವಾದಿರಾಜ ಗುರುವರ ಕೃಪಾತರಂಗ ಭಾಗ-1-2
- ಉಡುಪಿ ಶ್ರೀಶಾರದಾಂಬಾ ದೇವಸ್ಥಾನದ ಪೂರ್ವೇತಿಹಾಸ
- ಉಡುಪಿ ಶ್ರೀಶಾರದಮ್ಮನವರು ಭಕ್ತರಿಗೆ ಪ್ರಕಟಿಸಿದ ಮಹಿಮೆಗಳು

ಸರಸ್ವತಿ ರಾಜವಾಡೆಯವರ ಕೃತಿಗಳಲ್ಲಿ ಶ್ರೀಕೃಷ್ಣ ಮತ್ತು ಗುರು ವಾದಿರಾಜರ ಕುರಿತ ಕೀರ್ತನೆಗಳಲ್ಲಿ ಭಕ್ತಿ ಭಾವ ಹೆಚ್ಚಾಗಿ ಕಂಡು ಬರುತ್ತದೆ. ಲಾವಣಿ ಮಟ್ಟಿನಲ್ಲಿಯೂ ಒಂದು ಕೃತಿ ರಚಿಸಿದ್ದಾರೆ. ಇದರಲ್ಲಿ 52 ಪದ್ಯಗಳ ಒಂದು ದೀರ್ಘ ಕವನವಿದೆ. ಶ್ರೀಭೂತರಾಜ ಚರಿತ್ರೆಯೂ ಲಾವಣಿ ಮಟ್ಟಿನಲ್ಲಿದ್ದು 75 ಚರಣಗಳ ಚೌಪದಿಯಂತಿದೆ. ಸರಸ್ವತಿಯವರು ತುಳು ಭಾಷೆಯಲ್ಲೂ ಕೃತಿ ರಚನೆ ಮಾಡಿದ್ದಾರೆ.

7. <u>ಕೋಲಾರ ಪದ್ಮಾಬಾಯಿ ರಾಮರಾವ್: (1918–1992):</u>

ಕೋಲಾರ ಪದ್ಮಾಬಾಯಿಯವರು ಜನಿಸಿದ್ದು 1918ರಲ್ಲಿ. ಬಳ್ಳಾರಿಯಲ್ಲಿ ಜನನ. ತಾಯಿ ಸೀತಾಬಾಯಿ ತಂದೆ ಶ್ರೀಬೊಬ್ಬರ್‌ಜಂಗ್ ನಾಗೇಶರಾಯರು. ನಾಗೇಶರಾಯರು ಮೈಸೂರು ವಿಶ್ವವಿದ್ಯಾಲಯದಲ್ಲಿ ಆಂಗ್ಲ ಭಾಷಾ ಬೋಧಕರಾಗಿದ್ದರು. ಶಿವಮೊಗ್ಗ ಮತ್ತು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇವರು ಪ್ರಾಧ್ಯಾಪಕರಾಗಿದ್ದರು. ಶ್ರೀಜಯಚಾಮರಾಜೇಂದ್ರ ಒಡೆಯರ್ ನಾಗೇಶರಾಯರ ವಿದ್ಯಾರ್ಥಿಗಳೆಂದು ತಿಳಿದು ಬರುತ್ತದೆ. ಆಂಗ್ಲ ಭಾಷೆಯಲ್ಲಿ ಆಳವಾದ ಪಾಂಡಿತ್ಯ ಹೊಂದಿದ್ದುದರ ಜೊತೆಗೆ ವೇದಾದಿಗಳನ್ನು ಅಭ್ಯಸಿಸಿದ ವಿದ್ವಾಂಸರೂ ಆಗಿದ್ದರು. ಭಗವದ್ಗೀತೆಯಲ್ಲಿ ಅಪಾರ ಜ್ಞಾನವಿತ್ತು. ಪದ್ಮಾಬಾಯಿಯವರ ತವರು ಮನೆ ಹೆಸರು ಕೃಷ್ಣವೇಣಿ. ಚಿಕ್ಕ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು ಅಜ್ಜಿಯ ಲಾಲನೆಯಲ್ಲಿ ಬೆಳೆದರು. ವಿದ್ಯಾಭ್ಯಾಸ ಬೆಂಗಳೂರು, ಶಿವಮೊಗ್ಗ, ಮೈಸೂರುಗಳಲ್ಲಿ ನಡೆಯಿತು. ಲೋಯರ್ ಸೆಕೆಂಡರಿಗೆ ವಿದ್ಯಾಭ್ಯಾಸ ನಿಂತಿತು. ಸಂಗೀತ ಕಲಿತಿದ್ದರು. 1933ರಲ್ಲಿ ಕೋಲಾರ ರಾಮರಾಯರೊಂದಿಗೆ ವಿವಾಹ ನಡೆಯಿತು. ರಾಮರಾಯರು ಬಳ್ಳಾರಿಯಲ್ಲಿ ಸುಪ್ರಸಿದ್ಧ ನ್ಯಾಯವಾದಿಗಳಾಗಿದ್ದರು. ಮಧ್ವ ಶಾಸ್ತ್ರ ಪಾರಂಗತರೂ, ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡವರೂ ಆಗಿದ್ದರು. ರಾಮರಾಯರ ಮನೆಯಲ್ಲಿ ಯಾವಾಗಲೂ ಪಂಡಿತರು, ದಾಸರು, ಮಠಾಧಿಪತಿಗಳ ಸೇವೆ ನಡೆಯುತ್ತಲೇ ಇತ್ತು. ಪದ್ಮಾಬಾಯಿಯವರ ಮೊದಲ ಮಗನ ವಿಯೋಗದಿಂದ ವಿಚಲಿತರಾಗಿ ಆಧ್ಯಾತ್ಮದತ್ತ

ಹೊರಳಿದರು. ತಮ್ಮ 60ನೇ ವಯಸ್ಸಿನಲ್ಲಿ ತಂದೆಯವರಿಂದ 'ನಾಗೇಶ ಶಯನ' ಅಂಕಿತ ಪಡೆದು ಕೃತಿ ರಚನೆ ಆರಂಭಿಸಿದರು. ಚಿಕ್ಕಂದಿನಿಂದ ದಾಸರ ಪದಗಳನ್ನು ಕೇಳಿಯೇ ಬೆಳೆದವರಾದ್ದರಿಂದ ಸಾಹಿತ್ಯ ರಚನೆ ಅವರಿಗೆ ಸುಲಭವೇ ಆಗಿತ್ತು. ಪದ್ಮಾಬಾಯಿಯವರು 1992ರಲ್ಲಿ ನಿಧನರಾದರು.

ಕೋಲಾರ ಪದ್ಮಾಬಾಯಿ ತಮ್ಮ ಪ್ರತಿಯೊಂದು ಕೃತಿಗೂ ಹೂವುಗಳ ಹೆಸರನ್ನಿಟ್ಟು ಭಗವಂತನಿಗೆ ಅರ್ಪಿಸಿದ್ದಾರೆ. 'ಸುಜ್ಞಾನ ಪ್ರಸಾರ ಸುಮಾವಳಿ ಗ್ರಂಥ ಮಾಲೆ'ಯಲ್ಲಿ ಸುಮಾರು ಎಂಟು ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ. ಅವುಗಳಲ್ಲಿ ತಾರತಮ್ಯೋಕ್ತ ಭಜನ ಸುಮಮಾಲ, ಶ್ರೀಲಕ್ಷ್ಮೀಪೂಜಾ ಪಾರಿಜಾತ, ಶ್ರೀ ಸರಸ್ವತೀ ಸ್ತೋತ್ರ ಸರಸಿಜ, ಶ್ರೀತುಳಸೀ ಪೂಜಾ ಪುನ್ನಾಗ, ಶ್ರೀಗೌರಿ ಪೂಜಾ ಪಾದರಿ, ಶ್ರೀಗಂಗಾ ವಂದನ ಮಂದಾರ, ಶ್ರೀ ಹರಿಗುರುಸ್ತವನ, ಶ್ರೀರಾಘವೇಂದ್ರ ಸ್ತೋತ್ರ ಸೌರಭ, ಗೃಹಿಣಿ–ಗೃಹಸ್ಥ ಧರ್ಮ ವಿವೇಕ ಎಂಬ ಕೃತಿಗಳು ಮೊದಲ ಸಂಪುಟದಲ್ಲೂ, ಶ್ರೀರಾಮಾಯಣ ಪ್ರಸಂಗ ಕೀರ್ತನ ಸುಮಮಾಲಾ ಮತ್ತು ಶ್ರೀಗುರು ಮಧ್ವ ಚರಿತೆಯನ್ನು ದ್ವಿತೀಯ ಸಂಪುಟದಲ್ಲೂ ಪುನರ್ಮುದ್ರಣವಾಗಿದೆ.

ಮೊದಲ ಸಂಪುಟದಲ್ಲಿ ನಾನಾ ದೇವ–ದೇವತೆಯರ ಸ್ತುತಿಯಿದೆ. ಎರಡನೆಯ ಸಂಪುಟದಲ್ಲಿ ರಾಮನ ಕಥೆ ಹೇಳುವ ರಾಮಾಯಣವು 6 ಕಾಂಡಗಳಲ್ಲಿ ರಚಿತವಾಗಿದೆ. ರಾಮನ ಜನನದಿಂದ ಪಟ್ಟಾಭಿಷೇಕದವರೆಗಿನ ಕಥೆ ಇಲ್ಲಿ ಕಂಡು ಬರುತ್ತದೆ. ಅದೇ ಸಂಪುಟದಲ್ಲಿರುವ ಶ್ರೀಗುರು ಮಧ್ವ ಚರಿತೆ ಎಂಬ ಕೃತಿಯಲ್ಲಿ ಶ್ರೀಮಧ್ವಾಚಾರ್ಯರ ಚರಿತ್ರೆಯನ್ನು ಹೇಳಲಾಗಿದೆ. ಮಧ್ವ ವಿಜಯದಲ್ಲಿರುವಂತೆ ಕಥೆಗಳನ್ನು ಸರಸವಾಗಿ, ಪದಲಾಲಿತ್ಯಗಳಿಂದ ಕೂಡಿದ ಪದ್ಯ–ವಚನಗಳಿಂದ ವಿಸ್ತಾರವಾದ ಕಥೆಗಳನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಿದ್ದಾರೆ.

ತಮ್ಮ ಶ್ರದ್ಧೆ ಭಕ್ತಿಗಳಿಂದ ವೈಯಕ್ತಿಕ ಸಾಧನೆ ಮಾಡಿದ್ದೇ ಅಲ್ಲದೆ ಮಾಧ್ವ ಮಹಿಳಾ ಮಂಡಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅನೇಕ ಪೀಠಾಧಿಪತಿಗಳಿಂದ ಇವರ ಕೃತಿಗಳು ಪ್ರಶಂಸೆಯನ್ನು ಪಡೆದಿವೆ. ಇವರ ಸಾಹಿತ್ಯದಲ್ಲಿ ತಾಳ, ಛಂದಸ್ಸುಗಳ ಜ್ಞಾನ, ಭಕ್ತಿ–ಭಾವ, ಆತ್ಮ ನಿವೇದನೆಗಳು ಕಂಡು ಬರುತ್ತವೆ.

8. <u>ಸರೋಜಾಬಾಯಿ: (1920–1960):</u>

ಸರೋಜಾಬಾಯಿಯವರ ಇನ್ನೊಂದು ಹೆಸರು ಗಂಗಾ. ಇವರ ಜನನ 1920. ತಂದೆ ಮಲ್ಲೇಕಾವು ಶ್ರೀನಿವಾಸಮೂರ್ತಿ, ತಾಯಿ ವೆಂಕೂಬಾಯಿ. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ತಾವು ಹುಟ್ಟಿದ ಹಿಂದೂಪುರ ತಾಲ್ಲೂಕಿನ ಸಂತೇಬಿದನೂರಿನಿಂದ ಅಜ್ಜಿಯ ತವರಾದ ಗೌರಿಬಿದನೂರಿಗೆ ಬಂದು ನೆಲೆಸಿದರು. ಶ್ರೀಸತ್ಯವರ ಸ್ವಾಮಿಗಳ ಪೂರ್ವಾಶ್ರಮದ ಮೊಮ್ಮಗಳು ಈಕೆ. ಇವರ ವಿದ್ಯಾಭ್ಯಾಸ ಪ್ರಾಥಮಿಕ

ಶಿಕ್ಷಣಕ್ಕೇ ಮುಗಿಯಿತು. ಸಾಹಿತ್ಯ, ಸಂಗೀತದಲ್ಲಿ ಆಸಕ್ತಿಯಿತ್ತು. ಹನ್ನೆರಡನೇ ವಯಸ್ಸಿಗೆ ಗಂಗಾ ತಮ್ಮ ತಂದೆ ಮನೆಗೆ ಬಂದರು. ಅಲ್ಲಿ ಆಕೆಯ ಮಲತಾಯಿ ರಮಾಬಾಯಿ ಇವರನ್ನು ಪ್ರೀತಿಯಿಂದ ಕಾಣುತ್ತಿದ್ದರು.

ಚಿತ್ರದುರ್ಗದ ಉತ್ತರಾದಿ ಮಠದಲ್ಲಿ ಅಧಿಕಾರಿಗಳಾಗಿದ್ದ ಶ್ರೀಭೀಮಸೇನಾಚಾರ್ಯ ಮತ್ತು ಸತ್ಯಭಾಮಾಬಾಯಿಯವರ ಮಗ ಶ್ರೀರಾಜಾಚಾರ್ಯರೊಡನೆ ಇವರ ವಿವಾಹವಾಯಿತು. ಸಂಸಾರ ಜೀವನದಲ್ಲಿ ಎದುರಾದ ಕಷ್ಟದ ಸಂದರ್ಭದಲ್ಲಿ ತಮ್ಮ ಇಷ್ಟ ದೈವ ಶ್ರೀರಾಮ ಸ್ವಪ್ನದಲ್ಲಿ ಬಂದು ಅಂಕಿತ ನೀಡಿದಂತೆ ಭಾಸವಾಯಿತು. 'ಶ್ರೀರಾಮ' ಇವರ ಅಂಕಿತ, ಅವರ ಮೊದಲ ಕೃತಿ 'ಮಾತನಾಡೈ ಅಯೋಧ್ಯರಾಮ' ಎಂಬ ಕೀರ್ತನೆ. ತಮ್ಮ ನಲವತ್ತನೇ ವಯಸ್ಸಿನಲ್ಲಿ ಸರೋಜಾಬಾಯಿ ದೈವಾಧೀನರಾದರು.

ಸುಮಾರು ಇಪ್ಪತ್ತೈದು ಬಿಡಿ ಕೀರ್ತನೆಗಳಲ್ಲಿ ಲಕ್ಷ್ಮಿ, ವೆಂಕಟೇಶ, ಶ್ರೀರಾಮ, ಸರಸ್ವತಿ, ತುಳಸಿ, ಆಂಜನೇಯನ ಕುರಿತ ಕೀರ್ತನೆಗಳಿವೆ. ಶ್ರೀನಿವಾಸ ಕಲ್ಯಾಣವನ್ನು ಈಕೆ ರಚಿಸಿದ್ದಾರೆ. ಚಿಕ್ಕ, ಚಿಕ್ಕ ಹಾಡುಗಳಲ್ಲಿ ಶ್ರೀನಿವಾಸ-ಪದ್ಮಾವತಿಯರ ಕಲ್ಯಾಣ ರಚಿಸಿದ್ದಾರೆ. ಭಕ್ತಿ ಭಾವ ಇವರ ಕೀರ್ತನೆಗಳ ಮೂಲ ದ್ರವ್ಯ.

9. <u>ದೊಡ್ಡಿ ಸುಧಾಬಾಯಿ: (1923:)</u>

ಆಂಧ್ರಪ್ರದೇಶದ ಕಡಪಾದಿಂದ 40 ಕಿಲೋಮೀಟರ್ ದೂರದಲ್ಲಿರುವ ಕುಂಪಣಿಪುರದಲ್ಲಿ ಸುಧಾಬಾಯಿ ಜನಿಸಿದರು. ಡಿಸೆಂಬರ್ 1923ರಲ್ಲಿ ಜನಿಸಿದ ಇವರ ಮೂಲ ಹೆಸರು ಕಪಿಲಾಬಾಯಿ. ನೆಲ್ಲೂರು ನಿವಾಸಿಗಳಾದ ವೇಮಗಂಟಿ ಬದರೀನಾರಾಯಣರಾಯರು ಮತ್ತು ಸುಂದರಮ್ಮ ಇವರ ತಂದೆ-ತಾಯಿಗಳು. ಇವರ ತಂದೆ ಬ್ರಿಟಿಷರ ಕಾಲದಲ್ಲಿ ಕಮೀಷನರ್ ಆಗಿದ್ದವರು. ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದ ಇವರು ಸುಧಾ ಪಂಡಿತರು. ಕಪಿಲಾಬಾಯಿಯವರ ಮನೆಯಲ್ಲಿ ಸಾಂಪ್ರದಾಯಿಕ ವಾತಾವರಣವಿತ್ತು. ಅನೇಕ ಪೀಠಾಧಿಪತಿಗಳು, ವಿದ್ವಾಂಸರು, ಪುರಾಣಿಕರು ಇವರ ಮನೆಯಲ್ಲಿ ಪಾಠ-ಪ್ರವಚನಗಳನ್ನು ನಡೆಸುತ್ತಿದ್ದರು. ಇಂತಹ ಪರಿಸರದಲ್ಲಿ ಬೆಳೆದ ಕಪಿಲಮ್ಮ ಸಹಜವಾಗಿಯೇ ದಾಸರ ಪದಗಳನ್ನು, ಹಾಡು-ಹಸೆ ಕಲಿಯುತ್ತಾ ಬೆಳೆದರು. ಕಡಪ ಜಿಲ್ಲೆಯ ರಾಜಂಪೇಟ್ ತಾಲ್ಲೂಕಿನಲ್ಲಿ ಐದನೇ ತರಗತಿಯವರೆಗೆ ತೆಲುಗು ಮಾಧ್ಯಮದಲ್ಲಿ ಶಿಕ್ಷಣ ಪಡೆದರು.

ಬಳ್ಳಾರಿಯ ಹೆಸರಾಂತ ದೊಡ್ಡಿ ಮನೆತನದ ಗೋವಿಂದರಾಯರ ಮಗ ಗುಂಡೂರಾಯರೊಂದಿಗೆ 1935ರಲ್ಲಿ ವಿವಾಹವಾಯಿತು. ವಿವಾಹದ ನಂತರ ಕಪಿಲಾಬಾಯಿ ಸುಧಾಬಾಯಿಯಾದರು. ಗುಂಡೂರಾಯರು ತಮ್ಮ ತಂದೆಯಂತೆ ಸುಧಾದಿ ಗ್ರಂಥಗಳನ್ನು ಅಧ್ಯಯನ ಮಾಡಿದ್ದರು. ವೃತ್ತಿಯಲ್ಲಿ ಹೆಸರಾಂತ ವಕೀಲರು. ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಅಲ್ಲಂ ಕರಿಬಸಪ್ಪನವರ ಜೊತೆಯಲ್ಲಿ

ಸಕ್ರಿಯವಾಗಿ ಪಾಲ್ಗೊಂಡಿದ್ದರು. ಬಳ್ಳಾರಿ ಕಾಂಗ್ರೆಸ್ ಕಮಿಟಿ, ಬಳ್ಳಾರಿ ಬಾರ್ ಅಸೋಸಿಯೇಷನ್ನಿನ ಅಧ್ಯಕ್ಷರಾಗಿದ್ದರು. ಸುಧಾಬಾಯಿಯವರು ಅನೇಕ ವ್ರತಗಳನ್ನು ಆಚರಿಸುತ್ತಾ ದಾಸ ಸಾಹಿತ್ಯ ರಚನೆ ಮಾಡುತ್ತಾ ತಮ್ಮ 7 ಜನ ಮಕ್ಕಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. 11ನೇ ಫೆಬ್ರವರಿ 1997ರಲ್ಲಿ ಪತಿ ವಿಯೋಗದ ನಂತರ ಸುಧಾಬಾಯಿಯವರ ಒಲವು ಭಗವಂತನ ಕಡೆ ಹೆಚ್ಚಾಯಿತು.

ಓರವಾಯಿ ಲಕ್ಷ್ಮೀದೇವಮ್ಮ ಇವರ ದೂರದ ಸಂಬಂಧಿ. ತಮ್ಮ ಮನೆಯ ಗುರುಗಳಾದ ಘೂಳೀ ಕೃಷ್ಣಮೂರ್ತ್ಯಾಚಾರ್ಯರಿಂದ 'ಕಪಿಲನಾಮಕ' ಅಂಕಿತ ಪಡೆದರು. 350ಕ್ಕೂ ಹೆಚ್ಚು ದೇವರ ನಾಮಗಳನ್ನು ರಚಿಸಿದ್ದಾರೆ. ಹರಿಗುರು ಭಜನ ಸುಧಾ, ಕ್ಷರಾಕ್ಷರಕ್ಕೆ ಉತ್ತಮ ಪುರುಷ, ಶ್ರೀಹರಿ ಮಹಿಮೆ, ವ್ರತ ಪಾರಿಜಾತ, ಮಹಾಭಾರತ, ಉಪ ಗೀತಿಕಾ ಮಾಲೆಗಳು, ಇವರ ಪದ್ಯ ರೂಪದ ಕೃತಿಗಳು. ತೀರ್ಥ ಕ್ಷೇತ್ರ ಮಹಿಮೆ, ಷೋಡಷಕರ್ಮಗಳು, ಪತಿವ್ರತಾ ಶಿರೋಮಣಿಗಳ ಕಥೆಗಳು, ವೈಷ್ಣವ ಸ್ತ್ರೀಧರ್ಮಗಳು, ಶ್ರೀಕೃಷ್ಣ ಚರಿತ ಮಧುರಾಮೃತ, ಶ್ರೀಮಧ್ವಲೀಲಾಮೃತ ಮತ್ತು ಭಾಗವತ ಧರ್ಮಗಳು ಇವರ ಗದ್ಯ ಬರಹ. ಓರೆವಾಯಿ ಲಕ್ಷ್ಮೀ ದೇವಮ್ಮನವರ ಕೃತಿ ಸಂಗ್ರಹ, ಭಕ್ತಿ ಗೀತೆಗಳು ಎಂಬ ಕ್ಯಾಸೆಟ್ ಬಿಡುಗಡೆಯಾಗಿದೆ. ಸರಳ ಕನ್ನಡದಲ್ಲಿ ಕೀರ್ತನೆ, ಸುಳಾದಿ, ಉಗಾಭೋಗಗಳನ್ನು, ಸಂಪ್ರದಾಯದ ಹಾಡುಗಳನ್ನೂ ರಚಿಸಿದ್ದಾರೆ.

ಸುಧಾಬಾಯಿಯವರ ಕೀರ್ತನೆಗಳಲ್ಲಿ ಉಪಮೆ, ರೂಪಕಗಳು ಕಂಡು ಬರುತ್ತವೆ. ಕರುಣ, ಹಾಸ್ಯ ರಸಗಳನ್ನು ಕಾಣಬಹುದಾಗಿದೆ. ತ್ರಿಪದಿ, ಸಾಂಗತ್ಯ, ಪ್ರಾಸಾನುಪ್ರಾಸಗಳು, ಷಟ್ಪದಿ, ಸೀಸಪದ್ಯ, ಇತ್ಯಾದಿ ಛಂದಸ್ಸುಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಆಡುಭಾಷೆ, ತೆಲುಗು ಪದಗಳು ಅಲ್ಲಲ್ಲಿ ಬಳಕೆಯಾಗಿದೆ.

ಅನೇಕ ಸಂಘ ಸಂಸ್ಥೆಗಳಲ್ಲಿ ಸುಧಾಬಾಯಿ ಪದಾಧಿಕಾರಿಯಾಗಿ ಸೇವೆಗೈದಿದ್ದಾರೆ. 'ಮಾಧ್ವ ಮಹಿಳಾ ಚೂಡಾಮಣಿ', 'ಸುಸಂಸ್ಕೃತ ಸಂಪ್ರದಾಯ ಕೋವಿದೆ' ಎಂಬ ಬಿರುದುಗಳು ಇವರಿಗೆ ಸಂದಿವೆ. ಸುಧಾಬಾಯಿಯವರಿಗೆ ಮನೆಯಲ್ಲಿನ ಸಾಂಪ್ರದಾಯಿಕ ಸನ್ನಿವೇಶ ಮತ್ತು ಹರಪನಹಳ್ಳಿ ಭೀಮವ್ವ ಮತ್ತು ಓರವಾಯಿ ಲಕ್ಷ್ಮೀದೇವಮ್ಮನವರ ಪರಿಚಯ ಪ್ರಭಾವದಿಂದ ಸುಧಾಬಾಯಿ ದಾಸ ಮಹಿಳೆಯಾಗಿ ರೂಪುಗೊಂಡರು.

10. <u>ಶ್ರೀಮತಿ ಡಿ.ಎನ್. ರಮಾಬಾಯಿ: (1925-1994):</u>

ರಮಾಬಾಯಿ 8ನೇ ಜನವರಿ 1925ರಂದು ಮೈಸೂರಿನಲ್ಲಿ ಜನಿಸಿದರು. ತಾಯಿ ರತ್ನಮ್ಮ, ತಂದೆ ಕೃಷ್ಣಮೂರ್ತಿ. ಇವರ ಪತಿ ಶ್ರೀ.ಡಿ.ಎನ್. ನರಸಿಂಹಮೂರ್ತಿ. ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿ ಸಹಜವಾಗಿ ಆಧ್ಯಾತ್ಮದತ್ತ ಆಸಕ್ತಿ ಬೆಳೆಸಿಕೊಂಡರು. ತಮ್ಮ ಸೋದರ ಮಾವ ಅರಸೀಕೆರೆ ಶ್ರೀಕೃಷ್ಣರಾವ್ ಅವರ ಪ್ರೋತ್ಸಾಹದಿಂದ ಬಾಲ್ಯದಿಂದಲೇ ಹರಿದಾಸರ ಹಾಡುಗಳು, ಕುಮಾರವ್ಯಾಸ ಭಾರತ, ಶ್ರೀನಿವಾಸ

ಕಲ್ಯಾಣಗಳನ್ನು ಹಾಡಲು ಕಲಿತರು. ಸೋಸಲೆ ವ್ಯಾಸರಾಜ ಮಠದ ಶ್ರೀವಿದ್ಯಾಪ್ರಸನ್ನ ತೀರ್ಥರಿಂದ ದೀಕ್ಷೆ ಪಡೆದು ಹರಿಕಥಾಮೃತಸಾರವನ್ನು ಅರ್ಥ ಸಹಿತ ವ್ಯಾಖ್ಯಾನಿಸುವ ಜ್ಞಾನ ಸಂಪಾದಿಸಿದರು. ಶ್ರೀಗುರುಗೋವಿಂದ ವಿಠಲ ದಾಸರಿಂದ 'ಶ್ರೀಹರಿತ್ರಿವಿಕ್ರಮವ್ಯಾಸ ವಿಠಲ' ಅಂಕಿತವನ್ನು ಪಡೆದರು. ಹರಿಕಥಾಮೃತ ಸಾರವನ್ನು ಆಧರಿಸಿ ಸಹಸ್ರನಾಮಾವಳಿಃ ಎಂಬ ಏಕೈಕ ಗ್ರಂಥವನ್ನು ಇವರು ರಚಿಸಿದ್ದಾರೆ. ಇದನ್ನು ಶ್ರೀಮತಿ ಪರಿಮಳ ವೇಣುಗೋಪಾಲ್ (ಶೇಷನುತಗೋಪ ವಿಠಲಾಂಕಿತರು) ಪ್ರಕಟಿಸಿದ್ದಾರೆ. ಹೆಚ್ಚು ಕೃತಿಗಳನ್ನು ರಚಿಸದಿದ್ದರೂ ಹಿಂದಿನ ಹರಿದಾಸ ಸಾಹಿತ್ಯವನ್ನು ಉಳಿಸಿ ಬೆಳೆಸುವ ಕಾರ್ಯವನ್ನು ರಮಾಬಾಯಿ ನಡೆಸಿದರು. 4ನೇ ಜೂನ್ 1994ರಂದು ನಿಧನರಾದರು.

11. ರುಕ್ಮಿಣಿ ಗಿರಿಮಾಜಿ: (1927–2012):

ರುಕ್ಮಿಣಿ ಗಿರಿಮಾಜಿಯವರು 1927ರಲ್ಲಿ ಜನಿಸಿದರು. ತಂದೆ ಕೋಲಾರದ ಜಯರಾವ್ ಗಿರಿಮಾಜಿ. ತಾಯಿ ವೆಂಕೂಬಾಯಿ. ರುಕ್ಮಿಣಿ ಗಿರಿಮಾಜಿಯವರು ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು. ವಿವಾಹ ಮಾಡಿಕೊಳ್ಳದೆ ಹಾಗೆಯೇ ಜೀವನ ನಡೆಸಿದರು. ಕಾರ್ಪೊರೇಷನ್ ಹೈಸ್ಕೂಲಿನಲ್ಲಿ ಶಿಕ್ಷಕಿಯಾಗಿದ್ದರು. ಹಿಂದಿಯಲ್ಲಿ ವಿದ್ವತ್, ಕನ್ನಡದಲ್ಲಿ ಎಂ.ಎ., ಪದವಿಗಳನ್ನು ಪಡೆದಿದ್ದರು. ಪಾಟ್ನಾ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. 'ರುಕ್ಮಿಣೀ ವರದ' ಅಂಕಿತದಲ್ಲಿ ಭಕ್ತಿ ಪ್ರದಾನವಾದ ಕೀರ್ತನೆಗಳನ್ನು ರಚಿಸಿದ್ದಾರೆ. ಪಾಲಿಯಿಂದ ಹಿಂದಿಗೆ ಗೌತಮ ಬುದ್ಧನ ಚರಿತ್ರೆಯನ್ನು 8–10 ಸಂಪುಟಗಳಲ್ಲಿ ಅನುವಾದಿಸಿದ್ದಾರೆ. ಪೇಜಾವರ ಶ್ರೀಗಳ ಭಗವದ್ಗೀತಾಸಾರ ಕೃತಿಯನ್ನು ಹಿಂದಿಗೆ ಭಾಷಾಂತರ ಮಾಡಿದ್ದಾರೆ. ತತ್ವವಾದ ಪತ್ರಿಕೆಯಲ್ಲಿ 15 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. 'ಸದ್ವೈಷ್ಣವ ಮಹಿಳಾ ಹರಿದಾಸರು' ಎಂಬ ಗ್ರಂಥವನ್ನು ಬರೆದು ಪ್ರಕಟಿಸಿದ್ದಾರೆ. 4ನೇ ಮೇ 2012ರಂದು ರುಕ್ಮಿಣಿ ಗಿರಿಮಾಜಿಯವರು ವಿಧಿವಶರಾದರು.

12. ಗೋದಾವರಿ ಕುಲಕರ್ಣಿ: (1928–2004):

ಗೋದಾವರಿಬಾಯಿಯವರು ಹುಟ್ಟಿದ್ದು 1928ರಲ್ಲಿ. ಗೋಕಾಕದಲ್ಲಿ ಇವರ ಜನನ. ತಂದೆ ನಾರಾಯಣರಾವ್ ಭೀಮರಾವ್ ಕಲಮದಾನಿ. ತಾಯಿ ಅಂಬಕ್ಕ (ಮಧುರಾಬಾಯಿ). ತಂದೆ ಅರಣ್ಯ ಸಂರಕ್ಷಣಾಧಿಕಾರಿಗಳಾಗಿದ್ದರು. ನಾರಾಯಣರಾಯರು 'ಸಿರಿ ವಿಠಲ' ಅಂಕಿತದಿಂದ ದಾಸ ಸಾಹಿತ್ಯ ರಚನೆ ಮಾಡಿದ್ದಾರೆ. ಮಗಳು ಗೋದಾವರಿಗೆ 'ಸಿರಿ ನಾರಾಯಣ' ಅಂಕಿತವನ್ನು ಅವರೇ ನೀಡಿದ್ದಾರೆ. ಶಾಲೆಯಲ್ಲಿ ಕಲಿಯುತ್ತಿರುವಾಗಲೇ ಒಂದು ದಿನ ಗಣಪತಿಯ ಕುರಿತ ಕೀರ್ತನೆಯು ಸ್ಫುರಿಸಿ ಅಂದಿನಿಂದ ದಾಸ ಸಾಹಿತ್ಯ ರಚನೆ ಆರಂಭಿಸಿದರು.

ಗೋದಾವರಿಬಾಯಿಗೆ 17ನೇ ವಯಸ್ಸಿನಲ್ಲಿ ಕುಲಕರ್ಣಿ ರಂಗರಾಯರೊಡನೆ ವಿವಾಹವಾಯಿತು. ರಂಗರಾಯರು ಸಂಗೀತ ಕಲಾವಿದರು. ತಮ್ಮ ಪತ್ನಿಗೆ ಎಲ್ಲ ರೀತಿಯ ಪ್ರೋತ್ಸಾಹ ನೀಡಿ ದಾಸ ಸಾಹಿತ್ಯ ರಚಿಸಲು ನೆರವಾದರು. ಪಂಡಿತ ಮಾಹುಲಿ ಗೋಪಾಲಾಚಾರ್ಯ, ವರಕವಿ ಡಾ॥ ದ.ರಾ. ಬೇಂದ್ರೆ, ಕೀರ್ತನ ಕೇಸರಿ ಶ್ರೀ ನಿಜಾಮಪೂರಕರ ಇವರ ಕೃತಿಗಳನ್ನು ನೋಡಿ ಮೆಚ್ಚಿದ್ದರು.

ಗಣಪತಿ, ತಾರತಮ್ಯೋಕ್ತ ಕೀರ್ತನೆಗಳು, ಭಾರತ ಮಾತೆ, ಶಂಕರಾಚಾರ್ಯರುಗಳನ್ನು ಕುರಿತು ಕೀರ್ತನೆಗಳನ್ನು ರಚಿಸಿದ್ದಾರೆ. ತಮ್ಮ ಕುಲ ಗುರುಗಳಾದ ಶ್ರೀ ರಾಘವೇಂದ್ರ ಗುರುಗಳ ಕುರಿತು ಸುಮಾರು ನಲವತ್ತೆಂಟು ಕೀರ್ತನೆಗಳನ್ನು ರಚಿಸಿದ್ದಾರೆ.

ಗೋದಾವರಿ ಬಾಯಿಯವರ ಕೀರ್ತನೆಗಳ ಸಂಗ್ರಹ 'ಭಕ್ತಿ ಗೀತೆಗಳು' ಕೃತಿಯು 1967ರಲ್ಲಿ ಮುಂಬಯಿಯಲ್ಲಿ ಮುದ್ರಿತವಾಗಿತ್ತು. ಇತ್ತೀಚೆಗೆ ಅಂದರೆ 2010ರಲ್ಲಿ ಅವರ ಸ್ನೇಹಿತೆ ಶ್ರೀಮತಿ ವಿಜಯಾ ಕುಲಕರ್ಣಿಯವರು ಪ್ರಕಟಿಸಿದ್ದಾರೆ.

ಸಾಮಾನ್ಯವಾಗಿ ದಾಸರ ಪದಗಳು ಕರ್ನಾಟಕ ಸಂಗೀತದಲ್ಲಿರುವ ರಾಗಗಳಿಂದ ನಿರ್ದೇಶಿಸಲ್ಪಟ್ಟಿರುತ್ತವೆ. ಆದರೆ ಗೋದಾವರಿಯವರು ಉತ್ತರಾದಿ ಸಂಗೀತದ ರಾಗ, ತಾಳಗಳನ್ನು ತಮ್ಮ ಕೀರ್ತನೆಗಳಿಗೆ ನಿರ್ದೇಶಿಸಿದ್ದಾರೆ. ಹಿಂದೂಸ್ತಾನಿ ಮಟ್ಟುಗಳ ಹಾಡುಗಳನ್ನು ಈಕೆ ರಚಿಸಿದ್ದಾರೆ. ಗೋದಾವರಿ ಬಾಯಿ ರಂಗರಾವ್ ಕುಲಕರ್ಣಿಯವರು 5–4–2004ರಂದು ನಿಧನರಾದರು.

13. <u>ಸೀತಾಬಾಯಿ ರಾ. ಪುರೋಹಿತ: (1928):</u>

ಕೊಪ್ಪಳ ಜಿಲ್ಲೆಯ ಯಲಬುರ್ಗಿಯ ಶ್ರೀಹೇಮಾದ್ರಿ ಗೋವಿಂದಾಚಾರ್ಯ ಹಾಗೂ ಶ್ರೀಮತಿ ರಾಧಾಬಾಯಿಯವರ ಒಬ್ಬಳೇ ಮಗಳು ಸುಬ್ಬಕ್ಕ 1928ರಲ್ಲಿ ಜನಿಸಿದರು. ಸುಬ್ಬಕ್ಕ ಎರಡು ವರ್ಷದವರಿದ್ದಾಗ ತಂದೆ ವಿಧಿವಶರಾದರು. ತಾಯಿಯೊಂದಿಗೆ ಸೋದರ ಮಾವನವರಾದ ಶ್ರೀರಂಗಾಚಾರ್ಯ ಆಚಾರ್ ಅವರ ಆಶ್ರಯಕ್ಕೆ ಬಂದು ಕುಷ್ಟಗಿಯಲ್ಲಿ ನೆಲೆಸಿದರು. ಎರಡನೆಯ ತರಗತಿಯವರೆಗೆ ವಿದ್ಯಾಭ್ಯಾಸ ದೊರೆಯಿತು. ಹಿರಿಯರು ಹಾಡುವ ಉದಯರಾಗ, ದೇವರ ನಾಮ, ಹಾಡುಗಳನ್ನು ಕೇಳುತ್ತಾ ತಾವೂ ಕಲಿತು ಹಾಡುತ್ತಾ ಬೆಳೆದರು.

1946ರಲ್ಲಿ ಹನುಮ ಸಾಗರದ ಶ್ರೀರಾಮಾಚಾರ್ಯ ಪುರೋಹಿತರವರೊಡನೆ ವಿವಾಹವಾಯಿತು. ಅತ್ತೆ ಮನೆಯಲ್ಲಿ ಸೀತಾಬಾಯಿ ಎಂದು ಹೆಸರಿಸಲಾಯಿತು. ಶ್ರೀರಾಮಾಚಾರ್ಯರು ಮಹಾನ್ ದೇಶ ಭಕ್ತರು, ಸ್ವಾತಂತ್ರ್ಯ ಯೋಧರು, ಜೈಲು ಶಿಕ್ಷೆಯನ್ನು ಅನುಭವಿಸಿದ್ದವರು. ನಾಲ್ಕು ಮಕ್ಕಳನ್ನು ಸೀತಾಬಾಯಿ ಪಡೆದರು.

ಬಾಲ್ಯದಲ್ಲಿ ಪಡೆದ ಮನೆಯ ಶಿಕ್ಷಣದಿಂದ ರಚನಾ ಕಲೆ ಒಲಿಯಿತು. ಹನುಮಸಾಗರದ ಶ್ರೀನಿವಾಸನೇ ಅವರ ಆರಾಧ್ಯ ದೈವ. ಹಾಗಾಗಿ 'ಹರಿಕಡಲಗಿರೀಶ' ಎಂಬ ಅಂಕಿತ ತಾನಾಗಿಯೇ ಹೊಳೆಯಿತು. ಈ ಅಂಕಿತವು ಮನದಲ್ಲಿ ಹೊಳೆದ ಕ್ಷಣದಲ್ಲಿ ಕನಕಗಿರಿಯ ಪ್ರಾಣದೇವರ ಪ್ರಸಾದ ಲಭಿಸಿ ಅದನ್ನೇ ದೇವರ ಚಿತ್ತವೆಂದು ಭಾವಿಸಿ ಕೃತಿ ರಚನೆಗೆ ಪ್ರಾರಂಭಿಸಿದರು.

250ಕ್ಕೂ ಹೆಚ್ಚು ಹಾಡುಗಳನ್ನು ಸೀತಾಬಾಯಿ ರಚಿಸಿದ್ದಾರೆ. ತೀರ್ಥಕ್ಷೇತ್ರ ಸ್ತುತಿಗಳು, ಅಲ್ಲಿನ ಸ್ಥಳ ಮಹಾತ್ಮೆ, ಅವತಾರಗಳು, ದಾಸರು, ಯತಿಗಳು, ದೇವತಾ ತಾರತಮ್ಯ ರಚನೆಗಳ ಜೊತೆಗೆ ಮುಯ್ಯದ ಪದ, ಜೋಗುಳ, ಲಾಲಿ ಮುಂತಾದ ಪದಗಳು, ನಿಂದಾಸ್ತುತಿಗಳು, ದಶಾವತಾರ, ಲಕ್ಷ್ಮೀದೇವಿಯ ವಿವಿಧ ಅವತಾರಗಳ ಸ್ತುತಿಯನ್ನು ಮಾಡಿದ ಪದಗಳನ್ನು ರಚಿಸಿದ್ದಾರೆ. ದಿನ ನಿತ್ಯದ ಆಡು ಭಾಷೆಯಲ್ಲಿ ರಚನೆ ಮಾಡಿದ್ದಾರೆ. ಇವರ ಕೃತಿಗಳಲ್ಲಿನ ಪದ ಬಳಕೆ ಇವರ ಅಧ್ಯಯನದ ಹರಹನ್ನು ಸೂಚಿಸುತ್ತದೆ. 'ಹರಿ ಕಡಲಾಮೃತ' ಭಾಗ–1 ಮತ್ತು 2ರಲ್ಲಿ ಇವರ ಕೃತಿಗಳು ಪ್ರಕಟವಾಗಿವೆ. ಇವರ ಕೃತಿಗಳಲ್ಲಿ ಪುರಂದರದಾಸರ ಪ್ರಭಾವವಿದೆ.ಪುರಂದರದಾಸರ 'ಕಾಗದ ಬಂದಿದೆ ನಮ್ಮ ಕಮಲನಾಭನದು' ಎನ್ನುವ ಧಾಟಿಯಲ್ಲಿ 'ಓಲೆ ಬಂದಿದೆ ನಮ್ಮ ನೀಲವರ್ಣನದು' ಎಂಬ ಹಾಡನ್ನು ರಚಿಸಿದ್ದಾರೆ. ಹಾಗೆಯೇ ಪುರಂದರದಾಸರಂತೆ ತಾರತಮ್ಯ ಕೃತಿಯನ್ನು ರಚಿಸಿದ್ದಾರೆ. 'ಸತತ ಗಣನಾಥ' ಎಂಬ ಹಾಡಿನಲ್ಲಿ ಪುರಂದರದಾಸರು ಆರೋಹಣ ಕ್ರಮದಲ್ಲಿ ತಾರತಮ್ಯ ಹೇಳಿದ್ದರೆ ಸೀತಾಬಾಯಿ 'ಸಿರಿರಮಣನಾ ಕರುಣೆ ನಮಗಾಗಲಿ' ಎಂಬ ಕೃತಿಯಲ್ಲಿ ಅವರೋಹಣ ಕ್ರಮದಲ್ಲಿ ತಾರತಮ್ಯ ಹೇಳಿದ್ದಾರೆ.

14. <u>ಉಡುಪಿ ಯಶೋದಮ್ಮ: (1931–2010):</u>

ಯಶೋದಮ್ಮನವರು ಹುಟ್ಟಿದ್ದು 1931ರಲ್ಲಿ. ತಂದೆ ಉಡುಪಿಯ ಪ್ರಸಿದ್ಧ ವಕೀಲರೂ, ರಾಜ್ಯ ಪ್ರಶಸ್ತಿ ವಿಜೇತರೂ ಆಗಿದ್ದ ಶ್ರೀ ಕೆ.ಎಲ್. ಐತಾಳರು. ಬಾಲ್ಯದಲ್ಲಿ ತಮ್ಮ ಮಾತಾಪಿತರಿಂದ ಸಂಪ್ರದಾಯ. ಆಚರಣೆಗಳ ಬಗ್ಗೆ ತಿಳುವಳಿಕೆ ಪಡೆದರು. ಉಡುಪಿಯ ಸೈಂಟ್ ಸಿಸಿಲೀಸ್ ಕಾನ್ವೆಂಟಿನಲ್ಲಿ 9ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದರು. ತಮ್ಮ 9ನೇ ವಯಸ್ಸಿನಿಂದಲೇ ಶಾಸ್ತ್ರೀಯ ಸಂಗೀತವನ್ನು ಕಿನ್ನಿಗೋಳಿಯ ದಿ. ಪದ್ಮನಾಭ ಆಚಾರ್ಯರಲ್ಲಿ ಮತ್ತು ದಿ. ನರಸಿಂಹ ಸೇರೆಗಾರರಲ್ಲಿ ಕಲಿತರು. ಕಡಿಯಾಳಿ ಕಾಳುಭಟ್ಟರಲ್ಲಿ ಶಾಸ್ತ್ರೀಯ ನೃತ್ಯ, ಕಿನ್ನಿಮೂಲ್ಕಿ ಪದ್ಮನಾಭ ಆಚಾರ್ಯರಲ್ಲಿ ಹರಿಕಥೆಯನ್ನು ಕಲಿತರು. 14ನೇ ವಯಸ್ಸಿನಲ್ಲಿ ಗುಂಡಿಬೈಲ್ ಶಿವರಾಮ ಸರಾಫರ ಮಗ ಲಕ್ಷ್ಮೀನಾರಾಯಣ ಭಟ್ಟರೊಡನೆ ವಿವಾಹವಾಯಿತು.

ಫಲಿಮಾರು ಮಠಾಧೀಶರಾದ ಶ್ರೀವಿದ್ಯಾಮಾನ್ಯ ತೀರ್ಥರು ಇವರಿಗೆ 'ಯಶೋದೇಶ ಕೃಷ್ಣ' ಅಂಕಿತ ನೀಡಿದರು. ದಾಸ ಸಾಹಿತ್ಯ ರಚನೆಯ ಜೊತೆಗೆ ಯಶೋದಮ್ಮ ಹಾರ್ಮೋನಿಯಂ ಬಾರಿಸುತ್ತಾ ಹಲವು

ಕಡೆಗಳಲ್ಲಿ ಹೆಣ್ಣು ಮಕ್ಕಳಿಗೆ ತಾಳದೊಂದಿಗೆ ಭಜನೆ, ಸಂಗೀತ ಕಲಿಸುತ್ತಿದ್ದರು. ಹರಿಕಥೆ ಕಾರ್ಯಕ್ರಮಗಳನ್ನು ಮಾಡುತ್ತಿದ್ದರು. ಸುಮಾರು 40 ವರ್ಷಗಳು ಉಡುಪಿ ಶ್ರೀಕೃಷ್ಣ ಮಠದಲ್ಲಿ ಮಹಿಳೆಯರಿಗೆ ತಾರತಮ್ಯ ಭಜನೆ, ಲಕ್ಷ್ಮೀ ಶೋಭಾನೆಯನ್ನು ಕಲಿಸುತ್ತಿದ್ದರು. 'ಹರಿಕಥಾಪ್ರವೀಣೆ', 'ಹರಿಕಥಾರಂಜನಿ' ಪ್ರಶಸ್ತಿಗಳನ್ನು ಪಡೆದರು.

ಶ್ರೀವಾದಿರಾಜ ಗುಣ ಮಹಿಮೆ – ಮಣಿಮಾಲಾ ಸ್ತೋತ್ರ, ಶ್ರೀಧರ್ಮಸ್ಥಳ ಮಂಜುನಾಥನ ಭಕ್ತಿ ಗೀತೆಗಳು ಪ್ರಕಟವಾಗಿವೆ ಮತ್ತು ಭಕ್ತ ಕುಚೇಲ, ದ್ರೌಪದಿ ಅಕ್ಷಯಾಂಬರ, ಚಂದ್ರಹಾಸ ಚರಿತ್ರೆ, ಭಕ್ತ ಪ್ರಹ್ಲಾದ, ಶ್ರೀಗುರುರಾಘವೇಂದ್ರ ಚರಿತ್ರೆ, ಶ್ರೀಕೃಷ್ಣ ಲೀಲೆ, ಭಕ್ತೆ ಶಬರಿ ಇವು ಕನ್ನಡ–ತುಳು ಭಾಷೆಯ ಹರಿಕಥೆಗಳು.

15. <u>ಮಂಜುಳಾ ಸುಬ್ಬರಾವ್: (1933–2009):</u>

ಮಂಜುಳಾರವರು ಕ್ರಿ.ಶ. 1933ರಲ್ಲಿ ತಿಪಟೂರಿನಲ್ಲಿ ಜನಿಸಿದರು. ತಂದೆ ವೆಂಕಟರಾವ್, ತಾಯಿ ಸುಶೀಲಾಬಾಯಿ. ಇಬ್ಬರು ಸಹೋದರಿಯರು ಹಾಗೂ ಒಬ್ಬ ಸಹೋದರರೊಡನೆ ಜನಿಸಿದ ಇವರು ಮೊದಲನೆಯ ಮಗಳು. ಮಂಜುಳಾರವರು ಎಸ್.ಎಸ್.ಎಲ್.ಸಿ.ವರೆಗೆ ಶಿಕ್ಷಣ ಪಡೆದಿದ್ದರು. ಇವರ ತಾಯಿಯಿಂದ ಹಾಡನ್ನು ಕಲಿಯುತ್ತಿದ್ದರು. ತಾಯಿಯು ಇವರ ಎಲ್ಲ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಶಿಕ್ಷಕಿಯಾಗಿ 30 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಮರಾಠಿ, ಆಂಗ್ಲ, ಹಿಂದಿ, ಮುಂತಾದ ಭಾಷೆಗಳನ್ನು ಕಲಿತು ಕೃತಿ ರಚನೆ ಮಾಡುವಷ್ಟು ಪಾಂಡಿತ್ಯ ಇತ್ತು.

ತಮ್ಮ 27ನೇ ವಯಸ್ಸಿನಲ್ಲಿ ತಂಜಾವೂರಿನ ಕಾಶೀಕರ್ ಸುಬ್ಬರಾಯರೊಡನೆ ವಿವಾಹವಾಯಿತು. ಸುಬ್ಬರಾಯರು ಎಚ್.ಎಂ.ಟಿ.ಯಲ್ಲಿ ಸೂಪರಿಂಟೆಂಡೆಂಟ್ ಆಗಿದ್ದರು. ಮಂಜುಳಾ ಅವರು ಪೇಜಾವರ ಮಠಾಧೀಶರಾದ ಶ್ರೀವಿಶ್ವೇಶತೀರ್ಥರಿಂದ 'ಅಜವಿಠಲ' ಅಂಕಿತ ಪಡೆದು ಸಾಹಿತ್ಯ ರಚನೆ ಮಾಡಿದರು. ಮಂಜುಳಾ ಸುಬ್ಬರಾವ್‌ರವರು ಸುಮಾರು 46 ಗ್ರಂಥಗಳನ್ನು ರಚಿಸಿದ್ದಾರೆ. ತಮ್ಮ ಕೃತಿಗಳನ್ನು ತಾವೇ ಪ್ರಕಟಿಸಿ ಉಚಿತವಾಗಿ ಗ್ರಂಥ ದಾನ ನೀಡುವ ಸಂಪ್ರದಾಯವನ್ನು ಪಾಲಿಸುತ್ತಿದ್ದರು. ಅವರ ಪ್ರಕಟಿತ ಪುಸ್ತಕಗಳು:

ಪ್ರಹ್ಲಾದ ಚರಿತ್ರೆ, ಶ್ರೀವೆಂಕಟೇಶ ಕಲ್ಯಾಣ, ರುಕ್ಮಿಣೀ ಶೋಭನ, ಟೀಕಾರ್ಯ ಚಂದ್ರಿಕಾ, ಶ್ರೀರಾಮಚರಿತಾಮೃತಂ, ಶ್ರೀಮಧ್ವ ಮಹಿಮ ಪ್ರಕಾಶಿಕಾ, ಶ್ರೀವಿಜಯದಾಸ ವೈಭವ, ರುಕ್ಮಿಣಿ ಪರಿಣಯ, ಶ್ರೀರಾಘವೇಂದ್ರ ಪಂಚರತ್ನ ಮಾಲಿಕ, ಶ್ರೀವಾದಿರಾಜ ದೀಪಿಕ, ಶ್ರೀಮದ್ಭಾಗವತಾಮೃತಂ, ಶ್ರೀಗೀತ ಸುಧ, ಈಶವ್ಯಾಸೋಪನಿಷತ್, ನಳ ಚರಿತ್ರೆ, ಶ್ರೀಮನ್ಮಹಾಭಾರತ, ಶ್ರೀನಿವಾಸ, ಪದ್ಮಜಗಿರಿಜ ಕಲ್ಯಾಣ, ತ್ರಯೋದಶಭಕ್ತ ಕುಸುಮಗಳು, ರಾಘವೇಂದ್ರ ಗೀತಾಮೃತ, ಶ್ರೀಕೃಷ್ಣಗೀತಲಹರಿ, ಸಂಪ್ರದಾಯದ ಗೀತೆಗಳು, ತಾರತಮ್ಯ,

ಶ್ರೀರಾಮಕಥಾರತ್ನಮಂಜರಿ, ಶ್ರೀಹರಿಕಥಾಮೃತಸಾರಭಾವಮಂದಾರ, 333–ಉಗಾಭೋಗಗಳು, ದ್ವಾದಶಸುಳಾದಿಗಳು, ಭಾರತ ಪಾರಿಜಾತ, ಭಾಗವತ ಭಾವದೀಪ್ತಿ, ಧೀಮಂತ ಜಂಬುಖಂಡಿ ವಾದಿರಾಜಾಚಾರ್ಯ, ಸುಮಧ್ವ ವಿಲಾಸ, ಸುಳಾದಿ ಭಾರತಸಾರ, ಶ್ರೀರಾಘವೇಂದ್ರ ಕಥಾ ಸೌರಭ ಮತ್ತು 11 ದೇವರ ನಾಮ ಪುಸ್ತಕಗಳು ಒಟ್ಟು 46.

ಭೋಗ, ಭಾಮಿನೀ, ಚೌಪದಿ, ಸಾಂಗತ್ಯಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಹಲವಾರು ದೀರ್ಘ ಕೃತಿಗಳನ್ನು ರಚಿಸಿದ್ದಾರೆ. ಹರಿಕಥಾಮೃತಸಾರ ಭಾವ ಮಂದಾರ ಕೃತಿಯಲ್ಲಿ 32 ಸಂಧಿಗಳಲ್ಲಿರುವ 988 ಪದ್ಯಗಳಿಗೆ 2114 ಪದ್ಯಗಳಲ್ಲಿ ವ್ಯಾಖ್ಯಾನ ರಚಿಸಿದ್ದಾರೆ. ಭಕ್ತಿ ಇವರ ಕೃತಿಗಳ ಮೂಲ ದ್ರವ್ಯವಾಗಿ ಹರಿದು ಬಂದಿದೆ.

16. <u>ಡಾ॥ ನಳಿನಿರಾವ್: (1939–2009):</u>

ಬಬ್ಬೂರುಕಮ್ಮೆ ಶಾಖೆಗೆ ಸೇರಿದ ಇವರು ಅದ್ವೈತ ಸಂಪ್ರದಾಯದ ಕೀರ್ತನಕಾರ್ತಿಯಾಗಿ ಗುರುತಿಸಲ್ಪಡುತ್ತಾರೆ. ಇವರ ತಾಯಿ ದಾಸರ ಪದ್ಮಾವತಮ್ಮ. ತಂದೆ ಶ್ರೀನಿವಾಸರಾವ್. ನಳಿನಿರಾವ್‌ರವರು ಶಿಕ್ಷಣದಲ್ಲಿ ಪಿಎಚ್.ಡಿ. ಪದವಿ ಗಳಿಸಿದ್ದರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ರೀಡರ್ ಆಗಿದ್ದರು.

ನಳಿನಿರಾವ್ 100ಕ್ಕೂ ಅಧಿಕ ಕೀರ್ತನೆಗಳನ್ನು, ಕೆಲವು ದೀರ್ಘ ಕೀರ್ತನೆಗಳನ್ನು ರಚಿಸಿದ್ದಾರೆ. ದಶಾವತಾರದ ಒಂದೊಂದು ಅವತಾರಕ್ಕೂ 10–15 ವಿವರವಾದ ಕೀರ್ತನೆಗಳನ್ನು ರಚಿಸಿದ್ದಾರೆ. ಇದೊಂದು ವಿಶಿಷ್ಟವಾದ ದಶಾವತಾರ ಸ್ತುತಿಯಾಗಿದೆ. "ಪುರಂದರದಾಸರ ಕೀರ್ತನೆಗಳಲ್ಲಿ ಕಂಡು ಬರುವ ಹೆಸರುಗಳನ್ನೇ ಜೋಡಿಸಿದ 'ವಿಷ್ಣು ಸಹಸ್ರನಾಮ' ತ್ಯಾಗರಾಜರ ಕೃತಿಗಳಲ್ಲಿ ಕಂಡುಬರುವ ಹೆಸರುಗಳನ್ನಾಧರಿಸಿದ ಶ್ರೀರಾಮ ನಾಮಾವಳಿ'ಯಂತಹ ಅಪರೂಪದ ರಚನೆಗಳೂ ಇವೆ."[3] 38 ನುಡಿಗಳ ಸ್ಯಮಂತಕೋಪಾಖ್ಯಾನ ಕಥೆ, ಶ್ರೀಮನ್ನಾರಾಯಣ ನಾಮಾವಳಿ ಎಂಬ ದ್ವಾದಶ ನಾಮದ ಒಂದೊಂದು ಹೆಸರಿಗೂ ಆರು ಸಾಲುಗಳ 24 ನುಡಿಗಳ ದೀರ್ಘ ಕೃತಿಗಳು ಇವರ ರಚನೆಗಳಲ್ಲಿ ಸೇರಿವೆ. ತಮ್ಮ ಕೃತಿಗಳಿಗೆ ತಾವೇ ರಾಗ–ತಾಳ ಸಂಯೋಜನೆ ಮಾಡಿದ್ದಾರೆ.

17. <u>ಜಲಜಾಗಂಗೂರ: (1940):</u>

ಜಲಜಾರವರು 1940ನೇ ಇಸವಿ ಜೂನ್ ತಿಂಗಳಲ್ಲಿ ಕಂಪ್ಲಿಯಲ್ಲಿ ಜನಿಸಿದರು. ತಂದೆ ಶ್ರೀಕಡಲಬಾಳು ಪ್ರಹ್ಲಾದಾಚಾರ್ಯರು ವಕೀಲರು, ತಾಯಿ ಶ್ರೀಮತಿ ಕಡಲಬಾಳು ಪದ್ಮಾವತಿಬಾಯಿ. ಚಿಕ್ಕ ವಯಸ್ಸಿನಿಂದಲೂ ತಮ್ಮ ತಂದೆ ಮನೆಯ ಪಾರಂಪರಿಕ ದೈವವಾದ ಕಡಲಬಾಳು ಶ್ರೀರಾಘವೇಂದ್ರರ ಸನ್ನಿಧಿಯಲ್ಲಿ ಬೆಳೆದರು. 1957ನೇ ಮೇ ತಿಂಗಳಲ್ಲಿ ಕಿನ್ನಾಳ ಗ್ರಾಮದ ಗಂಗೂರ ಮನೆತನದ ಶ್ರೀಪತಿ

ಆಚಾರ್ಯರೊಡನೆ ವಿವಾಹವಾಯಿತು. ಶ್ರೀಪತಿ ಆಚಾರ್ಯರು ಉತ್ತರಾದಿ ಮಠದ ಶ್ರೀಸತ್ಯಜ್ಞಾನ ತೀರ್ಥರ ಪೂರ್ವಾಶ್ರಮದ ತಮ್ಮಂದಿರ ಮೊಮ್ಮಗ. ಕನ್ನಡ ಮಾಧ್ಯಮದಲ್ಲಿ ಏಳನೇ ತರಗತಿಯವರೆಗೆ ಮಾತ್ರ ಜಲಜಾ ವಿದ್ಯಾಭ್ಯಾಸ ಮಾಡಿದ್ದಾರೆ. ತಮ್ಮ ಪತಿ ಮತ್ತು ಮಕ್ಕಳ ಸಹಕಾರ ಪ್ರೋತ್ಸಾಹದಿಂದ ದಾಸ ಸಾಹಿತ್ಯ ರಚನೆ ಮಾಡುತ್ತಿದ್ದಾರೆ.

ಜಲಜಾರವರ ರಚನೆಗಳಲ್ಲಿ 'ಶರಧಿಪುರೇಶ', 'ಕಡಲಪುರೇಶ', 'ವಾರಿಧೀಶ', ತಾವಾಗಿಯೇ ಹೊಳೆದವುಗಳಾಗಿದ್ದು ಇವು ಅಂಕಿತಗಳೆಂದು ಅವರ ತಂದೆ ಗುರುತಿಸಿದ್ದಾಗಿ ಹೇಳುತ್ತಾರೆ.

ಮರುತಮತದ್ವಕ್ಕಿ, ಪಂಚಪದಕದಹಾರ, ಶ್ರೀರಾಘವೇಂದ್ರಭಕ್ತಿಕುಸುಮಾಂಜಲಿ ಇವರ ದಾಸ ಸಾಹಿತ್ಯ ರಚನೆಗಳು. ಹಲವು ಅಪ್ರಕಟಿತ ಕೃತಿಗಳೂ ಇವೆ.

18. ಡಾ॥ ಎನ್.ಜಿ. ವಿಜಯಲಕ್ಷ್ಮಿ ರಾಘವೇಂದ್ರಾಚಾರ್ಯ: (1940):

ವಿಜಯಲಕ್ಷ್ಮಿಯವರು 10ನೇ ಅಕ್ಟೋಬರ್ 1940ರಲ್ಲಿ ವಿಜಯದಶಮಿಯಂದು ಜನಿಸಿದರು. ತಂದೆ ಎನ್.ಜಿ. ಕೃಷ್ಣಮೂರ್ತಿ, ತಾಯಿ ಕೃಷ್ಣವೇಣಿಬಾಯಿ. ಇವರು ಜನಿಸಿದ್ದು ಶಿವಮೊಗ್ಗ, ಆದರೆ ಬೆಳೆದದ್ದು ಹಿರಿಯೂರು, ಚಳ್ಳಕೆರೆ, ಚಿತ್ರದುರ್ಗಗಳಲ್ಲಿ. ವಿಜಯಲಕ್ಷ್ಮಿಯವರು ಹಿಂದಿಯಲ್ಲಿ 'ವಲ್ಲಭ ಸಂಪ್ರದಾಯ ಮತ್ತು ಮಧ್ವ ಸಂಪ್ರದಾಯದ ಕೃಷ್ಣ ಕಾವ್ಯದ ತೌಲನಿಕ ಅಧ್ಯಯನ' ಎಂಬ ವಿಷಯದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಇವರ ಪತಿ ಶ್ರೀರಾಘವೇಂದ್ರಾಚಾರ್ಯರು. ಸಂಪ್ರದಾಯಸ್ಥ ಮನೆತನದಲ್ಲಿ ಜನಿಸಿದ್ದು ಸಹಜವಾಗಿಯೇ ಇವರಿಗೆ ದಾಸ ಸಾಹಿತ್ಯದಲ್ಲಿ ಆಸಕ್ತಿ ಬೆಳೆಯಿತು.

ವಿಜಯಲಕ್ಷ್ಮಿಯವರು ಮೊದಲು 'ವಿಜಯ ರಾಘವ' ಅಂಕಿತದಲ್ಲಿ ದೇವರ ನಾಮ ರಚಿಸುತ್ತಿದ್ದರು. ಶ್ರೀವರಾಹ ಹರಿವಿಠಲ ದಾಸರಿಂದ 'ಮಂಗಳಾಂಗಹರಿವಿಠಲ' ಅಂಕಿತ ಪಡೆದರು. ಇವರ 12 ಕೃತಿಗಳು ಪ್ರಕಟವಾಗಿವೆ.

ಶ್ರೀಲಕ್ಷ್ಮೀ ಶೋಭಾನ, ಶ್ರೀಲಕ್ಷ್ಮೀ ಭಜನಾಮೃತ, ಅವತಾರತ್ರಯ ಭಜನಾಮೃತ, ಸೀತಾರಾಮ ಕಲ್ಯಾಣ, ಶ್ರೀರಾಮ ಪಾರಿಜಾತ, ಶ್ರೀಮಂಗಳಾಂಗ ಹರಿ ವಿಠಲ ಭಜನಾಮೃತ, ಶ್ರೀರಾಘವೇಂದ್ರ ಕವಚ, ಶ್ರೀರಾಘವೇಂದ್ರ ನಾಮಾವಳಿ, ಶ್ರೀಮಧ್ವ ನಾಮಾವಳಿ, ಭಜನಾವಳಿ, ಹನುಮ–ಭೀಮ–ಮಧ್ವ ಮುನಿಯ ನೆನೆಯಿರೋ, 33 ಹರಿದಾಸರ 33 ದೇವರ ನಾಮಗಳು ಇತ್ಯಾದಿ ಇವರ ಪ್ರಕಟಿತ ಕೃತಿಗಳು.

19. ಚಂದೂಬಾಯಿ ನಾಯಕ: (1940):

ಚಂದೂಬಾಯಿಯವರು ರಾಯಚೂರು ಜಿಲ್ಲೆ ಮಸ್ಕಿಯಲ್ಲಿ 1940ರಲ್ಲಿ ಜನಿಸಿದರು. ತಂದೆ ಹನುಮಂತರಾವ್, ತಾಯಿ ಸೋನಾಬಾಯಿ. ಸಿಂಧನೂರಿನಲ್ಲಿ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿದರು. ಪತಿ ಭೀಮಸೇನರಾವ್ ನಾಯಕ. ಭೀಮಸೇನರಾಯರು ಇಲಕಲ್, ಹೈದರಾಬಾದ್‌ಗಳಲ್ಲಿ ಆಕ್ಟ್ರಾಯ್ ಕ್ಲರ್ಕ್ ಆಗಿ ಸೇವೆಸಲ್ಲಿಸಿದ್ದರು. ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದ ಚಂದುಬಾಯಿಯವರಿಗೆ ಸ್ವಪ್ನಾಂಕಿತವಾಗಿ 'ಗಿರಿ ವೆಂಕಟೇಶ' ಅಂಕಿತದಿಂದ ಸುಮಾರು 70 ಹಾಡುಗಳನ್ನು ರಚಿಸಿದ್ದಾರೆ. ಅವರ ಕೃತಿಗಳು ಅಪ್ರಕಟಿತ.

ಚಂದೂಬಾಯಿಯವರು ಯಾಜ್ಞವಲ್ಕ್ಯ ಶತಕ ಮತ್ತು ಸನ್ನತಿಯ ಚಂದ್ರಲಾದೇವಿ ಶತಕ ಮತ್ತು ಶನೇಶ್ವರ ಶತಕಗಳನ್ನು ರಚಿಸಿದ್ದಾರೆ. ಯಾಜ್ಞವಲ್ಕ್ಯ ಶತಕವು ಬೃಹದಾರಣ್ಯಕೋಪನಿಷತ್ತಿನ ಆಧಾರದಿಂದ ರಚಿತವಾಗಿದೆ. ಯಾಜ್ಞವಲ್ಕ್ಯರ ಚರಿತ್ರೆಯೊಂದಿಗೆ ಆರಂಭವಾಗಿ ದಶಾವತಾರದೊಂದಿಗೆ ಕೊನೆಯಾಗುತ್ತದೆ. ಇದರ ಜೊತೆಗೆ ಯಾಜ್ಞವಲ್ಕ್ಯರ ಸ್ತುತಿಯನ್ನು 24 ನುಡಿಗಳಲ್ಲಿ ರಚಿಸಿದ್ದಾರೆ. ಇದು ಕೇಶವಾದಿ 24 ನಾಮಗಳನ್ನು ಹೋಲುವಂತಿದೆ. ಶ್ರೀಮಾಧವ ತೀರ್ಥ ಸ್ತುತಿಯನ್ನೂ ಹೀಗೇ ರಚಿಸಿದ್ದಾರೆ. ಮಾಧವ ತೀರ್ಥರು ಕಣ್ವ ಮಠದ ಸಂಸ್ಥಾಪಕರು.

ಶ್ರೀಶಂಕರ ಸ್ತುತಿ, ಶ್ರೀರಾಘವೇಂದ್ರ ಸ್ತುತಿ, ಶೃಂಗೇರಿ ಶಾರದೆ, ಹೊರನಾಡು ಅನ್ನಪೂರ್ಣೇ, ಕೊಲ್ಲೂರು ಮೂಕಾಂಬೆ, ಕುರಿತ ಹಾಡುಗಳನ್ನು ರಚಿಸಿದ್ದಾರೆ. ಶ್ರೀರಾಮದೇವರ ಹಾಡು, ದಶಾವತಾರ. ಆರತಿ ಹಾಡುಗಳು, ರುದ್ರದೇವರ ಹಾಡುಗಳನ್ನೂ ರಚಿಸಿದ್ದಾರೆ. ಉದಯ ರಾಗ, ಲಾಲಿ, ಜೋಗುಳಗಳೂ ಇವೆ. ಗುರುವಿಗೆ ಇವರ ಕೃತಿಗಳಲ್ಲಿ ಬಹಳ ಮಹತ್ವವಿದೆ. ಗುರುಕರುಣೆ, ಮಹಿಮೆ ಕುರಿತು ವಿವರಿಸಿದ್ದಾರೆ.

ಹರಿದಾಸರಲ್ಲಿ ಕೆಲವರು ತಮ್ಮ ಕೃತಿಗಳು ಆತ್ಮ ಸಂತೋಷಕ್ಕೆ ಮಾತ್ರ ಇರುವುದೆಂದೂ ಪ್ರಕಟಣೆ ಮಾಡಬಾರದು ಎಂದು ಭಾವಿಸುತ್ತಾರೆ. ತಂದೆ ವೆಂಕಟೇಶ ವಿಠಲರು, ಜಯೇಶ ವಿಠಲರ ಕೃತಿಗಳು ಬಹಳ ಕಾಲ ಅಪರಿಚಿತವಾಗಿಯೇ ಇದ್ದವು. ಹಾಗೆಯೇ ಕೆಲವು ಮಹಿಳಾದಾಸರೂ ತಮ್ಮ ಕೃತಿಗಳ ಪ್ರಕಟಣೆಗೆ ಒಪ್ಪುವುದಿಲ್ಲ. ಅಂತಹದವರಲ್ಲಿ ಉಮಾ ಮಾಧವರಾವ್ ಮತ್ತು ಅಂಜನಾಗುಡಿ ಸೇರುತ್ತಾರೆ.

20. <u>ಉಮಾಮಾಧವರಾವ್: (1940):</u>

ಶ್ರೀಮತಿ ಉಮಾಮಾಧವರಾವ್‌ರವರು ಹುಟ್ಟಿದ್ದು 1940ರಲ್ಲಿ. ತಂದೆ ಆರ್.ಎನ್. ಕೃಷ್ಣಮೂರ್ತಿರಾವ್. ತಾಯಿ ಕಮಲಮ್ಮ. ಇವರು ಶ್ರೀಗುರುಗೋವಿಂದ ವಿಠಲದಾಸರ ಮಕ್ಕಳಾದ ಶ್ರೀಮಾಧವರಾವ್‌ರವರ (ಮುಕುಂದ ವಿಠಲ) ಪತ್ನಿ. ಗುರುಗೋವಿಂದವಿಠಲದಾಸರಿಂದ 'ವಾಸುಕೀಶಯನ ವಿಠಲ' ಅಂಕಿತ ಪಡೆದಿದ್ದಾರೆ.

ಸುಮಾರು 65 ದೇವರ ನಾಮಗಳು, ಉಗಾಭೋಗಗಳು, 3 ಸುಳಾದಿಗಳನ್ನು ಇವರು ರಚಿಸಿದ್ದಾರೆ. ಶೂನ್ಯ ನಾಮಕ ಪರಮಾತ್ಮನ ಮಹಾತ್ಮೆ, ಷಡ್ಗುಣೈಶ್ವರ್ಯ ಸಂಪನ್ನ ಮೋಕ್ಷ ಮಾಧವ ಮುಕುಂದ ಇವರ ಸುಳಾದಿಗಳು. ಇವರ ಎಲ್ಲ ಕೃತಿಗಳೂ ಪ್ರಕಟವಾಗಿಲ್ಲ.

21. ಸುಶೀಲಾ ಕಾಂತರಾವ್: (1942):

ದಾಸ ಮಹಿಳೆಯರಲ್ಲಿ 'ಭೀಮೇಶ ಕೃಷ್ಣ' ಅಂಕಿತದಿಂದ ಅಗ್ರ ಪಂಕ್ತಿಯಲ್ಲಿ ನಿಲ್ಲುವ ಹರಪನಹಳ್ಳಿ ಭೀಮವ್ವನವರ ಮೊಮ್ಮಗಳ ಮೊಮ್ಮಗಳು ಸುಶೀಲಾ ಕಾಂತರಾವ್. ಭೀಮವ್ವನವರ ಹೆಣ್ಣು ಸಂತತಿಯಲ್ಲಿ ಬಂದವರು. ಸುಶೀಲಾರವರು ಹರಪನಹಳ್ಳಿಯಲ್ಲಿ 1942ರಲ್ಲಿ ಜನಿಸಿದರು. ತಂದೆ ಕಡಕೋಳ ರಾಮರಾಯರು, ತಾಯಿ ಸೀತಾಬಾಯಿ. ಸುಶೀಲ ಅವರು ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ತಮ್ಮ 65ನೇ ವಯಸ್ಸಿನಲ್ಲಿ ಸುವಿದ್ಯೇಂದ್ರ ತೀರ್ಥರಿಂದ 'ಮಧ್ವೇಶಕೃಷ್ಣ' ಅಂಕಿತ ಪಡೆದು. ಕೃತಿ ರಚನೆ ಮಾಡುತ್ತಿದ್ದಾರೆ. ಕೆಲವು ಕೀರ್ತನೆಗಳು 'ವಿಜಯಸಂಪದ' ಮಾಸ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ತಾರತಮ್ಯೋಕ್ತ ಕೀರ್ತನೆಗಳು, ದಾಸರ, ಯತಿಗಳ ಸ್ತುತಿಗಳು, ಕೃಷ್ಣ, ವೆಂಕಟೇಶನನ್ನು ಕುರಿತ ಹಾಡುಗಳು, ದಶಾವತಾರ, ನಿಂದಾಸ್ತುತಿ, ಅನೇಕ ದೀರ್ಘ ಕೃತಿಗಳು, 110 ನುಡಿಗಳ ಲಕ್ಷ್ಮೀಶೋಭನದ ಹಾಡುಗಳು, 'ಹರಪನಹಳ್ಳಿ ವನಿತೆ' ಭೀಮವ್ವನವರ ಕುರಿತು ಸುಮಾರು 50 ಹಾಡುಗಳು, ಸುಳಾದಿಗಳು ಅ-ಕ್ಷವರೆಗೆ ಭೀಮವ್ವನ ಸ್ತುತಿ ಮುಂತಾದವು ಇವರ ಕೃತಿಗಳು.

ಷಟ್ಪದಿ, ರಗಳೆ ಇತ್ಯಾದಿ ಛಂದಸ್ಸಿನಲ್ಲಿ ಇವರ ಕೃತಿಗಳು ಮೂಡಿ ಬಂದಿವೆ. ರಾಗ, ತಾಳ ಸಹಿತವಾಗಿ ಹಾಡುಗಳು ರಚನೆಯಾಗಿವೆ.

22. ಬಿ.ಕೆ. ಶ್ರೀಮತಿರಾವ್: (1946):

ಬಿ.ಕೆ. ಶ್ರೀಮತಿ ರಾವ್, ಇವರು 1946ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಟೀಲಿನಲ್ಲಿ ಜನಿಸಿದರು. ಮಂಗಳೂರಿನ ಸಂತ ಆಗ್ನೆಸ್ ಕಾಲೇಜಿನ ಕಚೇರಿಯಲ್ಲಿ ಅಧೀಕ್ಷಕಿಯಾಗಿ ಸೇವೆ ಸಲ್ಲಿಸಿದರು. "ಗುರುಪ್ರಿಯ ವಿಠಲದಾಸಿ" ಅಂಕಿತದಿಂದ ಕೃತಿಗಳನ್ನು ರಚಿಸಿದ್ದಾರೆ.

ಕರ್ನಾಟಕದ ಸುಮಾರು 63 ಮಂದಿ ಹರಿದಾಸ/ಹರಿದಾಸಿಯರ ಜೀವನ ಪರಿಚಯವನ್ನೊಳಗೊಂಡ 'ಶ್ರೀಹರಿದಾಸ ವಿಜಯ' ಎಂಬ ಗ್ರಂಥವು ಇತ್ತೀಚೆಗೆ ದ್ವಿತೀಯ ಮುದ್ರಣಗೊಂಡಿದೆ.

ತುಳುನಾಡಿನಲ್ಲಿರುವ ಸುಮಾರು 55 ಜನ ಹರಿದಾಸ/ಹರಿದಾಸಿಯರ ಜೀವನ/ಸಾಧನೆಗಳ ಪರಿಚಯದೊಂದಿಗೆ ಅವರ ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಸಂಶೋಧಿಸಿ ಪ್ರಕಟಿಸಿದ ಕೃತಿಯೇ – 'ತೌಳವ ದಾಸ ದರ್ಶನ.' ಶ್ರೀಮತಿಯವರು ಕೀರ್ತನೆಗಳನ್ನು ರಚಿಸಿದ್ದಾರೆ.

23. <u>ನಾಮಗಿರಿಯಮ್ಮ:</u>

ನಾಮಗಿರಿಯಮ್ಮನ ಕಾಲ ಸುಮಾರು 19ನೆಯ ಶತಮಾನ. ನಿರ್ದಿಷ್ಟವಾಗಿ ತಿಳಿದು ಬಂದಿಲ್ಲ. ಇವರ ಜೀವನದ ವಿಚಾರಗಳು ಅಷ್ಟಾಗಿ ತಿಳಿದು ಬಂದಿಲ್ಲ. ಇವರ ಜನ್ಮ ಸ್ಥಳ ಈರೋಡಿನಿಂದ ಸುಮಾರು 40 ಮೈಲಿ ದೂರವಿರುವ ನಾಮಕ್ಕಲ್. ಮೈಸೂರಿನ ಗುರುಗೋವಿಂದ ವಿಠಲದಾಸರು ಸಂಶೋಧಿಸಿ, ಸಂಗ್ರಹಿಸಿ ಪ್ರಕಟಿಸಿರುವ 'ಶ್ರೀಪ್ರಸನ್ನವೆಂಕಟವಿಠಲದಾಸರು' ಹಾಗೂ 'ಶ್ರೀವಿಜಯರಾಮಚಂದ್ರವಿಠಲದಾಸ'ರ ಚರಿತ್ರೆಯಲ್ಲಿ ಇವರ ಉಲ್ಲೇಖವಿದೆ. ನಾಮಗಿರಿಯಮ್ಮನವರ ಗುರು ಕುಂಭಕೋಣಿ ವೆಂಕಟದಾಸರು (ಪ್ರಸನ್ನ ವೆಂಕಟವಿಠಲ) ಅವರ ಅಂಕಿತ 'ಗುರುಪ್ರಸನ್ನ ವೆಂಕಟ ವಿಠಲ'. ಇವರ ಕೃತಿಗಳು ಎರಡೇ ದೊರೆತಿದ್ದು ಹೆಚ್ಚಿನ ವಿವರಗಳು ಲಭ್ಯವಿಲ್ಲ.

24. <u>ಇಂದಿರಾಬಾಯಿ ಕಟ್ಟಿ:</u>

ಇಂದಿರಾಬಾಯಿಯವರ ಪೂರ್ವನಾಮ ಭಾಗೀರಥೀಬಾಯಿ. ಇವರು ವಿದ್ಯಾರತ್ನಂ ಪಂಚಮುಖಿ ರಾಘವೇಂದ್ರಾಚಾರ್ಯರ ಮಗಳು. ಪತಿ ವಾಮನಾಚಾರ್ಯ ಕಟ್ಟಿ. ಇವರ ಅಂಕಿತ 'ಪ್ರಾಣೇಶನೊಡೆಯ'. ಇಂದಿರಾಬಾಯಿ ಶಾಲೆ ಕಲಿತವರಲ್ಲ. ತಂದೆಯವರ ಬಳಿ ಹರಿಭಕ್ತಿಸಾರ, ಹರಿಕಥಾಮೃತಸಾರ, ದಾಸರ ಕೃತಿಗಳನ್ನು ಕೇಳಿದ್ದರು. ತಕ್ಕ ಮಟ್ಟಿಗೆ ಸಂಸ್ಕೃತ ಜ್ಞಾನವೂ ಇದ್ದಿತು. ಇಂದಿರಾಬಾಯಿಯವರ 'ಹರಿಭಕ್ತಿಪದಗಳ ಸಂಗ್ರಹ' ಎಂಬ ಗ್ರಂಥದಲ್ಲಿ ಸುಮಾರು ಎಂಟು ದೀರ್ಘ ಕೀರ್ತನೆಗಳಿವೆ. ಶರಣಾಗತಿ, ವೈರಾಗ್ಯ, ಭಕ್ತಿ ರಸಗಳು ಈ ಕೃತಿಗಳಲ್ಲಿವೆ.

25. <u>ಬೆಲ್ಲಾಲ ಬೊಮ್ಮಸಂದ್ರದ ಭಾಗೀರಥಮ್ಮ:</u>

ಕೋಲಾರ ಜಿಲ್ಲೆಯ ಬೆಲ್ಲಾಲ ಬೊಮ್ಮಸಂದ್ರದಲ್ಲಿ ಭಾಗೀರಥಮ್ಮ ವಾಸ ಮಾಡುತ್ತಿದ್ದರು. ಕೆಂಕರಿಯ ಬಡಗನಾಡು ಬ್ರಾಹ್ಮಣರಾದ ನಾರಾಯಣ ಮತ್ತು ವೆಂಕಮ್ಮನ ಮಗಳು ಭಾಗೀರಥಮ್ಮ. ಕೋಲಾರದ ಸುಬ್ರಹ್ಮಣ್ಯರ ಮಗ ನಾರಾಯಣಪ್ಪನ ಎರಡನೇ ಹೆಂಡತಿ. ನಾರಾಯಣಪ್ಪ ಪೋಲೀಸ್ ದಫೇದಾರರು. ನಿವೃತ್ತಿಯ ನಂತರ ಬೆಲ್ಲಾಲ ಬೊಮ್ಮಸಂದ್ರದಲ್ಲಿ ನೆಲೆಸಿದರು. ಇವರ ಬೃಹತ್ ಗ್ರಂಥ 'ಕೀರ್ತನ ರಾಮಾಯಣ'. ಪ್ರತಿ ವರ್ಷ ಸುಮಾರು 40 ವರ್ಷಗಳ ಕಾಲ ರಾಮ ನವಮಿಯ ಸಂದರ್ಭದಲ್ಲಿ ಉತ್ಸವ ನಡೆಸುತ್ತಿದ್ದರು. ಒಂದು ವಾರ ಕಾಲ ಕೀರ್ತನ ರಾಮಾಯಣವನ್ನು ವಾಚನ ಮಾಡುತ್ತಿದ್ದರು. ಈ ಕೃತಿಯು 1961ರಲ್ಲಿ ಪ್ರಕಟವಾಗಿದೆ. ಕನ್ನಡದಲ್ಲಿ ಇಡೀ ರಾಮಾಯಣ ಕೃತಿಯನ್ನು ಹಾಡಿನ ರೂಪದಲ್ಲಿ ಬರೆದಿರುವ ಕೃತಿ ಇದೊಂದೇ.

ಕಂದ ಪದ್ಯ, ಕಂದಾರ್ಥ, ವಚನ, ಕೀರ್ತನೆ, ಆರ್ಯ, ಸೀಸಪದ್ಯ ಮತ್ತು ಕನ್ನಡಕ್ಕೆ ಅಪರಿಚಿತವಾದ ತೆಲುಗಿನ ವಡಿಯನ್ನು ಈಕೆ ಬಳಸಿದ್ದಾರೆ. ಲಾವಣಿಗೆ ಹತ್ತಿರವಾದ ಆರ್ಯ ಛಂದಸ್ಸಿನ ಪ್ರಯೋಗ ಈಕೆಯ ಅತಿಶಯ. ಕೀರ್ತನೆಗಳು, ದಾಸರ ಪದಗಳು, ಸಂಪ್ರದಾಯದ ಹಾಡುಗಳನ್ನು ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಈಕೆ ರಚಿಸಿದ್ದಾರೆ.

26. ದಡಿಗದ ಲಕ್ಷ್ಮೀನರಸಮ್ಮ:

ಚನ್ನರಾಯಪಟ್ಟಣ ತಾಲ್ಲೂಕಿನ ದಡಿಗ ಗ್ರಾಮಕ್ಕೆ ಸೇರಿದವರು ಲಕ್ಷ್ಮೀನರಸಮ್ಮ. ಇವರ ವೈಯಕ್ತಿಕ ವಿವರಗಳು ಲಭ್ಯವಿಲ್ಲ. ಈಕೆ ನೂರಾರು ಕೀರ್ತನೆಗಳು, ಖಂಡ ಕಾವ್ಯಗಳನ್ನು ರಚಿಸಿದ್ದಾರೆ. ಶಂಬರಾಸುರ ಕಾಳಗ 107 ಪದ್ಯಗಳನ್ನೊಳಗೊಂಡಿದೆ. ರುಕ್ಮಿಣೀ ಕಲ್ಯಾಣ ಅರ್ಧ ಭಾಮಿನೀಯಲ್ಲಿ ಬರೆದಿರುವ 77 ಪದ್ಯಗಳ ಹಾಡುಗಬ್ಬ, ಚಂದ್ರಹಾಸನ ಚರಿತೆ, ನಳ ಚರಿತ್ರೆ ಇವರ ಇನ್ನಿತರ ಕೃತಿಗಳು.

27. ಕಮಲಾಬಾಯಿ:

ಜಯೇಶ ವಿಠಲಾಂಕಿತರಾದ ಅಟ್ಯಾಚಿ ವೆಂಕಟರಾಯರ ಮೂರನೇ ಪತ್ನಿ ಕಮಲಾಬಾಯಿ. ಕುಂಭಕೋಣದ ದೇವಾಜರಾಯರು ಇವರ ತಂದೆ. ವೆಂಕಟರಾಯರ ಆಧ್ಯಾತ್ಮಿಕ ಸಾಧನೆಗೆ ಲೌಕಿಕ ವ್ಯವಹಾರಗಳಿಗೆ ಸಕಲ ರೀತಿಯಲ್ಲೂ ಸಹಕಾರ ನೀಡುತ್ತಿದ್ದರು. ತಮ್ಮ ಪತಿ ಜಯೇಶ ವಿಠಲರಿಂದ "ಗುರು–ಜಯೇಶ ವಿಠಲ" ಅಂಕಿತ ಪಡೆದು ಕೀರ್ತನೆಗಳನ್ನು ರಚಿಸಿದರು. ನಾಲ್ಕು ಕೀರ್ತನೆಗಳನ್ನು ಒಂದು ಸುಳಾದಿಯನ್ನು ಈಕೆ ರಚಿಸಿದ್ದಾರೆ. ಸುಳಾದಿಗಳಲ್ಲಿ ಸಾಮಾನ್ಯವಾಗಿ "ಏಳು ತಾಳ"ಗಳಿದ್ದು ಒಂದು 'ಜತೆ' ಇರುತ್ತದೆ. ಇವರ ಸುಳಾದಿಯಲ್ಲಿ 'ಐದು ತಾಳಗಳು' ಮಾತ್ರ ಇವೆ.

28. ಸೀತಮ್ಮ:

ಸೀತಮ್ಮ 'ನಿತ್ಯಾನಂದವಿಠಲ' ಅಂಕಿತದ ಎಸ್.ವಿ. ಹರಿರಾವ್‌ರವರ ಪತ್ನಿ. ಇವರಿಗೆ ಗುರುಗಳು ಕೊಟ್ಟ ಹೆಸರು ಪಾರಿಜಾತ. ತಂದೆ ಮುದ್ದುಮೋಹನ ವಿಠಲರು ಇವರಿಗೆ 'ಪರಮಾನಂದವಿಠಲ' ಅಂಕಿತ ಪ್ರದಾನ ಮಾಡಿದರು. ಕರಿಗಿರಿ ಕ್ಷೇತ್ರ ದೇವರಾಯನ ದುರ್ಗದಲ್ಲಿ 25–8–1932, ಗುರುವಾರದಂದು ಅಂಕಿತ ದೊರೆಯಿತು.

ಅಧ್ಯಯನದ ದೃಷ್ಟಿಯಿಂದ 1947ರವರೆಗಿನ ಹರಿದಾಸಿಯರನ್ನು ಮಾತ್ರ ಪರಿಗಣಿಸಲಾಗಿದೆ. ಇವರುಗಳನ್ನು ಬಿಟ್ಟು ಇನ್ನೂ ದಾಸ ಮಹಿಳೆಯರು ಇರಬಹುದು. ಅವರುಗಳ ಬಗ್ಗೆ ಅಧ್ಯಯನ ನಡೆಯುವ ಅವಶ್ಯಕತೆಯಿದೆ. ಈ ಕಾಲಮಿತಿಯ ವ್ಯಾಪ್ತಿಯಲ್ಲಿ ಇರಬಹುದಾದ ಇನ್ನೂ ಅನೇಕರ ಬಗ್ಗೆ ಅಧ್ಯಯನ ಮಾಡಿಲ್ಲ. ಇದು ಸಮಗ್ರ ಅಧ್ಯಯನವಲ್ಲ.

ಅಡಿ ಟಿಪ್ಪಣಿ

ಲೇಖಕರ ಹೆಸರು	ಕೃತಿ ಹೆಸರು	ಪುಟ ಸಂಖ್ಯೆ
1. ರುಕ್ಮಿಣಿಬಾಯಿ	ಅಪ್ರಕಟಿತ	
2. ನಾ. ಗೀತಾಚಾರ್ಯ	ಶ್ರೀವಾಸುದೇವ ಮಹಿಮಾ	ಪುಟ–11
3. ಗಂಗಾಪಾದೇಕಲ್	ಮುಳಿಯ ಮೂಕಾಂಬಿಕಾ ಅಮ್ಮ	ಪುಟ–5

ಅಧ್ಯಾಯ-4

ಮಹಿಳಾ ಹರಿದಾಸರ ಕೀರ್ತನಗಳ ವಸ್ತು ವಿನ್ಯಾಸ

ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿದ ವೈಷ್ಣವ ಧರ್ಮದಲ್ಲಿ ಜಗತ್ ಸತ್ಯ, ಪಂಚಭೇದ, ತಾರತಮ್ಯ, ವೈರಾಗ್ಯ ಮತ್ತು ಹರಿಪಾರಮ್ಯಗಳನ್ನು ಮುಖ್ಯ ಸಿದ್ಧಾಂತಗಳೆಂದು ಸ್ವೀಕರಿಸಲಾಗಿದೆ. ಶ್ರೀಹರಿಯು ಮಾತ್ರ ಸರ್ವತಂತ್ರ ಸ್ವತಂತ್ರ ಉಳಿದೆಲ್ಲರೂ ಅವನ ಅಧೀನ ಮತ್ತು ಅಸ್ವತಂತ್ರರು ಎಂಬ ಹಿನ್ನೆಲೆಯಲ್ಲಿ ಹರಿದಾಸರು ಹರಿಯೇ ಸರ್ವೋತ್ತಮನೆಂದು ಹೇಳಿದರು. ಆದರೆ ಇತರ ದೇವತೆಗಳನ್ನು ತಿರಸ್ಕರಿಸುವುದಾಗಲೀ, ವಿರೋಧಿಸುವುದಾಗಲಿ ಮಾಡಿಲ್ಲ. 'ದಾಸ' ಎಂಬ ಪದವೇ ಈಶನ ಪಾರಮ್ಯವನ್ನು ತಿಳಿಸುತ್ತದೆ. ಹರಿದಾಸರು ತಾರತಮ್ಯೋಕ್ತವಾಗಿ ಎಲ್ಲ ದೇವ, ದೇವತೆಗಳನ್ನು ಸ್ತುತಿಸುತ್ತಾರೆ. ಯಥಾಯೋಗ್ಯವಾಗಿ ಉಪಾಸನೆ ಮಾಡಲು ತಿಳಿಸಿದ್ದಾರೆ. ಯಾವ ದೇವರನ್ನೇ ಪೂಜಿಸಿದರೂ ಅದು ಸಲ್ಲುವುದು ಆಯಾ ದೇವತೆಗಳಲ್ಲಿ ಅಂತರ್ಗತನಾಗಿರುವ ಶ್ರೀಹರಿಗೇ ಎಂಬ ನಿಲುವು ಇವರದು. ಶ್ರೀಪುರಂದರದಾಸರ ಒಂದು ಉಗಾಭೋಗ ದೇವತಾ ತಾರತಮ್ಯವನ್ನು ಹೀಗೆ ತಿಳಿಸುತ್ತದೆ.

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ ।
ಮತಿ ಪ್ರೇರಿಸುವಳು ಪಾರ್ವತೀ ದೇವಿ ಮು-।
ಕುತಿ ಪಥಕೆ ಮನವೀವ ಮಹರುದ್ರದೇವರು ಹರಿ ಭ-।
ಕುತಿ ದಾಯಕಳು ಭಾರತೀದೇವಿ, ಯು-।
ಕುತಿ ಶಾಸ್ತ್ರಗಳಲ್ಲಿ ವನಜ ಸಂಭವನರಸಿ ।
ಸತ್ಕರ್ಮಗಳ ನಡೆಸಿ ಸುಜ್ಞಾನ ಮತಿಯಿತ್ತು ।
ಗತಿ ಪಾಲಿಸುವ ನಮ್ಮ ಪವಮಾನನು ।
ಚಿತ್ತದಲಿ ಆನಂದ ಸುಖವನೀವಳು ರಮಾ ।
ಭಕ್ತ ಜನರೊಡೆಯ ನಮ್ಮ ಪುರಂದರವಿಠಲನು ।
ಸತತ ಇವರಲಿ ನಿಂತು ಈ ಕೃತಿಯ ನಡೆಸುವನು[1]

ಎಲ್ಲ ದೇವತೆಗಳಿಗೂ ಅವರವರ ಕಾರ್ಯ ಸ್ವರೂಪವನ್ನು ನಿಗದಿಪಡಿಸಲಾಗಿದೆ. ಶ್ರೀಹರಿ ಈ ಎಲ್ಲ ದೇವತೆಗಳ ಅಂತರಂಗದಲ್ಲಿ ನಿಂತು ಅವರ ಮೂಲಕ ನಿಯಮಿತ ಕಾರ್ಯಗಳನ್ನು ನಡೆಸಿ ಜಗತ್ತನ್ನು ನಡೆಸುತ್ತಾನೆ. ಈ ನಂಬಿಕೆಯ ಹಿನ್ನೆಲೆಯಲ್ಲೇ ಮಹಿಳಾ ಹರಿದಾಸರು ದೇವತಾಸ್ತುತಿಗಳನ್ನು ಮಾಡಿದ್ದಾರೆ. ಗಣೇಶ, ಪಾರ್ವತಿ, ರುದ್ರ, ಭಾರತಿ, ಸರಸ್ವತಿ, ವಾಯು, ಲಕ್ಷ್ಮೀದೇವಿ, ಶ್ರೀಹರಿ ಹೀಗೆ ಆರೋಹಣ ತಾರತಮ್ಯದಲ್ಲಿ ಕೀರ್ತನೆಗಳು ರಚಿತವಾಗಿವೆ.

ತಾರತಮ್ಯದಲ್ಲಿ 32 ಕಕ್ಷೆಗಳಲ್ಲಿ ದೇವ, ದೇವತೆಯರಿಗೆ ಸ್ಥಾನಮಾನ ನೀಡಲಾಗಿದೆ. ದಾಸ ಮಹಿಳೆಯರೂ ಸಹ ಈ ಕ್ರಮಕ್ಕೆ ಬದ್ಧರಾಗಿಯೇ ಕೃತಿಗಳನ್ನು ರಚಿಸಿದ್ದಾರೆ. ಮಹಿಳಾ ಹರಿದಾಸರ ಕೀರ್ತನೆಗಳಲ್ಲೂ ಹರಿಪಾರಮ್ಯಕ್ಕೆ ವಿಶೇಷ ಸ್ಥಾನವಿದೆ.

ಗಣಪತಿ: ಗಣಪತಿಯು ಆದಿ ಪೂಜಿತ. ಹರಿದಾಸ–ದಾಸಿಯರು ಗಣಪತಿಯನ್ನು ಮೊದಲು ಸ್ತುತಿಸಿದ್ದಾರೆ. ಗಲಗಲಿ ಅವ್ವನವರು ಗಣಪತಿಯನ್ನು

ಆಕಾಶಕಭಿಮಾನಿ ಶ್ರೀಕಂಠನ ವರಪುತ್ರ
ಏಕದಂತನೆ ವಿಘ್ನೇಶ
ಏಕದಂತನೆ ವಿಘ್ನೇಶ ನಿನ್ನ ಪಾದ ಏಕಚಿತ್ತದಲೆ
ಬಲಗೊಂಬೆ ವಂದಿಸುವೆ ಶ್ರೀಗಣರಾಯ[2]

ಎಂದು ಪ್ರಾರ್ಥಿಸುತ್ತಾರೆ. ಅದೇ ಕೀರ್ತನೆಯಲ್ಲಿ ಗಣಪತಿಯನ್ನು ಆದಿಯಲ್ಲಿ ಪೂಜಿಸಿದ ಸುಭದ್ರೆ, ಪರೀಕ್ಷಿತರಾಜ, ಮಾಂಧಾತರಾಯ, ಶ್ರೀರಾಮ ಮತ್ತು ಪಾಂಡವರನ್ನು ತಮ್ಮ ತಮ್ಮ ಕಾರ್ಯದಲ್ಲಿ ಯಶಸ್ವಿಯಾದದ್ದನ್ನು ತಿಳಿಸುತ್ತಾರೆ.

ವೇದವ್ಯಾಸರಿಗೆ ದಾಸನೆನಿಸಿ ವೇದಗಳನ್ನು ಬರೆದಂತಹ ವಿನಾಯಕನನ್ನು ಸರಸ್ವತಿಬಾಯಿ ಅವರು

ಜಗನ್ನಾಥದಾಸರಿಗೆ ಗುರುವು ನೀನೆಂದೆನಿಸಿ
ಜಗದೊಳಗೆ ಹರಿಕಥಾಮೃತ ಸುರಿಸಿದೆ[3]

ಎನ್ನುತ್ತಾರೆ. ಜಗನ್ನಾಥದಾಸರ ಗುರುಗಳಾದ ಗೋಪಾಲದಾಸರು ಗಣೇಶಾಂಶರೆಂಬ ಪ್ರತೀತಿಯಿದೆ. ಗಣೇಶನಿಗೂ ಜಗನ್ನಾಥದಾಸರಿಗೂ ಗುರುಶಿಷ್ಯ ಸಂಬಂಧವನ್ನು ಇಲ್ಲಿ ಕಲ್ಪಿಸಲಾಗಿದೆ.

ಉಳಿದಂತೆ ಗಣಪತಿಯನ್ನು ವಿಘ್ನನಿವಾರಕನನ್ನಾಗಿ, ಆಕಾಶಾಭಿಮಾನಿ ದೇವತೆಯಾಗಿ, ಶ್ರೀಹರಿಯನ್ನು ತೋರಿಸುವವನಾಗಿ ದಾಸ ಮಹಿಳೆಯರು ಕಂಡಿದ್ದಾರೆ. ಕೆಲವು ಮಹಿಳಾ ಹರಿದಾಸರು ಗಣಪತಿ ಸ್ತುತಿ ಮಾಡಿಲ್ಲ ಆದರೆ ದೀರ್ಘ ಕೃತಿಗಳಲ್ಲಿ ಗಣಪನನ್ನು ಸ್ಮರಿಸಿಯೇ ಕೃತಿ ರಚನೆ ಪ್ರಾರಂಭಿಸುತ್ತಾರೆ.

ಶ್ರೀಹರಿ: ಮಹಿಳಾ ಹರಿದಾಸರು ತಮ್ಮ ಕೃತಿಗಳಲ್ಲಿ ಶ್ರೀಹರಿಯನ್ನು ಸರ್ವೋತ್ತಮನೆಂದು ಪ್ರತಿಪಾದಿಸಿದ್ದಾರೆ. ಶ್ರೀಹರಿಯ ಮಹಿಮೆಗಳನ್ನು, ಅವನ ಕಾರುಣ್ಯವನ್ನು, ದಶಾವತಾರಗಳನ್ನು ದಾಸ ಮಹಿಳೆಯರ ಕೃತಿಗಳಲ್ಲಿ ಕಾಣಬಹುದು. ಕೇಶವಾದಿ 24 ಭಗವದ್ರೂಪಗಳು, ಅವಯವಗಳ ಮಹಿಮೆ, ಇತ್ಯಾದಿಗಳನ್ನು ಸ್ತುತಿಸಿದ್ದಾರೆ. ಈ ಪ್ರಪಂಚದ ಸಕಲ ವ್ಯಾಪಾರವೂ ಶ್ರೀಹರಿಯ ಅಧೀನ. ಅವನ ಅಸಾಧಾರಣ ಮಹಿಮೆಯನ್ನು ಅರಿಯಲು

ಸ್ವತಃ ಲಕ್ಷ್ಮೀದೇವಿಯೂ ಅಸಮರ್ಥಳು. ಹರಿಯೇ ಪರದೈವ ಎಂಬ ವಿಚಾರಗಳನ್ನು ಮಹಿಳಾ ಹರಿದಾಸರು ನಂಬಿದ್ದಾರೆ.

ಶ್ರೀಹರಿಯು ಸರ್ವಾಂತರ್ಯಾಮಿ, ಸರ್ವ ವ್ಯಾಪ್ತ ಎಂಬುದನ್ನು ಹರಪನಹಳ್ಳಿ ಭೀಮವ್ವ ಹೀಗೆ ಹೇಳುತ್ತಾರೆ.

ಪೃಥ್ವಿ ಪರ್ವತದಲ್ಲಿ ಸಪ್ತದ್ವೀಪಗಳಲ್ಲಿ ನಾರಾಯಣ
ಸುತ್ತೇಳು ಸಾಗರದಿ ವ್ಯಾಪ್ತನಾಗ್ವರಿಯಿರುವ ನಾರಾಯಣ

ಅಣುರೇಣು ತೃಣದಲ್ಲಿ ಇರುವ ಆಕಾಶದಲಿ ನಾರಾಯಣ
ರವಿಸೋಮ ತಾರಾಮಂಡಲದಲ್ಲಿ ತಾನಿರುವ ನಾರಾಯಣ

ಹದಿನಾಲ್ಕು ಲೋಕದಲಿ ಹರಿ ವಿಶ್ವವ್ಯಾಪಕನು ನಾರಾಯಣ
ಸರ್ವ ದಿಕ್ಕುಗಳಲ್ಲಿ ಸನ್ನಿಹಿತನಾಗಿರುವ ನಾರಾಯಣ[4] ॥ 8 ॥

ಶ್ರೀಹರಿಯು ಸರ್ವೋತ್ತಮ. ಇತರ ದೇವತೆಗಳು ಅವನ ಅಧೀನ ಎಂಬುದು ಎಲ್ಲ ಹರಿದಾಸ-ದಾಸಿಯರ ಅಭಿಮತ. ಹರಿಯು ಸಂಪೂರ್ಣವಾಗಿ ದೋಷರಹಿತನೂ, ಪರಿಪೂರ್ಣನೂ ಆಗಿದ್ದಾನೆ. ಸಕಲ ದೇವತೆಗಳಿಗೆ ಅಧಿಪತಿಯಾಗಿ ಅವರಲ್ಲಿ ತಾನೇ ನಿಂತು ಕಾರ್ಯಗಳನ್ನು ನಡೆಸುತ್ತಾನೆ. ಹರಿಯು ಸರ್ವೋತ್ತಮನೆಂಬುದನ್ನು ಶ್ರೀಮತಿ ಅಂಬಾಬಾಯಿ ಹೀಗೆ ಹೇಳುತ್ತಾರೆ.

ಸೃಷ್ಟಿಕರ್ತನೆ ನಿನ್ನ ಲಕ್ಷ್ಮಿ ದೇವಿಯು ಸತತ
ಶ್ರೇಷ್ಠತನದಲಿ ಪೂಜೆ ಮಾಡುತಿಹಳೊ
ಅಷ್ಟು ದೇವತೆಗಳು ಆಗಮವನನುಸರಿಸಿ
ಶಿಷ್ಟೇಷ್ಟನೆಂತೆಂದು ಪೂಜೆ ಮಾಡುವರೋ[5] ॥ 9 ॥

ಸರ್ವೋತ್ತಮನಾದ ಶ್ರೀಹರಿಯನ್ನು ಸರ್ವಸ್ವವಾಗಿ, ಸರ್ವಶಕ್ತನಾಗಿ ದಾಸ ಮಹಿಳೆಯರು ಕಂಡಿದ್ದಾರೆ. ಜಗತ್ತಿನ ಸಕಲ ವ್ಯಾಪಾರವನ್ನು ನಡೆಸುವ ಶ್ರೀಹರಿಯು ಸಕಲ ಜೀವರಿಗೆ ಸರ್ವಸ್ವವಾಗಿದ್ದಾನೆ.

ಶ್ರೀಹರಿಯು ಏನು ಮಾಡಲೂ ಸಮರ್ಥನು ಎನ್ನುತ್ತಾರೆ ಜೀವೂಬಾಯಿ

ಅಣುಮೇರು ಮಾಡಿಸುವಿ ಘನ ತೃಣವ ಮಾಡಿಸುವಿ
ಘನ ಕೃಪಾಂಬುಧಿ ನಿನ್ನ ಮಹಿಮೆ ನೂತನವೊ[6]

ನಾರಾಯಣನು ಸದಾ ಭಕ್ತರಾಧೀನನೆಂದು ಸಮರ್ಥಿಸಲು ದ್ರೌಪದಿ, ಗಜರಾಜ, ಅಹಲ್ಯೆ, ಶಬರಿ, ಮೊದಲಾದವರು ಹರಿಯ ಕರುಣೆಗೆ ಪಾತ್ರರಾದ ಉದಾಹರಣೆಗಳನ್ನು ಕೊಡುತ್ತಾರೆ. ಶ್ರೀಹರಿಯ ನಾಮ ಸ್ಮರಣೆಯಿಂದ ಜೀವಿಗಳ ಪಾಪಗಳು ನಾಶವಾಗಿ ಉದ್ಧಾರ ಸಾಧ್ಯವೆಂದು ದಾಸ ಮಹಿಳೆಯರು ನಂಬುತ್ತಾರೆ. ಈ ನಂಬಿಕೆಯನ್ನು ನಿಡಗುರುಕಿ ಜೀವೂಬಾಯಿಯವರು ಹೀಗೆ ಪ್ರತಿಪಾದಿಸುತ್ತಾರೆ.

ಹರಿ ಎಂದ ಮಾತ್ರದಲಿ ಹತ್ತಿದ ಪಾಪ
ಪರಿಹಾರಗುವುದು ಕೇಳಿ
ಹರಿದಾಸರೊಡನೆ ಕೂಡಿ ಸತ್ಸಂಗದಿ
ಹರಿಕೀರ್ತನೆಯನು ಪಾಡಿ
ಹರಿಯ ಮಹಿಮೆಯ ಸ್ಮರಿಸುತಲಿ ಹಗ
ಲಿರುಳು ಚಿಂತನೆ ಮಾಳ್ಪ ಸುಜನರ
ಪರಮ ಕರುಣಾ ಸಾಗರನು ತನ್ನ-
ವರೊಳಿರಿಸುತ ಪೊರೆವ ಸಂತತ[7]

ನಾರಾಯಣನ 24 ನಾಮಗಳನ್ನು ಬಳಸಿಕೊಂಡು ಸರಸ್ವತಿಬಾಯಿಯವರು ನಾಮ ಮಹಿಮೆ ತಿಳಿಸುತ್ತಾರೆ.

ಸರ್ವೇಶ್ವರನಾದ ಶ್ರೀಹರಿಯ ಅನಂತ ಮಹಿಮೆಗಳನ್ನು ವರ್ಣಿಸುವ ಮಹಿಳಾ ದಾಸರು ಮಧ್ವ ಮತಕ್ಕನುಸಾರವಾಗಿ ಹರಿಯನ್ನೇ ಸರ್ವೋತ್ತಮ, ಸರ್ವಶಕ್ತನೆಂಬುದನ್ನು ಪ್ರತಿಪಾದಿಸುತ್ತಾರೆ. ಅವನು ಬಿಂಬರೂಪಿ, ಸರ್ವತಂತ್ರ ಸ್ವತಂತ್ರ, ಉಳಿದವರೆಲ್ಲರೂ ಅವನ ಅಧೀನರು ಮತ್ತು ಅವನ ಇಚ್ಛೆಯಿಂದಲೇ ಎಲ್ಲಾ ನಡೆಯುವುದೆಂಬ ಭಾವ ಮಹಿಳಾ ಹರಿದಾಸರ ಕೀರ್ತನೆಗಳಲ್ಲಿ ಕಂಡು ಬರುತ್ತದೆ.

<u>ಲಕ್ಷ್ಮೀದೇವಿ:</u> ಲಕ್ಷ್ಮೀದೇವಿಯು ಶ್ರೀಹರಿಯ ಪ್ರಥಮ ದಾಸಿ. ಕ್ಷೀರ ಸಾಗರ ಮಥನ ಕಾಲದಲ್ಲಿ ಪ್ರಾದುರ್ಭಾವಳಾದ ಲಕ್ಷ್ಮೀ ದೇವಿಯು ದೋಷರಹಿತನಾದ ಶ್ರೀಹರಿಯನ್ನು ವರಿಸುತ್ತಾಳೆ. ಲಕ್ಷ್ಮೀ ದೇವಿಗೂ ಶ್ರೀಹರಿಯ ಅಸಾಧಾರಣ ಮಹಿಮೆಯನ್ನರಿಯಲು ಸಾಧ್ಯವಿಲ್ಲ. ಶ್ರೀಹರಿಯು ಲಕ್ಷ್ಮಿಯ ಮೂಲಕ ಎಲ್ಲ ಸೃಷ್ಟಿ ಕಾರ್ಯಗಳನ್ನು ನಡೆಸುತ್ತಾನೆ. "ಚೇತನದಲ್ಲಿ ಲಕ್ಷ್ಮಿಯನ್ನು 'ಅಕ್ಷರ' ಚೇತನಳೆಂದೂ ಜೀವರನ್ನು 'ಕ್ಷರ' ಚೇತನರೆಂದೂ ಪರಿಗಣಿಸಲಾಗಿದೆ. ಲಕ್ಷ್ಮಿಯು ಎಲ್ಲ ಚೇತನಗಳಲ್ಲಿಯೂ ವ್ಯಾಪಿಸಿರುತ್ತಾಳೆ."[8]

ಲಕ್ಷ್ಮೀ ದೇವಿಯು ಪ್ರಕೃತಿ ನಿಯಾಮಕಳು. ಮಹಿಳಾ ಹರಿದಾಸರು ಲಕ್ಷ್ಮೀದೇವಿಯನ್ನು ಸಂಪತ್ತಿನ ಅಧಿದೇವತೆಯಾಗಿ, ಸೌಮಂಗಲ್ಯ ಪ್ರಸಾದಿಸುವ ದೇವಿಯಾಗಿ, ಬಡತನ ನೀಗಿಸುವ ಮಾತೆಯಾಗಿ ಕಂಡಿದ್ದಾರೆ. ಅವ್ಯಕ್ತ ತತ್ವಾಭಿಮಾನಿನಿಯಾದ ಲಕ್ಷ್ಮೀದೇವಿಯನ್ನು ಒಬ್ಬಳನ್ನೇ ಆರಾಧಿಸದೆ ನಾರಾಯಣನ ಸಮೇತ ಅವಳನ್ನು

ಪೂಜಿಸಬೇಕೆಂದು ಹೇಳುತ್ತಾರೆ. ಇದನ್ನು ಸರಸ್ವತಿ ಬಾಯಿಯವರು ತಮ್ಮ ಒಂದು ಕೀರ್ತನೆಯಲ್ಲಿ ಹರಿ-ಸಿರಿ ಒಂದೇ ಎನ್ನುತ್ತಾರೆ.

ಲಕ್ಷ್ಮಿಯ ಮೂಲಕ ಶ್ರೀಹರಿಯು ನಡೆಸುವ ಸೃಷ್ಟಿ ಕಾರ್ಯಗಳನ್ನು ಅಂಬಾಬಾಯಿ ಹೀಗೆ ಹೇಳುತ್ತಾರೆ. ಲಕ್ಷ್ಮೀ ದೇವಿಯನ್ನು ಎಬ್ಬಿಸುವ ಹಾಡಿನಲ್ಲಿ

ಸೃಷ್ಟಿಸೆಂದೆನುತ ಅಂಬ್ರಣೆ ರೂಪದಿಂದ್ಧರಿ
ಗಿಷ್ಟ ಸ್ತೋತ್ರವ ಮಾಡಿ ಎಬ್ಬಿಸಬೇಕು
ಅಷ್ಟ ಭುಜದ ಲಕುಮಿ ಪ್ರಕೃತಿರೂಪಿಣಿಯಾಗಿ
ಸೃಷ್ಟಿ ಕಾರ್ಯಕೆ ಅನುವಾಗಬೇಕು

ಸಕಲ ದೇವತೆಗಳ ಸೃಷ್ಟಿಮಾಡಲಿಬೇಕು
ಮುಕುತಿ ಯೋಗ್ಯರ ಸೇವೆ ಕೊಳ್ಳಬೇಕು
ಸಕಲ ರೂಪದಲಿ ಶ್ರೀಹರಿಯ ಸೇವಿಸಬೇಕು
ಅಕಳಂಕೆ ಆದಿ ದೇವತೆ ಎನಿಸಬೇಕು[9]

ಶ್ರೀಹರಿಯ ಚತುರಾತ್ಮಕ ರೂಪಗಳಾದ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ರೂಪಗಳಲ್ಲಿ ಲಕ್ಷ್ಮೀದೇವಿಯು ಕ್ರಮವಾಗಿ ಮಾಯಾ, ಜಯಾ, ಕೃತಿ, ಶಾಂತಿ ಎಂಬ ರೂಪಗಳಲ್ಲಿ ಶ್ರೀಹರಿಯ ಸೇವೆ ಮಾಡುತ್ತಾಳೆ.

ಅಂಬಾಬಾಯಿಯವರು ಮಹಾಲಕ್ಷ್ಮಿಯ ಸ್ವರೂಪದ ಸಾರವನ್ನು ಎರಡೇ ನುಡಿಗಳಲ್ಲಿ ಸಂಗ್ರಹಿಸಿ ಹೇಳಿದ್ದಾರೆ.

ಜಗನ್ಮೋಹನಾಕಾರಳೂ । ಶ್ರೀಹರಿಯ
ಜಗ ಸೃಷ್ಟಿಗನುಕೂಲಳೂ
ಬಗೆ ಬಗೆಯವತಾರಳೂ । ಕ್ಷಣ ಹರಿಯ
ಅಗಲದಂತಿರುತಿಪ್ಪಳೂ

ಹರಿಗೆ ಗುಣದಿಂ ಕಿರಿಯಳೂ । ಮತ್ತೆಲ್ಲ
ಪರಿಯಲ್ಲಿ ಹರಿಗೆ ಸಮಳೂ
ಶರಣೆಂದವರ ಕಾಯ್ವಳೂ । ಬೊಮ್ಮಾದಿ
ಸುರರ ಸೃಜಿಸುವ ಶಕ್ತಳೂ [10]

ಹರಿಯ ನಂತರದ ಸ್ಥಾನ ಲಕ್ಷ್ಮೀದೇವಿಗೆ. ಶ್ರೀಹರಿ ಲಕ್ಷ್ಮಿಯಿಂದ ಸೃಷ್ಟಿಕಾರ್ಯದಲ್ಲಿ ಸಹಾಯ ಪಡೆಯುತ್ತಾನೆ. ಶ್ರೀಹರಿ ಲಕ್ಷ್ಮಿಯರಿಗೆ ವಿಯೋಗವಿಲ್ಲ. ಶ್ರೀಹರಿಗಿಂತ ಗುಣದಲ್ಲಿ ಕಿರಿಯಳಾದ ಲಕ್ಷ್ಮಿ ಶರಣಾಗತರನ್ನು ಪೊರೆಯುತ್ತಾಳೆ. ಬ್ರಹ್ಮಾದಿ ಸುರರನ್ನು ಸೃಷ್ಟಿಸುವ ಶಕ್ತಿಯುಳ್ಳವಳೆಂದು ಕಾಣುತ್ತಾರೆ.

ಹರಿಯ ವಕ್ಷಸ್ಥಳದಲ್ಲಿ ನಿಂತು ನಿತ್ಯ ಅವನ ಸೇವೆ ಮಾಡುವ ಜಗತ್ತಿನ ಮಾತೆಯಾದ ಲಕ್ಷ್ಮಿಯ ನಾನಾ ರೂಪ, ಕಾರ್ಯಗಳನ್ನು ದಾಸ ಮಹಿಳೆಯರು ಸ್ತುತಿಸಿದ್ದಾರೆ. ಭೀಮವ್ವನವರಂತೂ ಲಕ್ಷ್ಮೀದೇವಿಯ ಸೌಂದರ್ಯ, ಒಡವೆಗಳು, ಭಕ್ಷ್ಯಗಳನ್ನು ತಾವು ರಚಿಸಿರುವ ಐದು ಶುಕ್ರವಾರದ ಹಾಡಿನಲ್ಲಿ ಮನದಣಿಯೆ ವರ್ಣಿಸಿದ್ದಾರೆ.

ಬ್ರಹ್ಮ: ಸೃಷ್ಟಿಕರ್ತನಾದ ಬ್ರಹ್ಮದೇವರು ಶ್ರೀಹರಿಯ ನಾಭಿ ಕಮಲದಿಂದ ಜನಿಸಿದನು. ಶ್ರೀಹರಿಯ ಆಜ್ಞೆಯಂತೆ ಹದಿನಾಲ್ಕು ಲೋಕಗಳನ್ನು ಸೃಷ್ಟಿಸಿ, ತನ್ನ ಚತುರ್ಮುಖಗಳಿಂದ ಸದಾ ವೇದಗಳನ್ನು ಪಠಿಸುತ್ತಾ ಹರಿಯ ರೂಪವನ್ನೇ ಸದಾ ಚಿಂತಿಸುವ ಬ್ರಹ್ಮದೇವರ ಬಗ್ಗೆ ಕೋಲಾರ ಪದ್ಮಾಬಾಯಿಯವರು ಮತ್ತು ಸೀತಾಬಾಯಿ ರಾ. ಪುರೋಹಿತರವರು ಒಂದೊಂದು ಕೀರ್ತನೆ ರಚಿಸಿದ್ದಾರೆ. ಎರಡು ಕೀರ್ತನೆಗಳನ್ನು ಬಿಟ್ಟರೆ ಬ್ರಹ್ಮನ ಕುರಿತ ಯಾವ ಕೃತಿಯೂ ದಾಸ ಮಹಿಳೆಯರಲ್ಲಿ ಕಂಡು ಬಂದಿಲ್ಲ.

ವಾಯುದೇವರು: ಬ್ರಹ್ಮನ ನಂತರದ ಸ್ಥಾನ ವಾಯುದೇವರಿಗೆ. ವಾಯು ದೇವರನ್ನು ಗುರುಗಳೆಂದು ಪರಿಗಣಿಸಲಾಗಿದೆ. ಹರಿಗೆ ಸಲ್ಲಿಸುವ ಸೇವೆ ವಾಯು ದೇವರ ಮುಖಾಂತರವೇ ಹರಿಯನ್ನು ತಲುಪಬೇಕು. ವಾಯು ದೇವರು ಪರಮಾತ್ಮ-ಜೀವಾತ್ಮರ ನಡುವಿನ ಸೇತುವೆಯಂತೆ. "ಮೋಕ್ಷದಾತ ಹರಿಯೇ ಆದರೂ ಅದು ವಾಯು ದೇವರ ಮೂಲಕವೇ ಜೀವರಿಗೆ ಪ್ರಾಪ್ತವಾಗಬೇಕು. ಪರಮಾತ್ಮನು ಮುಖ್ಯ ಪ್ರಾಣಾಂತರ್ಗತನು"[11]

ಹೆಳವನಕಟ್ಟೆ ಗಿರಿಯಮ್ಮ ವಾಯುದೇವರ ಮೊದಲ ಅವತಾರವಾದ ಹನುಮನ ಬಗ್ಗೆ ಮಾತ್ರ ಸ್ತುತಿಸಿದ್ದಾಳೆ. ಗಿರಿಯಮ್ಮನ ಕೀರ್ತನೆಗಳಲ್ಲಿ ಉಳಿದೆರಡು ಅವತಾರಗಳ ಪ್ರಸ್ತಾಪ ಇಲ್ಲ. ದ್ವೈತ ಸಿದ್ಧಾಂತದ ಅವತಾರತ್ರಯ ಕಲ್ಪನೆ ಗಿರಿಯಮ್ಮನ ಕೃತಿಗಳಲ್ಲಿ ಕಂಡು ಬರುವುದಿಲ್ಲ. ಮತ್ತೊಬ್ಬ ದಾಸ ಮಹಿಳೆ ಸರಪಾಡಿ ಗಂಗಮ್ಮನವರ ಕೃತಿಗಳಲ್ಲೂ ಆಂಜನೇಯನನ್ನು ಮಾತ್ರ ಸ್ತುತಿಸಿದ್ದಾರೆ. ಇವರಿಬ್ಬರೂ ಭಾಗವತ ಸಂಪ್ರದಾಯದವರಾದ ಕಾರಣ ಅವತಾರತ್ರಯದ ಕಲ್ಪನೆ ಇವರಲ್ಲಿ ಇಲ್ಲ ಹಾಗೆಯೇ ಶ್ರೀವೈಷ್ಣವ ಸಂಪ್ರದಾಯದವರಾದ ಯದುಗಿರಿಯಮ್ಮ ಮತ್ತು ನಂಜನಗೂಡು ತಿರುಮಲಾಂಬಾರವರ ಕೃತಿಗಳಲ್ಲಿ ವಾಯುದೇವರ ಪ್ರಸ್ತಾಪವಿಲ್ಲ. ದ್ವೈತ ಸಂಪ್ರದಾಯದವರಾದರೂ ಶಾಂತಿಬಾಯಿ, ಓರವಾಯಿ ಲಕ್ಷ್ಮೀದೇವಮ್ಮನವರೂ ವಾಯುದೇವರ ಪರ ಕೃತಿ ರಚನೆ ಮಾಡಿಲ್ಲ. ಇವರನ್ನು ಹೊರತುಪಡಿಸಿ ಮಿಕ್ಕೆಲ್ಲ ದಾಸಮಹಿಳೆಯರು ವಾಯುದೇವರ ಅವತಾರತ್ರಯಗಳನ್ನು ಕುರಿತ ನೂರಾರು ಕೀರ್ತನೆಗಳನ್ನು ರಚಿಸಿದ್ದಾರೆ.

ಸರಸ್ವತಿ: ಬ್ರಹ್ಮನ ರಾಣಿಯೂ, ವೇದಾಭಿಮಾನಿಯೂ, ಸಕಲ ವಿದ್ಯಾಪ್ರದಾಯಕಳೂ ಆದ ಸರಸ್ವತಿಯು ಶ್ರೀಹರಿಯ ಸೊಸೆಯಾಗಿ ಅವನ ಪ್ರೇರಣೆಯಿಂದಲೇ ಕಾರ್ಯ ನಿರ್ವಹಿಸುತ್ತಾಳೆ. ವೇದ ಪ್ರತಿಪಾದ್ಯಳೂ, ವಾಗಭಿಮಾನಿಯೂ ಆದ ಸರಸ್ವತಿಯು ಶ್ವೇತವಸ್ತ್ರಧಾರಿಣಿಯಾಗಿ, ವೀಣಾಪಾಣಿಯಾಗಿದ್ದಾಳೆ. ಬುದ್ಧಿಗೆ ಅಭಿಮಾನಿಯಾದ ಸರಸ್ವತಿಗೆ ಸರಸ್ವತಿ, ವಾಣಿ, ವಾಗ್ದೇವಿ, ವಿಧಿಸತಿ, ಶಾರದೆ, ಬ್ರಹ್ಮಾಣಿ, ಗೀರ್ವಾಣಿ ಮುಂತಾದ ಹೆಸರುಗಳಿವೆ.

ಅಕ್ಷರರೂಪದಲ್ಲಿ ಶ್ರೀಹರಿಯನ್ನು ಸ್ತುತಿಸುವ ಸರಸ್ವತಿಯಲ್ಲಿ ಅಕ್ಷರ ಅರಿಯುವ ಭಾಗ್ಯವನ್ನು ಸರಸ್ವತಿಬಾಯಿಯವರು ಬೇಡುತ್ತಾರೆ.

ಅಕ್ಷರಕ್ಷರ ರೂಪದಿ ಶ್ರೀಹರಿಯಾ
ಅಕ್ಷಯ ನಾಮವನು ಸ್ತುತಿಯ ಮಾಳ್ಪ
ಸುಕ್ಷೇಮ ಪಡೆದಿಹ ಮಾತೆ ಸರಸ್ವತಿ ಪ್ರತಿ
ಅಕ್ಷರವನು ಅರಿವಾ ಭಾಗ್ಯವ ತೋರೆ [12]

ಯದುಗಿರಿಯಮ್ಮನವರು ಸರಸ್ವತಿಯನ್ನು ಶೃಂಗೇರಿ ಶಾರದಾಂಬೆಯಲ್ಲಿ ಕಾಣುತ್ತಾರೆ.

ಸತ್ಯಲೋಕವ ಬಿಟ್ಟು ಅತ್ಯಂತ ಹರುಷದಿ
ಭಕ್ತರಿಗೆ ತಾನೊಲಿದು ಬಂದು
ಮತ್ತೆ ಶೃಂಗೇರಿಯ ರತ್ನದ ಪೀಠದಿ
ಪ್ರತ್ಯಕ್ಷಳಾದ ಶಾರದ ದೇವಿಗೆ [13]

ನಂಜನಗೂಡು ತಿರುಮಲಾಂಬಾರವರು ಸರಸ್ವತಿ ಕುರಿತು ಸುಮಾರು 10 ಕೀರ್ತನೆಗಳನ್ನು ರಚಿಸಿದ್ದಾರೆ.

ವೀಣಾಪಾಣಿಯಾಗಿ ಶ್ರೀಹರಿಯ ಮಹಿಮೆಗಳನ್ನು ಸ್ತುತಿಸುತ್ತಿರುವ ವಾಣಿಯು ವಿದ್ಯಾ-ಬುದ್ಧಿಗಳನ್ನು ಪ್ರಸಾದಿಸುವ ದೇವಿಯಾಗಿ ದಾಸ ಮಹಿಳೆಯರು ಕಂಡಿದ್ದಾರೆ. ವಾಗ್ದೇವಿಯು ತಮ್ಮ ನಾಲಗೆಯಲ್ಲಿ ಶ್ರೀಹರಿ ಸ್ಮರಣೆ ನಿರಂತರ ನುಡಿಸಲಿ ಎಂಬುದು ದಾಸ ಮಹಿಳೆಯರ ಪ್ರಾರ್ಥನೆ.

ಭಾರತೀದೇವಿ: ಭಾರತೀದೇವಿ ವಾಯುಪತ್ನಿ. ಹರಿಭಕ್ತಿಯನ್ನು ಪ್ರೇರಿಸುವವಳು. ವಾಯುದೇವರನ್ನು ಭಾವೀ ಬ್ರಹ್ಮನೆಂದು ಹೇಳಲಾಗುತ್ತದೆ. ಆದ್ದರಿಂದ ಭಾರತಿಯನ್ನು ಸರಸ್ವತಿಯ ಪಟ್ಟಕ್ಕೆ ಬರುವವಳೆಂದು ಗಲಗಲಿ ಅವ್ವ ಹೇಳುತ್ತಾರೆ.

ನೀನೆ ಮುಂದಣ ವಾಣಿ ಪ್ರಾಣದೇವರ ರಾಣಿ
ಪ್ರವೀಣೆ ಸುಪ್ಪಾಣಿ ಕಲ್ಯಾಣಿ ನಿನ್ನನುಗಾಣೆ [14]

ಭಾರತಿಯು ಪ್ರದ್ಯುಮ್ನನ ಮಗಳು, ಗರುಡ, ಶೇಷ, ರುದ್ರಾದಿ ವಂದ್ಯಳು, ಹರಿಯ ಸೊಸೆ ತ್ರಿವಿಧ ಜೀವರೊಳಗೆ ನಿಂತು ತ್ರಿವಿಧ ಪ್ರೇರಣೆ ಮಾಡುವಳು, ವಾಯುದೇವರ ಎರಡನೆಯ ಅವತಾರವಾದ ಭೀಮಾವತಾರದಲ್ಲಿ ಇವಳೇ ದ್ರೌಪದೀದೇವಿಯಾಗಿ ಭೀಮನ ಪತ್ನಿಯಾದಳು.

ಅಂಬಾಬಾಯಿಯವರು "ದ್ರೌಪದಿ ಸುಳಾದಿ" ರಚಿಸಿದ್ದು ಅದರಲ್ಲಿ ಆಗಮ, ಪುರಾಣ, ಶೃತಿ-ತತಿಗಳಭಿಮಾನಿ ಭಾರತಿ ಎಂದಿದ್ದಾರೆ. ಐವರು ಪತಿಗಳನ್ನು ವರಿಸಿದ್ದರೂ ಆಕೆ ಎಂತಹ ಪತಿವ್ರತೆಯೆಂಬುದನ್ನು ತಿಳಿಸುತ್ತಾರೆ.

> ಕೃತಿಸುತೆ ಕೊಂಡದಿ ಉದಿಸಿ ಸುತೆ ಎನಿಸಿದೆ ದ್ರುಪದನಿಗೆ
> ಚ್ಯುತರಹಿತ ಯೌವನಯುತೆ ಐವರಿಗರಸಿಯು ಆದೆ
> ಪ್ರತಿಯಿಲ್ಲದ ಪತಿವ್ರತೆ ಸುರತತಿ ಜನನಿಯುನೀನೌ ಮಾ-
> ರುತಸುತನಲ್ಲದೆ ನಿನಗಿನ್ನಿತರರ ಸಂಗವು ಉಂಟೆ
> ಸುತರಂದದಲಿ ನಾಲ್ವರ ತಿಳಿದತಿಶಯದಲಿ ಅವರವರಾ
> ಸತಿಯರ ನಿನ್ನೊಳಗಡಗಿಸಿ ರತಿ ಕಾಲದಲೊಲಿದಿತ್ತೆ [15]

ಇದೇ ಸುಳಾದಿಯಲ್ಲಿ ದ್ರೌಪದಿಯು ವಾಯುದೇವರ ಮೂಲಕ ನಡೆಸಿದ ದುಷ್ಟರ ನಾಶವನ್ನು ಹೇಳುತ್ತಾರೆ. ದ್ರೌಪದಿಯನ್ನು 'ಮುಕ್ತರ ಬಂಧು', 'ಭಕ್ತಿದಾತೆ' ಎಂದು ವರ್ಣಿಸುತ್ತಾ ಸತ್ಯಾಪ್ರಿಯ (ಹರಿ) ನನ್ನು ತೋರೆಂದು ಬೇಡಿಕೊಳ್ಳುತ್ತಾರೆ.

<u>**ರುದ್ರದೇವರು:**</u> ಹರಿದಾಸರು ತಮ್ಮ ಕಾಲದ ಸಮಾಜದಲ್ಲಿ ಹರಿ-ಹರರ ಮಧ್ಯೆ ಭಕ್ತರ ಮನದಲ್ಲಿದ್ದ ಭೇದ ಗುಣವನ್ನು ಮನಗಂಡು ಹರನನ್ನೂ ಸ್ತುತಿಸಿದ್ದಾರೆ. ಶ್ರೀಹರಿಯನ್ನು ತೋರುವ ಗುರು ಹರನೆಂದು ಪ್ರತಿಪಾದಿಸಿದ್ದಾರೆ. ರುದ್ರದೇವರ ಹೊರತು ಹರಿಯ ಸಾಕ್ಷಾತ್ಕಾರ ಸಾಧ್ಯವಿಲ್ಲ. ಹರಿಯಲ್ಲಿ ದೃಢ ಭಕ್ತಿ ಹೊಂದಲು ರುದ್ರದೇವರ ಅನುಗ್ರಹ ಅಗತ್ಯ. ಮನೋನಿಯಾಮಕರೂ, ಅಹಂಕಾರ ತತ್ವಾಭಿಮಾನಿಗಳೂ, ಪರಮ ವೈರಾಗ್ಯಶಾಲಿಯೂ ಆದ ರುದ್ರದೇವರು ಪರಮ ವೈಷ್ಣವೋತ್ತಮರೆಂದೂ ದಾಸ ಮಹಿಳೆಯರು ಸ್ತುತಿಸಿದ್ದಾರೆ.

ರುದ್ರದೇವರು ಬ್ರಹ್ಮನ ಮಗನೆಂದು, ಶ್ರೀಹರಿಯ ಪೌತ್ರನೆಂದು ಹೇಳಲಾಗುತ್ತದೆ. ಇದನ್ನು ಅಂಬಾಬಾಯಿಯವರ ಶಿವಸ್ತುತಿಯಲ್ಲಿ ಕಾಣಬಹುದು.

ಅಜನ ಭ್ರೂಮಧ್ಯದಲಿ ಜನಿಸಿದೆಯೊ ಜಗದಲ್ಲಿ
ಅಜಸುತನ ಯಾಗ ಭಂಜನ । ಭಂಜನಗೊಳಿಸಿದೆ
ತ್ರಿಜಗದಲಿ ನಿನಗೆ ಸರಿಯುಂಟೆ ವಿಷ್ಣು ಭಕ್ತರೊಳಗೆ ಶ್ರೇಷ್ಠ ನೀನಹುದಯ್ಯ [16]

ಎಂದು ಅಂಬಾಬಾಯಿ ಸ್ತುತಿಸುತ್ತಾರೆ.

ರುದ್ರ ದೇವರನ್ನು ಪರಮ ವೈರಾಗ್ಯಶಾಲಿಗಳಾಗಿ ಮತ್ತು ವೈಷ್ಣವೋತ್ತಮರಾಗಿ ಮಹಿಳಾ ಹರಿದಾಸರು ಕಂಡಿದ್ದಾರೆ. ನಿಡಗುರುಕಿ ಜೀವೂಬಾಯಿಯವರ ಈ ಕೀರ್ತನೆಯಲ್ಲಿ ಹರನನ್ನು ಈ ಪರಿ ವೈರಾಗ್ಯವು ಏತಕ್ಕಾಗಿ ಎಂದು ಪ್ರಶ್ನಿಸಿದ್ದಾರೆ.

ಯಾರಿಗಾಗಿ ಈ ಪರಿ ವೈರಾಗ್ಯವು
ವೀರ ವೈಷ್ಣವ ಭಕ್ತಾಗ್ರಣಿಯೆ ॥ ಪ ॥

ಮಾರ ಹರನೆ ಮನ್ಮಥನ ವೈರಿಯೆ ಮನ
ಸಾರ ಶ್ರೀರಾಮನಾಮವ ಜಪಿಸುವದಿದು ॥ ಅ.ಪ. ॥

ಮುತ್ತು ಮಾಣಿಕ್ಯದ ಕಿರೀಟ ಧರಿಸದೆ
ನೆತ್ತಿಲಿ ಕೆಂಜೆಡೆ ಸುತ್ತಿಹುದು
ಹಸ್ತದಲಿ ಶಂಖ ಚಕ್ರಗದೆ ಪದುಮವ ಬಿಟ್ಟು
ಉತ್ತಮ ಡಮರು ತ್ರಿಶೂಲ ಪಿಡಿದಿರುವುದಿದು [17]

ಕಸ್ತೂರಿ ತಿಲಕವಿಡದೆ ಭಸ್ಮ ಲೇಪಿಸುವುದು, ಹರಿಯೇ ಮಿತ್ರನಾಗಿರಲು ಕಪಾಲ ಹಿಡಿದು ಬೇಡುವುದು ತರವೇ, ಪೀತಾಂಬರದ ಬದಲು ಕರಿ ಚರ್ಮ ವಿಹಿತವೇ, ಸೇವೆಗೆ ಬೇಕಾದಂತೆ ಭೃತ್ಯರಿದ್ದರೂ ಪಿಶಾಚಗಣಗಳು ಬೇಕೆ ಎಂದೆಲ್ಲ ಪ್ರಶ್ನಿಸಿ ಶಿವನ ವೈರಾಗ್ಯವನ್ನು ವರ್ಣಿಸುತ್ತಾರೆ.

ಹರನಿಲ್ಲದೆ ಹರಿ ಕರುಣೆ ಅಸಾಧ್ಯ. ಶ್ರೀಹರಿಯ ಕೃಪೆಗೆ ಹರನ ಆಶೀರ್ವಾದವೂ ಮುಖ್ಯ. ಹೆಳವನಕಟ್ಟೆ ಗಿರಿಯಮ್ಮ, ಶಾಂತಿಬಾಯಿ ಮೊದಲಾದವರು ಹರಿಹರರಲ್ಲಿ ಭೇದ ತೋರದೆ ಸಮಾನ ಭಾವದಿಂದ ಸ್ತುತಿಸಿದ್ದಾರೆ.

<u>ಪಾರ್ವತೀದೇವಿ:</u>

ರುದ್ರದೇವರ ಪತ್ನಿ ಪಾರ್ವತೀ ದೇವಿಯು ಜನಸಾಮಾನ್ಯರಿಗೆ ಅತೀ ಪ್ರಿಯಳಾದ ದೇವಿ. ಸೌಭಾಗ್ಯ, ಮುತ್ತೈದೆತನ ಕರುಣಿಸುವ ಪಾರ್ವತೀ ದೇವಿಯು ಗೌರಿ, ಶರ್ವಾಣಿ, ಶಿವೆ, ಮುಂತಾದ ಹೆಸರುಗಳಿಂದ ಕರೆಸಿಕೊಳ್ಳುತ್ತಾಳೆ. ಗೌರಿ ಸಾಮಾನ್ಯ ಮಹಿಳೆಯರಿಗೆ ಅತಿ ಪ್ರಿಯಳೆಂಬುದು ಗೌರಿ ಕುರಿತು ಆಚರಿಸುವ

ಅನೇಕ ವ್ರತಗಳಲ್ಲಿ ಕಂಡು ಬರುತ್ತದೆ. ಪ್ರತಿ ಮಾಸದಲ್ಲೂ ಗೌರೀ ವ್ರತಗಳು ಬೇರೆ ಬೇರೆ ಹೆಸರುಗಳಿಂದ ಆಚರಿಸಲ್ಪಡುತ್ತದೆ. ಲಕ್ಷ್ಮೀ–ತುಳಸಿಯರ, ರುಕ್ಮಿಣಿ–ಸತ್ಯಭಾಮೆಯರ ಕಲಹಕ್ಕಿಂತ ಗಂಗೆ–ಗೌರಿ ಕಲಹ ಹೆಚ್ಚು ಪ್ರಿಯವಾಗುತ್ತದೆ. ದಾಸ ಮಹಿಳೆಯರು ಗೌರಿಯನ್ನು ಕುರಿತು ಕೀರ್ತನೆಗಳನ್ನೂ ಅನೇಕ ಗೌರಿ ವ್ರತಗಳ ಹಾಡುಗಳನ್ನು ರಚಿಸಿದ್ದಾರೆ. ಗೌರೀ ವ್ರತಗಳಲ್ಲೇ ಹಲವು ವೈವಿಧ್ಯಗಳಿವೆ. ಹಲವು ಹೆಸರಿನ ಗೌರಿಯರಿದ್ದಾರೆ. ಸುಮಂಗಲಿಯರು ಗೌರೀ ದೇವಿಯನ್ನು ನಿತ್ಯವೂ ಪೂಜಿಸಬೇಕೆಂದು ಹೇಳಲಾಗಿದೆ. ಗೌರಿಯು ಸೌಭಾಗ್ಯ, ಸಂಪತ್ತು, ಸಂಸಾರ ಸುಖ ನೀಡುವ ಅಧಿಕಾರವನ್ನು ಪರಮಾತ್ಮನಿಂದ ಪಡೆದಿದ್ದು, ಸೌಮಾಂಗಲ್ಯಕ್ಕಾಗಿ ಮಹಿಳೆಯರು ಆಕೆಯನ್ನು ನಿತ್ಯವೂ ಪೂಜಿಸುವರು. ಸರಸ್ವತಿಬಾಯಿ ಅವರ ಒಂದು ಕೃತಿ ಹೀಗಿದೆ

ಭಾಗ್ಯದೇವತೆ ನೀನು ಸೌಭಾಗ್ಯ ಮಾಂಗಲ್ಯದಾ
ಭಾಗ್ಯವನು ಕೊಟ್ಟು ಕಾಪಾಡು ತಾಯೆ ಕಾಯೆ
ಯೋಗ ಮೂರುತಿ ಶ್ರೀಶ್ರೀನಿವಾಸ ಸಹೋದರಿಯೆ
ಅನುರಾಗದಿಂ ಹರಿಪದವ ಭಜಿಪ ಭಾಗ್ಯವನಿತ್ತು [18]

ಗೋದಾವರಿಬಾಯಿಯವರು ಒಂದು 3 ನುಡಿಗಳ ಸಣ್ಣ ಕೀರ್ತನೆಯಲ್ಲಿ ಪಾರ್ವತಿಯ ಅನೇಕ ಹೆಸರುಗಳನ್ನು ಹೇಳುತ್ತಾರೆ.

ಗಿರಿಜೆ ಕಾಳಿ ಶರ್ವಾಣಿ । ಹರಮೋಹಿತೆ ರುದ್ರಾಣಿ ।
ದುರುಗ ಚಂಡಿ ಭವಾನಿ । ಕರುಣಿಸೆ ದಾಕ್ಷಾಯಿಣಿ

ಸತಿ ಶಿವಾ ಸುಂದರಿ । ಸ್ತುತಿಪರ ಬಂಧುರಿ
ಗತಿ ಕೊಡೆ ಶಂಕರಿ । ಯತಿವರ ಕಿಂಕರಿ [19]

ಪಾರ್ವತಿ ಪರಮೇಶ್ವರರು ಹರಿಭಕ್ತಿದಾಯಕರೆಂದು ಜಗತ್ತಿನ ತಂದೆ ತಾಯಿಗಳೆಂದು ದಾಸ ಮಹಿಳೆಯರು ಸ್ತುತಿಗೈದಿದ್ದಾರೆ.

<u>ತುಳಸಿ:</u>

ತುಳಸಿಯು ದೇವ ವೃಕ್ಷಗಳಾದ ಅರಳಿ, ಆಲ, ನೆಲ್ಲಿ, ಬಿಲ್ವ, ಔದುಂಬರಗಳ ಸಾಲಿಗೆ ಸೇರುತ್ತದೆ. ಈ ಎಲ್ಲ ವೃಕ್ಷಗಳಲ್ಲಿ ತುಳಸಿಗೆ ಹೆಚ್ಚು ಪ್ರಾಧಾನ್ಯವಿದೆ. ತುಳಸಿಯು ವಿಷ್ಣುವಿನ ಆನಂದಬಾಷ್ಪದಿಂದ ಅಮೃತಭಾಂಡದಲ್ಲಿ ಉತ್ಪನ್ನವಾದುದರಿಂದ ಅದಕ್ಕೆ ಹೆಚ್ಚಿನ ಮಹತ್ವ ದೊರಕಿದೆ. ತುಳಸಿಯಲ್ಲಿ ಸಕಲ ತೀರ್ಥಗಳು, ಸಕಲ ದೇವತೆಗಳು ಸನ್ನಿಹಿತರಾಗಿದ್ದಾರೆ. ಲಕ್ಷ್ಮೀ ಸನ್ನಿಧಾನವುಳ್ಳ ತುಳಸಿ ಹರಿಗೆ ಬಲು ಪ್ರಿಯ. ತುಳಸಿಯಿಲ್ಲದ ಪೂಜೆ ಹರಿಗೆ ಸಮ್ಮತವಲ್ಲ. ತುಳಸಿಯ ಎಲೆ, ಕಾಷ್ಠ, ಮೃತ್ತಿಕೆ ಎಲ್ಲವೂ ಪವಿತ್ರವೆನಿಸುತ್ತದೆ.

ಶ್ರೀಹರಿಯ ಅನುಗ್ರಹಕ್ಕಾಗಿ, ಸೌಮಾಂಗಲ್ಯ ವೃದ್ಧಿಗಾಗಿ ಮಹಿಳೆಯರು ಪ್ರತಿನಿತ್ಯ ತುಳಸೀ ಪೂಜೆ ಮಾಡುವುದು ಶಾಸ್ತ್ರ ವಿಹಿತವಾಗಿದೆ. ಅಂತಹ ತುಳಸಿಯ ಬಗ್ಗೆ ಮಹಿಳಾ ಹರಿದಾಸರೂ ಸಹ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಸಮುದ್ರ ಮಥನ ಕಾಲದಲ್ಲಿ "ಧನ್ವಂತರಿ" ನಾಮಕ ಪರಮಾತ್ಮ ಅಮೃತ ಕಲಶ ಹೊತ್ತು ಬಂದಾಗ ಶ್ರೀಹರಿಯ ನೇತ್ರಗಳಿಂದ ಆನಂದಾಶ್ರುಗಳು ಕಲಶದಲ್ಲಿ ಬಿದ್ದು ತುಳಸಿ ಜನಿಸಿದ್ದನ್ನು ಅಂಬಾಬಾಯಿ ಹೀಗೆ ಹೇಳುತ್ತಾರೆ.

"............ ಸುಧೆಯ ಸುರರಿಗಿತ್ತ ಧನ್ವಂತರಿ ನಯನದಿ
ಉದಿಸಿದೆ ಆನಂದ ಅಶ್ರುಗಳಿಂದಲಿ .... [20]

ಹರಿಯಿಂದ ಜನಿಸಿ ಹರಿಯನ್ನೇ ವರಿಸಿ ಅವನಿಗೆ ಅತೀ ಪ್ರಿಯಳಾದುದನ್ನು ಹೀಗೆ ಹೇಳಿದ್ದಾರೆ.

ಹರಿಯ ಆನಂದ ಬಾಷ್ಪಗಳಿಂದ ಜನಿಸುತ
ಹರಿಯನ್ನೇ ವರಿಸಿ ಹರಿಸೇವೆ ಮಾಳ್ಪಳಿಗೆ
ಅರೆ ಘಳಿಗೆ ಅಗಲಿ ನಾನಿರಲಾರೆನೆಂಬಂತೆ
ಹರಿಯ ಮರುಳುಗೊಳಿಸಿ ಹರುಷಪಡುವಳಿಗೆ [21]

ನಿತ್ಯ ಉದಯ ಕಾಲದಲ್ಲಿ ತುಳಸಿಯನ್ನು ಪೂಜಿಸಿದರೆ ಆಪತ್ತು ಪರಿಹಾರವಾಗುವುದೆಂಬುದನ್ನು ಸರಸ್ವತಿಬಾಯಿ ತಮ್ಮ ಕೀರ್ತನೆಯಲ್ಲಿ ಹೇಳಿದ್ದಾರೆ.

ಉದಯ ಕಾಲದಿ ಮುದದಿ ಪೂಜಿಸಿ
ಮಧುರ ಸ್ವರದಿ ಮಾಘದ ಮಾಸದಲಿ
ಮುದದಲೊಂದಿಸೆ ವದಗಿದಾಪತ್ತನು
ಚದುರಿಸಿ ಕಳೆದು ಶ್ರೀಶ್ರೀನಿವಾಸನ
ಮುದದಿ ತೋರುವ ಶ್ರೀತುಳಸಿ [22]

ತುಳಸಿ ದಳದ ಮಹಿಮೆ ಸಾರುವ ಸತ್ಯಭಾಮೆ ಪತಿ ಕೃಷ್ಣನನ್ನು ದಾನ ನೀಡಿದ ಕಥೆಯನ್ನು ತಮ್ಮ ಇನ್ನೊಂದು ಕೀರ್ತನೆಯಲ್ಲಿ ಹೇಳಿದ್ದಾರೆ.

ದಾನವಾಂತಕನ ದಾನವ ಕೊಡುತಲಾ
ಮಾನುನಿ ಚಿಂತಿಸೆ ಕಾಮಿನಿ ರುಕ್ಮಿಣಿ
ಶ್ರೀನಿಧಿಗೆ ಸಮವೆಂದಾ ಮುನಿಗೆ ತೂಗಾ
ನಂದದೊಳಗಿತ್ತ ಮಾನುನಿ ತುಳಸಿಯ [23]

ಭಕ್ತಿಯಿಂದ ರುಕ್ಮಿಣಿ ಒಂದು ತುಳಸಿ ದಳದಿಂದ ಕೃಷ್ಣನನ್ನು ತೂಗಿದ್ದನ್ನು ಇಲ್ಲಿ ತಿಳಿಯಬಹುದಾಗಿದೆ. ಮುತ್ತಿನ ಸರದಲ್ಲಿ ಪಚ್ಚೆಯಂತೆ ಹರಿ ತನ್ನ ಕಂಠದಲ್ಲಿ ಧರಿಸಿರುವನೆಂದು ಈಕೆ ಹೇಳುತ್ತಾರೆ.

ತುಳಸಿಯನ್ನು ಕುರಿತು ಸುಮಾರು ಹದಿನಾರು ಕೀರ್ತನೆಗಳನ್ನು ಕೋಲಾರ ಪದ್ಮಾಬಾಯಿಯವರು ರಚಿಸಿದ್ದು ತುಳಸಿಯನ್ನು ಅನೇಕ ರೀತಿಯಲ್ಲಿ ಕೊಂಡಾಡಿದ್ದಾರೆ.

ಗುರುಗಳು, ಯತಿಗಳು, ದಾಸರು:

ಶ್ರೀಹರಿಯು ಸರ್ವೋತ್ತಮನೆಂದು ಒಪ್ಪುವ ಹರಿದಾಸರು ಜೀವೋತ್ತಮರಾದ ವಾಯುದೇವರು ತಮ್ಮ ಗುರುಗಳೆಂದು ಭಾವಿಸುತ್ತಾರೆ. ಶ್ರೀಹರಿಯ ಅನುಗ್ರಹವನ್ನು ಪಡೆಯಲು ಗುರುವಿನ ಕೃಪೆ, ಕಾರುಣ್ಯ ಅಗತ್ಯ. ಗುರುವಿಲ್ಲದ ವಿದ್ಯೆ ಸಫಲವಾಗುವುದಿಲ್ಲ ಎಂಬಂತೆ ಗುರು ಮುಖೇನ ಉಪದೇಶ ಹೊಂದದ ಹೊರತು ಮಂತ್ರಗಳೂ ಸಿದ್ಧಿಸುವುದಿಲ್ಲ ಎಂಬ ಮಾತಿದೆ. "ಗುರುಗಳ ಕರುಣೆ ಸ್ಥಿರವಾಗಿದ್ದವರಿಗೆ ಹರಿಯ ಅನುಗ್ರಹವಾಗುವುದು ಎಂದು ನಂಬಿದ ಹರಿದಾಸರು ಗುರುಸ್ಮರಣೆಯಿಂದ ಗುರು ಕರುಣೆಯನ್ನು, ಗುರು ಕರುಣೆಯಿಂದ ಹರಿಯ ಅನುಗ್ರಹವನ್ನು ಪಡೆಯಲು ಅಪೇಕ್ಷಿಸಿದರು."[24] ಪುರಂದರ ದಾಸರು "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂದಿದ್ದಾರೆ. ಗುಲಾಮನಾಗುವುದೆಂದರೆ ಗುರುವಿಗೆ ಸಂಪೂರ್ಣವಾಗಿ ಶರಣಾಗುವುದು. ವಿದ್ಯೆ ಕಲಿಸಿದವರು, ದಾಸ ದೀಕ್ಷೆ ನೀಡಿದವರು, ಯತಿಗಳು ಮತ್ತು ಮಠಗಳ ಪೀಠಾಧಿಪತಿಗಳು ಗುರುಗಳೆನಿಸುತ್ತಾರೆ. ದಾಸ ದೀಕ್ಷೆ ಪಡೆಯುವುದೆಂದರೆ ಹರಿದಾಸನಾಗಲು ಗುರುಗಳಿಂದ ಅಂಕಿತ ಪಡೆಯುವ ಮೂಲಕ ಗುರುವಿನ ಅನುಮತಿ ಪಡೆಯುವುದು. ಶಿಷ್ಯನ ಯೋಗ್ಯತೆಗೆ ಅನುಸಾರವಾಗಿ ಆತನ ಇಷ್ಟ ದೈವದ ರೂಪವನ್ನೇ ಅಂಕಿತವಾಗಿ ನೀಡಲಾಗುತ್ತದೆ. ದಾಸ ಸಾಹಿತ್ಯದಲ್ಲಿ ಅಂಕಿತವಿಲ್ಲದ ರಚನೆಗೆ ಮಾನ್ಯತೆ ಇಲ್ಲ. ಜಾನಪದ ಸಾಹಿತ್ಯದಲ್ಲಿಯೂ "ಬಡತನವು ನನಗಿರಲಿ, ಬಾಳು ಮಕ್ಕಳಿಗಿರಲಿ ಮೇಲೆ ಗುರುವಿನ ದಯವಿರಲಿ" ಎಂಬ ಮಾತಿದೆ. ಆದ್ದರಿಂದ ಗುರುವಿನ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ತಮ್ಮ ಸ್ವರೂಪೋದ್ಧಾರಕರಾದ ಗುರುಗಳನ್ನು ದೈವ ಸಮಾನವಾಗಿ ಪರಿಗಣಿಸಿ ಅವರನ್ನೂ ಸ್ತುತಿಸಿರುವುದು ದಾಸ ಸಾಹಿತ್ಯದಲ್ಲಿ ಕಂಡು ಬರುತ್ತದೆ. ಅನೇಕ ದಾಸ ಮಹಿಳೆಯರ ಕೃತಿಗಳಲ್ಲೂ ಗುರುಸ್ತುತಿಯನ್ನು ಕಾಣಬಹುದಾಗಿದೆ. ದಾಸ ದೀಕ್ಷೆ ನೀಡಿ ಸ್ವರೂಪೋದ್ಧಾರಕರಾದವರು, ಪೀಠಾಧಿಪತಿಗಳು ಮತ್ತು ಯತಿಗಳನ್ನು ಕುರಿತ ಮಹಿಳಾ ಹರಿದಾಸರ ಕೀರ್ತನೆಗಳು ವಿಪುಲವಾಗಿವೆ.

ಅಂಬಾಬಾಯಿಯವರ ಒಂದು ಉಗಾಭೋಗದಲ್ಲಿ ಗುರುವಿನ ಮಹತ್ವವನ್ನು ಕಾಣಬಹುದಾಗಿದೆ.

ಗುರುವಿನ ಕರುಣದಿ ಭಕ್ತಿ ಜ್ಞಾನಾದಿಗಳು
ಗುರುವಿನ ಕರುಣದಿ ವೈರಾಗ್ಯಭಾವವು
ಗುರುವಿನ ಕರುಣದಿ ತತ್ವ ಸಾಧನೆಗಳು
ಗುರುವಿನ ಕರುಣದಿ ಆತ್ಮ ವಿವೇಕಗಳು
ಗುರುವಿನ ಕರುಣದಿ ಅಪರೋಕ್ಷ ಪುಟ್ಟಲು
ಗರುವಿಕೆಯನೆ ಬಿಡಿಸಿ ಕರೆದು ಕೊಡುವ ಮುಕ್ತಿ
ಗುರು ಅಂತರ್ಯಾಮಿ ಶ್ರೀಗೋಪಾಲಕೃಷ್ಣ ವಿಠಲ [25]

ಶ್ರೀಮಧ್ವಾಚಾರ್ಯರು: (1238–1317):

ಶ್ರೀಮಧ್ವಾಚಾರ್ಯರನ್ನು ಎಲ್ಲ ಹರಿದಾಸರು–ದಾಸ ಮಹಿಳೆಯರು ತಮ್ಮ ಪರಮ ಗುರುಗಳಾಗಿ ಒಪ್ಪುತ್ತಾರೆ. ವಾಯುದೇವರ ಅವತಾರತ್ರಯಗಳಲ್ಲಿ ಮೂರನೆಯ ಅವತಾರವಾದ ಶ್ರೀಮಧ್ವಾಚಾರ್ಯರನ್ನು ಸಾಮಾನ್ಯವಾಗಿ ವಾಯುದೇವರ ಸ್ತುತಿಯಲ್ಲೇ ವರ್ಣಿಸಿರುವುದನ್ನು ಕಾಣಬಹುದಾಗಿದೆ.

ಕೋಲಾರ ಪದ್ಮಾಬಾಯಿಯವರು ಗುರುಗಳು ರಚಿಸಿದ ಗ್ರಂಥಗಳ ಬಗ್ಗೆ ಮತ್ತು ಅವರು ಹೇಳಿದ ದಾಸೋಹಂ ತತ್ವದ ಬಗ್ಗೆ ಹೀಗೆ ಹೇಳುತ್ತಾರೆ.

ಹತ್ತೇಳಿಪ್ಪತ್ತು । ಒಪ್ಪುವ ಗ್ರಂಥವ ।
ಭಕ್ತರಿಗಿತ್ತ । ಸು ವಿಪ್ರಜ ॥
ಸೋಹಂ ಎನ್ನುವ । ವಾದ ವಳಿದು, ದಾ
ಸೋಹಂ ಎಂದ । ಮುನಿರಾಜ [26]

ದೊಡ್ಡಿ ಸುಧಾಬಾಯಿಯವರು "ಶ್ರೀಮದ್ವಲೀಲಾಮೃತ" ಎಂಬ ಕೃತಿ ರಚಿಸಿದ್ದು ಮಧ್ವಾಚಾರ್ಯರ ಜೀವನ ಚರಿತ್ರೆಯನ್ನು ಚಿತ್ರಿಸಿದ್ದಾರೆ. ದಾಸರುಗಳ ಮಧ್ವಪರ ಕೀರ್ತನೆಗಳನ್ನು ಉದಾಹರಿಸಿ ಮಧ್ವರ ಜೀವನ ಚಿತ್ರಣ ನೀಡಿದ್ದಾರೆ. ಕೋಲಾರ ಪದ್ಮಾಬಾಯಿಯವರು ಶ್ರೀಮಧ್ವಾಚಾರ್ಯರ ಚರಿತ್ರೆಯನ್ನು ತಿಳಿಸುವ "ಶ್ರೀಗುರು ಮಧ್ವ ಚರಿತ್ರೆ"ಯಲ್ಲಿ "ಸುಮಧ್ವ ವಿಜಯ" ವನ್ನು ಅನುಸರಿಸಿದ್ದಾರೆ. ಮಧ್ವರು ತಮ್ಮ ಗುರುಗಳಾದ ಅಚ್ಯುತಪ್ರೇಕ್ಷರಿಗೆ ದ್ವೈತ ಮತವನ್ನು ತಿಳಿಸಿ ಹೇಳಿದ ಪ್ರಸ್ತಾಪವನ್ನು ಮಾಡಿದ್ದಾರೆ. ಶ್ರೀಮಧ್ವಾಚಾರ್ಯರು ಬದರಿಕಾಶ್ರಮಕ್ಕೆ ಹೋದ ವಿಚಾರದವರೆಗೆ ಅವರ ಜೀವನ ದರ್ಶನ ಮಾಡಿಸಲಾಗಿದೆ.

ಮಂಜುಳಾ ಸುಬ್ಬರಾವ್‌ರವರು "ಶ್ರೀಮಧ್ವ ಮಹಿಮ ಪ್ರಕಾಶಿಕಾ" ಎಂಬ ಗ್ರಂಥದಲ್ಲಿ ಆಚಾರ್ಯರ ಜೀವನ ಚರಿತ್ರೆ ಮತ್ತು ಅಷ್ಟೋತ್ತರವನ್ನು ರಚಿಸಿರುತ್ತಾರೆ.

ಹರಿದಾಸ ಸ್ತುತಿ:

ಮಹಿಳಾ ದಾಸರು ತಮಗೆ ಅಂಕಿತ ಕೊಟ್ಟ ಗುರುಗಳನ್ನು ಮತ್ತು ಇತರ ದಾಸರುಗಳನ್ನು ಕುರಿತು ಕೀರ್ತನೆಗಳನ್ನು ರಚಿಸಿದ್ದಾರೆ. ಗಿರಿಯಮ್ಮ ಮತ್ತು ಹರಪನಹಳ್ಳಿ ಭೀಮವ್ವನವರನ್ನು ಇತ್ತೀಚಿನ ಮಹಿಳೆಯರು ಸ್ತುತಿಸಿರುವುದು ಕಂಡು ಬರುತ್ತದೆ. "ಮಧ್ವೇಶಕೃಷ್ಣ" ಅಂಕಿತದ ಸುಶೀಲಾ ಕಾಂತರಾವ್ ಅವರು ಭೀಮವ್ವನವರನ್ನು ಕುರಿತ ಒಂದು ಸುಳಾದಿ ರಚಿಸಿದ್ದಾರೆ.

ದಾಸ ಕೂಟದ ಆದ್ಯರಾದ ಪುರಂದರದಾಸರನ್ನು ಅನೇಕ ದಾಸ ಮಹಿಳೆಯರು ಸ್ತುತಿಸಿದ್ದಾರೆ. ಅಂಬಾಬಾಯಿಯವರು ಒಂದು ಕೀರ್ತನೆಯಲ್ಲಿ ಪುರಂದರ ದಾಸರ ಸಂಕ್ಷಿಪ್ತ ಚರಿತ್ರೆಯನ್ನು ಹೇಳಿದ್ದಾರೆ. ಒಂದೇ ನುಡಿಯಲ್ಲಿ ದಾಸರು ದಾಸತ್ವ ಪಡೆದ ವರೆಗಿನ ಕತೆ ತಿಳಿಸುತ್ತಾರೆ.

> ಶ್ರೀಶನಪ್ಪಣೆಯಿಂದ ಭೂಲೋಕದಲ್ಲಿ ಪುಟ್ಟಿ
> ಆಶೆಯಿಂದಲಿ ಧನಗಳಿಸಿ ಕೋಟಿ
> ವಾಸುದೇವನು ಎಚ್ಚರಿಸಲು ವೈರಾಗ್ಯ
> ದಾಸತ್ವದಲಿ ಜಗದಿ ಮೆರೆಯಬೇಕು [27]

ನಿಡಗುರುಕಿ ಜೀವೂಬಾಯಿಯವರು ಶ್ರೀಪುರಂದರದಾಸರ ಜೀವನ ಚರಿತ್ರೆಯನ್ನು 10 ನುಡಿಗಳಲ್ಲಿ ಹೇಳಿದ್ದಾರೆ.

ಮಂಜುಳಾ ಸುಬ್ಬರಾವ್‌ರವರು 28 ನುಡಿಗಳಲ್ಲಿ ಕನಕದಾಸರ ಜೀವನ ಚರಿತ್ರೆ ರಚಿಸಿದ್ದಾರೆ. "ಮುಂಡಿಗೆ ದಾಸ"ರೆಂದು ಪ್ರಸಿದ್ಧರಾದ ಕನಕದಾಸರನ್ನು ಇನ್ನೊಂದು ಕೀರ್ತನೆಯಲ್ಲಿ ನೆನೆದಿದ್ದಾರೆ.

> ಮುಂಡಿಗೆಗಳು ಬಹಳ ಇವರ ನಾಮದಲಿ
> ದಂಡ್ಯಾಗಿಗ್ಯೆದಿಹರು ಬಹು ಅಚ್ಚರಿ
> ಕಂಡಿಹರಿವರು ಕೃಷ್ಣ ಮೂರುತಿಯ
> ಮಂಡೆಗೆ ಹರಸೆಂದು ಬೇಡುವ ನಾವು [28]

ದಾಸ ಸಾಹಿತ್ಯದ ದ್ವಿತೀಯ ಘಟ್ಟದ ಮುಖ್ಯರಾದ ವಿಜಯರಾಯರನ್ನು ಕುರಿತಾದ ರಚನೆಗಳು ದಾಸ ಮಹಿಳೆಯರಲ್ಲಿವೆ. ಹರಪನಹಳ್ಳಿ ಭೀಮವ್ವನವರ ಒಂದು ಕೀರ್ತನೆ ವಿಜಯರಾಯರನ್ನು ಕುರಿತದ್ದಾಗಿದೆ.

ಅಂಬಾಬಾಯಿಯವರು ಪುರಂದರದಾಸರಿಂದ ಅನುಗ್ರಹೀತರಾದ ವಿಜಯರಾಯರು ಪುರಂದರದಾಸರು ಬಿಟ್ಟ 75 ಸಾವಿರ ಪದಗಳನ್ನು ಪೂರ್ಣಗೊಳಿಸಿದ ಸಂಗತಿಯನ್ನು ಒಂದು ನುಡಿಯಲ್ಲಿ ತಿಳಿಸುತ್ತಾರೆ.

ಆ ದೇವ ಮುನಿ ಆಜ್ಞೆ ಮೋದದಲಿ ಸ್ವೀಕರಿಸಿ
ಪಾದನ್ಯೂನತೆ ಕವನ ಪೂರ್ಣಗೊಳಿಸಿ
ವೇದಶಾಸ್ತ್ರಗಳರ್ಥ ಸುಲಭದಲಿ ತಿಳಿಸುತ
ಹಾದಿತೋರಿದೆ ಶಿಷ್ಯರಾದ ಸುಜನರಿಗೆ [29]

ಕೋಲಾರ ಪದ್ಮಾಬಾಯಿಯವರು ತಮ್ಮ ಕೀರ್ತನೆಯಲ್ಲಿ ವಿಜಯದಾಸರು ಪಾಮರನೊಬ್ಬನಿಂದ ಶ್ರೀಮನ್ಯಾಯಸುಧಾ ವ್ಯಾಖ್ಯಾನ ಮಾಡಿಸಿದ ವಿಚಾರ ಪ್ರಸ್ತಾಪಿಸುತ್ತಾರೆ.

ಶ್ರೀಮನ್ಯಾಯ ಸು । ಧಾ ಸಾರವ ಬಹು ।
ಪಾಮರನಿಂದು । ಚ್ಚಾರವ ಗೈಸಿದ [30]

ವಿಜಯದಾಸರ ಶಿಷ್ಯರಾದ ಗೋಪಾಲದಾಸರನ್ನು ಮಂಜುಳಾ ಸುಬ್ಬರಾವ್‌ರವರು 55 ನುಡಿಗಳ ಕೃತಿಯಲ್ಲಿ ಸ್ತುತಿಸಿದ್ದಾರೆ. ಒಂದು ಕೀರ್ತನೆಯಲ್ಲಿ ಗೋಪಾಲದಾಸರನ್ನು ಗಣೇಶಾಂಶರೆಂದು ಹೇಳುತ್ತಾರೆ.

<u>ಜಗನ್ನಾಥದಾಸರು:</u> ಮಾನವಿಯ ಶ್ರೀನಿವಾಸಾಚಾರ್ಯರು ಬಹು ದೊಡ್ಡ ಪಂಡಿತರು. ಶ್ರೀವಿಜಯದಾಸರ ಅನುಗ್ರಹದಿಂದ ಜಗನ್ನಾಥದಾಸರಾದರು. ಜಗನ್ನಾಥದಾಸರು ಮಹಾ ಪಂಡಿತರಾಗಿದ್ದವರೆಂಬ ವಿಷಯವನ್ನು ಪಿ.ವಿ. ಕೃಷ್ಣಾಬಾಯಿ ತಮ್ಮ ಕೀರ್ತನೆಯಲ್ಲಿ ಹೇಳುತ್ತಾರೆ.

ಎಂಥಾ ಜಾಣರಮ್ಮ ಜಗನ್ನಾಥದಾಸರೆಂಥ ಪ್ರವೀಣರಮ್ಮ
ಎಂಥಾ ಜಾಣ ಪ್ರವೀಣರೇ । ವೇದಾಂತದಲಿ ದಿಗ್ದಂತಿ ಪಂಡಿತ
ರೆಂಬ ಖ್ಯಾತಿಯ ಪಡೆದ ಲಕ್ಷ್ಮಿ । ಕಾಂತನನು ನೋಡಿದಾ ಧೀಮಂತಾ [31]

ಮಂಜುಳಾ ಸುಬ್ಬರಾವ 46 ನುಡಿಗಳ ದೀರ್ಘ ಕೀರ್ತನೆಯಲ್ಲಿ ಜಗನ್ನಾಥದಾಸರ ಚರಿತ್ರೆ ಹೇಳುತ್ತಾರೆ. ಜಗನ್ನಾಥದಾಸರಿಗೆ ಶ್ರೀಗೋಪಾಲದಾಸರು ತಮ್ಮ ಆಯುಸ್ಸಿನ 40 ವರ್ಷಗಳನ್ನು ದಾನ ಮಾಡಿದರೆಂಬ ವಿಷಯವನ್ನು ಪ್ರಸ್ತಾಪಿಸುತ್ತಾರೆ.

ಪ್ರಸನ್ನ ವೆಂಕಟದಾಸರನ್ನು ಸ್ತುತಿಸಿರುವ ವಿಜಯಲಕ್ಷ್ಮಿರಾಘವೇಂದ್ರಾಚಾರ್ಯರವರು ದಾಸರು ಹುಲಿಗೆ ಅಂಗಾರ ಹಚ್ಚಿದ ಕಥೆಯನ್ನು ತಿಳಿಸುತ್ತಾರೆ.

19ನೆಯ ಶತಮಾನದ ಉತ್ತರಾರ್ಧದಲ್ಲಿ ಹರಿದಾಸ ಪಂಥವನ್ನು ಮುಂದುವರೆಸಲು ಕಾರಣರಾದವರು 'ಪರಮಪ್ರಿಯ' ಬಿರುದಾಂಕಿತರಾದ ಸುಬ್ಬರಾಯದಾಸರು. ಮುದ್ದುಮೋಹನವಿಠಲರಿಂದ ತಂದೆ ಮುದ್ದುಮೋಹನವಿಠಲ ಅಂಕಿತ ಪಡೆದು ಸುಮಾರು 1165 ಜನರಿಗೆ ಅಂಕಿತ ನೀಡಿ ದಾಸ ಪರಂಪರೆ ಮುಂದುವರಿಯಲು ಕಾರಣರಾದವರು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿಗೆ ಅಂಕಿತ ನೀಡಿ ಮಹಿಳೆಯರೂ

ದಾಸ ವಾಹಿನಿಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿದವರು. ದಾಸರು ಸ್ವತಃ ಹೆಚ್ಚು ಕೃತಿಗಳನ್ನು ರಚಿಸದಿದ್ದರೂ, ಹಳೇ ಮೈಸೂರು ಪ್ರಾಂತದಲ್ಲಿ ಶಿಥಿಲವಾಗಿದ್ದ ದಾಸ ಪಂಥಕ್ಕೆ ಭದ್ರ ಬುನಾದಿಯನ್ನು ಒದಗಿಸಿದರು. ಸುಮಾರು 426 ಮಹಿಳೆಯರಿಗೆ ಇವರು ಅಂಕಿತ ಪ್ರದಾನ ಮಾಡಿದ್ದಾರೆ. ಮಹಿಳೆಯರಲ್ಲಿ ಆಧ್ಯಾತ್ಮ ಪ್ರವೃತ್ತಿ ಬೆಳೆಯಲು ಇದು ಸಹಕಾರಿಯಾಯಿತು. ಅಂಬಾಬಾಯಿಯವರಂತಹ ದಾಸ ಮಹಿಳೆಗೆ ಶಿಷ್ಯತ್ವ ನೀಡಿ ಅನುಗ್ರಹಿಸಿದವರು ಸುಬ್ಬರಾಯದಾಸರು. ಅಂಬಾಬಾಯಿಯವರು ತಮ್ಮ ಗುರುಗಳನ್ನು ಕುರಿತು ಸುಮಾರು 40 ಕೀರ್ತನೆಗಳನ್ನು ರಚಿಸಿದ್ದಾರೆ.

ದಾಸರು ಉಡುಪಿಯ ಶ್ರೀಪುತ್ತಿಗೆ ಮಠದ ಶ್ರೀಗಳಿಂದ 'ಪರಮಪ್ರಿಯ' ಬಿರುದನ್ನು ಪಡೆದಿದ್ದರು. ಅದನ್ನು ಅಂಬಾಬಾಯಿ ಪ್ರಸ್ತಾಪಿಸುತ್ತಾರೆ.

ಪರಮಪ್ರಿಯರು ಎಂದು ಪರಮ ಬಿರುದು ಪೊಂದಿ
ಪರಮಾತ್ಮನನು ಕಂಡು
ಪರಮಾತ್ಮ ತತ್ವ ಪರಮಯೋಗ್ಯಂಗರುಹಿ
ಪರಿಹರಿಸುವಿ ದುರಿತ ತ್ವರಿತದಿ [32]

ದೇವರಾಯನ ದುರ್ಗದಲ್ಲಿ ದಾಸರು ಸ್ಥಾಪಿಸಿದ 'ದಾಸ ಕೂಟಸಭಾ' ದ ಬಗ್ಗೆ ಒಂದು ಕೀರ್ತನೆಯಲ್ಲಿ ಉಲ್ಲೇಖಿಸಿದ್ದಾರೆ.

ದಾಸಕೂಟ ಸಭಾಸ್ಥಳದಿ ದಾಸಪ್ರಾಣರಾಯನ ನಿಲಿಸಿ
ದಾಸ ಜನಕೆ ಮುಕ್ತಿ ಸ್ಥಾನ ಕರಿಗಿರಿ ಎನಿಸಿ
ವ್ಯಾಸ ತೀರ್ಥರಿಂದ ಬಂದ ದಾಸಕೂಟ ನಿಜನೆಂದೆನಿಸಿ
ದಾಸಜನರ ಮೆರೆಸಿ ನೃಹರಿ ದಾಸಕೂಟ ಸಭಾ ಸ್ಥಾಪಕ [33]

ಹೀಗೆಯೇ ತಂದೆ ವೆಂಕಟೇಶ ವಿಠಲ, ಗುರುಗೋವಿಂದ ವಿಠಲ ಮತ್ತು ಉರಗಾದ್ರಿ ವಿಠಲರನ್ನು ಕುರಿತ ರಚನೆಗಳು ದೊರೆಯುತ್ತವೆ. ಅಂಕಿತ ಪಡೆದವರು ಅಂಕಿತ ನೀಡಿದ ಗುರುವಿನ ಮೇಲೆ ಕೃತಿಯನ್ನು ರಚಿಸಿ ಗುರುವಿಗರ್ಪಿಸಬೇಕೆಂಬ ನಿಯಮ ದಾಸ ಕೂಟದಲ್ಲಿ ನೆಲೆಗೊಂಡ ಕಾರಣ ಸಾಕಷ್ಟು ಗುರು ಸ್ತುತಿಗಳು ಲಭ್ಯವಾಗಿವೆ.

ಮಹಿಳಾ ಹರಿದಾಸರು ದಾಸ ಮಹನೀಯರನ್ನು ಕೊಂಡಾಡಿರುವಂತೆಯೇ ಗಿರಿಯಮ್ಮ, ಭೀಮವ್ವನವರನ್ನು ಸ್ತುತಿಸಿರುವ ಕೀರ್ತನೆಗಳು ಇವೆ.

ಭೀಮವ್ವನವರ ಜೀವನ ಕುರಿತ ಒಂದು ಸುಳಾದಿ ಮತ್ತು 3 ನುಡಿಗಳ ಒಂದು ಕೀರ್ತನೆಯನ್ನು ಸುಶೀಲ ಕಾಂತರಾವ್ ರಚಿಸಿದ್ದಾರೆ. ಸುಳಾದಿಯಲ್ಲಿ ಭೀಮವ್ವನ ಜನನದಿಂದ ಪ್ರಾರಂಭಿಸಿ ಕೃತಿ ರಚನೆ ಮಾಡಿದ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. ನಾರದರಿಂದ ಸ್ವಪ್ನಾಂಕಿತ ಪಡೆದದ್ದು ಇದರಲ್ಲಿ ಉಲ್ಲೇಖವಾಗಿದೆ.

ಭೀಮವ್ವನವರ ಭಕ್ತಿಯ ಬಗ್ಗೆ ಬರೆಯುತ್ತಾ ಹೀಗೆ ಹೇಳುತ್ತಾರೆ.

ವ್ರತನೇಮ ಉಪವಾಸ ಅತಿಯಾಗಿ ಮಾಡುತ್ತ
ಅತಿಶಮನನ ಧ್ಯಾನ ಭಕುತಿಲಿ ಮಾಡುತ್ತ
ಸತತ ತೀರ್ಥಯಾತ್ರೆ ಹಿತದಿ ಮಾಡುತ್ತ
ಮತಿವಂತಳು ತಾನು ಗತಿಯ ತೋರುತ್ತ [34]

ವಿಜಯಲಕ್ಷ್ಮಿ ರಾಘವೇಂದ್ರಾಚಾರ್ಯರವರು ಗಿರಿಯಮ್ಮನನ್ನು ಸ್ತುತಿಸಿರುವ ಪರಿ ಹೀಗಿದೆ. ಗಿರಿಯಮ್ಮ ಮಾಡಿದ ಪವಾಡಗಳು ಮತ್ತು ಆಕೆ ಯಶೋದೆ ಎಂದು ತಿಳಿಸುತ್ತಾರೆ.

ಕಂಗೆಟ್ಟ ಜನರಿಗೆ ಮಳೆ ತರಿಸಿದಳು
ಕಂಗಳ ಕುರುಡಗೆ ದಯಪಾಲಿಸಿದಳು
ರಂಗನಾಥನ ಉಂಗುರ ಪಡೆದಳು
ಹಿಂಗದ ಪವಾಡ ತೋರಿದಳು ತೋರಿದಳು
ಮಗನೆಂದು ರಂಗನ ಬಲು ಮುದ್ದಿಸಿದಳು
ಮನಸಾರೆ ಕೃಷ್ಣನ ತುತಿಸಿ ಹಾಡಿದಳು
ಮುದದಿಂದಲಿ ಕಥೆಕವನ ರಚಿಸಿದಳು
ಮಂಗಳಾಂಗ ಹರಿ ವಿಠ್ಠಲನ ತಾಯಿ [35]

ಸೀತಾಬಾಯಿ ರಾ. ಪುರೋಹಿತರವರು ಗಿರಿಯಮ್ಮನನ್ನು ಮತ್ತು ಭೀಮವ್ವನವರನ್ನು ಸ್ತುತಿಸಿದ್ದಾರೆ. ಈ ಇಬ್ಬರು ಹರಿದಾಸಿಯರ ಬಗೆಗೆ ಜನಜನಿತವಾಗಿರುವ ಪವಾಡಗಳ ಕುರಿತು ವಿವರಿಸಿದ್ದಾರೆ.

ನಿಂದಾಸ್ತುತಿಗಳು:

ನಿಂದಾಸ್ತುತಿ ಹರಿದಾಸ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ನಿಂದೆ ಸ್ತುತಿ ಪರಸ್ಪರ ವಿರುದ್ಧ ಶಬ್ದಗಳಾದರೂ, ಭಗವಂತನನ್ನು ನಿಂದಿಸುವ ಮಾತುಗಳಿಂದ ಸ್ತುತಿಸುವುದು ಹರಿದಾಸರ ವೈಶಿಷ್ಟ್ಯ. "ಹರಿದಾಸರು ನಿಂದಾಸ್ತುತಿಗಳಲ್ಲಿ ಭಗವಂತನನ್ನು ಸಥೆಯ ಮೂಲಕ ಬೈದು, ಅನಂತರ ಪಶ್ಚಾತ್ತಾಪಪಟ್ಟು ಸಮಾಧಾನ ಹೊಂದಿರುವುದುಂಟು".[36] ಶ್ರೀಹರಿಯ ದಶಾವತಾರಗಳ ವರ್ಣನೆ ನಿಂದಾಸ್ತುತಿಗಳ ಮೂಲ ವಸ್ತು.

ಸರ್ವೋತ್ತಮನಾದ ಶ್ರೀಹರಿಯನ್ನು ಕುರಿತು ರಚಿತವಾಗಿರುವಷ್ಟು ನಿಂದಾಸ್ತುತಿಗಳು ಇತರ ದೇವತೆಗಳನ್ನು ಕುರಿತು ಆಗಿಲ್ಲ. ನಿಂದಾಸ್ತುತಿಗಳನ್ನು ಕುರಿತು ಡಾ॥ ಕೆ. ಗೋಕುಲನಾಥರು ಹೀಗೆ ಹೇಳುತ್ತಾರೆ.

"ಹರಿದಾಸರ ನಿಂದಾಸ್ತುತಿಗಳು ನಾನಾ ಮುಖಗಳನ್ನೊಳಗೊಂಡಿದ್ದು ಉತ್ತಮ ತಾತ್ವಿಕ ಹಾಗೂ ಸಾಹಿತ್ಯಾಂಶಗಳನ್ನು ಪಡೆದುಕೊಂಡಿದೆ. ಹರಿದಾಸರ ಸ್ತೋತ್ರ ಸಾಹಿತ್ಯದಲ್ಲಿ ದೊರೆಯದ ರೋಮಾಂಚನ

ನಿಂದಾಸ್ತುತಿಗಳಲ್ಲಿ ದೊರೆಯುತ್ತದೆ."[37] ನಿಂದಾಸ್ತುತಿಗಳಲ್ಲಿ ಕೃಷ್ಣನ ಕುರಿತಾದ ರಚನೆಗಳು ಹೆಚ್ಚು. ಅದಕ್ಕಿಂತಲೂ ತಿರುಪತಿಯ ಶ್ರೀನಿವಾಸನನ್ನು ಕುರಿತ ರಚನೆಗಳು ಅಧಿಕವಾಗಿವೆ. ದಾಸ ಮಹಿಳೆಯರಲ್ಲೂ ಕೆಲವರು ಸಖ್ಯ ಭಾವದಿಂದ, ಸಲಿಗೆಯಿಂದ ನಿಂದಾಸ್ತುತಿ ರಚಿಸಿದ್ದಾರೆ. ಭಗವಂತನನ್ನು ನಿಂದಿಸುವ ಮೂಲಕ ಪ್ರಾರಂಭವಾದರೂ ಶರಣಾಗತಿಯಲ್ಲಿ ಮುಕ್ತಾಯವಾಗುತ್ತದೆ.

ಗಲಗಲಿ ಅವ್ವನವರ ಒಂದು ನಿಂದಾಸ್ತುತಿ ಹೀಗಿದೆ. ಶ್ರೀಹರಿಯು ಅನಾದಿ ಎಂದು ಹೇಳುವ ಗೂಡಾರ್ಥ ತುಂಬಿದ ಒಂದು ನುಡಿ.

ಕುಲಗೋತ್ರವಿಲ್ಲ ನೆಲೆಯಿಲ್ಲ ಆಚಾರವಿಲ್ಲ
ಬಲುದೈತ್ಯರೊಳು ಹಗೆಯಾದ
ಬಲು ದೈತ್ಯರೊಳು ಹಗೆಯಾದ ಇಂಥವಗೆ
ಜಲನಿಧಿ ಮಗಳ ಕೊಡಬಹುದೆ [38]

ಸಾಗರನ ಮಗಳು ಲಕ್ಷ್ಮಿಯನ್ನು ವರಿಸಿ ಕ್ಷೀರಸಾಗರದಲ್ಲೇ ನೆಲೆಸಿದ ಹರಿಯನ್ನು ಕಂಡು ಹೀಗೆ ಟೀಕಿಸುತ್ತಾರೆ.

ಕ್ಷೀರಸಮುದ್ರಶಾಯಿ ಎಂದರೆ ಹಿಗ್ಗುವಿ
ಯಾರು ಅರಿಯರು ನಿನ್ನ ಹುಳುಕು
ಯಾರು ಅರಿಯರು ನಿನ್ನ ಹುಳುಕು ಅತ್ತೆಮನೆ
ಸೇರಿದವನೆಂದು ನಗತಾರೋ [39]

ಶ್ರೀಹರಿಯ ದಶಾವತಾರಗಳಲ್ಲಿ ಪರಶುರಾಮ ಮತ್ತು ರಾಮಾವತಾರವನ್ನು ಒಂದೇ ನುಡಿಯಲ್ಲಿ ಅವ್ವ ಹೇಳುತ್ತಾರೆ.

ಕೊಡಲಿಯ ಪಿಡಕೊಂಡ ಪಡೆದ ಮಾತೆಯ
ಕೊಂದೆ ಒಡಲಿಗಿಕ್ಕದಲೆ ಮಡದಿಯ
ಒಡಲಿಗಿಕ್ಕದಲೆ ಮಡದಿಯ ಕೊಂಡೊಯ್ದು
ಅಡವಿಗಟ್ಟಿದ ಮಹಾಮಹಿಮನೆ [40]

ಶ್ರೀಹರಿಯ ಕೃಪೆಗೆ ಪಾತ್ರರಾದವರು ದ್ರೋಹಿಗಳೆಂದು ದೂಷಿಸುವ ಮಾತುಗಳು ಹೀಗಿವೆ:

ಮಾತೃ ದ್ರೋಹಿ ಶುಕ ಪಿತೃದ್ರೋಹಿ ಪ್ರಲ್ಹಾದ
ಭ್ರಾತೃದ್ರೋಹಿ ವಿಭೀಷಣ
ಭ್ರಾತೃದ್ರೋಹಿ ವಿಭೀಷಣ ಇವರು ಮುಖ್ಯ
ಪಾತ್ರರೋ ನಿನ್ನ ಕರುಣಕೆ ಕರುಣಕೆ

ಸ್ವಾಮಿದ್ರೋಹಿ ಅಕ್ರೂರ ಗುರು ದ್ರೋಹಿ ಪ್ರಲ್ಹಾದ
ಬ್ರಾಹ್ಮಣರ ದ್ರೋಹಿಗಳು ಯಾದವರು
ಬ್ರಾಹ್ಮಣರ ದ್ರೋಹಿಗಳು ಯಾದವರು ನಿನ್ನ ಮುಖ್ಯ
ಪ್ರೇಮಕ್ಕೆ ವಿಷಯರೊ ವಿಷಯರೊ [41]

ಅವ್ವನವರ ಮುಯ್ಯದ ಹಾಡುಗಳಲ್ಲಿಯೂ ನಿಂದಾಸ್ತುತಿಗಳನ್ನು ಕಾಣಬಹುದಾಗಿದೆ.

ಅಂಬಾಬಾಯಿಯವರ ಒಂದು ಕೀರ್ತನೆಯಲ್ಲಿ ತಿರುಪತಿಯ ಶ್ರೀನಿವಾಸನ ಕುರಿತ ನಿಂದಾಸ್ತುತಿಯಿದೆ.

ಬುತ್ತಿ ಪೊಂಗಲುಗಳ ಮಾರುವಗೆ
ಮತ್ತೆ ದರ್ಶನ ಕೊಡದೆ ಒದೆಸುವಗೆ
ನಿತ್ಯ ಸ್ವಾಮಿಪುಷ್ಕರಣಿ ತೀರದಿ ನಿಂತು
ಭೃತ್ಯವರ್ಗಗಳನು ಪೊರೆವವಗೆ [42]

ದಶಾವತಾರಗಳ ವರ್ಣನೆಯನ್ನು ಒಂದು ಕೀರ್ತನೆಯಲ್ಲಿ ಮಾಡಿದ್ದು ನಿಂದಿಸುತ್ತಾ ಪ್ರಾರಂಭವಾಗುವ ಕೀರ್ತನೆ ಶರಣಾಗತಿಯಲ್ಲಿ ಮುಕ್ತಾಯವಾಗುತ್ತದೆ. ಒಂದು ನುಡಿಯಲ್ಲಿ ಮೂರು ಅವತಾರಗಳ ವರ್ಣನೆ ಬರುತ್ತದೆ.

ಎಲ್ಲರನು ಸಲಹಿದಂತೆನ್ನ ನೀ ಸಲಹೆನೆ
ನಿಲ್ಲದೆ ನೀರ ಪೊಗುವೆ
ಸೊಲ್ಲು ಸೊಲ್ಲಿಗೆ ನಿನ್ನ ಸ್ತುತಿಪೆನೊ ಬಾರೆನಲು
ಕಲ್ಲಡೀ ಅವಿತುಕೊಳ್ಳುವೆ

ಖುಲ್ಲನಲ್ಲವೊ ನಾನು ತಲ್ಲಣಿಪೆ ಪೊರೆ ಎನಲು
ಹಲ್ಲು ಕೋರೆಯ ತೋರುವೆ
ಎಲ್ಲಿ ಹೋಗೆಲೊ ನಾನು ಇಲ್ಲವೊ ಇನ್ನೊಬ್ಬ
ಸೊಲ್ಲು ಕೇಳುವರನರಿಯೆ ದೊರೆಯೆ [43]

ಈ ಕೀರ್ತನೆ ಇತರ ದಶಾವತಾರ ರೂಪಗಳನ್ನು ಲೇವಡಿ ಮಾಡುತ್ತಾ ಶರಣಾಗತಿಯಲ್ಲಿ ಅಂತ್ಯ ಗೊಂಡಿದೆ.

ಗಿರಿಯಮ್ಮ ಹರಿಯ ದಶಾವತಾರಗಳನ್ನು ಒಂದೇ ನುಡಿಯಲ್ಲಿ ಹೇಳುತ್ತಾಳೆ. ದಶಾವತಾರದ ಅವನ ಅವಗುಣಗಳನ್ನೆಲ್ಲ ಕ್ರಮವಾಗಿ ನಿರೂಪಿಸುತ್ತಾಳೆ.

ಕಳ್ಳಗಿಂತ ಮಹಾಕಳ್ಳ
ಕಲ್ಲು ಮಾಡಿಕೊಂಡು ಇರುವನು ನೆಳ್ಳ
ಭೂಮಿನೆಗವಿ ಸುತ್ತಿ ಬಲ್ಲ
ಬುದ್ಧಿವಂತ ಪ್ರಹ್ಲಾದಗೊಲಿದನಲ್ಲ

ಇವ ಎರಡು ಪಾದ ಭೂಮಿದಾನ ಒಲ್ಲ
ಇವನ ಕೊಡಲಿಬಾಯಿಗ್ಯಾರು ಇದಿರಿಲ್ಲ
ಲಂಕೆಗೆ ಬೆಂಕಿಯನಲ್ಲ
ಕೊಂಕಿ ಕೊಳಲೂದುವನು ಗೊಲ್ಲ
ಮೈ ಮೇಲೆ ಗೇಣು ಅರಿವ್ಯಿಲ್ಲ
ಇವ ಮಾಮೇರೆಂಬೋ (?) ತೇಜಿಏರ್ಯಾನಲ್ಲ [44]

ನಿಡಗುರುಕಿ ಜೀವೂಬಾಯಿಯವರು ರುದ್ರದೇವರ ಕುರಿತಾಗಿ ನಿಂದಾಸ್ತುತಿ ರಚಿಸಿದ್ದಾರೆ. ಪರಮ ವೈರಾಗ್ಯಶಾಲಿಗಳಾದ ರುದ್ರದೇವರನ್ನು ಅವರ ಅಲಂಕಾರ ಕುರಿತು ವಿಡಂಬಿಸುತ್ತಾರೆ.

ನೊಸಲಲಿ ಕಸ್ತೂರಿ ತಿಲಕವನಿಡದಲೆ
ಭಸುಮವ ಲೇಪಿಸುವುದು ತರವೆ
ಕುಸುಮಲೋಚನ ಪ್ರಿಯ ಸಖನಾಗಿರುತಿರೆ
ಎಸೆವ ಕಪಾಲ ಹಿಡಿದು ಬೇಡುವದಿದು

ಭೃತ್ಯರು ಸೇವೆಗೆ ಬೇಕಾದವರಿರೆ
ಮತ್ತೆ ಪಿಶಾಚ ಗಣಗಳೇತಕೆ
ಹಸ್ತಿ ತುರಗ ಪಲ್ಲಕ್ಕಿ ಪುಷ್ಪಕವಿದೆ
ಎತ್ತನೇರಿ ಚರಿಸುವುದುಚಿತವೆ ಶಂಭೊ [45]

ಹರಿದಾಸಿಯರ ನಿಂದಾಸ್ತುತಿಗಳಲ್ಲಿ ಸಾಹಿತ್ಯಾಂಶಗಳಿವೆ. ತನ್ನನ್ನು ನಂಬಿದ ಭಕ್ತರಿಗೆ ಕರುಣೆ ತೋರಿದ್ದನ್ನೂ, ತೋರದಿರುವುದನ್ನೂ, ಭಗವಂತನ ಕಾಠಿಣ್ಯವನ್ನೂ ಟೀಕಿಸಿದ್ದಾರೆ. ಭಗವಂತನ ಲೀಲೆಗಳಲ್ಲಿ ಅವನ ಗುಣಗಳನ್ನು ನಿಂದೆಯ ಮಾತುಗಳಾಡುವ ಮೂಲಕ ಎತ್ತಿ ಹಿಡಿಯುತ್ತಾರೆ.

ದಶಾವತಾರಗಳು:

ಕುರುಕ್ಷೇತ್ರದಲ್ಲಿ ಅರ್ಜುನನಿಗೆ ಶ್ರೀಕೃಷ್ಣ ಭಗವದ್ಗೀತೆಯನ್ನು ಬೋಧಿಸಿದ. ಆಗ ಕೃಷ್ಣನು ಧರ್ಮಗ್ಲಾನಿಯಾದಾಗಲೆಲ್ಲ ಧರ್ಮಸಂಸ್ಥಾಪನೆಗಾಗಿ ತಾನೇ ಯುಗಯುಗಗಳಲ್ಲೂ ಅವತಾರವೆತ್ತಿ ಬರುವುದಾಗಿ ಹೇಳುತ್ತಾನೆ. ಮಾನವನಲ್ಲಿ ಅಧರ್ಮ, ಅಸತ್ಯ, ಹೆಚ್ಚಾದಾಗ ಭಗವಂತನೇ ಅವತಾರ ಮಾಡಿ ಧರ್ಮರಕ್ಷಣೆ ಮಾಡುವುದರಿಂದ ಶಾಂತಿ ಉಂಟಾಗುತ್ತದೆಂಬುದು ನಂಬಿಕೆ. ಭಗವಂತನು ಅನಂತ ರೂಪಿ. ಅವನು ಅನೇಕಾನೇಕ ಅವತಾರಗಳನ್ನು ಎತ್ತಿದ್ದರೂ ದಶಾವತಾರಗಳು ಹೆಚ್ಚಿನ ಪ್ರಾಶಸ್ತ್ಯ ಪಡೆದುಕೊಂಡಿದೆ. ಶ್ರೀಮಧ್ವಾಚಾರ್ಯರ ದ್ವಾದಶ ಸ್ತೋತ್ರದಲ್ಲಿ ದಶಾವತಾರ ವರ್ಣನೆಯಿದೆ. ಇದರಿಂದಲೇ ಹರಿದಾಸರು ದಶಾವತಾರಗಳ ಕಡೆಗೆ ಮನಸ್ಸು ಹರಿಸಿದರು.

ಪೌರಾಣಿಕ ಹಿನ್ನೆಲೆಯಿದ್ದ ಹರಿದಾಸರು ಭಾಗವತದಲ್ಲಿ ಪ್ರಸ್ತಾಪಿಸಿರುವ ದಶಾವತಾರಗಳನ್ನು ಕುರಿತು ಸ್ತುತಿ ಗೀತೆಗಳನ್ನು ರಚಿಸಿದರು. ಬೇರೆ ಬೇರೆ ಯುಗಗಳಲ್ಲಿ ನಡೆದ ಅವತಾರಗಳನ್ನು ಕ್ರಮವಾಗಿ ಜೋಡಿಸಿ ದಶಾವತಾರ ಸ್ತುತಿ ನಿರ್ಮಿಸಿದರು. ಪರಂಪರಾಗತವಾಗಿ ದಶಾವತಾರ ಸ್ತುತಿ ಒಂದು ಸಂಪ್ರದಾಯವೇ ಆಯಿತು. ಅನೇಕ ಸಂದರ್ಭಗಳಲ್ಲಿ ಹರಿದಾಸ-ದಾಸಿಯರು ದಶಾವತಾರ ಸ್ತುತಿಯನ್ನು ಬಳಸಿಕೊಂಡರು. "ಪ್ರಾರ್ಥನೆ, ಸ್ತುತಿ, ಉರುಟಣೆ ಪದ, ಲಾಲಿ, ಸೋಬಾನೆ, ಆರತಿಪದ, ಮಂಗಳ, ಸುಪ್ರಭಾತ, ಬಾಗಿಲು ತಡೆವ ಹಾಡು, ವೆಂಕಟೇಶ ಸ್ತುತಿ, ಕೃಷ್ಣಲೀಲೆ, ಹೀಗೆ ಹಲವು ಸಂದರ್ಭಗಳಲ್ಲಿ ದಶಾವತಾರ ಸ್ತುತಿಯನ್ನು ಬಳಸಿಕೊಂಡರು[46]. ನಿರೂಪಣಾ ವೈವಿಧ್ಯ ಈ ಹಾಡುಗಳ ವೈಶಿಷ್ಟ್ಯ. ಮಹಿಳಾ ಹರಿದಾಸರೂ ದಶಾವತಾರ ಸ್ತುತಿಗಳನ್ನು ರಚಿಸಿದ್ದಾರೆ.

ಒಂದೇ ನುಡಿಯಲ್ಲಿ ದಶಾವತಾರ ವರ್ಣನೆ ಅಥವಾ ಒಂದೊಂದು ಅವತಾರಕ್ಕೆ ಒಂದೊಂದು ನುಡಿಯಲ್ಲಿ ಮಹಿಳಾ ಹರಿದಾಸರು ಕೀರ್ತಿಸಿರುವುದನ್ನು ಕಾಣಬಹುದು. ನಿಂದಾಸ್ತುತಿಗಳ ವಸ್ತು ದಶಾವತಾರವೇ ಆಗಿದೆ. ಸಂಭಾಷಣಾ ರೂಪದಲ್ಲಿಯೂ ದಶಾವತಾರದ ಚಿತ್ರಣವಿದೆ. ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಭಾರ್ಗವ, ರಾಮ, ಕೃಷ್ಣ, ಬುದ್ಧ, ಕಲ್ಕಿ ಈ ಹತ್ತು ಅವತಾರಗಳನ್ನು, ಅವುಗಳಲ್ಲಿ ಶ್ರೀಹರಿ ತೋರಿದ ಲೀಲೆಗಳನ್ನು ವರ್ಣಿಸುತ್ತಾರೆ.

ಹರಪನಹಳ್ಳಿ ಭೀಮವ್ವ ಅತಿ ಹೆಚ್ಚು ಸಂಖ್ಯೆಯ ದಶಾವತಾರ ಸ್ತುತಿಗಳನ್ನು ರಚಿಸಿರುತ್ತಾರೆ. ಹರಿಸ್ತುತಿ ಮಾಡುವಾಗಲೆಲ್ಲ ದಶಾವತಾರವನ್ನೇ ಹೇಳುವುದು ಆಕೆಯ ವೈಶಿಷ್ಟ್ಯ. ಕೃಷ್ಣ ಭಕ್ತಿ ತುಂಬಿರುವ ಭೀಮವ್ವನ ಹಾಡುಗಳಲ್ಲಿ ದಶಾವತಾರದ ವಸ್ತು ಒಂದೇ ಆದರೂ ಅದನ್ನು ಹೇಳಿರುವ ರೀತಿ ಬೇರೆ ಬೇರೆಯಾಗಿದೆ. ನವವಿಧ ಭಕ್ತಿಗಳಲ್ಲಿ, ಮಧುರ, ಸಖ್ಯ ಭಾವಗಳಲ್ಲಿ, ನಿಂದಾಸ್ತುತಿಗಳಲ್ಲಿ ಭೀಮವ್ವ ದಶಾವತಾರದ ಹಾಡುಗಳನ್ನು ಹೆಣೆದಿದ್ದಾರೆ.

ಕೃಷ್ಣನ ಬಾಲ ಲೀಲೆಗಳನ್ನು, ದಶಾವತಾರಗಳನ್ನು ವರ್ಣಿಸಲು ಆಕೆ ಬಳಸಿರುವ ಭಾಷೆ, ಪದ ಲಾಲಿತ್ಯ, ಆಕೆಯ ವಿಷಯ ಜ್ಞಾನವನ್ನು ಸೂಚಿಸುತ್ತದೆ. ಶ್ರೀವಾದಿರಾಜರು, ಪುರಂದರದಾಸರಂತೆ ದಶಾವತಾರ ಚಿತ್ರಿಸಬಲ್ಲ ಆಕೆಯ ಕಾವ್ಯ ಸಾಮರ್ಥ್ಯ ಎದ್ದು ಕಾಣುತ್ತದೆ. "ಮಹಿಳಾ ಹರಿದಾಸರ ಪರಂಪರೆಯಲ್ಲಿ ದಶಾವತಾರಗಳು ಶ್ರೀಮಂತಿಕೆಯಿಂದ ಹರಳುಗಟ್ಟಿರುವುದು ಭೀಮವ್ವನ ಕೃತಿಗಳಲ್ಲಿ ಮಾತ್ರ". [47]

ಗಿರಿಯಮ್ಮನ ಹಲವು ಕೀರ್ತನೆಗಳಲ್ಲಿ ದಶಾವತಾರ ಸ್ಮರಣೆ ಕಂಡು ಬರುತ್ತದೆ. ಒಂದು ಕೀರ್ತನೆಯ ಮೂರು ನುಡಿಗಳಲ್ಲಿಯೂ ದಶಾವತಾರವನ್ನು ಮೂರು ಬಾರಿ ಹೇಳಿದ್ದಾಳೆ.

ಜಲದೊಳು ಪೊಕ್ಕು ವೇದವ ತಂದು ಅಜನಿಗಿತ್ತು
ಬಲುಗಿರಿ ಕುಸಿಯಲು ಬೆನ್ನಿನಿಂದಲಿ ತಳೆದು
ನೆಲನ ಕದ್ದಸುರನ ಕೊಂದು ಕಂಬದಿ ನಿಂದು
ಬಲಿಯದಾನವ ಬೇಡಿ
ಜಲಪರುಷವ ನೀಡಿ ಮತ್ತೆ ಮಾತೆಯ ಕಡಿದು
ಛಲದಿ ರಾವಣನ ಸಂಹರಿಸಿ ಸೀತೆಯ ತರಿಸಿ
ಬಲುಸತಿಯರನಾಳಿ ಬವುದ್ಧ ರೂಪವ ತಾಳಿ
ಅಲ್ಲದಶ್ವವೇರಿದ ಅತಿ ಚೆಲುವ ದೇವನ [48]

ಇದೇ ಹಾಡಿನ ಇನ್ನುಳಿದ ಎರಡು ನುಡಿಗಳಲ್ಲೂ ದಶಾವತಾರಗಳನ್ನು ಹೇಳಿದ್ದಾಳೆ. ಇದರಲ್ಲೂ ಮೂರು ನುಡಿಗಳಲ್ಲಿ ಹತ್ತು ಅವತಾರಗಳ ವರ್ಣನೆ ಬರುತ್ತದೆ.

ಅಂಬಾಬಾಯಿಯವರ ಕೃತಿಗಳಲ್ಲಿ ಶ್ರೀಹರಿಯನ್ನು ಕುರಿತ ಕೀರ್ತನೆಗಳೇ ಹೆಚ್ಚು. ದಶಾವತಾರ ಸ್ತುತಿಗಳನ್ನು ಒಂದೊಂದೆ ನುಡಿಯಲ್ಲಿ ಅಳವಡಿಸಿರುವುದು ಇವರ ನೈಪುಣ್ಯತೆಯನ್ನು ತೋರುತ್ತದೆ. 'ನೋಡಿದೆನು ಕೃಷ್ಣನ್ನ । ದಣಿಯ' ಎಂದು ಪ್ರಾರಂಭವಾಗುವ ಕೀರ್ತನೆಯಲ್ಲಿ 10 ನುಡಿಗಳಲ್ಲಿ ಹತ್ತು ಅವತಾರಗಳನ್ನು ಬಣ್ಣಿಸಿ ಕೊನೆಯ ನುಡಿಯಲ್ಲಿ ಹತ್ತೂ ಅವತಾರಗಳನ್ನು ಹೇಳಿದ್ದಾರೆ. ಹೀಗೆಯೇ ಮಾಗಡಿಯ ರಂಗನಾಥನ ಸ್ತುತಿಯಲ್ಲಿ ಒಂದೇ ನುಡಿಯಲ್ಲಿ ದಶಾವತಾರಗಳನ್ನು ಪ್ರಸ್ತಾಪಿಸುತ್ತಾರೆ.

ಆಗಮವ ಅಜಗಿತ್ತು ಸುರರಿಗಮೃತವಿತ್ತು
ಭೂದೇವಿ ಭಯ ಬಿಡಿಸಿದಾ
ಬೇಗ ಕಂಬದಿ ಬಂದು ಮಗುವ ರಕ್ಷಿಸಿ ಬಲಿಯ
ಯಾಗದಲಿ ಭೂ ಬೇಡಿದಾ
ನೀಗಿ ಕ್ಷತ್ರಿಯ ಕುಲ ದಶಶಿರನ ಸಂಹರಿಸಿ
ಮಾಗಧನ ಬಲವ ಮುರಿದಾ
ನೀಗಿ ಅಂಬರ ಕಲ್ಕಿ ಗೋಪಾಲ ಕೃಷ್ಣ ವಿಠಲಾ
ಮಾಗಡಿ ತಿರುಮಲೇಶ ಶ್ರೀಶಾ [49]

ಇಲ್ಲಿ ಕೂರ್ಮಾವತಾರದ ಬದಲು ಮೋಹಿನಿಯ ಅವತಾರವನ್ನು ಪ್ರಸ್ತಾಪಿಸುತ್ತಾರೆ. ದಶಾವತಾರಿಯಾದ ಶ್ರೀಹರಿ ಬೇರೆಯಲ್ಲ ಮಾಗಡಿಯ ತಿರುಮಲೇಶ ಬೇರೆಯಲ್ಲ ಎಂಬ ಅಭೇದ ಕಲ್ಪನೆ ಇಲ್ಲಿದೆ.

ಶ್ರೀಹರಿಯ ದಶಾವತಾರ ಕೀರ್ತನೆಗಳು ಬಿಡಿ ಬಿಡಿಯಾದ ಕೀರ್ತನೆಗಳಲ್ಲೂ ದೀರ್ಘಕೃತಿಗಳಲ್ಲೂ, ಒಂದು ಪದ, ಒಂದು ನುಡಿಯಲ್ಲೂ ಅಡಕಗೊಂಡಿವೆ. ಮತ್ಸ್ಯಾದಿ ಹತ್ತು ಅವತಾರಗಳನ್ನೇ ಮತ್ತೆ ಮತ್ತೆ ಹೇಳಿದರೂ ಅದರಲ್ಲಿ ಹೊಸತನವಿದೆ. ಕೆಲವು ಲಾಲಿ ಹಾಡುಗಳಾದರೆ, ಕೆಲವು ನಿಂದಾಸ್ತುತಿ, ಬಾಗಿಲು ತಡೆವ ಹಾಡು, ಉರುಟಣೆ ಹಾಡುಗಳಲ್ಲಿ ವೈವಿಧ್ಯಮಯವಾಗಿ ದಶಾವತಾರ ಚಿತ್ರಿಸಲಾಗಿದೆ. ವಸ್ತು ಒಂದೇ ಆದರೂ ಅದನ್ನು ನಿರೂಪಿಸಿರುವ ರೀತಿ ವೈವಿಧ್ಯ ಪೂರ್ಣವಾಗಿದೆ.

<u>ನದೀ ಸ್ತೋತ್ರಗಳು:</u> ಹರಿದಾಸರಲ್ಲಿ ತೀರ್ಥಕ್ಷೇತ್ರ ಯಾತ್ರೆಗೆ ಪ್ರಾಧಾನ್ಯವಿದೆ. ಕ್ಷೇತ್ರ ದರ್ಶನ ಅಲ್ಲಿನ ನದಿಗಳಲ್ಲಿ ಸ್ನಾನಾದಿಗಳನ್ನು ಪವಿತ್ರವೆಂದು ಭಾವಿಸುತ್ತಾರೆ. ನದಿಗಳನ್ನು ದೇವತೆಗಳೆಂದೇ ಪರಿಭಾವಿಸುವುದು ಮತ್ತು ನದೀ ಸ್ತೋತ್ರ ಮಾಡುವುದು ಹರಿದಾಸರ ಪದ್ಧತಿ. ಮಾನವನ ಪಾಪಗಳನ್ನು ತೊಳೆಯುವ ಪವಿತ್ರ ನದಿಗಳಲ್ಲಿ ಸ್ನಾನ ಮಾಡುವುದು, ಪೂಜೆ, ಬಾಗಿನ ಅರ್ಪಿಸುವುದು ಮಹಿಳೆಯರಲ್ಲಿ ಸಂಪ್ರದಾಯವಾಗಿ ಬೆಳೆದು ಬಂದಿದೆ. ಮಹಿಳಾ ದಾಸರು ಪರಮ ಪವಿತ್ರವಾದ ನದಿಗಳ ಸ್ಮರಣೆ, ವರ್ಣನೆ ಮಾಡಿದ್ದಾರೆ.

ಗಂಗಾ ದೇವಿಯು ಶ್ರೀಹರಿಯ ಮಗಳೆಂಬುದನ್ನು ಅವನ ಪಾದನಖದಿಂದ ಬಂದಳು ಎಂಬುದನ್ನು ಗಲಗಲಿ ಅವ್ವನವರು ಹೀಗೆ ಹೇಳುತ್ತಾರೆ.

ಅಚ್ಯುತನ ನಖತಾಕಿ ಬಿಚ್ಚಿ ಬ್ರಹ್ಮಾಂಡವು
ಸ್ವಚ್ಛ ಜಲವಾಗ ಸುರಿದಾವು
ಸ್ವಚ್ಛ ಜಲವಾಗ ಸುರಿದಾವು
ಅಜ ನೋಡಿ ಉತ್ಸಾಹದಿ ನುತಿಸಿದ [50]

ಇನ್ನೊಂದು ಕೀರ್ತನೆಯಲ್ಲಿ ಗಂಗೆಯು ಭಗೀರಥನ ತಪಸಿಗೆ ಒಲಿದು ಸಗರನ ಮಕ್ಕಳನ್ನು ಉದ್ಧರಿಸಲು ಭಾಗೀರಥಿಯಾಗಿ ಹರಿದ ವಿಚಾರ ತಿಳಿಸಿದ್ದಾರೆ. ಅದೇ ಕೀರ್ತನೆಯಲ್ಲಿ ತ್ರಿವೇಣಿ ಸಂಗಮವಾದದ್ದನ್ನೂ ತಿಳಿಸುತ್ತಾರೆ.

ಪ್ರಯಾಗ ರಾಜನ ಮುಂದೆ ವೇಗದಿ ಹರಿದಳು
ಹೋಗಿ ಸರಸ್ವತಿಯ ನೆರೆದಳು
ಹೋಗಿ ಸರಸ್ವತಿಯ ನೆರೆದು ಯಮುನೆಯ ಸೇರಿ
ಸಾಗಿಹಳು ಕಾಶಿಪುರಕಾಗ [51]

ಹರಪನಹಳ್ಳಿ ಭೀಮವ್ವನವರು ಅವ್ವನವರು ಹೇಳಿದ ವಿಚಾರಗಳ ಜೊತೆಗೆ ತ್ರಿವೇಣಿ ಸಂಗಮದಲ್ಲಿ ಮುತ್ತೈದೆಯರು ತಮ್ಮ ಪತಿಯೊಂದಿಗೆ ಬಾಗಿನ ಅರ್ಪಿಸಿ ವೇಣಿದಾನ ಮಾಡುವ ಸಂಪ್ರದಾಯವನ್ನು ಹೇಳಿದ್ದಾರೆ.

ಸಾಗರನರಸಿ ಪ್ರಯಾಗದ ಮರದ ಬಾಗಿಣವನು
ಕೊಂಬೆ ವೇಣಿಯ ದಾನ
ಕೊಂಬೆ ವೇಣಿಯ ದಾನ ಮುತ್ತೈದೇ-
ರಾಗಿರೆಂದ್ಧರಸಿ ಪೂಜೆಯ ಗೊಂಬೆ [52]

ಪ್ರಯಾಗದ ತ್ರಿವೇಣಿ ಸಂಗಮದಲ್ಲಿ ವೇಣಿದಾನ ನಡೆಸುವ ಸಂಪ್ರದಾಯವಿದೆ. ಸ್ತ್ರೀಯರು ಕೂದಲನ್ನು ಕತ್ತರಿಸುವುದು ನಿಷಿದ್ಧ. ಆದರೆ ಪ್ರಯಾಗದಲ್ಲಿ ಪತಿಯ ಜೊತೆಯಲ್ಲಿ ಮಿಂದು, ಪತ್ನಿಯ ಕೇಶದ ಕೊನೆಯನ್ನು ಪತಿಯೇ ಕತ್ತರಿಸಿ ನದಿಯಲ್ಲಿ ಸಂಕಲ್ಪಪೂರ್ವಕವಾಗಿ ತೇಲಿ ಬಿಡುವ ವಾಡಿಕೆಯಿದೆ. ನಂತರ ನದಿಗೆ ಬಾಗಿನ ನೀಡಿ ಮುತ್ತೈದೆತನ ಸ್ಥಿರವಾಗಲೆಂದು ಬೇಡಿಕೊಳ್ಳುತ್ತಾರೆ. ಈ ವಿಧಿಯನ್ನು ನಡೆಸಿದವರಿಗೆ ಮಾಂಗಲ್ಯ ಭಾಗ್ಯ ಸ್ಥಿರವಾಗಿರುವುದೆಂಬ ವಿಶ್ವಾಸವಿದೆ.

ಪ್ರಯಾಗದ ತ್ರಿವೇಣಿ ಸಂಗಮದಂತೆಯೇ ಗಂಗೆ, ಕೃಷ್ಣೆ, ಮಲಾಪಹಾರಿ ನದಿಗಳು ಕೂಡುವ ಸಂಗಮದಲ್ಲಿಯೂ ಮುತ್ತೈದೆಯರು ಮೊರದ ಬಾಗಿನ ಅರ್ಪಿಸುವುದನ್ನು ಗಿರಿಯಮ್ಮ ಕೃಷ್ಣಾ ನದಿ ಸ್ತೋತ್ರದಲ್ಲಿ ಹೀಗೆ ಹೇಳುತ್ತಾಳೆ.

ಸುರಗಂಗೆ ಕೃಷ್ಣಮಲಾಪಹಾರಿ ಮೂವರು ಕೂಡಿ
ಬೆರೆದಿದ್ದ ಸಂಗಮದಲ್ಲಿ
ಅರಿಸಿಣ ಅಕ್ಷತೆ ಗಂಧ ಕುಂಕುಮ ತಾಂಬೂಲಗಳ
ಹರುಷದಿಂದರ್ಪಿಸುತಲಿ
ಥರಥರದಿ ನೆರೆದ ಮುತ್ತೈದೆಯರೆಲ್ಲರು
ಮರದ ಬಾಗಿನವ ಕೊಡುತಲಿ
ಹರುಷದಿಂದಿಪ್ಪುದನು ಕಂಡೆ ----------
---------------------- [53]

ಅಂಬಾಬಾಯಿಯವರು ನದಿ ದೇವತೆಗಳನ್ನು ಸ್ತುತಿಸುವ ಒಂದು ಕೀರ್ತನೆಯಲ್ಲಿ ಹಲವಾರು ನದಿಗಳನ್ನು ನೆನೆಯುತ್ತಾರೆ.

ಗಂಗೆ ಗೋದಾವರಿ ಯಮುನೆ ಸರಸ್ವತಿ ಸಿಂಧು
ಮಂಗಳಾಂಗೆ ಕೃಷ್ಣ ಭೀಮರಥಿ ಪಲ್ಗುಣಿ
ಸಂಗಮ ತ್ರಿವೇಣಿ ಸರಯು ಗಂಡಕಿ ಸೀತ
ತುಂಗಭದ್ರಾ ನಾಮರೇ
ಅಂಗ ಮಾಲಾಪಾರಿ ಕಾವೇರಿ ಕಪಿಲೆನರ
ರಂಗ ಪಾವನಗೈವ ಪುಷ್ಕರಗಳಭಿಮಾನಿ
ಅಂಗನೆಯರೆಲ್ಲರಿಗೆ ಅಭಿವಂದಿಸುವೆ ಅಘವ
ಓಂಗಿಸುವುದೆಂದು ಮುದದೀ [54]

ಒಂದೇ ನುಡಿಯಲ್ಲಿ ಹಲವು ನದಿಗಳನ್ನು ಸ್ಮರಿಸುತ್ತಾರೆ. ಅವರ ಇನ್ನೊಂದು ಕೀರ್ತನೆಯಲ್ಲಿ ಶ್ರೀರಂಗನಾಥನನ್ನು ಸುತ್ತಿ ಬರುವ ಕಾವೇರಿಯನ್ನು ವೈಕುಂಠದ ಸುತ್ತಲೂ ಹರಿವ ವಿರಜಾನದಿಗೆ ಹೋಲಿಸುತ್ತಾರೆ.

ನೊರೆ ಸುಳಿಗಳಿಂದ ಭೋರ್ಗರೆಯುತ್ತ ಹರಿ ಇರುವ
ಅರಮನೆಯ ವೈಕುಂಠವೆಯ ಸೂಚಿಸುತ
ಹರಿಸದನ ಸುತ್ತಿರುವೆ ವಿರಜೆ ನಾನೆಂದೆನುತ
ಅರುಹುವಾ ತೆರೆದ ಬಹು ರಭಸದಿಂ ಪರಿವೆ [55]

ಕಾವೇರಿಯ ದನಿ ಇಂಪೆಂದು ಆನಂದದಿಂದ ಆಲಿಸುತ್ತಾ ರಂಗನಾಥ ಮಲಗಿದ್ದಾನೆ ಎಂದು ಹೇಳುತ್ತಾರೆ.

ತುಂಗಾ ನದಿಯು ಶ್ರೀಹರಿಯ ವರಾಹಾವತಾರದಲ್ಲಿ ಅವನ ಕೋರೆದಾಡೆಗಳಿಂದ ಉದ್ಭವಿಸಿದಳೆಂದು ಹೇಳಲಾಗುತ್ತದೆ. ಹಿರಣ್ಯಾಕ್ಷ ಭೂಮಿಯನ್ನು ಕದ್ದೊಯ್ದಾಗ ಅವನನ್ನು ಸಂಹರಿಸಿ ಭೂಮಿಯನ್ನು ಕೋರೆಗಳಿಂದ ಎತ್ತಿಕೊಂಡು ಬಂದು ನಿಂತಾಗ ಅವನ ಕೋರೆಯಿಂದ ತುಂಗ, ಭದ್ರಾ ನದಿಗಳು ಹುಟ್ಟಿದವೆಂಬ ಐತಿಹ್ಯವಿದೆ. ಅದನ್ನು ಅಂಬಾಬಾಯಿ ಹೀಗೆ ಹೇಳುತ್ತಾರೆ.

ಆದಿ ದೈತ್ಯನು ಖತಿಯಲಿ । ಮೇದಿನಿಯ ಸುತ್ತಿ
ಒಯ್ದು ಪಾತಳ ಪುರದಲಿ
ಬಾಧೆಪಡಿಸುತಿರೆ ಮಾಧವ ಕರುಣದಿ
ಆದಿವರಾಹನೆಂದೀ ಧರೆಯೊಳು ಬಂದು
ಬಾಧಿಸಿ ಖಳನನು ಮೇದಿನಿ ಪೊರೆಯಲು
ಶ್ರೀದನ ದಾಡೆಯಿಂ ನೀನುದುಭವಿಸಿದೆ [56]

ತುಂಗ ಭದ್ರೆಯು ಕೂಡಲೀ ಕ್ಷೇತ್ರದಲ್ಲಿ ಸಂಗಮವಾಗಿ ಹರಿಹರ ಮತ್ತು ಮಂತ್ರಾಲಯ ಕ್ಷೇತ್ರಗಳ ಮೂಲಕ ಸಾಗರ ಸೇರುವುದನ್ನೂ ವರ್ಣಿಸಿದ್ದಾರೆ.

ನದೀ ಸ್ತೋತ್ರಗಳನ್ನು ಆಯಾ ಕ್ಷೇತ್ರಗಳಿಗೆ ಯಾತ್ರೆ ಹೋದಾಗ ರಚಿಸಿರಬಹುದು. ಎಲ್ಲಾ ಮಹಿಳಾ ದಾಸರು ನದೀ ಸ್ತೋತ್ರಗಳನ್ನು ರಚಿಸಿಲ್ಲ. ಪವಿತ್ರವಾದ ನದಿಗಳಲ್ಲಿ ಸ್ನಾನ ಮಾಡುವುದರಿಂದ ಪಾಪಗಳೆಲ್ಲ ಇಂಗುವವೆಂಬ ಭಾವ ಈ ಕೀರ್ತನೆಗಳಲ್ಲಿದೆ. ನದಿಯ ಹುಟ್ಟು, ಅದರ ಪ್ರಾಮುಖ್ಯತೆಯನ್ನು ದಾಸ ಮಹಿಳೆಯರ ಕೀರ್ತನೆಗಳಲ್ಲಿ ಕಾಣಬಹುದಾಗಿದೆ.

ತತ್ವ ವಿಚಾರ:

ದ್ವೈತ ಸಿದ್ಧಾಂತದಲ್ಲಿ ಪರಮಾತ್ಮ ಮಾತ್ರ ಸರ್ವತಂತ್ರ ಸ್ವತಂತ್ರನು. ಉಳಿದ ಜೀವರು ಅಸ್ವತಂತ್ರರು. ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ ಹಾಗೂ ಮೋಕ್ಷಗಳಿಗೆ ಶ್ರೀಹರಿಯೇ ಕರ್ತೃವಾಗಿದ್ದಾನೆ. ಪಂಚಬೇಧಗಳು ತತ್ವತಃ ನಿಜವಾದವು. ಜೀವ–ಜಡ, ಜೀವ–ಜೀವ, ಜೀವ–ಈಶ, ಜಡ–ಜಡ, ಜಡ–ಈಶ ಇವು ಪಂಚಭೇದಗಳು. ಜೀವ–ಈಶ ಒಂದೇ ಆಗಲು ಸಾಧ್ಯವಿಲ್ಲ. ಜೀವಗಳಲ್ಲಿ ಪಂಚಭೇದಗಳಿರುವಂತೆ ದೇವತೆಗಳಲ್ಲೂ ತಾರತಮ್ಯ ಇದೆ. ಈ ಜಗತ್ತಿನ ಸಕಲ ವ್ಯಾಪಾರಗಳಿಗೂ ಶ್ರೀಹರಿಯೇ ಕಾರಣ.

ಈ ತತ್ವಗಳನ್ನು ಆಧರಿಸಿ ಹರಿದಾಸರು ಕನ್ನಡದಲ್ಲಿ ಮಧ್ವಮತವನ್ನು ಸಮಗ್ರವಾಗಿ ವ್ಯಾಖ್ಯಾನಿಸಿದ್ದಾರೆ ಎನ್ನಬಹುದು. ಮಹಿಳಾ ಹರಿದಾಸರಲ್ಲಿ ಮಾಧ್ವ ಸಂಪ್ರದಾಯಕ್ಕೆ ಸೇರಿದ ಕೆಲವರಲ್ಲಿ ಮಾತ್ರ ತತ್ವ ವಿಚಾರಗಳ ಕುರಿತಾದ ಕೀರ್ತನೆಗಳಿವೆ. ಎಲ್ಲಾ ದಾಸ ಮಹಿಳೆಯರೂ ತತ್ವ ಪ್ರತಿಪಾದಿತ ಕೃತಿಗಳನ್ನು ರಚಿಸಿಲ್ಲ.

ಮೊದಲಿಗೆ ಗಲಗಲಿ ಅವ್ವನವರು ತತ್ವ ವಿಚಾರ ಮಾಡಿರುವುದನ್ನು ಗಮನಿಸಬಹುದು. ಬಾಲ್ಯದಲ್ಲೇ ವೈಧವ್ಯದಿಂದ ನೊಂದು ಮಲಮಕ್ಕಳಲ್ಲಿ ವಿದ್ಯಾಭ್ಯಾಸ ಮಾಡಿ ಪೇಶ್ವೆಯ ದರ್ಬಾರಿನಲ್ಲಿ ವಾದದಲ್ಲಿ ಸೋಲುತ್ತಿದ್ದ ತನ್ನ ಮಕ್ಕಳ ಪರವಾಗಿ ತತ್ವ ವಿಚಾರಗಳನ್ನು ಹೇಳಿ ಅವರನ್ನು ಗೆಲ್ಲಿಸಿದವರು. ಮಧ್ವ ಮತದ ಬಗ್ಗೆ ಚೆನ್ನಾಗಿ ತಿಳಿದಿದ್ದವರು. ಹರಿದಾಸರಲ್ಲಿ ದ್ವೈತಮತ ಪ್ರತಿಪಾದನೆ ಸಂಪ್ರದಾಯದಂತೆ ಬಂದಿದೆ. ಅವ್ವ ಅಪ್ಪಟ ಮಾಧ್ವ ಮನೆತನದಿಂದ ಬಂದವರಾದ್ದರಿಂದ, ಮಧ್ವಶಾಸ್ತ್ರದ ಪರಿಚಯ ಇದ್ದಿತು. ಅವ್ವನವರು ತಮ್ಮ ಕೀರ್ತನೆಗಳಲ್ಲಿ ಅದ್ವೈತ ಮತ ನಿರಾಕರಣೆ, ದ್ವೈತದ ಮಂಡನೆ ಎರಡೂ ಇದೆ. ಜೀವಜೀವರಲ್ಲಿ ವ್ಯತ್ಯಾಸವಿದೆಯೆಂಬುದನ್ನು ಹೀಗೆ ನಿರೂಪಿಸುತ್ತಾರೆ.

ಅತ್ತೆ ಸೊಸೆ ಒಂದೆ ಮಕ್ಕಳು ಮರಿಯೊಂದೆ
ಹೆತ್ತಮ್ಮನೊಂದು ಮಡದಿಯೊಂದೆ
ಹೆತ್ತಮ್ಮನೊಂದೆ ಮಡದಿಯೊಂದೆಯಾದರೆ
ವಿತ್ತ ವೆಚ್ಚಾಗಿ ಮದುವೆಯಾಕೆ [57]

ತಾಯಿ–ಮಡದಿ, ಆಳು–ಅರಸ, ಕೋಳಿ–ಕೋಗಿಲೆ, ಮಾಳಿಗೆ–ಬಯಲು ಇವೆಲ್ಲ ಹೇಗೆ ಸಮಾನವಲ್ಲವೋ ಹಾಗೆಯೇ ಪಂಚಬೇಧಗಳು ಸತ್ಯ ಮತ್ತು ವಾಸ್ತವ ಎನ್ನುತ್ತಾರೆ.

ಅಂಬಾಬಾಯಿಯವರು ದ್ವೈತ ತತ್ವಗಳ ಜೊತೆಗೆ ಬದುಕು, ದೇಹ, ಮನಸ್ಸು ಇವುಗಳ ಬಗ್ಗೆ ತಾತ್ವಿಕವಾಗಿ ಚಿಂತಿಸುತ್ತಾರೆ. ಜೀವನ ಎಂದಿಗೂ ಸ್ವೀಕಾರಾರ್ಹವೇ. ಬದುಕು ನಶ್ವರ ಎಂದು ಪಲಾಯನ ಮಾಡಬಾರದು. ಪ್ರಾಪಂಚಿಕ ಕಷ್ಟ–ಸುಖಗಳ ನಡುವೆ ಬದುಕಿ ಅನುಭವಿಸಿ ಆಸೆ, ಆಕರ್ಷಣೆಗಳನ್ನು ಗೆದ್ದ

ಮೇಲೆ ಮುಕ್ತಿ, ಮೋಕ್ಷಗಳ ಚಿಂತನೆ ಮಾಡಬೇಕಾದ್ದು ಮಾನವತೆಯ ಸಹಜ ಧರ್ಮ ಎಂಬುದನ್ನು ಹೀಗೆ ನಿರೂಪಿಸುತ್ತಾರೆ.

ಪ್ರಪಂಚದೊಳಗಿದ್ದು ಪ್ರಪಂಚವನೆ ಮೆದ್ದು
ಪ್ರಪಂಚವನೆ ಗೆದ್ದು ಪ್ರಪಂಚವನೆ ಒದ್ದು
ಪ್ರಪಂಚಾತೀತ ನಮ್ಮ ಗೋಪಾಲಕೃಷ್ಣವಿಠಲನ
ಪ್ರಪಂಚದೊಳು ಸುಖವ ಪೊಂದುವನೆ ಧನ್ಯ [58]

ಹೀಗೆಯೇ 'ಹಚ್ಚಡ ಒಗೆಯಬೇಕಮ್ಮ' ಎಂಬ ಕೀರ್ತನೆ ದೇಹ ಮನಸ್ಸುಗಳನ್ನು ಹೇಗೆ ಶುದ್ಧೀಕರಿಸಬೇಕೆಂದು ನಿರೂಪಿಸುವ ತತ್ವಪದ. ತತ್ವ ವಿಚಾರಗಳು ಎಲ್ಲ ಮಹಿಳಾ ದಾಸರ ಕೃತಿಗಳಲ್ಲಿ ಕಂಡು ಬರುವುದಿಲ್ಲ. ವೈದಿಕ ಪರಿಸರದಲ್ಲಿ ಜೀವಿಸಿದ್ದ ಅವ್ವ, ಅಂಬಾಬಾಯಿಯವರಂತಹ ಮಹಿಳೆಯರಲ್ಲಿ ಮಾತ್ರ ಕಂಡು ಬರುತ್ತವೆ.

ನೀತಿ ನಿರೂಪಣೆ:

ಹಠ, ದಿಟ, ನಟನೆ, ಕಠಿಣತನ, ಅಧಿಕಾರ, ಆರ್ತತೆ, ದಾನ, ಭಕುತಿ ಇವೆಕ್ಕೆಲ್ಲ ನಮಗೆ ಪುರಾಣಗಳಲ್ಲಿ ಹಲವಾರು ಆದರ್ಶ ಪುರುಷರು ದೊರೆಯುತ್ತಾರೆ. ನಾವು ಮಾಡಬೇಕಾದ್ದು ಈ ಆದರ್ಶಗಳ ಅನುಕರಣೆಯಷ್ಟೇ. ಶ್ರೀಹರಿಯನ್ನು ಒಲಿಸಲು ಈ ಅನುಸರಣೆಯೊಂದು ಸಾಕು ಎಂದು ಕೋಲಾರ ಪದ್ಮಾಬಾಯಿ ಹೇಳುತ್ತಾರೆ

ಹಟದಿ ತಪಗೈ ಬೇಕು ಧ್ರುವರಾಯನಂತೆ
ದಿಟವ ನುಡಿಯಲಿಬೇಕು ಹರಿಶ್ಚಂದ್ರನಂತೆ ॥
ನಟನೆ ಮಾಡಲಿ ಬೇಕು ನಾರದರಂತೆ
ಕಠಿಣತನವಿರಬೇಕು ಜಯ ಭೀಮನಂತೆ ॥

ಅರಸನಾಗಿರಬೇಕು ಅಂಬರೀಷನಂತೆ
ಮೊರೆಯಿಡಬೇಕು ಪಾಂಚಾಲಿಯಂತೆ ।
ಧರಿಣಿಯನೆ ಕೊಡಬೇಕು ಬಲಿರಾಯನಂತೆ
ದೃಢ ಭಕುತಿ ಇರಬೇಕು ಪ್ರಹ್ಲಾದನಂತೆ [59]

ದೇವವ್ರತನಂತೆ ಶಪಥ, ವಿಶ್ವಾಮಿತ್ರರಂತೆ ತಪಸ್ಸು, ವಾಲ್ಮೀಕಿಯಂತೆ ಜಪ, ಹನುಮನಂತೆ ಸೇವೆ ಮಾಡಬೇಕೆನ್ನುತ್ತಾರೆ.

ಆತ್ಮ ನಿವೇದನೆ:

ನವವಿಧ ಭಕ್ತಿಗಳಲ್ಲಿ ಆತ್ಮನಿವೇದನೆಯೂ ಒಂದು. ಹರಿದಾಸರು ಮೋಕ್ಷ ಸಾಧಿಸಲು ಭಕ್ತಿಯೇ ಸಾಧನ ಎಂದು ನಂಬಿದವರು. ಹರಿಯನ್ನು ಸರ್ವೋತ್ತಮನೆನ್ನುವ ದಾಸರುಗಳು ಅವನಲ್ಲಿ ಸಂಪೂರ್ಣ ಶರಣಾಗತಿ ಹೊಂದುತ್ತಾರೆ. ತಮ್ಮನ್ನು ತಾವೇ ವಿಮರ್ಶಿಸಿಕೊಂಡು ತಮ್ಮ ತಪ್ಪು ಒಪ್ಪುಗಳನ್ನು ಭಗವಂತನಲ್ಲಿ ನಿವೇದಿಸಿಕೊಳ್ಳುತ್ತಾರೆ. "ತನ್ನ ಸುಖ ದುಃಖಗಳನ್ನು ದೇವರಲ್ಲಿ ನಿವೇದನೆ ಮಾಡಿಕೊಂಡು ತಪ್ಪುಗಳನ್ನು ಒಪ್ಪಿಕೊಂಡು ಪಶ್ಚಾತ್ತಾಪದ ಮೂಲಕ ಪರಿಶುದ್ಧನಾಗುವುದು ಭಕ್ತನಾದವನ ಸಾಧನೆಯ ಮೊದಲ ಹಂತ. ತನ್ನ ನಡವಳಿಕೆಗಳನ್ನು ತಾನೇ ನಿಂದಿಸಿಕೊಂಡು, ತನ್ನ ತಪ್ಪುಗಳನ್ನು ತಾನೇ ಎತ್ತಿ ಹಿಡಿದು, ತನ್ನ ಚಂಚಲ ಮನಸ್ಸಿನ ದೌರ್ಬಲ್ಯಕ್ಕೆ ನಾಚಿ, ಭಗವಂತನ ಅನುಗ್ರಹಕ್ಕಾಗಿ ಹಂಬಲಿಸುವುದು ಈ ಹಂತದ ಭಕ್ತನ ಪ್ರಮುಖ ಲಕ್ಷಣ."[60]

ತಮ್ಮೆಲ್ಲಾ ನಡವಳಿಕೆಗಳನ್ನು ಸ್ವವಿಮರ್ಶೆ ಮಾಡಿಕೊಂಡು ತಮ್ಮನ್ನು ಉದ್ಧಾರ ಮಾಡಬಲ್ಲವನು ದೇವರೊಬ್ಬನೆ ಎಂಬ ದೃಢ ನಂಬಿಕೆಯಿಂದ ಆತ್ಮ ಶೋಧನೆ ಮಾಡಿಕೊಂಡು, ನಿವೇದಿಸಿಕೊಳ್ಳುವ ಹರಿದಾಸರ ಆತ್ಮಾವಲೋಕನ ಕೃತಿಗಳು ದಾಸ ಸಾಹಿತ್ಯದಲ್ಲಿ ಸಾಕಷ್ಟಿವೆ. ದಾಸ ಮಹಿಳೆಯರ ಕೃತಿಗಳಲ್ಲೂ ಆತ್ಮ ನಿವೇದನಾತ್ಮಕ ಕೀರ್ತನೆಗಳಿವೆ. ತಮ್ಮ ಇಷ್ಟ ದೈವದೊಡನೆ, ಗುರುಗಳೊಡನೆ ತಮ್ಮ ದೌರ್ಬಲ್ಯ ನಿವೇದಿಸಿಕೊಂಡು ಭಗವಂತನಲ್ಲಿ ಮೊರೆಯಿಡುತ್ತಾರೆ. ತಮ್ಮ ಗತ ಜೀವನದ ಅವಲೋಕನವನ್ನು ಇಲ್ಲಿ ಮಾಡುತ್ತಾರೆ. "ಹೀಗಾಗಿ ಆತ್ಮಾವಲೋಕನದ ರಚನೆಗಳು ಹರಿದಾಸರ ದಾಸತ್ವ ಪೂರ್ವ ಜೀವನದ ದಾಖಲೆಗಳೂ ಆಗಿವೆ." [61]

ಗಿರಿಯಮ್ಮ ಘೋರ ಸಂಸಾರಕ್ಕೆ ಸಿಕ್ಕಿ ಘಾಸಿಯಾದೆನೆಂದು ಮೂರು ದಿನದ ಬಾಳ ನೆಚ್ಚಿ ಮೋಸ ಹೋದೆ ಎನ್ನುತ್ತಾಳೆ.

ಬಿಸಜನೈಯ್ಯನೆ ಶ್ರೀತುಳಸಿ ಮಾಲಾ ಭೂಷನೆ
ಹಸಿವು ತೃಷೆಯು ನಿದ್ರೆಯಿಂದಾ ಹೊತ್ತುಗಾಣೆನೈಯ್ಯಾ
ದೆಸೆದೆಸೆಗೆ ಇಂದ್ರಿಯಗಳು ಎಳೆದು ಕಾಡುತಾರೈಯ್ಯಾ
ವಸುಧಿಗೊಡೆಯ ನಿಮ್ಮ ನೆನೆಯದೆ ಮುಗ್ಧಳಾದೆನು [62]

ಅಂಬಾಬಾಯಿ ತನಗೇಕೆ ವೈರಾಗ್ಯ ಪುಟ್ಟಲಿಲ್ಲವೆಂದು ಹರಿಯಲ್ಲಿ ಕೇಳುತ್ತಾರೆ. ಶ್ರೀಹರಿಯನ್ನು ಅರೆಗಳಿಗೆಯೂ ನೆನೆಯದೆ ಹಸಿವು ತೃಷೆಯಿಂದ ಬಳಲಿರುವುದಾಗಿ ಹೇಳುತ್ತಾರೆ.

ಭಕ್ತಿ ಮಾರ್ಗವ ಕಾಣೆ ಜ್ಞಾನ ಮೊದಲೆ ಅರಿಯೆ
ಮುಕ್ತಿಗೊಡೆಯನೆ ಎನ್ನ ಮುದದಿಂದ ಸಲಹೊ
ಯುಕ್ತಯುಕ್ತಿಗಳರಿಯೆ ಸುತ್ತುತಿಪ್ಪೆನೊ ಭವದಿ
ಶಕ್ತ ನೀ ಒಳಗಿದ್ದು ಎನ್ನ ಕಾಡುವರೆ [63]

ನಿರ್ಮಲ ಚಿತ್ತದಿಂದ ಒಮ್ಮೆಯಾದರೂ ಹರಿಯನ್ನು ನೆನೆಯಲಿಲ್ಲವೆಂದು ಭಾವನೆ ಅವರನ್ನು ಕಾಡುತ್ತಿದೆ.

ನಿಡಗುರುಕಿ ಜೀವೂಬಾಯಿಯವರು ಆತ್ಮಶೋಧನೆ ಮಾಡಿಕೊಳ್ಳುವುದು ಹೀಗೆ:

ಸ್ನಾನಜಪತಪವ ನೇಮಗಳ ಬಿಟ್ಟೆ
ಮೌನವನು ಬಿಟ್ಟೆ ದಾನಧರ್ಮವ ಕೊಡದೆ ಕೈಬಿಟ್ಟೆ
ಶ್ರೀನಿವಾಸನ ಪೂಜೆನೇಮನಿಷ್ಠೆ ಮಾಡದಲೆ ಬಿಟ್ಟೆ
ಶ್ವಾನ ಸೂಕರನಂತೆ ಹೊರೆದೆ ಹೊಟ್ಟೆ
ಏನ ಪೇಳಲಿ ಪರರ ದ್ರವ್ಯಪಹರಿಸುತಿಹ
ಹೀನ ಜನರ ಸಂಗ ಮಾಡಿ ಬಳಲಿ ಬರಿದೆ [64]

ಹಿಂದೆ ಮಾಡಿದ ಪಾಪಗಳನ್ನು ಎಣಿಸದೆ ರಕ್ಷಿಸಿ ಸಲಹೆಂದು ಹರಿಯ ಮೊರೆಹೊಕ್ಕಿದ್ದಾರೆ.

ಯದುಗಿರಿಯಮ್ಮನವರು ಸಂಸಾರದ ಜಂಜಾಟಗಳನ್ನು ಬಿಡಿಸಿ ಕಾಪಾಡಲು ಹರಿಯನ್ನು ಪ್ರಾರ್ಥಿಸುತ್ತಾರೆ. ಸಂಸಾರದ ಕೋಟಲೆಗಳನ್ನು ಸಹಿಸಲಾರದೆ, ಅರಿಷಡ್ವರ್ಗಗಳನ್ನು ಜಯಿಸಲಾರದ ಆಶಾ ಪಾಶಕ್ಕೆ ಸಿಲುಕಿದ ಮನಸ್ಸನ್ನು ಹರಿಯ ದಾಸರಲ್ಲಿ ಸೇರಿಸಲು ಕೇಳಿಕೊಳ್ಳುತ್ತಾರೆ. ಮೋಹ ತುಂಬಿದ ಸಂಸಾರ ದಾಟಲಾರದೆ ಬಳಲುತ್ತಿರುವುದಾಗಿ ಹೇಳಿ

ಜನನಮರಣವೆಂಬೊ ಕ್ರೂರ ಜಾಡ್ಯವಯ್ಯ
ಇದರ ವಿಧವನರಿತು ವೈದ್ಯ ಮಾಳ್ಪರ ಕಾಣೆನಯ್ಯ
ಬ್ರಹ್ಮಾದಿ ದೇವತೆಗಳೂ ಅರಿಯರಯ್ಯ
ಧನ್ವಂತ್ರಿರೂಪ ಶ್ರೀನಿವಾಸ ರಕ್ಷಿಸಯ್ಯ [65]

ಎಂದು ಶರಣು ಬಂದಿದ್ದಾರೆ.

ಕೋಲಾರ ಪದ್ಮಾಬಾಯಿಯವರು 'ಭೀಮರಥಿಶಾಂತಿ ಪ್ರಾರ್ಥನಾ' ಎಂಬ ಕೀರ್ತನೆಯಲ್ಲಿ

ಎನಗಾಯ್ತು ಎಪ್ಪತ್ತು ವರ್ಷ । ಕೇಳೊ ಪುರುಷ ।
ಮನದಿ ಪುಟ್ಟದು ವೈರಾಗ್ಯ ಅರೆ ನಿಮಿಷ ॥

ಪತಿ, ಪುತ್ರರಲಿ ಬಹು ಮೋಹ । ಬಹು ಪ್ರೇಮ
ರತಿ ಪತಿ ಪಿತ ಮರೆತೆನೊ ನಿನ್ನ ಧ್ಯಾನ [66]

ಎಂದು ಸರಳವಾಗಿ ತಪ್ಪುಗಳನ್ನು ನಿವೇದಿಸಿಕೊಳ್ಳುತ್ತಾರೆ.

ಆತ್ಮ ಶೋಧನೆಯಿಂದ ಉಂಟಾದ ಬೇಸರ, ವೈರಾಗ್ಯಗಳು ಆತ್ಮ ನಿವೇದನೆಗೆ ದಾರಿ ಮಾಡಿ ಕೊಡುತ್ತದೆ. ಭಗವಂತನಿಗೆ ಸಂಪೂರ್ಣ ಶರಣಾಗಿ ಪಾಪಪ್ರಜ್ಞೆ ಕಳೆದುಕೊಳ್ಳಲು ಆತ್ಮ ನಿವೇದನೆಯೇ ಸರಿಯಾದ ಮಾರ್ಗ. ಆತ್ಮೀಯರೊಡನೆ ಆಪ್ತ ವಿಷಯಗಳನ್ನು ಹೇಳಿಕೊಂಡು ಸಮಾಧಾನ ಹೊಂದುವಂತೆ ಹರಿದಾಸಿಯರು ಶ್ರೀಹರಿಯಲ್ಲಿ ತಮ್ಮ ಸಕಲ ವಿಚಾರಗಳನ್ನು ನಿವೇದಿಸಿಕೊಳ್ಳುತ್ತಾರೆ. ಕರುಣಾಮಯಿಯಾದ ಶ್ರೀಹರಿ ತಪ್ಪುಗಳನ್ನೆಲ್ಲ ಕ್ಷಮಿಸಿ ಸರಿದಾರಿಯಲ್ಲಿ ನಡೆಸುವನೆಂದು ನಂಬುತ್ತಾರೆ. ಲೌಕಿಕದಲ್ಲಿ ತಮ್ಮ ತಾಪತ್ರಯಗಳನ್ನು ಹರಿಗೆ ಹೇಳಿಕೊಂಡು ಸಂಸಾರ ಮುಕ್ತರಾಗಿಸಲು ಬೇಡಿಕೊಳ್ಳುತ್ತಾರೆ. ತಮ್ಮ ಕಷ್ಟ ಕಾರ್ಪಣ್ಯಗಳಿಂದ ಹೊರಬರಲು ದಾಸ ಮಹಿಳೆಯರು ಆತ್ಮ ನಿವೇದನೆ ಮಾಡಿಕೊಂಡು ಸಮಾಧಾನ ಹೊಂದುತ್ತಾರೆ.

ತೀರ್ಥಕ್ಷೇತ್ರ:

ತೀರ್ಥ ಕ್ಷೇತ್ರಗಳು ಹರಿದಾಸರಿಗೆ ಸ್ಫೂರ್ತಿ ಕೇಂದ್ರಗಳಾಗಿವೆ. ಹರಿದಾಸರಲ್ಲಿ ತೀರ್ಥಕ್ಷೇತ್ರ ದರ್ಶನ ಮತ್ತು ಆ ಕುರಿತ ಕೃತಿ ರಚನೆ ಒಂದು ಸಂಪ್ರದಾಯದಂತೆ ಬೆಳೆದು ಬಂದಿದೆ. ಹರಿದಾಸಿಯರೂ ಸಹ ಇದಕ್ಕೆ ಹೊರತಲ್ಲ. "ನವರಾತ್ರಿಯಲ್ಲಿ ತಿರುಪತಿ, ಆಷಾಢ ಮಾಸದ ಏಕಾದಶಿ ಪಂಢರಾಪುರ, ಮಧ್ವನವಮಿಯಂದು ಉಡುಪಿಯಲ್ಲಿ ಹರಿದಾಸರಿರುವುದು ಸಾಮಾನ್ಯ ವಿಷಯವಾಗಿತ್ತು."[67] ಸಾಮಾಜಿಕವಾಗಿ ಅನೇಕ ಕಟ್ಟುಪಾಡುಗಳಿಂದ ಬಂಧಿತರಾದ ಈ ಮಹಿಳೆಯರಿಗೆ ತೀರ್ಥಾಟನೆಗೆ ಅವಕಾಶವಿತ್ತೊ ಇಲ್ಲವೊ ತಿಳಿದಿಲ್ಲ. ಆದರೂ ತಮ್ಮ ಇತಿ–ಮಿತಿಯಲ್ಲೇ ತೀರ್ಥಕ್ಷೇತ್ರ ಸಂದರ್ಶನ ಮಾಡಿದ್ದಾರೆ ಮತ್ತು ಸ್ಥಳೀಯ ದೇವತೆಗಳಿಗೆ ಹೆಚ್ಚಿನ ಪ್ರಾಮುಖ್ಯ ನೀಡಿದ್ದಾರೆ. ತಿರುಪತಿ, ಉಡುಪಿ, ಮಂತ್ರಾಲಯ, ಪಂಢರಾಪುರ ಕ್ಷೇತ್ರಗಳು ಎಲ್ಲ ದಾಸ/ದಾಸಿಯರ ಮನಸೆಳೆದ ಪ್ರಮುಖ ಕ್ಷೇತ್ರಗಳು.

ತಿರುಪತಿ:

ತಿರುಪತಿಯ ವೆಂಕಟೇಶನನ್ನು ಸ್ತುತಿಸದ ಹರಿದಾಸರೇ ಇಲ್ಲ. ಹಾಗೆಯೇ ದಾಸ ಮಹಿಳೆಯರಿಂದಲೂ ವೆಂಕಟೇಶ ಸ್ತುತಿಸಿಕೊಂಡಿದ್ದಾನೆ. ಶ್ರೀನಿವಾಸನನ್ನು ಹರಿದಾಸರು ಸಮಯಕ್ಕೆ ಒದಗುವ

ಸ್ವಾಮಿಯಾಗಿ, ತಮ್ಮನ್ನು ಕಾಯುವ ಪ್ರಭುವಾಗಿ ಕಾಣುತ್ತಾರೆ. ವೆಂಕಟರಮಣನ ಅಲಂಕಾರ, ಬ್ರಹ್ಮೋತ್ಸವದ ವೈಭವ, ಅವನ ಭಕ್ತವಾತ್ಸಲ್ಯ, ನಿಂದಾಸ್ತುತಿ, ಎಲ್ಲವೂ ದಾಸ ಮಹಿಳೆಯರ ಕೀರ್ತನೆಗಳಿಗೆ ವಸ್ತುಗಳಾಗಿವೆ.

ತಿರುಪತಿಯ ಕ್ಷೇತ್ರವರ್ಣನೆಯನ್ನು ಭೀಮವ್ವ ಹೀಗೆ ಮಾಡಿದ್ದಾರೆ. ಮನಸ್ಸಿಟ್ಟು ಬೆಟ್ಟವನ್ನೇರಲು ಇಷ್ಟಾರ್ಥ ನೀಡುವನೆಂದು ಹೇಳುತ್ತಾ

ಎಷ್ಟು ಹೇಳಲಿ ವೆಂಕಟಗಿರಿಯ

ಚಿತ್ರವಿಚಿತ್ರದ ಮಹಾದ್ವಾರ
ಚಿನ್ನದ ಗೋಪುರ
ಸ್ವಚ್ಛವಾದ ಸ್ವಾಮಿ ಪುಷ್ಕರಿಣಿ ತೀರ
ಸುತ್ತಲು ಪ್ರಾಕಾರ [68]

ನಿಡಗುರುಕಿ ಜೀವೂಬಾಯಿಯವರು ಶ್ರೀನಿವಾಸನನ್ನು ದರ್ಶಿಸುವ ಕ್ರಮವನ್ನು ತಿಳಿಸುತ್ತಾರೆ.

ಸ್ವಾಮಿ ಪುಷ್ಕರಿಣಿಯ ಸ್ನಾನ ಮಾಡಿ
ಆ ಮಹವರಹ ದೇವರನ್ನು ಕಾಮ
ಧೇನೆಂಬ ಶ್ರೀಗುರುಗಳನ್ನ ನೋಡಿ
ಆ ಮಹಾ ಅಶ್ವತ್ಥರಾಜನ್ನ ಸ್ತುತಿಸಿ
ನೇಮದಿ ದಿಗ್ಗಾವಿ ಆಚಾರ್ಯರಿಗೆ ನಮಿಸಿ
ಶ್ರೀಧರನಾಲಯ ದ್ವಾರಕ್ಕೆ ಪೋಗಲು [69]

ಹೀಗೆ ಒಳಹೊಕ್ಕು ಶ್ರೀನಿವಾಸನನ್ನು ದರ್ಶಿಸಿದ ಕಳಸದ ಸುಂದರಮ್ಮನವರು ವೆಂಕಟರಮಣನನ್ನು ಮನದಣಿಯೆ ನೋಡಿ ಸ್ತುತಿಸುತ್ತಾರೆ. ವೆಂಕಟೇಶನ ಅಲಂಕಾರ ಮತ್ತು ಒಡವೆಗಳ ವೈಭವವನ್ನು ಸರಸ್ವತಿಬಾಯಿ ಹೊಗಳುತ್ತಾರೆ. ಶ್ರೀನಿವಾಸನ ಮೂರು ನಾಮಗಳನ್ನು ಕುರಿತು ಅಂಬಾಬಾಯಿ ಮತ್ತು ಸರಸ್ವತಿಬಾಯಿಯವರು ಕೀರ್ತನೆಗಳನ್ನು ರಚಿಸಿದ್ದಾರೆ. ಮೂರು ನಾಮಗಳನ್ನಿಟ್ಟ ಕಾರಣವನ್ನು

ಮೂರು ರೂಪನು ನಾನು ಮೂರು ಲೋಕಗಳಿಹವು
ಮೂರು ಮಾಳ್ಪೆನು ಜಗವ ಮೂರು ಗುಣದಿ
ಮೂರು ತಾಪವ ಗೆದ್ದು ಮೂರು ಮಾರ್ಗದಿ ಭಜಿಸೆ
ಪಾರುಮಾಡುವೆನೆಂದು ತೋರುವ ಸೊಬಗೊ [70]

ಎಂದು ಭವಸಾಗರ ಪಾರುಗಾಣಿಸುವ ಶ್ರೀನಿವಾಸನನ್ನು ಅಂಬಾಬಾಯಿ ಕೊಂಡಾಡಿದ್ದಾರೆ.

ವೆಂಕಟೇಶನ ವೈಭವಗಳನ್ನು ಹೊಗಳುವ ದಾಸ ಮಹಿಳೆಯರು ವೆಂಕಟೇಶನನ್ನು ವ್ಯಂಗ್ಯವಾಗಿ ಟೀಕಿಸಲೂ ಹಿಂಜರಿಯುವುದಿಲ್ಲ. ಬಳ್ಳಾರಿ ರಾಧಾಬಾಯಿಯವರು

ಅಪ್ಪಲು ಅತಿರಸ ಒಪ್ಪದಿಂದಲಿ ಮಾರಿ
ಕೊಪ್ಪರಿಗೆ ಹಣ ತುಂಬಿಸಿಕೊಂಡು ಸೇವೆ ಕೈಕೊಂಡ್ಯಾ ನಿನ್ನ
ಸರಿ ಯಾರಿಲ್ಲ ಕಂಡ್ಯಾ [71]

ಎಂದು ನಿಂದಿಸುತ್ತಲೇ ಸ್ತುತಿಸುತ್ತಾರೆ.

ಭೀಮವ್ವ ಬಿಡಿಕಾಸನ್ನೂ ಬಿಡದೆ ಹರಕೆ ತೀರಿಸಿಕೊಳ್ಳುವ ತಿಮ್ಮಪ್ಪನನ್ನು 'ಕಪ್ಪವ ಕಾಸು ಕವಡೆ ಮುಡುಪು ಹಾಕದೆ ತಾನೊಪ್ಪ" ಎನ್ನುತ್ತಾರೆ. ಶ್ರೀನಿವಾಸನನ್ನು ನಾನಾ ಪರಿ ಸ್ತುತಿಸುವ ದಾಸ ಮಹಿಳೆಯರು ಕಲಿಯುಗ ದೈವ ತಿಮ್ಮಪ್ಪನಿಗೆ ಶರಣಾಗಿದ್ದಾರೆ.

ತಿರುಪತಿಯ ನಂತರ ಮಂತ್ರಾಲಯದ ರಾಯರನ್ನು ಕುರಿತು ಎಲ್ಲ ದಾಸ ಮಹಿಳೆಯರೂ ಸ್ತೋತ್ರಗೈದಿದ್ದಾರೆ. ರಾಯರ ಮೇಲೆ ನೂರಾರು ಕೀರ್ತನೆಗಳನ್ನು ಹರಿದಾಸಿಯರು ರಚಿಸಿದ್ದಾರೆ.

ದ್ವಾರಕೆ, ಉಡುಪಿ, ಸೋದೆ, ಗಯೆ, ಕಂಚಿ, ಮೇಲುಕೋಟೆ, ಶೃಂಗೇರಿ, ಶ್ರೀರಂಗ, ಮಂಗಳಗಿರಿ, ಸಿಂಹಾಚಲ, ಶ್ರೀಶೈಲ, ಮುಳಬಾಗಿಲು, ಭದ್ರಾಚಲ, ಕೊಲ್ಲಾಪುರ, ಪಂಢರಪುರ, ಬದರಿ, ತಿರುಕೋಯಿಲೂರು, ತಲಕಾಡು, ಸಿತಗಿರಿ, ಶ್ವೇತಾಚಲ, ಯಾದವಗಿರಿ, ಮಾಗಡಿ, ಕದರುಮಂಡಲಿಗೆ, ಹನುಮಸಾಗರ, ದೇವರಾಯನದುರ್ಗ, ಗೋಕರ್ಣ, ಹಂಪಿ, ಕಾಳಹಸ್ತಿ, ಮಳಖೇಡ, ಮುಂತಾದ ಕ್ಷೇತ್ರಗಳ ವರ್ಣನೆಯನ್ನು ಹರಿದಾಸಿಯರು ಮಾಡಿದ್ದಾರೆ.

ಗಲಗಲಿ ಅವ್ವನವರಂತೂ ತಮ್ಮ ಶಿಷ್ಯರೊಂದಿಗೆ ನಿರಂತರ ಯಾತ್ರೆ ಕೈಗೊಳ್ಳುತ್ತಲೇ ಇದ್ದವರು. ಅವರು ಎರಡು ಕೀರ್ತನೆಗಳಲ್ಲಿ ರಾಮೇಶ್ವರ, ಕಂಚಿ, ಕುಂಭಕೋಣ, ಶ್ರೀರಂಗ, ತೋತಾದ್ರಿ, ಬೇಲೂರು. ಅಹೋಬಲ, ದರ್ಭಶಯನ, ಶ್ರೀಮುಷ್ಣ, ಕನ್ಯಾಕುಮಾರಿ, ಸುಬ್ರಹ್ಮಣ್ಯ, ಸ್ವಾದಿ, ಹಂಪಿ, ಗೋಕರ್ಣ, ಕೇದಾರ. ಗೋಕುಲ, ಬದರಿ. ಅಯೋಧ್ಯ, ಗಯೆ, ಕಾಶಿ, ಹರಿಹರ. ಇತ್ಯಾದಿ ಕ್ಷೇತ್ರಗಳನ್ನು ಸ್ತುತಿಸುತ್ತಾರೆ. ಆದರೂ ಅವ್ವನವರಿಗೆ "ಗಲಗಲಿ ನರಸಿಂಹ ಬಲು ದಯವಂತ" ಎಂಬ ನಂಬಿಕೆ.

ಗಲಗಲಿಯ ಅವ್ವ, ಅಂಬಾಬಾಯಿ, ಯದುಗಿರಿಯಮ್ಮ, ಕೋಲಾರ ಪದ್ಮಾಬಾಯಿ, ಭೀಮವ್ವ, ಸೀತಾಬಾಯಿ ರಾ. ಪುರೋಹಿತ ಮತ್ತು ಗಿರಿಯಮ್ಮನ ಕೃತಿಗಳಲ್ಲಿ ಹೆಚ್ಚಾಗಿ ತೀರ್ಥಕ್ಷೇತ್ರ ವರ್ಣನೆ ಕಂಡು ಬರುತ್ತದೆ. ಇತರ ದಾಸ ಮಹಿಳೆಯರಿಗೆ ಕ್ಷೇತ್ರದರ್ಶನ ಸುಲಭ ಸಾಧ್ಯವಿತ್ತೋ ಇಲ್ಲವೋ ತಿಳಿದಿಲ್ಲ.

ದಾಸ ಮಹಿಳೆಯರು ತಮ್ಮ ಸುತ್ತ ಮುತ್ತಲಿನ ಪ್ರಾಂತ್ಯಗಳ ದೇವತಾಕ್ಷೇತ್ರಗಳನ್ನೇ ಸ್ತುತಿಸಿರುವುದು ಕಂಡು ಬರುತ್ತದೆ. ಮಳೂರು, ಸಿತಗಿರಿ, ತಲಕಾಡು, ಸಂತೆಬಿದನೂರು, ಕೊಪ್ಪರ, ತೊರವಿ, ಬಿಳಿಕೆರೆ, ಸಿತಗಿರಿ, ಹರಿಹರ, ಯದುಗಿರಿ, ತಿಮ್ಮಲಾಪುರ, ದೇವರಾಯನದುರ್ಗ, ರಾಗಿಗುಡ್ಡ, ಮಾಗಡಿ, ಕದರು ಮಂಡಲಗಿ, ಚಳ್ಳಕೆರೆ, ಬೆಳಗಾವಿ, ರಾಣೆಬೆನ್ನೂರು, ಮುದ್ದೇನಹಳ್ಳಿಗಳಲ್ಲಿನ ಕ್ಷೇತ್ರ ಮೂರ್ತಿಗಳನ್ನು ದಾಸ ಮಹಿಳೆಯರು ಸ್ತುತಿಸಿದ್ದಾರೆ. ಹರಿದಾಸರಂತೆಯೇ ದಾಸ ಮಹಿಳೆಯರು ಸ್ಥಳೀಯ ಮಾರುತಿ ಕ್ಷೇತ್ರಗಳನ್ನು ಸಂದರ್ಶಿಸಿ ಸ್ತೋತ್ರ ಕಾಣಿಕೆ ಅರ್ಪಿಸಿದ್ದಾರೆ.

ಮಾರುತಿ ಕ್ಷೇತ್ರಗಳು	ಸ್ತುತಿಸಿದ ದಾಸ ಮಹಿಳೆಯರು
1. ಆದವಾನಿ ಮಂಗರಾಯ	ಹರಪನಹಳ್ಳಿ ಭೀಮವ್ವ
2. ಚಿಂತರಕೇಳಿ ಹನುಮಂತ	ಹರಪನಹಳ್ಳಿ ಭೀಮವ್ವ
3. ಬೊಮ್ಮಗಟ್ಟಿ ಹುಲಿಕುಂಟೇಶ	ಹರಪನಹಳ್ಳಿ ಭೀಮವ್ವ
4. ಮೊದಲಗಟ್ಟಿ ಹನುಮ	ಅಂಬಾಬಾಯಿ ಮತ್ತು ಭೀಮವ್ವ
5. ಹೂವಿನ ಹಡಗಲಿ ಹನುಮ	ಹರಪನಹಳ್ಳಿ ಭೀಮವ್ವ
6. ಹಂಪಿಯಂತ್ರೋದ್ಧಾರಕ	ಸರಸಾಬಾಯಿ, ಅಂಬಾಬಾಯಿ
7. ಕದರು ಮಂಡಲಗಿ ಹನುಮ	ಅಂಬಾಬಾಯಿ
8. ಚಳ್ಳಕೆರ ಹನುಮ	ಅಂಬಾಬಾಯಿ
9. ಬಳಗಾವಿ ಹನುಮ	ಅಂಬಾಬಾಯಿ
10. ಸಂತೆಬಿದನೂರು ಹನುಮ	ಭೀಮವ್ವ, ಸರಸಾಬಾಯಿ
11. ರಾಗಿಗುಡ್ಡದ ಹನುಮ	ಸೀತಾಬಾಯಿ ರಾ. ಪುರೋಹಿತ
12. ರಾಣೆಬೆನ್ನೂರ ಬಯಲಾಂಜನೇಯ	ಗಿರಿಯಮ್ಮ
13. ಮುದ್ದೇನಹಳ್ಳಿ ಹನುಮ	ಗಿರಿಯಮ್ಮ
14. ಅಡವಿರಾಯ	ಸೀತಾಬಾಯಿ ರಾ. ಪುರೋಹಿತ
15. ಹನುಮಸಾಗರದ ಹನುಮ	ಸೀತಾಬಾಯಿ ರಾ. ಪುರೋಹಿತ
16. ನಾರಾಯಣ ದೇವರಕೆರ ತಿಮ್ಮಪ್ಪ	ಭೀಮವ್ವ
17. ತಿಮ್ಮಲಾಪುರದ ತಿಮ್ಮಪ್ಪ	ಭೀಮವ್ವ
18. ಹೊಸೂರಿನ ರೇಣುಕಾಂಬಾ	ಭೀಮವ್ವ
19. ಹರಪನಹಳ್ಳಿಯ ಪ್ರಸನ್ನವೆಂಕಟೇಶ	ಭೀಮವ್ವ

ತಮ್ಮೆಲ್ಲ ಸುಖದುಃಖ, ಕಷ್ಟ–ಕಾರ್ಪಣ್ಯಗಳ ನಡುವೆಯೂ ನಾನಾ ಕ್ಷೇತ್ರಗಳನ್ನು ಸಂದರ್ಶಿಸಿ, ಅದು ಸಾಧ್ಯವಾಗದಿದ್ದಾಗ ತಮ್ಮ ಸ್ಥಳೀಯ ದೇವತಾ ಮೂರ್ತಿಗಳನ್ನೇ ಸ್ತುತಿಸಿ ಕೀರ್ತನೆಗಳನ್ನು ರಚಿಸಿದ್ದಾರೆ.

ವಿಶೇಷ ಕೀರ್ತನೆಗಳು:

ದಾಸ ಸಾಹಿತ್ಯದ ಯಾವ ಪ್ರಕಾರಕ್ಕೂ ಸೇರದ ಕೆಲವು ಕೃತಿಗಳನ್ನು ದಾಸ ಮಹಿಳೆಯರು ರಚಿಸಿದ್ದಾರೆ. ವರ್ಣನೆ, ನೀರು, ಹುಣಸೆಹಣ್ಣು, ತರಕಾರಿಗಳ ಮಹತ್ವ, ಒಗಟನಂತಹ ರಚನೆಗಳು ಈ ಪ್ರಕಾರದಲ್ಲಿ ಸೇರುತ್ತವೆ.

ಹರಪನಹಳ್ಳಿ ಭೀಮವ್ವನವರ 'ರಾಸಿ ಹಾಡು' ಒಗಟಿನ ರೂಪದಲ್ಲಿದೆ. ಸೂರ್ಯನ ಪಥವನ್ನು ಗುರುತಿಸುವ ಹನ್ನೆರಡು ರಾಶಿಗಳ ಹೆಸರುಗಳನ್ನು ಒಗಟಿನ ರೂಪದ ಹಾಡಿನಲ್ಲಿ ಹೇಳಿದ್ದಾರೆ. ಪ್ರತಿಯೊಂದು ರಾಸಿಯನ್ನು ಎರಡು ಸಾಲುಗಳಲ್ಲಿ ಹೇಳುತ್ತಾರೆ. ಒಟ್ಟ 14 ಸಾಲುಗಳ ಈ ಕೀರ್ತನೆಯನ್ನು ರಚಿಸಿ ಕೊನೆಗೆ

> ಈಸು ರಾಸಿಗಳು ಭೀಮೇಶಕೃಷ್ಣನ ದಯ–
> ದೀಕ್ಷಣದಲ್ಲೇ ತಿಳಿದು ಪೇಳಿ ಇದನೆಲ್ಲರು ಪೇಳಿರಿ [72]

ಎಂದು ಸೂಚಿಸುತ್ತಾರೆ.

ನಿಡಗುರುಕಿ ಜೀವೂಬಾಯಿಯವರು ಹುಣಸೇಹಣ್ಣಿನ ಹಾಡು, ನೀರು ಕುರಿತ ಹಾಡುಗಳನ್ನು ರಚಿಸಿದ್ದಾರೆ. ಹುಣಸೇ ಹಣ್ಣಿಗೆ ಸಮನಾದ ಹಣ್ಣಿಲ್ಲ. ಅದು ಎಲ್ಲರಿಗೂ ಬೇಕು ಎನ್ನುತ್ತಾರೆ.

> ಹುಣಸೇ ಹಣ್ಣಿಲ್ಲದೆ ಭಾಂಡಶುದ್ಧಿಗಳಿಲ್ಲ
> ಹುಣಸೇ ಹಣ್ಣಿಲ್ಲದೆ ಸ್ವಯಂಪಾಕ ರುಚಿಯು ಇಲ್ಲ
> ಹುಣಸೇ ಮರಕ್ಕಿಂತ ಗಟ್ಟಿ ಮರಗಳಿಲ್ಲ
> ಎಲ್ಲರಿಗೂ ಬೇಕಾದ ಹುಣಸೆಹಣ್ಣು [73]

ಇದೇ ಕೀರ್ತನೆಯಲ್ಲಿ ಉತ್ತತ್ತಿ, ಬಾಳೆಹಣ್ಣು, ಚಕ್ಕೋತ, ಅನಾನಸು, ಹಲಸು, ದ್ರಾಕ್ಷಿ, ದಾಳಿಂಬೆ, ಪನ್ನೇರಳೆ, ಕಿತ್ತಳೆ, ಸೀತಾಫಲ, ಅಂಜೂರ, ಮಾವು, ಮೂಸಂಬಿ, ಮಾದಳ, ಸೀಬೆ, ಜಂಬುನೇರಳೆ, ಹೇರಳೆ, ನಿಂಬೆ, ಕರಬೂಜ ಮುಂತಾದ ಹಣ್ಣುಗಳ ಪಟ್ಟಿಯನ್ನೇ ನೀಡುತ್ತಾರೆ. ಇಷ್ಟೆಲ್ಲಾ ಹಣ್ಣುಗಳಿದ್ದರೂ ಎಲ್ಲರಿಗೂ ಮುಖ್ಯವಾಗಿ ಬೇಕಾದ್ದು ಹುಣಸೆಹಣ್ಣು ಎಂದು ಅದರ ಮಹತ್ವ ತಿಳಿಸುತ್ತಾ "ಹರಿಯ ಅಪ್ಪಣೆಯಂತೆ ಹುಣಸೆಯ ಮರಹುಟ್ಟಿ" ಎಲ್ಲರಿಗೂ ಉಪಕರಿಸಿದೆ ಎನ್ನುತ್ತಾರೆ.

ಹೀಗೆಯೇ ನೀರಿನ ಮಹತ್ವವನ್ನು ತಿಳಿಸುವ ಒಂದು ಕೀರ್ತನೆಯೂ ಇದೆ. ನೀರಿನಿಂದಲೇ ಸರ್ವ ಫಲಗಳೂ ಲಭಿಸುವುದೆಂದು ಹೇಳುತ್ತಾರೆ.

ನೀರಿಲ್ಲದಲೆ ಯಾವ ಸಾಧನವೂ ನಡೆಯದು
ನೀರಿಲ್ಲದಲೆ ಯಾಗ ತಪಸ್ಸು ನಿಲ್ಲುವುದು
ನೀರಿಲ್ಲದಲೆ ಸ್ನಾನ ಆಚಾರ ಹೀನವು
ನೀರಿಲ್ಲದಲೆ ದೇವತಾರ್ಚನೆಯು ಇಲ್ಲವು [74]

ನೀರಿನ ಉಪಯುಕ್ತತೆಯನ್ನು, ಅದರ ಅಗತ್ಯವನ್ನು ಜೀವೂಬಾಯಿ ವರ್ಣಿಸುತ್ತಾ ಹೋಗುತ್ತಾರೆ. ಅವರ ಪ್ರಕಾರ ನೀರೆಂದರೆ ಬರಿ ಜಡವಾದ ನೀರಲ್ಲ. ಹರಿಯು ನೀರಿನಲ್ಲಿ ಎತ್ತಿದ ಅವತಾರಗಳ ಬಗ್ಗೆ ಹೇಳುತ್ತಾರೆ. ಶ್ರೀಹರಿ ನೀರಿನಲ್ಲಿ ಗಜದ ಶಾಪ ಕಳೆದಿದ್ದಾನೆ. ನೀರ ಮಧ್ಯದಲ್ಲಿ ದ್ವಾರಕಾಪುರ ರಚಿಸಿದ್ದಾನೆ. ಕಮಲಾಕ್ಷಿ ಹುಟ್ಟಿದ ಕಮಲ ಇರುವುದು ನೀರಿನಲ್ಲಿ. ಹಾಗೆಂದ ಮೇಲೆ ನೀರು ಸಾಮಾನ್ಯವಾದುದಲ್ಲ. ನೀರು-ನೀರೆ ಎಂಬ ಶಬ್ದಗಳನ್ನು ಈಕೆ ಚಮತ್ಕಾರಿಕವಾಗಿ ಬಳಸಿರುವ ರೀತಿ ಗಮನಾರ್ಹವಾದುದು.

ಗಲಗಲಿ ಅವ್ವನವರು ಶಕುನ ಕುರಿತ ಒಂದು ಕೃತಿಯನ್ನು ರಚಿಸಿದ್ದಾರೆ. ಶುಭ ಶಕುನಗಳು ಯಾವುವು ಎಂಬುದರ ಬಗ್ಗೆ ಹೇಳುತ್ತಾರೆ. ಗಿರಿಯಮ್ಮ 'ಪಟದ ಸಂಧಿ' ದೀರ್ಘ ಕೀರ್ತನೆಯಲ್ಲಿ ಶಕುನದ ಬಗ್ಗೆ ಹೇಳುತ್ತಾಳೆ. ಹರಪನಹಳ್ಳಿ ಭೀಮವ್ವ ಸುಧಾಮ ಚರಿತ್ರೆಯಲ್ಲಿ ಸುಧಾಮ ಕೃಷ್ಣನನ್ನು ಕಾಣಲು ಹೊರಟಾಗ ಎದುರಾದ ಶಕುನಗಳ ಬಗ್ಗೆ ತಿಳಿಸುತ್ತಾರೆ. ಪೂರ್ಣ ಪ್ರಮಾಣದ ಕೀರ್ತನೆಯನ್ನು ಅವ್ವ ಮಾತ್ರ ರಚಿಸಿದ್ದಾರೆ. ಸುಭದ್ರೆ ಮೊದಲಾದವರು ಮುಯ್ಯ ಒಯ್ಯಲು ಸಿದ್ಧರಾಗಿ ಹೊರಟಾಗ ಕಂಡ ಶುಭ ಶಕುನಗಳ ಬಗ್ಗೆ ವಿವರಿಸುತ್ತಾರೆ.

ಹಾಲು ಮೊಸರಿನ ಕುಂಭ ಮೇಲಾದ ಘೃತಬೆಣ್ಣಿ
ಸಾಲುಸಾಲಾಗಿ ಎದುರಾಗಿ ಇಂದೀವರಾಕ್ಷಿ
ಸಾಲುಸಾಲಾಗಿ ಎದುರಾಗಿ ರಂಗನ ಕಾಲಿಗೆ
ಶಿರವ ನೀಡುವಂತೆ ಇಂದೀವರಾಕ್ಷಿ [75]

ಹಂಸ, ಗಿಳಿವಿಂಡು, ಮುತ್ತಿನ ಹೇರು, ನೇರಳೆಹಣ್ಣು, ಶ್ರೀಗಂಧ, ಬಾಳೆಯ ಹಣ್ಣು, ಇವರಿಗೆ ಇದುರಾಗಿ ಶುಭ ಸೂಚನೆಗಳನ್ನು ನೀಡುತ್ತವೆ. ಶಕುನ ನಂಬಿಕೆಗಳು ಮಾನವ ಸಹಜವಾಗಿದ್ದು ಅದು ದಾಸ ಮಹಿಳೆಯರ ಕೃತಿಗಳಲ್ಲಿಯೂ ಮೂಡಿ ಬಂದಿದೆ.

ಗಿರಿಯಮ್ಮನ ಮಳೆ ಹಾಡಿನಲ್ಲಿ ಬರದ ಭೀಕರತೆ ಕಂಡು ಬರುತ್ತದೆ. ಮಳೆಯಿಲ್ಲದೆ ಲೋಕ ತಲ್ಲಣಿಸುತ್ತಿದ್ದಾಗ ಗಿರಿಯಮ್ಮ ಹಾಡು ರಚಿಸಿ ಹಾಡಿ ಮಳೆ ತರಿಸಿದಳೆಂಬ ಐತಿಹ್ಯವಿದೆ. ಗಿರಿಯಮ್ಮನ ಕಾಲದಲ್ಲಿ ಬರದ ತೀವ್ರತೆಯಿದ್ದು ಅದನ್ನು ನಿವಾರಿಸಿದ ಗಿರಿಯಮ್ಮನ ಮಹಿಮೆಯನ್ನು ಐತಿಹಾಸಿಕ ಸತ್ಯವನ್ನೂ

ಇದು ತಿಳಿಸುತ್ತದೆ. ಪ್ರಾಣಿ ಪಕ್ಷಿಗಳಾದಿಯಾಗಿ ಎಲ್ಲ ಜೀವಿಗಳು ಹಸಿದು, ಬಾಯಾರಿ, ತಲ್ಲಣಿಸಿವೆಯೆಂದು ಹೇಳುತ್ತಾ

ಧಗೆಯಾಗಿ ದ್ರವಗುಂದಿ ಇರುವ ಬಾವಿಯ ನೀರ
ಮೊಗೆ ಮೊಗೆದು ಪಾತ್ರೆಯಲಿ ನಾರಿಯರು
ಹಗಲೆಲ್ಲ ತರುತಿಹರು ಯೋಚನೆಯ ಮಾಡುತ್ತ
ಬೇಗದಿಂದಲಿ ತರಿಸೊ ವೃಷ್ಟಿಯನು ಹರಿಯೆ [76]

ಜ್ಯೇಷ್ಠ, ಆಷಾಢ, ಶ್ರಾವಣ ಸಂದು ಭಾದ್ರಪದ ಮಾಸ ಬಂದರೂ ಬಾರದ ಮಳೆಯನ್ನು ತರಿಸಲು ಗಿರಿಯಮ್ಮ ಹೆಳವನಕಟ್ಟೆ ರಂಗನಲ್ಲಿ ಪ್ರಾರ್ಥಿಸುತ್ತಾಳೆ.

ಉಡುಪಿಯ ಕೃಷ್ಣನ ಮೋಹಿನಿ ರೂಪವನ್ನು ಹರಪನಹಳ್ಳಿ ಭೀಮವ್ವ ಒಂದು ಹಾಡಿನಲ್ಲಿ ಹೊಗಳಿದ್ದಾರೆ. ಒಮ್ಮೆ ಭೀಮವ್ವ ಉಡುಪಿಗೆ ಹೋದಾಗ ಶುಕ್ರವಾರಗಳಲ್ಲಿ ಕೃಷ್ಣನಿಗೆ ಮಾಡುವ ಮೋಹಿನಿ ಅಲಂಕಾರ ನೋಡಲು ಸಾಧ್ಯವಾಗಿರಲಿಲ್ಲ. ಆ ರಾತ್ರಿ ಸ್ವಪ್ನದಲ್ಲಿ ಒಬ್ಬ ಚಿಕ್ಕ ಹುಡುಗಿ ಸರ್ವಾಲಂಕಾರ ಭೂಷಿತೆಯಾಗಿ ಬಂದು ದರ್ಶನ ನೀಡಿದಳು. ಮರು ದಿನ ಕೃಷ್ಣನ ದೇವಾಲಯಕ್ಕೆ ಹೋಗಿ ನೋಡಲು ಅಲಂಕಾರ ಹಾಗೆಯೇ ಇದ್ದಿತು. ಆಗ ಈ ಹಾಡು ಮೂಡಿ ಬಂದಿತೆಂಬ ಪ್ರತೀತಿಯಿದೆ. ಕೃಷ್ಣನ ಮೋಹಿನಿ ರೂಪವನ್ನು, ಆ ಸಂದರ್ಭದಲ್ಲಿ ಧರಿಸಿದ ಸರ್ವಾಭರಣಗಳನ್ನು ಭೀಮವ್ವ ವರ್ಣಿಸುತ್ತಾರೆ.

ಅಷ್ಟಯತಿಗಳಿಂದಲಿ ಪೂಜೆಯಗೊಂಬೊ
ಲಕ್ಷ್ಮಿಯಪತಿಯು ಸ್ತ್ರೀರೂಪವ ಧರಿಸಿರೆ
ದೃಷ್ಟಿಂದೆ ನೋಡದಿನ್ನಿರುವೋರೆ ಭೀಮೇಶ–
ಕೃಷ್ಣ ನಿನ್ನ ಮನದಲ್ಲಿಟ್ಟು ಸ್ತುತಿಸುವೆನು [77]

ಎಂದು ಕೃಷ್ಣನ ಸ್ತ್ರೀರೂಪವನ್ನು ಹಾಡಿ ಹೊಗಳುತ್ತಾರೆ.

ರಾಮಾಯಣ, ಭಾರತ, ಭಾಗವತ, ಪುರಾಣಗಳೇ ಅಲ್ಲದೆ, ತತ್ವವಿಚಾರ, ತಾರತಮ್ಯ, ಲೋಕನೀತಿ, ಆತ್ಮನಿವೇದನೆ ಮತ್ತು ವಿಶೇಷ ಕೀರ್ತನೆಗಳು ದಾಸ ಮಹಿಳೆಯರ ಕೃತಿಗಳಲ್ಲಿ ಸೇರಿವೆ. ಹಲವು ರೀತಿಯ ವಿಷಯಗಳನ್ನು ವಸ್ತುವಾಗಿಸಿಕೊಂಡು ಕೀರ್ತನೆಗಳನ್ನು ರಚಿಸುವಾಗಲೂ ಭಕ್ತಿಗೆ ಲೋಪವಾಗದಂತೆ ಚಿಂತಿಸಿರುವುದು ಗಮನಾರ್ಹ.

ದಾಸ ಸಾಹಿತ್ಯದ ಮೂಲ ಸ್ರೋತ ಭಕ್ತಿ ಮತ್ತು ಹರಿಪಾರಮ್ಯವೇ ಆದರೂ ದಾಸರುಗಳು ತಮ್ಮ ಸಮಕಾಲೀನ ಸಮಾಜದ ಲೋಪದೋಷಗಳನ್ನು ಗುರುತಿಸಿ, ತಿದ್ದುವ ಕಾರ್ಯವನ್ನೂ ಮಾಡಿದ್ದಾರೆ. ಸಂಗೀತದ ಮೂಲಕ ನೈತಿಕ ಮೌಲ್ಯಗಳನ್ನು, ಮಾನವೀಯ ಗುಣಗಳು, ಆದರ್ಶಗಳನ್ನು ಜನರಲ್ಲಿ ತುಂಬಲು ಯತ್ನಿಸಿದ್ದಾರೆ. ಜನ ಸಮುದಾಯದ ನಡುವೆ ಬದುಕಿದ ದಾಸರುಗಳು ತಮ್ಮ ಕೃತಿಗಳಲ್ಲಿ ನೀತಿ ಬೋಧನೆ ಮಾಡಿ ಉತ್ತಮ ಸಾಮಾಜಿಕ ವಾತಾವರಣ ನಿರ್ಮಿಸಲು ಶ್ರಮಿಸಿದ್ದಾರೆ. ನೊಂದವರಿಗೆ ಸಾಂತ್ವನ ಹೇಳುವ, ದಾರಿ ತಪ್ಪಿದವರಿಗೆ ಸರಿದಾರಿ ತೋರುವ ದಾಸರ ನೀತಿ ವಾಕ್ಯಗಳು ಸಾರ್ವಕಾಲಿಕ ಸತ್ಯಗಳಾಗಿವೆ.

ಅಡಿ ಟಿಪ್ಪಣಿಗಳು

ಲೇಖಕರ ಹೆಸರು	ಕೃತಿ ಹೆಸರು	ಪುಟ ಸಂಖ್ಯೆ
1. ಮುರಗೋಡು ಕೃಷ್ಣದಾಸರು	ಭಜನ ಚಂದ್ರಿಕಾ	ಪುಟ–3
2. ಹಣಮಂತ ತಾಸಗಾಂವಕರ	ಗಲಗಲಿ ಅವ್ವನವರ ಕೀರ್ತನೆಗಳು, ಸಂ–7	ಪುಟ–11
3. ಎಚ್.ಎಸ್. ಪದ್ಮಾಮೂರ್ತಿ	ಸರಸಾಬಾಯಿಯವರ ಕೀರ್ತನೆಗಳು, ಸಂ–18, ಭಾಗ–4	ಪುಟ–289
4. ಡಾ॥ ಟಿ.ಎನ್. ನಾಗರತ್ನ, ಡಾ॥ ಅಕ್ಕಮಹಾದೇವಿ	ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳು, ಸಂ–19	ಪುಟ–15
5. ಡಾ॥ ಅನಂತಪದ್ಮನಾಭರಾವ್	ಅಂಬಾಬಾಯಿಯವರ ಕೀರ್ತನೆಗಳು, ಸಂ–18, ಭಾಗ–3	ಪುಟ–35
6. ಲೀಲಾವತಿ ಎಸ್. ರಾವ್	ನಿಡಗುರುಕಿ ಜೀವೂಬಾಯಿಯವರ ಕೀರ್ತನೆಗಳು, ಸಂ–18, ಭಾಗ–2	ಪುಟ–31
7. ಅದೇ		ಪುಟ–151
8. ಡಾ॥ ಟಿ.ಎನ್. ನಾಗರತ್ನ	ಹರಿದಾಸರ ಭಕ್ತಿ ಸ್ವರೂಪ	ಪುಟ–32
9. ಡಾ॥ ಅನಂತ ಪದ್ಮನಾಭರಾವ್	ಸಮಗ್ರದಾಸ ಸಾಹಿತ್ಯ, ಅಂಬಾಬಾಯಿಯವರ ಕೀರ್ತನೆಗಳು, ಸಂ–18, ಭಾಗ–3	ಪುಟ–116
10. ಅದೇ		ಪುಟ–299
11. ಡಾ॥ ಟಿ.ಎನ್. ನಾಗರತ್ನ	ಹರಿದಾಸರ ಭಕ್ತಿ ಸ್ವರೂಪ	ಪುಟ–33
12. ಮೀನಾರಾವ್ ನಳಿನಿ ವೆಂಕಟೇಶ್	ಸಮಗ್ರ ದಾಸ ಸಾಹಿತ್ಯ, ಸರಸ್ವತಿಬಾಯಿಯವರ ಕೀರ್ತನೆಗಳು, ಸಂ–18, ಭಾಗ–4	ಪುಟ–602
13. ಡಾ॥ ನಾ. ಗೀತಾಚಾರ್ಯ	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4, ಯದುಗಿರಿಯಮ್ಮನವರ ಕೀರ್ತನೆಗಳು	ಪುಟ–43
14. ಹಣಮಂತ ತಾಸಗಾಂವಕರ್	ಸಮಗ್ರ ದಾಸ ಸಾಹಿತ್ಯ, ಗಲಗಲಿ ಅವ್ವನವರ ಕೀರ್ತನೆಗಳು, ಸಂ–9	ಪುಟ–174
15. ಡಾ॥ ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಅಂಬಾಬಾಯಿಯವರ ಕೀರ್ತನೆಗಳು, ಸಂ–18, ಭಾಗ–3	ಪುಟ–160
16. ಅದೇ		ಪುಟ–169
17. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ನಿಡಗುರುಕಿ ಜೀವೂಬಾಯಿಯವರ ಕೀರ್ತನೆಗಳು, ಸಂ–18, ಭಾಗ–2	ಪುಟ–96

18. ಮೀನಾರಾವ್ ನಳಿನಿ ವೆಂಕಟೇಶ್	ಸಮಗ್ರ ದಾಸ ಸಾಹಿತ್ಯ, ಸರಸ್ವತಿಬಾಯಿಯವರ ಕೀರ್ತನೆಗಳು, ಸಂ-18, ಭಾಗ-4	ಪುಟ-608
19. ಗೋದಾವರಿಬಾಯಿ ಕುಲಕರ್ಣಿ	ಭಕ್ತಿ ಗೀತೆಗಳು	ಪುಟ-32
20. ಡಾ॥ ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಅಂಬಾಬಾಯಿಯವರ ಕೀರ್ತನೆಗಳು, ಸಂ-18, ಭಾಗ-3	ಪುಟ-172
21. ಅದೇ		ಪುಟ-172
22. ಮೀನಾರಾವ್ ನಳಿನಿ ವೆಂಕಟೇಶ್	ಸಮಗ್ರ ದಾಸ ಸಾಹಿತ್ಯ, ಸರಸ್ವತಿಬಾಯಿಯವರ ಕೀರ್ತನೆಗಳು, ಸಂ-18, ಭಾಗ-4	ಪುಟ-598
23. ಅದೇ		ಪುಟ-599
24. ಡಾ॥ ಅನಂತಪದ್ಮನಾಭರಾವ್	19ನೇ ಶತಮಾನದ ಹರಿದಾಸ ಸಾಹಿತ್ಯ	ಪುಟ-60
25. ಡಾ॥ ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಅಂಬಾಬಾಯಿಯವರ ಕೀರ್ತನೆಗಳು, ಸಂ-18, ಭಾಗ-3	ಪುಟ-209
26. ಕೋಲಾರ ಪದ್ಮಾಬಾಯಿ	ಸುಜ್ಞಾನಪ್ರಸಾರ ಸುಮಾವಳಿ ಸೌರಭ, ಭಾಗ-4	ಪುಟ-28
27. ಡಾ॥ ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಅಂಬಾಬಾಯಿಯವರ ಕೀರ್ತನೆಗಳು, ಸಂ-18, ಭಾಗ-3	ಪುಟ-204
28. ಮಂಜುಳಾ ಸುಬ್ಬರಾವ್	ತಾರತಮ್ಯ ಭಜನ ಮಾಲ	ಪುಟ-35
29. ಡಾ॥ ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಅಂಬಾಬಾಯಿಯವರ ಕೀರ್ತನೆಗಳು, ಸಂ-18, ಭಾಗ-3	ಪುಟ-250
30. ಕೋಲಾರ ಪದ್ಮಾಬಾಯಿ	ಸುಜ್ಞಾನ ಪ್ರಸಾರ ಸುಮಾವಳಿ ಸೌರಭ, ಭಾಗ-1	ಪುಟ-100
31. ಪಿ.ವಿ. ಕೃಷ್ಣಾಬಾಯಿ	ಅಪ್ರಕಟಿತ ಹಸ್ತಪ್ರತಿ	
32. ಡಾ॥ ಅನಂತ ಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಅಂಬಾಬಾಯಿಯವರ ಕೀರ್ತನೆಗಳು, ಸಂ-18, ಭಾಗ-3	ಪುಟ-241
33. ಅದೇ		ಪುಟ-228
34. ಸುಶೀಲ ಕಾಂತರಾವ್	ವಿಜಯಸಂಪದ	ಪುಟ
35. ಡಾ॥ ವಿಜಯಲಕ್ಷ್ಮಿ ರಾಘವೇಂದ್ರಾಚಾರ್ಯ	ಮಂಗಳಾಂಗ ಹರಿವಿಠಲಭಜನಾಮೃತ	ಪುಟ-11

36. ಡಾ॥ ಕೆ. ಗೋಕುಲನಾಥ್	ಹರಿದಾಸರ ನಿಂದಾಸ್ತುತಿಗಳು	ಮುನ್ನುಡಿ–II
37. ಅದೇ		ಪುಟ–7
38. ಹಣಮಂತ ತಾಸಗಾಂವಕರ	ಸಮಗ್ರ ದಾಸ ಸಾಹಿತ್ಯ, ಗಲಗಲಿಅವ್ವನವರ ಕೀರ್ತನೆಗಳು, ಸಂ–7	ಪುಟ–117
39. ಅದೇ		ಪುಟ–124
40. ಅದೇ		ಪುಟ–115
41. ಅದೇ		ಪುಟ–119
42. ಡಾ॥ ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಅಂಬಾಬಾಯಿಯವರ ಕೀರ್ತನೆಗಳು, ಸಂ–18, ಭಾಗ–3	ಪುಟ–86
43. ಅದೇ		ಪುಟ–100
44. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಹೆಳವನಕಟ್ಟೆ ಗಿರಿಯಮ್ಮನವರ ಕೀರ್ತನೆಗಳು, ಸಂ–18, ಭಾಗ–1	ಪುಟ–12
45. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ನಿಡಗುರುಕಿ ಜೀವೂಬಾಯಿಯವರ ಕೀರ್ತನೆಗಳು, ಸಂ–18, ಭಾಗ–2	ಪುಟ–96
46. ಡಾ॥ ಅನಂತಪದ್ಮನಾಭರಾವ್	19ನೇ ಶತಮಾನದ ಹರಿದಾಸ ಸಾಹಿತ್ಯ	ಪುಟ–71
47. ಪವನಕುಮಾರ್ ಜಿ.	ಹೂವ ಕೊಡೆ ತಾಯೆ	ಪುಟ–40
48. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಹೆಳವನಕಟ್ಟೆ ಗಿರಿಯಮ್ಮನವರ ಕೀರ್ತನೆಗಳು, ಸಂ–18, ಭಾಗ–1	ಪುಟ–15
49. ಡಾ॥ ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಅಂಬಾಬಾಯಿಯವರ ಕೀರ್ತನೆಗಳು, ಸಂ–18, ಭಾಗ–3	ಪುಟ–94
50. ಹಣಮಂತ ತಾಸಗಾಂವಕರ	ಸಮಗ್ರ ದಾಸ ಸಾಹಿತ್ಯ, ಗಲಗಲಿಅವ್ವನವರ ಕೀರ್ತನೆಗಳು, ಸಂ–7	ಪುಟ–18
51. ಅದೇ		ಪುಟ–20
52. ಡಾ॥ ಟಿ.ಎನ್. ನಾಗರತ್ನ, ಡಾ॥ ಅಕ್ಕಮಹಾದೇವಿ	ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳು, ಸಂ–19	ಪುಟ–78
53. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಹೆಳವನಕಟ್ಟೆ ಗಿರಿಯಮ್ಮನವರ ಕೀರ್ತನೆಗಳು, ಸಂ–18, ಭಾಗ–1	ಪುಟ–31
54. ಡಾ॥ ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ,	ಪುಟ–178

	ಅಂಬಾಬಾಯಿಯವರ ಕೀರ್ತನೆಗಳು, ಸಂ–18, ಭಾಗ–3	
55. ಅದೇ		ಪುಟ–175
56. ಅದೇ		ಪುಟ–177
57. ಹಣಮಂತ ತಾಸಗಾಂವಕರ	ಸಮಗ್ರ ದಾಸ ಸಾಹಿತ್ಯ, ಗಲಗಲಿಅವ್ವನವರ ಕೀರ್ತನೆಗಳು, ಸಂ–7	ಪುಟ–25
58. ಡಾ॥ ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಅಂಬಾಬಾಯಿಯವರ ಕೀರ್ತನೆಗಳು, ಸಂ–18, ಭಾಗ–3	ಪುಟ–290
59. ಕೋಲಾರ ಪದ್ಮಾಬಾಯಿ	ಸುಜ್ಞಾನ ಪ್ರಸಾರ ಸುಮಾವಳಿ ಸೌರಭ, ಸಂ–1	ಪುಟ–268
60. ಡಾ॥ ಅನಂತಪದ್ಮನಾಭರಾವ್	19ನೇ ಶತಮಾನದ ಹರಿದಾಸ ಸಾಹಿತ್ಯ	ಪುಟ–31
61. ಅದೇ		ಪುಟ–32
62. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಹೆಳವನಕಟ್ಟೆ ಗಿರಿಯಮ್ಮನವರ ಕೀರ್ತನೆಗಳು, ಸಂ–18, ಭಾಗ–1	ಪುಟ–41
63. ಡಾ॥ ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಅಂಬಾಬಾಯಿಯವರ ಕೀರ್ತನೆಗಳು, ಸಂ–18, ಭಾಗ–3	ಪುಟ–271
64. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ನಿಡಗುರುಕಿ ಜೀವೂಬಾಯಿಯವರ ಕೀರ್ತನೆಗಳು, ಸಂ–18, ಭಾಗ–3	ಪುಟ–124
65. ಡಾ॥ ನಾ. ಗೀತಾಚಾರ್ಯ	ಸಮಗ್ರ ದಾಸ ಸಾಹಿತ್ಯ, ಯದುಗಿರಿಯಮ್ಮನವರ ಕೀರ್ತನೆಗಳು, ಸಂ–18, ಭಾಗ–4	ಪುಟ–25
66. ಕೋಲಾರ ಪದ್ಮಾಬಾಯಿ	ಸುಜ್ಞಾನ ಪ್ರಸಾರ ಸುಮಾವಳಿ ಸೌರಭ, ಭಾಗ–1	ಪುಟ–79
67. ಡಾ॥ ಕೆ. ಗೋಕುಲನಾಥ್	ಶ್ರೀವಿಜಯದಾಸರು	ಪುಟ–160
68. ಡಾ॥ ಟಿ.ಎನ್. ನಾಗರತ್ನ, ಡಾ॥ ಅಕ್ಕಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳು, ಸಂ–19	ಪುಟ–237
69. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳು, ಸಂ–18, ಭಾಗ–3	ಪುಟ–219

70. ಡಾ॥ ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಅಂಬಾಬಾಯಿಯವರ ಕೀರ್ತನೆಗಳು, ಸಂ–18, ಭಾಗ–3	ಪುಟ–85
71. ರುಕ್ಮಿಣಿ ಗಿರಿಮಾಜಿ	ಸಮಗ್ರ ದಾಸ ಸಾಹಿತ್ಯ, ರಾಧಾಬಾಯಿಯವರ ಕೀರ್ತನೆಗಳು, ಸಂ–18, ಭಾಗ–4	ಪುಟ–449
72. ಡಾ॥ ಟಿ.ಎನ್. ನಾಗರತ್ನ	ಸಮಗ್ರ ದಾಸ ಸಾಹಿತ್ಯ, ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳು, ಸಂ–19	ಪುಟ–237
73. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ನಿಡಗುರುಕಿ ಜೀವೂಬಾಯಿಯವರ ಕೀರ್ತನೆಗಳು, ಸಂ–18, ಭಾಗ–3	ಪುಟ–213
74. ಅದೇ		ಪುಟ–221
75. ಹಣಮಂತ ತಾಸಗಾಂವಕರ	ಸಮಗ್ರ ದಾಸ ಸಾಹಿತ್ಯ, ಗಲಗಲಿಅವ್ವನವರ ಕೀರ್ತನೆಗಳು, ಸಂ–7	ಪುಟ–77
76. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಹೆಳವನಕಟ್ಟೆ ಗಿರಿಯಮ್ಮನವರ ಕೀರ್ತನೆಗಳು, ಸಂ–18, ಭಾಗ–1	ಪುಟ–55
77. ಡಾ॥ ಟಿ.ಎನ್. ನಾಗರತ್ನ	ಸಮಗ್ರ ದಾಸ ಸಾಹಿತ್ಯ, ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳು, ಸಂ–19	ಪುಟ–275

ಅಧ್ಯಾಯ–5

ದೀರ್ಘ ಕೃತಿಗಳು (ಖಂಡ ಕಾವ್ಯಗಳು)

ಕಥೆಯನ್ನು ಹೇಳುವುದು ಮತ್ತು ಅದನ್ನು ಕೇಳುವುದು ಎಲ್ಲರಿಗೂ ಪ್ರಿಯವಾದುದು. ಕತೆಯು ಗದ್ಯ ರೂಪದಲ್ಲಿಯೂ ಇರಬಹುದು, ಪದ್ಯ ರೂಪದಲ್ಲೂ ಇರಬಹುದು. "ಕಾವ್ಯ ಆರಂಭವಾದದ್ದೇ ಕಥಾ ರೂಪದಲ್ಲಿ. ನಮ್ಮ ಆರಂಭಿಕ ಕಾವ್ಯಗಳೆಲ್ಲ ಹಿರಿಯ ಕಥಾ ಸಾಗರಗಳೇ. ಕಾವ್ಯ ಕ್ರಮೇಣ ಟಿಸಿಲೊಡೆಯುತ್ತ ಬೇರೆ ಬೇರೆ ಪಾತ್ರಗಳಲ್ಲಿಯೂ ಹರಿದು ಬಂತು"[1] ಕತೆಯನ್ನು ಗದ್ಯದಲ್ಲಿ ಹೇಳುವುದಕ್ಕಿಂತ ಪದ್ಯದಲ್ಲಿ ಹೇಳಿದರೆ ಹೆಚ್ಚು ಪರಿಣಾಮಕಾರಿ. ಗದ್ಯಕ್ಕಿಂತಲೂ ಲಯಬದ್ಧವಾದ ಪದ್ಯವನ್ನು ನೆನಪಿನಲ್ಲಿಟ್ಟುಕೊಳ್ಳುವುದು ಸುಲಭ. "ಅಂತೆಯೇ ರಾಮಾಯಣ, ಮಹಾಭಾರತ, ಒಡಿಸ್ಸಿ, ಇಲಿಯಡ್ ಮೊದಲಾದ ಕತೆಗಳು ಪದ್ಯ ರೂಪದಲ್ಲಿ ಸಿದ್ಧವಾದವು."[2] ಹೀಗೆ ತಯಾರಾದ ಮಹಾಕಾವ್ಯಗಳ ಸಾರ ಸಂಗ್ರಹ ರೂಪವೇ ಖಂಡಕಾವ್ಯಗಳು. ಇವು ಒಂದು ರೀತಿಯ ಕಥನ ಕವನಗಳೇ ಆಗಿವೆ. ಕಥನ ಕಾವ್ಯಗಳು ಅಥವಾ ಖಂಡ ಕಾವ್ಯಗಳು ಪದ್ಯ ರೂಪದಲ್ಲಿದ್ದು ಸರಳವಾಗಿ, ನೇರವಾಗಿ ಕಿರುಗಾತ್ರದಲ್ಲಿರುತ್ತವೆ. ಮನುಷ್ಯನ ಬದುಕಿನ ಹಲವು ನೆಲೆಗಳಲ್ಲಿ ಕತೆಗಳ ಒಡನಾಟವಿದೆ. ಪೂಜೆ, ವ್ರತ, ಆಚರಣೆ, ಮಹಾಕಾವ್ಯಗಳ ಕೆಲವು ಭಾಗಗಳು, ಪಾತ್ರಗಳು ಕಥನ ಕಾವ್ಯಗಳಾಗಿವೆ.

ಹರಿದಾಸರು ರಾಮಾಯಣ, ಮಹಾಭಾರತ, ಭಾಗವತ, ಪುರಾಣಗಳನ್ನು ಆಧರಿಸಿ ಖಂಡ ಕಾವ್ಯಗಳನ್ನು ರಚಿಸಿದ್ದಾರೆ. ದಾಸ ಮಹಿಳೆಯರೂ ಖಂಡ ಕಾವ್ಯಗಳ ರಚನೆಯಲ್ಲಿ ಹಿಂದೆ ಬಿದ್ದಿಲ್ಲ. ಪುರಾಣಾದಿಗಳಲ್ಲಿ ಬರುವ ಪರಮಾತ್ಮನ ಅವತಾರ, ಮಹಿಮೆಗಳು, ಹರಿಭಕ್ತರ ಚರಿತ್ರೆ, ಭಕ್ತಿಗೆ ಸಾಧಕ–ಬಾಧಕವಾದ ನಿದರ್ಶನಗಳನ್ನು ಖಂಡ ಕಾವ್ಯಗಳಲ್ಲಿ ತಿಳಿಸಿದ್ದಾರೆ. ಈ ಮಹಿಳೆಯರು ವೇದ ಶಾಸ್ತ್ರಗಳನ್ನು ಓದಿಕೊಂಡವರಲ್ಲ. ಸಂಸ್ಕೃತದಲ್ಲಿನ ಕಾವ್ಯಗಳ ಪರಿಚಯವೂ ಇರಲಿಲ್ಲ. ಸಾಮಾನ್ಯ ಓದಿಗೂ ಅವಕಾಶವಿರಲಿಲ್ಲ. ಆದರೂ ತಾವು ಅಲ್ಲಿ ಇಲ್ಲಿ ಕೇಳಿದ ಪುರಾಣ, ಪ್ರವಚನಗಳ ಆಧಾರದ ಮೇಲೆ ದೀರ್ಘ ಕೃತಿಗಳನ್ನು ರಚಿಸಿದ್ದಾರೆ. ಗಲಗಲಿ ಅವ್ವನವರು ಮತ್ತು ಅಂಬಾಬಾಯಿಯವರಂತಹ ಕೆಲವರನ್ನು ಬಿಟ್ಟರೆ ಇನ್ನಾರಿಗೂ ಅಂತಹ ಶಾಸ್ತ್ರೀಯ ಹಿನ್ನೆಲೆ ಇರಲಿಲ್ಲ. ಅಂತಹುದರಲ್ಲಿ ಈ ಮಹಿಳೆಯರು ದೀರ್ಘ ಕೃತಿಗಳನ್ನು ರಚಿಸಿರುವುದು ಆ ವಿಷಯಗಳಲ್ಲಿನ ಅವರ ಪ್ರೌಢಿಮೆಗೆ ನಿರ್ದಶನವಾಗಿದೆ. ಮಹಿಳಾ ಹರಿದಾಸರ ಖಂಡ ಕಾವ್ಯಗಳನ್ನು ಐದು ಭಾಗಗಳಲ್ಲಿ ಅಧ್ಯಯನ ನಡೆಸಬಹುದಾಗಿದೆ.

1. ರಾಮಾಯಣ ಪ್ರಸಂಗಗಳು
2. ಭಾರತದ ಕತೆಗಳು
3. ಭಾಗವತ-ಕೃಷ್ಣಲೀಲೆ
4. ಜಾನಪದ ಕಥನಗಳು
5. ಪೌರಾಣಿಕ ವ್ರತಕಥೆಗಳು

ರಾಮಾಯಣ ಪ್ರಸಂಗಗಳು:

ರಾಮಾಯಣ, ಮಹಾಭಾರತ, ಭಾಗವತ ಕತೆಗಳು ಎಲ್ಲರಿಗೂ ಪರಿಚಿತ. ಈ ಮೇರು ಕೃತಿಗಳನ್ನು ಆಮೂಲಾಗ್ರವಾಗಿಯಲ್ಲದಿದ್ದರೂ ಸ್ಥೂಲವಾಗಿ ಎಲ್ಲರೂ ಅರಿತಿರುತ್ತಾರೆ. ಹರಿದಾಸರಿಗೆ ಈ ಕೃತಿಗಳ ಘನತೆ, ಗೌರವ ಚೆನ್ನಾಗಿ ತಿಳಿದಿತ್ತು. ವಿಷ್ಣು ಭಕ್ತಿಯ ಆಗರಗಳಾಗಿರುವ ಈ ಕೃತಿಗಳನ್ನು ಆಧರಿಸಿ ಹರಿದಾಸರು, ದಾಸ ಮಹಿಳೆಯರು ತಮ್ಮ ಕೃತಿಗಳನ್ನು ರಚಿಸಿದ್ದಾರೆ. ರಾಮಾಯಣದ ಹನುಮನ ಸ್ವಾಮಿ ನಿಷ್ಠೆ, ಭಾರತದ ಭೀಮನ ಪರಾಕ್ರಮ, ಭಾಗವತದಲ್ಲಿನ ವಿಷ್ಣುವಿನ ಲೀಲಾವಿನೋದಗಳು ಮುಂತಾದವುಗಳನ್ನು ಮಹಿಳಾ ಹರಿದಾಸರು ತಮ್ಮ ಕೃತಿಗಳಲ್ಲಿ ಬಳಸಿದ್ದಾರೆ. ಸಾಂಪ್ರದಾಯಿಕ ಕಥಾನಕಕ್ಕೆ ಭಿನ್ನವಾದ ಪ್ರಸಂಗಗಳನ್ನು ದಾಸ ಮಹಿಳೆಯರ ಕೃತಿಗಳಲ್ಲಿ ಕಾಣಬಹುದು.

ರಾಮಾಯಣವು ಶ್ರೀರಾಮನ ಕಥಾನಕ. ಆರು ಕಾಂಡಗಳಲ್ಲಿ ಈ ಕಾವ್ಯ ಹರಿದು ಬಂದಿದೆ. ಬಾಲಕಾಂಡದಿಂದ, ಯುದ್ಧ ಕಾಂಡದವರೆಗಿನ ವಿವಿಧ ಕಥಾ ಭಾಗಗಳು ದಾಸ ಮಹಿಳೆಯರ ದೀರ್ಘ ಕೃತಿಗಳ ವಸ್ತುಗಳಾಗಿವೆ. ಕಥೆ ರಾಮಾಯಣವೇ ಆದರೂ ಅದನ್ನು ಬಳಸಿರುವ ರೀತಿ, ವೈವಿಧ್ಯ, ಈ ಮಹಿಳೆಯರ ಪ್ರತಿಭೆಗೆ ನಿದರ್ಶನವಾಗಿದೆ. ಗಿರಿಯಮ್ಮ ತನ್ನ ದೀರ್ಘ ಕೃತಿ 'ಲವಕುಶರ ಕಾಳಗ'ದಲ್ಲಿ ರಾಮಾಯಣದ ಪ್ರಸಂಗವನ್ನು ಚಿತ್ರಿಸಿರುವ ರೀತಿ ವಿಭಿನ್ನವಾಗಿದೆ. 'ಸೀತಾ ಕಲ್ಯಾಣ' ಕೃತಿಯು ರಾಮಾಯಣವನ್ನು ಆಧರಿಸಿದ್ದೇ ಆಗಿದೆ.

ಸೀತಾ ಕಲ್ಯಾಣ:

ಗಿರಿಯಮ್ಮ ರಚಿಸಿರುವ ಸೀತಾ ಕಲ್ಯಾಣವು ಸರಳವಾದ ದೇಸೀ ನುಡಿಯಲ್ಲಿ, 83 ನುಡಿಗಳಲ್ಲಿ ರಚಿತವಾಗಿದೆ. ಕೃತಿಯ ಹೆಸರು 'ಸೀತಾ ಕಲ್ಯಾಣ' ಆದರೂ ಕಲ್ಯಾಣದ ವಿವರವಾಗಲೀ, ರಾಮ ಬಿಲ್ಲು ಮುರಿದ ಪ್ರಸ್ತಾಪವಾಗಲೀ ಇಲ್ಲ. ವಿವಾಹದ ನಾಲ್ಕನೇ ದಿನ ಮಾಡುವ 'ಅರಿಸಿನೆಣ್ಣೆ'ಯ ವರ್ಣನೆಯೇ

ಮುಖ್ಯವಾಗಿದೆ. ರಾಮ–ಜಾನಕಿಯರ ಉರುಟಣೆಯ ವರ್ಣನೆ ಇದರ ಕಥಾವಸ್ತು. ಮದುವೆಯ ನಾಲ್ಕು ದಿವಸದಲ್ಲಿ ಮದುವಣಿಗ ರಾಮ–ಜಾನಕಿಗೆ ಅರಿಶಿನೆಣ್ಣೆ ಮಾಡುವ ಸಂಭ್ರಮ ಎಂದು ಹೇಳಿಕೊಂಡಿದ್ದಾಳೆ.

ಚಿತ್ತಜಪಿತ ಶ್ರೀರಾಮರಿಗೆ
ಅರ್ತಿಯಿಂದ ಅರಷಿನೆಣ್ಣೆಯ ಮಾಡ್ವ
ಮಿತ್ರೆ ಕೌಸಲ್ಯದೇವಿ ಕೇರಿಕೇರಿಯಗುಂಟ
ಮುತ್ತೈದೇರನು ಕರೆಸಿದಳು ಜಯಜಯ [3]

ಪೀತಾಂಬರವುಟ್ಟು, ಆಭರಣಗಳನ್ನಿಟ್ಟು ದಶರಥನ ರಾಣಿಯರು ಸಿದ್ಧರಾಗುತ್ತಾರೆ. ಗರುಡನ ಪತ್ನಿ ಸೌಂದರ ದೇವಿ, ವರುಣನ ಪತ್ನಿ ಕಾಳಕದೇವಿ, ಹರ ಸತಿ ಗಂಗೆ ಎಲ್ಲರು ಅರಿಶಿನ ಎಣ್ಣೆ ಶಾಸ್ತ್ರಕ್ಕೆ ಬರುತ್ತಾರೆ. ದಶರಥನು ಹಿಡಿ ಹೊನ್ನು ಚೆಲ್ಲುತ್ತ ಜನಕನ ಮನೆಗೆ ಬರುತ್ತಾನೆ. ಆಗ ಮೊಳಗುತ್ತಿದ್ದ ವಾದ್ಯಗಳ ವರ್ಣನೆಯನ್ನು ನೋಡಿದರೆ ಮದುವೆ ಮನೆಯ ಮಂಗಳ ವಾದ್ಯಗಳಂತಿರದೆ ರಣರಂಗದ ರಣಭೇರಿ, ರಣಕಹಳೆಗಳಂತೆ ತೋರುತ್ತದೆ.

ಹೊಡೆವ ತಂಬಟ ಭೇರಿ ನಿಸ್ಸಾಳ
ಬಿಡದೆ ಚೀರುವ ಹೆಗ್ಗಾಳೆಗಳು
ಸಿಡಿಲು ಗರ್ಜಿಸುವಂತೆ ಪಂಚಮ ವಾದ್ಯದಿ
ನಡೆದರು ಜನಕರಾಯನ ಮನೆಗೆ [4]

ಮನೆಗೆ ಬಂದ ದಶರಥ ಮತ್ತು ಅವನ ಪರಿವಾರವನ್ನು ಜನಕರಾಯ ಗೌರವದಿಂದ ಎದುರುಗೊಂಡು ಬಂದು ಬೀಗರಿಗೆ ಗದ್ದುಗೆ ಹಾಸಿ ಉಪಚರಿಸುತ್ತಾನೆ. ಮಣಿ ಮಂಟಪದಲ್ಲಿ ಹಸೆ ಹಾಸಿ ರಾಮನ ಗುಣಗಳನ್ನು ಕೊಂಡಾಡುತ್ತ ಹಸೆಗೆ ಕರೆಯುತ್ತಾರೆ. ಮತ್ತೊಂದು ಕಡೆ:

ಅರಳುಗಂಗಳಿಗೆ ಅಂಜನ ಹಚ್ಚಿ
ಬೆರಳಿಗೆ ಮುದ್ರೆ ಉಂಗುರವಿಟ್ಟು
ಕೊರಳಿಗೆ ಏಕಾವಳಿಯನೆ ಹಾಕೋರು
ತರಳಾಕ್ಷಿಯರಾ ಜಾನಕಿಗೆ ಜಯ ಜಯ [5]

ಅಲಂಕೃತಳಾಗಿ ಕುಳಿತಿದ್ದ ಸೀತೆಯ ಹಸೆಯ ಕಡೆಗೆ ರಾಮ ಬಂದ ಎನ್ನುವುದನ್ನು ಗಿರಿಯಮ್ಮ ಭಕ್ತಿ ಭಾವದಿಂದ ತನ್ಮಯಳಾಗಿ ಹಾಡಿದ್ದಾಳೆ. ರಾಮಾಯಣದ ಇನ್ನಿತರ ವಿಷಯಗಳನ್ನು ಹೇಳುತ್ತಾಳೆ. ಸೀತಾ ಕಲ್ಯಾಣದ ನಂತರದ ಘಟನೆಗಳಾದ ಮಾರೀಚ ವಧೆ, ಸೇತು ಬಂಧನ, ಸುಗ್ರೀವ ರಕ್ಷಣ ಇತ್ಯಾದಿ ಘಟನೆಗಳನ್ನು ವಿವರಿಸಿದ್ದಾಳೆ.

ಬಂಗಾರದ ಹರಿವಾಣದಲ್ಲಿ ಮುತ್ತೈದೆಯರು ಅಗ್ನಿ ತಂದದ್ದನ್ನು, ರಾಮ ಲಾಜಾಹೋಮ ಮಾಡಿದ್ದನ್ನು ನಿರೂಪಿಸುತ್ತಾಳೆ. ಮುಂದೆ ಶ್ರೀರಾಮ ಸೀತೆಯ ಕರಗಳನ್ನು ಓಡಿದು ಎತ್ತಿದ ಒಂದು ಸಂಪ್ರದಾಯವನ್ನು ಗಿರಿಯಮ್ಮ ಹೇಳುತ್ತಾಳೆ.

ಇಳೆಯ ಜಗಂಗಳನುದರದಲಿ
ಅಳವಡಿಸಿದ ಮಹಾತ್ಮಕನು
ಇಳೆಯ ಮಗಳನು ಎತ್ತಲಾರದೆ ರಾಮ
ಬಳಲಿದನೆಂದು ನಕ್ಕರು ಜನರು ಜಯ ಜಯ [6]

ಈ ಸಂದರ್ಭದಲ್ಲಿ ಗಿರಿಯಮ್ಮನ ಹಾಸ್ಯ ಪ್ರವೃತ್ತಿ ಎದ್ದು ಕಾಣುತ್ತದೆ. ಅನಂತರ ಕೌಸಲ್ಯೆ ಶ್ರೀರಾಮನಿಗೆ ಅರಿಶಿನ ಹಚ್ಚಲು ಸೀತೆಗೆ ಕೊಡುತ್ತಾಳೆ. ಆಗ ಸೀತೆ ರಾಮನಲ್ಲಿ ಸಿರಿ ಮುಖ ತೋರೆಂದು ಬೇಡುತ್ತಾ ದಶಾವತಾರಗಳನ್ನು ನೆನೆಯುತ್ತಾಳೆ. ಪಾದ ಮಹಿಮೆ ಹೇಳುತ್ತಾಳೆ. ರಾಮನ ಮುಖ, ಚರಣಗಳಿಗೆ ಅರಿಶಿನ ಪೂಸಿ

ರಾಮ ಚರಣಕೆ ಸಿರಿದೇವಿ
ಹೂವಿನಕ್ಷತೆಯಿಟ್ಟೆರಗಿದಳು
ಪ್ರೇಮದಿ ಎನ್ನನು ಅಗಲದೆನ್ನುರದೊಳು
ಸ್ವಾಮಿಯಾಗಿರು ಎಂದು ಹರಸಿದಳು ಜಯ ಜಯಾ [7]

ಜಾನಕಿಯ ನಂತರ ಅರಿಸಿನ ಹಚ್ಚುವ ಸರದಿ ರಾಮನದು. ಪಾರ್ವತಿ ದೇವಿ ಹಿರಿಯಳಾಗಿ ನಿಂತು ಈ ಕಾರ್ಯ ನೆರವೇರಿಸುತ್ತಾಳೆ. ರಾಮ ಕುಳಿತೇ ಹಚ್ಚಲು ಆಲೋಚಿಸಿದಾಗ ಪಾರ್ವತಿ ಅವನನ್ನು ಛೇಡಿಸುತ್ತಾಳೆ.

ಬಲ್ಲೆವೊ ದೇವೋತ್ತಮ ನಿನ್ನ
ಫುಲ್ಲಲೋಚನೆ ಜಾನಕಿಯೊಡನೆ
ಸಲ್ಲದು ಸಲಿಗೆಯು ರಾಘವ ನೀ
ನಿಲ್ಲಬೇಕೆನುತ ಪಾರ್ವತಿ ನುಡಿದೋರೆ [8]

ರಾಮ ಎದ್ದು ನಿಂತು ತಲೆ ಬಾಗಿಸಿದ್ದ ಸೀತೆಯನ್ನು ಮುಖ ತೋರೆಂದು ಕೇಳುತ್ತಾನೆ.

ಲೋಕದೊಳಗೆಣೆಗಾಣೆನಿನಗೆಂದು
ಏಕಪತಿವ್ರತೆ ಕೈಗೊಂಡೆ [9]

ಈ ಮಾತುಗಳು ಸೀತೆಯ ವ್ಯಕ್ತಿತ್ವವನ್ನು ಹೇಳುತ್ತದೆ. ಪರಮ ಪತಿವ್ರತೆ ಜಾನಕಿಯ ಮಹತ್ವವನ್ನು ರಾಮ ಅರಿತಿದ್ದನೆಂದು ತಿಳಿಯುತ್ತದೆ. ಅರಿಶಿನ ಹಚ್ಚಿದ ನಂತರ ರಾಮ ಸೀತೆಯರು ಮುತ್ತು ರತ್ನ ಹಿಡಿಮು

ನಿವಾಳಿ ತೆಗೆದು ನಂತರ ಕುಂಕುಮದೋಕುಳಿಯಾಡುತ್ತಾರೆ. ಸುರ ಪತ್ನಿಯರು ವಿಧವಿಧವಾದ ಆರತಿ ಎತ್ತುವುದರಲ್ಲಿ ಈ ಕಾವ್ಯ ಮುಗಿಯುತ್ತದೆ.

ಸೀತಾಕಲ್ಯಾಣ ಮೇಲ್ಮಟ್ಟದ ಕಾವ್ಯವಲ್ಲ. ಮದುವೆ ಮನೆಯ ವೈಭವ, ಉರುಟಣೆಯ ಸಂಭ್ರಮ, ದಶಾವತಾರ, ಚರಣ ವರ್ಣನೆಗಳನ್ನು ಗಿರಿಯಮ್ಮ ಉತ್ಸಾಹದಿಂದ ಮಾಡಿದ್ದಾಳೆ. ಭಾಷೆ ಸರಳವಾಗಿದ್ದು ಅಲ್ಲಲ್ಲಿ ದೇಸೀ ನುಡಿಗಳಿಂದ ಕಾವ್ಯದ ಸೊಬಗು ಹೆಚ್ಚಾಗಿದೆ.

ಶ್ರೀರಾಮ ಜನನ ಮತ್ತು ಸೀತಾ ಕಲ್ಯಾಣ:

ನಿಡಗುರುಕಿ ಜೀವೂಬಾಯಿಯವರ ಈ ದೀರ್ಘ ಕೃತಿಯು ಗದ್ಯ ಪದ್ಯ ಮಿಶ್ರ ಕಾವ್ಯ. ವಾಲ್ಮೀಕಿ ಮಹರ್ಷಿಗಳು ಲವಕುಶರಿಗೆ ಹೇಳಿದ ರಾಮ ಚರಿತೆಯನ್ನು ತಾನು ಹೇಳುತ್ತಿರುವುದಾಗಿ ಕತೆಯನ್ನು ಪ್ರಾರಂಭಿಸಲಾಗಿದೆ. ಕಥೆಯು ವೈಕುಂಠದಿಂದ ಪ್ರಾರಂಭವಾಗುತ್ತದೆ. ಶ್ರೀದೇವಿ, ಭೂದೇವಿಯರೊಡನೆ ವಾಸುಕೀ ಶಯನನಾದ ಹರಿಯ ಬಳಿ ಬಂದ ಇಂದ್ರಾದಿಗಳು ದುರುಳ ದೈತ್ಯರ ಉಪಟಳ ಹೆಚ್ಚಿರುವುದಾಗಿ ಮೊರೆಯಿಡುತ್ತಾರೆ. ವಿಷ್ಣು ಮೌನವಾಗಿರಲು ರಾವಣನ ಉಪಟಳವನ್ನು ಅರುಹುತ್ತಾರೆ. ಆಗ ಶ್ರೀಹರಿಯು ತನ್ನ ಅವತಾರದ ಭರವಸೆ ನೀಡುತ್ತಾನೆ.

ಇತ್ತ ದಶರಥನು ಮಕ್ಕಳಿಲ್ಲದೆ

ಯಾತರ ಬದುಕಿದು ಯಾತಕೀ ರಾಜ್ಯವು
ಯಾತಕೀ ದೊರೆತನವು
ಯಾತಕೀ ವೈಭವ ಯಾತಕೀ ಅರಮನೆ
ಯಾತಕೀ ಸಂಪದವು [10]

ಎಂದು ಕೊರಗುತ್ತಿರುತ್ತಾನೆ. ಪುತ್ರಕಾಮೇಷ್ಟಿ ಯಾಗ ಮಾಡಲು ಸಲಹೆ ಬಂದಾಗ ಒಪ್ಪುತ್ತಾನೆ. ಯಾಗದ ಫಲದಿಂದ ನಾಲ್ಕು ಮಕ್ಕಳು ಜನಿಸುತ್ತಾರೆ. ಸಂಭ್ರಮ ಪಟ್ಟ ದಶರಥನು ಮಕ್ಕಳಿಗೆ ನಾಮಕರಣ, ತೊಟ್ಟಿಲುತ್ಸವ, ಚೌಲ, ಉಪನಯನಗಳನ್ನು ಸಾಂಗವಾಗಿ ನೆರವೇರಿಸುತ್ತಾನೆ. ವಿಶ್ವಾಮಿತ್ರ ಋಷಿಗಳು ಬಂದು ತಮ್ಮ ಆಶ್ರಮದಲ್ಲಿ ಯಜ್ಞಯಾಗಾದಿಗಳಿಗೆ ವಿಘ್ನ ತರುತ್ತಿರುವ ರಕ್ಕಸರನ್ನು ನಿಗ್ರಹಿಸಲೆಂದು, ರಾಮನನ್ನು ಯಜ್ಞ ರಕ್ಷಕನಾಗಿ ಕಳುಹಿಸಲು ಕೋರುತ್ತಾರೆ.

ವಿಶ್ವಾಮಿತ್ರರ ಜೊತೆ ಬಂದ ಶ್ರೀರಾಮನು ತಾಟಕಿಯನ್ನು ಸಂಹರಿಸಿ ಯಾಗ ನಿರ್ವಿಘ್ನವಾಗಿ ನಡೆಯುವಂತೆ ಮಾಡುತ್ತಾನೆ. ಆ ಸಮಯಕ್ಕೆ ಸೀತಾ ಸ್ವಯಂವರದ ಪತ್ರ ಮುನಿಗಳ ಆಶ್ರಮ ತಲುಪುತ್ತದೆ. ವಿಶ್ವಾಮಿತ್ರರು ಮುನಿವೃಂದದೊಡನೆ ರಾಮ ಲಕ್ಷ್ಮಣರನ್ನು ಕರೆದುಕೊಂಡು ಮಿಥಿಲೆಗೆ ಹೊರಡುತ್ತಾರೆ.

ಸ್ವಯಂವರದಲ್ಲಿ ವೀರಾಧಿವೀರರಾದ ರಾಜರು ಧನುವೆತ್ತಲಾರದೆ ಸೋಲುತ್ತಾರೆ. ರಾವಣನೂ ಧನಸ್ಸು ಎತ್ತಲಾರದೆ ಕುಸಿದು ಬೀಳುತ್ತಾನೆ. ಜನಕನು ಶಿವಧನಸ್ಸನ್ನು ಎತ್ತಬಲ್ಲ ವೀರರೇ ಇಲ್ಲವೆಂದು ಚಿಂತಿಸುತ್ತಾನೆ. ಆಗ ವಿಶ್ವಾಮಿತ್ರರು ರಾಮನನ್ನು ಪ್ರಯತ್ನಿಸಲು ಹೇಳುತ್ತಾರೆ. ಈ ಸಂದರ್ಭದಲ್ಲಿ ಜೀವೂಬಾಯಿಯವರು ಹೊಸ ಕಲ್ಪನೆಯೊಂದನ್ನು ಹೆಣೆದಿದ್ದಾರೆ. ಶ್ರೀರಾಮ ಲಕ್ಷ್ಮಣನನ್ನು ಕುರಿತು

ತೆರೆಯ ಮರೆಯಲಿ ಜಾನಕಿ ಇರುತಿರೆ
ಅರಿತು ಪೇಳ್ವದು ಚೆಲ್ವಿಕೆಯ
ಸರಿ ಬಂದರೆ ಎನ ಮನಸಿಗೆ ಧನುವನು
ಅರೆ ನಿಮಿಷದಿ ಬಾಗಿಪೆನೆನಲು [11]

ಸೀತೆಯು ಸುಂದರಿಯಲ್ಲದಿದ್ದರೆ ಬಿಲ್ಲು ಎತ್ತುವ ಸಾಹಸ ವ್ಯರ್ಥವೆಂದು ರಾಮನ ಅಭಿಪ್ರಾಯ. ಲಕ್ಷ್ಮಣನು ಮನದಲ್ಲಿ ಮಹಾಲಕ್ಷ್ಮಿಯನ್ನು ನೆನೆದು ಸೀತೆಯನ್ನು ಅಡಿಯಿಂದ ಮುಡಿಯವರೆಗೆ ವರ್ಣಿಸುತ್ತಾನೆ. ಲಕ್ಷ್ಮಣನ ವರ್ಣನೆ ಕೇಳಿ ರಾಮ ನಗುತ್ತಾ

ಇಷ್ಟು ಯಾರ ವರ್ಣನೆ ಎನ್ನಲು
ಶ್ರೇಷ್ಠರಾಮರ ಪಟ್ಟದರಸಿ [12]

ಎಂದು ಲಕ್ಷ್ಮಣ ಹೇಳಿದಾಗ ದಿಟ್ಟ ರಾಮ ಧನುವನ್ನು ಮೆಟ್ಟಿ ಮುರಿಯುತ್ತಾನೆ.

ಸೀತೆ ರಾಮನ ಕೊರಳಿಗೆ ಮಾಲೆ ಹಾಕುತ್ತಾಳೆ. ರಾಮ ಸೀತೆಯರ ಜೊತೆಗೆ ಲಕ್ಷ್ಮಣ–ಊರ್ಮಿಳೆ, ಭರತ–ಮಾಂಡವಿ, ಶತ್ರುಘ್ನ–ಶೃತಕೀರ್ತಿಯರ ವಿವಾಹವೂ ನಡೆಯುತ್ತದೆ. ಮದುವೆಯನ್ನು ಸಂಪ್ರದಾಯದಂತೆ ನೆರವೇರಿಸಿದ ವರ್ಣನೆ ಇಲ್ಲಿ ಬರುತ್ತದೆ. ನಾಲ್ಕು ದಿನ ಪರ್ಯಂತ ವೈಭವದಿಂದ ವಿವಾಹ ನಡೆಸಿದ ಜನಕರಾಯ ಬೇಕಾದಷ್ಟು ಉಡುಗೊರೆ ನೀಡುತ್ತಾನೆ.

ಈ ಕಾವ್ಯದ ಮಂಗಳ ಪದ್ಯವು 12 ನುಡಿಗಳಿಂದ ಕೂಡಿದೆ. ಈ ಪದ್ಯದಲ್ಲಿ ಇಡೀ ರಾಮಾಯಣವನ್ನು ಸಂಗ್ರಹವಾಗಿ ಹೇಳಲಾಗಿದೆ. ಫಲಶೃತಿಯೊಂದಿಗೆ ಕಾವ್ಯ ಮುಕ್ತಾಯವಾಗುತ್ತದೆ.

ಲವಕುಶರ ಕಾಳಗ (ಪಟದ ಸಂಧಿ):

ಇದು ಹೆಳವನ ಕಟ್ಟೆ ಗಿರಿಯಮ್ಮನ ಕೃತಿ. ಸೀತಾಪರಿತ್ಯಾಗ ಮತ್ತು ಲವಕುಶರ ಜನನಕ್ಕೆ ಸಂಬಂಧಿಸಿದ ಈ ಕೃತಿಯು ಸಾಂಗತ್ಯದಲ್ಲಿದೆ. ಈ ಕೃತಿಯಲ್ಲಿ ಅನೇಕ ಹೊಸ ಕಲ್ಪನೆಗಳಿವೆ. ರಜಕನ ವೃತ್ತಾಂತದ ಪ್ರಸ್ತಾಪವೇ ಇಲ್ಲ.

1. ರಾಮ ಸೀತೆಯನ್ನು ಕಾಡಿಗೆ ಅಟ್ಟಿದ್ದು ಸೀತೆ ರಾವಣನ ಚಿತ್ರ (ಪಟ) ಬರೆದದ್ದರಿಂದ
2. ರಾಮ ಸೀತೆಯ ತಲೆ ಕಡಿದು ಬರುವಂತೆ ಲಕ್ಷ್ಮಣನಿಗೆ ಆಜ್ಞೆ ಮಾಡುತ್ತಾನೆ.
3. ಸೀತೆಗೆ ಲವ ಮಾತ್ರ ಜನಿಸುತ್ತಾನೆ. ವಾಲ್ಮೀಕಿ ದರ್ಭೆಯಿಂದ ಮತ್ತೊಂದು ಮಗುವನ್ನು ಸೃಷ್ಟಿಸಿ ಕುಶನೆಂದು ಹೆಸರಿಸುತ್ತಾನೆ.
4. ರಾಮನ ಜೊತೆಗಿನ ಯುದ್ಧದ ಸಂದರ್ಭದಲ್ಲಿ ಲವ ಮೂರ್ಛೆ ಹೋದಾಗ ಮಂತುಣಿ ಅವನನ್ನು ರಕ್ಷಿಸುತ್ತಾಳೆ. ಲವಕುಶರಿಂದಲೇ ಹತಳಾಗುತ್ತಾಳೆ.
5. ಸೀತೆ ಭೂಗರ್ಭ ಸೇರದೆ ಅಯೋಧ್ಯೆಗೆ ಹಿಂತಿರುಗಿ ಬರುತ್ತಾಳೆ.

ಗಿರಿಯಮ್ಮ ನವೀನ ದೃಷ್ಟಿಯಿಂದ ರಾಮಾಯಣದ ಈ ಪ್ರಸಂಗವನ್ನು ಚಿತ್ರಿಸಿದ್ದಾಳೆ. ಪಟದ ಕಲ್ಪನೆಯನ್ನು ಹೊಸದಾಗಿ ಸಂಯೋಜಿಸಿಕೊಂಡಿದ್ದಾಳೆ. ಇಲ್ಲಿನ ಅನೇಕ ಘಟನೆಗಳು ಮೂಲ ರಾಮಾಯಣಕ್ಕಿಂತ ಭಿನ್ನವಾಗಿವೆ. ಇದರ ಮೂಲ ಯಾವುದೆಂದು ತಿಳಿದು ಬರುವುದಿಲ್ಲ.

ರಾಮಾಯಣ ಉತ್ತರಕಾಂಡದ ಕಥೆಯನ್ನು ಗಿರಿಯಮ್ಮ ಹೇಳಿದ್ದಾಳೆ. ಸೀತೆ ಗರ್ಭಿಣಿಯಾದ ವಿಚಾರದಿಂದ ಕಥೆ ಪ್ರಾರಂಭವಾಗುತ್ತದೆ. ರಾಮ ತನ್ನ ಪತ್ನಿಯ ಬಯಕೆ ಏನೆಂದು ವಿಚಾರಿಸಿದಾಗ ಸೀತೆ ಮುನಿ ಪತ್ನಿಯರ ಜೊತೆಯಲ್ಲಿ ವನ ಭೋಜನ ಮಾಡುವ ಆಸೆ ವ್ಯಕ್ತಪಡಿಸುತ್ತಾಳೆ.

ಅಯೋಧ್ಯಾಪುರದ ನಾರೇರನೆಲ್ಲರ ಬಿಟ್ಟು
ಕೈ ಹಿಡಿದ ಪುರುಷನ ಬಿಟ್ಟು
ಸಕಲ ಸಂಪತ್ತು ಸೌಭಾಗ್ಯವೆಲ್ಲವ ಬಿಟ್ಟು
ನೆನೆದಾಳು ಋಷಿಗಳಾಶ್ರಮವ [13]

ರಾಮನು ಸೀತೆಯ ಇಚ್ಛೆಗೆ ಸಮ್ಮತಿಸಿ ಇತ್ತ ತಾನು ಬೇಟೆಗೆ ಹೊರಡುತ್ತಾನೆ. ಬೇಟೆಯಾಡುತ್ತಾ ಬಳಲಿದ ರಾಮನು ಮರದ ತಂಪು ನೆರಳಲ್ಲಿ ಲಕ್ಷ್ಮಣನ ತೊಡೆಯ ಮೇಲೆ ಮಲಗಿ ವಿಶ್ರಾಂತಿ ಪಡೆಯುತ್ತಿರುವಾಗ ಕನಸೊಂದನ್ನು ಕಾಣುತ್ತಾನೆ.

ಇಂದುವದನೆ ಮುಡಿಯ ಪಿಡಿದು ಎಳೆವುದು ಕಂಡೆ
ರಾವಣ ಕುಣಿಯೋದ ಕಂಡೆ ।
ಮುಂದುಗಾಣದೆ ಇಂದು ಬಂದೆವೊ ಲಕ್ಷ್ಮಣ
ಇಂದು ಸೀತೆಗೆ ಜಯವಿಲ್ಲ [14]

ಎಂದು ಲಕ್ಷ್ಮಣನಿಗೆ ಹೇಳಿ ಆತಂಕ ವ್ಯಕ್ತಪಡಿಸುತ್ತಾನೆ. ಇತ್ತ ಅದೇ ಸಮಯದಲ್ಲಿ ಮಾಯಾ ತಾಟಕಿಯೊಬ್ಬಳು ಕೊರವಿಯ ವೇಷದಲ್ಲಿ ಸೀತೆಯ ಬಳಿ ಬಂದು

ಈರೇಳು ಲೋಕವ ಹೋಗಿ ತಿರುಗಿ ಬಂದೆ
ದೇವಿಗೆ ಕಾಣಿಕೆ ತಂದೆ
ನಾಗಲೋಕದಿಂದ ದೇವಲೋಕಕ್ಕೆ ಬಂದೆ
ನಾಗಸಂಪಿಗೆ ತರಲಾಗಿ [15]

ಎಂದು ನಾಗಸಂಪಿಗೆ ಹೂವು ನೀಡಿ ಮುಡಿಯಲು ಹೇಳುತ್ತಾಳೆ. ಸೀತೆ ಅವಳ ಬಗ್ಗೆ ವಿಚಾರಿಸಿ ಅವಳು ಏನು ಕೇಳಿದರೂ ನೀಡುವುದಾಗಿ ಹೇಳುತ್ತಾಳೆ. ಹೊನ್ನು, ಹಣ, ಅನ್ನ, ವಸ್ತ್ರ ಏನು ಕೇಳಿದರೂ ಕೊಡುವೆನೆಂದು ಸೀತೆ ಹೇಳುತ್ತಾಳೆ. ಆಗ ಮಾಯಾ ತಾಟಕಿಯು,

ಹೊನ್ನು ಹಣ ಬೇಡ ಅನ್ನ ವಸ್ತ್ರ ಬೇಡ
ನಿನ್ನ ಭಾಗ್ಯವು ನಾನೊಲ್ಲೆ
ಚೆನ್ನಾಗಿ ಅಸುರನ ಇನ್ನು ನೀ ಬರೆದರೆ
ಚೆನ್ನಾಗಿ ಹರಣ ಓದುವೆನು [16]

ಎಂದು ಒತ್ತಾಯಿಸುತ್ತಾಳೆ. ಸೀತೆ ಒಪ್ಪದಿರಲು ಭಸ್ಮವನ್ನು ತೊಡೆದು ಸೀತೆಯನ್ನು ವಶಪಡಿಸಿಕೊಳ್ಳುತ್ತಾಳೆ. ಆಗ ಸೀತೆ ರಾವಣನು ವನ ಪ್ರದಕ್ಷಿಣೆ ಬಂದಾಗ ಅವನ ಉಂಗುಷ್ಟವನ್ನು ಮಾತ್ರ ಕಂಡಿದ್ದಾಗಿ ಹೇಳುತ್ತಾಳೆ.

ಉಂಗುಷ್ಟದಂದಕ್ಕೆ ಮುಂದೆ ಪಾದವ ಬರೆದು
ಹಿಂದೆ ಹಿಮ್ಮಡಿ । ಕಣಕಾಲು
ಚಂದದ ನಡುತೊಡೆ ಎದೆ ಭುಜ ಆಯುಧ
ಹೊಂದಿಸಿ ಬರೆ ಎಂದಳವಳು [17]

ರಾವಣನನ್ನು ತಾಟಕಿ ವರ್ಣಿಸುತ್ತಾ ಹೋದಂತೆ ಸೀತೆ ಚಿತ್ರ ಬರೆಯುತ್ತಾಳೆ.

ಒಂದು ಕಾಯಕೆ ಹತ್ತು ಶಿರಗಳ ಬರೆದಳು
ಮುಂದೆರಡು ಪಾದ ವಿನ್ಯಾಸ ।
ಒಂದಾದರೊಂದಂತೆ ಹೊಂದಿಸಿ ಬರೆದಳು
ತಂದು ನಿಲಿಸಿದಳು ರಾವಣನ [18]

ರಾವಣನ ಚಿತ್ರ ಬರೆಸಿದ ತಾಟಕಿ ಆ ಪಟಕ್ಕೆ ಎಂದೆಂದಿಗೂ ಅಳಿಯದಂತೆ ವರ ನೀಡೆಂದು ಕೇಳುತ್ತಾಳೆ. ಆಗ ಸೀತೆ

ಸುರರಿಂದ ಸಾವಿಲ್ಲ ನರರಿಂದ ಸಾವಿಲ್ಲ
ಧರೆಯೊಳು ಮರಣ ಭಯವಿಲ್ಲ ।
ಕಿರಿಯ ಲಕ್ಷ್ಮಣ ದೇವ ಹೊಡೆದರೆ ಮಡಿ ಎಂದು
ವರವ ಕೊಟ್ಟಳು ಸೀತೆ ಪಟಕೆ [19]

ರಾವಣನ ಪಟವನ್ನು ಮೇಲಕ್ಕೆ ಹಾರಿಸಿ ತಾಟಕಿ ಮಾಯವಾಗುತ್ತಾಳೆ. ಸೀತೆ ಚಿಂತಿತಳಾಗಿ ಮಂಚದಲ್ಲಿ ಒರಗುತ್ತಾಳೆ. ಆ ಪಟವೂ ಅಲ್ಲಿಗೇ ಬಂದು ಒರಗುತ್ತದೆ. ಎಷ್ಟೇ ಪ್ರಯತ್ನಿಸಿದರೂ ನಾಶವಾಗದ ಆ ಪಟ ಎದ್ದು ಕುಣಿದಾಡುತ್ತದೆ. ರಾಮ ಬರುವ ವೇಳೆಯಾಯಿತೆಂದು ಚಿಂತಿಸುತ್ತಿದ್ದ ಸೀತೆ ಬಂದು ಮಲಗಿದ ಮಂಚದಲ್ಲಿ ಪಟವೂ ಬಂದು ಒರಗುತ್ತದೆ.

ಬೇಟೆಯಿಂದ ಹಿಂತಿರುಗಿದ ರಾಮನಿಗೆ ಅಪಶಕುನಗಳಾಗುತ್ತವೆ. ಜಾನಕಿಯ ಬಾಡಿದ ಮುಖವನ್ನು ನೋಡಿದ ಶ್ರೀರಾಮ ಕಾರಣ ಕೇಳುತ್ತಾನೆ. ಆಗ ಸೀತೆ ಕೆಟ್ಟ ಕನಸು ಕಂಡುದಾಗಿ ಹೇಳಿ ಜಾರಿಕೊಳ್ಳುತ್ತಾಳೆ. ಶಯ್ಯಾಗೃಹದ ಹಾಸಿಗೆಯ ಮೇಲೆ ರಾಮ ರಾವಣನ ಚಿತ್ರಪಟ ನೋಡಿ ಕ್ರೋಧಗೊಳ್ಳುತ್ತಾನೆ.

ಎಷ್ಟು ದಿವಸ ಘಾಸಿಯಾಗಿ ಬರೆದೆ ಇವನ
ಎಷ್ಟು ದಿವನ ಭೋಗಿಸಿದೆ ।
ಯಾತಕ್ಕೆ ಎಲೆ ಸೀತೆ ಎನ ಕೂಡ ಹೇಳದೆ
ಘಾತಿ ಮಾಡಿದೆ ದೇವಿ ಎಂದ [20]

ನಾನಾ ವಿಧವಾಗಿ ಸೀತೆಯನ್ನು ನಿಂದಿಸಿ ಹನುಮ, ಅಂಗದ, ಸುಗ್ರೀವಾದಿಗಳಿಗೆ ಸೀತೆಯ ಅಕಾರ್ಯವನ್ನು ತಿಳಿಸುತ್ತಾನೆ.

ಹೆಂಗಸು ಹೆಡತಲೆ ಮೃತ್ಯು ಎಂಬರು ಜನ
ಇಂದು ಕಂಡೆನೆ ಸಾದೃಶವ [21]

ಲಕ್ಷ್ಮಣನು ಆ ಪಟವನ್ನು ಹೊಡೆದು ಹಾಕುತ್ತಾನೆ. ರಾಮನು ಸೀತೆಯನ್ನು ಕಡಿದು ಬರಲು ಲಕ್ಷ್ಮಣನಿಗೆ ಆಜ್ಞಾಪಿಸುತ್ತಾನೆ. ಸೀತೆ ವನಕ್ಕೆ ಹೊರಟಾಗ ಶುಭ ಶಕುನಗಳೇ ಆಗುತ್ತವೆ.

ಲಕ್ಷ್ಮಣನು ಸೀತೆಯನ್ನು ಕಾಡಿನಲ್ಲಿ ಬಿಟ್ಟು ಮೃಗದ ರಕ್ತದಿಂದ ಖಡ್ಗವನ್ನು ತೋಯಿಸಿ ಬಂದು ರಾಮನಿಗೆ ಸೀತೆಯನ್ನು ಕಡಿದು ಬಂದುದಾಗಿ ಹೇಳುತ್ತಾನೆ.

ಇತ್ತ ಸೀತೆ ವಾಲ್ಮೀಕಿ ಮುನಿಗಳ ಆಶ್ರಮ ಸೇರುತ್ತಾಳೆ. ಅವಳಿ ಮಕ್ಕಳಿಗೆ ತಾಯಿಯಾಗುತ್ತಾಳೆ. ಇಲ್ಲಿ ಕುಶನನ್ನು ವಾಲ್ಮೀಕಿ ನಿರ್ಮಿಸಿದ್ದಾಗಿ ಗಿರಿಯಮ್ಮ ಹೇಳುತ್ತಾಳೆ.

ಬಾಲನೆತ್ತಿ ಸೀತೆ ನೀರ ಹೊಳೆಗೆ ಹೋಗೆ
ವಾನರಂಗಳು ಒಯ್ವವೆಂದು
ದೇವಿ ಮುನಿದರೆ ಶಾಪ ಬಂದೀತೆಂದು
ಬಾಲನ ದರ್ಭೆಲಿ ನಿರ್ಮಿಸಿದ [22]

ವಾಲ್ಮೀಕಿ ಮಹರ್ಷಿಗಳು ಲವಕುಶರಿಗೆ ಜಾತಕರ್ಮ, ಉಪನಯನ, ಮೊದಲಾದ ಸಂಸ್ಕಾರಗಳನ್ನು ನಡೆಸಿ ಸಕಲ ವಿದ್ಯೆಗಳನ್ನು ಕಲಿಸಿದರು.

ಇತ್ತ ಅಯೋಧ್ಯೆಯಲ್ಲಿ ರಾಮ ಅಶ್ವಮೇಧ ಯಜ್ಞಕ್ಕೆ ಸಕಲ ಸಿದ್ಧತೆಯನ್ನು ಮಾಡಿಕೊಂಡು ಚಿನ್ನದ ಸೀತೆಯನ್ನು ಒಡಗೊಂಡು ಯಜ್ಞಕ್ಕೆ ಉಪಕ್ರಮಿಸುತ್ತಾನೆ. ಯಜ್ಞಾಶ್ವವು ಭೂಮಿ ಪ್ರದಕ್ಷಿಣೆ ಮಾಡುತ್ತಾ ವಾಲ್ಮೀಕಿಯ ಆಶ್ರಮಕ್ಕೆ ಬಂದಾಗ ಲವ-ಕುಶರು ಅದನ್ನು ಕಟ್ಟಿ ಹಾಕುತ್ತಾರೆ. ಅಶ್ವದ ರಕ್ಷಣೆಗೆ ಬಂದ ಶತ್ರುಘ್ನನನ್ನು ಗಾಯಗೊಳಿಸುತ್ತಾರೆ. ನಂತರ ಬಂದ ಭರತನ ಯಾವ ಮಾತಿಗೂ ಮಕ್ಕಳು ಬಗ್ಗದಿದ್ದಾಗ ಭರತ ಲವನ ಮೇಲೆ ಬಾಣ ಪ್ರಯೋಗಿಸಿ ಮೂರ್ಛೆ ಬೀಳಿಸುತ್ತಾನೆ.

ಲವ ಎಚ್ಚರ ತಪ್ಪಿ ಬಿದ್ದಾಗ ಮಂತುಣಿ (ಮಂಥರೆ)ಯ ಬಳಿ ಲವನನ್ನು ಕರೆ ತರುತ್ತಾನೆ. ಕುಶ ತಾಯಿಗೆ ಈ ವಿಷಯ ತಿಳಿಸುತ್ತಾನೆ. ದಿಕ್ಕೆಟ್ಟ ಸೀತೆಯನ್ನು ಸಮಾಧಾನಪಡಿಸಿ ಕುಶ ತಾಯಿಯ ಬೆರಳ ಉಂಗುರ ತೆಗೆದುಕೊಂಡು ಹೊರಡುತ್ತಾನೆ. ಲವನನ್ನು ಎತ್ತಿಕೊಂಡು ಹೋದ ಮಂತುಣಿ ಮಾರಿಗೆ ಅವನನ್ನು ಬಲಿಕೊಡಲು ಯತ್ನಿಸುತ್ತಾಳೆ. ಕುಶನು ಹಾಕಿಕೊಂಡು ಬಂದ ಉಂಗುರವನ್ನು:

ತುಂಬಿದ ಕೊಡದೊಳಗೆ ಉಂಗುರ ಬಿಡೆ
ತಂದು ಎರೆದಳೆ ಬಾಲಕಗೆ [23]

ಆ ಕೊಡದ ನೀರನ್ನು ಲವನಿಗೆ ಎರೆದಾಗ ಸೀತೆಯ ಉಂಗುರ ಅವನನ್ನು ಸೋಕಿ ಲವ ಮೂರ್ಛೆ ತಿಳಿದೇಳುತ್ತಾನೆ. ಕುಶ-ಲವರಿಬ್ಬರು ಅಲ್ಲಿಂದ ಹೊರಟಾಗ ಮಂತುಣಿ ಅವರ ಬೆನ್ನಟ್ಟುತ್ತಾಳೆ. ಆಗ ಮಂತುಣಿಯನ್ನು ಕುಶ-ಲವರು ಕೊಲ್ಲುತ್ತಾರೆ. ಮಂತುಣಿಯನ್ನು ಕೊಂದ ಬಾಲಕರು ರಾಮನನ್ನು ವನವಾಸಕ್ಕೆ ಕಳಿಸಿದ ಹೆಂಗಸು ಮಂತುಣಿಯನ್ನು ಕೊಂದುದಾಗಿ ಓಲೆ ಬರೆದು ಕಟ್ಟಿ ಕಳುಹಿಸುತ್ತಾರೆ. ಈ ವಿಷಯ ರಾಮಭೂಪಾಲನಿಗೆ ತಿಳಿದು ಆ ಬಾಲಕರ ಸಾಹಸ ನೋಡಬೇಕೆಂದು ತಾನೇ ಬರುತ್ತಾನೆ. ಯುದ್ಧಕ್ಕೆ ಬಂದ ಮಕ್ಕಳನ್ನು ಕಂಡ ರಾಮ ಸಂಧಾನಕ್ಕೆ ಮುಂದಾಗುತ್ತಾನೆ. ಮಕ್ಕಳು ಹಠದಿಂದ ಯುದ್ಧವನ್ನೇ ಬಯಸುತ್ತಾರೆ.

ಪುಣ್ಯವಂತೆಯ ಮಕ್ಕಳು ನೀವಾದರೆ ನಮ್ಮ
ತೇಜಿಯ ಕದಿಯಬಹುದೆ [24]

ಎಂದ ರಾಮನ ಪ್ರಶ್ನೆಗೆ ಲವಕುಶರು

ಪುಣ್ಯ ಪಾಪಂಗಳ ವಿಚಾರಣೆ ಮಾಡದೆ
ನಿಮ್ಮ ಅರಸಿಯ ಕೊಲಿಸಬಹುದೆ [25]

ಎಂದು ಪ್ರಶ್ನೆಗೆ ಪ್ರಶ್ನೆಯನ್ನೇ ಕೇಳುತ್ತಾರೆ.

ರಾಮ ಲಕ್ಷ್ಮಣರು, ಲವ-ಕುಶರೊಡನೆ ಕಾಳಗ ಮಾಡುತ್ತಾರೆ.

ಜೋಡೀಲಿ ಭರತ ಶತೃಘ್ನರಿಬ್ಬರು
ಕಾಲಾಳುದಳ ಬಿದ್ದಿತಾಗಾ
ಹನುಮ ಜಾಂಬವಂತನ ಹೆಗಲನೇರಿಸಿಕೊಂಡು
ಸೀತೆಯ ಮುಂದಿಳಿಹಿದರು [26]

ರಾಮ ಲಕ್ಷ್ಮಣರನ್ನು ಆ ಸ್ಥಿತಿಯಲ್ಲಿ ಕಂಡ ಸೀತೆ ಪರಿಪರಿಯಾಗಿ ದುಃಖಿಸುತ್ತಾಳೆ. ವಾಲ್ಮೀಕಿ ಮುನಿ ಜಪ ಮಾಡಿ ಕಮಂಡಲದಲ್ಲಿ ಉದಕ ತಂದು ರಾಮಲಕ್ಷ್ಮಣರಿಗೆ ತೊಡೆದಾಗ ಇಬ್ಬರೂ ಎಚ್ಚರಗೊಳ್ಳುತ್ತಾರೆ. ಭರತ ಶತ್ರುಘ್ನರೂ ಮೇಲೇಳುತ್ತಾರೆ. ಲಕ್ಷ್ಮಣ ಸೀತೆಯನ್ನು ಕೊಲ್ಲಲಿಲ್ಲವೆಂಬ, ಲವಕುಶರು ತನ್ನ ಮಕ್ಕಳೇ ಎಂಬ ಸಂಗತಿ ತಿಳಿದು ರಾಮ ಹರುಷಪಡುತ್ತಾನೆ. ಸೀತೆ, ಲವಕುಶರೊಡನೆ ರಾಮ ಅಯೋಧ್ಯೆಗೆ ಹಿಂತಿರುಗುತ್ತಾನೆ. ಸೀತೆ ಭೂಗರ್ಭ ಸೇರುವ ವಿಚಾರ ಇಲ್ಲಿ ಬಂದಿಲ್ಲ.

ಗಿರಿಯಮ್ಮನ ಈ ಕಾವ್ಯದಲ್ಲಿ 269 ಸಾಂಗತ್ಯಗಳಿವೆ. ರಜಕನ ಪ್ರಸ್ತಾಪವೇ ಇಲ್ಲಿ ಇಲ್ಲದಿರುವುದರಿಂದ ಒಂದು ಜನಾಂಗದ ಬಗ್ಗೆ ಬಂದಿದ್ದ ಅಪಕೀರ್ತಿಯನ್ನು ಗಿರಿಯಮ್ಮ ದೂರ ಮಾಡಿದ್ದಾಳೆ. ಜಾನಪದ ಮೂಲದ ಚಿತ್ರಪಟದ ಕಥೆಯನ್ನು ಬಳಸಿಕೊಂಡು ಸೀತೆಯ ಬಗ್ಗೆ ರಾಮನ ವರ್ತನೆ ಸಮರ್ಥನೀಯವೆಂಬಂತೆ ಚಿತ್ರಿಸುತ್ತಾಳೆ. ಅಗ್ನಿ ಪ್ರವೇಶದ ಭಾಗವನ್ನು ಬದಲಿಸಿ ಕಥೆಯನ್ನು ಸುಖಾಂತಗೊಳಿಸಿದ್ದಾಳೆ.

ಹಟ್ಟಿಯಂಗಡಿ ರಾಮಭಟ್ಟನೆಂಬ ಯಕ್ಷಗಾನ ಕವಿಯ ಮೇಲೆ ಗಿರಿಯಮ್ಮನ 'ಪಟದ ಸಂಧಿ'ಯ ಪ್ರಭಾವವಿದೆ. ಕರ್ನಾಟಕ ಕವಿ ಚರಿತ್ರೆಯಲ್ಲಿ ರಾಮಭಟ್ಟನನ್ನು 19ನೆಯ ಶತಮಾನದವನೆಂದು ಉಲ್ಲೇಖಿಸಲಾಗಿದೆ. ಐರೋಡಿ ಶಿವರಾಮಯ್ಯನವರ ಅಭಿಪ್ರಾಯದಂತೆ ಈತ ಜನಿಸಿದ್ದು 1794ರಲ್ಲಿ

ಗಿರಿಯಮ್ಮನ ನಂತರದವನಾದ ರಾಮಭಟ್ಟನಿಗೆ ಗಿರಿಯಮ್ಮನ 'ಪಟದ ಸಂಧಿ' ಸ್ಫೂರ್ತಿಯಾಗಿರಬಹುದು.

ಕೀರ್ತನ ರಾಮಾಯಣ:

ಕೀರ್ತನ ರಾಮಾಯಣವನ್ನು ಬರೆದವರು ಶ್ರೀಮತಿ ಕೆ.ಎನ್. ಭಾಗೀರಥಮ್ಮ. ಕೋಲಾರ ಜಿಲ್ಲೆಯ ಬೆಲ್ಲಾಲ ಬೊಮ್ಮಸಂದ್ರದಲ್ಲಿ ಇದ್ದವರು. ಬಾಲಕಾಂಡ, ಅರಣ್ಯಕಾಂಡ, ಕಿಷ್ಕಿಂಧಾಕಾಂಡ, ಯುದ್ಧಕಾಂಡ, ಪಟ್ಟಾಭಿಷೇಕ–ಹೀಗೆ 300 ಪುಟಗಳ ವಿಸ್ತಾರವಾದ ಕಾವ್ಯ.

ಯತಿಗಣ ಪ್ರಾಸ ನಾ ಬಲ್ಲವಳಲ್ಲ
ಅತಿಶಯ ಛಂದಸ್ಸು ನಾ ಅರಿಯಲಿಲ್ಲ
ಅತುಳ ಮಹಿಮೆಯ ಈ ಕೃತಿಯನ್ನು
ಮತಿ ತಿಳಿದಂತೆ ಬರೆದೆನು [27]

ಈ ಕೃತಿಯಲ್ಲಿ ಕವಯತ್ರಿ ಕಂದಪದ್ಯ, ಕಂದಾರ್ಥ, ವಚನ, ಕೀರ್ತನೆ, ಆರ್ಯ, ಸೀಸಪದ್ಯ, ಮುಂತಾದವನ್ನು ಬಳಸುತ್ತಾರೆ. "ಕನ್ನಡಕ್ಕೆ ಅಪರಿಚಿತವಾದ, ತೆಲುಗು ಭಾಷೆಗೆ ಅತಿಶಯವಾದ ವಡಿಯನ್ನು ಈಕೆ ಬಳಸಿದ್ದಾಳೆ. ಲಾವಣಿಗೆ ಹತ್ತಿರವಾದ ಆರ್ಯ ಛಂದಸ್ಸಿನ ಪ್ರಯೋಗ ಈ ಕೃತಿಯಲ್ಲಿ ಹೆಚ್ಚಾಗಿದೆ. ಸಂಭಾಷಣೆಗೆ ಕೀರ್ತನೆಯನ್ನೂ, ನಿರೂಪಣೆಗೆ ಆರ್ಯವನ್ನೂ ಬಳಸುತ್ತಾಳೆ."[28] ಕೀರ್ತನೆಗಳಿಗೆ ರಾಗ, ತಾಳ, ಲಯವನ್ನು ನಿರ್ದೇಶಿಸಿರುವುದು ಈ ಕೃತಿಯ ವೈಶಿಷ್ಟ್ಯ. ಸಂಪ್ರದಾಯದ ವಿವರಣೆಯು ಸಾಮಾನ್ಯರಿಗೂ ಅರ್ಥವಾಗುವಂತಿದೆ.

ರಾಮಾಯಣದ ಪಾತ್ರಗಳು ತಮಗೆ ತೀರಾ ಪರಿಚಿತವೆಂಬಂತೆ ಈ ಕೃತಿಯನ್ನು ರಚಿಸಲಾಗಿದೆ. ವಿವಾಹದ ನಂತರ ಸೀತೆಯೊಂದಿಗೆ ಅಯೋಧ್ಯೆಗೆ ಬಂದ ರಾಮನಿಗೆ ಸುಮಂಗಲಿಯರು ಆರತಿ ಎತ್ತುತ್ತಾರೆ. ರಾಮನನ್ನು ಅವರು ಕೋಲಾರದವ, ಕೆಂಕರೆಯ ರಾಮ ಎಂದೇ ಪರಿಭಾವಿಸುತ್ತಾರೆ. ಹನುಮಂತನ ಮಗನ ವಿಚಾರ ಈಕೆ ಹೇಳುವುದು ಹೀಗೆ. ಮತ್ಸ್ಯ ಹನುಮ ಮೈರಾವಣನ ದ್ವಾರಪಾಲಕ. ಹನುಮಂತನೊಡನೆ ಅನುಚಿತವಾಗಿ ನಡೆದುಕೊಂಡ. ಅನಂತರ ಅವನೇ ತನ್ನ ತಂದೆ ಎಂದು ತಿಳಿದಾಗ ಕ್ಷಮೆ ಬೇಡಿ ನಮಸ್ಕರಿಸುತ್ತಾನೆ. ಆಗ ಹನುಮಂತ ಮಗನನ್ನು ಆಶೀರ್ವದಿಸುತ್ತಾ ಹೀಗೆ, "ಕೇಳು ಪುತ್ರನೇ, ಕೆಂಕೆರೆಯೊಳು ನೆಲಸಿದ ನರಸಿಂಹಮೂರ್ತಿಯ ದಯದಿಂದ ಇಳೆಯೊಳು ಹರುಷದಿಂದ ಬಾಳೈ"[29] ಎಂದು ಹೇಳುತ್ತಾನೆ.

ಇಡೀ ರಾಮಾಯಣವನ್ನು ಹಾಡಿನ ರೂಪದಲ್ಲಿ ಬರೆದಿರುವ ಕೃತಿ ಇದೊಂದೇ ಎನ್ನಬಹುದು. ವಿಸ್ತಾರವಾದ ಈ ಕೀರ್ತನ ರಾಮಾಯಣವು ಕನ್ನಡದ ವಿಶಿಷ್ಟ ರಾಮಾಯಣವಾಗಿದೆ.

ಶ್ರೀರಾಮಧ್ಯಾನ:

ಯದುಗಿರಿಯಮ್ಮನವರು ಶ್ರೀರಾಮಧ್ಯಾನ ಎಂಬ 108 ನುಡಿಗಳ ದೀರ್ಘ ಕೀರ್ತನೆ ರಚಿಸಿದ್ದಾರೆ. ಇದು ರಾಮಾಯಣದ ಕೀರ್ತನ ರೂಪ. ಇದಕ್ಕೆ ಮಂಗಳ ನುಡಿ "ಶ್ರೀಮದ್ರಾಮಾಯಣ ಮಂಗಳಂ" 55 ನುಡಿಗಳ ನೀಳ್ಗವನ. ತುಳಸಿ ತೋಟದ ಶ್ರೀರಾಮ ದೇವಾಲಯದಲ್ಲಿ ನಡೆಯುತ್ತಿದ್ದ ರಾಮಾಯಣ ಪ್ರವಚನದ ಪ್ರಭಾವದಿಂದ ಈ ಕೃತಿ ರಚನೆಯಾಗಿದೆ ಎಂದು ಹೇಳಲಾಗಿದೆ. ಸರಳವಾದ ನುಡಿಗಳಲ್ಲಿ ಸುಲಭವಾಗಿ ಓದಿಸಿಕೊಂಡು ಹೋಗುವುದು ಈ ಕೃತಿಯ ವೈಶಿಷ್ಟ್ಯ.

ರಾಮನ ಜನನ, ಬಾಲ್ಯ, ವಿಶ್ವಾಮಿತ್ರರ ಯಾಗ ರಕ್ಷಣೆಗಾಗಿ ಮಾಡಿದ ರಾಕ್ಷಸ ಸಂಹಾರ ಮುಂತಾದ ವಿವರಗಳಿವೆ. ರಾಮಾಯಣದ ಮುಖ್ಯ ಘಟ್ಟಗಳನ್ನು ಕ್ರಮವಾಗಿ ಹೇಳಿದ್ದಾರೆ. ರಾವಣನನ್ನು ಸಂಹರಿಸಿ ಸೀತೆಯನ್ನು ಕರೆತಂದ ರಾಮನನ್ನು ಕಂಡು 'ಅಜಭವಸುರರೆಲ್ಲ' ಸ್ತೋತ್ರ ಮಾಡುವಾಗ ದಶಾವತಾರ ಸ್ತುತಿಯನ್ನು ಬಳಸಲಾಗಿದೆ.

ವೇದವನಿತ್ತು ಅಜನಿಗೆ ಭಾರವ ಹೊತ್ತು
ಧಾರುಣಿಯ ತಂದು ಕಂಬದಿಂ ಬಂದು

ದಾನವ ಬೇಡಿ ಕ್ಷತ್ರಿಯ ಕುಲವನೀಡಾಡಿ
ಜಾನಕಿಯ ತಂದು ಪ್ರಲಂಬನ ಕೊಂದು

ಕಾಳಿಯ ಒತ್ತಿ ಕುದುರೆಯ ಹತ್ತಿ ಜಗ
ವೆಲ್ಲ ಸುತ್ತಿ ನಿಮ್ಮ ದರ್ಶನ ಮುಕ್ತಿ [30]

ಶ್ರೀರಾಮ ಪಟ್ಟಾಭಿಷೇಕದವರೆಗಿನ ಕತೆಯನ್ನು ಇಲ್ಲಿ ಹೇಳಲಾಗಿದೆ.

ಶ್ರೀರಾಮಾಯಣ ಪ್ರಸಂಗ ಕೀರ್ತನ ಸುಮ ಮಾಲಾ:

ಶ್ರೀಮತಿ ಕೋಲಾರ ಪದ್ಮಾಬಾಯಿಯವರು ಈ ಕೃತಿಯನ್ನು ರಚಿಸಿದ್ದಾರೆ. ವಾಲ್ಮೀಕಿ ರಾಮಾಯಣಕ್ಕೆ ಅನುಗುಣವಾಗಿ ಈ ಕೃತಿ ರಚಿತವಾಗಿದೆ. ಮೂಲ ರಾಮಾಯಣದಲ್ಲಿರುವಂತೆಯೇ ಆರು ಕಾಂಡಗಳಲ್ಲಿ ರಾಮಾಯಣವನ್ನು ಹೇಳಿದ್ದಾರೆ. ಪದಲಾಲಿತ್ಯಗಳಿಂದ ಕೂಡಿದ ಪದ್ಯ-ವಚನಗಳಿಂದ ವಿಸ್ತಾರವಾದ ಕಥೆಗಳನ್ನು ಸಂಕ್ಷೇಪವಾಗಿ ಕೌಶಲದಿಂದ ಸಂಗ್ರಹಿಸಿದ್ದಾರೆ. ಆರ್ಯ, ಷಟ್ಪದಿಗಳನ್ನು ಬಳಸಿ ರಾಗ ನಿರ್ದೇಶನವನ್ನೂ ಮಾಡಿ ಈ ಕೃತಿ ರಚಿಸಿದ್ದಾರೆ.

ಬಾಲಕಾಂಡದಲ್ಲಿ ಶ್ರೀರಾಮನ ಜನನ ಮತ್ತು ಬಾಲ್ಯವನ್ನು ವಿವರಿಸುತ್ತಾರೆ.

ಎರಡೈದನೆಯ ಮಾಸ । ತುಂಬಿ ಬರೆ ಕೌಸಲ್ಯೆ
ತರುಣಿ ಪಡೆದಳು ಜನ್ಮ । ರಹಿತ ಸುತನನ್ನು [31]

ಜನ್ಮರಹಿತನಾದ ಹರಿಯನ್ನು ಪಡೆದ ಕೌಸಲ್ಯೆಯ ಭಾಗ್ಯವನ್ನು ಹೊಗಳಿದ್ದಾರೆ. ನಂತರ ಅಯೋಧ್ಯೆಯ ಜನರ ಸಂಭ್ರಮ, ನಾಮಕರಣ, ಉಪನಯನ ಮುಂತಾದ ವರ್ಣನೆ ಮಾಡಿದ್ದಾರೆ. ಸಕಲ ವಿದ್ಯೆ ಕಲಿತ ರಾಮ, ಲಕ್ಷ್ಮಣರು ವಿಶ್ವಾಮಿತ್ರರ ಯಜ್ಞಕ್ಕೆ ಸಹಕರಿಸಿ, ಅಹಲ್ಯೆಯ ಶಾಪ ವಿಮೋಚನೆ ಮಾಡಿ

ಶಿವಧನಸ್ಸನ್ನು ಮುರಿದು ಸೀತೆಯನ್ನು ವಿವಾಹವಾದದ್ದನ್ನು ಹೇಳುತ್ತಾರೆ. ಸೀತೆಯನ್ನು ರಾಮನೊಡನೆ ಕಳುಹಿಸುವಾಗ ಜನಕ ರಾಜನು ತನ್ನ ಮಗಳಿಗೆ ಪತಿವ್ರತಾ ಧರ್ಮ ತಿಳುಹುತ್ತಾನೆ.

ಅರುಣೋದಯದಲ್ಲೆದ್ದು ಪತಿಯ ಪಾದಕ್ಕೆರಗು
ಅರಿತು ಅತ್ತೆಯರ ಮಾವಂದಿರನು ಉಪಚರಿಸು ।
ಗುರುಹಿರಿಯರನ್ನು ಸೇವಿಸಿ ಧನ್ಯಳಾಗುತ್ತ
ತರಳರಂದದಿ ನೋಡು ಪುರ ಪ್ರಜೆಗಳನ್ನು [32]

ರಾಮನಿಗೆ ಪಟ್ಟಾಭಿಷೇಕ ಮಾಡಲು ದಶರಥ ನಿರ್ಧರಿಸಿದಾಗ ಕೈಕೇಯಿಯ ಕುಟಿಲತೆಯಿಂದ ರಾಮ ವನವಾಸಕ್ಕೆ ತೆರಳುತ್ತಾನೆ. ರಾಮ, ಸೀತೆ, ಲಕ್ಷ್ಮಣರು ವನದಲ್ಲಿ ಸಂಚರಿಸುತ್ತ ಪಂಚವಟಿಗೆ ಬರುತ್ತಾರೆ. ಅಲ್ಲಿ ಶೂರ್ಪನಖಿಯ ಪ್ರಸಂಗ ನಡೆದು ಅವಳು ರಾವಣನ ಬಳಿ ಬಂದು ಅವನನ್ನು ಸೀತೆಯನ್ನು ಕದ್ದು ತರಲು ಪ್ರಚೋದಿಸುತ್ತಾಳೆ.

ಆತನ್ನ ಕುಲವಧು ಅತಿ ಚೆಲುವೆ । ನೀನೀಗ
ಪ್ರೀತನಾಗಿ ಅವಳ ಕೂಡಯ್ಯ [33]

ಸೀತೆಯನ್ನು ರಾವಣ ಅಪಹರಿಸಿ ಅಶೋಕವನದಲ್ಲಿರಿಸುತ್ತಾನೆ. ಇತ್ತ ರಾಮ ಹನುಮಂತನ ಸಖ್ಯ ಬೆಳೆಸಿ ಸೀತಾನ್ವೇಷಣೆ ಪ್ರಾರಂಭಿಸುತ್ತಾನೆ. ಹನುಮಂತ ಲಂಕೆಯಲ್ಲಿ ಹುಡುಕುತ್ತಿರುವಾಗ ಮಂಡೋದರಿಯನ್ನು ಕಂಡು ಸೀತೆಯೆಂದು ತಿಳಿದರೂ ಪಾದದ ಕಾಕರೇಖೆಯನ್ನು ಕಂಡು

ವೀರಾಂಗನೆ ವೈದೇಹಿ ಪಾದದಲಿ
ಚಾರುಪದ್ಮ ರೇಖೆಯ ಗುರುತೆಂದನು [34]

ಶ್ರೀರಾಮನ ಮಡದಿ ಜಾನಕಿಯನ್ನು ಅಶೋಕವನದಲ್ಲಿ ಕಂಡು ರಾಮನ ಮುದ್ರಿಕೆ ಒಪ್ಪಿಸುತ್ತಾನೆ. ಅಶೋಕವನವನ್ನು ಧ್ವಂಸ ಮಾಡಿ, ಸೀತೆಯಿಂದ ಚೂಡಾಮಣಿಯನ್ನು ತಂದು ರಾಮನಿಗೊಪ್ಪಿಸುತ್ತಾನೆ. ರಾಮ ವಾನರ ಸೇನೆಯ ಸಹಾಯದಿಂದ ಯುದ್ಧ ಗೆದ್ದು ಸೀತೆಗೆ ಅಗ್ನಿ ಪರೀಕ್ಷೆ ಒಡ್ಡುತ್ತಾನೆ. ಅಗ್ನಿ ಪರೀಕ್ಷೆ ಗೆದ್ದು ಬಂದ ಸೀತೆಯೊಡನೆ ಅಯೋಧ್ಯೆಗೆ ಬಂದು ರಾಮನು ತನ್ನ ತಮ್ಮ ಭರತನನ್ನು ಹರ್ಷಪಡಿಸುತ್ತಾನೆ. ಶ್ರೀರಾಮನ ಪಟ್ಟಾಭಿಷೇಕದೊಂದಿಗೆ ಈ ಕಾವ್ಯ ಮುಕ್ತಾಯವಾಗುತ್ತದೆ.

ಶ್ರೀರಾಮ ಪಾರಿಜಾತ:

ಶ್ರೀರಾಮ ಪಾರಿಜಾತದ ಕರ್ತೃ ಡಾ॥ ಎನ್.ಜಿ. ವಿಜಯಲಕ್ಷ್ಮೀ ರಾಘವೇಂದ್ರಾಚಾರ್ಯ. ಶ್ರೀರಾಮ ಪಾರಿಜಾತವು ಸೀತಾರಾಮರ ಕಲ್ಯಾಣೋತ್ಸವವನ್ನು ವಿವರಿಸುವ ಕೃತಿ. ಲೇಖಕಿಯೇ ಹೇಳುವಂತೆ ಈ ಕೃತಿ

ಅನಂತಾದ್ರೀಶರ 'ವೆಂಕಟೇಶ ಪಾರಿಜಾತ'ದ ಹಾದಿಯಲ್ಲಿ ಸಾಗಿರುವ ರಚನೆ. ಅಲ್ಲಿಯಂತೆಯೇ ಇಲ್ಲಿಯೂ ಪದ್ಯ ಹಾಗೂ ವಚನಗಳ ಮಿಶ್ರಣ ಕಂಡು ಬರುತ್ತದೆ. ನಾಲ್ಕು ಅಧ್ಯಾಯಗಳಲ್ಲಿ ವಿವಾಹಕಾಲದ ಆಚರಣೆಗಳ ವಿಶೇಷ ವಿವರಗಳಿವೆ. ಈ ಖಂಡ ಕಾವ್ಯವು ರಾಗ-ತಾಳಯುಕ್ತ ಹಾಡುಗಳಲ್ಲಿ ರಚಿತವಾಗಿದೆ. ವರ್ಣನೆಗೆ, ಸಂಭಾಷಣೆಗೆ ಹಾಡುಗಳನ್ನೂ, ವಚನವನ್ನು ನಿರೂಪಣೆಗೂ ಬಳಸಿದ್ದಾರೆ. ರಾಮನ ಜನನ, ಬಾಲ್ಯ, ವಿಶ್ವಾಮಿತ್ರರೊಂದಿಗೆ ಪಯಣ, ಸೀತಾ ವೃತ್ತಾಂತ ಇವುಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿ ಸೀತಾ ಕಲ್ಯಾಣಕ್ಕೆ ಹೆಚ್ಚು ಮಹತ್ವ ನೀಡಿದ್ದಾರೆ.

ಮೊದಲನೆಯ ಅಧ್ಯಾಯದಲ್ಲಿ ಶ್ರೀರಾಮನ ಜನನ ಬಾಲ್ಯ, ವಿಶ್ವಾಮಿತ್ರರೊಡನೆ ಹೊರಟದ್ದನ್ನು ಹೇಳಿ ರಾಮನ ಸಾಹಸಗಳ ವರ್ಣನೆ ಮಾಡಿದ್ದಾರೆ.

ಎರಡನೆಯ ಅಧ್ಯಾಯದಲ್ಲಿ ಜನಕ ಮಹಾರಾಜನ ಅರಮನೆಯ ವರ್ಣನೆಯಿದೆ. ವಿಶ್ವಾಮಿತ್ರರೊಡನೆ ಮಿಥಿಲೆಗೆ ರಾಮ ಲಕ್ಷ್ಮಣರು ಬರುತ್ತಾರೆ. ಶಿವಧನಸ್ಸನ್ನು ಮುರಿಯುವ ಪಂಥ ಒಡ್ಡಿದ ಜನಕರಾಜನ ಅರಮನೆಗೆ ಬಂದಾಗ ಶಿವಧನಸ್ಸಿನ ವರ್ಣನೆ ಮಾಡಿದ್ದಾರೆ.

ಬಲ್ಲಿದ ರಾಜರು ಮಲ್ಲರು ವಲ್ಲಭರು ।
ಬಿಲ್ಲನು ನೋಡಲು ಎಲ್ಲರು ಬಂದರು ॥
ಬಿಲ್ಲಿನ ಬೃಹದಾಕಾರವ ಕಂಡರು ।
ಬಲ್ಲೆವು ಹೆದೆ ಏರಿಸುವೆವು ಎಂದರು [35]

ಮೂರನೆಯ ಅಧ್ಯಾಯದಲ್ಲಿ ಸೀತೆ ಭೂಮಿಯಲ್ಲಿ ದೊರೆತದ್ದು, ಊರ್ಮಿಳೆಯ ಜನನ, ಜನಕನ ವಂಶಾವಳಿಯ ವಿವರಗಳಿವೆ.

ನಾಲ್ಕನೆಯ ಅಧ್ಯಾಯದಲ್ಲಿ ರಾಜಧಾನಿಯ ಅಲಂಕಾರ, ವಾದ್ಯ ವೈಭವ, ನರ್ತನ, ಕಾಣಿಕೆ, ಕೊಡುಗೆ, ದಶರಥನ ಪರಿವಾರಕ್ಕೆ ನೀಡಿದ ಸತ್ಕಾರಗಳ ವಿವರಣೆಯಿದೆ. ನಂತರ ವಿವಾಹದಲ್ಲಿ ನಡೆಯುವ ನಾನಾ ಕಾರ್ಯಗಳ ವಿಸ್ತಾರವಾದ ವರ್ಣನೆಯಿದೆ. ಭಾರತೀಯ ವಿವಾಹದ ರೀತಿ ನೀತಿಗಳನ್ನು ಸುಂದರವಾಗಿ ಸೀತಾರಾಮರ ಕಲ್ಯಾಣದಲ್ಲಿ ಚಿತ್ರಿಸಿದ್ದಾರೆ. ಸೀತಾರಾಮರ ಕಲ್ಯಾಣ ನಡೆದದ್ದು ಲೋಕ ಕಲ್ಯಾಣಕ್ಕಾಗಿ, ವಿಶ್ವ ವಿಡಂಬನಾರ್ಥವಾಗಿ ಎಂದು ಕವಯತ್ರಿ ಹೇಳುತ್ತಾರೆ. ಮದುವೆ ವಿವರಗಳನ್ನು ನಿರೂಪಿಸುವಲ್ಲಿ ಕವಯತ್ರಿಗಿರುವ ಶಾಸ್ತ್ರ ಜ್ಞಾನ, ತಲ್ಲೀನತೆ ಎದ್ದು ಕಾಣುತ್ತದೆ.

ಮೃಗ ಸಂಧಿ:

ಮುಳಿಯ ಮೂಕಾಂಬಿಕೆ ರಾಮಾಯಣದ ಮಾಯಾ ಜಿಂಕೆಯ ಪ್ರಸಂಗವನ್ನು 'ಮೃಗ ಸಂಧಿ' ಎಂದು ಚಿತ್ರಿಸಿದ್ದಾರೆ. ಕಥೆ ದೇವತೆಗಳದ್ದೇ ಆದರೂ ರಾಗದ್ವೇಷಗಳುಳ್ಳ ಮಾನವರಂತೆಯೇ ಪಾತ್ರಗಳು ವರ್ತಿಸುತ್ತವೆ. ಈ ಕೃತಿಯು ರಾಮ–ಸೀತೆಯರ ಸಂಭಾಷಣ ರೂಪದಲ್ಲಿದೆ. ಇದು ಪೂರ್ಣವಾಗಿ ದೊರೆತಿಲ್ಲ. ಕಥೆ ಅರ್ಧದಲ್ಲೇ ನಿಲ್ಲುತ್ತದೆ. ರಾವಣನ ಸಂಹಾರದ ನಂತರ ರಾಮ ಸೀತೆಯರು ಒಂದಾದ ಬಳಿಕ ಸೀತೆ ಹಿಂದಿನ ದಿನಗಳನ್ನು ನೆನೆಸಿಕೊಳ್ಳುತ್ತಾಳೆ. ರಾಮನೆದುರು ತನ್ನ ತಪ್ಪುಗಳನ್ನು ಒಪ್ಪಿಕೊಳ್ಳುತ್ತಾಳೆ.

ಜಾತಿ ಮಾಣಿಕದ ಮೃಗವೆಂದು ಬಯಸೀದೆ
ರೀತಿಯನರಿಯದೆ ರಾಘವ । ರಕ್ಕಸನು
'ಲಕ್ಷ್ಮಣ' ಎನುತ ಕೂಗುತಲಿರೆ । ದುಃಖಿಸುತ್ತಿದ್ದೆನು ರಾಘವ [36]

ಸೀತೆ ಲಕ್ಷ್ಮಣನಿಗೆ ರಾಮನ ಸಹಾಯಕ್ಕೆ ಹೋಗಲು ಹೇಳಿದಾಗ ಲಕ್ಷ್ಮಣ ಗೆರೆ ಎಳೆದು ಅದನ್ನು ದಾಟದಿರಲು ಹೇಳುತ್ತಾನೆ. ಕಪಟದಿಂದ ರಾವಣ ಸೀತೆಯನ್ನು ಹೊತ್ತೊಯ್ಯುತ್ತಾನೆ. ರಾವಣ ತನ್ನನ್ನು ಪೀಡಿಸಿದ ಬಗೆಯನ್ನು ಹೇಳುತ್ತಾಳೆ. ಧೀರ ರಾಮನನ್ನು ಬಿಟ್ಟು ಅಸುರನ್ನ ಸೇರಿದವಳೆಂಬ ಅಪಕೀರ್ತಿ ಬಂತೆಂದು ಹಲುಬುತ್ತಾಳೆ. ರಾಮ ಅವಳನ್ನು ಸಂತೈಸಿ ತನಗೂ ಬಂದ ಅಪವಾದಗಳ ಬಗ್ಗೆ ಹೇಳುತ್ತಾನೆ. ತಾಯಿಯ ಮಾತಿಗೆ ಬೆಲೆಕೊಡುವವನೆಂದು, ಪತ್ನಿಯನ್ನು ರಕ್ಕಸನ ಪಾಲು ಮಾಡಿದವನೆಂದು ತನಗೆ ಅಪಕೀರ್ತಿ ಬಂತೆಂದು ತಿಳಿದು ಸಂತೈಸುತ್ತಾನೆ. ಇಲ್ಲಿಗೆ ಈ ಕಾವ್ಯ ಮುಗಿದಿದ್ದು ಪೂರ್ತಿ ಕತೆ ತಿಳಿಯುವುದಿಲ್ಲ.

ಶ್ರೀರಾಮ ಕಥಾ ರತ್ನ ಮಂಜರಿ:

ಶ್ರೀರಾಮ ಕಥಾ ರತ್ನ ಮಂಜರಿ, ಇದನ್ನು ಬರೆದವರು ಮಂಜುಳಾ ಸುಬ್ಬರಾವ್. ಈ ಕೃತಿಯನ್ನು ಏಳು ಕಾಂಡಗಳಲ್ಲಿ 1908 ಪದ್ಯಗಳನ್ನೊಳಗೊಂಡು ರಚಿಸಿದ್ದಾರೆ. 'ಷಟ್ಪದಿ ರಾಜ' ಎನಿಸಿದ ಭಾಮಿನೀ ಷಟ್ಪದಿಯಲ್ಲಿ ಈ ಕೃತಿ ರಚಿಸಲಾಗಿದೆ. ಮೂಲ ರಾಮಾಯಣಕ್ಕೆ ಅನುಸಾರಿಯಾಗಿ ಇದನ್ನು ಬರೆದಿದ್ದಾರೆ. ಗುರುಭಕ್ತಿ, ತತ್ವ ನಿರೂಪಣೆ, ಕತೆಯ ತಾತ್ವಿಕತೆ, ಭಾಷಾ ಸರಳತೆ, ಪದಲಾಲಿತ್ಯ, ಛಂದಸ್ಸಿನ ಓಟ ಗಮನಾರ್ಹ ಅಂಶಗಳು.

ಈ ಕೃತಿಯಲ್ಲಿ ಕವಯತ್ರಿ ರಾಮ ಭಕ್ತಿಯನ್ನು ಮುಖ್ಯವಾಗಿ ಪ್ರತಿಪಾದಿಸಿದ್ದಾರೆ. ತತ್ವ ವಿಚಾರಗಳು, ಕಥೆಯ ಭಾಗದಲ್ಲಿ ಶಾಸ್ತ್ರದ ರಹಸ್ಯ ಪ್ರಮೇಯಗಳನ್ನು ಬೆರೆಸಿ ಈ ಕೃತಿ ರಚಿಸಿದ್ದಾರೆ.

ಸುಂದರಕಾಂಡದ ಹನುಮನ ವರ್ಣನೆ, ವರ್ಷ ಋತು ವರ್ಣನೆಗಳು ಸಂದರ್ಭೋಚಿತವಾಗಿ ಬಂದಿವೆ. ಹನುಮಂತನನ್ನು ವರ್ಣಿಸುವ ರೀತಿ ಗಮನಾರ್ಹವಾಗಿದೆ.

ಲಕ್ಷಣವಂತ ಸಂತ ಸುಮಂತ
ಲಕ್ಷಣಪತಿ ಭಂಟ ಬಲವಂತ
ಲಕ್ಷ್ಮಣಾಗ್ರಜಗೆ ನೀನಂಟ ಬಹುತುಂಟ ಶಾಂತಾ
– – – – – – – – – – – – – – – [37]

ಇಂತಹ ಅನೇಕ ವರ್ಣನೆಗಳನ್ನು ಈ ಕೃತಿಯಲ್ಲಿ ಕಾಣಬಹುದಾಗಿದೆ. ಪ್ರತಿ ಪದ್ಯವೂ, ಸೃಜನಶೀಲತೆ, ವಿನೂತನತೆಗಳಿಂದ ಕೂಡಿದೆ. ಭಾಮಿನಿ ಷಟ್ಪದಿಯ ಪ್ರಸಿದ್ಧ ಕಾವ್ಯಗಳ ಅನುಕರಣೆ ಇಲ್ಲದಿರುವುದು ಇಲ್ಲಿನ ವೈಶಿಷ್ಟ್ಯ. ನುಡಿಗಳ ಪ್ರಾಸ, ಭಾವ ಗಮನ ಸೆಳೆಯುತ್ತವೆ. ಸ್ವರ ತಾಳಗಳಿಗೆ ಹೊಂದಿಕೆಯಾಗಬಹುದಾದಂತಹ ಸರಳ ರಚನೆ ಇದಾಗಿದೆ.

ಚಂದೂಬಾಯಿ ನಾಯಕರವರು ಶ್ರೀರಾಮದೇವರ ಹಾಡು ಎಂಬ ದೀರ್ಘ ಕೃತಿ ರಚಿಸಿದ್ದು 59 ನುಡಿಗಳಲ್ಲಿದೆ. ರಾಮಾಯಣದ ಕಥೆಯನ್ನು ಹಾಡಿನ ರೂಪದಲ್ಲಿ ರಚಿಸಿದ್ದಾರೆ. ಉತ್ತರ ರಾಮಾಯಣದ ಲವಕುಶರಿಗೆ ಪಟ್ಟ ಕಟ್ಟುವ ಸಂದರ್ಭವನ್ನು ಇದರಲ್ಲಿ ಸೇರಿಸಿಕೊಂಡು ರಚನೆ ಮಾಡಿದ್ದಾರೆ.

ಮಹಾಭಾರತ ಪ್ರಸಂಗಗಳು:

ಮಹಾಕಾವ್ಯಗಳಲ್ಲೊಂದಾದ ಮಹಾಭಾರತ ಪಂಚಮವೇದವೆಂದು ಹೆಸರಾಗಿದೆ. ಮಹಾಭಾರತದಲ್ಲಿ ಅನೇಕ ಕಥೆ–ಉಪಕಥೆಗಳಿವೆ. 18 ಪರ್ವಗಳ ಕಥಾಭಾಗಗಳನ್ನು ಅನುಸರಿಸಿ ದಾಸ ಮಹಿಳೆಯರು ಖಂಡ ಕಾವ್ಯಗಳನ್ನು ರಚಿಸಿದ್ದಾರೆ. ಮಹಾಭಾರತವು ಹರಿಕಥೆ, ಯಕ್ಷಗಾನ ಬಯಲಾಟಗಳಿಗೆ ಮತ್ತು ದಾಸ ಸಾಹಿತ್ಯಕ್ಕೂ ಸ್ಫೂರ್ತಿ ನೀಡಿದೆ. ಮೂಲ ಕಥೆ ಮಹಾಭಾರತದ್ದಾದರೂ ಮಹಿಳಾ ದಾಸರು ವೈವಿಧ್ಯಪೂರ್ಣವಾಗಿ ಬಳಸಿಕೊಂಡಿದ್ದಾರೆ. ಮಹಾಭಾರತದ ವಿವಿಧ ಪ್ರಸಂಗಗಳನ್ನು ದೀರ್ಘ ಕೃತಿಗಳ ರೂಪದಲ್ಲಿ ತಮ್ಮದೇ ರೀತಿಯಲ್ಲಿ ವಿವರಿಸುತ್ತಾರೆ.

ನಳ ಚರಿತ್ರೆ:

ಮಹಾಭಾರತದ ಅರಣ್ಯಪರ್ವದಲ್ಲಿ 'ನಳೋಪಾಖ್ಯಾನ' ಕಥೆ ಬರುತ್ತದೆ. ಈ ಕಥೆಯನ್ನು ಚೌಂಡರಸ ಚಂಪೂವಿನಲ್ಲಿ ರಚಿಸಿದ್ದಾನೆ. ಕನಕದಾಸರು 481 ಷಟ್ಪದಿಗಳಲ್ಲಿ 'ನಳಚರಿತ್ರೆ' ರಚಿಸಿದ್ದಾರೆ. ಮಹಿಳಾ ದಾಸರಾದ ಭೀಮವ್ವ 105 ಧ್ವನಿಗಳಲ್ಲಿ ಮತ್ತು 104 ವಚನಗಳಲ್ಲಿಯೂ, ದಡಿಗದ ಲಕ್ಷ್ಮೀನರಸಮ್ಮನವರು

ಗೋವಿನ ಹಾಡಿನ ಮಟ್ಟಿನಲ್ಲಿ 195 ದ್ವಿಪದಿಗಳಲ್ಲೂ, ಮಂಜುಳಾಸುಬ್ಬರಾವ್‌ರವರು 131 ಷಟ್ಪದಿಗಳಲ್ಲೂ ಮೂಡಿಸಿದ್ದಾರೆ. ಇವರ ಕೃತಿಗಳು ಮೂಲ ಭಾರತದಲ್ಲಿರುವಂತೆಯೇ ಇದ್ದರೂ ಭೀಮವ್ವ ವರ್ಣನೆಯಲ್ಲಿ ಕನಕದಾಸರನ್ನು, ಲಕ್ಷ್ಮೀನರಸಮ್ಮ ಮತ್ತು ಮಂಜುಳಾ ಸುಬ್ಬರಾವ್ ಭೀಮವ್ವನವರನ್ನು ಅನುಸರಿಸಿದ್ದಾರೆ. ವರ್ಣನಾ ಕೌಶಲ್ಯ, ಆಡುಮಾತಿನ ಸರಳತೆ ಸಹಜತೆಗಳಿಂದ ಸ್ವಂತ ಪ್ರತಿಭೆ ಮೆರೆದಿದ್ದಾರೆ. ಕನಕದಾಸರು ರೋಮಶ ಮುನಿ ಧರ್ಮರಾಯನಿಗೆ ಈ ಕತೆಯನ್ನು ಹೇಳಿದನೆನ್ನುತ್ತಾರೆ. ಭೀಮವ್ವ ಮೊದಲಾದ ದಾಸ ಮಹಿಳೆಯರು ಬೃಹದಶ್ವ ಮುನಿಯು ಧರ್ಮರಾಯನಿಗೆ ನಳಕಥೆಯನ್ನು ಹೇಳಿದರೆನ್ನುತ್ತಾರೆ. ಭೀಮವ್ವನವರ ಪ್ರಭಾವ ಲಕ್ಷ್ಮೀನರಸಮ್ಮನವರ ಮೇಲೆ ಗಾಢವಾಗಿದೆ. ಕೆಲವು ಕಡೆ ಭೀಮವ್ವನವರ ಮಾತುಗಳನ್ನೇ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಲಕ್ಷ್ಮೀನರಸಮ್ಮ ಬಳಸಿಕೊಂಡಿದ್ದಾರೆ.

ನಳನ ಪರಿಚಯ, ದಮಯಂತಿಯ ಪರಿಚಯ, ಹಂಸದೌತ್ಯ, ಸ್ವಯಂವರದಲ್ಲಿ ದೇವತೆಗಳನ್ನು ಬಿಟ್ಟು ನಳನನ್ನು ವರಿಸಿದ್ದು, ಕಲಿಯ ಪ್ರವೇಶ, ನಳದಮಯಂತಿಯರ ಅಗಲಿಕೆ, ಪುನರ್ಮಿಲನ, ಇದು ಸ್ಥೂಲವಾದ ಕಥಾಹಂದರ. ದಾಸ ಮಹಿಳೆಯರು ಆಡುಮಾತಿನಲ್ಲಿ ನಿರರ್ಗಳವಾಗಿ ತಮ್ಮದೇ ರೀತಿಯಲ್ಲಿ ಇದನ್ನು ನಿರೂಪಿಸಿದ್ದಾರೆ.

ನಿಷಧ ದೇಶದ ಅಧಿಪತಿಯಾದ ವೀರಸೇನನ ಮಗ ನಳರಾಯ. ಆತನ ಗುಣ, ಚೆಲುವನ್ನು ದಾಸ ಮಹಿಳೆಯರು ವರ್ಣಿಸುತ್ತಾರೆ. ನಳನ ಆದರ್ಶ ಗುಣಗಳನ್ನು ಭೀಮವ್ವ ಹೇಳುತ್ತಾರೆ. ಗಂಭೀರನಾದ ಗುಣಗಳ ಗಣಿಯಾದ ನಳ

ಸತ್ಯ ಪ್ರತಿಜ್ಞೆ ಮೀರುವನಲ್ಲ ನಳರಾಯ
ಕೊಟ್ಟ ಭಾಷೆಗಳ ತಪ್ಪುವನಲ್ಲವೊ
ಅತ್ಯಂತ ಹರುಷದಿಂದಾಗ ತಾ ಭೀಮೇಶ–
ಕೃಷ್ಣನ್ನ ಭಜಿಸಿ ಭಕ್ತಿಯಲಿದ್ದನು [38]

ನಳನ ಗುಣಗಳನ್ನು ಕೇಳಿ ದಮಯಂತಿ ಆತನನ್ನೇ ವರಿಸಲು ಆಶಿಸಿದಳು. ಹಾಗೆಯೇ ದಮಯಂತಿಯ ರೂಪರಾಶಿಯನ್ನು ಕೇಳಿದ್ದ ನಳ ಅವಳನ್ನೇ ಮಡದಿಯಾಗಿಸುವಂತೆ ಕೃಷ್ಣನಲ್ಲಿ ಬೇಡುತ್ತಿದ್ದನು. ದಮಯಂತಿಯ ರೂಪ ವರ್ಣನೆಯಲ್ಲಿ ಭೀಮವ್ವ, ದಡಿಗದ ಲಕ್ಷ್ಮೀನರಸಮ್ಮ ಮತ್ತು ಮಂಜುಳಾ ಸುಬ್ಬರಾವ್ ಒಂದೇ ರೀತಿ ಅನುಸರಿಸಿದ್ದಾರೆ. ವಿದರ್ಭ ದೇಶಾಧಿಪತಿಯಾದ ಭೀಮರಾಯನ ಮಗಳಾಗಿ ಜನಿಸಿದ ದಮಯಂತಿಯ ಸೌಂದರ್ಯವನ್ನು ಲಕ್ಷ್ಮೀನರಸಮ್ಮ

ನಡೆಗೆ ಮದಗಜ ನಾಚಿಪೋಗಲು । ನುಡಿಗೆ ಗಿಳಿಗಳು ಇಂಪುಗೊಂಡವು ।
ನಡುವುನೋಡುತ ಸಿಂಹನಾಚಲು । ತರಳೆ ಬೆಳೆಯುತಲಿರ್ದಳು [39]

ಭೀಮವ್ವನವರೂ ಹೆಚ್ಚು ಕಡಿಮೆ ಹೀಗೆಯೇ ವರ್ಣಿಸಿದ್ದಾರೆ.

ನಳನು ಬೇಟೆಗೆ ಹೋದಾಗ ಹಂಸ ಪಕ್ಷಿಯನ್ನು ಹಿಡಿದಿದ್ದನೆಂದು ಈ ದಾಸ ಮಹಿಳೆಯರು ಹೇಳುತ್ತಾರೆ. ಇದೇ ವಿಚಾರ ನಳ ಚಂಪೂ, ನಳ ಚರಿತ್ರೆಗಳಲ್ಲಿಯೂ ಬರುತ್ತದೆ. ಹಂಸ ಪಕ್ಷಿಯ ವರ್ಣನೆಯೂ ಆಕರ್ಷಕವಾಗಿದೆ. ನಳ ರಾಯನಿಗೆ ಕಲಿ ಪ್ರವೇಶದಿಂದ ಪುಷ್ಕರನೊಡನೆ ಪಗಡೆಯಾಡಿ ಸೋಲುತ್ತಾನೆ. ಆಗ ದಮಯಂತಿಯ ಅಳಲು, ಕಾಡಿನಲ್ಲಿ ನಳ–ದಮಯಂತಿಯರ ಕಷ್ಟ ಪರಂಪರೆ, ನಳ ದಮಯಂತಿಯನ್ನು ಬಿಟ್ಟು ಹೋಗುವುದು, ಇತ್ಯಾದಿ ಸಂದರ್ಭಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಚೆಲುವನ್ನು ವರ್ಣಿಸುವಷ್ಟೇ ಸಮರ್ಥವಾಗಿ ಕಾರ್ಕೋಟಕನಿಂದ ಕಚ್ಚಿಸಿಕೊಂಡ ನಳನ ವಿಕಾರ ರೂಪವನ್ನು ವರ್ಣಿಸುತ್ತಾರೆ. ವಿಕಾರ ರೂಪದವನಾದ ನಳನನ್ನು ದಮಯಂತಿ ಉಪಚರಿಸುವ ರೀತಿಯೂ ಗಮನಾರ್ಹ.

ದಮಯಂತಿ ಮತ್ತೆ ಸ್ವಯಂವರದ ನಾಟಕವಾಡಿ ಋತುಪರ್ಣ ರಾಜನೊಡನೆ ಬಂದ ನಳನನ್ನು ಗುರುತಿಸುತ್ತಾಳೆ. ಕೇಶಿನಿಯೆಂಬ ದಾಸಿಯ ಸಹಾಯದಿಂದ ಬಾಹುಕನಾಗಿ ಬದಲಾಗಿದ್ದ ನಳನನ್ನು ಪರಿಪರಿಯಾಗಿ ಪರೀಕ್ಷಿಸಿ ತನ್ನ ಪತಿ ಎಂದು ದೃಢಪಡಿಸಿಕೊಳ್ಳುತ್ತಾಳೆ. ಋತುಪರ್ಣರಾಜನಿಂದ 'ಅಶ್ವಹೃದಯ' ವಿದ್ಯೆ ಕಲಿತ ತಕ್ಷಣ ಕಲಿಪ್ರಭಾವ ನಶಿಸಿ ನಳ ಹಿಂದಿನ ರೂಪ ಪಡೆಯುತ್ತಾನೆ. ಪುನಃ ಪುಷ್ಕರನೊಡನೆ ಲೆತ್ತವಾಡಿ ರಾಜ್ಯ, ಕೋಶ ಎಲ್ಲವನ್ನೂ ಪಡೆದು ದಮಯಂತಿ, ಮಕ್ಕಳನ್ನು ಕೂಡಿಕೊಳ್ಳುತ್ತಾನೆ. ಭೀಮವ್ವ ಮೂಲಭಾರತದಲ್ಲಿಲ್ಲದ ಚ್ಯವನ ಋಷಿಯ ಕಥೆಯನ್ನು ಹೇಳುತ್ತಾರೆ. ಅದು ಸಹಜವಾಗಿ ಮೂಲವೆನ್ನುವಷ್ಟು ಪರಿಣಾಮಕಾರಿಯಾಗಿದೆ. ನಳದಮಯಂತಿ ಚರಿತ್ರೆಯನ್ನು ಕೇಳಿದರೆ ದೊರಕುವ ಪುಣ್ಯವನ್ನು ಫಲಶ್ರುತಿ ವಿಶೇಷವನ್ನು ತಿಳಿಸಿದ್ದಾರೆ. 'ಕಲಿಯ ಬಾಧೆಯೆಂಬೋದೇಳೇಳು ಜನುಮ ಜನುಮಕ್ಕೂ ಬಾರದು' ಎಂದು ಹೇಳಿ ಈ ಕಥೆ ಕೇಳಿದರೆ 'ಭೀಮೇಶ ಕೃಷ್ಣ' ಒಲಿವ ಎನ್ನುತ್ತಾರೆ.

ಶಕುಂತಲಾ–ದುಷ್ಯಂತ ಮಹಾರಾಜನ ಹಾಡು:

ಇದು ಮಹಾಭಾರತದ ಕಥೆ. 61 ಧ್ವನಿ ವಚನಗಳಲ್ಲಿ ಭೀಮವ್ವ ಹೇಳಿದ್ದಾರೆ. ಕಾಳಿದಾಸನ ನಾಟಕವನ್ನು ನೋಡಿ ಕಥೆಯ ಸರಣಿಯನ್ನು ಬೆಳೆಸಿರುವಂತಿದೆ. ಮೂಲ ಭಾರತದಲ್ಲಿಲ್ಲದ, ಕಾಳಿದಾಸನ ನಾಟಕಗಳಲ್ಲಿನ ಪ್ರಸಂಗಗಳನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. "ಹಾಡಿನ ಆರಂಭ ಗಣಪತಿ–ಸರಸ್ವತಿ ಸ್ತೋತ್ರ ಮತ್ತು ಕಥೆಗೆ ಸಂಕ್ಷಿಪ್ತ ಪರಿಚಯವನ್ನು ಕೊಟ್ಟಿರುವುದು, ಸಂಧಿಯ ಆರಂಭಕ್ಕೆ ಒಳಗೊಂಡಿರುವ ವಿಷಯವನ್ನು ಭಾಮಿನಿ ಷಟ್ಪದಿಯ ಮೊದಲ ಪಾದದ ಮೂಲಕ ಹೇಳಿದ್ದಾಳೆ. ಇಲ್ಲಿನ ಗೇಯತೆಯ ಅಂಶದಿಂದ ಇದು ಹಾಡುಗಬ್ಬವೆನಿಸಿದೆ"[40] ವಿಶ್ವಾಮಿತ್ರನ ತಪಸ್ಸನ್ನು ಭಂಗಪಡಿಸಲು ಮೇನಕೆ ಇಂದ್ರನಿಂದ

ಪ್ರೇರಿತಳಾಗಿ ಬರುತ್ತಾಳೆ. ಮೇನಕೆ–ವಿಶ್ವಾಮಿತ್ರರಿಗೆ ಹೆಣ್ಣು ಮಗು ಜನಿಸುತ್ತದೆ. ಇಬ್ಬರೂ ಆ ಮಗುವನ್ನು ತ್ಯಜಿಸಿ ಹೊರಟುಹೋಗುತ್ತಾರೆ. ಆ ಮಗುವನ್ನು ದಟ್ಟಾರಣ್ಯದ ಪ್ರಾಣಿಪಕ್ಷಿಗಳು ಸಲಹುತ್ತವೆ. ಪ್ರಕೃತಿಯು ಆ ಶಿಶುವನ್ನು ರಕ್ಷಿಸಿದ ಚಿತ್ರಣವನ್ನು ಇಲ್ಲಿ ನೀಡುತ್ತಾರೆ. ಕಣ್ವ ಮಹರ್ಷಿಗಳು ಆ ಮಗುವನ್ನು ತಮ್ಮ ಆಶ್ರಮಕ್ಕೆ ಒಯ್ದು ಬೆಳೆಸುತ್ತಾರೆ.

ಶಾಕುಂತಲ ಹೆಸರಿನಿಂದ ಆ ಮಗು ಕಣ್ವರ ಸಾಕು ಮಗಳಾಗಿ ಬೆಳೆದು ದೊಡ್ಡವಳಾದಳು. ಒಮ್ಮೆ ಹಸ್ತಿನಾವತಿಯ ರಾಜ ದುಷ್ಯಂತ ಬೇಟೆಯಾಡುತ್ತಾ ಕಣ್ವರ ಆಶ್ರಮದ ಬಳಿ ಬರುತ್ತಾನೆ. ಎದುರಿಗೆ ಬಂದ ಇಬ್ಬರು ಬ್ರಾಹ್ಮಣರು ಕಣ್ವರ ಪುತ್ರಿ ಶಕುಂತಲೆಯ ಬಗ್ಗೆ ಹೇಳಿ

ಚಿತ್ರದಾಗಿನ ಗೊಂಬೆ ಚಿನ್ನದ
ಪುತ್ಥಳಿಯಂತ್ಹೊಳೆವಳು
ಪತ್ನಿಯಾದರೆ ನಿನ್ನ ಸರಿ
ಪುಣ್ಯಕ್ಕೆ ಜೋಡಿನ್ನಿಲ್ಲವೊ [41]

ಗಾಂಧರ್ವ ರೀತಿಯಲ್ಲಿ ದುಷ್ಯಂತ ಶಕುಂತಲೆಯನ್ನು ವರಿಸುತ್ತಾನೆ. ಹಸ್ತಿನಾವತಿಗೆ ಹಿಂತಿರುಗುವಾಗ ತನ್ನ ಉಂಗುರವನ್ನು ನೀಡಿ ಬೇಗನೆ ಕರೆಸಿಕೊಳ್ಳುವುದಾಗಿ ಹೇಳುತ್ತಾನೆ. ದೂರ್ವಾಸರಿಂದ ಶಕುಂತಲೆ ಶಾಪಗ್ರಸ್ತಳಾಗುತ್ತಾಳೆ. ಅವಳ ಗೆಳತಿಯರು ವಿಶಾಪವನ್ನು ಬೇಡಿಕೊಂಡಾಗ ದೂರ್ವಾಸರು ರಾಜ ತಾನು ಕೊಟ್ಟ ಉಂಗುರ ನೋಡಿದಾಗ ಶಕುಂತಲೆಯ ನೆನಪಾಗುವುದಾಗಿ ಹೇಳುತ್ತಾರೆ. ನಂತರ ಶಕುಂತಲೆಗೆ ಮಗ ಹುಟ್ಟುತ್ತಾನೆ.

ತಾಯಿ ಮಗನನ್ನು ಕಣ್ವರು ರಾಜನ ಬಳಿ ಕಳುಹಿಸಿದಾಗ ಅವನು ಶಾಪದ ಪ್ರಭಾವದಿಂದ ಅವಳನ್ನು ನಿರಾಕರಿಸುತ್ತಾನೆ. ಬೆಸ್ತನೊಬ್ಬ ಮತ್ತೆ ಉಂಗುರ ತಂದು ರಾಜನಿಗೆ ಮೀನಿನ ಹೊಟ್ಟೆಯಲ್ಲಿ ದೊರೆತದ್ದಾಗಿ ತಿಳಿಸಿದಾಗ ದುಷ್ಯಂತನಿಗೆ ಎಲ್ಲವೂ ನೆನಪಾಗುತ್ತದೆ. ನಂತರ ಪತ್ನಿ, ಪುತ್ರನನ್ನು ಸ್ವೀಕರಿಸಿ ಮಗ ಭರತನಿಗೆ ಪಟ್ಟಗಟ್ಟುತ್ತಾನೆ. ಶಾಪ ವೃತ್ತಾಂತ ಮೂಲ ಭಾರತದಲ್ಲಿಲ್ಲದಿದ್ದರೂ, ಕಾಳಿದಾಸನಿಂದ ಭೀಮವ್ವ ಅದನ್ನು ಸ್ವೀಕರಿಸಿದ್ದಾರೆ. ಹಾಗೆಯೇ ಕಾಳಿದಾಸನ ಕಾವ್ಯದ ಕೆಲವು ಅಂಶಗಳನ್ನು ಅವ್ವ ಕೈಬಿಟ್ಟಿದ್ದಾರೆ. "ಕಣ್ವರಿಗೆ ಶಕುಂತಲೆಯ ವಿವಾಹವಾಗಿ ಆಕೆ ಗರ್ಭಿಣಿಯಾಗಿರುವ ವೃತ್ತಾಂತ ಆಕಾಶವಾಣಿಯ ಮೂಲಕ ತಿಳಿಯುವುದು; ದುಷ್ಯಂತನಿಂದ ತಿರಸ್ಕೃತಳಾಗಿದ್ದ ಶಕುಂತಲೆಯನ್ನು ಮೇನಕೆ ಕರೆದೊಯ್ಯುವುದು; ಶಕುಂತಲೆಯ ಮಗನಿಗೆ ಸರ್ವದಮನನೆಂದು ಹೆಸರಿಸುವುದು; ದುಷ್ಯಂತ ಶಕುಂತಲೆಯರ ಪುನರ್ಮಿಲನ ಮಾರೀಚಾಶ್ರಮದಲ್ಲಿ ಆಗುವುದು ಈ ಕಾಳಿದಾಸನ ನಾಟಕದ ಕೆಲವು ಅಂಶಗಳನ್ನು ಅವ್ವ ಕೈ ಬಿಟ್ಟಿದ್ದಾಳೆ"[42]

ದ್ರೌಪದಿ ವಸ್ತ್ರಾಪಹರಣ:

ಮಂಜುಳಾ ಸುಬ್ಬರಾವ್, ಓರವಾಯಿ ಲಕ್ಷ್ಮೀದೇವಮ್ಮ ಮತ್ತು ಮುಳಿಯ ಮೂಕಾಂಬಿಕೆ, ಭೀಮವ್ವ ಈ ಬಗ್ಗೆ ಕೃತಿಗಳನ್ನು ರಚಿಸಿದ್ದಾರೆ. ಧರ್ಮರಾಯನ ಇಂದ್ರಪ್ರಸ್ಥದ ಮಯಸದನದಲ್ಲಿ ದ್ರೌಪದಿಯಿಂದ ತನಗೆ ಆದ ಅವಮಾನದಿಂದ ದುರ್ಯೋಧನ ಸಹನೆ ಕಳೆದುಕೊಳ್ಳುತ್ತಾನೆ. ತನ್ನ ಅಳಲನ್ನು ಶಕುನಿ, ಕರ್ಣರ ಮುಂದೆ ಹೇಳಿಕೊಳ್ಳುತ್ತಾನೆ. ಕರ್ಣ, ಶಕುನಿಯರ ಪ್ರಚೋದನೆಯಿಂದ ದುರ್ಯೋಧನ ತನ್ನ ತಂದೆ ಧೃತರಾಷ್ಟ್ರ ಒಪ್ಪದಿದ್ದರೂ ಧರ್ಮರಾಯನನ್ನು ದ್ಯೂತಕ್ಕೆ ಆಹ್ವಾನಿಸುತ್ತಾನೆ. ಶಕುನಿಯ ವಂಚನೆಯಿಂದ ಧರ್ಮರಾಯ ದ್ಯೂತದಲ್ಲಿ ತನ್ನ ಸರ್ವಸ್ವವನ್ನೂ, ತನ್ನ ತಮ್ಮಂದಿರನ್ನೂ, ದ್ರೌಪದಿಯನ್ನೂ ಪಣಕ್ಕಿಟ್ಟು ಸೋಲುತ್ತಾನೆ.

ದುರ್ಯೋಧನನ ಆದೇಶದಂತೆ ದುಶ್ಯಾಸನನು ದ್ರೌಪದಿಯನ್ನು ತುಂಬಿದ ಸಭೆಗೆ ಎಳೆ ತಂದು ಮುಡಿ ಹಿಡಿದು ಎಳೆದಾಡಿ ಅಣ್ಣನ ಮಾತಿನಂತೆ ಅವಳ ವಸ್ತ್ರವನ್ನು ಸೆಳೆಯುತ್ತಾನೆ.

ದ್ರೌಪದಿ ಎಲ್ಲರಲ್ಲಿ ಮೊರೆಯಿಟ್ಟರೂ ಯಾರೂ ಅವಳ ರಕ್ಷಣೆಗೆ ಬರುವುದಿಲ್ಲ. ಆಗ ಕೃಷ್ಣನನ್ನು ನೆನೆದ ದ್ರೌಪದಿಗೆ ಕೃಷ್ಣ ಅಕ್ಷಯಾಂಬರವಿತ್ತು ಮಾನ ರಕ್ಷಣೆ ಮಾಡುತ್ತಾನೆ. ಅವಳ ಮಹಿಮೆಯನ್ನು ಎಲ್ಲರೂ ಕೊಂಡಾಡುತ್ತಿರುವಾಗ ದ್ರೌಪದಿ

ಸರ್ವರೀಗಿದೂ ನ್ಯಾಯವೇನೋ ।
ಸಜ್ಜನರಾರಿಲ್ವೇನೋ । ದುರ್ಜನ
ಮಾಡುವ ಕಾರ್ಯವನ್ನು ಮರ್ಜಿಗೆ ಸರಿ ಹೋಗೋದೇನೂ ॥ ಪ ॥

ದ್ರೋಣಭ್ರೀಷ್ಮಾ ಕೃಪಾಚಾರ್ಯರೆಲ್ಲಾ ।
ಜಾಣರು ನೋಡಿ ಚರ್ಯಾ
ಖಳ ಮಾಡುವ ಕಾರ್ಯ ನೋಡೆ ಆಶ್ಚರ್ಯಾ [43]

ಎಂದು ಹೇಳಿ ಅತ್ತೆ ಗಾಂಧಾರಿ, ಅಕ್ಕ ಭಾನುಮತಿಯರನ್ನು 'ರಕ್ಕಸನ ಕಾರ್ಯ ಅಕ್ಕರವೇ ನಿಮಗೆ' ಎಂದು ಪ್ರಶ್ನಿಸುತ್ತಾಳೆ.

ದ್ರೌಪದಿಯ ದುಃಖವನ್ನು ಕಂಡು ಭೀಮ ದುಶ್ಯಾಸನನ ಒಡಲು ಬಗೆದು ಅವನ ರಕ್ತದಲ್ಲಿ ದ್ರೌಪದಿಯ ಮುಡಿ ತೋಯಿಸುವುದಾಗಿ ಶಪಥ ಮಾಡುತ್ತಾನೆ. ಈ ಸಂದರ್ಭದಲ್ಲಿ ಓರವಾಯಿ ಲಕ್ಷ್ಮೀದೇವಮ್ಮ ಒಂದು ಬದಲಾವಣೆ ಮಾಡಿಕೊಂಡಿದ್ದಾರೆ. ದ್ರೌಪದಿಯು ಎರಡನೇ ಬಾರಿ ಜೂಜಿಗೆ ಕುಳಿತು ಸಕಲ ಸಂಪತ್ತನ್ನೂ ಜಯಿಸುತ್ತಾಳೆ. ದ್ರೌಪದಿ ದುರ್ಯೋಧನನನ್ನು ದ್ಯೂತಕ್ಕೆ ಆಹ್ವಾನಿಸಿ ಅವನನ್ನು ಸೋಲಿಸುತ್ತಾಳೆ.

ಇದೇ ರೀತಿ ದ್ರೌಪದಿ ಲೆತ್ತವಾಡಿ ಜಯಿಸುವುದನ್ನು "ಬುಲಾಯಿ ಹಾಡುಗಳಲ್ಲಿ" ಕಾಣಬಹುದು. ಬುಲಾಯಿ ಹಾಡು ಒಂದು ಜನಪದ ಕಾವ್ಯ ಪ್ರಕಾರ. ಇವು ರಚಿತವಾಗಿರುವುದು ಅಜ್ಞಾನ ಕರ್ತೃಗಳಿಂದ. ಮೂಲ ಮಹಾಭಾರತದಲ್ಲಿರುವಂತೆ ಇಲ್ಲಿ ದ್ರೌಪದಿ ಸುಮ್ಮನೆ ಕೂಡುವುದಿಲ್ಲ. ತಾನೇ ಮತ್ತೆ ಜೂಜಾಡಿ ದುರ್ಯೋಧನನಿಂದ ಧರ್ಮರಾಜ ಕಳೆದುಕೊಂಡದ್ದನ್ನೆಲ್ಲ ಮತ್ತೆ ಹಿಂಪಡೆಯುತ್ತಾಳೆ. ಲೆತ್ತದಾಟದಲ್ಲಿ ತಾನು ದುರ್ಯೋಧನನನ್ನು ಮಣ್ಣು ಮುಕ್ಕಿಸಿ ಗೆದ್ದು ಬಂದುದಾಗಿ ಅಭಿಮಾನದಿಂದ ಹೇಳಿಕೊಳ್ಳುತ್ತಾಳೆ.

ಬಹುಶಃ ಓರವಾಯಿ ಲಕ್ಷ್ಮೀದೇವಮ್ಮನವರು ಇದರಿಂದ ಸ್ಫೂರ್ತಿ ಹೊಂದಿ ಈ ಬದಲಾವಣೆ ಮಾಡಿಕೊಂಡಿರಬಹುದು. ದ್ರೌಪದಿಯು ಸಭೆಯಲ್ಲಿ ಅನುಭವಿಸುವ ಯಾತನೆಯು ಕರುಣರಸಾಭಿವ್ಯಕ್ತಿಗೆ ಮತ್ತು ಭೀಮನ ಪ್ರತಿಜ್ಞೆ ಮಾಡುವ ಸಂದರ್ಭದಲ್ಲಿ ವೀರ ರಸದ ಅಭಿವ್ಯಕ್ತಿಯಾಗುತ್ತದೆ.

ದ್ರೌಪದಿ ಮತ್ತೆ ಎಲ್ಲವನ್ನೂ ಗೆಲ್ಲುವ ಪ್ರಸಂಗವನ್ನು ವಿಭಿನ್ನವಾಗಿ ಓರವಾಯಿ ಲಕ್ಷ್ಮೀದೇವಮ್ಮನವರು ಹೇಳಿದ್ದರೆ, ಮುಳಿಯ ಮೂಕಾಂಬಿಕೆಯವರು ದ್ರೌಪದಿಯು ಸಭೆಯಲ್ಲಿ ದಿಟ್ಟಳಾಗಿ ಪ್ರಶ್ನೆ ಮಾಡುವ, ಹಿರಿಯರಲ್ಲಿ ರಕ್ಷಿಸಲು ಮನವಿ ಮಾಡಿದ್ದು, ಸೀರೆ ರಾಶಿ ಸುಟ್ಟು ಬೂದಿಯಾದ, ಪ್ರತಿಜ್ಞೆ ಮಾಡಿದ ವೃತ್ತಾಂತಗಳನ್ನು ಹೇಳುವ ರೀತಿ ಗಮನಾರ್ಹವಾಗಿದೆ.

ಜೂಜಿನಲ್ಲಿ ರಾಜ್ಯ, ಕೋಶ, ತಮ್ಮಂದಿರು ಮತ್ತು ತನ್ನನ್ನೂ ಸೋತ ಯುಧಿಷ್ಠಿರ ಸತಿಯನ್ನು ಜೂಜಿಗಿಟ್ಟ ಪ್ರಸಂಗದಿಂದ ಕಾವ್ಯ ಆರಂಭವಾಗುತ್ತದೆ. ಸಭೆಗೆ ಬಂದ ದ್ರೌಪದಿಯನ್ನು ಕಂಡು ಕೌರವ

ಬಾರೆ ದ್ರೌಪದಿ ಸಾರೆ ಮಂಚಕೆ
ವಾರೆ ಕಣ್ಣಿನಿಂದ ಎನ್ನ ಸುಖವಗೊಳಿಪರೆ [44]

ಸಾರಿ ಬರಲು ತಾನೇನು 'ವಾರಕಾಂತೆಯೆ' ಎನ್ನುತ್ತಾಳೆ. ಇದರಿಂದ ದುರ್ಯೋಧನ ಮತ್ತೂ ಕುಪಿತನಾಗುತ್ತಾನೆ. ಮೂಕಾಂಬಿಕೆಯವರು ದುರ್ಯೋಧನನೂ ದ್ರೌಪದಿಯ ಸೆರಗು ಹಿಡಿದನೆಂದು ಹೇಳುತ್ತಾರೆ. ನಂತರ ದುಶ್ಯಾಸನನನ್ನು ಕರೆದು ಸೀರೆ ಸೆಳೆಯಲು ಆಜ್ಞಾಪಿಸುತ್ತಾನೆ. ಅತ್ತೆ ಗಾಂಧಾರಿ, ತಂಗಿ ಭಾನುಮತಿ, ದ್ರೋಣ, ಭೀಷ್ಮಾದಿಗಳನ್ನು ದ್ರೌಪದಿ ಪರಿಪರಿಯಿಂದ ಪ್ರಾರ್ಥಿಸುತ್ತಾಳೆ. ಯಾರೂ ಸಹಾಯಕ್ಕೆ ಬಾರದಾದಾಗ ಕೃಷ್ಣನನ್ನು ನೆನೆಯುತ್ತಾಳೆ. ಅಕ್ಷಯಾಂಬರ ನೀಡಿ ಕೃಷ್ಣ ದ್ರೌಪದಿಯ ಮಾನ ಸಂರಕ್ಷಣೆ ಮಾಡುತ್ತಾನೆ. ಬೆಟ್ಟದಂತೆ ಬಿದ್ದಿದ್ದ ಸೀರೆಯ ರಾಶಿಯನ್ನು ಹೊರಗೊಯ್ಯಲು ಪರಿಚಾರಕನಿಗೆ ಕೌರವ ಹೇಳಿದಾಗ ಅಗ್ನಿ ಕನ್ಯೆ ಪಾಂಚಾಲಿಯ ದೃಷ್ಟಿ ತಾಗಿ ಸೀರೆಗಳು ಸುಟ್ಟು ಬೂದಿಯಾಗುತ್ತವೆ.

ಮೂಲ ಭಾರತದಲ್ಲಿ ಭೀಮ ಪ್ರತಿಜ್ಞೆ ಮಾಡುತ್ತಾನೆ. ಮೂಕಾಂಬಿಕೆ ಇಲ್ಲಿ ದ್ರೌಪದಿ ಶೋಕಾವೇಶದಿಂದ ಪ್ರತಿಜ್ಞೆ ಮಾಡಿದಳೆನ್ನುತ್ತಾರೆ.

ಕೋಪದಿಂದ ಕೌರವಗೆ ಶಾಪವನ್ನು ಕೊಟ್ಟಳು
ಭೂಪ ಭೀಮಸೇನ ನಿನ್ ತೊಡೆಯ ಮುರಿದು ಬಿಸುಡಲಿ
ದುರುಳ ಕೇಳು ನಿನ್ನಯ, ಕರುಳ ಬಗೆದು ಎನ್ನಯ
ಶಿರದ ಮೇಲೆ ಮುಡಿವೆನು, ಬರಿದೆ ಸಾಯಬೇಡಲಾ [45]

ದ್ರೌಪದಿಯ ಪ್ರತಿಜ್ಞೆ ಕೇಳಿ ದಿಕ್ಕುಗಳೇ ನಡುಗಿದುವೆಂದು, ದೇವತೆಗಳು ಹೂಮಳೆ ಸುರಿಸಿದರೆಂದು ಕವಯತ್ರಿ ಬಣ್ಣಿಸುತ್ತಾರೆ. ಕೊನೆಗೆ ಅಂಧರಾಜ ಬಂದು ಅವಳನ್ನು ಸಮಾಧಾನಗೊಳಿಸಿ ಬೇಕಾದ ವರ ಕೇಳುವಂತೆ ಹೇಳುತ್ತಾನೆ.

ಭೀಮವ್ವನವರ ಒಂದು ಕೀರ್ತನೆಯಲ್ಲೂ ದ್ರೌಪದಿ ವಸ್ತ್ರಾಪಹರಣದ ಪ್ರಸಂಗವಿದೆ. ಸಭೆಗೆ ದ್ರೌಪದಿಯನ್ನು ಎಳೆತಂದು ಕೌರವ

ಕಂಡು ದುರ್ಯೋಧನ ದ್ರೌಪದಿ ನಿನ್ನ
ಗಂಡರಡವಿಗೈದುವೋರು
ಹೆಂಡತ್ಯಾಗಿರೆನ್ನ ಬಳಿಗೆ ಬಾರೆ [46]

ಎಂದ ದುರ್ಯೋಧನನ ಮಾತಿಗೆ ದ್ರೌಪದಿಯು ತನ್ನೈವರು ಪತಿಗಳು ಅವನನ್ನು ತುಂಡು ಮಾಡಿ ಕಡಿವರೆನ್ನುತ್ತಾಳೆ.

ಕಡುಪಾಪಿ ನೀ ನುಡಿವೋ ನಾಲಿಗೆ
ಕಡಿದು ಭೀಮನ ಗದೆಯು ನಿನ್ನ
ತೊಡೆ ಉರ ಭೇದಿಸುವೋದನು ನೋಡೇನೆಂದಳು [47]

ಛಲದಿಂದ ದ್ರೌಪದಿಯ ಸೀರೆ ಸೆಳೆಯಲು ದುಶ್ಯಾಸನ ಪ್ರಯತ್ನಿಸಿ ಅಕ್ಷಯಯಾಂಬರ ಸೀರೆಗಳನ್ನು ಸೆಳೆಯಲಾರದೆ ಬೀಳುತ್ತಾನೆ. ಭೀಮವ್ವನವರೂ ಸಹ ದ್ರೌಪದಿ ತನ್ನ ಕಣ್ಣಿನ ದೃಷ್ಟಿಯಿಂದ ಸೀರೆಗಳನ್ನು ಸುಟ್ಟು ಹಾಕಿದಳು ಎಂದು ಹೇಳುತ್ತಾರೆ. ವಿದುರ, ಭೀಷ್ಮರೆಲ್ಲ ಬಂದು ದ್ರೌಪದಿಯು ಇಚ್ಛಿಸುವುದನ್ನು ನೀಡುವುದಾಗಿ ಹೇಳಿದಾಗ

ಕೆಟ್ಟ ಕೌರವರ ಕುಲವು ನಷ್ಟವಾಗುತಿರಲು ಧರ್ಮ
ಪಟ್ಟಣವಾಳುವುದೇ ಇದು ಎನಗಿಷ್ಟವೆಂದಳು [48]

ಕೃಷ್ಣನ ಕೃಪೆಗೆ ಪಾತ್ರಳಾದ ದ್ರೌಪದಿಯನ್ನು ಎಲ್ಲರೂ ಹೊಗಳುತ್ತಿರಲು ತಾನೂ ಪತಿಗಳೊಡನೆ ವನವಾಸಕ್ಕೆ ಹೋಗುವುದಾಗಿ ಪಾಂಚಾಲಿ ಹೇಳುತ್ತಾಳೆ. ಭೀಮವ್ವ ದುಶ್ಯಾಸನನು ಸೆಳೆದ ಸೀರೆಗಳನ್ನು

ವಿಧವಿಧವಾಗಿ ವರ್ಣಿಸುತ್ತಾರೆ. ಕೆಂಪು ಹೂವು, ಇರುವಂತಿಗೆ, ಪಂಚಪೈಠಣಿ, ಪಗಡಿಬಣ್ಣ, ಕಡ್ಡಿಪೈಠಣಿ, ಜರದಚಾರಖಾನಿ, ಸಾಸಿವೆ ಚಿಕ್ಕಿ, ಸರಪಳ್ಯಂಚು, ಮಗ್ಗೀಸೀರೆ, ಹೀಗೆ ನಮೂನೆಗಳನ್ನು ವರ್ಣಿಸಿದ್ದಾರೆ.

ಚಂದ್ರಹಾಸನ ಕಥೆ:

ಮಹಾಭಾರತದಲ್ಲಿ ಬರುವ ಚಂದ್ರಹಾಸನ ಕತೆಯನ್ನು ಹೆಳವನಕಟ್ಟೆ ಗಿರಿಯಮ್ಮ ನಾಲ್ಕು ಸಂಧಿಗಳ ದೀರ್ಘ ಕೃತಿಯಾಗಿ ರಚಿಸಿದ್ದಾಳೆ. ಈ ಕೃತಿಯು ಸಾಂಗತ್ಯದಲ್ಲಿದೆ. ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಬರುವ ಈ ಪ್ರಸಿದ್ಧ ಕತೆಯನ್ನು ಮೂಲವಾಗಿಟ್ಟುಕೊಂಡು ಕೃತಿ ರಚಿಸಿರುವುದಾಗಿ ಗಿರಿಯಮ್ಮನೇ ಹೇಳಿಕೊಳ್ಳುತ್ತಾಳೆ. ಗಿರಿಯಮ್ಮ ಯಾವ ವರ್ಣನೆಗೂ ಮುಂದಾಗದೆ ನೇರವಾಗಿ ಕಥೆಯನ್ನು ಹೇಳುತ್ತಾಳೆ.

ಹುಟ್ಟಿದಾಗಲೇ ಹೆತ್ತವರನ್ನು ಕಳೆದುಕೊಂಡು ಚಂದ್ರಹಾಸ ಕುಂತಳಪುರದ ದಾಸಿಯೊಬ್ಬಳ ಪಾಲನೆಯಲ್ಲಿ ಬೆಳೆಯುತ್ತಾನೆ. ತನ್ನ ಸದ್ಗುಣಗಳಿಂದ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದ ಚಂದ್ರಹಾಸನಿಗೆ ಒಮ್ಮೆ ಒಂದು ಸಾಲಿಗ್ರಾಮ ದೊರೆಯುತ್ತದೆ. ಅದನ್ನು ಪೂಜಿಸುತ್ತಾ ಇಡಲು ಸರಿಯಾದ ಜಾಗವಿಲ್ಲದೆ ಬಾಯಿಯಲ್ಲಿ ಇಟ್ಟುಕೊಂಡಿರುತ್ತಾನೆ. ಬಾಲಕ ಚಂದ್ರಹಾಸ 'ಪರಪುಟ್ಟ'ನಾಗಿ ಬೆಳೆದು ತನ್ನ ಓರಗೆಯ ಹುಡುಗರೊಡನೆ ಆಡುತ್ತಾ ಎಲ್ಲರನ್ನೂ ಗೆದ್ದು ಬೆಳೆಯುತ್ತಿರುತ್ತಾನೆ.

ಒಮ್ಮೆ ಕುಂತಳ ದೇಶದ ಮಂತ್ರಿ ದುಷ್ಟಬುದ್ಧಿಯ ಮನೆಗೆ ಔತಣಕ್ಕೆ ಬಂದ ಬ್ರಾಹ್ಮಣರು ಚಂದ್ರಹಾಸನನ್ನು ಕಂಡು

> ಅತಿಲಕ್ಷಣ ಸಂಪನ್ನ ಸುಶೀಲನು
> ಮತಿವಂತ ಮಹಗುಣಧೀರ
> ಜತನ ಮಾಡಿರಿ ಮುಂದೆ ರಾಜ್ಯಕಿವನೆ ಅಧಿ
> ಪತಿಯೆಂದು ಹೇಳಿದರವರು [49]

ಬ್ರಾಹ್ಮಣರ ಮಾತು ಸುಳ್ಳಾಗದೆಂಬ ಅರಿವಿದ್ದ ದುಷ್ಟಬುದ್ಧಿಯು ಅದನ್ನು ಸಹಿಸದೆ ಚಂದ್ರಹಾಸನನ್ನು ಕೊಲ್ಲಲು ಕಟುಕರನ್ನು ಕಳುಹಿಸುತ್ತಾನೆ. ಮಾತು ಮಾತಿಗೂ ನಾರಾಯಣ ಸ್ಮರಣೆ ಮಾಡುತ್ತಾ ಹೆದರಿ ಕಂಗಾಲಾದ ಚಂದ್ರಹಾಸನನ್ನು ಕಂಡು ಮನಮರುಗಿ ಕಟುಕರು ಅವನನ್ನು ಕೊಲ್ಲಲಾರದೆ ಅವನ ಎಡಗಾಲಿನಲ್ಲಿದ್ದ ಆರನೆಯ ಬೆರಳನ್ನು ಕತ್ತರಿಸಿಕೊಂಡು ಹೋಗಿ ಮಂತ್ರಿಗೆ ತೋರಿಸುತ್ತಾರೆ. ಕಾಲಿನ ಗಾಯದಿಂದ ತಲ್ಲಣಿಸುತ್ತಿದ್ದ ಚಂದ್ರಹಾಸನಿಗೆ ಪ್ರಕೃತಿ ಆರೈಕೆ ಮಾಡುವ ರೀತಿ ಶಕುಂತಲೆಯನ್ನು ಸಲಹಿದ ಪ್ರಕೃತಿಯನ್ನು ನೆನಪಿಸುತ್ತದೆ. ಬೇಟೆಗೆ ಬಂದ ಚಂದನಾವತಿಯ ರಾಜ ಪುಳಿಂದರಾಯ ಚಂದ್ರಹಾಸನನ್ನು ಕರೆದೊಯ್ಯುತ್ತಾನೆ.

ಎರಡನೆಯ ಸಂಧಿಯಲ್ಲಿ ಚಂದ್ರಹಾಸ ಚಂದನಾವತಿಯ ರಾಜನಾಗಿ ರಾಜ್ಯವನ್ನು ವಿಸ್ತರಿಸುತ್ತಾನೆ. ಕಪ್ಪ ನೀಡಲು ಕುಂತಳಪುರಕ್ಕೆ ಹೋದ ಚಂದನಾವತಿಯ ಚಾರರಿಂದ ಚಂದ್ರಹಾಸನ ಬಗ್ಗೆ ತಿಳಿದು ದುಷ್ಟಬುದ್ಧಿ ತಾನೇ ಚಂದನಾವತಿಗೆ ಬರುತ್ತಾನೆ. ಚಂದ್ರಹಾಸನನ್ನು ಕೊಲ್ಲಲು ಉದ್ದೇಶಿಸಿ ಮತ್ತೆ ತನ್ನ ಮಗನಿಗೆ ಪತ್ರ ಬರೆದು ಚಂದ್ರಹಾಸನನ್ನು 'ವಿಷ' ನೀಡಿ ಕೊಲ್ಲಲು ತಿಳಿಸಿ ಚಂದ್ರಹಾಸನ ಕೈಲಿ ಕಳುಹಿಸುತ್ತಾನೆ. ಕುಂತಳಪುರಕ್ಕೆ ಬಂದ ಚಂದ್ರಹಾಸನನ್ನು ಕಂಡು ದುಷ್ಟಬುದ್ಧಿಯ ಮಗಳು ಮೋಹಿಸಿ ಪತ್ರವನ್ನು ತಿದ್ದಿ ವಿವಾಹವಾಗುತ್ತಾಳೆ. ಅಳಿಯನೆಂಬ ಮಮಕಾರವೂ ಇಲ್ಲದೆ ಮೂರನೇ ಬಾರಿ ಕಾಳಿ ಗುಡಿಯಲ್ಲಿ ಚಂದ್ರಹಾಸನನ್ನು ಕೊಲ್ಲಲು ಕಟುಕರನ್ನು ನೇಮಿಸಿದಾಗ ದುಷ್ಟ ಬುದ್ಧಿಯ ಮಗನೇ ಬಲಿಯಾಗುತ್ತಾನೆ. ಅದನ್ನು ಕಂಡ ದುಷ್ಟಬುದ್ಧಿ ತಾನೂ ತಲೆ ಕತ್ತರಿಸಿಕೊಂಡು ಸಾಯುತ್ತಾನೆ. ಚಂದ್ರಹಾಸ ಕಾಳಿಗುಡಿಗೆ ಬಂದು ತನ್ನ ಮಾವ, ಭಾವ ಮೈದುನ ಸತ್ತು ಬಿದ್ದಿರುವುದನ್ನು ಕಂಡು ಕಾಳಿಗೆ ಮೊರೆಯಿಟ್ಟು ಅವರನ್ನು ಬದುಕಿಸುತ್ತಾನೆ. ಇತ್ತ ಚಂದನಾವತಿಯಲ್ಲಿ ಬಂಧನದಲ್ಲಿದ್ದ ತನ್ನ ತಂದೆ ತಾಯಿಯರನ್ನು ಕರೆಸಿ ಇಂದುಹಾಸ ನಮಸ್ಕರಿಸುತ್ತಾನೆ.

ಬಾಲಕ ಚಂದ್ರಹಾಸನ ವರ್ಣನೆ, ಬೇಟೆ ಪ್ರಸಂಗ, ವಿಷಯೆಯ ಪ್ರಸಂಗಗಳು ಕಾವ್ಯಾತ್ಮಕವಾಗಿ ಮೂಡಿ ಬಂದಿವೆ. ಸಾಲಿಗ್ರಾಮದ ಶ್ರೇಷ್ಠತೆ, ಏಕಾದಶಿ ವ್ರತದ ಮಹಾತ್ಮೆ, ಹರಿಭಕ್ತಿಯ ಹಿರಿಮೆಯನ್ನು ಭಕ್ತಿ ಭಾವದಿಂದ ವರ್ಣಿಸಲಾಗಿದೆ. ಗಿರಿಯಮ್ಮನ ಸ್ತ್ರೀ ಸಹಜವಾದ ಗುಣದಿಂದ ಎಲ್ಲ ಪ್ರಸಂಗಗಳನ್ನು ಮನ ಮುಟ್ಟುವಂತೆ ವರ್ಣಿಸಿದ್ದಾಳೆ. ಈ ಕತೆಯಲ್ಲಿ ಹಲವೆಡೆ ಪ್ರಾಸಕ್ಕೆ ಧಕ್ಕೆ ಬಂದರೂ ಕತೆಯ ಓಟ ಸಹಜವಾಗಿ ಸಾಗಿದೆ.

ಮುಯ್ಯದ ಹಾಡುಗಳು:

ಮುಯ್ಯದ ಹಾಡುಗಳನ್ನು ಗಲಗಲಿ ಅವ್ವ, ಭೀಮವ್ವ, ದೊಡ್ಡಿ ಸುಧಾಬಾಯಿ ಮತ್ತು ಇಂದಿರಾಬಾಯಿ ಕಟ್ಟಿಯವರು, ಸೀತಾಬಾಯಿ ರಾ. ಪುರೋಹಿತರವರು ರಚಿಸಿದ್ದಾರೆ. ಆದರೆ ಮುಯ್ಯದ ಹಾಡುಗಳಲ್ಲಿ ಅವ್ವನವರದ್ದು ಬಹಳ ದೀರ್ಘ ಕೃತಿಯಾಗಿದೆ. ಗಲಗಲಿ ಅವ್ವನವರ ವಿಶೇಷ ರಚನೆಗಳು ಪೌರಾಣಿಕ ಓನ್ನೆಲೆಯಲ್ಲಿ ರಚಿತವಾಗಿದೆ. ಮುಯ್ಯ ಕೊಡುವ ಅದನ್ನು ಹಿಂತಿರುಗಿಸುವ ನೆಪದಲ್ಲಿ ಭಾರತ, ಭಾಗವತಾದಿ ಪುರಾಣ ಪಾತ್ರಗಳು, ಪ್ರಸಂಗಗಳು, ಬಗೆ ಬಗೆಯ ವರ್ಣನೆಗಳು, ಮಾತಿನ ಚಕಮಕಿ, ಹಾಸ್ಯ, ವಿಡಂಬನೆಗಳನ್ನು ಅವ್ವ ಈ ಹಾಡುಗಳಲ್ಲಿ ಹೇಳಿದ್ದಾರೆ. ಅವ್ವನವರ ಹಾಡುಗಳನ್ನು 'ಮುಯ್ಯ ಕೊಟ್ಟ ಹಾಡು' ಮತ್ತು 'ಮುಯ್ಯ ಹಿಂದಿರುಗಿಸಿದ' ಹಾಡು ಎಂದು ಪರಿಭಾವಿಸಬಹುದು. ಮುಯ್ಯದ ಹಾಡು 262 ಕೀರ್ತಗಳ ದೀರ್ಘ ಸಂಪ್ರದಾಯ ಕಾವ್ಯ. ಮುಯ್ಯ ಒಯ್ದ 111, ಹಿಂತಿರುಗಿಸಿದ ಹಾಡುಗಳು 151 ಇದರಲ್ಲಿವೆ.

ಒಂದು ದಿನ ಸುಭದ್ರೆ ತನ್ನ ತವರನ್ನು ನೆನೆದು ಕೃಷ್ಣನನ್ನು ಕಾಣಲು ತವಕಿಸುತ್ತಾಳೆ. ತಿಂಗಳಲ್ಲಿ ಬರುತ್ತೇನೆಂದ ಕೃಷ್ಣ ಬಾರದೆ ಹೋದಾಗ ಅವಳ ತಳಮಳ ಹೆಚ್ಚಾಗುತ್ತದೆ. ಜನಪದರ ತವರಿನ ಕಲ್ಪನೆ ಎಲ್ಲ ಹೆಣ್ಣು ಮಕ್ಕಳಿಗೂ ಸಮಾನವೆಂಬ ಮಾತನ್ನು ಇದು ತೋರಿಸುತ್ತದೆ. ಮುಯ್ಯ ಕೊಡುವ ನೆಪದಲ್ಲಿ ದ್ವಾರಕೆಗೆ ಹೋಗಲು ಅರ್ಜುನನ ಮೂಲಕ ಧರ್ಮರಾಯನಿಗೂ ತಿಳಿಸಿ ಹೊರಡಲು ಅನುವಾಗುತ್ತಾರೆ. ಆಗ ಗುರು ಬೃಹಸ್ಪತಿಗಳನ್ನು ಶಕುನ ಕೇಳುತ್ತಾಳೆ.

ಈಗಿನ ವ್ಯಾಳಕ್ಕೆ ಜಾಗು ಮಾಡದೆ ಕೃಷ್ಣಿ
ಹೋಗ ನೀ ಗೆದ್ದು ಬರತೀಯೆ ಚಪಲಾಕ್ಷಿ
ಹೋಗ ನೀ ಗೆದ್ದು ಬರತೀಯೆ [50]

ಎಂದು ಬೃಹಸ್ಪತಿಗಳು ಆಶೀರ್ವದಿಸುತ್ತಾರೆ. ಕೃಷ್ಣನನ್ನು ಕಾಣಲು ಹಂಬಲಿಸಿ ರಾತ್ರಿ ವೇಳೆಯಲ್ಲೇ ಹೊರಡುತ್ತಾರೆ. ಈ ಸಂದರ್ಭದಲ್ಲಿ ದ್ವಾರಕೆಯಲ್ಲಿ ಕೃಷ್ಣನ ದರ್ಶನ ಅಪೇಕ್ಷಿಸಿ ಎಲ್ಲ ದೇವತೆಗಳೂ ಪರಿವಾರ ಸಹಿತ ಹೊರಡುತ್ತಾರೆ. ಮುಯ್ಯ ಒಯ್ಯುವ ಸಂದರ್ಭದಲ್ಲಿ ಅವ್ವ ತಾರತಮ್ಯ ದೇವತಾ ಸ್ತೋತ್ರ, ತೀರ್ಥ ಕ್ಷೇತ್ರ, ದೂತಿಯ ಹಾಡು, ದ್ವಾರಕೆಯ ವರ್ಣನೆ, ಇತ್ಯಾದಿಗಳನ್ನು ಮಾಡುತ್ತಾರೆ. ದ್ವೈತ ಮತದ ಹಿರಿಮೆಯನ್ನು ಎತ್ತಿ ಹಿಡಿಯುವ ತ್ರಿಪದಿಗಳನ್ನು ರಚಿಸಿದ್ದಾರೆ. ವೈಕುಂಠದ ವರ್ಣನೆ, ದ್ವಾರಕೆಯ ವೈಭವವನ್ನು ವರ್ಣಿಸುತ್ತಾರೆ. ಅವ್ವನವರ ದ್ವಾರಕೆಯ ವರ್ಣನೆ ಕನಕದಾಸರು, ಆನಂದದಾಸರ ದ್ವಾರಕಾ ವರ್ಣನೆಯನ್ನು ನೆನಪಿಸುತ್ತದೆ.

ಮುಯ್ಯ ನೀಡಲು ಪಾಂಡವರು, ಸುಭದ್ರಾ, ದ್ರೌಪದಿ ಬಂದ ವಿಚಾರವನ್ನು ದೂತಿಯ ಮೂಲಕ ಕೃಷ್ಣನಿಗೆ ಮುಟ್ಟಿಸುತ್ತಾರೆ. ಇಲ್ಲಿ ದ್ರೌಪದಿ ದೂತಿಯನ್ನು ಕೇಳುವ ಪ್ರಶ್ನೆಗಳು ರಾಯಭಾರಿಗೆ ಇರಬೇಕಾದ ನಯ–ವಿನಯ, ಜಾಣ್ಮೆ, ಇತ್ಯಾದಿಗಳನ್ನು ತಿಳಿಸುತ್ತದೆ. ದ್ರೌಪದಿಗೆ ದೂತೆಯು ಕೃಷ್ಣನಿಗಾಗಿ ರುಕ್ಮಿಣಿ, ಸತ್ಯಭಾಮೆ ನಡೆಸಿಹ ಕಲಹವನ್ನು ಅರುಹುತ್ತಾಳೆ. ಕೃಷ್ಣ ಪಾಂಡವರು ಬಂದ ವಿಚಾರ ತಿಳಿದು ಸಾಂಪ್ರದಾಯಿಕವಾಗಿ ಎದುರುಗೊಳ್ಳುತ್ತಾನೆ. ಈ ಸಮಯದಲ್ಲಿ ಅವ್ವ ಶುಭ ಶಕುನಗಳ ವಿಚಾರ ಹೇಳಿದ್ದಾರೆ. ಕೃಷ್ಣನನ್ನು ಬಿಟ್ಟು ಬಂದರೆ ಎಲ್ಲಿ ಇನ್ನೊಬ್ಬಳು ಅವನೊಡನೆ ಬೆರೆಯುವಳೋ ಎಂಬ ಚಿಂತೆಯಿಂದ ರುಕ್ಮಿಣಿ ಭಾಮೆಯರು ಹೊರಬರುವುದಿಲ್ಲ. ಸುಭದ್ರಾ

ತಾಯಿ ಮನೆಗೆ ಬಂದು ಬಹಳ ಹೊತ್ತಾಯಿತು
ತಾಯಿಯ ಸೊಸೆಯರು ಬರಲಿಲ್ಲ
ತಾಯಿಯ ಸೊಸೆಯರು ಬರಲಿಲ್ಲ ನಮಗಂಜಿ
ಬಾಯಿ ಬಿಡುತಾರೆ ಒಳಗಿನ್ನು [51]

ಎಂದು ನಂಜಿನ ಮಾತುಗಳನ್ನಾಡುತ್ತಾಳೆ. ಕೃಷ್ಣ ಪತ್ನಿಯರನ್ನು ಕರೆದು ತಂಗಿಯರನ್ನು ಎದುರುಗೊಳ್ಳಲು ಹೇಳುತ್ತಾನೆ. ಹೊರ ಬಂದ ಅತ್ತಿಗೆಯರು

ಪುಟ್ಟ ಸುಭದ್ರಾ ನಿನಗ ಸಿಟ್ಟ್ಯಾಕ ಒದಗಿತ
ಇಟ್ಟ ಮುದ್ರಿಗಳು ತಡವಾಗಿ
ಇಟ್ಟ ಮುದ್ರಿಗಳು ತಡವಾಗಿ ಮುಯ್ಯದ
ಇಷ್ಟು ಹೊತ್ತಿನಾಗೆ ತರಬಹುದೆ [52]

ಎಂದು ಕಟಕಿಯಾಡುತ್ತಾರೆ. ಪರಸ್ಪರ ನಿಂದೆ, ದೋಷಾರೋಪಣೆಗಳು ನಡೆಯುತ್ತವೆ. ಅತ್ತಿಗೆ ನಾದಿನಿಯರ ವಾಗ್ವಾದ ಮುಂದುವರಿದು ಪಾಂಡವರು ಕೃಷ್ಣನನ್ನು, ಕೃಷ್ಣ ಪಾಂಡವರನ್ನು ಪರಸ್ಪರ ನಿಂದಿಸುತ್ತಾರೆ. ಈ ಸಂದರ್ಭದಲ್ಲಿ ನಿಂದಾಸ್ತುತಿಗಳನ್ನು ಅವ್ವ ರಚಿಸಿದ್ದಾರೆ. ಕೊನೆಗೆ ಎಲ್ಲರೂ ಒಂದಾಗಿ ಮುಯ್ಯ ನೀಡುವ ಕಾರ್ಯ ನಡೆಯುತ್ತದೆ.

ಮುಯ್ಯಾ ತಿರುಗಿಸಿದ ಹಾಡುಗಳಲ್ಲಿ ದ್ರೌಪದಿ, ಸುಭದ್ರೆ ನೀಡಿದ ಮುಯ್ಯಕ್ಕೆ ಪ್ರತಿ ಮುಯ್ಯ ತೀರಿಸುವ ಹಂಬಲದಿಂದ ಪಾಂಡವರ ಅರಮನೆಗೆ ಬರುತ್ತಾರೆ. ದ್ರೌಪದಿಯ ದೂತಿ ವಿನಯವಂತೆಯಾದರೆ ಸೇಡು ತೀರಿಸಿಕೊಳ್ಳಲು ಬಂದ ರುಕ್ಮಿಣಿಯ ದೂತಿ ಕುಟಿಲ ಮನೋಭಾವದವಳು. ಇಲ್ಲಿಯೂ ಅತ್ತಿಗೆ ನಾದಿನಿಯರು ಮೊದಲು ನಿಂದಾಡಿಸಿಕೊಂಡು ನಂತರ ಒಂದಾಗಿ ಸಂತಸ ಪಡುತ್ತಾರೆ. ಈ ಸಂದರ್ಭದಲ್ಲಿ ಪಾಂಡವರು ಕೃಷ್ಣ ಬಲರಾಮರಿಗೆ ನೀಡಿದ ಉಡುಗೊರೆಯ ವೈಭವವನ್ನು ಶ್ರೀಮಂತವಾಗಿ ವರ್ಣಿಸಿದ್ದಾರೆ. ನಾನಾ ಬಗೆಯ ಸೀರೆಗಳು, ಒಡವೆಗಳು, ಭಕ್ಷ್ಯ ಭೋಜ್ಯಗಳನ್ನು ವರ್ಣಿಸುತ್ತಾರೆ. ಮುಯ್ಯದ ಹಾಡುಗಳನ್ನು ಕೃಷ್ಣನ ಹಿರಿಮೆ ಹೇಳಲೆಂದೇ ಅವ್ವ ರಚಿಸಿದ್ದಾರೆ.

ಭೀಮವ್ವ:

ಭೀಮವ್ವ 81 ಧ್ವನಿಗಳಲ್ಲಿ ಮುಯ್ಯದ ಹಾಡುಗಳನ್ನು ರಚಿಸಿದ್ದಾರೆ. ಭೀಮವ್ವ ರುಕ್ಮಿಣಿ, ಭಾಮೆಯರು ಮುಯ್ಯ ಒಯ್ದಂತೆ ಹಾಡಿದ್ದಾರೆ. ಕೃಷ್ಣನನ್ನು ಪುಸಲಾಯಿಸಿ ದ್ರೌಪದಿ, ಸುಭದ್ರೆಗೆ ಮುಯ್ಯ ನೀಡಲು ಹೋಗಬೇಕೆಂದಾಗಿ ಕೃಷ್ಣ ಮನದಲ್ಲೇ ನಕ್ಕು ಬೃಹಸ್ಪತಿಯನ್ನು ಕರೆಸಿ ಶಕುನ ಕೇಳಿದಾಗ

ಚಂದ್ರ ತಾರಾಬಲಗಳುಂಟು ಬಂದ ಶುಭ ನಕ್ಷತ್ರಯೋಗ
ಇಂದುಮುಖಿಯರನ್ನು ಗೆದ್ದಾನಂದದಿಂದ ಬರುವಿರೆಂದು [53]

ಇಲ್ಲಿ ಸರ್ವ ದೇವತೆಗಳೂ ಕೃಷ್ಣನ ಅರಮನೆಗೆ ಬಂದು ನಂತರ ಹಸ್ತಿನಾವತಿಗೆ ಕೃಷ್ಣನೊಡನೆ ತೆರಳುತ್ತಾರೆ. ರುಕ್ಮಿಣಿ 'ಚಂದ ಚಂದದ ಮುಯ್ಯ' ಒಯ್ಯುತ್ತಾಳೆ. ಕೃಷ್ಣ ಗಜಪುರ (ಹಸ್ತಿನಾವತಿ) ಕ್ಕೆ ಬಂದ ಸೊಬಗನ್ನು ವರ್ಣಿಸುತ್ತಾರೆ. ಭೀಮವ್ವನವರು ಅತ್ತಿಗೆ-ನಾದಿನಿಯರು, ಕೃಷ್ಣ-ಪಾಂಡವರು ಪರಸ್ಪರ ನಿಂದಿಸಿದ ಬಗೆ ಹೇಳುತ್ತಾರೆ.

ದೊರೆಗಳೈವರು ಎಂಬೊ ಗರುವಿಲೆ ದ್ರೌಪದಿ
ಸಿರಿಮದವೇರಿ ಮಲಗ್ಯಾಳೆ ಸುಭದ್ರೆ
ಸಿರಿಮದವೇರಿ ಮಲಗಿದವರು ಕಣ್ಣ-
ತೆರೆದು ನೋಡುವ ಬಗೆಯಿಲ್ಲೆ [54]

ಎಂದ ರುಕ್ಮಿಣಿಗೆ

ಒಬ್ಬ ಬ್ರಾಹ್ಮಣ(ನ) ಏಕಾಂತದಿ ಕರೆದು ನೀ
ಕಬ್ಬು ಬಿಲ್ಲನಯ್ಯಗೆ ಉಬ್ಬುಬ್ಬಿ ವಾಲೆ ಬರೆದೆ
ಕಬ್ಬು ಬಿಲ್ಲನಯ್ಯಗೆ ಉಬ್ಬುಬ್ಬಿ ವಾಲೆ ಬರೆದಂಥ
ನಿರ್ಭಯ ನೋಡಿ ನಗುತಾರೆ ಸುಜನರು [55]

ಎಂದು ಕಟಕಿಯಾಡುತ್ತಾಳೆ. ಕೃಷ್ಣ ಪಾರ್ಥರೂ ಪರಸ್ಪರ ನಿಂದಿಸುತ್ತಾರೆ. ಅಜ್ಞಾತವಾಸದ ಸಂದರ್ಭದಲ್ಲಿ ಪಾಂಡವರು ಧರಿಸಿದ ವೇಷಗಳನ್ನು ಕೃಷ್ಣ ಅಪಹಾಸ್ಯ ಮಾಡುತ್ತಾನೆ. ಪ್ರತಿಯಾಗಿ ಅರ್ಜುನ ಕೃಷ್ಣನ ಲೀಲೆಗಳನ್ನು ನಿಂದಾಸ್ತುತಿಯಂತೆ ಹೇಳುತ್ತಾನೆ. ನಂತರ ಪರಸ್ಪರ ಶಾಂತರಾಗಿ ಗುಣಗಳನ್ನು ಹೊಗಳುತ್ತಾರೆ. ಉಡುಗೊರೆ ನೀಡುವ ವೈಭವವನ್ನು ಬಣ್ಣಿಸುತ್ತಾರೆ. ಸೀರೆ, ಒಡವೆ, ದಶಾವತಾರಗಳ ವರ್ಣನೆ ಹಾಸುಹೊಕ್ಕಾಗಿದೆ. ಮುಯ್ಯ ಒಯ್ದ ರುಕ್ಮಿಣಿ ಮುಯ್ಯಾ ತಿರುಗಿಸೆಂದು ಸವಾಲು ಹಾಕುತ್ತಾಳೆ. ಕೃಷ್ಣ ದ್ವಾರಕೆಗೆ ಹಿಂದಿರುಗಿದ ವರ್ಣನೆಯೊಂದಿಗೆ ಈ ಕೃತಿ ಮುಕ್ತಾಯವಾಗುತ್ತದೆ.

ಸೀತಾಬಾಯಿ ಪುರೋಹಿತರವರು 103 ದ್ವಿಪದಿಗಳಲ್ಲಿ ಮುಯ್ಯದ ಹಾಡು ರಚಿಸಿದ್ದಾರೆ. ಇವರು ದ್ರೌಪದಿ, ಸುಭದ್ರೆಯರು ಮುಯ್ಯ ತಂದು ದ್ವಾರಕೆಗೆ ಬಂದುದನ್ನು ಹೇಳುತ್ತಾರೆ. ಇವರ ಕೃತಿಯಲ್ಲೂ ಪರಸ್ಪರ ದೂಷಣೆ, ಒಂದಾಗಿ ಮುಯ್ಯ ನೀಡಿದ ಪರಿ ವರ್ಣಿತವಾಗಿದೆ. ಪರಸ್ಪರ ನಿಂದಿಸಿದ ಬಳಿಕ ಕ್ಷಮೆ ಯಾಚಿಸುವಾಗ ಕೃಷ್ಣನ ಕೇಶವಾದಿ 24 ನಾಮಗಳನ್ನು ಬಳಸಿ ಕ್ಷಮೆ ಬೇಡುವುದನ್ನು ಸೀತಾಬಾಯಿ ಹೇಳುತ್ತಾರೆ. ಒಂದೇ ದ್ವಿಪದಿಯಲ್ಲಿ ಹತ್ತವತಾರ ಹೇಳಿ ಕ್ಷಮೆ ಬೇಡುತ್ತಾರೆ.

ಮತ್ಸ್ಯ ಕೂರ್ಮ ವರಾಹ ನರಸಿಂಹ ವಾಮನ ಭಾರ್ಗವ ರಾಮ
ಕೃಷ್ಣ ಬೌದ್ಧ ಕಲ್ಕಿ ನಮ್ಮ ತಪ್ಪು ಕ್ಷಮಿಸು ಎಂದರು [56]

ಮಂಗಳದೊಂದಿಗೆ ಈ ಕೃತಿ ಮುಕ್ತಾಯವಾಗಿದೆ.

ಇಂದಿರಾಬಾಯಿ ಕಟ್ಟಿಯವರು 14 ಧ್ವನಿಗಳಲ್ಲಿ ಮತ್ತು ನಾಲ್ಕು ವಚನಗಳಲ್ಲಿ ರುಕ್ಮಿಣೀ ದೇವಿ ಮುಯ್ಯ ಒಯ್ದು ಕಥೆ ಹೇಳಿದ್ದಾರೆ. ಉಳಿದವರು ಹೇಳಿದಂತೆಯೇ ಹಾಡನ್ನು ರಚಿಸಿದ್ದಾರೆ. ಮುಯ್ಯ ಒಯ್ದು ಪರಿ, ನಿಂದೆ, ಕ್ಷಮಾಪಣೆ, ಮುಯ್ಯ ನೀಡಿದ ಬಗೆಯನ್ನು ವಿವರಿಸಿದ್ದಾರೆ.

<u>ಭಾಗವತ:</u>

ಭಾಗವತವು ವಿಷ್ಣು ಭಕ್ತಿಯ ತಲಕಾವೇರಿಯಾಗಿದೆ. ರಾಮಾಯಣ, ಮಹಾಭಾರತಗಳಂತಹ ಉದ್ಗ್ರಂಥಗಳು ಹರಿದಾಸರಿಗೆ ಸ್ಫೂರ್ತಿಯಾದಂತೆ ಭಾಗವತವೂ ಹರಿದಾಸರ ಭಕ್ತಿ ಪ್ರತಿಪಾದನೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಭಾಗವತ ದಶಮಸ್ಕಂಧವಂತೂ ಹರಿದಾಸರಿಗೆ ಕೃಷ್ಣಲೀಲೆಗಳನ್ನು ಹೇಳಲು ವಿಪುಲವಾದ ಸಾಮಗ್ರಿ ಒದಗಿಸಿದೆ. ಧ್ರುವ, ಅಜಮಿಳ, ಗಜೇಂದ್ರ, ಬಲಿ, ಪ್ರಹ್ಲಾದ, ಮುಂತಾದ ಮಹಾನ್ ಭಕ್ತರ ಭಕ್ತಿಯ ಸ್ವರೂಪವನ್ನು, ಅದಕ್ಕೆ ಶ್ರೀಹರಿ ಇವರಿಗೆ ಒಲಿದ ರೀತಿಯನ್ನು ವಿವರಿಸುವ ಭಾಗವತದಲ್ಲಿ ದುಷ್ಟ ನಿಗ್ರಹ ಮಾಡುವಲ್ಲಿ ಹರಿ ಎಷ್ಟು ಕಠಿಣನೆಂಬುದನ್ನೂ ವಿವರಿಸುತ್ತದೆ. ಕಂಸ, ಕಾಳಿಂಗ, ಶಕಟಾಸುರ, ಮುಂತಾದವರ ನಿಗ್ರಹ ಹರಿಯ ದುಷ್ಟ ನಿಗ್ರಹಕ್ಕೆ ಉದಾಹರಣೆಯಾಗಿದೆ. ಭಾಗವತದಲ್ಲಿ ಬರುವ ಭಕ್ತರ ಪಾತ್ರಗಳತ್ತ ಪದೇ ಪದೇ ಹರಿದಾಸರು ಗಮನ ಸೆಳೆದು ಭಕ್ತಿಯ ಶಕ್ತಿಯನ್ನು ತಿಳಿಯಪಡಿಸುತ್ತಾರೆ. ಕೃಷ್ಣನ ಬಾಲಲೀಲೆಗಳನ್ನು ವರ್ಣಿಸುವಾಗ ಕೃಷ್ಣನಾಗಿ, ಯಶೋದೆಯಾಗಿ, ತೊದಲು ಮಾತುಗಳಾಡುತ್ತ, ಗೋಪಿಯರಾಗಿ ದೂರು ಹೇಳುತ್ತಾ ತಮ್ಮದೇ ರೀತಿಯಲ್ಲಿ ದಶಮಸ್ಕಂಧದ ಪುನರ್ರಚನೆ ಮಾಡಿದ್ದಾರೆ. ದಾಸ ಮಹಿಳೆಯರು ಭಾಗವತದ ಅನೇಕ ಪ್ರಸಂಗಗಳನ್ನು ತಮ್ಮ ದೀರ್ಘ ಕೀರ್ತನೆಗಳಲ್ಲಿ ಅಳವಡಿಸಿದ್ದಾರೆ.

ಪರಮ ಭಗವದ್ಭಕ್ತನಾದ ಪ್ರಹ್ಲಾದ, ಅಜಮಿಳ, ಧ್ರುವ ಮೊದಲಾದವರ ಚರಿತ್ರೆಯನ್ನು, ಕೃಷ್ಣನ ಬಾಲಲೀಲೆಗಳನ್ನು, ಸಮುದ್ರ ಮಥನ, ಜಲಕ್ರೀಡೆ, ಮುಂತಾದ ಪ್ರಸಂಗಗಳನ್ನು ದಾಸ ಮಹಿಳೆಯರು ಬಳಸಿಕೊಂಡು ಕೃತಿಗಳನ್ನು ರಚಿಸಿದ್ದಾರೆ.

<u>ಪ್ರಹ್ಲಾದ ಚರಿತ್ರೆ:</u>

ಪ್ರಹ್ಲಾದ ಚರಿತ್ರೆ ಭಾಗವತ ಸಪ್ತಮ ಸ್ಕಂಧದಲ್ಲಿ ಬರುವ ಕಥೆ. ವಿಷ್ಣುವಿನ ಪರಮ ಭಕ್ತ ಪ್ರಹ್ಲಾದನ ಮೂಲಕ ಹರಿ ಭಕ್ತಿಯ ಸ್ವರೂಪವನ್ನು ಮನಗಾಣಿಸಲು ಹರಿದಾಸ–ದಾಸಿಯರು ಪ್ರಯತ್ನಿಸಿದ್ದಾರೆ. ಸರಸ್ವತಿಬಾಯಿ, ಇಂದಿರಾಬಾಯಿ, ವಾಮನಾಚಾರ್ಯ ಕಟ್ಟಿಯವರು, ಮಂಜುಳಾ ಸುಬ್ಬರಾವ್ ಮೊದಲಾದ ಮಹಿಳಾ ದಾಸರುಗಳು ಪ್ರಹ್ಲಾದ ಚರಿತ್ರೆಯನ್ನು ತಮ್ಮದೇ ರೀತಿಯಲ್ಲಿ ಹೇಳಿದ್ದಾರೆ.

ಸರಸ್ವತಿಬಾಯಿಯವರು 23 ನುಡಿಗಳಲ್ಲಿ, ಇಂದಿರಾಬಾಯಿ 7 ಧ್ವನಿ, 6 ವಚನಗಳಲ್ಲಿ ಮತ್ತು ಮಂಜುಳಾರವರು 35 ತ್ರಿಪದಿಗಳು ಮತ್ತು 22 ಚೌಪದಿಗಳಲ್ಲಿ ಈ ಕೃತಿಯನ್ನು ರಚಿಸಿದ್ದಾರೆ.

ಪ್ರಹ್ಲಾದನ ಕಥೆಯನ್ನು ಹೇಳುವಲ್ಲಿ ಇವರೆಲ್ಲ ಒಂದೇ ರೀತಿ ಅನುಸರಿಸಿದರೂ ತಮ್ಮದೇ ರೀತಿಯಲ್ಲಿ ಕಥೆ ಹೇಳಲು ಪ್ರಯತ್ನಿಸಿದ್ದಾರೆ. ಶ್ರೀಹರಿ ಕ್ಷೀರಸಾಗರದಲ್ಲಿ ಲಕ್ಷ್ಮೀದೇವಿಯೊಡನೆ ಇರುವಾಗ ಅವನನ್ನು ಕಾಣಲು ಬಂದ ಸನಕಾದಿ ಮುನಿಗಳನ್ನು ತಡೆಯುವ ಜಯವಿಜಯರು ಮುನಿಗಳ ಶಾಪದಿಂದ ಮೂರು ಜನ್ಮಗಳಲ್ಲಿ ಅಸುರರಾಗಿ ಜನಿಸಬೇಕಾಗುತ್ತದೆ. ಹಿರಣ್ಯಾಕ್ಷ, ಹಿರಣ್ಯಕಶಿಪುವಾಗಿ ಕಶ್ಯಪರಲ್ಲಿ ಜನಿಸಿದ ಇವರು ಹರಿದ್ವೇಷಿಗಳಾಗಿರುತ್ತಾರೆ. ಹಿರಣ್ಯಾಕ್ಷ ಶ್ರೀಹರಿಯ ವರಾಹವತಾರದಿಂದ ಕೊಲ್ಲಲ್ಪಡುತ್ತಾನೆ. ಹಿರಣ್ಯಕಶಿಪು ಬ್ರಹ್ಮನನ್ನು ಕುರಿತು ತಪಸ್ಸು ಮಾಡಲು ತೆರಳುತ್ತಾನೆ. ಗರ್ಭಿಣಿಯಾದ ಹಿರಣ್ಯಕಶಿಪುವಿನ ಪತ್ನಿ ಕಯಾದುವನ್ನು ಇಂದ್ರ ಅಪಹರಿಸಲು ಬಂದಾಗ ನಾರದರು ಅವನನ್ನು ತಡೆಯುತ್ತಾರೆ. ಕಯಾದು ನಾರದರನ್ನು ಸೇವೆಯಿಂದ ಮೆಚ್ಚಿಸಿ ವರ ಪಡೆಯುತ್ತಾಳೆ.

ಬ್ರಹ್ಮನಿಂದ ವರ ಪಡೆದು ಬಂದ ಹಿರಣ್ಯ ಕಶಿಪು ಪತ್ನಿ ಪುತ್ರರನ್ನು ಸೇರುತ್ತಾನೆ. ಮಗನಿಗೆ ಪ್ರಹ್ಲಾದನೆಂದು ಹೆಸರಿಟ್ಟು ಗುರುಕುಲದಲ್ಲಿ ಶಿಕ್ಷಣಕ್ಕೆ ಕಳುಹಿಸುತ್ತಾನೆ. ಮಗನನ್ನು 'ಹರ'ನೆಂದು ಹೇಳೆನ್ನಲು 'ಹರಿ' ಎನ್ನುತ್ತಾನೆ. ಹರಿನಾಮ ಬಿಡದ ಮಗನನ್ನು ಕೊಲ್ಲಲು ಹಿರಣ್ಯಕನು ನಾನಾ ರೀತಿಯ ಪ್ರಯತ್ನಗಳನ್ನು ಮಾಡಿದರೂ ಪ್ರಹ್ಲಾದ ಸಾಯುವುದಿಲ್ಲ. ಕೊನೆಗೆ ಕಂಭದಲ್ಲಿಯೂ ಹರಿ ಇರುವನೆಂಬ ಪ್ರಹ್ಲಾದನ ಮಾತು ಕೇಳಿ ಕಂಭವನ್ನು ಗದೆಯಿಂದ ಹೊಡೆಯುತ್ತಾನೆ. ತರಳ ಪ್ರಹ್ಲಾದನನ್ನು ಪಿತನಿಂದ ರಕ್ಷಿಸಲು ನರಸಿಂಹಾಕೃತಿ ತಾಳಿ ಹರಿ ಹೊರಬರುತ್ತಾನೆ. ಅವನೊಡನೆ ಯುದ್ಧ ಮಾಡ ಹೊರಟ ಹಿರಣ್ಯಕಶಿಪುವನ್ನು

ಕೇಸರಿ ಮೊಗದವ ಹೊಸಿಲಲ್ಲಿ ತಾ ಕುಳಿತು
ಲೇಸಾದ ತೊಡೆಯಲ್ಲಿ ಭಾರ ತಾಳಿ
ಅಸ್ತಮಿಸಲು ರವಿ ಸಂಧ್ಯಾದೇವಿಯು ಬರೆ
ಅಸುರನ್ನ ಸೀಳಿದ ನಖಗಳಿಂದಾ [57]

ಅಸುರ ಜಾಣ್ಮೆಯಿಂದ ಬೇಡಿದ ವರವನ್ನು ಪೂರ್ಣಗೊಳಿಸಿ ಅಜನ ಪಿತನಾದ ಶ್ರೀಹರಿಯು ಅವನನ್ನು ಸಂಹರಿಸಿದನು. ಉಗ್ರನಾದ ನರಸಿಂಹನು ಪ್ರಹ್ಲಾದನ ಸ್ತುತಿಗೆ ಪ್ರೀತನಾಗಿ ಮುಕ್ತಿ ನೀಡಲು ಮುಂದಾದಾಗ ಆ ಮುಕ್ತಿಯನ್ನು ತಂದೆಗೆ ಕೊಡಿಸಿ, ಸದಾ ಕಾಲ ಹರಿಭಕ್ತನಾಗಿ ಇರುವಂತೆ ಪ್ರಹ್ಲಾದ ವರ ಬೇಡುತ್ತಾನೆ.

<u>ಸುಭದ್ರಾ ಕಲ್ಯಾಣ:</u>

ಭಾಗವತ ದಶಮ ಸ್ಕಂಧ ಮತ್ತು ಮಹಾಭಾರತಗಳಲ್ಲಿ ಬರುವ ಈ ಪ್ರಸಂಗವನ್ನು ಭೀಮವ್ವ ತಮ್ಮದೇ ಶೈಲಿಯನ್ನು ನಿರೂಪಿಸಿದ್ದಾರೆ.

ದ್ವಾರಕಾಪುರದಲ್ಲಿ ಕೃಷ್ಣನ ತಂಗಿ ಸುಭದ್ರೆಯ ವಿವಾಹದ ಮಾತುಕತೆ ನಡೆಯುತ್ತದೆ. ಬಲರಾಮ ದುರ್ಯೋಧನನಿಗೆ ಸುಭದ್ರೆ ಕೊಡಬೇಕೆಂದಾಗ ಬ್ರಹ್ಮನ ಲಿಖಿತ ಬಲ್ಲವರಾರೆಂದು ಕೃಷ್ಣ ಕೇಳುತ್ತಾನೆ. ತೀರ್ಥಯಾತ್ರೆಗೆ ಬಂದಿದ್ದ ಅರ್ಜುನ ಸುಭದ್ರೆಯನ್ನು ಮದುವೆಯಾಗಬೇಕೆಂದು ಸನ್ಯಾಸಿ ವೇಷದಿಂದ ಕೇತಕೀವನದಲ್ಲಿ ಕಾಣಿಸಿಕೊಳ್ಳುತ್ತಾನೆ. ಅರ್ಜುನನೇ ಸನ್ಯಾಸಿಯಾಗಿ ಬಂದ ವಿಚಾರ ತಿಳಿಯದ ಬಲರಾಮ ಕೇತಕೀವನಕ್ಕೆ ಬಂದು ಸನ್ಯಾಸಿಯನ್ನು ಅರಮನೆಗೆ ಕರೆತರುತ್ತಾನೆ. ಸುಭದ್ರೆಯನ್ನು ಯತಿಯ ಸೇವೆಗೆ ನಿಯಮಿಸುತ್ತಾನೆ. ಯತಿಯ ಸೇವೆಯನ್ನು ನಿಷ್ಠೆಯಿಂದ ಮಾಡುತ್ತಾ ಸುಭದ್ರೆ ಪಾರ್ಥನ ವಿಚಾರ ಕೇಳುತ್ತಾಳೆ. ಆಗ ಅರ್ಜುನನೇ ಆ ಯತಿಯೆಂದು ತಿಳಿದಾಗಿನ ಅವಳ ಅವಸ್ಥೆಯನ್ನು ಭೀಮವ್ವ ವರ್ಣಿಸುತ್ತಾರೆ.

ಅರ್ಜುನನೆಂಬೊ ವಾಕ್ಯವ ಕೇಳಿ ಅತಿ ಬ್ಯಾಗ
ಲಜ್ಜೆಯಿಂದಲಿ ಶಿರವ ಬಾಗಿ ನಾಚಿಕೆಯಿಂದ
ವಜ್ರಕಂಬವ ನಂಬಿ ನಿಂತಳಾ ಸುಕುಮಾರಿ
ಗೆಜ್ಜೆ ಪಾದುಂಗುಷ್ಟದಿಂದೂರ್ವಿಯನೆ ಬಗೆಯುತ [58]

ಕೃಷ್ಣನ ಸಹಾಯದಿಂದ ಅರ್ಜುನ–ಸುಭದ್ರೆ ವಿವಾಹವಾಗುತ್ತದೆ. ಈ ವಿಷಯ ತಿಳಿದ ಬಲರಾಮ ಕೋಪಗೊಳ್ಳುತ್ತಾನೆ. ಅವನನ್ನು ಕೃಷ್ಣನೇ ಸಮಾಧಾನಪಡಿಸುತ್ತಾನೆ. ಹಸ್ತಿನಾವತಿಗೆ ಹೋಗಿ ಎಲ್ಲರೂ ಬೀಗರೊಡನೆ ಉಂಡುಟ್ಟು ಓಕುಳಿಯಾಡಿ ದ್ವಾರಕೆಗೆ ಹಿಂದಿರುಗುತ್ತಾರೆ.

ರತಿ ಕಲ್ಯಾಣ:

ಭಾಗವತದಲ್ಲಿ ಬರುವ ರತಿ–ಮನ್ಮಥರ ವಿವಾಹವನ್ನು ಭೀಮವ್ವ 61 ಧ್ವನಿಗಳಲ್ಲಿ ವಿವರಿಸಿದ್ದಾರೆ. ಇದರಲ್ಲಿ ದ್ರೌಪದಿಯ ಪಾತ್ರಕ್ಕೇ ಹೆಚ್ಚು ಮಹತ್ವ ನೀಡಿದ್ದಾರೆ. ಮನ್ಮಥನು ಶಂಬರಾಸುರನನ್ನು ಸಂಹರಿಸಿದ ನಂತರ ನಾರದರು ಹೇಳಿದಂತೆ ರತಿ ಅಗ್ನಿ ಪ್ರವೇಶ ಮಾಡಿ ನಂತರ ಕಮಲರಾಜನ ಮಗಳಾಗಿ ಜನಿಸುತ್ತಾಳೆ. ರತಿಯು ಮನ್ಮಥನನ್ನೇ ಆರಾಧಿಸುತ್ತಿರುತ್ತಾಳೆ. ಇತ್ತ ರತಿಯ ಅಗಲಿಕೆ ತಾಳದೆ ವಿರಹದಿಂದ ಬೇಯುತ್ತಿದ್ದ ಮನ್ಮಥನ ಸ್ಥಿತಿಯನ್ನು ರುಕ್ಮಿಣಿ ಕೃಷ್ಣನಿಗೆ ತಿಳಿಸುತ್ತಾಳೆ. ಏಳು ದಿನಗಳಲ್ಲಿ ಕನ್ಯೆ ತರದಿದ್ದರೆ ತಾನು ಹದಿನಾರು ಸಾವಿರ ಸತಿಯರನ್ನು ಬಿಡುವುದಾಗಿ ಕೃಷ್ಣ ಶಪಥ ಮಾಡುತ್ತಾನೆ. ಎಲ್ಲಿ ಹುಡುಕಿದರೂ ಕನ್ಯೆ ಸಿಗದೆ ಕೃಷ್ಣ ಬೇಸರಗೊಂಡಾಗ ನಾರದರು ಬಂದು ರತಿಯ ಬಗ್ಗೆ ತಿಳಿಸುತ್ತಾರೆ. ಕಮಲರಾಜನಲ್ಲಿಗೆ ಕೃಷ್ಣ ಹೋಗದೆ ದ್ರೌಪದಿಯನ್ನು ಕಳುಹಿಸಲು ನಾರದರು ಹೇಳುತ್ತಾರೆ.

ಕೃಷ್ಣನ ಪ್ರತಿನಿಧಿಯಾಗಿ ಕಮಲರಾಜನಲ್ಲಿಗೆ ಬಂದ ದ್ರೌಪದಿ ವಿಷಯ ತಿಳಿಸಿದಾಗ ಕಮಲರಾಜ ಸಿಟ್ಟಾಗಿ ಗೋವು ಕಾಯುವ, ಗೊಲ್ಲತಿಯರ ಸೀರೆ ಕದ್ದ, ಗೊಲ್ಲನಾದ ಕೃಷ್ಣನ ಬೀಗತನ ತನಗೆ ಬೇಡವೆಂದು ನುಡಿಯುತ್ತಾನೆ. ದ್ರೌಪದಿ 'ಕೃಷ್ಣಾ' ಎಂದು ಗಟ್ಟಿಯಾಗಿ ಕೂಗಿ ರತಿಯನ್ನು ಎಚ್ಚರಿಸುತ್ತಾಳೆ. ರತಿಯು ತಂದೆ

ತಾಯಿಗಳ ಬಳಿ ಬಂದು ಮನ್ಮಥನಿಗೆ ಕೊಟ್ಟು ವಿವಾಹ ಮಾಡದಿದ್ದರೆ ತಾನು ಪ್ರಾಣ ಬಿಡುವುದಾಗಿ ಹೇಳುತ್ತಾಳೆ. ದ್ರೌಪದಿಯನ್ನು ಕರೆಸಿ ತನ್ನ ಅಕ್ಕನ ಮಗ ಕೌಂಡ್ರಿಕ ದುಷ್ಟನೆಂದೂ, ರತಿಯನ್ನು ವಿವಾಹವಾಗಲು ಎಣಿಸಿದ್ದನೆಂದೂ ಹೇಳುತ್ತಾನೆ. ಮನೆಯಲ್ಲಿ ವಿವಾಹದ ಸಂಭ್ರಮ ತುಂಬುತ್ತದೆ. ಕೌಂಡ್ರಿಕನು ರತಿಯನ್ನು ಹೊತ್ತೊಯ್ಯುತ್ತಾನೆ. ಕಮಲರಾಜನ ದಂಡು ಸೋತು ಬರುತ್ತದೆ. ರುಕ್ಮಿಣಿ ದ್ರೌಪದಿಯನ್ನು ಯುದ್ಧಕ್ಕೆ ಕಳುಹಿಸುತ್ತಾಳೆ. ದ್ರೌಪದಿ ತನ್ನ ಸಹಜ ಸೌಂದರ್ಯ ತೊರೆದು ಭೀಕರ ರೂಪ ತಾಳುತ್ತಾಳೆ. ಸೌಂದರ್ಯವನ್ನು ವರ್ಣಿಸುವಂತೆಯೇ ದ್ರೌಪದಿಯ ಘೋರ ರೂಪವನ್ನು ಚಿತ್ರಿಸುವಲ್ಲಿ ಭೀಮವ್ವ ಜಾಣ್ಮೆ ತೋರಿದ್ದಾರೆ. ಸಂದರ್ಭಕ್ಕೆ ತಕ್ಕಂತೆ ವರ್ಣನೆಗಳನ್ನು ಮಾಡಿರುವುದು ಅವರ ಪ್ರತಿಭೆಗೆ ನಿದರ್ಶನವಾಗಿದೆ. ದ್ರೌಪದಿಯ ರೂಪ ಭಯ ಹುಟ್ಟಿಸುವಂತೆ ಚಿತ್ರಿಸಿದ್ದಾರೆ. ರಣರಂಗದ ವರ್ಣನೆ, ದ್ರೌಪದಿಯ ಶೌರ್ಯದಲ್ಲಿ ವೀರ ರಸ ತುಂಬಿ ಬಂದಿದೆ.

ಕೌಂಡ್ರಿಕನನ್ನು ಸಂಹರಿಸಲು ದ್ರೌಪದಿ ಘೋರ ರೂಪ ತಳೆಯುತ್ತಾಳೆ.

ಆಲಯದಂಥ ಕಿವಿಗಳು ಬಂಡಿಗಾಲಿಯಂಥ ಹರಳಿನ ವಾಲೆಗಳು, ಜೋಲು ಬಿದ್ದಂಥ ತುಟಿಗಳು ದೊಡ್ಡ ಭೇರಿಗಳಂತಹ ಸ್ತನಗಳು, ವಿಶಾಲ ನೇತ್ರದಿಂದ ಕಿಡಿಗಳು ಸಿಡಿಯುತ್ತಿರಲು, ರಥ ಚಕ್ರದಂತಹ ನೇತ್ರಗಳನ್ನು ಹೊಂದಿದ್ದ ದ್ರೌಪದಿಯು ಪರ್ವತದಂತೆ ಹೊಟ್ಟೆ ಬೆನ್ನುಗಳನ್ನು ಹೊಂದಿ ಭೀಕರವಾಗಿ ತೋರುತ್ತಿದ್ದಳು.

ಕೋರೆ ಹಲ್ಲು, ನಾಲಿಗೆಯನ್ನು ಶತಯೋಜನ ಚಾಚಿ ಭಯಂಕರವಾಗಿ ಕಾಣುತ್ತಿದ್ದಳು. ದ್ರೌಪದಿಯ ರೂಪ ಕಂಡ ಅರ್ಜುನನ ಅವಸ್ಥೆ ಮರುಕ ಹುಟ್ಟಿಸುವಂತೆ ಚಿತ್ರಿಸಿದ್ದಾರೆ. ದ್ರೌಪದಿಯು 'ಏಳು ಮಲ್ಲಿಗೆ ತೂಕ' ಈ ರಕ್ಕಸಿ ಯಾರೆಂದು ಅರ್ಜುನ ಕಳವಳಗೊಳ್ಳುತ್ತಾನೆ. ಕೃಷ್ಣ ದ್ರೌಪದಿಯನ್ನು ಘೋರ ರೂಪ ತ್ಯಜಿಸಲು ಕೇಳಿಕೊಳ್ಳುತ್ತಾನೆ. ಕೌಂಡ್ರಿಕನನ್ನು ಕೊಂದು ದ್ರೌಪದಿ ಗಂಗಾಸ್ನಾನ ಮಾಡಿ ತನ್ನ ಹಿಂದಿನ ರೂಪದಲ್ಲಿ ರತಿಯನ್ನು ತನ್ನ ಬಗಲಲ್ಲಿ ಹೊತ್ತು ತಂದು ಕಮಲರಾಜನ ಬಳಿ ಇಳಿಸುತ್ತಾಳೆ. ಇದು ಭೀಮವ್ವನವರದೇ ಕಲ್ಪನೆಯಲ್ಲಿ ಅರಳಿದೆ. ರತಿ–ಮನ್ಮಥರ ವಿವಾಹ ನೆರವೇರುತ್ತದೆ. ವಿವಾಹದ ವಿವಿಧ ಆಚರಣೆಗಳನ್ನು ಭೀಮವ್ವ ವಿಸ್ತಾರವಾಗಿ ವರ್ಣಿಸಿದ್ದಾರೆ.

<u>ಶಂಬರಾಸುರ ಕಾಳಗ:</u>

ದಡಿಗದ ಲಕ್ಷ್ಮೀನರಸಮ್ಮ ರತಿ ಕಲ್ಯಾಣದ ಕಥೆಯನ್ನು ಮನ್ಮಥನು ಶಂಬರಾಸುರನನ್ನು ಸಂಹರಿಸಿದಲ್ಲಿಂದ ಯಕ್ಷಗಾನ ಮಟ್ಟಿನಲ್ಲಿ ಹೇಳಿದ್ದಾರೆ. ದ್ವಾರಕೆಯಲ್ಲಿದ್ದ ಕೃಷ್ಣ ರುಕ್ಮಿಣಿಯ ಬಳಿ ಬಂದ

ನಾರದರು ಪರಶಿವನ ವರದಿಂದ ಮನ್ಮಥ ರುಕ್ಮಿಣಿಯಲ್ಲಿ ಹುಟ್ಟುವುದಾಗಿ ಹೇಳುತ್ತಾನೆ. ಶಂಬರನನ್ನು ಕೊಲ್ಲುವ ಮನ್ಮಥ ಜನಿಸುತ್ತಾನೆ. ಇತ್ತ ಲೋಕ ಕಂಟಕನಾದ ಶಂಬರಾಸುರನ ಬಳಿ ಬಂದ ನಾರದ ಅವನನ್ನು ಕೊಲ್ಲಲು ಮನ್ಮಥ ಹುಟ್ಟಿರುವ ವಿಚಾರ ತಿಳಿಸುತ್ತಾನೆ. ಶಂಬರಾಸುರನು ಕೋಪದಿಂದ

ಎನುತ ಬಂದನು ಖಳನು ಕೋಪದಿ ಕ್ಷಣದಿ ದ್ವಾರಕಪುರವ ಕಂಡನು
ನೊಣದ ರೂಪದಿ ಪುರವ ಪೊಕ್ಕನು ಖಳನು ಮೋಸದಲಿ [59]

ಮನ್ಮಥನನ್ನು ಹೊತ್ತೊಯ್ದು ಶಂಬರನು ಅವನನ್ನು ಶರಧಿಯಲ್ಲೆಸೆದು ತನ್ನ ಪುರಕ್ಕೆ ಹಿಂದಿರುಗಿದ. ಆ ಮಗುವನ್ನು ಒಂದು ದೊಡ್ಡ ಮೀನು ನುಂಗಿತು. ಆ ಮೀನನ್ನು ಬೆಸ್ತರವನು ಅರಸನಿಗೆ ನೀಡಲು ಅವನು ರತಿಗೆ ನೀಡಿ ಅದರಲ್ಲಿ ಅಡುಗೆ ಮಾಡೆಂದು ಹೇಳುತ್ತಾನೆ. ಅದರಲ್ಲಿದ್ದ ಮಗುವನ್ನು ರತಿ ಸಾಕುತ್ತಾಳೆ. ನಾರದ ಮತ್ತೆ ಶಂಬರಾಸುರನಲ್ಲಿ ಹೋಗಿ ಮನ್ಮಥ ಬೆಳೆಯುತ್ತಿರುವ ವಿಚಾರ ತಿಳಿಸುತ್ತಾನೆ. ಶಂಬರಾಸುರ ಆಗ ದಂಡೆತ್ತಿ ಬರುತ್ತಾನೆ. ಮನ್ಮಥನ ರಥಕ್ಕೆ ರತಿಯೇ ಸಾರಥಿಯಾಗುತ್ತಾಳೆ. ಮನ್ಮಥ ಯುದ್ಧದಲ್ಲಿ ಶಂಬರಾಸುರನನ್ನು ಕೊಲ್ಲುತ್ತಾನೆ. ರತಿ ಮನ್ಮಥರು ದ್ವಾರಕೆಗೆ ಬಂದು ಕೃಷ್ಣ ರುಕ್ಮಿಣಿಗೆ ಎರಗುತ್ತಾರೆ. ಆಗ ಅಲ್ಲಿ ಬಂದ ನಾರದರ ಮಾತಿನಂತೆ ರತಿ ಅಗ್ನಿ ಪ್ರವೇಶ ಮಾಡಿ ಕಮಲಾವತಿ ರಾಜನಿಗೆ ಮಗಳಾಗಿ ಹುಟ್ಟುತ್ತಾಳೆ. ಇಲ್ಲಿಂದ ಮುಂದೆ ಭೀಮವ್ವನವರ ರತಿ ಕಲ್ಯಾಣದಂತೆ ಕಥೆಯನ್ನು ಬೆಳೆಸಿದ್ದಾರೆ. ದ್ರೌಪದಿ ಕಮಲರಾಜನಲ್ಲಿ ಮನ್ಮಥನಿಗೆ ಹೆಣ್ಣು ಕೇಳುವುದು, ಕೌಂಡ್ರಿಕನೊಡನೆ ದ್ರೌಪದಿಯ ಯುದ್ಧ, ನಂತರ ರತಿ ಮನ್ಮಥರ ವಿವಾಹದಲ್ಲಿ ಈ ಕಾವ್ಯ ಕೊನೆಯಾಗುತ್ತದೆ.

ಜಲಕ್ರೀಡೆ:

ಭಾಗವತ ದಶಮ ಸ್ಕಂಧದಲ್ಲಿ ಬರುವ ಒಂದು ಸಣ್ಣ ಪ್ರಸಂಗ 'ಜಲಕ್ರೀಡೆ'. ಜಲಕ್ರೀಡೆಯನ್ನು ಭೀಮವ್ವ 103 ಪದ್ಯಗಳಲ್ಲಿ ಮತ್ತು ಓರವಾಯಿ ಲಕ್ಷ್ಮೀದೇವಮ್ಮನವರು ಹದಿನಾಲ್ಕು ವಚನಗಳಲ್ಲಿ ವರ್ಣಿಸಿದ್ದಾರೆ. ಭೀಮವ್ವ ಹೇಳುವಂತೆ ಗೋಪಿಕೆಯರು 'ಕಾತ್ಯಾಯಿನಿ ವ್ರತ' ಮಾಡಿದ್ದನ್ನು ಲಕ್ಷ್ಮೀದೇವಮ್ಮ ಹೇಳಿಲ್ಲ. ಆದರೂ ಭೀಮವ್ವನವರ ಪ್ರಭಾವ ಲಕ್ಷ್ಮೀದೇವಮ್ಮನವರ ಮೇಲೆ ಆಗಿರುವುದನ್ನು ಕಾಣಬಹುದು.

ಗೋಪಿಕಾಸ್ತ್ರೀಯರು 'ಕಾತ್ಯಾಯಿನಿ ವ್ರತ' ಮಾಡಲು ಒಟ್ಟಾಗಿ ಹೊರಟು ನದಿಯಲ್ಲಿ ಮೀಯಲು ಇಳಿಯುತ್ತಾರೆ. ನಗ್ನರಾಗಿ ನದಿಗಿಳಿದು ಜಲಕ್ರೀಡೆಯಾಡುತ್ತಾರೆ. ಅವರನ್ನು ಕಂಡ ಕೃಷ್ಣ ಅವರ ವಸ್ತ್ರಗಳನ್ನೆಲ್ಲ ಎತ್ತಿಕೊಂಡು ಮರದ ಮೇಲೆ ಅವಿತುಕೊಳ್ಳುತ್ತಾನೆ. ಜಲಕ್ರೀಡೆ ಮುಗಿಸಿ ಬಂದ ಗೋಪಿಕೆಯರು ತಮ್ಮ ವಸ್ತ್ರಗಳನ್ನು ಕಾಣದೆ ಕಂಗಾಲಾಗುತ್ತಾರೆ. ಪರಸ್ಪರ ತಮ್ಮ ಸೀರೆಗಳನ್ನು ನೆನೆದು ಕೊರಗಿ ಕಣ್ಣೀರು ಹರಿಸುತ್ತಾರೆ. ಒಬ್ಬೊಬ್ಬರೂ ತಮ್ಮ ಸೀರೆಗಳ ಬಗ್ಗೆ ಹೇಳುವುದನ್ನು ಭೀಮವ್ವ ವರ್ಣಿಸುತ್ತಾರೆ. ನಾನಾ ರೀತಿಯ ಸೀರೆಗಳ

ಹೆಸರುಗಳನ್ನು ಇಲ್ಲಿ ತಂದಿದ್ದಾರೆ. ಆ ಸೀರೆಗಳ ಹಿಂದಿನ ಭಾವನಾತ್ಮಕ ಬೆಲೆಯನ್ನು ತಿಳಿಸುತ್ತಾರೆ. ತಾವು ಕಳೆದುಕೊಂಡ ಸೀರೆಯನ್ನು ವರ್ಣಿಸುತ್ತಾ ತಂದೆ, ತಾಯಿ, ಅತ್ತೆ, ಮಾವ, ಮೈದುನ, ನಾದಿನಿ, ಭಾವಂದಿರ ವ್ಯಕ್ತಿತ್ವವನ್ನೂ ತಿಳಿಸುತ್ತಾರೆ. ಅಂದಿನ ಕಾಲದಲ್ಲಿದ್ದ ಅವಿಭಕ್ತ ಕುಟುಂಬಗಳ ಕಲ್ಪನೆಯನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ.

ಸೀರೆ ಕಳೆದುಕೊಂಡ ಗೋಪಿಕೆಯರ ವ್ಯಥೆಯನ್ನು ಓರವಾಯಿ ಲಕ್ಷ್ಮೀದೇವಮ್ಮ ಹೀಗೆ ಹೇಳುತ್ತಾರೆ.

ಅತ್ತಿಮಾವ ಬಲೆಗತ್ತಿನವರು ಯಿನ್ನೆತ್ತಪೋಗೋಣೆ
ಹತ್ತಿಲ್ಲಿದ್ದ ಜನ ಸುತ್ತುಗಟ್ಟು ತಲಿಹತ್ತಿ ಬಡಿಯರೇನೆ

ಪತಿಯು ಕಂಡರೆನ್ನ ಹತಮಾಡನೇನೆ
ಗತಿಯು ಪೇಳೆ ನೀನೆ ।
ಮತಿ ಹೀನನು ಮೈದುನನು ಮನೆಯಳ ಗತಿಯಿನ್ನು ಏನೇ [60]

ದುರುಳೆ ಅತ್ತಿಗೆ ನಾದಿನಿಯರು ಕರುಳನ್ನು ಕೊಯ್ಯುವರೆಂದು ದುಃಖಿಸುತ್ತಾರೆ. ಕೃಷ್ಣ ತಮ್ಮ ಸೀರೆಗಳನ್ನು ಕದ್ದಿರುವುದನ್ನು ತಿಳಿದು ಅವನಿಗೆ ಶರಣಾಗಿ ಸೀರೆ ನೀಡಲು ಬೇಡುತ್ತಾರೆ. ಕೃಷ್ಣ ವಿವಸ್ತ್ರರಾಗಿ ಸ್ನಾನ ಮಾಡುವುದು ತಪ್ಪೆಂದು ಹೇಳಿ ಅವರವರ ಸೀರೆ ಹಿಂದಿರುಗಿಸುತ್ತಾನೆ.

<u>ಗೊಲ್ಲತಿ ಹಾಡು:</u>

ಇದು ಲಕ್ಷ್ಮೀದೇವಮ್ಮನವರ ಕೃತಿ. ಗೋಕುಲದಲ್ಲಿ ಗೊಲ್ಲತಿಯರು ಕೃಷ್ಣನೊಡನೆ ಆಡುತ್ತಾ, ಪಾಡುತ್ತಾ ಸಂತೋಷದಿಂದಿರುತ್ತಾರೆ. ಅಲ್ಲಿಗೆ ಹೊಸದಾಗಿ ಮದುವೆಯಾಗಿ ಬಂದ ಒಬ್ಬ ಸೊಸೆಯನ್ನು ಅತ್ತೆ ಹೊರಗೆ ಹೋಗಲು ಬಿಡುವುದಿಲ್ಲ. ಮಾಯಾವಿ ಕೃಷ್ಣ ಹೆಣ್ಣು ಮಕ್ಕಳನ್ನು ಹಾಳು ಮಾಡುತ್ತಾನೆಂಬ ಭಾವನೆ ಅವಳಿಗೆ. ಸೊಸೆಯ ಗೆಳತಿಯರು ಶ್ರೀಕೃಷ್ಣನ ರೂಪ, ಗುಣ ಮುಂತಾದವುಗಳನ್ನು ಅವಳ ಮುಂದೆ ಹೇಳಿದಾಗ ಅವಳಿಗೂ ಕೃಷ್ಣನನ್ನು ಕಾಣಲು ಆಸೆಯಾಗುತ್ತದೆ.

ಒಂದು ದಿನ ಅತ್ತೆಯ ಬಳಿ ಬಂದ ಸೊಸೆ ಹಾಲು ಮಾರಲು ಕಳುಹಿಸಬೇಕೆಂದು ಕೇಳಿಕೊಳ್ಳುತ್ತಾಳೆ. ಅತ್ತೆ ಕೃಷ್ಣನ ಬಗೆಗೆ ಹೇಳಿ ಹೆದರಿಸುತ್ತಾಳೆ. ಸೊಸೆಯು ತಾನು ಕೃಷ್ಣನ ಬಲೆಗೆ ಬೀಳುವುದಿಲ್ಲವೆಂದು ಪರಿಪರಿಯಾಗಿ ಹೇಳಿ ಅತ್ತೆಯನ್ನು ಒಪ್ಪಿಸಿ ಶೃಂಗಾರವಾಗಿ ಹೊರಡುತ್ತಾಳೆ. ನಾರಿ ಗೊಲ್ಲತಿಯು ಶೃಂಗಾರವಾದ ಬಗೆಯನ್ನು, ಅವಳ ವಸ್ತ್ರ, ಆಭರಣಗಳನ್ನು ಅಲಂಕರಿಸಿಕೊಂಡ ಬಗೆಯನ್ನು ಆಕರ್ಷಕವಾಗಿ ಹೇಳುತ್ತಾರೆ. ಗೊಲ್ಲತಿಯ ಸೌಂದರ್ಯವನ್ನು ಹೀಗೆ ಹೇಳುತ್ತಾರೆ.

ಕಿಲಿಕಿಲಿ ನಗುತ್ತಾ ಕುಲುಕು ಮಾಡುತ್ತಾ ।
ಲಲಿತಾಂಗಿಯರೊಳು
ಕಲೆತು ಮಾಡುತ್ತಾ । ಸ್ವರ್ಣದ ಬಳ್ಳಿಯೋ । ಸುವರ್ಣದ
ಪುತ್ಥಳಿಯೊ । ವರ ಮನ್ಮಥನ ಮೋಹದ ಗಿಳಿಯೊ [61]

ಎಂದು ವರ್ಣಿಸಿದ್ದಾರೆ. ಗೊಲ್ಲತಿ ಗೆಳತಿಯರೊಂದಿಗೆ ಬಂದಾಗ ಕೃಷ್ಣ ಅವಳ ಗಂಡನಂತೆ ವೇಷ ಧರಿಸಿ ಬರುತ್ತಾನೆ. ಕೃಷ್ಣ ಕಂಡರೆ ಅವಳನ್ನು ಬಿಡುವುದಿಲ್ಲವೆಂದು ಹೇಳಿ ಬಹಳವಾಗಿ ರಮಿಸಿ ಕೂಡುತ್ತಾನೆ. ನಂತರ ತನ್ನ ಗಂಡನೆಂದೇ ಕೃಷ್ಣನನ್ನು ತಿಳಿದ ಗೊಲ್ಲತಿಗೆ ತನ್ನ ನಿಜರೂಪ ತೋರಿಸುತ್ತಾನೆ. ಪೀತಾಂಬರವನ್ನುಟ್ಟು, ಗಂಧ, ಕಸ್ತೂರಿ ತಿಲಕವಿಟ್ಟು, ಕಿರೀಟ, ಕುಂಡಲ, ಕಡಗ, ಕಂಕಣಗಳಂದೊಪ್ಪುವ ಶ್ರೀಹರಿಯ ರೂಪ ಕಂಡು ಧನ್ಯತಾ ಭಾವ ತಾಳುತ್ತಾಳೆ. ಉಳಿದ ಗೋಪಿಯರು ಅಲ್ಲಿಗೆ ಬರುವ ಹೊತ್ತಿಗೆ ಅವಳ ಬುಟ್ಟಿಯು ಬರಿದಾಗಿ ಅಧಿಕ ರೊಕ್ಕ ಸಿಕ್ಕಿರುತ್ತದೆ. ಕೃಷ್ಣನನ್ನು ಬಿಡಲಾರದೆ ಬಿಟ್ಟು ಮನೆಗೆ ಹೋಗುತ್ತಾಳೆ.

ಅತ್ತೆಗೆ ಮುಖ ತೋರಿಸದೆ ತಂದ ಹಣ ಅವಳ ಮುಂದಿಟ್ಟು ಕಂಬದ ಮರೆಗೆ ನಿಲ್ಲುತ್ತಾಳೆ. ಚಾಣಾಕ್ಷಳಾದ ಅತ್ತೆ ಅವಳನ್ನು ಎಳೆದು 'ಕೃಷ್ಣಗೆ ಮಾರುಹೋಗಿದ್ದೀಯಲ್ಲವೆ'? ಎಂದು ಪ್ರಶ್ನಿಸುತ್ತಾಳೆ. ಅವಳ ಸಡಿಲಾದ ಮುಡಿ, ಸಡಿಲಿದ ವಸ್ತ್ರ, ಚೆದುರಿದ ಕುಂಕುಮ ಕಂಡ ಅತ್ತೆ ಘಟ್ಟಿಸಿ ಕೇಳಿದಾಗ ಕೃಷ್ಣ ಪತಿಯ ವೇಷದಲ್ಲಿ ಬಂದು ರಮಿಸಿದ ಕಥೆ ಹೇಳುತ್ತಾಳೆ. ಜಾರತನ ಮಾಡಿದಳೆಂದು ಸೊಸೆಯನ್ನು ಅತ್ತೆ ನಿಂದಿಸಿದಾಗ ಅವಳಿಗೂ ಕೃಷ್ಣನ ದರ್ಶನವಾಗುತ್ತದೆ.

ಈ ಹಾಡಿನಲ್ಲಿ ಲಕ್ಷ್ಮೀದೇವಮ್ಮನವರು ಗೊಲ್ಲತಿಯ ಶೃಂಗಾರ, ಒಡವೆಗಳನ್ನು ವರ್ಣಿಸಿರುವ ರೀತಿ ಆಕರ್ಷಕವಾಗಿದೆ. ಶ್ರೀಕೃಷ್ಣ ಗೊಲ್ಲನಾಗಿ ಬಂದದ್ದು, ಅವನು ಗೊಲ್ಲತಿಯನ್ನು ರಮಿಸುವ ಪರಿ, ಆ ಸಂದರ್ಭದ ಪ್ರಕೃತಿ ವರ್ಣನೆಗಳು ಗಮನ ಸೆಳೆಯುತ್ತವೆ. ಸನ್ನಿವೇಶಗಳನ್ನು ರಸಮಯವಾಗಿ ಚಿತ್ರಿಸುವುದು ಲಕ್ಷ್ಮೀದೇವಮ್ಮನವರ ಪ್ರತಿಭೆಯನ್ನು ತೋರುತ್ತದೆ. ತನ್ನನ್ನು ಒಪ್ಪಿಸಿಕೊಂಡ ಗೊಲ್ಲತಿಗೆ ನಿಜರೂಪ ದರ್ಶನ ಮಾಡಿಸಿದ ಪ್ರಸಂಗವನ್ನು ಭಾವುಕತೆಯಿಂದ ಚಿತ್ರಿಸಿದ್ದಾರೆ.

ಪಾರಿಜಾತ:

ಗಿರಿಯಮ್ಮ 9 ಶ್ಲೋಕ ಮತ್ತು 9 ಪದಗಳಲ್ಲಿ ಪಾರಿಜಾತ ಕೃತಿಯನ್ನು ರಚಿಸಿದ್ದಾಳೆ. ಇದರಲ್ಲಿ ಸತ್ಯಭಾಮೆಯ ಸವತಿ ಮಾತ್ಸರ್ಯ, ಕೃಷ್ಣನ ಪತ್ನೀ ಪ್ರೇಮ ವ್ಯಕ್ತವಾಗುತ್ತದೆ. ದ್ವಾರಕೆಯಲ್ಲಿ ಕೃಷ್ಣನ ಓಲಗಕ್ಕೆ ಒಮ್ಮೆ ನಾರದ ಮಹರ್ಷಿ ಪಾರಿಜಾತ ಹೂವನ್ನು ತರುತ್ತಾರೆ. ಕೃಷ್ಣ ಅದನ್ನು ರುಕ್ಮಿಣಿಗೆ ಮುಡಿಸುತ್ತಾನೆ.

ಸತ್ಯಭಾಮೆ ಈ ವಿಷಯ ತಿಳಿದು ತಲ್ಲಣಗೊಳ್ಳುತ್ತಾಳೆ. ತನ್ನಲ್ಲಿ ಎಂದೂ ಭೇದ ಮಾಡದ ಕೃಷ್ಣ 'ಇಂದು ಮಾಡಿದ ಕುಹಕವ' ಎಂದು ಇನ್ನ್ಯಾರಲ್ಲಿ ತನ್ನ ಸಂಕಟ ಹೇಳಲೆಂದು ಪರಿತಪಿಸುತ್ತಾಳೆ.

ಮಳೆ ಇಲ್ಲದ ಮೇಘವಿದ್ಯಾತಕಮ್ಮ
ಬೆಳೆ ಇಲ್ಲದ ಭೂಮಿ ಮತ್ಯಾತಕಮ್ಮ
ಗಿಳಿ ಇಲ್ಲದ ಗೂಡು ತಾನ್ಯಾತಕಮ್ಮ
ತಾಳಲಾರೆನೊ ಶ್ರೀಕೃಷ್ಣನಿಲ್ಲದೆ ಎಮ್ಮ [62]

ಎಂದು ಹೆಣ್ಣು ಜನ್ಮದ ಬಾಳು ಏತಕೆಂದು ನಿಡುಸುಯ್ಯುತ್ತಾಳೆ. ಅವಳ ನಿರಾಶೆ, ಸಂಕಟ ಕೋಪವಾಗಿ ಮಾರ್ಪಡುತ್ತದೆ. ದೇವ ಲೋಕದ ಹೂವು ತನಗಿಲ್ಲವೆಂದು ತಿಳಿದು

ಸಿಟ್ಟಿನಿಂದತಿ ಘುಡಘುಡಿಸುತ ಆರ್ಭಟಿಸುತ
ಎಲ್ಲರೊಡನೆ ಕೋಪಿಸುತ
ತೊಟ್ಟ ತೊಡಿಗೆ ಈಡಾಡುತ ಬಿಸಾಡುವ
ನನಗ್ಯಾಕಿದು ಎಂದು [63]

ಮನದಲ್ಲಿ ಮರುಗುತ್ತ ಪಟ್ಟೆ ಮಂಚದ ಮೇಲೆ ಒರಗುತ್ತಾಳೆ.

ಸತ್ಯಭಾಮೆಯ ಬಗ್ಗೆ ಅಳುಕನ್ನಿಟ್ಟುಕೊಂಡೇ ಬಂದ ಕೃಷ್ಣ ಅವಳನ್ನು ಸಮಾಧಾನಪಡಿಸಲು ಮುಂದಾಗುತ್ತಾನೆ. ಅಕ್ಕರೆಯಿಂದ ರುಕ್ಮಿಣಿಗೆ ಹೂವು ನೀಡಿ ಇತರರನ್ನು ವಂಚಿಸಿದ ಕೃಷ್ಣನಿಗೆ ರುಕ್ಮಿಣಿಯ ಬಳಿಗೇ ಹೋಗೆನ್ನುತ್ತಾಳೆ. ಕೃಷ್ಣನು ಪಾರಿಜಾತದ ಮರವನ್ನೇ ತಂದು ಕೊಡುವುದಾಗಿ ಬಲರಾಮ, ನಂದಗೋಪನ ಮೇಲೆ ಆಣೆ ಮಾಡಿ ಸತ್ಯಭಾಮೆಯನ್ನು ಸಂತೈಸುತ್ತಾನೆ.

<u>ಶ್ರೀಕೃಷ್ಣ ಬಾಲಲೀಲೆ:</u>

ಶ್ರೀಕೃಷ್ಣ ಬಾಲ ಲೀಲೆ ಭಾಗವತ ದಶಮಸ್ಕಂಧದ ಪ್ರಸಂಗ. ಶ್ರೀಮತಿ ಅಂಬಾಬಾಯಿಯವರು ಶ್ರೀಕೃಷ್ಣನ ಬಾಲ ಲೀಲೆಗಳನ್ನು 360 ನುಡಿಗಳ ದೀರ್ಘ ಕೃತಿಯಾಗಿಸಿದ್ದಾರೆ. ಈ ಕೃತಿಯನ್ನು 1935ರಲ್ಲಿ ರಚಿಸಿರುವುದಾಗಿ ತಿಳಿದು ಬರುತ್ತದೆ.

ವಸುದೇವ ದೇವಕಿಯರ ಮದುವೆ ಮಾಡಿ ಕಂಸ ಮೆರವಣಿಗೆಯಲ್ಲಿ ತೆರಳುತ್ತಿದ್ದಾನೆ. ಆಕಾಶವಾಣಿಯನ್ನು ಕೇಳಿ ಕಂಸ ವಸುದೇವ ದೇವಕಿಯರನ್ನು ಸೆರೆಯಲ್ಲಿಡುತ್ತಾನೆ. ವಸುದೇವ ಎಂಟನೆಯ ಮಗುವಾಗಿ ಹುಟ್ಟಿದ ಕೃಷ್ಣನನ್ನು ಗೋಕುಲಕ್ಕೆ ಒಯ್ದು ಅಲ್ಲಿದ್ದ ಹೆಣ್ಣು ಶಿಶುವನ್ನು ಮರಳಿ ತರುತ್ತಾನೆ. ಕಂಸ ದೇವಕಿಯ ಬಳಿ ಬಂದು ಹೆಣ್ಣು ಮಗುವೆಂದರೂ ಬಿಡದೆ ಕೊಲ್ಲಲು ಯತ್ನಿಸಿದಾಗ ದುರ್ಗೆ ನಭಕ್ಕೆ ಹಾರಿ ಕಂಸನ ವೈರಿ ಬೇರೆಡೆ ಇರುವನೆಂದು ಹೇಳುತ್ತಾಳೆ. ಕಂಸನ ಆಣತಿಯಂತೆ ಬಂದ ಪೂತನಿ, ಶಕಟಾಸುರನನ್ನು

ಸಂಹರಿಸಿದ ಕಥೆ ಅಂಬಾಬಾಯಿ ಹೇಳುತ್ತಾರೆ. ಮಲಗದೆ ಅಳುವ ಕೃಷ್ಣನನ್ನು ಕಂಡು ತಾಯಿಯು ದೃಷ್ಟಿಯಾಗಿರಬಹುದೆಂದು ಬಗೆದು ಹೇಳುವ ಮಾತುಗಳಲ್ಲಿ ದಶಾವತಾರವನ್ನು ಹೇಳಿದ್ದಾರೆ.

ಅಚ್ಚುತನು ತಾನೀಗ ರಚ್ಚು ಹಿಡಿದಿಹನಮ್ಮ
ಬಿಚ್ಚಿಹನು ಕಣ್ಣುಕೈಕಾಲು । ಕೈಕಾಲು ಮಣ್ಣಗಿದು
ಬೆಚ್ಚುವಂದದಲಿ ಬಾಯ್ ತೆರೆದ [64]

ಹತ್ತು ಅವತಾರಗಳನ್ನು ಹೇಳಿ ಗೋಪಿ ದೃಷ್ಟಿ ತೆಗೆಯುತ್ತಾಳೆ. ಶ್ರೀವಾದಿರಾಜರ ಒಂದು ಕೀರ್ತನೆಯನ್ನು ಇದು ನೆನಪಿಸುತ್ತದೆ. ಯಶೋದೆಯ ಕೃಷ್ಣನನ್ನು ಸಲಹುವ ಭಾಗ್ಯವನ್ನು ಅಂಬಾಬಾಯಿ ಕೊಂಡಾಡುತ್ತಾರೆ. ಕೃಷ್ಣನನ್ನು ಎಷ್ಟು ಶೃಂಗರಿಸಿದರೂ ಯಶೋದೆಗೆ ದಣಿವಿಲ್ಲ.

ಅರವಿಂದ ಮುಖಕಾಂತಿ ಅರಳಿದಾ ನೇತ್ರಗಳು ।
ಶಿರಿಯು ಚುಂಬಿಸುವ ತುಟಿ ಕೆಂಪು ತುಟಿ ಕೆಂಪು ಮುದ್ದಿಸುತ
ಸುರಿವೋಳು ಸುಖವ ಗೋಪ್ಯಮ್ಮ

ತುಂಬಿದಾ ಗಲ್ಲಗಳು ಕಂಬು ಕಂಠದ ಸೊಬಗು
ಅಂಬುಜೋದ್ಭವನ ಶಿರಿವೃಕ್ಷ । ಶಿರಿವೃಕ್ಷ ಅಪ್ಪುತಲಿ
ಚುಂಬಿಸೀ ಗೋಪಿ ನಲಿವೋಳು [65]

ಸುಂದರವಾದ ಮಗುವನ್ನು ನೋಡಲು ಗೋಕುಲದ ಸ್ತ್ರೀಯರೆಲ್ಲ ಬಂದರೆಂದು ಹೇಳುತ್ತಾರೆ. ಕೃಷ್ಣನನ್ನು ಯಶೋದೆ ಸಲಹುತ್ತಿದ್ದ ರೀತಿಯನ್ನು ವಿಸ್ತಾರವಾಗಿ ವರ್ಣಿಸುತ್ತಾರೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಬೇರೆ ಬೇರೆ ರೀತಿಯಲ್ಲಿ ದಶಾವತಾರ ಸ್ತುತಿಯಿದೆ. ಬ್ರಹ್ಮಾದಿಗಳಿಗೇ ನಿಲುಕದ ಶ್ರೀಹರಿ ಯಶೋದೆಗೆ ಕಂದನಾಗಿ ಅವಳಿಗೆ ಸಂತಸ ನೀಡುತ್ತಿದ್ದಾನೆ. ಕೋಟಿ ಜನ್ಮದ ತಪಸಿನ ಫಲವಿದ್ದರೂ ದೊರಕದ

ವೇದಗಳು ಕಾಣದಾ ಆದಿ ಮೂರುತಿ ಇಲ್ಲಿ
ಹಾದಿ ತಪ್ಪೀಗ ಬಂದಿಹನೆ ಬಂದಿಹನೆ ಎಂದೆನುತ
ಬೀದಿಯಲಿ ಕೆಳದೆಯರ ಕೇಳಿದಳು [66]

ಕೃಷ್ಣನ ವಿಧ ವಿಧವಾದ ಆಟಗಳು, ಮಣ್ಣು ತಿಂದು ತಾಯಿಗೆ ಬ್ರಹ್ಮಾಂಡ ತೋರಿದ್ದು, ಸಾಲಿಗ್ರಾಮಗಳನ್ನು ಗೋಲಿ ಆಡಿದ್ದು, ಬೆಣ್ಣೆ ಕದ್ದದ್ದು, ಕೃಷ್ಣನನ್ನು ಕಟ್ಟಿ ಹಾಕಲು ಯತ್ನಿಸಿ ಸೋತದ್ದು–ನಂತರ ಕೃಷ್ಣ ತಾನಾಗಿ ದಾಮೋದರನಾದದ್ದು, ಯಮಳಾರ್ಜುನ ಪ್ರಸಂಗ, ಗೋಪಿಯರೊಡನೆ ಕೃಷ್ಣನ ಕಲಹ, ಸರಸ, ಮುಂತಾದ ವಿಷಯಗಳನ್ನು ಈ ಕೃತಿಯಲ್ಲಿ ಬಳಸಿಕೊಂಡಿದ್ದಾರೆ. ಗೋಪಿಯರು ಬಂದು ಯಶೋದೆಯಲ್ಲಿ ಕೃಷ್ಣನನ್ನು ದೂರಿದರೆ ಕೃಷ್ಣ

ಭಂಡನಾರಿಯರು ತಮ್ಮ ಗಂಡ ಊರೊಳಗಿಲ್ಲ
ಪುಂಡರೀಕಾಕ್ಷ ಬಾರೆಂದು ಬಾರೆಂದು ತಕೈಸಿ
ಭಂಡನೆಂತೆಂದು ದೂರುವರೆ [67]

ಎಂದು ಹೇಳುತ್ತಾನೆ. ಇಂತಹ ಕೃಷ್ಣ ಗೋವರ್ಧನ ಗಿರಿ ಎತ್ತಿದ ಪ್ರಸಂಗ, ಮಥುರೆಗೆ ಹೋಗಿ ಮಲ್ಲರನ್ನು, ರಜಕನನ್ನು ಕೊಂದು ಕಂಸನನ್ನು ಸಂಹರಿಸಿ ತನ್ನ ತಾತನಿಗೆ ಪಟ್ಟ ಕಟ್ಟಿದ ಸಂಗತಿಯನ್ನು ವಿವರಿಸುತ್ತಾರೆ. ಗುರು ಮಧ್ವರಾಯರಿಗೆ ಒಲಿದು ಆ ಕೃಷ್ಣನು ಉಡುಪಿಯಲ್ಲಿ ಬಂದು ನಿಂತವನೆಂದು ಹೇಳುತ್ತಾರೆ.

ಕೃಷ್ಣನ ಚೆಲುವು, ಯಶೋದೆಯ ಪುಣ್ಯ, ಗೋಪಿಯರ ಭಾಗ್ಯ, ಗೋಕುಲ ಜನರ ಭಾಗ್ಯವನ್ನು ವಿಸ್ತಾರವಾಗಿ ಈ ಕೃತಿಯಲ್ಲಿ ನಿರೂಪಿಸಲಾಗಿದೆ. ಯಶೋದೆಯ ಮಾತೃ ಹೃದಯದ ಚಿತ್ರಣ ಈ ಕಾವ್ಯದ ಅಂತಃಸತ್ವ.

ಶ್ರೀಕೃಷ್ಣ ಲೀಲಾ:

ಶ್ರೀಕೃಷ್ಣ ಲೀಲೆಗಳಲ್ಲಿ ಒಂದಾದ ಯಮಳಾರ್ಜುನ ಪ್ರಸಂಗವನ್ನು ನಿಡಗುರುಕಿ ಜೀವೂಬಾಯಿಯವರು ಬಳಸಿಕೊಂಡು ಕೃತಿ ರಚಿಸಿದ್ದಾರೆ. ಮಾತು, ಆರ್ಯ, ಕಂದ, ಗೀತಗಳನ್ನು ಬಳಸಿ ಈ ಸಣ್ಣ ಕೃತಿಯನ್ನು ರಚಿಸಿದ್ದಾರೆ.

ಒಂದು ದಿನ ಕೃಷ್ಣನು ಕೈಯಲ್ಲಿ ಬೆಣ್ಣೆ ಹಿಡಿದು ಬರುತ್ತಿರುವಾಗ ಯಶೋದೆ ಅವನನ್ನು ಹಿಡಿದು ಬೆಣ್ಣೆ ಕೊಟ್ಟವರಾರೆಂದು ಕೇಳುತ್ತಾಳೆ. ತಾಯಿಯ ನುಡಿ ಕೇಳಿ ಕೃಷ್ಣ ಹೆದರಿದವನಂತೆ ನಟಿಸಿ

ನೆಲುವಿನ ಮೇಲಿರುತ್ತಿದ್ದ ಬೆಣ್ಣೆಯು
ನಿಲುಕದಿರಲು ಯೋಚಿಸಿ ಮನದಿ
ತರಳರೆಲ್ಲ ಒಂದಾಗುತ ಒರಳನು
ತವಕದಿಂದ ಏರುತ ನವನೀತ ಕದ್ದೆವು ತಾಯೆ [68]

ಎನ್ನುತ್ತಾನೆ. ಯಶೋದೆ ಕೋಪಗೊಂಡು "ಜಡವಾದ ಒರಳು ಸಹ ಕಳ್ಳತನಕ್ಕೆ ಪ್ರಾರಂಭಿಸಿತೇ?" ಎಂದು ಕೃಷ್ಣನನ್ನು ಒರಳಿಗೆ ಕಟ್ಟುತ್ತಾಳೆ. ತಾಯಿ ಮನೆ ಕೆಲಸಗಳನ್ನು ನೋಡಿಕೊಳ್ಳಲು ಹೋದ ತಕ್ಷಣ ಕೃಷ್ಣ ಒರಳನ್ನು ಎಳೆಯುತ್ತಾ ಬಂದು ಅಂಗಳದಲ್ಲಿದ್ದ ಎರಡು ಮರಗಳ ಮಧ್ಯೆ ನುಸುಳಿ ಒರಳನ್ನು ಜೋರಾಗಿ ಎಳೆಯುತ್ತಾನೆ. ಆ ರಭಸಕ್ಕೆ ಆ ಮರಗಳು ದೊಡ್ಡ ಶಬ್ದದೊಂದಿಗೆ ಮುರಿದು ಬೀಳುತ್ತವೆ. ಗೋಪ ಗೋಪಿಯರೆಲ್ಲ ಭೀತರಾಗಿ ಗಾಬರಿಯಿಂದ ಅಲ್ಲಿಗೆ ಬಂದು ಕೃಷ್ಣನ ಉಲ್ಲಾಸದ ಮುಖ ನೋಡುತ್ತಾ ನಿಲ್ಲುತ್ತಾರೆ.

ಎಲ್ಲರೂ ಬೆರಗಾಗಿ ನಿಂತಿರುವಾಗ ಆ ಮರಗಳಿಂದ ಇಬ್ಬರು ಗಂಧರ್ವರು ಹೊರಬಂದು ಕೃಷ್ಣನಿಗೆ ಕೈ ಮುಗಿದು ತಮ್ಮ ಲೋಕಕ್ಕೆ ಹೊರಟುಹೋಗುತ್ತಾರೆ. ಕೃಷ್ಣ ಏನೂ ತಿಳಿಯದವನಂತೆ "ಏನಮ್ಮಾ ನೀವೆಲ್ಲ

ಒಟ್ಟುಗೂಡಿ ಬಂದಿರುವಿರಿ"? ಎನ್ನುತ್ತಾನೆ. ತಾಯಿ ಅತಿ ಸಂತೋಷದಿಂದ ಕೃಷ್ಣನನ್ನು ಎತ್ತಿ ಮುದ್ದಾಡುತ್ತಾಳೆ. ಎಲ್ಲರೂ ಮಂಗಳ ಹಾಡುತ್ತಾರೆ.

ಹರಿದಾಸರ ಅನೇಕ ಕೀರ್ತನೆಗಳಲ್ಲಿ ವರ್ಣಿಸಲಾಗಿರುವ ಈ ಪ್ರಸಂಗವನ್ನು ಜೀವೂಬಾಯಿ ಕಥನ ಕಾವ್ಯ ರೂಪದಲ್ಲಿ ರಚಿಸಿದ್ದಾರೆ.

ಶ್ರೀಕೃಷ್ಣ ಬಾಲ ಲೀಲೆ:

ಶ್ರೀಭಾಗವತದಲ್ಲಿ ದಶಮ ಸ್ಕಂಧ ಮಹತ್ವದ ಭಾಗ. ಈ ಸ್ಕಂಧದಲ್ಲಿ ಶ್ರೀಕೃಷ್ಣನ ಜನನ, ಬಾಲ್ಯ, ಕೃಷ್ಣನ ಲೀಲಾ ವಿನೋದಗಳು, ದುಷ್ಟ ಶಿಕ್ಷಣೆ, ಶಿಷ್ಟ ರಕ್ಷಣೆ, ಮುಂತಾದವನ್ನು ಕಾಣಬಹುದು. ಕೃಷ್ಣ ವಸುದೇವ-ದೇವಕಿಯರ ಮಗನಾದರೂ ಕಂಸನ ದುರಾಚಾರದಿಂದ ಗೋಕುಲದಲ್ಲಿ ಯಶೋದೆ-ನಂದ ಗೋಪರ ಮನೆಯಲ್ಲಿ ಬೆಳೆಯುತ್ತಾನೆ. ಯಶೋದೆಯ ಲಾಲನೆಯಲ್ಲಿ ಬೆಳೆದ ಕೃಷ್ಣನ ತುಂಟತನಗಳನ್ನು ಓರವಾಯಿ ಲಕ್ಷ್ಮೀದೇವಮ್ಮ ವರ್ಣಿಸುತ್ತಾರೆ. ಪೂತನಿ, ಶಕಟ, ಗೂಳಿ ಮುಂತಾದ ರಾಕ್ಷಸರನ್ನು ಕೊಂದ ಕೃಷ್ಣನ ಲೀಲೆಗಳ ಬಗ್ಗೆ ಹೇಳುತ್ತಾರೆ. ತಾಯಿಗೆ ಬಾಯಲ್ಲಿ ಜಗತ್ತನ್ನು ತೋರಿದ್ದು, ಹಸಿವೆ ಎಂದ ಕೃಷ್ಣನನ್ನು ಕಾಯಿಸಿದ್ದಕ್ಕಾಗಿ ಹಾಲು ಮೊಸರಿನ ಗಡಿಗೆಗಳನ್ನು ಒಡೆದದ್ದು, ಯಮಳಾರ್ಜುನ ಪ್ರಸಂಗ, ಮುಂತಾದವುಗಳನ್ನು ಒಂದೊಂದೇ ನುಡಿಯಲ್ಲಿ ಓರವಾಯಿ ಲಕ್ಷ್ಮೀದೇವಮ್ಮ ಹೇಳುತ್ತಾರೆ.

ಕೃಷ್ಣ ನಿಗ್ರಹಿಸಿದ ಅನೇಕ ರಕ್ಕಸರ ಚಿತ್ರಣ, ಗೋಪಿಯರ 'ಕಾತ್ಯಾಯಿನಿ ವ್ರತ'ದ ಪ್ರಸಂಗ, ಕೃಷ್ಣನ ಕೊಳಲಿನ ಆಕರ್ಷಣೆ, ಗೋಪಿಯರು ತಾವು ಮಾಡುತ್ತಿದ್ದ ಕೆಲಸಗಳನ್ನು ಬಿಟ್ಟು ಅವನೆಡೆಗೆ ಧಾವಿಸುವ ರೀತಿ ಇಲ್ಲೆಲ್ಲ ಭೀಮವ್ವನವರ ಕೀರ್ತನೆಗಳನ್ನೇ ಅನುಸರಿಸಿದ್ದಾರೆ.

ಸರಸ್ವತಿ ಬಾಯಿಯವರೂ ಸಹ ಇದೇ ರೀತಿಯಲ್ಲಿ "ಕೃಷ್ಣ ಲೀಲೆ"ಯನ್ನು ಲಾವಣಿ ಮಟ್ಟಿನಲ್ಲಿ ರಚಿಸಿದ್ದಾರೆ. ಕೃಷ್ಣನ ಜನನ, ಬಾಲ್ಯ, ಬಾಲ ಲೀಲೆಗಳನ್ನು 29 ನುಡಿಗಳಲ್ಲಿ ಹೇಳಿದ್ದಾರೆ. ವಸುದೇವ-ದೇವಕಿಯರ ವಿವಾಹ, ಆಕಾಶವಾಣಿ ಕೇಳಿದ ಕಂಸ ಅವರನ್ನು ಸೆರೆಯಲ್ಲಿಟ್ಟದ್ದು, ಕೃಷ್ಣನ ಜನನ, ಗೋಕುಲಕ್ಕೆ ಕೃಷ್ಣನನ್ನು ತೆಗೆದುಕೊಂಡು ಹೋಗಿ ದುರ್ಗೆಯನ್ನು ಮರಳಿ ತಂದದ್ದು, ಕಂಸನು ಕೃಷ್ಣನನ್ನು ಕೊಲ್ಲಲು ಮಾಡಿದ ವಿವಿಧ ಉಪಾಯಗಳು, ಕೃಷ್ಣನ ಬಾಲಲೀಲೆಗಳು, ಕಾಳಿಂಗ ಮರ್ದನ, ಶಕಟಾಸುರ ವಧೆ. ಗೋಪಿಕೆಯರೊಡನೆ ಕೃಷ್ಣನ ಒಡನಾಟ, ಕಂಸವಧೆ, ಇತ್ಯಾದಿಗಳನ್ನು ಹೇಳಿದ್ದಾರೆ. ಈ ಎರಡೂ ಕೃತಿಗಳಲ್ಲಿ ಸಾಮ್ಯತೆ ಇದೆ. ಓರವಾಯಿ ಲಕ್ಷ್ಮೀದೇವಮ್ಮನವರ ಮೇಲೆ ಭೀಮವ್ವನವರ ಪ್ರಭಾವ ಹೆಚ್ಚಾಗಿದೆ.

ಶ್ರೀಕೃಷ್ಣ ರುಕ್ಮಿಣೀ ಕಲ್ಯಾಣ:

ಭಾಗವತ ದಶಮ ಸ್ಕಂಧದಲ್ಲಿ ಬರುವ ಶ್ರೀಕೃಷ್ಣ ರುಕ್ಮಿಣೀ ಕಲ್ಯಾಣವನ್ನು ಯಕ್ಷಗಾನ ಮಟ್ಟಿನಲ್ಲಿ ದಡಿಗದ ಲಕ್ಷ್ಮೀನರಸಮ್ಮ ರಚಿಸಿದ್ದಾರೆ. 71 ನುಡಿಗಳಲ್ಲಿ ರುಕ್ಮಿಣೀ ಕಲ್ಯಾಣವನ್ನು 6 ನುಡಿಗಳಲ್ಲಿ ಮಂಗಳವನ್ನು ರಚಿಸಿದ್ದಾರೆ. ರುಕ್ಮಿಣೀ ಪರಿಣಯ ಕಥೆಯನ್ನು ಮಂಜುಳಾ ಸುಬ್ಬರಾವ್‌ರವರು ಒಂದೊಂದು ಘಟನೆಯನ್ನು ಒಂದೊಂದು ಸ್ವತಂತ್ರವಾದ ಹಾಡಿನ ರೂಪದಲ್ಲಿ ರಚಿಸಿದ್ದಾರೆ. ಒಟ್ಟು 47 ಹಾಡುಗಳಲ್ಲಿ ರುಕ್ಮಿಣೀ ಪರಿಣಯ ಕಥೆಯನ್ನು ಹೇಳಿದ್ದಾರೆ.

ಲಕ್ಷ್ಮೀನರಸಮ್ಮ ರುಕ್ಮಿಣಿಯ ಚೆಲುವನ್ನು, ವಿವಾಹಕ್ಕೆ ಮಾಡಿದ ಸಿದ್ಧತೆಗಳನ್ನು, ಬೀಗರನ್ನು ರುಕ್ಮಿ ಉಪಚರಿಸಿದ ಬಗೆಯನ್ನು ಕುರಿತು ಮಾಡಿರುವ ವರ್ಣನೆಗಳು ಗಮನಾರ್ಹ. ಮಂಜುಳಾರವರು ಅಂಬೆಯ ಪೂಜೆಗೆ ಹೊರಟ ರುಕ್ಮಿಣಿಗೆ ಎದುರಾದ ಶಕುನಗಳನ್ನು ವಿವರಿಸುತ್ತಾರೆ. ಕೃಷ್ಣನ ವಿವಾಹಕ್ಕೆ ಸಜ್ಜಾದ ದ್ವಾರಕೆ, ಮದುಮಗನ ಅಲಂಕಾರ, ಶಿಶುಪಾಲ ದಿಬ್ಬಣಕ್ಕೆ ಸಿದ್ಧನಾದ ರೀತಿ, ಹೆಣ್ಣೊಪ್ಪಿಸುವ ಬಗೆ, ರುಕ್ಮಿಣಿಯ ಸೌಂದರ್ಯ, ಇತ್ಯಾದಿ ವಿಚಾರಗಳನ್ನು ವರ್ಣಿಸಿರುವುದೂ ಗಮನಾರ್ಹ.

ಮಂಜುಳಾ ಸುಬ್ಬರಾವ್‌ರವರು ಶ್ರೀರುಕ್ಮಿಣೀ ಶೋಭನವೆಂಬ ಇನ್ನೊಂದು ಕೃತಿ ರಚಿಸಿದ್ದು ಅದೂ ರುಕ್ಮಿಣಿಯ ಕಲ್ಯಾಣದ ಕಥೆಯೇ ಆಗಿದೆ.

ಚೇಳಿನ ಹಾಡು:

ಓರವಾಯಿ ಲಕ್ಷ್ಮೀದೇವಮ್ಮನವರು ಚೇಳಿನ ಹಾಡನ್ನು ಬರೆದಿದ್ದಾರೆ. ಕೃಷ್ಣ–ರುಕ್ಮಿಣಿಯರ ವಿವಾಹವಾದ ನಂತರ ನಡೆಯುವ ಒಂದು ಪ್ರಸಂಗ.

ರುಕ್ಮಿಣಿ ಭೀಷ್ಮಕ ರಾಜನ ಮಗಳು. ಅವಳ ಅಣ್ಣನಿಗೆ ರುಕ್ಮಿಣಿಯನ್ನು ಶಿಶುಪಾಲನಿಗೆ ವಿವಾಹ ಮಾಡುವ ಬಯಕೆ. ರುಕ್ಮಿಣಿಯು ಕೃಷ್ಣನನ್ನು ಮನಸಾ ವರಿಸಿರುತ್ತಾಳೆ. ರುಕ್ಮಿಗೆ ಈ ವಿಚಾರ ತಿಳಿದಿದ್ದರೂ ತನ್ನ ತಂಗಿ ತಮಗೆ ಸರಿಸಮಾನರಾದ ರಾಜಕುಮಾರನನ್ನು ವರಿಸಬೇಕು, ಗೊಲ್ಲ ಕೃಷ್ಣನನ್ನಲ್ಲ ಎಂಬ ಭಾವನೆ. ಶಿಶುಪಾಲನೊಡನೆ ರುಕ್ಮಿಣಿಯ ವಿವಾಹ ಸಿದ್ಧತೆಗಳು ನಡೆದಿರುತ್ತವೆ. ರುಕ್ಮಿಣಿ ತಮ್ಮ ಕುಲ ಪುರೋಹಿತರ ಮೂಲಕ ಕೃಷ್ಣನಿಗೆ ಪತ್ರ ಬರೆದು ತಾನು ಅಂಬಿಕೆಯ ಪೂಜೆಗೆಂದು ಊರ ಹೊರಗಿನ ಮಂದಿರಕ್ಕೆ ಹೋಗುವಾಗ ತನ್ನನ್ನು ಕರೆದೊಯ್ಯಬೇಕೆಂದು ಹೇಳಿ ಕಳಿಸುತ್ತಾಳೆ. ಅದರಂತೆ ಕೃಷ್ಣ ಬಂದು ಅವಳನ್ನು ಕರೆದುಕೊಂಡು ಹೊರಟು ಬಿಡುತ್ತಾನೆ. ಅವನ ಬೆನ್ನಟ್ಟಿ ಬಂದ ರುಕ್ಮಿ ಸೋತು ಹಿಂತಿರುಗುತ್ತಾನೆ.

ರುಕ್ಮಿಣಿಯನ್ನು ದ್ವಾರಕೆಗೆ ಕರೆತಂದು ಕೃಷ್ಣ ಅವಳನ್ನು ಅರಮನೆಗೆ ಕರೆದೊಯ್ಯುತ್ತಾನೆ. ಶೃಂಗರಿಸಿಕೊಂಡು ಬಂದ ರುಕ್ಮಿಣಿಯನ್ನು ಕಂಡು ಕೃಷ್ಣ ಅವಳನ್ನು ಅಪ್ಪಿಕೊಂಡು ಬಿಡುತ್ತಾನೆ. ಹೆದರಿದ

ರುಕ್ಮಿಣಿ ಬೆವೆತು ನೀರಾಗುತ್ತಾಳೆ. ಇದರಿಂದ ಸಿಟ್ಟಿಗೆದ್ದ ಕೃಷ್ಣ ಶಯನ ಮಂದಿರದ ಅಲಂಕಾರವನ್ನೆಲ್ಲ ಧ್ವಂಸ ಮಾಡಿ ಹೊರಟು ಹೋಗುತ್ತಾನೆ. ಕೃಷ್ಣ ಹೊರಟು ಹೋದದ್ದರಿಂದ ಭಯಪಟ್ಟು ರುಕ್ಮಿಣಿ ಹವಳದ ಕಂಭ ಒರಗಿ ನಿಲ್ಲುತ್ತಾಳೆ. ಆಗ ಕೃಷ್ಣ ಒಂದು ಚೇಳನ್ನು ಸೃಷ್ಟಿಸಿ ಅವಳ ಕೈಗೆ ಚುಚ್ಚಿಸುತ್ತಾನೆ. ರುಕ್ಮಿಣಿ ಜೋರಾಗಿ ಕಿರುಚಿ ಬಿದ್ದು ಮೂರ್ಛೆ ಹೋಗುತ್ತಾಳೆ. ಚೇಳು ಕಡಿದ ಬಾಧೆ ಮತ್ತು ಕೃಷ್ಣನು ಹೊರಟುಹೋದನಲ್ಲ ಎಂದು ಪರಿತಪಿಸುತ್ತಾಳೆ.

ಆ ಸಮಯಕ್ಕೆ ಅಲ್ಲಿ ಬಂದ ನಾರದರು ರುಕ್ಮಿಣಿಯನ್ನು ಸಂತೈಸಿ ರುಕ್ಮಿಣಿ ಮಾಡಿದ್ದು ತಪ್ಪೆಂದು ತಿಳಿಸಿ ಕೃಷ್ಣನನ್ನು ಕರೆತರಲು ಹೋಗುತ್ತಾರೆ. ಕೃಷ್ಣನ ಬಳಿ ಬಂದ ನಾರದರು

> ಸಿಟ್ಟಿನಿಂದಲಿ ಕೆಟ್ಟ ಚೇಳನೂರಿ ದೀ । ಸತ್ತಳಲ್ಲ
> ರುಕ್ಮಿಣೀ ಇನ್ನೆಷ್ಟು ಹೇಳಲೋ ।
> – – – – – – – – – – – – – – – – –[69]

ಎಂದಾಗ ಕೃಷ್ಣ ಕಣ್ಣೀರು ಒತ್ತುತ್ತಾನೆ. ಅಲ್ಲಿಗೂ ಬಿಡದೆ ನಾರದ ಹದಿನಾರು ಸಾವಿರ ಸತಿಯರಿದ್ದರೂ ರುಕ್ಮಿಣಿಗಾಗಿ ಏಕೆ ಅಳುವನೋ ಕೃಷ್ಣ ಎಂದು ವ್ಯಂಗ್ಯವಾಡುತ್ತಾನೆ. ಕೃಷ್ಣನು

> ಅಷ್ಟರೊಳಗೆ ರುಕ್ಮಿಣಿ ಶ್ರೇಷ್ಠಳಿಹಳೋ ।
> ಹೆತ್ತವರ ಬಿಟ್ಟುಯನ್ನ ಮಾಡಿಕೊಂಡಾಳೋ [70]

ಎಂದು ಹೇಳುತ್ತಾನೆ. ನಾರದ ರುಕ್ಮಿಣಿಯ ಬಳಿ ಬಂದು ಕೃಷ್ಣ ತನ್ನ ಮಾತು ಕೇಳದೆ ಉಪೇಕ್ಷೆ ಮಾಡಿದ ಎಂದಾಗ ರುಕ್ಮಿಣಿ ನಂಬದೆ "ನೀನು ಜಗಳಗಂಟ ಹೋಗು" ಎನ್ನುತ್ತಾಳೆ. ಸ್ವತಃ ತಾನೇ ಹೋಗಿ ಪರಿಪರಿಯಿಂದ ಸಮಾಧಾನ ಪಡಿಸಿ ಕರೆತರುತ್ತಾಳೆ. ಕೃಷ್ಣ ರುಕ್ಮಿಣಿಯರು ಒಂದಾಗುತ್ತಾರೆ.

ಈ ಕಥಾನಕದಲ್ಲಿ ಕೃಷ್ಣ ರುಕ್ಮಿಣಿಯರ ಅಲಂಕಾರ, ಶಯನ ಗೃಹದ ಅಲಂಕಾರ, ಕೃಷ್ಣನ ಕೋಪ, ರುಕ್ಮಿಣಿಯ ಪ್ರಲಾಪ, ನಾರದನ ಕಲಹ ಪ್ರಿಯತೆ ಮುಂತಾದುವನ್ನು ಚಿತ್ರಿಸುವಲ್ಲಿ ಈಕೆ ತೋರಿರುವ ಜಾಣ್ಮೆ ಗಮನಾರ್ಹವಾಗಿದೆ.

ಬ್ರಹ್ಮ ಕೊರವಂಜಿ:

ಗಿರಿಯಮ್ಮ ಬ್ರಹ್ಮಕೊರವಂಜಿಯನ್ನು ರಚಿಸಿದ್ದಾಳೆ 68 ನುಡಿ, 11 ವಚನಗಳಲ್ಲಿ ಈ ಕೃತಿಯನ್ನು ರಚಿಸಲಾಗಿದೆ. ಕಂಸ ತನ್ನ ತಂಗಿ ದೇವಕಿಯನ್ನು ವಸುದೇವನಿಗೆ ವಿವಾಹ ಮಾಡಿಕೊಟ್ಟು ಮೆರವಣಿಗೆಯಲ್ಲಿ ತಾನೇ ಸಾರಥಿಯಾಗಿ ರಥ ನಡೆಸುವಾಗ ಆಕಾಶವಾಣಿ ಕೇಳಿ ಬರುತ್ತದೆ. ದೇವಕಿಯ ಗರ್ಭದಿಂದ ಜನಿಸುವ

ಮಗು ತನಗೆ ಮೃತ್ಯುವಾಗುತ್ತದೆ ಎಂಬ ವಿಷಯ ತಿಳಿದ ಕಂಸ ವಸುದೇವ-ದೇವಕಿಯರನ್ನು ಸೆರೆಯಲ್ಲಿಡುತ್ತಾನೆ. ಆಗ ಸ್ವತಃ ಬ್ರಹ್ಮನು ಕೊರವಂಜಿ ವೇಷ ಧರಿಸಿ ಬಂದು ದೇವಕಿಗೆ ಶಕುನ ಹೇಳಿ ಅವಳಿಗೆ ಧೈರ್ಯ ಮೂಡಿಸಿದ್ದು ಈ ಕೃತಿಯ ಕಥಾವಸ್ತು.

ದೇವಕಿ ಕಂಸನ ಸೆರೆಯಲ್ಲಿ ದುಃಖ ಅನುಭವಿಸುತ್ತಾ ಇರುತ್ತಿದ್ದಾಗ ಒಮ್ಮೆ ಒಬ್ಬ ಕೊರವಿಯನ್ನು ಕಾಣುತ್ತಾಳೆ. ಕೊರವಿಯ ಅಲಂಕಾರವನ್ನು ಗಿರಿಯಮ್ಮ ಹೀಗೆ ಹೇಳುತ್ತಾಳೆ.

ಗುಂಜಿಯ ದಂಡೆಯು ತೋಳ ಭಾಪುರಿ ಗಲ್ಲಕೊತ್ತಿದ ವೀಳ್ಯವು
ಮಂಜಾಡಿಯಸರ ಹವಳ ಸರ ಹತ್ತೆಸರವಾ
ಕೊರಳಲಿ ಹೊಳೆಯಲು
ಅಂಜನವಿಟ್ಟು ಅಲರಗಣ್ಣಿಗೆ ಅತಿ ಹರುಷದಿಂದ ಬೇಗ [71]

ಮುತ್ತು, ಮಾಣಿಕ್ಯ, ಹೊನ್ನಿನ ಗೂಡೆಯನ್ನು ಹಿಡಿದು ಬೆನ್ನಿಗೆ ಮಗುವನ್ನು ಕಟ್ಟಿ ಕೊರವಿ ಬರುತ್ತಾಳೆ. ಕೊರವಿಯನ್ನು ಕಂಡ ದೇವಕಿಯು ಅವಳನ್ನು ಕರೆದು ಶಕುನ ಕೇಳುತ್ತಾಳೆ. ಕೊರವಿಯು

ತಿರುಪತಿಯ ತಿಮ್ಮಪ್ಪ ಚಳ್ಳಪಿಳ್ಳೆರಾಯ
ಸುರಪುರವಾಸ ಲಕ್ಷ್ಮೀವರ ಕರುಣವಾಗು [72]

ಎನ್ನುತ್ತಾ ಶಕುನ ಹೇಳಲು ಪ್ರಾರಂಭಿಸುತ್ತಾಳೆ. ದೇವಕಿಯ ಎಡ ಹಸ್ತ ಹಿಡಿದು ನೋಡುತ್ತಾ ಅವಳ ಕಷ್ಟ ಪರಿಹಾರವಾಗುವುದೆಂದು ಶುಭ ನುಡಿಯುತ್ತಾಳೆ. ಎಂಟನೇ ಗರ್ಭದಲ್ಲಿ ಹರಿಯ ಜನನದಿಂದ ದೇವಕಿಯ ಬಂಧನ ನಿವಾರಣೆಯಾಗುವುದಾಗಿ ಹೇಳುತ್ತಾಳೆ. ಕೃಷ್ಣನ ಜನನ, ದುರ್ಗೆಯನ್ನು ಗೋಕುಲದಿಂದ ತರುವುದು, ಗೋಕುಲದಲ್ಲಿ ಕೃಷ್ಣ ಬೆಳೆಯುವುದು, ಅಲ್ಲಿ ಅವನು ಸಂಹರಿಸಿದ ಅಸುರರ ಪ್ರಸ್ತಾಪ, ನಂತರ ಮಥುರೆಗೆ ಬಂದು ಕಂಸನನ್ನು ಕೊಲ್ಲುವುದು ಎಲ್ಲವನ್ನೂ ವಿಸ್ತಾರವಾಗಿ ಗಿರಿಯಮ್ಮ ವರ್ಣಿಸುತ್ತಾಳೆ.

ಕೊರವಿಯ ಮಾತು ನಿಜವಾದರೆ ತನ್ನ ಸೆರೆಮನೆ ಹಿಂಗಿದರೆ "ಹಿಂದಿನ ಭಾಪುರಿ ಕೊಡುವೆನು" ಎಂದು ವೀಳ್ಯವನ್ನು ಕೊರವಿಗೆ ನೀಡುತ್ತಾಳೆ. ಕೊರವಿಯು ತನ್ನ ಮಾತು ಸುಳ್ಳಾಗುವುದಿಲ್ಲವೆಂದು ಮತ್ತೆ ನುಡಿದು ಸತ್ಯಲೋಕಕ್ಕೆ ತೆರಳುತ್ತಾಳೆ. ಇಷ್ಟಾರ್ಥಗಳೆಲ್ಲ ಧರೆಯ ಮೇಲೆ ದೊರಕುವುದೆಂಬ ಫಲಶೃತಿಯೊಂದಿಗೆ ಕತೆ ಮುಕ್ತಾಯವಾಗುತ್ತದೆ.

ಕೃಷ್ಣ ಕೊರವಂಜಿ ಎಂಬ ಕೃತಿಯನ್ನು ಗಿರಿಯಮ್ಮ ರಚಿಸಿರುವುದಾಗಿ ತಿಳಿದು ಬರುತ್ತದೆ. ರುಕ್ಮಿಣಿಯ ವಿವಾಹ ಸಂದರ್ಭದಲ್ಲಿ ಕೃಷ್ಣ ಸ್ವತಃ ಕೊರವಿಯ ವೇಷ ಧರಿಸಿ ರುಕ್ಮಿಣಿಗೆ ಕಣಿ ಹೇಳುವ ನೆಪದಲ್ಲಿ ಬಂದು ತಾನೇ ಅವಳನ್ನು ವರಿಸುವುದಾಗಿ ಹೇಳಿ ಭರವಸೆ ಮೂಡಿಸುತ್ತಾನೆ. ಭಾಗವತದಲ್ಲಿ ಈ ಕಥೆ ಇರುವಂತಹದ್ದೇ ಆದರೆ ಕೊರವಂಜಿಯು ಮಾತ್ರ ಗಿರಿಯಮ್ಮನ ಹೊಸ ಕಲ್ಪನೆ. ಇದು ಅಪೂರ್ಣ

ಕೃತಿಯಾಗಿದ್ದು ಸಮಗ್ರವಾಗಿ ದೊರೆತಿಲ್ಲ. "ನಾರದ ಕೊರವಂಜಿ"ಯ ಹಾಡುಗಳೂ ಅಪೂರ್ಣವಾಗಿದೆ. ಇದರಲ್ಲೂ ಕೃಷ್ಣನೇ ಕೊರವಂಜಿಯ ಪಾತ್ರ ವಹಿಸಿದ್ದಾನೆ.

ಶ್ರೀಹರಿಲೀಲಾ:

ನಿಡಗುರುಕಿ ಜೀವೂಬಾಯಿ "ಭಾಗವತ ಸಪ್ತಾಹ" ಪ್ರವಚನದಿಂದ ಪ್ರೇರಿತರಾಗಿ ಈ ಕೃತಿಯನ್ನು ರಚಿಸಿದ್ದಾರೆ. ವಚನ, ಆರ್ಯ, ಭಾಮಿನೀ ಷಟ್ಪದಿಗಳನ್ನು ಈ ಕೃತಿ ರಚನೆಯಲ್ಲಿ ಬಳಸಿದ್ದಾರೆ. ಶ್ರೀಹರಿ ಎಲ್ಲ ಕಡೆಯೂ ವ್ಯಾಪಿಸಿರುವನೆಂದು. ಅವನು ಸರ್ವಾಂತರ್ಯಾಮಿ. ಸರ್ವವ್ಯಾಪಕ ಎಂಬ ತತ್ವವನ್ನು ಈ ಕೃತಿಯು ಸರಳವಾಗಿ ನಿರೂಪಿಸುತ್ತದೆ.

ಒಮ್ಮೆ ನಾರದರು ದ್ವಾರಕೆಗೆ ಬರುತ್ತಾರೆ. ದ್ವಾರಕೆಯ ವೈಭವ, ಕೃಷ್ಣನ ಅಷ್ಟ ಮಹಿಷಿಯರ ದಿವ್ಯವಾದ ಮನೆಗಳು, ಹದಿನಾರು ಸಾವಿರ ಸತಿಯರ ಮನೆಗಳ ಸೊಬಗು, ಕೃಷ್ಣನ ಅರಮನೆಯ ಶೃಂಗಾರವನ್ನು ವರ್ಣಿಸುತ್ತಾರೆ. ದ್ವಾರಕೆಯಲ್ಲಿ ರುಕ್ಮಿಣಿ, ಸತ್ಯಭಾಮೆಯರೊಡನೆ ನವರತ್ನ ಸಿಂಹಾಸನದಲ್ಲಿ ಕುಳಿತ ಕೃಷ್ಣನ ವೈಭವ ಕಂಡು "ಭೂಲೋಕದಲಿ ಇಂಥ ದೊರೆಗಳಿನ್ಯಾರೆಂದು" ನಾರದರು ಅಚ್ಚರಿ ಪಡುತ್ತಾರೆ. ಕೃಷ್ಣ ರುಕ್ಮಿಣಿ, ಭಾಮೆಯರೊಡನೆ ಇರುವುದನ್ನು ಕಂಡು ಉಳಿದ ಸತಿಯರ ಪಾಡೇನು ಎಂದು ನಾರದ ಜಾಂಬವತಿಯ ಮಂದಿರಕ್ಕೆ ಬಂದಾಗ ರತ್ನದ ಗದ್ದುಗೆಯಲ್ಲಿ ಕೃಷ್ಣ ಜಾಂಬವತಿಯರನ್ನು ಕಾಣುತ್ತಾರೆ. ಮಿತ್ರವಿಂದೆಯ ಮನೆಯಲ್ಲಿ ಮುತ್ತಿನ ಪಟ್ಟೆ ಮಂಚದಲ್ಲಿ ಕೃಷ್ಣ ಮಿತ್ರವಿಂದೆಯರು ಕಂಡು ಬರುತ್ತಾರೆ. ಅಲ್ಲಿಂದ ನೀಲಾದೇವಿಯ ಮನೆಗೆ ಬರಲು ದಾಳ ಪಗಡೆಯಾಡುತ್ತಿರುವ ಕೃಷ್ಣನನ್ನು ಕಾಣುತ್ತಾರೆ.

ಲಕ್ಷಣದೇವಿಯ ಮನೆಯಲ್ಲಿ ಅವಳಿಂದ ಶೃಂಗಾರ ಮಾಡಿಸಿಕೊಳ್ಳುತ್ತ, ಕಾಳಿಂದಿಯ ಮನೆಯಲ್ಲಿ ತೂಗುಮಂಚದಲ್ಲಿ ಕೃಷ್ಣ ಕಂಡು ಬರುತ್ತಾನೆ. ಇನ್ನು ಸೌಳಸಾಸಿರ ಸತಿಯ ಮನೆಗೆ ಹೊರಟು ಬಂದಾಗ

ಒಬ್ಬರ ಮನೆಯಲ್ಲಿ ಯಾಗದ ಕಾರ್ಯ
ಒಬ್ಬರ ಮನೆಯಲ್ಲಿ ಉಪನಯನದ ರಭಸ
ಒಬ್ಬರ ಮನೆಯಲ್ಲಿ ಬೀಗರ ಔತಣ
ಅಬ್ಬರ ನೋಡಿದನು

ಒಬ್ಬರ ಮನೆಯಲಿ ಜನನ ಮಹೋತ್ಸವ
ಒಬ್ಬರ ಮನೆಯಲಿ ಬಂಧುಗಳೌತಣವು
ಒಬ್ಬರ ಮನೆಯಲಿ ನಾಮಕರಣದ
ವೈಭವ ನೋಡಿದನು [73]

ಹದಿನಾರು ಸಾವಿರ ಸತಿಯರ ಮನೆಯಲ್ಲೂ ಕೃಷ್ಣ ವಿವಿಧ ಕಾರ್ಯಗಳಲ್ಲಿ ಮಗ್ನನಾಗಿರುವ ಪರಿ ಕಂಡು ನಾರದರು ಮನಸಾರೆ ಸ್ತುತಿಸುತ್ತಾರೆ. ನಂತರ ದೇವೇಂದ್ರನ ಬಳಿಗೆ ಹೋಗಿ ಈ ವಿಚಾರ ತಿಳಿಸುತ್ತಾರೆ. ದೇವತೆಗಳೆಲ್ಲ ಕೃಷ್ಣನ ಮೇಲೆ ದೇವ ಸುಮಗಳ ಮಳೆ ಸುರಿಸುತ್ತಾರೆ. ಮಂಗಳದೊಂದಿಗೆ ಈ ಕಥೆ ಮುಕ್ತಾಯವಾಗುತ್ತದೆ. ಮಂಗಳದ ಹಾಡಿನಲ್ಲಿ ಕೃಷ್ಣನ ನಾನಾ ಲೀಲೆಗಳನ್ನು ವರ್ಣಿಸಿದ್ದಾರೆ.

ಸಮುದ್ರ ಮಥನ:

ಭಾಗವತದ ಅಷ್ಟಮ ಸ್ಕಂಧದ ಕತೆಯನ್ನು ಭಾಮಿನೀ ಷಟ್ಪದಿ, ಆರ್ಯ, ವಚನ, ಮುಂತಾದ ಛಂದಸ್ಸಿನಲ್ಲಿ ಜೀವೂಬಾಯಿಯವರು ಸಮುದ್ರ ಮಥನದ ಕಥೆ ಹೇಳಿದ್ದಾರೆ. ದೇವತೆಗಳು ಅಮೃತ ಪಡೆದ ಪ್ರಸಿದ್ಧ ಕತೆಯಿದು. ರಾಕ್ಷಸರ ಉಪಟಳದಿಂದ ನೊಂದ ದೇವತೆಗಳು ಶ್ರೀಹರಿಯ ಬಳಿ ಬಂದು ಅವನನ್ನು ಸ್ತುತಿಸುತ್ತಾರೆ. ಪರಿಪರಿಯಾಗಿ ಸ್ತೋತ್ರ ಮಾಡಿದ ದೇವತೆಗಳ ಸಂಕಟ ತಿಳಿದ ಶ್ರೀಹರಿಯು ಅಮೃತ ಪಡೆಯಲು ಸೂಚಿಸುತ್ತಾನೆ. ಆಗ ದೇವತೆಗಳು

ಇಂದಿರೆ ರಮಣನೆ ಚಂದದಿ ಅಮೃತವು
ಮುಂದೆ ದೊರಕುವುದು ಹೇಗೆನಲು
ಮಂದರ ಪರ್ವತ ತಂದು ಸಾಗರದಲಿ
ಚಂದದಿ ಮಥಿಸಲು ದೊರಕುವುದು [74]

ಮಂದರ ಪರ್ವತವನ್ನು ತಮ್ಮಿಂದ ಎತ್ತಲಾಗದು ಎಂದಾಗ ಗರುಡನನ್ನು ಸ್ಮರಿಸಲು ಹೇಳುತ್ತಾನೆ. ಗರುಡನ ಸಹಾಯದಿಂದ ಮಂದರ ಪರ್ವತವನ್ನು ಕ್ಷೀರ ಸಾಗರದಲ್ಲಿಟ್ಟು, ವಾಸುಕಿಯನ್ನು ಕಡೆಯುವ ಹಗ್ಗವನ್ನು ಮಾಡಿ, ದಾನವರ ಸಖ್ಯ ಬೆಳೆಸಿ, ದೇವ ದಾನವರು ಕಡೆಯಲು ಆರಂಭಿಸುತ್ತಾರೆ. ಪರ್ವತ ಮುಳುಗಿ ಹೋಗುತ್ತದೆ. ಶ್ರೀಹರಿಯು ಕೂರ್ಮನಾಗಿ ಪರ್ವತವನ್ನು ತನ್ನ ಬೆನ್ನ ಮೇಲೆ ಹೊತ್ತು ಸಮುದ್ರ ಮಥನಕ್ಕೆ ಸಹಕರಿಸುತ್ತಾನೆ. ಹಾಲಿನ ಕಡಲನ್ನು ಮಥಿಸಿದಾಗ

ಸುರತರು ಕಾಮಧೇನು ಐರಾವತವು
ಪುಟ್ಟಲು ಸುರಲೋಕಕೆ ಕಳುಹಿದರಾಗಲೆ

ಗರಳ ಪುಟ್ಟಲು ಗಂಗಾಧರನು ಸ್ವೀಕರಿಸಿದ
ವರ ಶಶಿ ಪುಟ್ಟೆ ಧರಿಸಿದ ತನ್ನ ಸಿರದೊಳು [75]

ಕ್ಷೀರಸಾಗರದಲ್ಲಿ ನಂತರ ಹುಟ್ಟಿದ ಅಮೃತವನ್ನು ಮೋಹಿನಿ ರೂಪ ಧರಿಸಿ ಹರಿಯು ತನ್ನ ಭಕ್ತರಾದ ದೇವತೆಗಳಿಗೆ ಮಾತ್ರ ಹಂಚುತ್ತಾನೆ. ಲಕ್ಷ್ಮೀದೇವಿಯು ಸಾಗರದಲ್ಲಿ ಹುಟ್ಟಿ ಬರುತ್ತಾಳೆ. ಮೋಹಿನಿಯಾಗಿ ಹರಿ

ಅಸುರರನ್ನು ವಂಚಿಸಿ ದೇವತೆಗಳಿಗೆ ಅಮೃತ ನೀಡಿದಾಗ ದೇವ ದಾನವರಲ್ಲಿ ಕಲಹವುಂಟಾಗುತ್ತದೆ. ದೇವತೆಗಳು ದೈತ್ಯರನ್ನು ಹೆದರಿಸಿ ಓಡಿಸುತ್ತಾರೆ. ಆಗ ಲಕ್ಷ್ಮೀದೇವಿಯು ವನಮಾಲಿಕೆ ಓಡಿದು ಶ್ರೀಹರಿಯನ್ನು ಹುಡುಕುತ್ತಿರುತ್ತಾಳೆ. ಆಗ ಲಕ್ಷ್ಮಿಯು ಇತರ ದೇವತೆಗಳನ್ನು ಅವರ ಅವಗುಣಗಳನ್ನು ಹೇಳುತ್ತ ದೋಷರಹಿತನಾದ ಹರಿಯೇ ಪತಿ ಎಂದು ನೆನೆಯುತ್ತಾಳೆ. ಈ ಸಂದರ್ಭದ ವರ್ಣನೆ ಶ್ರೀವಾದಿರಾಜ ತೀರ್ಥರ "ಲಕ್ಷ್ಮೀಶೋಭಾನೆ" ಪದವನ್ನು ಹೋಲುತ್ತದೆ. ಕೊನೆಗೆ ಲಕ್ಷ್ಮಿಯು ಶ್ರೀಹರಿಯನ್ನು ವರಿಸುತ್ತಾಳೆ. ಶ್ರೀಹರಿಯ ಮೋಹಿನಿ ರೂಪದ ವರ್ಣನೆ ಗಮನಾರ್ಹವಾಗಿದೆ. ಮೋಹಿನಿಯ ಅಲಂಕಾರ, ಒಡವೆ ಮುಂತಾದ ವಿವರಗಳಿವೆ. ದಶಾವತಾರ ವರ್ಣನೆ, ಲಕ್ಷ್ಮಿಯು ಹರಿಯನ್ನು ವಿವಾಹವಾಗುವ ಪ್ರಸಂಗದಲ್ಲಿ ಬಂದಿದೆ.

ಧ್ರುವ ಚರಿತ್ರೆ:

ಧ್ರುವ ಚರಿತ್ರೆಯನ್ನು ಮುಳಿಯ ಮೂಕಾಂಬಿಕೆಯವರು ನಲವತ್ತೊಂದು ನುಡಿಗಳಲ್ಲಿ ರಚಿಸಿದ್ದಾರೆ. ಭಾಗವತದ ಚತುರ್ಥ ಸ್ಕಂಧದಲ್ಲಿ ಧ್ರುವನ ಕತೆ ಬರುತ್ತದೆ. ಉತ್ತಾನಪಾದರಾಜನ ಮಗ ಉತ್ತಮ ತಂದೆಯ ತೊಡೆಯ ಮೇಲೆ ಕುಳಿತಿರುವುದನ್ನು ಧ್ರುವ ಕುಮಾರನು ತಂದೆಯ ತೊಡೆಯೇರಲು ಬಂದಾಗ ಚಿಕ್ಕಮ್ಮ ಸುರುಚಿ ಧ್ರುವನ ಕತ್ತು ಹಿಡಿದು ನೂಕಿ ಬಿಡುತ್ತಾಳೆ. ಅವಮಾನಿತನಾದ ಧ್ರುವ ತಾಯಿ ಸುನೀತಿಯ ಬಳಿ ಬಂದು ತನಗಾದ ಅಪಮಾನವನ್ನು ತಿಳಿಸಿ ತಾನೇಕೆ ತಂದೆಯ ತೊಡೆ ಮೇಲೆ ಕೂರಬಾರದು ಎಂದು ಕೇಳುತ್ತಾನೆ. ಶ್ರೀಹರಿಯನ್ನು ಬಿಟ್ಟು ಅನ್ಯ ಮಾರ್ಗ ಇಲ್ಲವೆಂದು ತಾಯಿ ಹೇಳುತ್ತಾಳೆ. ಧ್ರುವನು ಹರಿಯನ್ನು ಕುರಿತು ತಪಸ್ಸು ಮಾಡಲು ಅಡವಿಗೆ ಬರುತ್ತಾನೆ. ಐದು ವರ್ಷದ ಬಾಲಕ ಕಾಡಿನಲ್ಲಿ ಬರುತ್ತಿರುವಾಗ ನಾರದರು ಬಂದು ಅವನನ್ನು ತಡೆಯುತ್ತಾರೆ. ಅವನನ್ನು ಪರೀಕ್ಷಿಸಿದ ನಾರದರು ಅವನ ತಪಸ್ಸು ಮಾಡುವ ದೃಢ ನಿರ್ಧಾರ ಕಂಡು ಮಂತ್ರ ಉಪದೇಶಿಸಿ ಕಳುಹಿಸುತ್ತಾರೆ.

ಮುನಿಗಳಿರುವ ಸ್ಥಳಕ್ಕೆ ಬಂದ ಧ್ರುವ ಹರಿಯನ್ನು ಕುರಿತು ತಪಸ್ಸು ಮಾಡಲು ಪ್ರಾರಂಭಿಸುತ್ತಾನೆ.

ಒಂದು ತಿಂಗಳು ಫಲಹಾರದೊಳಿರುತ
ಒಂದು ತಿಂಗಳು ತರಗಲೆಯನೆ ತಿನುತ
ಒಂದೆರಡು ತಿಂಗಳು ಜಲದಾಹಾರದಿ
ಸಂದವೀ ಪರಿ ನಾಲ್ಕೆಂಟನೆ ತಿಂಗಳ
ಗನಿಲನಾಹಾರದೊಳಿರಲಂದು [76]

ಘೋರ ತಪಸ್ಸು ಮಾಡುತ್ತಿದ್ದ ಧ್ರುವನನ್ನು ಕರುಣೆಯಿಂದ ಕಾಯಲು ಶ್ರೀಹರಿ ಸಾಕ್ಷಾತ್ಕಾರಗೊಳ್ಳುತ್ತಾನೆ. ಶ್ರೀಹರಿಯ ಸೌಂದರ್ಯವನ್ನು ಮೂಕಾಂಬಿಕೆ ಆರು ನುಡಿಗಳಲ್ಲಿ ವರ್ಣಿಸುತ್ತಾರೆ. ಹರಿಯನ್ನು ಕಂಡ ಧ್ರುವನಿಗೆ

ಮಾತೇ ಹೊರಡದಾದಾಗ ಶ್ರೀಹರಿಯು ಶಂಖವನ್ನು ಧ್ರುವನ ಕೆನ್ನೆಗೆ ಸೋಕಿಸುತ್ತಾನೆ. ಪರಿಪರಿಯಾಗಿ ಸ್ತುತಿಸಲು ಧ್ರುವ ಪ್ರಾರಂಭಿಸುತ್ತಾನೆ. ಶ್ರೀಹರಿಯು ರಾಜ್ಯವನ್ನು ಸುಖವಾಗಿ ಪಾಲಿಸುವ 'ಮೇಲು ಪದವಿಯನ್ನು' ನೀಡಿ ಧ್ರುವನಿಗೆ ಅನುಗ್ರಹಿಸಿದಾಗ ತನಗೆ ರಾಜ್ಯ ಬೇಡವೆಂದು, ಹರಿಯೊಡನೆ ಬರುವೆನೆಂದು ಹೇಳುತ್ತಾನೆ. ಹರಿಯು ತಟ್ಟನೇ ಮಾಯವಾಗುತ್ತಾನೆ. ಉಪಾಯಗಾಣಗೆ ಧ್ರುವ ತನ್ನ ರಾಜ್ಯಕ್ಕೆ ಬರುತ್ತಾನೆ. ಇತ್ತ ರಾಜನ ಬಳಿ ಬಂದ ನಾರದರು ಧ್ರುವನಿಗೆ ಶ್ರೀಹರಿಯು ಅನುಗ್ರಹಿಸಿದ ವೃತ್ತಾಂತವನ್ನು ಹೇಳುತ್ತಾರೆ. ಅರಮನೆಗೆ ಬಂದ ಮಗನನ್ನು ಸಕಲ ಮರ್ಯಾದೆಗಳಿಂದ, ಆದರದಿಂದ ಬರಮಾಡಿಕೊಂಡು ಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟ ಕಟ್ಟಲು

ವಾಸವಾದಿಗಳೆಲ್ಲ ನೆರೆದರಂಬರದಲಿ
ಕೇಶವ ಭಕ್ತನ ಮೇಲೆ ಹೂಮಳೆಯನು
ಲೇಸಾಗಿ ಕರೆದರೊಲವಿಂದ [77]

ಎಂದು ಮಂಗಳ ಹಾಡಿ ಮೂಕಾಂಬಿಕೆಗೆ ಅರ್ಪಿಸಿದ್ದಾರೆ.

ಸುಧಾಮ ಚರಿತ್ರೆ:

ಭಾಗವತದ ಇನ್ನೊಂದು ಪ್ರಸಿದ್ಧ ಕತೆ ಸುಧಾಮನ ಕುಚೇಲೋಪಾಖ್ಯಾನ. ಅದನ್ನು ಭೀಮವ್ವ ಮತ್ತು ಇಂದಿರಾಬಾಯಿಯವರು 'ಸುಧಾಮನ ಚರಿತ್ರೆ' ಎಂದು ರಚನೆ ಮಾಡಿದ್ದಾರೆ. ಭೀಮವ್ವ 193 ನುಡಿಗಳಲ್ಲಿ ಇಂದಿರಾಬಾಯಿ ಆರು ಧ್ವನಿ ಮತ್ತು ಒಂದು ವಚನದಲ್ಲಿ ಸುಧಾಮ ಚರಿತ್ರೆ ರಚಿಸಿದ್ದಾರೆ. ಮಂಜುಳಾ ಸುಬ್ಬರಾವ್ 65 ಚೌಪದಿಗಳಲ್ಲಿ. ತನ್ನ ಬಾಲ್ಯದ ಗೆಳೆಯನಾದ ಕೃಷ್ಣನನ್ನು ಕಂಡು ತನ್ನ ಬಡತನವನ್ನು ಪರಿಹರಿಸಿಕೊಳ್ಳಲು ಸುಧಾಮ ದ್ವಾರಕೆಗೆ ಬರುತ್ತಾನೆ. ಅರಮನೆಯ ಬಾಗಿಲಲ್ಲಿ ಚಾರರು ಅವನನ್ನು ತಡೆಯುತ್ತಾರೆ. ಕೃಷ್ಣನ ಬಳಿ ಹೋಗಿ ಸುದಾಮನ ಆಗಮನವನ್ನು ಹೀಗೆ ವರ್ಣಿಸುತ್ತಾರೆ.

ಹುಟ್ಟ ಮೊದಲೆ ಅನ್ನ ತನ್ನ ಹೊಟ್ಟೆಗುಂಡ ಮನುಜನಲ್ಲ
ಗಟ್ಟಿಗಾಳಿ ಬರಲೀಗ್ಹಾರುವಂತೆ ತೋರುವ

ಅಸ್ಥಿಚರ್ಮ ಆತನಂಗಕ್ಹತ್ತಿಕೊಂಡ ಹೊಟ್ಟೆ ಬೆನ್ನು
ಮತ್ತೆ ನಡೆಯಲಾರ ಮಾತನಾಡಲಾರನು [78]

ಸುದಾಮನ ಬಡತನದ ತೀವ್ರತೆಯನ್ನು ಭೀಮವ್ವ ಸಮರ್ಥವಾಗಿ ಚಿತ್ರಿಸಿದ್ದಾರೆ. ಸುದಾಮನ ಹೆಸರು ಕೇಳಿದ ಕೃಷ್ಣ ತಾನೇ ಎದ್ದು ಬಂದು ಸುದಾಮನನ್ನು ಒಳಗೆ ಕರೆತಂದು ವಿಧವಿಧವಾಗಿ ಉಪಚರಿಸುತ್ತಾನೆ. ಅವನು ತಂದಿದ್ದ ಅವಲಕ್ಕಿ ತೆಗೆದುಕೊಂಡು ಎರಡು ಮುಷ್ಟಿ ತಿಂದು ಬಿಡುತ್ತಾನೆ. ಒಂದು ಮುಷ್ಟಿ ತಿಂದ

ತಕ್ಷಣ ಸುದಾಮನ ದಾರಿದ್ರ್ಯ ನೀಗುತ್ತದೆ. ಎರಡನೇ ಮುಷ್ಠಿಗೆ ವೈಕುಂಠ ಪದವಿ ಪ್ರಾಪ್ತವಾಗುತ್ತದೆ. ಮತ್ತೆ ಕೃಷ್ಣ ಅವಲಕ್ಕಿ ತಿನ್ನಲು ಹೊರಟಾಗ ರುಕ್ಮಿಣಿ ತಡೆಯುತ್ತಾಳೆ. ಸುದಾಮನಿಗೆ ಆಭರಣಗಳಿಂದ ಅಲಂಕರಿಸಿ ನಾನಾ ವಿಧ ಭಕ್ಷ್ಯ ಭೋಜ್ಯಗಳನ್ನು ಉಣ ಬಡಿಸುತ್ತಾರೆ. ಕೃಷ್ಣನ ಅಷ್ಟ ಮಹಿಷಿಯರೇ ಸ್ವತಃ ಬಂದು ಪಿಧ ವಿಧವಾದ ಭಕ್ಷ್ಯ ಭೋಜ್ಯಗಳನ್ನು ಬಡಿಸುತ್ತಾರೆ.

ಕೃಷ್ಣನಿಂದ ಬೀಳ್ಕೊಂಡು ಸುದಾಮ ತನ್ನ ಊರಿಗೆ ಹೊರಟಾಗ ಕೃಷ್ಣನ ಭಟರು ಅವನನ್ನು ನಿಲ್ಲಿಸಿ ಕೃಷ್ಣ ನೀಡಿದ ಆಭರಣ, ವಸ್ತ್ರಗಳನ್ನೆಲ್ಲ ಕಸಿದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಸುದಾಮ ಹರಿಯ ನಿಂದಾ ಸ್ತುತಿ ಮಾಡುತ್ತಾನೆ. ಭೀಮವ್ವನ 18 ನುಡಿಗಳಲ್ಲಿ ನಿಂದಾ ಸ್ತುತಿ ರೂಪವಿದೆ. ಭೀಮವ್ವ ಇಲ್ಲಿ ಕೃಷ್ಣನ ವೈಭವವನ್ನು ಚಿತ್ರಿಸುವಂತೆಯೇ ಕುಚೇಲನ ಬಡತನವನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ. ದ್ವಾರಕೆಯ ವೈಭವ, ಭಕ್ಷ್ಯ ಭೋಜ್ಯಗಳ ವರ್ಣನೆ, ಸುದಾಮನಿಗೆ ಹರಿ ನೀಡಿದ ಪಟ್ಟಣದ ವರ್ಣನೆ, ನಿಂದಾ ಸ್ತುತಿಗಳಲ್ಲಿನ ಹರಿಯ ಲೀಲೆಗಳನ್ನು ಭೀಮವ್ವ ವರ್ಣಿಸಿರುವ ರೀತಿ ಗಮನಾರ್ಹವಾಗಿದೆ. ಶ್ರೀಹರಿ ನೀಡಿದ ಸಂಪತ್ತನ್ನು ತಾನೇ ಅನುಭವಿಸದೆ ಹರಿ ಕೊಟ್ಟದ್ದನ್ನು ದಾನ ಮಾಡುವ ಸುದಾಮನ ಗುಣವನ್ನೂ ಭೀಮವ್ವ ಕೊಂಡಾಡುತ್ತಾರೆ.

ಗಜೇಂದ್ರ ಮೋಕ್ಷ:

ಭಾಗವತ ಸ್ಕಂಧದ "ಗಜೇಂದ್ರ ಮೋಕ್ಷ" ಕತೆಯನ್ನು ಮುಳಿಯ ಮೂಕಾಂಬಿಕೆ ದೀರ್ಘ ಕೃತಿಯಾಗಿ ರಚಿಸಿದ್ದಾರೆ. ಗಜರಾಜನಿಗೊಲಿದ ನಾಗಶಯನನ ಕತೆಯನ್ನು ಹೇಳುವುದಾಗಿ ಮೂಕಾಂಬಿಕೆ ಹೇಳುತ್ತಾರೆ. ಭೀಮವ್ವ ಮತ್ತು ದೊಡ್ಡಿ ಸುಧಾಬಾಯಿಯವರೂ ಕೀರ್ತನ ರೂಪದಲ್ಲಿ ಗಜೇಂದ್ರ ಮೋಕ್ಷ ಕಥೆಯನ್ನು ಹೇಳಿದ್ದಾರೆ. ಮಂಜುಳಾ ಸುಬ್ಬರಾವ್‌ರವರು 10 ಬಿಡಿ ಕೀರ್ತನೆಗಳಲ್ಲಿ ಹೇಳಿದ್ದಾರೆ.

ಪಾಂಡ್ಯ ದೇಶದ ರಾಜ ಇಂದ್ರದ್ಯುಮ್ನ ಧರ್ಮಿಷ್ಠ. ಒಮ್ಮೆ ವನವಿಹಾರಕ್ಕೆ ಕಾಡಿಗೆ ತೆರಳುತ್ತಾನೆ. ಅಲ್ಲಿನ ವನಸಿರಿ, ಪ್ರಾಣಿ ಪಕ್ಷಿಗಳು ರಾಜನ ಮನ ಸೆಳೆಯುತ್ತವೆ. ಆ ಕಾಡಿನಲ್ಲಿದ್ದ ಒಂದು ನದಿ ತನ್ನ ಸುತ್ತಲಿನ ವಾತಾವರಣದಿಂದ ಅತ್ಯಾಕರ್ಷಕವಾಗಿರುತ್ತದೆ. ರಾಜನು ತಾನೂ ನದಿಯಲ್ಲಿ ಮಿಂದು ಹರಿ ಸ್ಮರಣೆಯಲ್ಲಿ ಮೈಮರೆತಿದ್ದಾಗ ಅಗಸ್ತ್ಯರು ಅಲ್ಲಿಗೆ ಬರುತ್ತಾರೆ. ತನ್ನನ್ನು ರಾಜ ಅಲಕ್ಷಿಸಿದನೆಂದು ತಿಳಿದು ಆನೆಯಾಗಿ ಕಾಡಿನಲ್ಲಿ ಅಲೆಯಲು ಶಾಪ ಕೊಡುತ್ತಾರೆ. ಅದನ್ನು ಕೇಳಿ ರಾಜ ಎಚ್ಚೆತ್ತು ಕ್ಷಮೆ ಯಾಚಿಸುತ್ತಾನೆ. ನಾನಾ ಪರಿಯಾಗಿ ಪ್ರಾರ್ಥಿಸಿದ ನಂತರ ಶ್ರೀಹರಿಯ ಚಕ್ರದಿಂದ ಮುಕ್ತಿ ದೊರೆಯುವುದಾಗಿ ಶಾಪ ವಿಮೋಚನೆಯ ದಾರಿ ತಿಳಿಸುತ್ತಾರೆ. ಆ ಕ್ಷಣವೇ ರಾಜ ಆನೆಯಾಗಿ ತನ್ನದೇ ಸಂಸಾರ ಕಟ್ಟಿಕೊಂಡು ಕಾಡು ಮೇಡುಗಳಲ್ಲಿ ಅಲೆಯುತ್ತಿರುತ್ತಾನೆ. ಒಮ್ಮೆ

ಘಟ್ಟ ಬೆಟ್ಟಂಗಳ ಹತ್ತುತ್ತ ಇಳಿಯುತ್ತ
ನಾನಾ ಮೃಗಂಗಳ ಬೆನ್ನಟ್ಟಿ ನಡವುತ್ತ
ಸಿಟ್ಟಿಂದ ಮರಗಳ ಕುಟ್ಟುತ್ತ ಮುರಿಯುತ್ತ
ಬೆಟ್ಟದ ತುದಿಗೇರಿ ಕಲ್ಮುಳ್ಳು ತುಳಿಯುತ್ತ
ಒಟ್ಟಾಗಿ ಕರಿಗಳು ಬೆಟ್ಟವ ಇಳಿದವು [79]

ಹಾಗೆ ಬೆಟ್ಟವಿಳಿದ ಆನೆಗಳು ಬಿರು ಬಿಸಿಲಿನಿಂದ ಬಳಲಿ ನೀರು ಹುಡುಕ ತೊಡಗಿದಾಗ ಮಕರ ಮಡುವನ್ನು ಕಾಣುತ್ತದೆ. ಭಯ ಹುಟ್ಟಿಸುವಂತಿದ್ದ ಆ ಕೊಳಕ್ಕೆ ಆನೆಗಳು ಇಳಿದೇ ಬಿಡುತ್ತವೆ. ನೀರಾಟವಾಡಿ, ನೀರು ಕುಡಿದು ಸಂಭ್ರಮಪಡುತ್ತಿದ್ದಾಗ ಮೊಸಳೆಯೊಂದು ಬಂದು ಗಜರಾಜನ ಕಾಲನ್ನು ಕಚ್ಚಿ ಹಿಡಿಯುತ್ತದೆ. ಗಜರಾಜನ ಕಾಲಿನಿಂದ ರಕ್ತ ಸುರಿಯಲು ಆರಂಭಿಸಿತು. ಬಿಡಿಸಿಕೊಳ್ಳಲು ಆನೆಯು ಪ್ರಯತ್ನ ಮಾಡಿದಂತೆಲ್ಲ ನೆಗಳಿನ ಹಿಡಿತ ಹೆಚ್ಚಾಯಿತು. ಪೂರ್ವ ಜನ್ಮದ ಸ್ಮರಣೆ ಪಡೆದ ಗಜರಾಜ ಹರಿಯನ್ನು, ಅವನ ಹತ್ತವತಾರಗಳನ್ನು ವರ್ಣಿಸುತ್ತಾ, ದೈನ್ಯತೆಯಿಂದ ಸ್ತುತಿ ಮಾಡಲು ಶ್ರೀಹರಿ ಗರುಡನನ್ನೇರಿ ಬಂದೇ ಬಿಡುತ್ತಾನೆ

ಕಡಲ ಶಯನ ಬಂದ ಕರುಣಾ ಸಾಗರ ಬಂದ
ಬಿಡುಗಣ್ಣರೊಡೆಯ ಶ್ರೀಹರಿ ಬಂದ ಮಡುವಿಗೆ
ಶಂಖ ಚಕ್ರಂಗಳ ಕರದೊಳು ಧರಿಸುತ್ತ
ಶಂಕರಮಿತ್ರನು ಬಿಂಕದಿಂದಲಿ ಬಂದ
ಕಿಂಕರ ನರಳುವ ಸಂಕಟವ ಕಂಡು [80]

ಎಂದು ಸಂತೋಷದಿಂದ ಗಜರಾಜ ಶ್ರೀಹರಿಯನ್ನು ಸ್ತುತಿಸಲು ಹರಿಯು ಮಕರಿಯನ್ನು ಸಂಹರಿಸಿ ಗಜರಾಜನೊಡನೆ ವೈಕುಂಠಕ್ಕೆ ತೆರಳುತ್ತಾನೆ.

ಈ ಕೃತಿಯಲ್ಲಿ ಬರುವ ಕಾಡಿನ, ಗಜರಾಜನ ಹಿಂಡಿನ ವರ್ಣನೆ ಗಮನಾರ್ಹವಾಗಿದೆ. ಅನನ್ಯ ಭಕ್ತಿಗೆ ಒಲಿಯುವ ಶ್ರೀಹರಿಯ ಕಾರುಣ್ಯವನ್ನು ಕವಯತ್ರಿ ಮನತುಂಬಿ ಹಾಡಿದ್ದಾರೆ. ಮೊಸಳೆ ಹಿಡಿದಾಗ ಗಜರಾಜ ಅನುಭವಿಸುವ ಸಂಕಟ, ಹರಿಯ ದರ್ಶನವಾದಾಗ ಪಡುವ ಆನಂದ ಎರಡನ್ನೂ ಚಿತ್ರಿಸಿದ್ದಾರೆ.

ಗಾಲವ ಚರಿತ್ರೆ:

ನಿಡಗುರುಕಿ ಜೀವೂಬಾಯಿಯವರು ಗಾಲವ ಚರಿತ್ರೆಯನ್ನು ಆರ್ಯ, ವಚನ, ಪದ್ಯಗಳನ್ನು ಬಳಸಿ ರಚಿಸಿದ್ದಾರೆ. ಗಾಲವ ಋಷಿಗಳು ಒಮ್ಮೆ ಸ್ನಾನಕ್ಕೆ ಬಂದು ನದಿಯಲ್ಲಿ ಸ್ನಾನ ಮಾಡಿ ಅರ್ಘ್ಯ ಕೊಡಲು ನೀರನ್ನು ತೆಗೆದುಕೊಂಡಾಗ ಆ ನೀರು ಮಲಿನವಾಗಿರುತ್ತದೆ.

ಸ್ವಸ್ಥ ಚಿತ್ತವಿಲ್ಲದಿರುವ ಮನದಿ ಯೋಚಿಸಿ
ಅಸ್ತಮಾನದೊಳಗವನ ಸಿರವ ತರಿವೆನೆನುತಲಿ [81]

ಪ್ರತಿಜ್ಞೆ ಮಾಡುತ್ತಾರೆ. ನಂತರ ತನಗೇಕೆ ಇಂತಹ ಯೋಚನೆ ಬಂದಿತೆಂದು ಚಿಂತಿಸುತ್ತಾ ಬರುತ್ತಿರಲು ನಾರದರ ದರ್ಶನವಾಗುತ್ತದೆ. ಆಗ ಎಲ್ಲ ವೃತ್ತಾಂತವನ್ನು ನಾರದರಿಗೆ ತಿಳಿಸುತ್ತಾರೆ. ಗಾಲವರು, ನಾರದರು ಶ್ರೀಕೃಷ್ಣನಿಂದಲ್ಲದೆ ಬೇರಾರಿಂದಲೂ ಗಾಲವರು ಶಾಪ ಕೊಟ್ಟಂತೆ ನಡೆಸಲು ಸಾಧ್ಯವಿಲ್ಲವೆಂದು ತಿಳಿದು ದ್ವಾರಕೆಗೆ ಬರುತ್ತಾರೆ. ಶ್ರೀಕೃಷ್ಣನನ್ನು ಕಂಡು ತಾವು ಬಂದ ಕಾರ್ಯವನ್ನು ತಿಳಿಸುತ್ತಾರೆ. "ಆಗಲಿ ನೋಡೋಣ ಹೋಗಿ ಬನ್ನಿರಿ" ಎಂದ ಕೃಷ್ಣನ ಮಾತನ್ನು ಕೇಳಿ ಸಂತಸದಿಂದ ಗಾಲವರು ಹೊರ ಬರುತ್ತಾರೆ. ನಾರದರು "ಆಗಲಿ ನೋಡೋಣ" ಎಂದ ಮಾತನು ನಂಬಿದರೆ ಗಾಲವರ ಶಪಥ ನೆರವೇರಲಾರದೆಂದು ಹೇಳುತ್ತಾರೆ. ಮತ್ತೆ ಗಾಲವರು ಹರಿಯಲ್ಲಿಗೆ ಹೋಗಿ ಸಂಶಯ ವ್ಯಕ್ತಪಡಿಸಲು ಕೃಷ್ಣ ತಂದೆ, ತಾಯಿ, ಬಂಧು ಬಳಗಗಳ ಮೇಲೆ ಆಣೆ ಇಟ್ಟು ನಂಬಿಸುತ್ತಾನೆ. ಮತ್ತೆ ಈ ವಿಷಯ ತಿಳಿದ ನಾರದರು ತಂದೆ, ತಾಯಿ, ಬಂಧು, ಬಳಗ ಇಲ್ಲದವನ ಆಣೆಗೆ ಮೋಸ ಹೋಗಬಾರದೆಂದು ತಿಳಿಸಿ

ಕೆಟ್ಟಿರಿ ಕೆಟ್ಟಿರಿ ಗಾಲವರೆ ನೀವು
ಗಟ್ಟಿ ವಚನವ ಕೇಳದೆ ಬಂದಿರಿ
ಕೃಷ್ಣ ವಚನವೊ ರಾಮನ ವಚನವೊ
ಮತ್ತೊಮ್ಮೆ ಕೇಳುವುದು [82]

ಎಂದಾಗ ಗಾಲವರು ಮತ್ತೆ ಕೃಷ್ಣನ ಬಳಿ ಬಂದು 'ರಾಮನ ವಚನ' ಪಡೆದು ಬರುತ್ತಾರೆ. ಆಡಿದ ಮಾತಿಗೆ ತಪ್ಪದ ರಾಮನ ವ್ಯಕ್ತಿತ್ವವನ್ನು ಇಲ್ಲಿ ಸೂಕ್ಷ್ಮವಾಗಿ ಚಿತ್ರಿಸಲಾಗಿದೆ.

ಅರ್ಘ್ಯದ ನೀರು ಮಲಿನವಾಗಲು ಕಾರಣನಾದ ಚಿತ್ರರಥನೆಂಬ ಗಂಧರ್ವನ ಬಳಿ ಬಂದು ನಾರದರು ಎಲ್ಲ ವಿಚಾರ ತಿಳಿಸುತ್ತಾರೆ. ಹೆದರಿದ ಗಂಧರ್ವನನ್ನು ಯಮುನಾ ತೀರಕ್ಕೆ ಕರೆತಂದ ನಾರದರು ಅಲ್ಲಿಗೆ ಸ್ನಾನಕ್ಕೆ ಬಂದ ಸುಭದ್ರೆಯಿಂದ "ಶರಣಾಗತರ ಸಂರಕ್ಷಣೆ ಮಾಳ್ಪೆ" ಎಂದು ಹೇಳಿಸಿ ಚಿತ್ರರಥನನ್ನು ಸುಭದ್ರೆಯಲ್ಲಿ ಆಶ್ರಯ ಕೋರುವಂತೆ ಹೇಳುತ್ತಾರೆ. ಸುಭದ್ರೆ ಫಲ್ಗುಣನ ಪಾದದಾಣೆಗೂ ರಕ್ಷಿಸುವುದಾಗಿ ಅಭಯ ನೀಡುತ್ತಾಳೆ. ತನ್ನ ಗಂಡ ಪಾರ್ಥ ಎದುರಿಸಬೇಕಾದ ವೈರಿ ಕೃಷ್ಣ ಎಂದು ತಿಳಿದು ಸುಭದ್ರೆ ಮೂರ್ಛೆ ಬೀಳುತ್ತಾಳೆ. ನಾರದರ ಧೈರ್ಯದ ಮಾತುಗಳಿಂದ ಪ್ರೇರಿತಳಾಗಿ ಅರ್ಜುನನಿಂದ ಚಿತ್ರರಥನನ್ನು ಕಾಪಾಡುವುದಾಗಿ ವಚನ ಪಡೆಯುತ್ತಾಳೆ.

ಕೃಷ್ಣಾರ್ಜುನರ ಯುದ್ಧ ಅನಿವಾರ್ಯವಾಗುತ್ತದೆ. ಧರ್ಮರಾಯ ಯುದ್ಧ ಬೇಡವೆಂದೂ, ಭೀಮಸೇನ ಬೇಕೆಂದೂ ವಾದಿಸುತ್ತಾರೆ. ಹರಿಪಾರ್ಥರ ಸಮರ ನೋಡಲು ದೇವತೆಗಳೆಲ್ಲಾ ಆಕಾಶದಲ್ಲಿ ನೆರೆಯುತ್ತಾರೆ. ಯುದ್ಧ ನಡೆದು ಕೃಷ್ಣ ಚಿತ್ರರಥನ ಶಿರ ಕತ್ತರಿಸಿ ದ್ವಾರಕೆಗೆ ಹೊರಡುತ್ತಾನೆ. ತಾನು ಮಾಡಿದ ಪ್ರತಿಜ್ಞೆಯಂತೆ ಅರ್ಜುನ ಅಗ್ನಿ ಪ್ರವೇಶಕ್ಕೆ ಸಿದ್ಧನಾಗುತ್ತಾನೆ. ಕೃಷ್ಣ ವಿಷಯ ತಿಳಿದು ಹಿಂದಿರುಗಿ ಬಂದು

ಅವನನ್ನು ತಡೆಯುತ್ತಾನೆ. ಚಿತ್ರರಥನನ್ನು ಬದುಕಿಸಲು ಪಾರ್ಥನೇ ಬೇಡಿದಾಗ ಚಿತ್ರರಥನ ರುಂಡ ಮುಂಡಗಳನ್ನು ಹೊಂದಿಸಿ ಕೃಷ್ಣ ಅವನನ್ನು ಬದುಕಿಸುತ್ತಾನೆ. ಮಂಗಳದೊಂದಿಗೆ ಕೃತಿ ಮುಗಿಯುತ್ತದೆ.

ಯಕ್ಷಗಾನದಲ್ಲಿ "ಕೃಷ್ಣಾರ್ಜುನರ ಕಾಳಗ" ಜನಪ್ರಿಯವಾಗಿದ್ದು ಅದೇ ಕತೆಯನ್ನು ಜೀವೂಬಾಯಿ "ಗಾಲವ ಚರಿತ್ರೆ"ಯಾಗಿ ಚಿತ್ರಿಸಿದ್ದಾರೆ.

ಜಾನಪದ ಅಂಶಗಳು:

ಹರಿದಾಸರು ಜನರೊಡನೆ ಬೆರೆತು ಬಾಳಿದವರು, ಆರೋಗ್ಯಕರ ಸಮಾಜ ನಿರ್ಮಿಸಲು ಶ್ರಮಿಸಿದವರು. ಜನರಿಗೆ ಸುಲಭವಾಗಿ ಅರ್ಥವಾಗಲೆಂಬ ಉದ್ದೇಶದಿಂದ ದೇಸೀ ಮಟ್ಟುಗಳನ್ನು ಬಳಸಿಕೊಂಡು ಸಾಹಿತ್ಯ ರಚಿಸಿದರು. ಹೀಗಾಗಿ ದಾಸ ಸಾಹಿತ್ಯದಲ್ಲೂ ಜನಪದ ಮನೋಧರ್ಮವನ್ನು ಕಾಣಬಹುದು.

ಬ್ರಾಹ್ಮಣರ ಸಾಹಿತ್ಯ ಎಂದು ಹೆಸರು ಹೊತ್ತ ದಾಸ ಸಾಹಿತ್ಯ ಕೃತಿಗಳನ್ನು "ಜಾನಪದ" ಎನ್ನಬಹುದೇ ಎಂಬ ಪ್ರಶ್ನೆ ಉಂಟಾಗುತ್ತದೆ. ಆದರೆ ಹೇಳುವವರ ಜಾತಿಯಿಂದ ಆ ಕೃತಿ ಜಾನಪದವೋ, ಶಿಷ್ಟವೋ ಎಂದು ಗುರುತಿಸಲು ಸಾಧ್ಯವಿಲ್ಲ. "ಜನರು ಹೆಚ್ಚು ಹೆಚ್ಚು ಸುಸಂಸ್ಕೃತರಾದಂತೆಲ್ಲ ಅವರ ಭಾವನೆಗಳೂ ಸುಧಾರಿಸುತ್ತವೆ; ಅವರ ಸಮಾಜ ಹೆಚ್ಚು ಹೆಚ್ಚು ಸಂಕೀರ್ಣ ಸ್ವರೂಪ ಪಡೆಯುತ್ತದೆ. ಹೆಚ್ಚು ಹೆಚ್ಚು ರೂಢ ಮೂಲವಾಗುತ್ತ ಹೋಗುತ್ತದೆ. ಅಂಥ ಜನ ಸೃಷ್ಟಿಸುವ ಹಾಡುಗಳಲ್ಲಿ ಜಾನಪದದ ಸೊಗಡು ಕಡಿಮೆಯಾಗುತ್ತ ಬರುತ್ತದೆ."[83] ಹರಿದಾಸರು ಶಿಷ್ಟರಿಗೆ ಜನಪದ ಸಾಹಿತ್ಯದ ಬಗ್ಗೆ ಇದ್ದ ತಾತ್ಸಾರ ಮನೋಭಾವ ಹೋಗಲಾಡಿಸಲು ತಮ್ಮ ಕೃತಿಗಳನ್ನು ಜಾನಪದ ಮಟ್ಟುಗಳಲ್ಲಿ ರಚಿಸಿದರು. ದಾಸ ಮಹಿಳೆಯರೂ ತಮ್ಮ ಕೃತಿಗಳಲ್ಲಿ ಜಾನಪದ ರೂಪಗಳನ್ನು ಬಳಸಿಕೊಂಡಿದ್ದಾರೆ. ಶಿಷ್ಟ ಸಮಾಜದ ನಡುವೆ ಬದುಕಿ, ಶಿಷ್ಟ ಸಾಹಿತ್ಯದ ಪ್ರಭಾವಕ್ಕೆ ಒಳಗಾದ ಮಹಿಳೆ ಜನಪದ ಪ್ರಕಾರಗಳಿಗೂ ಆಕರ್ಷಿತಳಾಗಿದ್ದಾಳೆ. "ಹಾಡುಗಾರ್ತಿ ತನ್ನ ಪರಿಸರಕ್ಕೆ ತಕ್ಕಂತೆ ಈ ಹಾಡುಗಳ ಭಾಷೆಯಲ್ಲಿ ಹೆಚ್ಚು ಸಂಸ್ಕಾರವನ್ನು ಸಾಧಿಸಿಕೊಂಡಿದ್ದಾಳೆ. ಶಾಸ್ತ್ರ ಪುರಾಣಗಳ ಪ್ರಭಾವದಿಂದ ತನ್ನ ಸಾಹಿತ್ಯದ ಮೇಲೆ ಅವುಗಳ ನೇರವಾದ ಮುದ್ರೆಯನ್ನು ಒತ್ತಿಕೊಂಡಿದ್ದಾಳೆ. ಗ್ರಾಮೀಣ ಪ್ರದೇಶದಲ್ಲಿ ಬದುಕಿಯೂ ಆ ಪ್ರದೇಶದ ಶುದ್ಧ ಜನಪದ ಮೂಲಕ ಸಾಹಿತ್ಯದ ನಡುವೆ ಒಂದು ಸ್ಪಷ್ಟ ಗೆರೆಯನ್ನೆಳೆದುಕೊಂಡು ತನ್ನದೇ ಆದ ಪ್ರತ್ಯೇಕ ಸಾಹಿತ್ಯ ಸೃಷ್ಟಿಗೆ ಇವಳು ಕಾರಣಳಾಗಿದ್ದಾಳೆ.[84]

ಜಾನಪದ ಸತ್ವಗಳನ್ನು ರೂಢಿಸಿಕೊಂಡು ದಾಸ ಮಹಿಳೆಯರು ಕೃತಿ ರಚಿಸಿದ್ದಾರೆ. ವಸ್ತು ಮತ್ತು ಶೈಲಿಯ ದೃಷ್ಟಿಯಿಂದ ನೋಡಿದಾಗಲೂ ಇದು ಜಾನಪದದತ್ತಲೇ ಹೆಚ್ಚು ವಾಲುತ್ತದೆ. ಕೋಲುಪದ, ಗೀಗೀಪದ, ಲಾವಣಿ, ಬಯಲಾಟ, ಒಗಟುಗಳು ಇತ್ಯಾದಿ ರೂಪಗಳನ್ನು ತಮ್ಮದೇ ಆದ ರೀತಿಯಲ್ಲಿ ಬಳಸಿಕೊಂಡು ಯಶಸ್ವಿಯಾಗಿದ್ದಾರೆ.

ಕೋಲುಪದ:

ಕೋಲುಪದ ಏಕಕಾಲಕ್ಕೆ ಸಂಗೀತ, ಕುಣಿತ ಮತ್ತು ಆಟಗಳಿಂದ ಕೂಡಿದ ವಿಶಿಷ್ಟ ಜಾನಪದ ಗೀತ ಪ್ರಕಾರ. ಶೃಂಗಾರ, ಹಾಸ್ಯ, ಭಕ್ತಿ ಯಾವ ವಸ್ತುವಾದರೂ ಇದು ಹೊಂದುತ್ತದೆ. ಸಾಹಿತ್ಯಕ್ಕಿಂತ ಲಯವೇ ಪ್ರಧಾನ. ಇಂತಹ ಒಂದು ಜಾನಪದ ಪ್ರಕಾರದಲ್ಲಿ ಗಲಗಲಿ ಅವ್ವ, ಭೀಮವ್ವ, ಕೋಲಾರ ಪದ್ಮಾಬಾಯಿ, ಸೀತಾಬಾಯಿ ರಾ. ಪುರೋಹಿತರವರು ಬಳಸಿಕೊಂಡಿದ್ದಾರೆ.

ಗಲಗಲಿಯ ಅವ್ವ ಮತ್ತು ಭೀಮವ್ವ ಮುಯ್ಯದ ಹಾಡಿನಲ್ಲಿ ಕೋಲುಪದ ಬಳಸಿದ್ದಾರೆ. ಕೀರ್ತನೆಗಳನ್ನು ಕೋಲಾಟದ ಪದಗಳಲ್ಲಿ ನಿರೂಪಿಸಿದ್ದಾರೆ.

ಗಲಗಲಿ ಅವ್ವನವರ ಪ್ರಭಾವ ಸಮಕಾಲೀನ ಹರಿದಾಸರ ಮೇಲೆ ಆಗಿತ್ತು. ಮೋಹನ ದಾಸರ ಕೋಲು ಹಾಡನ್ನು "ಕರ್ನಾಟಕ ಹರಿದಾಸರು" ಗ್ರಂಥದಲ್ಲಿ ಡಾ॥ ವೇದವ್ಯಾಸಾಚಾರ್ಯರು ಮತ್ತು ಮೋಹನ ದಾಸರ ಕುರಿತ ಸಂಶೋಧನ ಕೃತಿ ಪ್ರಕಟಿಸಿರುವ ಶ್ರೀಮತಿ ಮಧುಮತಿ ದೇಶಪಾಂಡೆಯವರು 217 ನುಡಿಗಳ ಕೋಲಾಟ ಪದವೆಂದು ಗುರುತಿಸಿದ್ದಾರೆ. ಅದರಲ್ಲಿ 70ಕ್ಕೂ ಹೆಚ್ಚು ನುಡಿಗಳು ಅವ್ವನವರ ಕೋಲು ಹಾಡಿನಲ್ಲಿ ಬರುವ ತ್ರಿಪದಿಗಳೇ ಆಗಿವೆ. ಇಂತಹ 70 ನುಡಿಗಳು ಮೋಹನದಾಸರ ಕೋಲು ಹಾಡಿನಲ್ಲಿ ಸೇರಿಹೋಗಿದೆ. ಇಲ್ಲಿರುವ ಸಾಧ್ಯತೆಗಳೆಂದರೆ:

ಅವ್ವನವರ ಜನಪ್ರಿಯ ಪದಗಳನ್ನು ಮೋಹನದಾಸರು ತಮ್ಮ ಕೃತಿಗಳಲ್ಲಿ ಸೇರಿಸಿಕೊಂಡಿರಬಹುದು ಅಥವ ಪ್ರತಿ ಮಾಡಿದವರು ಇದನ್ನು ಸೇರಿಸಿರಬಹುದು. ಮೋಹನದಾಸರ ಕೋಲು ಹಾಡಿನಲ್ಲಿ ಜನಪ್ರಿಯವಾಗಿರುವ 70 ತ್ರಿಪದಿಗಳು ಅವ್ವನವರದೇ ಹೊರತು ಮೋಹನದಾಸರದ್ದಲ್ಲ.

ಸೀತಾಬಾಯಿ ರಾ. ಪುರೋಹಿತರವರು ಕೋಲು ಹಾಡನ್ನು ಕೃಷ್ಣ ಲೀಲೆಗಳನ್ನು ಹೇಳಲು ಬಳಸಿದ್ದಾರೆ. ಕಾರಾಗೃಹದಲ್ಲಿ ಕೃಷ್ಣ ಹುಟ್ಟಿದಲ್ಲಿಂದ ಹಾಡು ಪ್ರಾರಂಭವಾಗುತ್ತದೆ. ಕೃಷ್ಣನು ಕೊಂದ ರಕ್ಕಸರು. ಅವನ ಲೀಲೆಗಳನ್ನು 42 ನುಡಿಗಳಲ್ಲಿ ಹೇಳಿದ್ದಾರೆ.

ಹರಪನಹಳ್ಳಿ ಭೀಮವ್ವ ಒಂದು ಕೋಲು ಹಾಡನ್ನು ಮಾತ್ರ ರಚಿಸಿದ್ದಾರೆ. ಇದರಲ್ಲಿ ದಶಾವತಾರ ಸ್ತುತಿ ಇದೆ. ಪಲ್ಲವಿಯಲ್ಲಿ ಮಾತ್ರ "ಕೋಲು ಕೋಲೆನ್ನ" ಎಂದಿದ್ದು ಉಳಿದಂತೆ ರುಕ್ಮಿಣಿಗೂ, ಸತ್ಯಭಾಮೆಗೂ ನಡೆದ ಸಂಭಾಷಣೆಯಿದೆ. ಕೋಲು ಪದ ಪೂರ್ಣ ಪ್ರಮಾಣದಲ್ಲಿ ಇಲ್ಲಿ ಬಳಕೆಯಾಗಿಲ್ಲ.

ಕೋಲಾರ ಪದ್ಮಾಬಾಯಿಯವರು ಕೋಲು ಪದವನ್ನು ವ್ರತ ಪೂಜೆಗಳನ್ನು ವರ್ಣಿಸಲು ಬಳಸಿದ್ದಾರೆ. ಸೀಗೇಗೌರಿ, ಗಿರಿಜಾ ಕಲ್ಯಾಣ, ದಿವಶೀಗೌರಿ, ಚೈತ್ರಗೌರಿ ಕೋಲು ಪದಗಳನ್ನು ಈಕೆ ರಚಿಸಿದ್ದಾರೆ. ಗಿರಿಜಾಕಲ್ಯಾಣ 39 ನುಡಿಗಳಲ್ಲಿದ್ದು ಶೃಂಗಾರ ರಸ ಮುಖ್ಯವಾಗಿ ಬಂದಿದೆ. ಸ್ತ್ರೀ ಧರ್ಮ ಎಂಬ ದೀರ್ಘ ಕೃತಿಯು 109 ನುಡಿಗಳಲ್ಲಿದ್ದು ಸ್ತ್ರೀಯರು ಆಚರಿಸಬೇಕಾದ ಧರ್ಮಗಳ ವಿವರಣೆಯಿದೆ. ಹೆಣ್ಣು ಮಕ್ಕಳು ಅತ್ತೆ ಮನೆಯಲ್ಲಿ ಅನುಸರಿಸಬೇಕಾದ ನೀತಿ ಹೇಳುತ್ತಾರೆ. ಸೀತೆ, ದ್ರೌಪದಿ, ಅಹಲ್ಯಾ ಮುಂತಾದ ಪತಿವ್ರತೆಯರ ದೃಷ್ಟಾಂತದ ಮೂಲಕ ಸ್ತ್ರೀ ಧರ್ಮವನ್ನು ತಿಳಿ ಹೇಳಿದ್ದಾರೆ.

ಮೈದುನ ಅತ್ತಿಗೆ । ನಾದಿನಿ ಭಾವರು ।
ಕಾದು ನಿನ್ನಲಿ । ತಪ್ಪು ಹೊರಿಸಿದರೆ ಕೋಲೆ
ಕಾದು ನಿನ್ನಲಿ । ಹೊರಿಸಿದ್ದುಂಟಾದರೆ ।
ಮೈದುನಗೊಲಿದವಗೆ (ಹರಿಗೆ) ಹೇಳಿಕೊ ಕೋಲೆ [85]

ಲಾವಣಿ:

ಲಾವಣಿಯು ಪ್ರಾಚೀನ ಜಾನಪದ ಪ್ರಕಾರ. ಕಥನ ಪ್ರಧಾನವಾದ ಈ ಪ್ರಕಾರದಲ್ಲಿ ಪಲ್ಲ, ಚೌಕಗಳು ಇವೆ. "ಲಾವಣಿ ಒಂದು ಶಿಸ್ತಿಗೆ ಒಳಪಟ್ಟು ರಚನೆಗೊಂಡ ಗೀತ ಪ್ರಕಾರ. ಪಲ್ಲ, ಚೌಕ ಚಾಲ ದುಡುಕಿ, ಕೂಡಪಲ್ಲ, ಆಗಮ ಇವು ಲಾವಣಿಯ ಅಂಗಗಳು."[86] ಸರಸ್ವತಿಬಾಯಿಯವರ 'ಕೃಷ್ಣ ಲೀಲೆ' 29 ನುಡಿಗಳ ದೀರ್ಘ ಕೀರ್ತನೆ ಕೃಷ್ಣನ ಜನನದಿಂದ ಪ್ರಾರಂಭವಾಗುತ್ತದೆ. ಕೃಷ್ಣನ ಬಾಲ್ಯ, ಬಾಲ ಲೀಲೆಗಳ ಮುಂತಾದವುಗಳನ್ನು ಈ ಕೃತಿ ತಿಳಿಸುತ್ತದೆ. ಕೃಷ್ಣ ಹುಟ್ಟಿದ ನಂತರ ವಸುದೇವ ಅವನನ್ನು ಯಶೋದೆಗೆ ಒಪ್ಪಿಸುವುದು, ಗೋಕುಲದಲ್ಲಿ ಬೆಳೆದ ಕೃಷ್ಣನ ತುಂಟಾಟಗಳು, ಬಾಲ ಲೀಲೆಗಳು, ಕಾಳಿಂಗ ಮರ್ದನ, ಶಕಟಾಸುರ ನಿಗ್ರಹ, ಗೋಪಿಕೆಯರೊಡನಾಟ, ಕಂಸವಧೆ, ಇತ್ಯಾದಿ ರೋಚಕ ಘಟನೆಗಳನ್ನು ಪದ್ಯಗಳ ರೂಪದಲ್ಲಿ ಹೇಳಿದ್ದಾರೆ.

ಒಗಟುಗಳು:

ಭೀಮವ್ವನವರು ಒಗಟಿನ ರೂಪದಲ್ಲಿ, ಕೀರ್ತನೆಗಳನ್ನು ರಚಿಸಿದ್ದಾರೆ. ರಾಸಿ ಹಾಡು ಇಂತಹ ಒಂದು ನಿದರ್ಶನ. ಹನ್ನೆರಡು ರಾಶಿಗಳನ್ನು ಹೇಳುವಂತಹ ಒಂದು ವಿಶೇಷ ಕೀರ್ತನೆಯು ಒಗಟಿನ ರೂಪದಲ್ಲಿದೆ. ಕೃಷ್ಣ ರುಕ್ಮಿಣಿಗೆ ಒಗಟು ಬಿಡಿಸಲು ಹೇಳಿ ಸವಾಲು ಹಾಕುತ್ತಾನೆ.

ಕಾಡಿಗೆ ಕಣ್ಣವಳು, ತುಡುಗು ಮಾರಿಯವಳು,
ದಾವದಾವಾಗ್ಗೆ ಪರರ ಮನಿ ತಿರುಗೋಳು
ನಾರಿ ನೀ ಒಗಟ ಒಡೆಯೆಂದ [87]

ಕೃಷ್ಣನ ಮಾತಿಗೆ ರುಕ್ಮಿಣಿ ಹೀಗೆ ಉತ್ತರಿಸುತ್ತಾಳೆ.

ಅಕ್ಕನ್ನ ಮಾಳಿಗೆಗೆ ಚಕ್ಕನ್ನೇ ಹಾರುವ
ಹೆತ್ತುಪ್ಪ ಬೆಣ್ಣೆ ಮೆಲ್ಲುವ
ಚೆಲ್ಲುವ ಬೆಕ್ಕು ಮತ್ತೇನು ಅರಸರ [88]

ಕೃಷ್ಣ ಇನ್ನೊಂದು ಸವಾಲೆಸೆಯುತ್ತಾನೆ.

ಹೊರಗೆ ಹೊರಳಿ ಕೋಟೆ ಒಳಗೆ ಬೆಳ್ಳಿ ಕೋಟೆ
ತಿಳಿ ನೀರಿನಾಗೆ ಅಮೃತವ' [89]

ಎಂದಾಗ ರುಕ್ಮಿಣಿ

ಅಟ್ಯಂಬೋ ಅಡಿವ್ಯಾಗ ಬೆಟ್ಯಂಬೋ ಗಿಡ ಹುಟ್ಟಿ
ತುಟ್ಟ ತುದಿಗೆ ನೂರೆಂಟು ಫಲವಾಗಿ
ತೆಂಗಿನಕಾಯಿ ಮತ್ತೇನೂ ಅರಸರ [90]

ಎಂದು ಸುಲಭವಾಗಿ ಉತ್ತರಿಸುತ್ತಾಳೆ. ಈ ರೀತಿ ಭೀಮವ್ವ ಒಗಟುಗಳನ್ನು ಬಳಸಿಕೊಂಡು ಕೃತಿ ರಚನೆ ಮಾಡಿದ್ದಾರೆ.

<u>ಶಂಕರ ಗಂಡನ ಹಾಡು:</u>

ಶಂಕರ ಗಂಡನ ಹಾಡು ಗಿರಿಯಮ್ಮನ ಕೃತಿ. ಇದನ್ನು ಗಿರಿಯಮ್ಮ 62 ನುಡಿಗಳಲ್ಲಿ ಹೇಳಿದ್ದಾಳೆ. ಮನ್ಮಥನ ಗರ್ವ ಭಂಗವೇ ಈ ಕಾವ್ಯದ ತಿರುಳು. ಅಹಂಕಾರ ಸಲ್ಲದು. ಸಂಪತ್ತು ಅಶಾಶ್ವತ ಮತ್ತು ದೈವ ಕೃಪೆ ಅಗತ್ಯ ಎಂಬುದನ್ನು ಗಿರಿಯಮ್ಮ ಪ್ರತಿಪಾದಿಸುತ್ತಾಳೆ.

ದ್ವಾರಾವತಿಯ ವಿಲಾಸ ಪಟ್ಟಣದಲ್ಲಿ ಮನ್ಮಥ ಸಕಲ ಸಂಪತ್ತಿನಿಂದ ಕೂಡಿದ್ದನು. ತ್ರೈಲೋಕ್ಯ ವಂದ್ಯ ಶಂಕರ ಗಂಡ (ಶಿವ) ಕೈಲಾಸ ಪುರದ ಅಲ್ಕಾವತಿಯಲ್ಲಿ ತನ್ನ ತಂಗಿ ರತಿಯ ಜೊತೆಯಲ್ಲಿ ಇದ್ದನು.

ಆಡೋಳು ಪಂಚಿ ಪಗಡಿ ಚಿನ್ನದ ಮಣೆಯೊಳು
ಕೂಡಿದ್ದ ಗೆಳತಿಯರ ಒಡನೆ
ಪಾಡೋಳು ಮರಿ ಕೋಗಿಲೆಯಂತೆ ತಂಗಿಯ
ನೋಡಿದ ನವ ಯೌವನವ [91]

ನವಯೌವನದ ರತಿಗೆ ಪುಷ್ಪಬಾಣನೇ ಸರಿಯಾದ ವರನೆಂದು ಶಂಕರ ಮನ್ಮಥನನ್ನು ಕರೆಸಿದನು. ಸಕಲ ಮರ್ಯಾದೆ ನೀಡಿ ಮನ್ಮಥನನ್ನು ಉಪಚರಿಸಿದ ಶಂಕರ ಗಂಡ. ಮನ್ಮಥನು ಅತಿ ದೈನ್ಯದಲಿ ರತಿಯನ್ನು ನೀಡಬೇಕೆಂದು ಬೇಡಿದ. ಶಂಕರ ಗಂಡ ಒಬ್ಬಳೇ ತಂಗಿ ರತಿಯನ್ನು ಹಬ್ಬ ಹುಣ್ಣಿಮೆಗೆ ಕಳಿಸದೆ ನಿರ್ಬಂಧ ಮಾಡುವಿರಾದ್ದರಿಂದ ತಂಗಿಯನ್ನು ಕೊಡಲಾರೆ ಎನ್ನುತ್ತಾನೆ. ಅದಕ್ಕೆ ಮದನನು

ಅನುಮಾನ ಮಾಡುವುದೇಕೋ ನೀ ಇಷ್ಟೊಂದು
ಅವಳಿಗೆ ಸ್ವತಂತ್ರವಿಲ್ಲೇನು
ನೆನೆದಾಗ (ಕಳುಹುವೆ ನಿಮ್ಮ ಮನೆಗೆಂದು) ಮನಸಿಜ
ನುಡಿದ ದೈನ್ಯದಲಿ [92]

ಹಾಗಾದರೆ ಆಗಲಿ ಎಂದ ಶಂಕರ ಗಂಡ ತಂಗಿಯ ಮದುವೆಯನ್ನು ಸಂಭ್ರಮದಿಂದ ಮಾಡಿ ವಿಲಾಸ ಪಟ್ಟಣಕ್ಕೆ ಕಳುಹಿಸಿದ. ಬೇಕೆನಿಸಿದಾಗ ತೌರು ಮನೆಗೆ ಹೋಗುವ ಸ್ವಾತಂತ್ರ್ಯ ಹೆಣ್ಣಿಗಿರಬೇಕೆಂದು ಗಿರಿಯಮ್ಮನ ಅಭಿಪ್ರಾಯ. ಕೆಲವು ದಿನಗಳ ನಂತರ ಶಂಕರ ಗಂಡ ತಂಗಿಯನ್ನು ನೋಡಲು ಹೋಗುತ್ತಾನೆ. ನಾಡ ಕಂಬಳಿ ಬಿಗಿದು, ಹೆಗಲ ಮೇಲೆ ಬಾರಿ ಕೋಲನ್ನಿಟ್ಟು ಬಂದ ಶಿವನನ್ನು ಕಂಡ ಮನ್ಮಥ ಅಪಹಾಸ್ಯ ಮಾಡುತ್ತಾನೆ. ರತಿಯನ್ನು ಕರೆದು ಶಿವನ ರೂಪ ತೋರಿಸಿ ನಗುತ್ತಾನೆ. ರತಿಯು ತನ್ನಣ್ಣ ಬಡವನಲ್ಲ ಬಹಳ ಪರಾಕ್ರಮಿ ಆತ ಮುನಿದರೆ ಐಶ್ವರ್ಯ ಕೆಡುವುದೆಂದು ಎಚ್ಚರಿಸುತ್ತಾಳೆ. ಶಂಕರ ಗಂಡ ಮನ್ಮಥನ ಅಹಂಕಾರ ನಿಗ್ರಹಿಸಲು ನಿಶ್ಚಯಿಸುತ್ತಾನೆ. ಸಭೆಯಲ್ಲಿ ಕುಳಿತ ಮನ್ಮಥನನ್ನು ತನ್ನ ತಂಗಿಯನ್ನು ಕಳಿಸೆಂದು ಕೇಳಿದಾಗ "ಉಣ್ಣಲಾರಳು ಜೋಳದನ್ನವ ನಮ್ಮಾಕೆ ನಾವೀಗ ಕಳಿಸೋವೋರಲ್ಲ" ಎಂದು ಉತ್ತರಿಸುತ್ತಾನೆ. ಕುಪಿತನಾದ ಶಿವ

ಸಿರಿಮುಡಿಯ ಮೇಲೆ ಹುಲ್ಲು ಹೊರಿಸುವೆನು
ಕರುವ ಕಾಯಿ ನಮ್ಮ ಮನೆಯ
ಅರಿವೆ ಉಡಿಸಿ ಮೂರು ಬೊಗಸೆ ಅಂಬಲಿಯನ್ನು
ಮರೆಯದೆ ಹೊಯ್ಯುವೆನೆಂದ [93]

ಶಿವ ಅವನಿಗೆ ಬುದ್ಧಿ ಕಲಿಸಲು ನಿರ್ಗತಿಕನನ್ನಾಗಿ ಮಾಡುತ್ತಾನೆ. ಭಿಕ್ಷೆ ಬೇಡುವ ಮನ್ಮಥನನ್ನು ಕಂಡು ಶಂಕರ ಕರುಗಳನ್ನು ಕಾಯುವ ಕೆಲಸ ನೀಡಿ ಮೂರು ಬೊಗಸೆ ಅಂಬಲಿ ನೀಡುವುದಾಗಿ ಹೇಳುತ್ತಾನೆ. ಮನ್ಮಥನ ಗರ್ವವು ಅಡಗಿ ಶಿವನ ಊಳಿಗದಲ್ಲಿ ಮನ್ಮಥನು ಕರುಗಳನ್ನು ಕಾಯುತ್ತಾನೆ. ಕರುಗಳು ಬಡವಾದವೆಂಬ ಕಾರಣ ನೀಡಿ ಒಂದು ಬೊಗಸೆ ಅಂಬಲಿ ಕಡಿಮೆ ಮಾಡುತ್ತಾನೆ. ಹುಲ್ಲು ಕೊಯ್ಯುವಾಗ ಕೈಗೆ ಪೆಟ್ಟಾಗುತ್ತದೆ. ಅದನ್ನು ಕಂಡ ರತಿಯು

\- - - - - - - - -
ಇನ್ನಾದರೂ ಬಿಡಿಸೆನುತ ಅಣ್ಣಗೆ ಬೇಡಿಕೊಂಡು
ಬಿನ್ನೈಸಿದಳಾಕೆ [94]

ಶಂಕರ ಗಂಡನು ಮನ್ಮಥನಲ್ಲಿ ಮರುಕ ತಾಳಿ ತಂಗಿ ಮತ್ತು ಮೈದುನನ್ನು ಆದರದಿಂದ ಸತ್ಕರಿಸುತ್ತಾನೆ.

ಭಾವ ಮೈದುನತನದಲ್ಲೇ ನೋಡಿದರು
ವಿರೋಧವಿಲ್ಲವೆಂದೆನುತ
ಕಾಮದೇವಗೆ ಉಡುಗೊರೆ ವೀಳ್ಯವನಿತ್ತು ಮನ್ನಿಸಿದ
ಶಂಕರನು ಪ್ರೇಮದಲಿ [95]

ಆಂಡಾಳ್ ನೀರಾಟ್ಟಂ:

ಯದುಗಿರಿಯಮ್ಮನವರ ಆಂಡಾಳ್ ನೀರಾಟ್ಟಂ ಕೃತಿಯು ಶ್ರೀವಿಲ್ಲಿ ಪುತ್ತೂರಿನ ಆಂಡಾಳ ದೇವಿಯ ನೀರಾಟದ (ಮೀಯುವಿಕೆ)ಯನ್ನು ವರ್ಣಿಸುವ ದೀರ್ಘ ಕೀರ್ತನೆ. ಈ ಆಂಡಾಳ್ ಕುರಿತ ಕೀರ್ತನೆ ಜಾನಪದ ಧಾಟಿಯಲ್ಲಿದೆ. ಭಾದ್ರಪದ ಕನ್ಯಾಮಾಸದಲ್ಲಿ ಶುದ್ಧ ಪಾಡ್ಯದಲ್ಲಿ ರಂಗನಾಯಕಿಯು ಮಜ್ಜನ ಮಾಡಲು ಕಲ್ಪೋಕ್ತ ಪೂಜೆ ಮಾಡಿ

ಎಂಭತ್ತೊಂಬತ್ತು ಬಟ್ಟಲಲ್ಲಿ ಇರುವ ಉದಕವನು
ರಂಭೆಗಭಿಷೇಕವ ಮಾಡೆ ಗಂಧವ
ಅಂಬೆ ಶಿರದೊಳು ಧರಿಸಿ ಪೂಮಾಲೆಯ
ಸಂಭ್ರಮದಿ ಧರಿಸಿ ನಿಂದಳು ದೇವಿ [96]

ರಂಗನಾಯಕಿಗೆ ಅಭಿಷೇಕ ಮಾಡಿ ಬಗೆ ಬಗೆ ಅಲಂಕಾರ ಮಾಡಿ ಒಡವೆಯನ್ನಿಟ್ಟು ಒಂಭತ್ತು ದಿನಗಳವರೆಗೆ ದೇವಿಗೆ ಮಾಡಿದ ವಿಧ ವಿಧ ಅಲಂಕಾರಗಳನ್ನು ಹೇಳುತ್ತಾರೆ.

ಮುಕ್ತಿದಾಯಕಿಗೆ ಮೂರು ಪಾವಡೆಯನುಡಿಸಿ
ಮತ್ತೆ ದಡ್ಯಾಣವನಿಡಲು
ರತ್ನದ ಹಸ್ತದಿ ಅಭಯವ ಕೊಡುತ
ನಿಂತಳು ಮೊನ್ನೋಮಿಯ ಮಂಟಪದಲ್ಲಿ [97]

ಮುಂದೆ ಒಂಭತ್ತನೆಯ ದಿನವೂ ರಂಗನಾಯಕಿ ಮಿಂದು ಮಡಿಯುಟ್ಟ ಬಗೆ ವಿವರಿಸುತ್ತಾರೆ.

ಜೋಗುಳದ ಹಾಡು:

ಜೋಗುಳದ ಹಾಡು ಜನಪದ ಸಾಹಿತ್ಯದ ಒಂದು ಪ್ರಕಾರ. ಮಕ್ಕಳನ್ನು ತೊಟ್ಟಿಲಿಗೆ ಹಾಕುವಾಗ, ಜೋಗುಳ ಪಾಡುವಾಗ ಲಾಲಿ ಹಾಡುಗಳನ್ನು ಹೇಳುತ್ತಿದ್ದರು. ಲಾಲೀ ಪದಗಳಿಗೆ ಜೋಜೋ ಎನ್ನುವ

ಪದವನ್ನು ದೀರ್ಘ ಸ್ವರದಲ್ಲಿ ಹೇಳಲಾಗುತ್ತದೆ. ಮಹಿಳಾ ಹರಿದಾಸರೆಲ್ಲರೂ ಲಾಲಿ ಹಾಡುಗಳನ್ನು ರಚಿಸಿದ್ದಾರೆ. ಆದರೆ ದೀರ್ಘವಾದ ಕೀರ್ತನೆಗಳನ್ನು ಗಲಗಲಿ ಅವ್ವನವರು ರಚಿಸಿದ್ದಾರೆ. ದಾಸ ಮಹಿಳೆಯರು ಸ್ವಭಾವ ಸಹಜವಾಗಿ ಜೋಗುಳ ಪದಗಳನ್ನು ರಚಿಸಿದ್ದಾರೆ. ಜೋಗುಳದ ಹಾಡು ಅವ್ವನವರದ್ದು ಹೌದೋ ಅಲ್ಲವೋ ಎನ್ನುವ ವಿವಾದವಿದೆ. ಸದ್ಯಕ್ಕೆ ಅವ್ವನವರದೆಂದೇ ಹೇಳಲಾಗಿದೆ.

ಜೋಗುಳದ ಹಾಡು ಸರಳ ಮಾತುಗಳಲ್ಲಿ ಸುಲಭ ಧಾಟಿಯಲ್ಲಿ ನಿರೂಪಿತವಾಗಿದೆ. 52 ನುಡಿಗಳಲ್ಲಿ ಈ ಹಾಡು ಕೃಷ್ಣನನ್ನು ತೊಟ್ಟಿಲಿಗೆ ಹಾಕಿ ಜೋಗುಳ ಹಾಡಿದ ಪ್ರಸಂಗವನ್ನು ವರ್ಣಿಸುತ್ತದೆ. ಕೃಷ್ಣ ಹುಟ್ಟಿದ ತಕ್ಷಣ ವಸುದೇವ ಅವನನ್ನು ಯಶೋದೆಯ ಬಳಿ ಬಿಟ್ಟು ಬರುವಲ್ಲಿಂದ ಕೃತಿ ಪ್ರಾರಂಭವಾಗುತ್ತದೆ. ಮಗುವಿಗೆ ಎರೆದು, ಜಾತಕರ್ಮ ಮಾಡಿ, ತೊಟ್ಟಿಲಿಡುವ ಶಾಸ್ತ್ರವನ್ನು ಹಂತ ಹಂತವಾಗಿ ವರ್ಣಿಸುತ್ತಾರೆ. ಹನ್ನೊಂದನೆಯ ದಿನ ತೊಟ್ಟಿಲು ಇಡುವ ಶಾಸ್ತ್ರವನ್ನು ಅವ್ವ ವಿಸ್ತಾರವಾಗಿ ವರ್ಣಿಸುತ್ತಾರೆ.

> ಅತಿ ಬ್ಯಾಗ ವಿಶ್ವಕರ್ಮನ ಕರೆಸಿದಳು
> ರತ್ನ ಮಾಣಿಕ ಮುತ್ತುಗಳ ತೆತ್ತಿಸಿದಳು
> ಮತಿ-ಯಿಂದ ದಶರೂಪಗಳ ರಚಿಸಿಹಳು
> ಮನ್ಮಥನ ಪಿತನು ಪವಡಿಸುವ ತೊಟ್ಟಿಲೊಳು ಜೋಜೋ [98]

ಮಗನನ್ನು ತೊಟ್ಟಿಲಿಗೆ ಹಾಕುವ ಸಂಭ್ರಮಕ್ಕೆ ಗೋಪಿ ಮುತ್ತೈದೆಯರನೆಲ್ಲ ಕರೆಸಿ ಖಂಡುಗ ಉಸುಳಿ ಮಾಡಿ, ದುಂಡು ಅಪ್ಪ ಮಾಡಿಸಿದಳು. ಮುತ್ತೈದೆಯರೆಲ್ಲ ಸೇರಿ ವಿಧಿವತ್ತಾಗಿ ಕೃಷ್ಣನನ್ನು ತೊಟ್ಟಿಲಿಗೆ ಹಾಕಿ ತೂಗಿ ಲಾಲಿ ಪಾಡಿದರು.

> ಸೋದರತ್ತೆ ಕುಂತಿ ಸೊಗಸಲೆ ಬಂದು
> ಮಾಧವ ಅಂತ್ಹೆಸರಿಟ್ಟಳು ಬಂದು
> ಆದರದಿ ಗೋಪ ಉಡುಗೊರೆ ಕೊಟ್ಟ ತಂದು
> ವಿನೋದದಿ ಗೋಪಿ ಗುದ್ದಿದಳು ಒಂದೊಂದು [99]

ಹರಿಯ ನಾನಾ ಲೀಲೆಗಳನ್ನು ಹಾಡಿನ ರೂಪದಲ್ಲಿ ಅವ್ವ ಹೇಳಿದ್ದಾರೆ. ತೊಟ್ಟಿಲಲ್ಲಿ ಸುಖವಾಗಿ ನಿದ್ರಿಸಿದ ಹರಿಗೆ ಗೋಕುಲ ವಾಸಿಗಳು ರಕ್ಷೆಯಿಟ್ಟು ಆನಂದಪಟ್ಟರು ಎಂದು ಅವ್ವ ಇದನ್ನು ಮುಗಿಸಿದ್ದಾರೆ.

ಪೌರಾಣಿಕ ಕಥನ ಕಾವ್ಯಗಳು:

ಪತಿದಾನ ಕೊಟ್ಟ ಹಾಡು:

ಪತಿ ದಾನ ಕೊಟ್ಟ ಹಾಡನ್ನು ಹರಪನಹಳ್ಳಿ ಭೀಮವ್ವ ಮತ್ತು 'ಕೃಷ್ಣ ದಾನಾವರ್ತ' ಎಂಬ ಕೃತಿಯನ್ನು ಮಂಜುಳಾ ಸುಬ್ಬರಾವ್‌ರವರು ರಚಿಸಿದ್ದಾರೆ. ಈ ಪ್ರಸಂಗವು ಹರಿವಂಶ ಪುರಾಣದಲ್ಲಿ ಬರುತ್ತದೆ. ಭೀಮವ್ವ 72 ನುಡಿಗಳ, ಧ್ವನಿ ವಚನಗಳಿಂದ ಕೂಡಿದ ಹಾಡಾಗಿ ರಚಿಸಿದ್ದಾರೆ. ಮಂಜುಳಾರವರು 37 ಚೌಪದಿಗಳಲ್ಲಿ

ರಚನೆ ಮಾಡಿದ್ದಾರೆ. ದ್ವಾರಕೆಯ ವರ್ಣನೆಯೊಂದಿಗೆ ಕೃತಿ ಪ್ರಾರಂಭವಾಗುತ್ತದೆ. ಕೃಷ್ಣನ ಹದಿನಾರು ಸಾವಿರ ಹೆಂಡಿರ, ಅಷ್ಟ ಮಹಿಷಿಯರ ಅರಮನೆಗಳನ್ನು ಭೀಮವ್ವ ವರ್ಣಿಸುತ್ತಾರೆ.

ಪಚ್ಚೆಯ ಕಲ್ಲು ಪದ್ಮ ಮಾಣಿಕ್ಯ
ಅಚ್ಚ ಮುತ್ತುಗಳಿಂದ ರಚಿಸಿದ
ಅಚ್ಚದರಸಿ ಸತ್ಯಭಾಮೆಗೆ ಹೆಚ್ಚಿನರಮನೆಯ [100]

ರುಕ್ಮಿಣಿಗೆ ಮಹಾಶ್ರೇಷ್ಠದರಮನೆಯನ್ನು ಕೃಷ್ಣನ ಸಭಾಮಂಟಪವನ್ನು ಮಾಣಿಕ್ಯ, ರತ್ನ ಪೀಠಗಳಿಂದ ರಚಿಸಲಾಗಿತ್ತು. ರುಕ್ಮಿಣಿಯ ಮಂದಿರಕ್ಕೆ ಕೃಷ್ಣ ಹೋಗಿರುವಾಗ ಸತ್ಯಭಾಮೆ ಕೃಷ್ಣನ ದಾರಿ ಕಾಯುತ್ತಾ ಕುಳಿತಿದ್ದಾಳೆ. ಅಷ್ಟ ಮಹಿಷಿಯರ ಮನೆಗಳಲ್ಲಿ ಕೃಷ್ಣ ಕಾಣದೆ ರುಕ್ಮಿಣಿಯ ಮನೆಗೆ ಬರುತ್ತಾಳೆ. ಕೃಷ್ಣನನ್ನು ಕಂಡು ರುಕ್ಮಿಣಿ ಮಾಯ ಮಾಡಿ ಹುಚ್ಚು ಹಿಡಿಸಿದ್ದಾಳೆ ಎನ್ನುತ್ತ ಜರಿಯುತ್ತಾಳೆ. ನಾರದರು ಕೃಷ್ಣನನ್ನು ಕಾಣಲು ಬರುತ್ತಾರೆ. ಸತ್ಯಭಾಮೆ ಸಿಟ್ಟಿನಿಂದ ತನ್ನ ಮನೆಗೆ ಹಿಂದಿರುಗಿದ ಸುದ್ದಿ ಹೇಳಿ ನಾರದರ ಬಳಿ ಭಾಮೆಯನ್ನು ಒಪ್ಪಿಸುವಂತೆ ಬೇಡುತ್ತಾನೆ. ಅಲ್ಲಿ ನಾರದ ಶ್ರೀಕೃಷ್ಣ ಧರಿಸಿದ ತುಳಸೀಹಾರ ಬೇಡುತ್ತಾನೆ. ಕೃಷ್ಣ ನೀಡಲು ಒಪ್ಪದಿರಲು

ಅಡವಿಯೊಳು ಬೆಳೆದಿದ್ದ ಗಿಡದ ತೊಪ್ಪಲ ತಂದು
ಮಡದಿಯೆಂಬುವರೆ ಮಹರಾಯ
ಕಡಿಮೆ ಹೆಂಡಿರೆ ಹದಿನಾರು ಸಾವಿರ ಮಂದಿ
ಬಿಡು ನಿನ್ ಚಾಳಿ ತರವಲ್ಲ [101]

ಈ ಮಾತು ಕೇಳಿ ರುಕ್ಮಿಣಿ ತಾನಿರುವಾಗ ತುಳಸಿಯೇಕೆಂದು ಕನಲುತ್ತಾಳೆ. ಅಲ್ಲಿಂದ ಭಾಮೆಯ ಮನೆಗೆ ನಾರದರು ಬರುತ್ತಾರೆ. ಅಲ್ಲಿ ಕೃಷ್ಣ ರುಕ್ಮಿಣಿಯರ ಅನ್ಯೋನ್ಯತೆಯ ಬಗ್ಗೆ ಹೇಳಿ ಭಾಮೆಯಲ್ಲಿ ಸಿಟ್ಟು ಮೂಡಿಸುತ್ತಾರೆ. ಕೃಷ್ಣ ಭಾಮೆಯ ಜೊತೆಗೇ ಇರಬೇಕಾದರೆ 'ಕೃಷ್ಣ ದಾನ' (ಪತಿ ದಾನ) ಮಾಡೆಂದು ಹೇಳಿದಾಗ ಭಾಮೆ ಆ ವ್ರತದ ವಿವರಗಳನ್ನು ಕೇಳಿ ತಿಳಿದುಕೊಳ್ಳುತ್ತಾಳೆ.

ಕೃಷ್ಣನನ್ನು ಕರೆತಂದು ಅವನನ್ನು ಶೃಂಗರಿಸಿ ಪೂಜಿಸಿ ಬ್ರಾಹ್ಮಣರನ್ನು ಕರೆಸಿ ತಾಂಬೂಲ ಮಂತ್ರಾಕ್ಷತೆ ಸುರಿಸಿ ದಾನ ನೀಡಲು ಮುಂದಾಗುತ್ತಾಳೆ. ಯಾವ ಬ್ರಾಹ್ಮಣರೂ ದಾನ ಸ್ವೀಕಾರ ಮಾಡದಿರಲು ನಾರದರಿಗೇ ದಾನ ನೀಡುತ್ತಾಳೆ. ದಾನ ಪಡೆದ ನಾರದರು

ತಿರುಗಾಡಬೇಕು ಎನ್ಹಿಂದೆ ಬರಿಗಾಲಲ್ಲಿ
ಹರಕು ಗಂಟನು ಬೆನ್ನ ಹಿಂದೆ ಹೊರಬೇಕು
ಸರಿಯಾದ ಹೊತ್ತಿಗೆ ನಿದ್ದೆ ಭೋಜನವಿಲ್ಲ
ತರಳೆ ನೀ ಸಮ್ಮತಿಸೆ ಆಗಲೆನಲೂ [102]

ದಾನ ಪಡೆದು ಕೃಷ್ಣನನ್ನು ತಮ್ಮ ಹಿಂದಿಟ್ಟುಕೊಂಡು ನಾರದರು ಹೊರಟು ಬಿಡುತ್ತಾರೆ. ಅಷ್ಟ ಸತಿಯರು ದೇವಕಿಯಲ್ಲಿ ದೂರು ಹೇಳುತ್ತಾರೆ. ಆಗ ದೇವಕಿ ಭಾಮೆಯನ್ನು

ದಾರಿಗೆ ಕೊಟ್ಟೆ ದಾನವನು ಗಯ್ಯಾಳಿ
ದಾರು ಕಲಿಸಿದರ್ಹೇಳೆ ನಿನಗಿಂತ ಚಾಳಿ [103]

ಕಂಸನ ಭಯದಿಂದ ತಾನು ಗೋಕುಲದಲ್ಲಿ ಬಚ್ಚಿಟ್ಟ ಯದುನಾಥನನ್ನು ಯಾರಿಗೆ ದಾನ ಕೊಟ್ಟೆಳೆಂದು ಬಹುವಾಗಿ ಜರಿಯುತ್ತಾಳೆ. ಇಲ್ಲಿ ನಿಂದೆ ಸೂಚಿಸುವ ದಂಗುಡಿ ಹೆಣ್ಣೆ, ಧಕ್ಕಡಗಿತ್ತಿ, ಹೊಯ್ಮಾಲಿ, ಭಟಾರಿ ಮುಂತಾದ ಮಾತುಗಳನ್ನು ದೇವಕಿಯಿಂದ ಭೀಮವ್ವ ಹೇಳಿಸಿದ್ದಾರೆ. ಕೃಷ್ಣನನ್ನು ಹುಡುಕಿ ಹೊರಟ ಬಲರಾಮ ಮರದ ಕೆಳಗೆ ಕುಳಿತ ನಾರದ ಕೃಷ್ಣನನ್ನು ಕಂಡು ಪರಿಪರಿಯಾಗಿ ಬೇಡಿ ಹಿಂದಿರುಗಿ ಬರಲು ಪ್ರಾರ್ಥಿಸುತ್ತಾನೆ. ರಂಗನ ತೂಕದ ಬಂಗಾರ ಕೊಟ್ಟರೆ ಬರುವುದಾಗಿ ನಾರದ ಹೇಳಿದಾಗ ಅದಕ್ಕೆ ಒಪ್ಪಿ ಹಿಂದಿರುಗಿ ಬರುತ್ತಾರೆ. ಕೃಷ್ಣನನ್ನು ತಕ್ಕಡಿಯಲ್ಲಿ ಕೂರಿಸಿ ಇನ್ನೊಂದು ಕಡೆ ಸತ್ಯಭಾಮೆ, ಅಷ್ಟ ಸತಿಯರು. ದೇವಕಿ, ಯಶೋದೆ, ರೋಹಿಣಿ, ಉಗ್ರಸೇನನ ಭಂಡಾರ ಹೀಗೆ ಎಲ್ಲೆಲ್ಲಿಯೂ ಇದ್ದ ಚಿನ್ನವನ್ನೆಲ್ಲ ಹಾಕಿದರೂ ಅದು ಕೃಷ್ಣನಿಗೆ ಸರಿಸಮನಾಗುವುದಿಲ್ಲ. ಸತ್ಯಭಾಮೆ ಕೃಷ್ಣನು ಹೇಳಿದಂತೆ ರುಕ್ಮಿಣಿಯ ಬಳಿಗೆ ಹೋಗಿ ಸಕಲ ವಿಚಾರ ತಿಳಿಸುತ್ತಾಳೆ. ರುಕ್ಮಿಣಿ ಅವಳನ್ನು ಸಂತೈಸಿ ಭಾಮೆಯ ಮನೆಗೆ ಸಕಲಾಭರಣ ತೊಟ್ಟು ಬರುತ್ತಾಳೆ. ಭೀಮವ್ವ ರುಕ್ಮಿಣಿ ಧರಿಸಿದ ಆಭರಣಗಳ ಪಟ್ಟಿಯನ್ನೇ ನೀಡಿದ್ದಾರೆ. ರುಕ್ಮಿಣಿಯು ಅಲ್ಲಿಗೆ ಬಂದು

ಎಲ್ಲ ಸವತಿಯರಿಗೆ ಎಲ್ಲ ಒಡವೆಯ ಹಾಕಿ
ಪುಲ್ಲಾಕ್ಷಿ ರುಕ್ಮಿಣಿ ತುಳಸಿದಳವರ್ಪಿಸಿದಳು
ಮೆಲ್ಲಗೆ ತೂಗಿತು ಕೃಷ್ಣನ ಸಮ ಮೀರಿ
ಬಲ್ಲಿದಾ ಮುನಿರಂಗ ರುಕ್ಮಿಣಿಗೆ ನಮಿಸೆ [104]

ಈ ಲೀಲೆಗಳನ್ನು ನೋಡಿದ ನಾರದ ತುಳಸಿಯ ಮಹಿಮೆಯನ್ನು ಹೊಗಳಿ ಎಲ್ಲ ಬಂಗಾರವನ್ನು ಅವರವರಿಗೇ ಹಿಂದಿರುಗಿಸುತ್ತಾನೆ.

ಹರಿಯ ಅಪ್ಪಣೆಗೊಂಡು ಹರುಷದಲಿ ನಾರಂದ
ಸಿರಿದೇವಿ ಕೊಟ್ಟ ಶ್ರೀತುಳಸಿ ಶಿರದಲ್ಲಿಟ್ಟು
ಕರದಿಂದ ವೀಣೆ ಬಾರಿಸುತ ಗಾಯನಗಳಿಂದ
ತಿರುಗ ಪೋದನು ತ್ರಿಲೋಕಗಳಿಗೆ [105]

ರುಕ್ಮಿಣಿ ಕೇವಲ ಒಂದು ತುಳಸೀದಳ ಹಾಕಿ ಕೃಷ್ಣನನ್ನು ಹಿಂದಿರುಗಿ ಪಡೆಯುತ್ತಾಳೆ. ಸತ್ಯಭಾಮೆಗೆ ಕೃಷ್ಣನ ಮೇಲಿರುವ ಒಲವು, ಕೃಷ್ಣನಿಗೆ ಅತಿಪ್ರಿಯವಾದ ತುಳಸಿಯ ಮಹಿಮೆ ಇಲ್ಲಿ ಅನಾವರಣಗೊಂಡಿವೆ. ಈ ಹಾಡಿನಲ್ಲಿ ಭೀಮವ್ವನ ಹಾಸ್ಯ ಪ್ರವೃತ್ತಿ ಸಂಭಾಷಣಾ ಚಾತುರ್ಯ ವ್ಯಕ್ತವಾಗಿದೆ.

ಪೌರಾಣಿಕ ಕಥನಗಳು:

ಶ್ರೀನಿವಾಸ ಕಲ್ಯಾಣ:

ಶ್ರೀನಿವಾಸ ಕಲ್ಯಾಣವು ಭವಿಷ್ಯೋತ್ತರ ಪುರಾಣದಲ್ಲಿ ಬರುವ ಒಂದು ಪ್ರಸಂಗ. ಕನ್ನಡದಲ್ಲಿ ಏರಿಶೇಷಾಚಾರ್ಯರು ಅನಂತಾದ್ರೀಶರು ರಚಿಸಿರುವ ಶ್ರೀನಿವಾಸಕಲ್ಯಾಣಗಳು ಸಂಪ್ರದಾಯಸ್ಥ ಮಹಿಳೆಯರ ನಿತ್ಯ ಪಾರಾಯಣದ ಕೃತಿಗಳಾಗಿ ಜನಪ್ರಿಯವಾಗಿವೆ. ಇದನ್ನು ಸರಸ್ವತಿಬಾಯಿ ಹದಿನಾಲ್ಕು ನುಡಿಗಳಲ್ಲಿ, ಸರೋಜಬಾಯಿ ನಾಲ್ಕು ಚಿಕ್ಕ ಚಿಕ್ಕ ಕೀರ್ತನೆಗಳಲ್ಲಿ, ವಿಜಯಲಕ್ಷ್ಮೀ ರಾಘವೇಂದ್ರಾಚಾರ್ಯರವರು ಶ್ರೀಗೋವಿಂದ ಕಲ್ಯಾಣ ಎಂಬ 59 ನುಡಿಗಳಲ್ಲಿ ಮಂಜುಳಾ ಸುಬ್ಬರಾವ್‌ರವರು 64 ಪದ್ಯಗಳಲ್ಲಿ ರಚಿಸಿದ್ದಾರೆ. ಮಂಜುಳಾರವರು ಹನ್ನೆರಡು ಅಧ್ಯಾಯಗಳ ಒಂದು ದೀರ್ಘ ಕೀರ್ತನೆಯನ್ನೂ ರಚಿಸಿದ್ದಾರೆ.

ಸರೋಜಾರವರು ನಾಲ್ಕು ಬಿಡಿ ಕೀರ್ತನೆಗಳಲ್ಲಿ ಕಲ್ಯಾಣವನ್ನು ಹೇಳಿದ್ದಾರೆ. ಇತರ ದಾಸ ಮಹಿಳೆಯರು ಪ್ರಾರಂಭಿಸಿರುವ ರೀತಿ ಒಂದೇ ಆಗಿದೆ. ಸಪ್ತ ಋಷಿಗಳು ಯಾಗ ಮಾಡಿ ಹವಿಸ್ಸನ್ನು ಸ್ವೀಕರಿಸಲು ಯೋಗ್ಯರಾದವರನ್ನು ಹುಡುಕಿಕೊಂಡು ಬರಲು ಭೃಗು ಮಹರ್ಷಿಗಳಿಗೆ ಒಪ್ಪಿಸುತ್ತಾರೆ.

ಸಪ್ತ ಋಷಿಗಳ ಯಾಗದಿ ಭೃಗು ಋಷಿಗಳ
ಸಪ್ತ ಮುನಿ ಪುಂಗವರು ಸರ್ವೇಶನು ನಿತ್ಯ
ತೃಪ್ತಿ ಹರಿಯೋ ಬೊಮ್ಮನೋ ಹರನೋ
ಸತ್ಯವಾಗರಿತು ಬನ್ನಿರೆನಲು ಸತ್ಯ ಲೋಕಕೆ ಬರೆ ಬೊಮ್ಮ

ಮಾತನಾಡದಿರಲು ಇತ್ತು ಶಾಪವ ರಜತ ಗಿರಿಗೆ ಪೋಗೆ
ಮೃತ್ಯುಂಜಯನು ಮುನಿಯನು ಕೊಲ್ಲಲು ಬರೆ
ನಿತ್ಯದಿ ಲಿಂಗ ಪೂಜೆಯಾಗಲಿ ನಿನಗೆ ಮುನಿ [106]

ವೈಕುಂಠಕ್ಕೆ ಬಂದ ಭೃಗು ಮಹರ್ಷಿಗಳು ತನ್ನನ್ನು ಉಪೇಕ್ಷಿಸಿದ ಹರಿಯ ವಕ್ಷ ಸ್ಥಲಕ್ಕೆ ಕಾಲಿನಿಂದ ಒದೆಯುತ್ತಾರೆ. ವಕ್ಷ ಸ್ಥಳದಲ್ಲಿ ನೆಲೆಯಾಗಿದ್ದ ಲಕ್ಷ್ಮೀದೇವಿ ಮುನಿದು ಕೊಲ್ಲಾಪುರಕ್ಕೆ ಹೊರಟು ಹೋಗುತ್ತಾಳೆ. ಶ್ರೀಹರಿಯು ಭೂಲೋಕಕ್ಕೆ ಬಂದು ವಲ್ಮೀಕದಲ್ಲಿ ಅಡಗಿಕೊಳ್ಳುತ್ತಾನೆ. ಚೋಳ ರಾಜನ ಪಟ್ಟಣದಲ್ಲಿದ ಹರಿಗೆ ಹಾಲು ನೀಡಲು ಬ್ರಹ್ಮ ಹಸು, ಹರ ಕರುವಾಗಿ ಲಕ್ಷ್ಮೀ ದೇವಿಯ ಮೂಲಕ ರಾಜನ ಅರಮನೆ ಸೇರುತ್ತಾರೆ.

ರಾಣಿಯು ಒಂದು ದಿನವೂ ಹಾಲು ಕೊಡದ ಹಸುವನ್ನು ಕಂಡು ಗೋಪಾಲಕನನ್ನು ವಿಚಾರಿಸಿ ಎಚ್ಚರಿಸುತ್ತಾಳೆ. ಅರಸಿಯ ಬಿರು ನುಡಿಗಳನ್ನು ಕೇಳಿ ಹಸುವನ್ನು ಗೋಪಾಲಕ ಹಿಂಬಾಲಿಸುತ್ತಾನೆ. ಹಸುವು ಶ್ರೀಹರಿಯಿದ್ದ ಹುತ್ತಕ್ಕೆ ಹಾಲು ಹರಿಸುವುದು ಕಂಡು ಕೋಪದಿಂದ ಕೊಡಲಿ ಬೀಸಿದಾಗ ಶ್ರೀನಿವಾಸ ತಲೆಯೊಡ್ಡಿ ಹಸುವನ್ನು ರಕ್ಷಿಸುತ್ತಾನೆ.

ಏಳು ತಾಳದದುದ್ದ ಶೋಣಿತ
ಆಳು ಗೋಪಾಲಕನು ನೋಡುತ
ತಾಳಲಾರದೆ ತಾನು ಮಡಿದನು ಹುತ್ತದೆದುರಲ್ಲೀ [107]

ಇದನ್ನು ಕಂಡ ಚೋಳ ರಾಜನಿಗೆ ಶ್ರೀನಿವಾಸ ಪ್ರೇತ ಜನ್ಮ ಬರಲೆಂದು ಶಾಪ ನೀಡುತ್ತಾನೆ. ಶಾಪ ವಿಮೋಚನೆಯ ದಾರಿ ಕೇಳಿ ರಾಜನು ಬೇಡಿಕೊಂಡಾಗ, ಆಕಾಶ ರಾಜನ ಮಗಳನ್ನು ಮದುವೆಯಾಗುವಾಗ ಆಕಾಶ ರಾಜ ನೀಡುವ ಕಿರೀಟ ಧರಿಸುವ ತನ್ನನ್ನು ನೋಡಿದರೆ ಶಾಪ ವಿಮೋಚನೆ ಆಗುವುದೆಂದು ತಿಳಿಸುತ್ತಾನೆ. ತನ್ನ ತಲೆಗೆ ಆದ ಗಾಯಕ್ಕೆ ಔಷಧಿ ಮಾಡಿ ವರಾಹ ಮೂರ್ತಿ (ಕ್ಷೇತ್ರ ಮೂರ್ತಿ)ಯಿಂದ ನೂರು ಹೆಜ್ಜೆ ಭೂಮಿ ದಾನ ಪಡೆದು ಮಾತೆ ಬಕುಳೆಯೊಂದಿಗೆ ಶ್ರೀನಿವಾಸ ಇರುತ್ತಾನೆ. ಒಂದು ದಿನ ಬೇಟೆಗೆ ಹೋದಾಗ ಅಲ್ಲಿ

ಮದಕರಿಯೊಂದು ವನದಲ್ಲಿ ಬರಲು
ಮುದದಿ ಪದ್ಮಾವತಿಯಂಬೋ ಕನ್ಯೆ
ಆಕಾಶರಾಜನ ಪ್ರೀತಿ ಮಗಳು ಹೆದರೆ
ಅಲ್ಲಿಗೆ ಬಂದನು ಶ್ರೀಕೃಷ್ಣ ತಾನು [108]

ಶ್ರೀನಿವಾಸ ಪದ್ಮಾವತಿಯ ಹಿಂದೆ ಬಂದು ಪೂರ್ವಾಪರಗಳನ್ನು ವಿಚಾರಿಸಿ ಹೋಗುತ್ತಾನೆ. ಪದ್ಮಾವತಿ ಮಾತನಾಡದೆ ಮಲಗುತ್ತಾಳೆ. ಇತ್ತ ಶ್ರೀನಿವಾಸ ಬಕುಳೆಗೆ

ಹಿಂದೆ ವೇದಾವತಿ ತ್ರೇತೆಯಲಿ ಗೋವಿಂದ
ನೊಂದಿದ್ದಳು ಅಶೋಕವನದಲ್ಲಿ ಗೋವಿಂದ
ಸುಂದರಿ ಪದ್ಮಾವತೀಗ ಅವಳೆ ಗೋವಿಂದ
ಹೊಂದಿಸವಳ ಸೀತೆ ಮಾತಿನಂತೆ ಗೋವಿಂದ [109]

ಬಕುಳೆ ಆಕಾಶ ರಾಜನ ಮನೆಗೆ ಹೊರಡುತ್ತಾಳೆ. ಶ್ರೀನಿವಾಸನು ಕೊರವಿ ವೇಷದಲ್ಲಿ ಪದ್ಮಾವತಿಯ ಅರಮನೆಗೆ ಬರುತ್ತಾನೆ.

ಬ್ರಹ್ಮಾಂಡವನ್ನೇ ಬುಟ್ಟಿ ಮಾಡಿ ಗೋವಿಂದ ।
ಬ್ರಹ್ಮ ದೇವನೇ ಪುಟ್ಟ ಕೂಸು ಗೋವಿಂದ

ಬ್ರಹ್ಮಜ್ಞರು ಮೋಹಿಪ ಹೆಣ್ಣಾಗಿ ಗೋವಿಂದ ।
ಬ್ರಹ್ಮ ಪಿತ ಕೋಲು ಹಿಡಿದು ನಡೆದ ಗೋವಿಂದ [110]

ಕೊರವಿ ಬಂದು ಶ್ರೀನಿವಾಸನಿಗೆ ಪದ್ಮಾವತಿಯನ್ನು ಕೊಟ್ಟು ವಿವಾಹ ಮಾಡೆಂದು ಶಕುನ ನುಡಿದು ಹೊರಡುತ್ತಾಳೆ. ಬಕುಳೆ ಅಲ್ಲಿಗೆ ಬಂದು ವಿವಾಹಕ್ಕೆ ಆಕಾಶರಾಜನ ಸಮ್ಮತಿ ಪಡೆದಳು. ದೇವ ಗುರು ಬೃಹಸ್ಪತಿಯನ್ನು ಕರೆಸಿ ಲಗ್ನ ಪತ್ರಿಕೆ ಬರೆಸಿದರು. ಶ್ರೀನಿವಾಸನು ಶೋಕ ನಟಿಸಿ ಲಕ್ಷ್ಮಿಯನ್ನು ಬರಮಾಡಿಕೊಂಡನು. ಕುಬೇರನಿಂದ ಸಾಲ ಪಡೆದು ಮದುವೆಯ ವೆಚ್ಚಕ್ಕೆ ಶ್ರೀನಿವಾಸ ತನ್ನೆಲ್ಲ ಬಳಗದೊಡನೆ ಆಕಾಶರಾಜನಲ್ಲಿಗೆ ಬರುತ್ತಾನೆ. ವರಪೂಜೆ, ಧಾರೆ, ಮಾಂಗಲ್ಯ ಧಾರಣ, ಲಾಜಾಹೋಮ, ಇತ್ಯಾದಿ ನಡೆದ ಬಗ್ಗೆ ಮಹಿಳಾ ದಾಸರು ಉಲ್ಲೇಖಿಸುತ್ತಾರೆ. ಶ್ರೀನಿವಾಸ ಕಲ್ಯಾಣವನ್ನು ಓದಿದರೆ ಶೀಘ್ರವಾಗಿ ವಿವಾಹವಾಗುವುದೆಂಬ ನಂಬಿಕೆ, ಫಲಶ್ರುತಿ ಹಾಡುಗಳಲ್ಲಿ ಕಂಡು ಬರುತ್ತದೆ.

ಉದ್ಧಾಳೀಕನ ಕಥೆ:

ಉದ್ಧಾಳೀಕನ ಕತೆಯನ್ನು ಗಿರಿಯಮ್ಮ ರಚಿಸಿದ್ದಾರೆ. ಈ ಕಥೆಯು ಕಠೋಪನಿಷತ್ತಿನಲ್ಲಿ ಬರುತ್ತದೆ. ಸಾಂಗತ್ಯ ಮಟ್ಟಿನಲ್ಲಿ 448 ಪದಗಳಲ್ಲಿ ಈ ಕಥೆಯನ್ನು ಗಿರಿಯಮ್ಮ ಹೇಳಿದ್ದಾರೆ. ಉದ್ಧಾಳೀಕ ಬಾಲ್ಯದಲ್ಲೇ ತಂದೆ–ತಾಯಿಯನ್ನು ಕಳೆದುಕೊಂಡು ತಪಸ್ಸನ್ನು ಆಚರಿಸುತ್ತಾ ಇರುತ್ತಾನೆ. ಇತ್ತ ಅಯೋಧ್ಯ ದೇಶದಲ್ಲಿ ರಘುರಾಯ ಭೂಪಾಲನಿಗೆ ಚಂದ್ರಾವತಿ ಜನಿಸುತ್ತಾಳೆ. ಅರವತ್ತು ಸಾವಿರ ವರ್ಷ ತಪಸ್ಸು ಮಾಡಿದ ಉದ್ಧಾಳೀಕನಿಗೆ ಕೌಶಿಕ ಮುನಿಗಳು ಯಮಲೋಕದಲ್ಲಿ ಮಿಡುಕುತ್ತಿದ್ದ ಆತನ ಪೂರ್ವಜರ ವಿಚಾರ ತಿಳಿಸುತ್ತಾರೆ. ಉದ್ಧಾಳೀಕ ಬ್ರಹ್ಮನನ್ನೇ ಈ ವಿಚಾರವಾಗಿ ಪ್ರಶ್ನೆ ಮಾಡುತ್ತಾನೆ. ಮುಪ್ಪಾಗಿರುವ ತನಗೆ ಹೆಣ್ಣು ಕೊಡುವವರಾರೆಂದು ವಿಚಾರಿಸುತ್ತಾನೆ. ಆಗ ಬ್ರಹ್ಮನು

ಉತ್ತಮ ರಘುಕುಲ ರಘುರಾಯನಾತ್ಮಜೆ ಇಪ್ಪಳು ಕರ್ನಿಕೆಯಾಗಿ
ಪುತ್ರ ಹುಟ್ಟಿದ ಏಳು ವರ್ಷಕ್ಕೆ ಪತ್ನಿಯು
ದೃಷ್ಟಿಗೋಚರಕೆ ಬೀಳುವಳು [111]

ಕನ್ಯೆಯ ವಿವರ ಇತ್ಯಾದಿ ತಿಳಿಸಿ ನಾಶಿಕೇತನೆಂಬ ಮಗನು ಹುಟ್ಟುವನು ಎಂದ ಬ್ರಹ್ಮನ ಮಾತನ್ನು ಕೇಳಿ ಉದ್ದಾಳೀಕ ಹಿಂದಿರುಗುತ್ತಾನೆ. ಚಂದ್ರಾವತಿಯು ಸಖಿಯರೊಂದಿಗೆ ಜಲಕ್ರೀಡೆಯಾಡಲು ಬರುತ್ತಾಳೆ. ನೀರಾಟವಾಡುವ ಪರಿಯನ್ನು ಗಿರಿಯಮ್ಮ ಉತ್ಸಾಹದಿಂದ ವರ್ಣಿಸಿದ್ದಾಳೆ. ಜಲಕ್ರೀಡೆಯಾಡುವ ಸಂದರ್ಭದಲ್ಲಿ ಚಂದ್ರಾವತಿ ಏಳು ಗಾವುದ ದೂರದ ಮೇಲಿಂದ ಉದ್ಧಾಳೀಕನು ತೇಲಿ ಬಿಟ್ಟ ಕಮಲವನ್ನು ಆಘ್ರಾಣಿಸಿ ಗರ್ಭ ಧರಿಸುತ್ತಾಳೆ. ಜಲಕ್ರೀಡೆ ಮುಗಿಸಿ ಅರಮನೆಗೆ ಬಂದ ಚಂದ್ರಾವತಿಗೆ ಗರ್ಭಿಣಿಯ

ಸ್ತ್ರೀಯರಿಗಾಗುವ ಅನುಭವಗಳನ್ನು ಗಿರಿಯಮ್ಮ ವರ್ಣಿಸುತ್ತಾಳೆ. ಚಂದ್ರಾವತಿ ಒಂದೊಂದು ತಿಂಗಳಲ್ಲೂ ಬಯಸಿದ ಬಯಕೆಗಳನ್ನು ಗಿರಿಯಮ್ಮ ವರ್ಣಿಸುತ್ತಾಳೆ.

ನವನಾರಿ ಕುಂಜರ ಪಂಚ ತುರಂಗವು
ನವ ಪರಿಯಿಂದ ರಂಜಿಸುವ
ಬಿಡುಹೊಲಿಗೆ ಭುಜದ ಹಸುರ ಕುಪ್ಪಸವ
ತೊಡಬೇಕೆಂದು ಬಯಸಿದಳು [112]

ವಿಷಯ ತಿಳಿದ ತಾಯಿ ಆತಂಕದಿಂದ ದೃಷ್ಟಿ ತಗುಲಿತೆಂದು ಹರಕೆ ಹೊರುತ್ತಾರೆ. ತಾಯ ಮಮತೆ ಆತಂಕ ಇಲ್ಲಿ ಸಹಜವಾಗಿ ವ್ಯಕ್ತವಾಗಿದೆ. ಅವಿವಾಹಿತ ಮಗಳು ಗರ್ಭಿಣಿ ಎಂದು ತಿಳಿದಾಗ ತಂದೆ–ತಾಯಿಯರಿಗಾಗುವ ಆಘಾತ, ತಲ್ಲಣಗಳನ್ನು ಗಿರಿಯಮ್ಮ ವರ್ಣಿಸಿದ್ದಾಳೆ. ತಂದೆ ಮಗಳನ್ನು ಕಾಡಿನಲ್ಲಿ ತಲೆ ಕಡಿದು ಬರಲು ಆಜ್ಞಾಪಿಸುತ್ತಾನೆ. ಕಟುಕರು ಅವಳನ್ನು ಕೊಲ್ಲದೆ ಕಾಡಿನಲ್ಲಿ ಬಿಟ್ಟು ಬರುತ್ತಾರೆ. ಅಲ್ಲಿ ಗೌತಮ ಮುನಿಗಳ ಆಶ್ರಮದಲ್ಲಿ ಮಗು ಜನಿಸುತ್ತದೆ.

ಜಾತಿಸೂತಕವಿಲ್ಲ ಆ ತಪ ಮುನಿಸುತ ನಾಸಿಕದಿಂದುದಿಸಿದನು
ಭೂತಳದೊಳಗಿದು ಆಶ್ಚರ್ಯವೆನುತಲೆ ಕಾಂತೇರ
ವಿಸ್ಮಯ ವಾದದಲ್ಲಿ [113]

ಮಗು ಮುಂದೆ ತನ್ನ ತಂದೆಯ ಬಗ್ಗೆ ಕೇಳಿದರೆ ಏನು ಮಾಡುವುದೆಂಬ ಚಿಂತೆಯಿಂದ ಮಗುವನ್ನು ಚಂದ್ರಾವತಿ ನೀರಿನಲ್ಲಿ ತೇಲಿ ಬಿಡುತ್ತಾಳೆ. ನದಿಯಲ್ಲಿ ಬೆಳಗಿನ ನಿತ್ಯವಿಧಿಗಳಿಗಾಗಿ ಬಂದ ಉದ್ಧಾಳಿಕ ಆ ಮಗುವನ್ನು ಕಂಡು ತನ್ನ ಮಗ ಸಿಕ್ಕಿದನೆಂದು, ಪಿತೃಗಳು ಗತಿ ಹೊಂದಿದರೆಂದು ಭಾವಿಸಿ ತನ್ನ ಮಗುವಿಗೆ ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಇತ್ಯಾದಿಗಳನ್ನು ನಡೆಸಿ ಸಲಹುತ್ತಿರುತ್ತಾನೆ.

ಈ ಸಂದರ್ಭದಲ್ಲಿ ಗಿರಿಯಮ್ಮ ಬಾಲ ಲೀಲೆ, ಉದ್ಧಾಳೀಕನ ಪಿತೃ ವಾತ್ಸಲ್ಯವನ್ನು ಸಮರ್ಥವಾಗಿ ಬಣ್ಣಿಸುತ್ತಾಳೆ. ಏಳು ವರ್ಷಗಳು ಅಲ್ಲಲ್ಲಿ ತಿರುಗಿ ಉದ್ಧಾಳೀಕನ ಆಶ್ರಮಕ್ಕೆ ಬಂದ ಚಂದ್ರಾವತಿ ಮಗನನ್ನು ಕಂಡು ಮೋಹಗೊಳ್ಳುತ್ತಾಳೆ. ಉದ್ಧಾಳೀಕನ ಆಶ್ರಮವನ್ನು ಸಿಂಗರಿಸಿ ಪೂಜೆಗೆ ಅಣಿಮಾಡುತ್ತಿರುವಾಗ ಮಗನು ಬಂದು ಅವಳನ್ನು 'ತಂದೆ ಕಂಡರೆ ಬೈಯುವನು' ಹೋಗು ಎಂದಾಗ ಅಲ್ಲಿಂದ ತೆರಳುತ್ತಾಳೆ. ಉದ್ಧಾಳೀಕನಿಗೆ ಆಶ್ರಮದಲ್ಲಿನ ಬದಲಾವಣೆ ಕಂಡು ಮಗನ ತಾಯಿಯು ಅವಳೇ ಎಂದು ತಿಳಿಯುತ್ತದೆ. ಅವಳನ್ನು ಕರೆತರಲು ಮಗನನ್ನು ಕಳುಹಿಸುತ್ತಾನೆ. ಚಂದ್ರಾವತಿ ಮಗನನ್ನು "ಯತಿಗಳಾಗಿ ಪರಸತಿಗೆ ಕಣ್ಣಿಡುವರೆ ಪತಿಯುತಾನೆಂತಾದ (ನ)ನಗೆ" ಎಂದು ಪ್ರಶ್ನಿಸುತ್ತಾಳೆ. ಮಗನ ಮಾತನ್ನು ಕೇಳಿ ಉದ್ಧಾಳೀಕ

ತಾನೇ ಅವಳನ್ನು ಕರೆತರಲು ಅತ್ರಿ, ಭಾರಧ್ವಾಜ, ಆಂಗೀರಸ, ಗೌತಮ, ಅಗಸ್ತ್ಯ, ಕಶ್ಯಪರೊಡನೆ ತೆರಳುತ್ತಾನೆ. ಮುನಿಗಳು ಎಲ್ಲ ವಿಚಾರವನ್ನು ಚಂದ್ರಾವತಿಗೆ ತಿಳಿಸುತ್ತಾರೆ.

ಅಲ್ಲಿಂದ ಅಯೋಧ್ಯೆಗೆ ಬಂದ ಮುನಿಗಳು ಎಲ್ಲ ವೃತ್ತಾಂತವನ್ನು ರಾಜನಿಗೆ ತಿಳಿಸುತ್ತಾರೆ. ರಾಜ ತನ್ನ ಆಳುಗಳನ್ನು ಕರೆದು ಚಂದ್ರಾವತಿಯನ್ನು ಕೊಲ್ಲಲಿಲ್ಲವೆಂಬ ವಿಚಾರವನ್ನು ದೃಢಪಡಿಸಿಕೊಳ್ಳುತ್ತಾನೆ. ರಾಜ ಮಗಳನ್ನು ಕರೆದೊಯ್ಯುತ್ತಾನೆ. ಚಂದ್ರಾವತಿ

ಯಾರೇನು ಮಾಡುವರೆನ್ನ ಪೂರ್ವಾರ್ಜಿತ
ತೀರುವುದೆ ಉಣ್ಣದನಕ
ಮಾಡಿದ ಫಲದ ಭೋಗಿಸುವೆನೆಂದೆನುತಲೆ ನಾರಿ
ನುಡಿದಳೆ ದುಃಖದಿಂದ [114]

ರಾಜ ಉದ್ಧಾಳೀಕನಿಗೆ ತನ್ನ ಮಗಳನ್ನು ಧಾರೆಯೆರೆಯುತ್ತಾನೆ. ಶಾಸ್ತ್ರ ಬದ್ಧವಾಗಿ ಮದುವೆಯ ಎಲ್ಲ ಆಚರಣೆಗಳನ್ನು ಗಿರಿಯಮ್ಮ ವರ್ಣಿಸುತ್ತಾಳೆ. "ಅನ್ವಯ ಅರ್ಥ ಚಾತುರ್ಯ ಬಲ್ಲವಳಲ್ಲ ಹೆಣ್ಣು ಹೆಚ್ಚಾಗರಿಯೆ" ಎಂದು ಗಿರಿಯಮ್ಮ ವಿನಯವನ್ನೂ ಪ್ರಕಟಿಸಿದ್ದಾಳೆ.

ಐತಿಹಾಸಿಕ ವ್ಯಕ್ತಿಗಳ ಹಾಗೂ ಇತರ ದೀರ್ಘ ಕೀರ್ತನೆಗಳು:

ಮಹಾಭಾರತ, ರಾಮಾಯಣ, ಭಾಗವತಾದಿ ಪುರಾಣೋಕ್ತ ಕಥೆಗಳೇ ಅಲ್ಲದೆ ಐತಿಹಾಸಿಕ ವ್ಯಕ್ತಿಗಳ ಬಗೆಗೂ ದಾಸ ಮಹಿಳೆಯರೂ ದೀರ್ಘ ಕೀರ್ತನೆಗಳನ್ನು ರಚಿಸಿದ್ದಾರೆ.

ನಿಡಗುರುಕಿ ಜೀವೂಬಾಯಿಯವರು ಶ್ರೀಪುರಂದರವಿಠಲದಾಸರ ಚರಿತ್ರೆಯನ್ನು ರಚಿಸಿದ್ದಾರೆ. ಅವರ ಎಲ್ಲ ದೀರ್ಘ ಕೀರ್ತನೆಗಳಿಗಿಂತ ಇದು ದೀರ್ಘವಾಗಿದೆ. ಗದ್ಯ ಪದ್ಯ ಮಿಶ್ರಿತ ಶೈಲಿಯಲ್ಲಿ ಆರ್ಯ, ವಚನಗಳಲ್ಲಿ ರಚಿತವಾಗಿದೆ. ಪುರಂದರದಾಸರ ಜನನ, ವ್ಯಾಪಾರ ಮಾಡಿ ಲೋಭದಿಂದ ಧನಗಳಿಸಿದ ರೀತಿ, ಬ್ರಾಹ್ಮಣ ವೇಷದಲ್ಲಿ ಬಂದ ಹರಿಯು ಮಗನ ಉಪನಯನಕ್ಕೆ ಹಣ ಕೇಳಿದ್ದು, ಮೂಗುತಿ ಪ್ರಸಂಗ, ಹರಿ ದರ್ಶನಕ್ಕಾಗಿ ಅವರು ಪಡುವ ಹಂಬಲ, ನಂತರ ಹಂಪೆಗೆ ಬಂದು ಶ್ರೀವ್ಯಾಸರಾಯರ ಶಿಷ್ಯರಾಗಿದ್ದು ಎಲ್ಲವನ್ನೂ ವರ್ಣಿಸುತ್ತಾರೆ. ಪುರಂದರದಾಸರು ಮೆರೆದ ಪವಾಡಗಳ ಬಗ್ಗೆಯೂ ಜೀವೂಬಾಯಿ ವರ್ಣಿಸುತ್ತಾರೆ. ಬೇಲೂರು ಕೇಶವದಾಸರ ಶ್ರೀಕರ್ಣಾಟಕ ಭಕ್ತ ವಿಜಯದ ಪ್ರಭಾವ ಇವರ ಮೇಲೆ ಆಗಿದೆ.

ಪಾಂಡುರಂಗ ಚರಿತ್ರೆ:

ಜೀವೂಬಾಯಿಯವರ ಇನ್ನೊಂದು ಕೃತಿ ಶ್ರೀಪಾಂಡುರಂಗ ಚರಿತ್ರೆ. ಆರ್ಯ, ಭಾಮಿನೀ ಷಟ್ಪದಿ ಮತ್ತು ಕಂದ ಪದ್ಯಗಳಲ್ಲಿ ಇದನ್ನು ರಚಿಸಿದ್ದಾರೆ. ಪಂಢರಾಪುರದಲ್ಲಿದ್ದ ಒಬ್ಬ ಸ್ತ್ರೀಯು ಮಕ್ಕಳಿಲ್ಲದೆ ಕೊರಗುತ್ತಿದ್ದಳು.

ಕಂದರಿಲ್ಲದ ಬಹುನಿಂದ್ಯದ ಜನುಮವ
ಪೊಂದಿದೆ ವ್ಯರ್ಥದಿ ಇಂದಿರೆ ರಮಣನೆ

ಬಾಲ ಲೀಲೆಗಳಿಂದ ಬಾಲ ಹಾಡುತಲಿರೆ
ಲಾಲಿಸಿ ಹರುಷಿಪ ಕಾಲಕಾಣೆನೊ ದೇವ [115]

ಎಂದು ವ್ಯಥೆ ಪಡುತ್ತಾ

ಬಾಲಕನಾದರೆ ಆಳನು ಮಾಡುವೆ
ಬಾಲಕಿಯಾದರೆ ಧಾರೆಯನೆರೆಯುವೆ [116]

ಎಂದು ಹರಕೆ ಹೊರುತ್ತಾಳೆ. ಪಾಂಡುರಂಗನು ಮಗುವನ್ನು ಕರುಣಿಸುತ್ತಾನೆ. ಮಗುವಾದ ನಂತರ ಹರಿಯು ಆಗಾಗ ಬಂದು ಮಗುವನ್ನು ಕೊಡಲು ಕೇಳುತ್ತಾನೆ. ಆಗ ತಾಯಿಯು ಮಗು ಕುಳಿತುಕೊಳ್ಳಲಿ, ಆಟವಾಡಲಿ, ನಡೆಯಲಿ ಎಂದೆಲ್ಲ ನೆಪ ಹೇಳುತ್ತಾಳೆ. ಮಗು ಬೆಳೆದು ದೊಡ್ಡವಳಾದಾಗ ವಿವಾಹ ನಿಶ್ಚಯಿಸುತ್ತಾರೆ. ಪಾಂಡುರಂಗ ಬಂದು ತಾಯಿಯನ್ನು ಎಚ್ಚರಿಸುತ್ತಾನೆ. ಆಕೆ ಅದಕ್ಕೆ ಗಮನವನ್ನೇ ನೀಡದಿರಲು ಪಾಂಡುರಂಗನು ಮದುವೆಯ ದಿನ ಇರುಳು ಮಳೆ ಸುರಿಯುವಂತೆ ಮಾಡಿ ವರನ ರೂಪ ಧರಿಸಿ ಬಂದು ಮದುವೆಯಾಗುತ್ತಾನೆ. ಮಳೆ ನಿಂತ ಮೇಲೆ ಬೀಗರೆಲ್ಲ ಬಂದು ಮದುವೆ ಮುಗಿದಿರುವುದನ್ನು ನೋಡಿ ಕಲಹ ಮಾಡಿ ಹಿಂತಿರುಗುತ್ತಾರೆ. ಬೆಳಿಗ್ಗೆ ಮದುವೆ ಮನೆಯಲ್ಲಿ ವಧುವರರು ಇರುವುದಿಲ್ಲ. ವಿಠಲನ ಗುಡಿಯ ಬಾಗಿಲು ತೆರೆದ ಅರ್ಚಕರಿಗೆ ವಿಠಲ ಮೂರ್ತಿಯ ಸೆರಗಿಗೆ ಗಂಟು ಹಾಕಿದ್ದ ವಧುವನ್ನು ಕಾಣುತ್ತಾರೆ. ಊರ ಜನರೆಲ್ಲ ಅಲ್ಲಿ ನೆರೆಯುತ್ತಾರೆ. ವಧುವಿನ ತಾಯಿ ತನ್ನ ಹರಕೆಯ ವಿಚಾರವನ್ನು ತಿಳಿಸುತ್ತಾಳೆ. ಆ ದಂಪತಿಗಳು ಪಾಂಡುರಂಗನಿಗೆ ಅವಳನ್ನು ಅರ್ಪಿಸುತ್ತಾರೆ.

ಈ ಕಾವ್ಯವು ಪಾಂಡುರಂಗ ಚರಿತ್ರೆ ಎಂದಿದ್ದರೂ ಇಲ್ಲಿ ಪುಂಡರೀಕನ ಪ್ರಸ್ತಾಪವಿಲ್ಲ. ಈ ಕಥೆಯ ಮೂಲ ಸ್ಪಷ್ಟವಾಗಿಲ್ಲ.

ಮಂಜುಳಾ ಸುಬ್ಬರಾವ್‌ರವರು ಸುಮಾರು 46 ಕೃತಿಗಳನ್ನು ಬರೆದು ಪ್ರಕಟಿಸಿದ್ದು ಹಲವಾರು ದೀರ್ಘ ಕೃತಿಗಳನ್ನು ರಚಿಸಿದ್ದಾರೆ.

1. **ಶ್ರೀಮಧ್ವ ಮಹಿಮ ಪ್ರಕಾಶಿಕಾ:**

ಶ್ರೀಮಧ್ವಾಚಾರ್ಯರ ಜೀವನ ಚರಿತ್ರೆಯನ್ನು 65 ಚೌಪದಿಗಳಲ್ಲಿ ಹೇಳಲಾಗಿದೆ.

2. <u>ಟೀಕಾರ್ಯ ಚಂದ್ರಿಕಾ:</u>

ಟೀಕಾಚಾರ್ಯರೆಂದು ಪ್ರಸಿದ್ಧರಾದ ಶ್ರೀಜಯತೀರ್ಥರನ್ನು ಕುರಿತ ದೀರ್ಘ ಕೃತಿ ಇದು. 115 ನುಡಿಗಳಲ್ಲಿ ರಚಿತವಾಗಿದೆ.

3. <u>ಶ್ರೀವಾದಿರಾಜ ದೀಪಿಕಾ:</u>

ಸೋದೆ ಶ್ರೀವಾದಿರಾಜ ಗುರುಗಳನ್ನು ಕುರಿತು 192 ಚೌಪದಿಗಳಲ್ಲಿ ಈ ಕೃತಿಯನ್ನು ರಚಿಸಿದ್ದಾರೆ.

<u>ಶ್ರೀರಾಘವೇಂದ್ರ ಕಥಾ ಸೌರಭ:</u>

ಶ್ರೀಗುರುರಾಘವೇಂದ್ರ ತೀರ್ಥರ ಚರಿತ್ರೆ ಮತ್ತು ಮಹಿಮೆಗಳನ್ನು 1463 ಪದ್ಯಗಳಲ್ಲಿ ವರ್ಣಿಸಿದ್ದಾರೆ.

4. <u>ಶ್ರೀವಿಜಯದಾಸ ವೈಭವ:</u>

ಶ್ರೀವಿಜಯದಾಸರ ಚರಿತ್ರೆಯನ್ನು 195 ಚೌಪದಿಗಳಲ್ಲಿ ರಚಿಸಿದ್ದಾರೆ.

5. <u>ಧೀಮಂತ ಜಮಖಂಡಿ ವಾದಿರಾಜಾಚಾರ್ಯ:</u>

ಶ್ರೀವಾದಿರಾಜತೀರ್ಥರ ಚರಿತ್ರೆಯನ್ನು 120 ಭಾಮಿನೀ ಷಟ್ಪದಿಗಳಲ್ಲಿ ಮಂಜುಳಾ ರಚಿಸಿದ್ದಾರೆ.

6. <u>ಶ್ರೀಗೀತಸುಧ ಮತ್ತು ಶ್ರೀಉಡುಪಿ ಮಹಾತ್ಮೆ:</u>

ಗೀತಾಚಾರ್ಯನಾದ ಕೃಷ್ಣ ಉಪದೇಶಿಸಿದ ಗೀತೆಯು 109 ಭಾಮಿನೀ ಷಟ್ಪದಿಯಲ್ಲಿ ಮಂಜುಳಾ ರಚಿಸಿದ್ದಾರೆ.

7. <u>ಶ್ರೀ ಸುಮಧ್ವ ವಿಲಾಸ:</u>

ಸಮಗ್ರ ಸುಮಧ್ವ ವಿಜಯವನ್ನು "ಸುಮಧ್ವ ವಿಲಾಸ"ವನ್ನು 506 ಪದ್ಯಗಳಲ್ಲಿ ರಚಿಸಿದ್ದಾರೆ.

8. <u>ಹರಿಕಥಾಮೃತಸಾರ ಭಾವ ಮಂದಾರ:</u>

ಹರಿಕಥಾಮೃತ ಸಾರದ ಆಂತರ್ಯವನ್ನು ತಿಳಿಸುವ 2114 ಪದ್ಯಗಳಲ್ಲಿ ವಿವರಣೆ.

9. <u>ಸಕ್ಕೂಬಾಯಿ ಕಥೆ:</u>

ಸಕ್ಕೂಬಾಯಿ ಕಥೆಯನ್ನು ಓರವಾಯಿ ಲಕ್ಷ್ಮೀದೇವಮ್ಮ ಧ್ವನಿ, ವಚನಗಳಲ್ಲಿ ರಚಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಇದ್ದಳೆಂದು ಹೇಳಲಾಗುವ ಸಂತ ಮಹಿಳೆ ಸಕ್ಕೂಬಾಯಿ. ಪಾಂಡುರಂಗನನ್ನು ಅನನ್ಯ ಭಕ್ತಿಯಿಂದ ಸ್ತುತಿಸುತ್ತಾ ಗಂಡನ ಮನೆಯಲ್ಲಿ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರೂ ಮನಸ್ಸು ಪಾಂಡುರಂಗನಲ್ಲಿ ಲೀನವಾಗಿರುತ್ತದೆ. ಸಕ್ಕೂಬಾಯಿಗೆ ಪಂಢರಾಪುರಕ್ಕೆ ಹೋಗಿ ಪಾಂಡುರಂಗನ ದರ್ಶನ ಮಾಡುವ ಹಂಬಲ. ಅವಳ ಪತಿ ಒಳ್ಳೆಯವನಾಗಿರುತ್ತಾನೆ. ಅತ್ತೆ ದುರುಳ ಹೆಂಗಸು, ಒಮ್ಮೆ ಅತ್ತೆಯು

ಗಂಡ ಅತ್ತೆಯು ನೋಡೀ ಕೆಂಡ ಕೋಪವು ತಾಳೀ
ಕೊಂಡು ಬಂದೂ ಅವಳಾ ಕಂಭಕ್ಕೆ ಬಂಧಿಸಲೂ
ಪುಂಡರೀಕಾಕ್ಷನು ಗಂಡನಂದದಿ ಬಂದೂ
ಬಂಧನವ ಬಿಡಿಸೀ । ಪಂಡರಿಗೆ ಪೋಗೆನೇ
ಗಂಡನ್ವಚನವ ಕೇಳಿಕೊಂಡು ಪೋದಳು ಆಗ [117]

ಪಾಂಡುರಂಗನು ಸಕ್ಕುವಿನ ವೇಷದಲ್ಲಿ ಕಂಭದಲ್ಲಿ ನಿಲ್ಲುತ್ತಾನೆ. ಅಲ್ಲಿಗೆ ಬಂದ ಅವಳ ಪತಿ ಕಂಬದಿಂದ ಬಿಡಿಸಿಕೊಂಡು ಕರೆದೊಯ್ಯುತ್ತಾನೆ. ಇತ್ತ ಸಕ್ಕೂಬಾಯಿ ಪಂಢರಾಪುರದಲ್ಲಿ ಪಾಂಡುರಂಗನನ್ನು ಕಂಡು, ಚಂದ್ರಭಾಗಾನದಿಯಲ್ಲಿ ಸ್ನಾನ ಮಾಡಿ ಧನ್ಯತೆ ಹೊಂದುತ್ತಾಳೆ. ಪಂಢರಿನಾಥನ ದರ್ಶನ ಮಾಡಿದ ಸಕ್ಕೂಬಾಯಿ ದೇಹ ತ್ಯಾಗ ಮಾಡುತ್ತಾಳೆ. ಅದನ್ನು ಕಂಡ ಜನರು ಅವಳನ್ನು ಚಿತೆಯಲ್ಲಿರಿಸಿ ದಹಿಸುತ್ತಾರೆ.

ಅಂಡಜನ ವಾಕ್ಯವನು ಕೇಳಿ ಲಕುಮಿಯುತಾನು
ಗಂಡನಾ ಹುಡುಕುತಾ । ಬಂದಳಾ ಕ್ಷಣದೀ
ಕಂಡ ಚಿತಿಯಾ ಮೇಲೆ ಗಂಗಿ ಉದಕವೆನೆರೆದೂ
ಗಕ್ಕನೇ ಎದ್ದಳು । ಸಕ್ಕೂಬಾಯಿ ತಾನೂ ಅಕ್ಕರದಿಂದಲಿ [118]

ತನ್ನ ಚಿಕ್ಕಮ್ಮನೊಂದಿಗೆ ಸಕ್ಕೂಬಾಯಿ ಮನೆಗೆ ಹಿಂದಿರುಗುತ್ತಾಳೆ. ಅಲ್ಲಿ ಮಾಯದ ಸಕ್ಕೂಬಾಯಿ ಗಂಡನೊಡನೆ ಮಂಚದಲ್ಲಿ ಕುಳಿತಿರುವುದನ್ನು ಕಂಡು ಅತ್ತೆ ಬಯ್ಯುತ್ತಾಳೆ. ಆಗ ಮಾಯದ ಸಕ್ಕೂ ಹೆದರಿದಂತೆ ನಟಿಸಿ ಮಾಯವಾಗುತ್ತಾಳೆ. ನಿಜವಾದ ಸಕ್ಕೂಬಾಯಿ ಮನೆಗೆ ಬಂದಾಗ ಅವಳು ಮನೆಯಲ್ಲೇ ಇದ್ದಳು ಎಂದು ಅತ್ತೆ ಹೇಳಿದಾಗ, ಅವಳು ಅದೇ ತಾನೆ ಪಂಢರಾಪುರದಿಂದ ಬಂದುದಾಗಿ ಜನ ಹೇಳುತ್ತಾರೆ. ಒಡವೆಗಳೆಲ್ಲ ಎಲ್ಲಿ ಎಂದು ಗಂಡ, ಅತ್ತೆ ಪ್ರಶ್ನಿಸಿ ಹೊಡೆಯುವಾಗ ಪಾಂಡುರಂಗ ಪ್ರತ್ಯಕ್ಷನಾಗಿ ನಿಜ ಸಂಗತಿ ತಿಳಿಸುತ್ತಾನೆ. ಸಕ್ಕೂಬಾಯಿಯ ನಿಷ್ಠೆ, ಅತ್ತೆ, ಗಂಡ, ನಾದಿನಿಯರ ಕಾಟ, ಪಾಂಡುರಂಗನ ದರ್ಶನ, ಪರಮಾತ್ಮನ ಕಾರುಣ್ಯ ಎಲ್ಲವನ್ನೂ ಲಕ್ಷ್ಮೀದೇವಮ್ಮ ನಿರೂಪಿಸಿದ್ದಾರೆ. ಅನನ್ಯ ಶರಣಾಗತಿ ಮತ್ತು ಸಮರ್ಪಣಾ ಭಾವ ತತ್ವವನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

10. <u>ಯಾಜ್ಞವಲ್ಕ್ಯ ಶತಾಷ್ಟಕ:</u>

ಚಂದೂಬಾಯಿನಾಯಕರವರು ಯಾಜ್ಞವಲ್ಕ್ಯರನ್ನು ಕುರಿತಾಗಿ ಶತಾಷ್ಟಕವನ್ನು ರಚಿಸಿದ್ದಾರೆ. ಸುಮಾರು 22 ಬಿಡಿ ಕೀರ್ತನೆಗಳನ್ನು ರಚಿಸಿದ್ದಾರೆ. ಯಾಜ್ಞವಲ್ಕ್ಯರು ಶುಕ್ಲಯಜುರ್ವೇದವನ್ನು ಸೂರ್ಯನಾರಾಯಣನಿಂದ ಪಡೆದವರು. ಈಶಾವಾಸ್ಯೋಪನಿಷತ್ತು ಮತ್ತು ಬೃಹದಾರಣ್ಯಕೋಪನಿಷತ್ತುಗಳ ಮಂತ್ರದ್ರಷ್ಟಾರರು. ಇವರ ಪತ್ನಿ ಬ್ರಹ್ಮವಾದಿನಿಯಾದ ಗಾರ್ಗಿ. ಜನಕ ಮಹಾರಾಜನ ಆಸ್ಥಾನದಲ್ಲಿ ನಡೆದ ಸಭೆಯಲ್ಲಿ ವಾದಿಸಿ ಗೆದ್ದವರು. ಕಾತ್ಯಾಯಿನಿ ಎಂಬ ಬ್ರಹ್ಮವಾದಿನಿ ವಾದದಲ್ಲಿ ಸೋತು ಅವರನ್ನು ವರಿಸುತ್ತಾಳೆ. ಇಂತಹ ತಪಸ್ವಿಗಳ ಕುರಿತು 108 ನುಡಿಗಳ ದೀರ್ಘ ಕೃತಿಯನ್ನು ರಚಿಸಿದ್ದಾರೆ.

ಪತ್ನಿ ಸರಸ್ವತಿಯಿಂದ ಶಾಪ ಪಡೆದ ಬ್ರಹ್ಮನು ಬ್ರಹ್ಮರಾತ ಸುನಂದಾದೇವಿಯರಿಗೆ ಮಗನಾಗಿ ಯಜ್ಞದಿಂದ ಉದ್ಭವಿಸುತ್ತಾನೆ. ಋಗ್ವೇದವನ್ನು ಭಾಷ್ಕಲ ಮುನಿಗಳಲ್ಲಿ, ಯಜುರ್ವೇದವನ್ನು

ವೈಶಂಪಾಯನರಲ್ಲಿ, ಹಿರಣ್ಯರಲ್ಲಿ ಸಾಮವೇದವನ್ನು, ಅರುಣಿಯಿಂದ ಅಥರ್ವವೇದವನ್ನು ಕಲಿಯುತ್ತಾರೆ. ವರ್ಧಮಾನಪುರದ ಸುಪ್ರಿಯನೆಂಬ ರಾಜನಿಗೆ ವೈಶಂಪಾಯನರು ರಾಜಪುರೋಹಿತರು. ರಾಜನು ಕೆಟ್ಟ ಕಾಯಿಲೆಯಿಂದ ನರಳುತ್ತಿರುತ್ತಾನೆ. ವೈಶಂಪಾಯನರು ಪ್ರತಿನಿತ್ಯ ಒಬ್ಬ ಶಿಷ್ಯನ ಮೂಲಕ ರಾಜನಿಗೆ ತೀರ್ಥ ಕಳುಹಿಸಿರುತ್ತಾರೆ. ಯಾಜ್ಞವಲ್ಕ್ಯರ ಸರದಿ ಬಂದಾಗ ಗುರು ವೈಶಂಪಾಯನರ ಆಜ್ಞೆಯಂತೆ ತೀರ್ಥ ಕೊಂಡು ಹೋಗುತ್ತಾರೆ.

ಸಿರಿ ಮದದಲಿ ಆ ದುರುಳ ರಾಜ ತೀರ್ಥ
ತೊರೆದುದ ಕಂಡು ಗುರುದೇವ ನಮ್ಮ ಯಾಜ್ಞವಲ್ಕ್ಯ [119]

ಕುಪಿತರಾದ ಯಾಜ್ಞವಲ್ಕ್ಯರು ತೀರ್ಥವನ್ನು ಅರಮನೆಯ ಕಂಬಗಳಿಗೆ ಪ್ರೋಕ್ಷಿಸಿ ಹಿಂದಿರುಗುತ್ತಾರೆ. ಆ ಕಂಬಗಳು ಚಿಗುರಿ ಅವು ಯಾವ ಮರದಿಂದ ಮಾಡಿದ ಕಂಬಗಳೋ ಆ ಮರವಾಗಿ ನಿಲ್ಲುತ್ತವೆ. ರಾಜನು ಪಶ್ಚಾತ್ತಾಪದಿಂದ ಮತ್ತೆ ಗುರುಗಳಿಂದ ತೀರ್ಥ ಬೇಡಿದಾಗ ಮತ್ತೆ ತೀರ್ಥ ನೀಡಿ ಬರಲು ಗುರುಗಳು ಹೇಳುತ್ತಾರೆ.

ದುರುಳರಿಗ್ಮಾಡಿದ ವರ ಉಪಕಾರವ ॥ ಥರ
ವಲ್ಲೆಂದ ಗುರುದೇವ ನಮ್ಮ ಯಾಜ್ಞವಲ್ಕ್ಯ [120]

ಗುರುಗಳು ಎದುರಾಡಿದ ಶಿಷ್ಯನಿಗೆ ತಮ್ಮಿಂದ ಕಲಿತ ವಿದ್ಯೆ ಹಿಂದಿರುಗಿಸಲು ಹೇಳುತ್ತಾರೆ. ಯಜುರ್ವೇದವನ್ನು ವಮನ ಮಾಡಿ ಹಿಂದಿರುಗಿಸಲು ಯತ್ನಿಸಿದಾಗ ತಿತ್ರಿ (ಗುಬ್ಬಚ್ಚಿ) ಗಳು ಅವನ್ನು ಭಕ್ಷಿಸುತ್ತವೆ. ನಂತರ ಸೂರ್ಯನನ್ನು ತಪಸಿನಿಂದ ಒಲಿಸಿ ಯಜುರ್ವೇದವನ್ನು ಕಲಿಯುತ್ತಾರೆ. ಕಾತ್ಯಾಯಿನಿಯನ್ನು ಮೊದಲು ವಿವಾಹವಾದಂತೆ ಚಂದೂಬಾಯಿ ಹೇಳುತ್ತಾರೆ. ಉದ್ಧಾಲಕ ಮುನಿಯಿಂದ ವೈದಿಕ ಜ್ಞಾನ ಪಡೆಯುತ್ತಾರೆ. ಜನಕನ ಸಭೆಯಲ್ಲಿ ಶುಕ್ಲ ಯಜುರ್ವೇದ ಪ್ರಕಟಿಸಿ ಗಾರ್ಗಿ ಮೈತ್ರೇಯಿರೊಡನೆ ವಾದ ಮಾಡುತ್ತಾರೆ.

ಜನಕನ ಯಜ್ಞದಿ ಘನತೆ ಪಡೆವ
ತನ್ನ ಸಮರ್ಥ ಗುರುಗಳ ಕಂಡ ದೇವ ನಮ್ಮ ಯಾಜ್ಞವಲ್ಕ್ಯ [121]

ಶಿಷ್ಯನ ಪ್ರತಿಭೆ ಕಂಡು ಅಲ್ಲಿದ್ದ ವೈಶಂಪಾಯನರು ಕೋಪ ತ್ಯಜಿಸಿ ಶಿಷ್ಯನನ್ನು ಅಭಿನಂದಿಸುತ್ತಾರೆ.

ಶಾಕಲ್ಯ ಮುನಿಗಳ ಕಾಯ ಶಾಸ್ತ್ರ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡಿ ಜನಕನ ಆಸ್ಥಾನದಲ್ಲಿ ವಿಜಯಿಗಳಾಗುತ್ತಾರೆ. ಮೈತ್ರೇಯಿ, ಗಾರ್ಗಿಯರನ್ನು ವಿವಾಹವಾಗುತ್ತಾರೆ.

ತೀರ್ಥಯಾತ್ರೆಯಲರ್ಕೇಶ್ವರ ಸ್ಥಾಪಿಸಿ ಶಿಷ್ಯರ
ನುದ್ಧರಿಸಿದ ದೇವ ನಮ್ಮ ಯಾಜ್ಞವಲ್ಕ್ಯ

ಶತಧಾರೆ ವೀಣೆ ರಚಿಸಿ ಸಂಗೀತ ಶಾಸ್ತ್ರವ
ನುದ್ಧಾರ ಮಾಡಿದ ದೇವ ನಮ್ಮ ಯಾಜ್ಞವಲ್ಕ್ಯ [122]

ಜನಕನ ಪ್ರಾರ್ಥನೆ ಮನ್ನಿಸಿ ಆತನ ಗುರುಗಳಾಗುತ್ತಾರೆ. ಕಾತ್ಯಾಯಿನಿಗೆ ಆಶ್ರಮದ ಭಾರ ವಹಿಸಿ ಪರ ಲೋಕ ಯಾತ್ರೆಗೆ ಸಿದ್ಧರಾಗುತ್ತಾರೆ. ಮೈತ್ರೇಯಿ ತಪಸ್ಸನ್ನಾಚರಿಸಲು ಹೊರಡುತ್ತಾಳೆ. ಹಿಮಾಲಯದ ತಪ್ಪಲಿಗೆ ಬಂದ ಯಾಜ್ಞವಲ್ಕ್ಯರು ಧ್ಯಾನಸ್ಥರಾಗುತ್ತಾರೆ.

ಚಂದೂಬಾಯಿಯವರು ತಮ್ಮ ಕುಲದೇವತೆ ಚಂದ್ರಲಾಪರಮೇಶ್ವರಿಯ ಶತಾಷ್ಟಕವನ್ನು ರಚಿಸಿದ್ದಾರೆ. ಶನಿದೇವರ ಶತಾಷ್ಟಕವನ್ನೂ ರಚಿಸಿದ್ದಾರೆ. ಇವರ ಕೃತಿಗಳೆಲ್ಲ ಅಪ್ರಕಟಿತವಾಗಿಯೇ ಇವೆ.

11. ಶ್ರೀಗುರುಮಧ್ವ ಚರಿತ್ರೆ:

ಕೋಲಾರ ಪದ್ಮಾಬಾಯಿಯವರ ಈ ಕೃತಿಯು 121 ದ್ವಿಪದಿಗಳಲ್ಲಿ ರಚಿತವಾಗಿದೆ. ನಾರಾಯಣ ಪಂಡಿತಾಚಾರ್ಯರ 'ಸುಮಧ್ವ ವಿಜಯ'ವನ್ನು ಸಂಕ್ಷೇಪವಾಗಿ ಸರಳವಾಗಿ ಪದ್ಯ ವಚನಗಳಲ್ಲಿ ಸಂಗ್ರಹಿಸಿದ್ದಾರೆ. ಮಂಗಳಾಚರಣೆಯಲ್ಲಿ ತಾರತಮ್ಯೋಕ್ತವಾಗಿ ದೇವ ದೇವತೆಗಳಿಗೆ ನಮಸ್ಕರಿಸಿ ಸರ್ಗ 1ರಲ್ಲಿ ಹನುಮಂತ ಮತ್ತು ಭೀಮಸೇನ ಅವತಾರಗಳ ಬಗ್ಗೆ ಹೇಳಿ ಆಯಾ ಅವತಾರಗಳಲ್ಲಿನ ಲೀಲೆಗಳನ್ನು ಹೇಳುತ್ತಾರೆ. 2ನೆಯ ಸರ್ಗದಲ್ಲಿ ಮಧ್ವಾಚಾರ್ಯರ ಜನನ ಕುರಿತ ಪ್ರಸ್ತಾಪವಿದೆ. 3ನೆಯ ಸರ್ಗದಲ್ಲಿ ವಾಸುದೇವನ ಅಕ್ಷರಾಭ್ಯಾಸ, ಎಂಟನೇ ವರ್ಷದಲ್ಲಿ ಉಪನಯನ, ಗುರುಕುಲವಾಸದ ಪ್ರಸ್ತಾಪವಿದೆ. 4ನೆಯ ಸರ್ಗದಲ್ಲಿ ಅಚ್ಯುತ ಪ್ರೇಕ್ಷರು ವಾಸುದೇವನ ಗುರುಗಳಾಗಿದ್ದು, ಮಧ್ವಾಚಾರ್ಯರಿಗೇ ಶಿಷ್ಯರಾದ ಪ್ರಸಂಗವಿದೆ. 5ರಿಂದ 16 ಸರ್ಗಗಳಲ್ಲಿ ವಾಸುದೇವ ಮಧ್ವಾಚಾರ್ಯರಾಗಿ ತೋರಿದ ಮಹಿಮೆಗಳನ್ನು, ಮಧ್ವ ಮತ ಸ್ಥಾಪನೆ, ಹರಿಸರ್ವೋತ್ತಮತ್ವ ಪ್ರತಿಪಾದನೆ, ಅವರ ಉಪದೇಶಗಳ ಬಗ್ಗೆ ವಿವರಗಳಿವೆ. ಇವರ ಕೃತಿಗಳಲ್ಲಿ ಪ್ರತಿಪಾದಿತವಾಗಿರುವ ಎಲ್ಲ ಪ್ರಸಂಗಗಳಿಗೂ ಸುಮಧ್ವ ವಿಜಯವೇ ಆಧಾರವಾಗಿದೆ. ಒಂದು ರೀತಿಯಲ್ಲಿ ಇದು ಸುಮಧ್ವ ವಿಜಯದ ಸಂಗ್ರಹಾನುವಾದವಾಗಿದೆ.

12. ಸೀತಾಪತಿ ವಿಠಲದಾಸಳ ನಿರ್ಯಾಣ ಪದ:

ಸೀತಾಪತಿ ವಿಠಲದಾಸಳ ನಿರ್ಯಾಣ ಪದವನ್ನು ಅಂಬಾಬಾಯಿ 43 ನುಡಿಗಳಲ್ಲಿ ರಚಿಸಿದ್ದಾರೆ. ತಂದೆಮುದ್ದುಮೋಹನವಿಠಲದಾಸರಿಂದ ಸೀತಾಪತಿವಿಠಲ ಅಂಕಿತ ಪಡೆದ ರುಕ್ಮಿಣೀಬಾಯಿಯವರು

ಕಾಲವಾದಾಗಿನ ಸಂದರ್ಭದಲ್ಲಿ ಈ ಕೃತಿಯನ್ನು ರಚಿಸಿದ್ದಾರೆ. 'ಪೋದೆಯ ತಾಯಿ ನೀನೀಗ ದಿವ್ಯ ಮಾಧವನಾಪುರ ಸೇರಲು' ಎಂದು ಪ್ರಾರಂಭವಾಗುವ ಈ ಕೃತಿಯಲ್ಲಿ ರುಕ್ಮಿಣಿಬಾಯಿಯವರ ಜೀವನದ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಹುಟ್ಟಿದಂದಿನಿಂದಲೂ ನೇಮ ನಿಷ್ಠೆಗಳಿಂದ ಕಷ್ಟ ಪರಂಪರೆಯಲ್ಲಿ ಬೆಳೆದ ರುಕ್ಮಿಣೀಬಾಯಿ ಗುರುಕೃಪೆ ಪಡೆದದ್ದನ್ನು ಹೇಳುತ್ತಾರೆ. ಹಿರಿಯೂರಿನಲ್ಲಿ ಇವರ ಜನನವಾಯಿತು. ಎಂಟು ವರ್ಷಗಳಿಗೆ ವಿವಾಹವೂ ಆಯಿತು. ಪತಿ ಕೃಷ್ಣರಾಯರೊಂದಿಗೆ ಅಲ್ಪ ಕಾಲದ ದಾಂಪತ್ಯ.

ಸಂಸಾರ ಕೈಕೊಂಡು ವಂಶಕೊಬ್ಬನ ಪಡೆದು
ಕಂಸಾರಿ ಕರುಣದಿ ಇರುತಿರೆ ನೀನು
ಪತಿ ವಿಯೋಗವನು ವಿಧಿ ತಂದೊಡ್ಡಿದನು [123]

ಎರಡು ವರ್ಷದ ಮಗುವನ್ನು ಪರಿಪರಿ ಕಷ್ಟದಿಂದ ಬೆಳೆಸಿ ಮಗನ ವಿವಾಹ ಮಾಡಿ ನಾಲ್ವರು ಮೊಮ್ಮಕ್ಕಳನ್ನು ಪಡೆದರು. ಘಟಿಕಾಚಲದ ಪ್ರಾಣೇಶನ ಸೇವೆ ಮಾಡುತ್ತಾ ಜೀವನ ನಡೆಸುತ್ತಿದ್ದರು. ಅವರ ಭಕ್ತಿಗೆ ಒಲಿದ ಶ್ರೀಹರಿ ಭಕ್ತಿ, ವಿರಕ್ತಿ, ಜ್ಞಾನ ಪ್ರಸಾದಿಸಿದನು. ವೃದ್ಧಾಪ್ಯದಲ್ಲಿ ಮಗನೂ ಮೃತನಾದ ನಂತರ ಮೊಮ್ಮಕ್ಕಳು ಅವರನ್ನು ಸಲಹಿದರು. ಕಲ್ಯಾಣ ನಗರ (ಬೆಂಗಳೂರು) ದಲ್ಲಿ ಕಿರಿಯ ಮೊಮ್ಮಗನ ಜೊತೆ ಇರುವಾಗ ಸುಬ್ಬರಾಯದಾಸರಿಂದ 'ಸೀತಾಪತಿ ವಿಠಲ' ಅಂಕಿತ ಪಡೆದರು. ತೀರ್ಥ ಯಾತ್ರೆಗಳನ್ನು ಮಾಡಿ, ವ್ರತ ನೇಮಗಳನ್ನು ಆಚರಿಸುತ್ತಾ ಕಿರಿಯ ಮೊಮ್ಮಗನ ಬಳಿ ಶಿವಮೊಗ್ಗದಲ್ಲಿ ಇದ್ದರು, ಅಲ್ಲಿಯೇ ವಿಧಿವಶರಾದರು. ದಾಸ ಮಹಿಳೆಯ ಜೀವನ ಕ್ರಮವನ್ನು ಮತ್ತೊಬ್ಬ ಸಮಕಾಲೀನ ದಾಸ ಮಹಿಳೆ ಚಿತ್ರಿಸಿರುವ ಅಪರೂಪದ ಕೃತಿ ಇದು.

13. <u>ಶ್ರೀಗುರುರಾಜ ಕವಚ:</u>

ಶ್ರೀಗುರುರಾಜ ಕವಚವನ್ನು ಅಂಬಾಬಾಯಿ 1942ನೇ ಇಸವಿಯಲ್ಲಿ ಬರೆದಿದ್ದಾರೆ. ತಾವು ಬರೆದ ಪ್ರತಿ ಹಾಡಿಗೂ ದಿನಾಂಕಗಳನ್ನು ಬರೆದಿರುವುದು ಇವರ ವೈಶಿಷ್ಟ್ಯ. 145 ನುಡಿಗಳಲ್ಲಿ ಈ ಕೃತಿ ರಚಿತವಾಗಿದೆ. ಪ್ರಾರ್ಥನಾ ಸ್ತುತಿಯಿಂದ ಈ ಕೃತಿ ಪ್ರಾರಂಭವಾಗುತ್ತದೆ. ನರ ಜನ್ಮವು ಶ್ರೇಷ್ಠವೆಂದು ಹೇಳುತ್ತಾ ಸಾಧಕರಿಗೆ ಹರಿಪದ ಕಾಣಲು ಗುರುಗಳು ಬೇಕು ಎಂಬ ವಿಚಾರವನ್ನು ತಿಳಿಸುತ್ತಾರೆ. ಹರಿಕೃಪೆಗೆ ಗುರುಕರುಣೆ ಅಗತ್ಯ ಅಂತೆಯೇ ಗುರುವಿಗೆ ಗುಲಾಮನಾಗದ ತನಕ ಸಾಧನೆಗೆ ದಾರಿ ಸಿಗದು ಎಂದು ಪ್ರತಿಪಾದಿಸುತ್ತಾರೆ.

ಮುದ್ದುಮೋಹನರ ಶಿಷ್ಯರಾದ ತಂದೆ ಮುದ್ದುಮೋಹನವಿಠಲಾಂಕಿತ ಸುಬ್ಬರಾಯದಾಸರನ್ನು ಕುರಿತ 'ಶ್ರೀಗುರು ಕವಚ' ಇದು. ಸುಬ್ಬರಾಯದಾಸರು 'ಸಂಸಾರದ ತೊಡಕಿನಲಿ ಕಂಸಾರಿಯ ಮರೆಯದಲೆ' ಭಕ್ತಿ ಸೂತ್ರವನ್ನು ಶಿಷ್ಯರುಗಳಿಗೆ ತಿಳಿಸಿದವರು. ದಾಸರು ತಪೋ ವೃತ್ತಿ ನಡೆಸಿದರೆಂದು ಅಂಬಾಬಾಯಿ ಹೇಳುತ್ತಾರೆ.

14. ಸರ್ವ ಸಿದ್ಧಿ ಪ್ರದಾಯಕ ಸ್ತೋತ್ರ:

ಅಂಬಾಬಾಯಿಯವರು 61 ನುಡಿಗಳಲ್ಲಿ ಸರ್ವ ಸಿದ್ಧಿ ಪ್ರದಾಯಕ ಸ್ತೋತ್ರ ರಚಿಸಿದ್ದಾರೆ. ಪ್ರತಿ ನುಡಿಯ ಅಂತ್ಯದಲ್ಲೂ "ಸರ್ವ ಸಿದ್ಧಿ ಪ್ರದಾಯಕ" ಎಂದಿದೆ. ಮೊದಲಲ್ಲಿ ಗಣಪತಿ, ಗುರು ದೇವತೆಗಳನ್ನು ಸ್ತುತಿ ಮಾಡಿ ಭಾರತೀರಮಣನನ್ನು ಸರ್ವ ಸಿದ್ಧಿ ಪ್ರದಾಯಕನೆಂದು ಸ್ತುತಿಸುತ್ತಾರೆ. ರಾಮಾಯಣದ ಕೆಲ ಸಂದರ್ಭಗಳಲ್ಲಿ ವಾಯು ದೇವರಿಂದ ಕಾರ್ಯ ಸಿದ್ಧಿಯಾದುದನ್ನು ಪ್ರಸ್ತಾಪಿಸುತ್ತಾರೆ. 41–46 ನುಡಿಗಳಲ್ಲಿ ಶ್ರೀರಾಘವೇಂದ್ರ ತೀರ್ಥರನ್ನು ಸ್ತುತಿಸಿದ್ದಾರೆ. 47–61 ನುಡಿಗಳವರೆಗೆ ತಂದೆಮುದ್ದುಮೋಹನವಿಠಲರನ್ನು ಸ್ತುತಿಸಿದ್ದಾರೆ.

15. ಕಾಂತೇಶ ಕವಚ:

ಕಾಂತೇಶ ಕವಚವನ್ನು ಅಂಬಾಬಾಯಿ 45 ನುಡಿಗಳಲ್ಲಿ ಬರೆದಿದ್ದಾರೆ. ಇದೊಂದು ಆತ್ಮ ನಿವೇದನಾತ್ಮಕ ಸ್ತುತಿಯಂತಿದೆ. ಇದರಲ್ಲಿ ವಾಯುದೇವರನ್ನು ಅವರ ಕಾರ್ಯವನ್ನು ಸ್ತುತಿಸುವ ಪದಗಳಿವೆ. ಆಂಜನೇಯ ಕದರಮಂಡಲಗಿಯಲ್ಲಿ ಕಾಂತೇಶನೆಂದು ಪ್ರಸಿದ್ಧ. ಮೊದಲಲ್ಲಿ ವಾಯುದೇವರು ನಡೆಸಿದ, ನಡೆಸುವ ಕಾರ್ಯಗಳನ್ನು 10 ನುಡಿಗಳಲ್ಲಿ ಹೇಳುತ್ತಾರೆ. 11ರಿಂದ 45ನೇ ನುಡಿಯವರೆಗೆ ತಮ್ಮ ಸಂಕಷ್ಟವನ್ನು ಹೇಳಿಕೊಂಡು ಅದನ್ನು ನಿವಾರಿಸುವಂತೆ ಪ್ರಾರ್ಥಿಸುತ್ತಾರೆ. ಕಾಂತೇಶನೇ ತನ್ನನ್ನು ಪೊರೆಯುವ ಸ್ವಾಮಿಯೆಂದು ಶರಣಾಗತಿ ಹೊಂದುತ್ತಾರೆ.

16. ನೃಸಿಂಹ ಸ್ತೋತ್ರ:

ನೃಸಿಂಹ ಸ್ತೋತ್ರವನ್ನು ಅಂಬಾಬಾಯಿ 59 ನುಡಿಗಳಲ್ಲಿ ರಚಿಸಿದ್ದಾರೆ. ಈ ದೀರ್ಘ ಕೃತಿಯಲ್ಲಿ ನರಸಿಂಹದೇವರನ್ನು ಪ್ರಾರ್ಥಿಸುವ ಆತ್ಮ ನಿವೇದನಾತ್ಮಕ ಸ್ತುತಿಯಿದೆ. ಯಾವ ಕಥೆಯೂ ಇಲ್ಲ. ಕರುಣಾಸಾಗರ ನರಸಿಂಹನನ್ನು ಕಷ್ಟ ಪರಿಹರಿಸಿ ಕಾಪಾಡಲು ಬೇಡುವ ಆರ್ತ ಭಾವವಿದೆ.

17. ತತ್ವ ಸಾರಾಮೃತ:

ಅಂಬಾಬಾಯಿಯವರು ತತ್ವ ಸಾರಾಮೃತ ಕೃತಿಯನ್ನು 363 ನುಡಿಗಳಲ್ಲಿ ರಚಿಸಿದ್ದಾರೆ. ಆತ್ಮ ನಿವೇದನೆಯಿಂದ ಈ ಕೃತಿ ಪ್ರಾರಂಭವಾಗುತ್ತದೆ. ತಂದೆ ಮುದ್ದು ಮೋಹನ ವಿಠಲರಿಂದ ಅಂಕಿತ ದೊರೆತ ವಿಚಾರವನ್ನು ಇಲ್ಲಿ ಪ್ರಸ್ತಾಪಿಸುತ್ತಾರೆ. ಕರಿಗಿರಿ ಕ್ಷೇತ್ರದ ಯೋಗ ನರಸಿಂಹ, ಭೋಗಾನರಸಿಂಹ ದೇವರನ್ನು ಸ್ತುತಿಸುತ್ತಾರೆ. ಪ್ರಹ್ಲಾದನಿಗೊಲಿದ ನರಸಿಂಹ ಮಹಿಮೆ ನಿರೂಪಿಸುತ್ತಾರೆ.

ಸರ್ವದೇವೋತ್ತಮನೆ । ಸರ್ವ ಜಗದಾಧಾರ
ಸರ್ವಗುಣ ಪರಿಪೂರ್ಣ ಸರ್ವ ಸಾಕ್ಷಿ ॥

ಸರ್ವ ವ್ಯಾಪ್ತಕ ನೀನೆ । ಸರ್ವೋತ್ತಮನೆ ಸ್ವಾಮಿ
ಸರ್ವದಾ ನಾನಮಿಪೆ । ನಾರಸಿಂಹ [124]

ಎಂದು ಹರಿಯ ಗುಣಗಳನ್ನು ನಂತರ ಲಕ್ಷ್ಮೀದೇವಿ, ಬ್ರಹ್ಮ, ವಾಯು, ಇತ್ಯಾದಿ ದೇವತೆಗಳು ಮತ್ತು ಅವರು ನಡೆಸುವ ಕಾರ್ಯಗಳನ್ನು ವಿವರಿಸುತ್ತಾರೆ. ನಂತರ ಗುರು ಮಧ್ವರನ್ನು ಮೊದಲುಗೊಂಡು ಜಯತೀರ್ಥರು, ವಾದಿರಾಜರು, ರಾಘವೇಂದ್ರರು, ಇತ್ಯಾದಿ ಗುರುಗಳನ್ನು ಸ್ಮರಿಸುತ್ತಾರೆ. ಪುರಂದರದಾಸರು, ವಿಜಯದಾಸರು ಮುಂತಾದ ದಾಸರುಗಳ ಕುರಿತ ಪ್ರಾರ್ಥನೆಗಳಿವೆ. ಸೃಷ್ಟಿ ಹೇಗಾಯಿತೆಂಬ ವಿಚಾರವನ್ನು ವಿಸ್ತಾರವಾಗಿ ವರ್ಣಿಸುತ್ತಾರೆ. ಅನಂತರ ಆತ್ಮ ನಿವೇದನೆ ಮಾಡಿಕೊಳ್ಳುತ್ತಾರೆ. ಶ್ರೀಹರಿಯು ಸೃಷ್ಟಿ, ಸ್ಥಿತಿ, ಲಯ, ನಿಯಮನಗಳನ್ನು ನಿರ್ವಹಿಸುವ ರೀತಿಯನ್ನು ತಿಳಿಸುತ್ತಾರೆ. ಈ ಕೃತಿಯಲ್ಲಿ ನಿಂದಾಸ್ತುತಿಯೂ ಇದೆ. ಶ್ರೀಹರಿ ತನ್ನ ಮಕ್ಕಳಲ್ಲೇ ತಾರತಮ್ಯದಿಂದ ನಡೆದುಕೊಳ್ಳುತ್ತಾನೆಂದು ಆಕ್ಷೇಪಿಸುತ್ತಾರೆ.

ಹಿರಿಯಮಗ ಅಜನೆಂದು । ಸರುವ ರಾಜ್ಯವನಿತ್ತೆ
ಕಿರಿಯಮಗ ಮನ್ಮಥಗೆ ಏನಿತ್ತೆಯೊ ॥
ಹರನಿಂದ ಸುಟ್ಟವನು ವರ ಕಾಯ ನೀಗಿದರೆ ।
ಸರಿಯೆ ನಿನಗಿದು ಪೇಳು ನಾರಸಿಂಹ [125]

ದ್ವಾರಕೆಯನ್ನು ವೈಕುಂಠವನ್ನು ವರ್ಣಿಸುತ್ತಾ ಶ್ರೀಹರಿಯ ಸೌಂದರ್ಯ ಮತ್ತು ದಶಾವತಾರಗಳ ಲೀಲೆಗಳನ್ನು ನಿರೂಪಿಸುತ್ತಾರೆ. ಪುರಾಣ, ಸಂಪ್ರದಾಯ, ವ್ರತಕತೆಗಳ ನಿರೂಪಣೆಗೆ ಕೀರ್ತನೆಯ ವ್ಯಾಪ್ತಿ ಸಾಲದೆನಿಸಿದಾಗ ಮಹಿಳಾ ಹರಿದಾಸರು ಖಂಡ ಕಾವ್ಯಗಳನ್ನು ರಚಿಸಿದರು. ಈ ಎಲ್ಲ ಕಥನಗಳು ಪುರಾಣಗಳ ಚೌಕಟ್ಟಿನಲ್ಲಿಯೇ ರಚನೆಯಾಗಿವೆ. ಅಘಟಿತ ಘಟನೆಗಳು, ಅಲೌಕಿಕ ಸಂಗತಿಗಳು, ಅವತಾರಗಳು, ಜನ್ಮಾಂತರಗಳು, ಶಾಪ ಅನುಗ್ರಹಗಳು ಕಾವ್ಯ ಭಾಗದಲ್ಲಿ ಸೇರಿ ಹೋಗಿವೆ. ಇಲ್ಲಿ ಐತಿಹಾಸಿಕ ವ್ಯಕ್ತಿಗಳೂ ಪುರಾಣ ಪುರುಷರಾಗಿದ್ದಾರೆ. ಬೃಹತ್ ಕಾವ್ಯಗಳನ್ನು ಓದಿ ಮುಗಿಸಲು ಸಾಕಷ್ಟು ಕಾಲಾವಕಾಶ ಬೇಕು. ಒಂದೇ ಕೂತಿನಲ್ಲಿ ಹಾಡಿ ಮುಗಿಸಬಹುದಾದ ವ್ರತಗಳ ಸಂದರ್ಭಕ್ಕೆ ಸೂಕ್ತವಾಗಿ ಒದಗುವ ಕಥಾ ವಸ್ತುವನ್ನು ಮಹಿಳಾ ದಾಸರು ಆಯ್ಕೆ ಮಾಡಿಕೊಂಡರು. ಪ್ರೌಢವಾದ ವೃತ್ತ, ಕಂದ ಪದ್ಯಗಳ ಚಂಪೂ ಮಾರ್ಗವನ್ನು ಬಿಟ್ಟು ಸರಳವಾದ ಸಾಂಗತ್ಯ ತ್ರಿಪದಿಗಳನ್ನು ಕಥಾ ನಿರೂಪಣೆಗೆ ಬಳಸಿಕೊಂಡರು. ಬರಿಯ ಕಥೆಯನ್ನೇ ಹೇಳದೆ ಸಾಂದರ್ಭಿಕವಾಗಿ ತತ್ವ, ನೀತಿ, ದ್ವೈತ ಸಿದ್ಧಾಂತ, ಪತಿವ್ರತಾಧರ್ಮ ಮತ್ತು ಹಬ್ಬ-ಹರಿದಿನಗಳ ಮಹತ್ವವನ್ನು ನಿರೂಪಿಸಿದ್ದಾರೆ. ಸಂಪ್ರದಾಯಗಳು ಆಚರಣೆಯ ಮೂಲಕ ಸಂಸ್ಕೃತಿಯನ್ನು ರಕ್ಷಿಸುವ ಕಾರ್ಯದಲ್ಲಿ ತಮಗಿದ್ದ ಅಕ್ಷರ ಜ್ಞಾನವನ್ನು ಸಾರ್ಥಕಪಡಿಸಿಕೊಂಡಿದ್ದಾರೆ.

ಅಡಿ ಟಿಪ್ಪಣಿ

ಲೇಖಕರ ಹೆಸರು	ಕೃತಿಯ ಹೆಸರು	ಪುಟ ಸಂಖ್ಯೆ
1. ಎಚ್.ಎಸ್. ವೆಂಕಟೇಶಮೂರ್ತಿ	ಕನ್ನಡ ಕಥನ ಕವನಗಳು	ಬೆನ್ನುಡಿ
2. ಎಸ್. ಅನಂತನಾರಾಯಣ	ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಸಾಹಿತ್ಯದ ಪ್ರಭಾವ	ಪುಟ–275
3. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು, ಸಂ–18, ಭಾಗ–1	ಪುಟ–138
4. ಅದೇ		ಪುಟ–139
5. ಅದೇ		ಪುಟ–141
6. ಅದೇ		ಪುಟ–144
7. ಅದೇ		ಪುಟ–148
8. ಅದೇ		ಪುಟ–148
9. ಅದೇ		ಪುಟ–149
10. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ನಿಡಗುರುಕಿ ಜೀವೂಬಾಯಿ, ಸಂ–18, ಭಾಗ–4	ಪುಟ–255
11. ಅದೇ		ಪುಟ–267
12. ಅದೇ		ಪುಟ–267
13. ಅನಂತಪದ್ಮನಾಭರಾವ್	ಪ್ರಬುದ್ಧ ಕರ್ನಾಟಕ ಸಂಪುಟ–53, ಸಂಚಿಕೆ–4–5	ಪುಟ–18
14. ಅದೇ		ಪುಟ–23
15. ಅದೇ		ಪುಟ–24
16. ಅದೇ		ಪುಟ–25
17. ಅದೇ		ಪುಟ–25
18. ಅದೇ		ಪುಟ–26
19. ಅದೇ		ಪುಟ–26
20. ಅದೇ		ಪುಟ–26
21. ಅದೇ		ಪುಟ–30
22. ಅದೇ		ಪುಟ–31
23. ಅದೇ		ಪುಟ–18
24. ಅದೇ		ಪುಟ–61
25. ಅದೇ		ಪುಟ–65
26. ಅದೇ		ಪುಟ–65
27. ಅನಂತಪದ್ಮನಾಭರಾವ್	ಅಜ್ಞಾತ ಕವಯತ್ರಿಯರು	ಪುಟ–77

28. ಅನಂತಪದ್ಮನಾಭರಾವ್	ಅಜ್ಞಾತ ಕವಯತ್ರಿಯರು	ಪುಟ–71
29. ಅದೇ		ಪುಟ–72
30. ನಾ. ಗೀತಾಚಾರ್ಯ	ಸಮಗ್ರ ದಾಸ ಸಾಹಿತ್ಯ, ಯದುಗಿರಿಯಮ್ಮನ ಕೀರ್ತನೆಗಳು, ಸಂ–18, ಭಾಗ–4	ಪುಟ–90
31. ಕೋಲಾರ ಪದ್ಮಾಬಾಯಿ	ಸುಜ್ಞಾನ ಪ್ರಸಾರ ಸುಮಾವಳಿ ಸೌರಭ, ಭಾಗ–2	ಪುಟ–7
32. ಅದೇ		ಪುಟ–33
33. ಅದೇ		ಪುಟ–69
34. ಅದೇ		ಪುಟ–104
35. ವಿಜಯಲಕ್ಷ್ಮೀ ರಾಘವೇಂದ್ರಾಚಾರ್	ಶ್ರೀರಾಮ ಪಾರಿಜಾತ	ಪುಟ–13
36. ಗಂಗಾ ಪಾದೇಕಲ್	ಮುಳಿಯ ಮೂಕಾಂಬಿಕಾ ಅಮ್ಮ	ಪುಟ–16
37. ಮಂಜುಳಾ ಸುಬ್ಬರಾವ್	ಶ್ರೀರಾಮಕಥಾರತ್ನ ಮಂಜರಿ	ಪುಟ–229
38. ಟಿ.ಎನ್. ನಾಗರತ್ನ ಅಕ್ಕ ಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಹರಪನಹಳ್ಳಿ ಭೀಮವ್ವ, ಸಂ–19	ಪುಟ–333
39. ದಡಿಗದ ಲಕ್ಷ್ಮೀನರಸಮ್ಮ	ಅಪ್ರಕಟಿತ	
40. ಜಿ. ಪವನಕುಮಾರ್	ಹೂವ ಕೊಡೆ ತಾಯೆ	ಪುಟ–48
41. ಟಿ.ಎನ್. ನಾಗರತ್ನ	ಹರಪನಹಳ್ಳಿ ಭೀಮವ್ವನ ಹಾಡುಗಳು	ಪುಟ–492
42. ಅದೇ		ಪುಟ–27
43. ರುಕ್ಮಿಣಿ ಗಿರಿಮಾಜಿ	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4, ಓರವಾಯಿ ಲಕ್ಷ್ಮೀದೇವಮ್ಮ	ಪುಟ–163
44. ಗಂಗಾ ಪಾದೇಕಲ್	ಮುಳಿಯ ಮೂಕಾಂಬಿಕಾ ಅಮ್ಮ	ಪುಟ–13
45. ಅದೇ		ಪುಟ–15
46. ಟಿ.ಎನ್. ನಾಗರತ್ನ	ಸಮಗ್ರ ದಾಸ ಸಾಹಿತ್ಯ, ಸಂ–19, ಹರಪನಹಳ್ಳಿ ಭೀಮವ್ವ	ಪುಟ–122
47. ಅದೇ		ಪುಟ–122
48. ಅದೇ		ಪುಟ–125
49. ಎನ್. ಬಸವಾರಾಧ್ಯ	ಚಂದ್ರಹಾಸನ ಕಥೆ	ಪುಟ–11
50. ಹಣಮಂತ ತಾಸಗಾಂವಕರ	ಸಮಗ್ರ ದಾಸ ಸಾಹಿತ್ಯ, ಸಂ–7, ಗಲಗಲಿ ಅವ್ವ	ಪುಟ–7
51. ಅದೇ		ಪುಟ–80
52. ಅದೇ		ಪುಟ–86
53. ಟಿ.ಎನ್. ನಾಗರತ್ನ	ಸಮಗ್ರ ದಾಸ ಸಾಹಿತ್ಯ, ಹರಪನಹಳ್ಳಿ ಭೀಮವ್ವ, ಸಂ–19	ಪುಟ–413
54. ಅದೇ		ಪುಟ–446
55. ಅದೇ		ಪುಟ–455

56. ಸೀತಾಬಾಯಿ ರಾ. ಪುರೋಹಿತ	ಹರಿಕಡಲಾಮೃತ, ಭಾಗ-2	ಪುಟ-35
57. ಮಂಜುಳಾ ಸುಬ್ಬರಾವ್	ಪ್ರಹ್ಲಾದ ಚರಿತ್ರೆ	ಪುಟ-
58. ಟಿ.ಎನ್. ನಾಗರತ್ನ ಅಕ್ಕಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಸಂ-19, ಹರಪನಹಳ್ಳಿ ಭೀಮವ್ವ	ಪುಟ-674
59. ದಡಿಗದ ಲಕ್ಷ್ಮೀನರಸಮ್ಮ	ಅಪ್ರಕಟಿತ	
60. ರುಕ್ಮಿಣಿ ಗಿರಿಮಾಜಿ	ಸಮಗ್ರ ದಾಸ ಸಾಹಿತ್ಯ, ಸಂ-18, ಭಾಗ-4, ಓರವಾಯಿ ಲಕ್ಷ್ಮೀದೇವಮ್ಮ	ಪುಟ-278
61. ಅದೇ		ಪುಟ-207
62. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ-18, ಭಾಗ-1, ಗಿರಿಯಮ್ಮ	ಪುಟ-46
63. ಅದೇ		ಪುಟ-46
64. ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಸಂ-18, ಭಾಗ-3, ಅಂಬಾಬಾಯಿ	ಪುಟ-348
65. ಅದೇ		ಪುಟ-350
66. ಅದೇ		ಪುಟ-361
67. ಅದೇ		ಪುಟ-379
68. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ-18, ಭಾಗ-2, ನಿಡಗುರುಕಿ ಜೀವೂಬಾಯಿ	ಪುಟ-280
69. ರುಕ್ಮಿಣಿ ಗಿರಿಮಾಜಿ	ಸಮಗ್ರ ದಾಸ ಸಾಹಿತ್ಯ, ಸಂ-18, ಭಾಗ-4, ಓರವಾಯಿ ಲಕ್ಷ್ಮೀದೇವಮ್ಮ	ಪುಟ-234
70. ಅದೇ		ಪುಟ-235
71. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ-18, ಭಾಗ-1, ಗಿರಿಯಮ್ಮ	ಪುಟ-210
72. ಅದೇ		ಪುಟ-213
73. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ-18, ಭಾಗ-2, ನಿಡಗುರುಕಿ ಜೀವೂಬಾಯಿ	ಪುಟ-243
74. ಅದೇ		ಪುಟ-290
75. ಅದೇ		ಪುಟ-293
76. ಗಂಗಾ ಪಾದೇಕಲ್	ಮುಳಿಯ ಮೂಕಾಂಬಿಕಾ ಅಮ್ಮ	ಪುಟ-23
77. ಅದೇ		ಪುಟ-27
78. ಟಿ.ಎನ್. ನಾಗರತ್ನ ಅಕ್ಕ ಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಹರಪನಹಳ್ಳಿ ಭೀಮವ್ವ, ಸಂ-19	ಪುಟ-312
79. ಗಂಗಾ ಪಾದೇಕಲ್	ಮುಳಿಯ ಮೂಕಾಂಬಿಕಾ ಅಮ್ಮ	ಪುಟ-19
80. ಅದೇ		ಪುಟ-21
81. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ-18, ಭಾಗ-2, ನಿಡಗುರುಕಿ ಜೀವೂಬಾಯಿ	ಪುಟ-393
82. ಅದೇ		ಪುಟ-403

83. ಬಿ.ಎಸ್. ಸರೋಜ	ಸಂಪ್ರದಾಯದ ಹಾಡುಗಳು	ಪುಟ–11
84. ಅದೇ		ಪುಟ–VII
85. ಕೋಲಾರ ಪದ್ಮಾಬಾಯಿ	ಸುಜ್ಞಾನ ಪ್ರಸಾರ ಸುಮಾವಳಿ ಸೌರಭ–2	ಪುಟ–280
86. ವೀರಣ್ಣ ದಂಡೆ	ಸುವರ್ಣ ಜಾನಪದ ಲೇಖನಗಳು	ಪುಟ–166
87. ಸರಿತಾಕುಸುಮಾಕರ ದೇಸಾಯಿ	ಭೀಮೇಶ ಕೃಷ್ಣ	ಪುಟ–39
88. ಅದೇ		ಪುಟ–39
89. ಅದೇ		ಪುಟ–39
90. ಅದೇ		ಪುಟ–39
91. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–1, ಗಿರಿಯಮ್ಮ	ಪುಟ–129
92. ಅದೇ		ಪುಟ–131
93. ಅದೇ		ಪುಟ–133
94. ಅದೇ		ಪುಟ–136
95. ಅದೇ		ಪುಟ–137
96. ನಾ. ಗೀತಾಚಾರ್ಯ ನೀ.ಕೃ. ರಾಮಶೇಷನ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4, ಯದುಗಿರಿಯಮ್ಮ	ಪುಟ–47
97. ಅದೇ		ಪುಟ–49
98. ಹಣಮಂತ ತಾಸಗಾಂವಕರ	ಸಮಗ್ರ ದಾಸ ಸಾಹಿತ್ಯ, ಸಂ–7, ಗಲಗಲಿ ಅವ್ವ	ಪುಟ–333
99. ಅದೇ		ಪುಟ–337
100. ಟಿ.ಎನ್. ನಾಗರತ್ನ ಅಕ್ಕ ಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಸಂ–19, ಹರಪನಹಳ್ಳಿ ಭೀಮವ್ವ	ಪುಟ–504
101. ಅದೇ		ಪುಟ–516
102. ಮಂಜುಳಾ ಸುಬ್ಬರಾವ್	ಶ್ರೀರುಕ್ಮಿಣೀ ಪರಿಣಯ	ಪುಟ–42
103. ಟಿ.ಎನ್. ನಾಗರತ್ನ ಅಕ್ಕ ಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಸಂ–19, ಹರಪನಹಳ್ಳಿ ಭೀಮವ್ವ	ಪುಟ–537
104. ಮಂಜುಳಾ ಸುಬ್ಬರಾವ್	ಶ್ರೀರುಕ್ಮಿಣೀ ಪರಿಣಯ	ಪುಟ–44
105. ಟಿ.ಎನ್. ನಾಗರತ್ನ ಅಕ್ಕ ಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಸಂ–19, ಹರಪನಹಳ್ಳಿ ಭೀಮವ್ವ	ಪುಟ–552
106. ಮೀನಾರಾವ್/ ನಳಿನಿ ವೆಂಕಟೇಶ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4, ಸರಸ್ವತಿಬಾಯಿ	ಪುಟ–667
107. ಮಂಜುಳಾ ಸುಬ್ಬರಾವ್	ಶ್ರೀನಿವಾಸ ಪದ್ಮಜಾ ಗಿರಿಜಾ ಕಲ್ಯಾಣ	ಪುಟ–8
108. ಸರೋಜಾಬಾಯಿ	ಶ್ರೀನಿವಾಸ ಕಲ್ಯಾಣ ಮತ್ತು ಇತರ ಕೃತಿಗಳು	ಪುಟ–20
109. ವಿಜಯಲಕ್ಷ್ಮೀ ರಾಘವೇಂದ್ರಾಚಾರ್	ಶ್ರೀಗೋವಿಂದ ಕಲ್ಯಾಣ	ಪುಟ–6
110. ಅದೇ		ಪುಟ–7

111. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–1, ಗಿರಿಯಮ್ಮ	ಪುಟ–63
112. ಅದೇ		ಪುಟ–73
113. ಅದೇ		ಪುಟ–94
114. ಅದೇ		ಪುಟ–113
115. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–2, ನಿಡಗುರುಕಿ ಜೀವೂಬಾಯಿ	ಪುಟ–449
116. ಅದೇ		ಪುಟ–450
117. ರುಕ್ಮಿಣಿ ಗಿರಿಮಾಜಿ	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4, ಓರವಾಯಿ ಲಕ್ಷ್ಮೀದೇವಮ್ಮ	ಪುಟ–196
118. ಅದೇ		ಪುಟ–198
119. ಚಂದೂಬಾಯಿ ನಾಯಕ	ಅಪ್ರಕಟಿತ	
120. ಅದೇ		
121. ಅದೇ		
122. ಅದೇ		
123. ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–3, ಅಂಬಾಬಾಯಿ	ಪುಟ–402
124. ಅಂಬಾಬಾಯಿ	ಅಪ್ರಕಟಿತ	
125. ಅಂಬಾಬಾಯಿ	ಅಪ್ರಕಟಿತ	

ಅಧ್ಯಾಯ-6

ಸಂಪ್ರದಾಯದ ಹಾಡುಗಳು

ಪ್ರಾಚೀನ ಭಾರತದಲ್ಲಿ ಮಹಿಳೆಯರೂ ಪುರುಷರಿಗೆ ಸರಿಸಮಾನವಾಗಿ ವೇದ, ವೇದಾಂತಗಳನ್ನು ಚರ್ಚಿಸುತ್ತಿದ್ದರು. ಗಾರ್ಗಿ, ಮೈತ್ರೇಯಿ ಮತ್ತು ಲೋಪಮುದ್ರಾ ಮೊದಲಾದ ಸ್ತ್ರೀಯರು ವೇದಾಧ್ಯಯನವನ್ನೂ ಮಾಡಿದ್ದರೆಂದು ಹೇಳಲಾಗುತ್ತದೆ. ಮಂಡನಮಿಶ್ರರ ಪತ್ನಿ ಉಭಯಭಾರತಿಯು ಶ್ರೀಶಂಕರಾಚಾರ್ಯರೊಡನೆ ವಾದ ಮಾಡಿದ್ದಳೆಂದು ಇತಿಹಾಸ ಹೇಳುತ್ತದೆ. ಆದರೆ ಕಾಲಾನಂತರದಲ್ಲಿ ಸ್ತ್ರೀ ಸ್ವಾತಂತ್ರ್ಯ ಅಳಿದು ಅವಳ ರಕ್ಷಣೆ ಮಾಡುವ ಹೆಸರಿನಲ್ಲಿ ಅನೇಕ ನೀತಿ ನಿಯಮಾವಳಿಗಳು ರೂಪಿಸಲ್ಪಟ್ಟವು. ಇದರಿಂದ ನಮ್ಮ ಹಿಂದಿನ ತಲೆಮಾರುಗಳ ಬ್ರಾಹ್ಮಣ ಮಹಿಳೆಗೆ 'ಗೃಹ ಬಂಧನ' ಪ್ರಾಪ್ತವಾಯಿತು. ವಿದ್ಯೆಯಿಲ್ಲದ ಸ್ತ್ರೀಯರ ಬವಣೆಯನ್ನು ಕಂಡು ಹಿರಿಯರು ಅವಳಲ್ಲಿ ಜೀವನೋತ್ಸಾಹ ಮೂಡಿಸಲು ಗೃಹಿಣಿ ಧರ್ಮಕ್ಕೆ ಅನುಗುಣವಾಗಿ ಕೆಲವು ಆಚರಣೆಗಳನ್ನು ತಂದರು. ಇವೇ ಸಂಪ್ರದಾಯಗಳು.

ಸಂಪ್ರದಾಯಗಳನ್ನು ಅನುಸರಿಸಲು ಸಂದರ್ಭಕ್ಕೆ ತಕ್ಕಂತೆ, ನಡವಳಿಕೆಗಳು, ಆಚರಣೆಗಳನ್ನು ಸೂಚಿಸುವಂತೆ ಹಾಡುಗಳು ರಚನೆಯಾದವು. ಛಂದೋಬದ್ಧವಾಗಿ, ಶ್ರಾವ್ಯವಾಗಿರುವಂತಹ ಈ ರಚನೆಗಳೇ ಸಂಪ್ರದಾಯದ ಹಾಡುಗಳೆನಿಸಿದವು. ಈ ಹಾಡುಗಳು ಮೌಖಿಕ ಸಂಪ್ರದಾಯಕ್ಕೆ ಸೇರಿದವು. ಈ ಹಾಡುಗಳಲ್ಲಿ ಭಾರತೀಯ ಸಂಸ್ಕೃತಿ, ಜನರ ವಿವೇಕ, ಜೀವನ ಮೌಲ್ಯ, ಧರ್ಮ ಶ್ರದ್ಧೆ, ಕರ್ತವ್ಯ ನಿಷ್ಠೆ ಮತ್ತು ದೈವಭಕ್ತಿ ಅಭಿವ್ಯಕ್ತವಾಗಿವೆ. "ಭಾರತವು ಪ್ರಾಚೀನ, ವಿಶಾಲ ರಾಷ್ಟ್ರ. ಇಲ್ಲಿಯ ಜನತೆಯ ಆಚಾರ, ವಿಚಾರ, ನಂಬಿಕೆ ಬೇರೆ ಬೇರೆಯಾದರೂ ಎಲ್ಲರನ್ನೂ ಭಾರತೀಯತ್ವವೆಂಬ ಏಕ ಸೂತ್ರ ಬಂಧಿಸಿರುತ್ತದೆ. ದೈವದಲ್ಲಿ ನಂಬಿಕೆ ನಾಸ್ತಿಕರಲ್ಲದವರಿಗೆಲ್ಲ ಸಾಮಾನ್ಯವಾಗಿ ಇದ್ದೇ ಇರುತ್ತದೆ. ನಮ್ಮ ನಾಡಿನ ಜನ-ಜೀವನ ಸಾಗಿ ಬಂದ ಹಾದಿಯನ್ನು ಈ ಹಾಡುಗಳು ಸೂಚಿಸುತ್ತದೆ. ಸಂಪ್ರದಾಯದ ಹಾಡುಗಳೆಲ್ಲ ಜನ ಜೀವನವನ್ನೇ ಪ್ರತಿಬಿಂಬಿಸುತ್ತದೆ."[1] ಮಹಿಳೆಯರು ನಿತ್ಯವೂ ಬೆಳಗಿನಿಂದ ರಾತ್ರಿಯವರೆಗೂ ನಡೆಯುವ ಯಾವ ಸಂಗತಿಯೇ ಆದರೂ ಅದಕ್ಕೆ ಹೊಂದಿಕೊಂಡಂತೆ ಒಂದು ಹಾಡು ಹೇಳುತ್ತಿದ್ದರು. ಅದರಿಂದ ದೈನಂದಿನ ತಾಪತ್ರಯಗಳನ್ನು ಮರೆತು ಅಲೌಕಿಕ ನೆಮ್ಮದಿ ಪಡೆಯುತ್ತಿದ್ದರು.

ಸಂಪ್ರದಾಯದ ಪದಗಳು ಜನಪದ ಸಾಹಿತ್ಯದ ಅಂಗವೇ ಆಗಿದೆ. "ಶಿಷ್ಟ ಸಂಪ್ರದಾಯದ ಬ್ರಾಹ್ಮಣ ಸಮಾಜದಲ್ಲಿ ಸೃಷ್ಟಿಯಾಗಿ ಅಲ್ಲಿಯೇ ಬಳಕೆಗೊಳ್ಳುವ ಸಂಪ್ರದಾಯದ ಪದಗಳು ಶಿಷ್ಟ ಸಾಹಿತ್ಯಿಕ ರಚನೆಗಳಂತೆ ಕಂಡರೂ, ತಮ್ಮ ಜಾಯಮಾನದಲ್ಲಿ ಅವು ಶುದ್ಧ ಜನಪದ ಗೀತೆಗಳೇ".[2] ಜಾನಪದ ಸಾಹಿತ್ಯದಲ್ಲಿ

ಇವುಗಳನ್ನು ಗುರುತಿಸಲಾದರೂ ಬ್ರಾಹ್ಮಣರ ಮನೆಗಳಲ್ಲಿ ನಡೆಯುವ ಅನೇಕ ವ್ರತಗಳು, ಸಂಪ್ರದಾಯಗಳು ಈ ಹಾಡುಗಳಲ್ಲಿ ಕಂಡು ಬರುವುದರಿಂದ ಸಂಪ್ರದಾಯದ ಹಾಡುಗಳು ಎಂದೇ ಪ್ರಚಲಿತವಾಗಿವೆ. "ವೈದಿಕ ಸಂಪ್ರದಾಯದ ಉನ್ನತ ಸಾಂಸ್ಕೃತಿಕ ಪ್ರೌಢ ಆವರಣದಲ್ಲಿ, ವಿದ್ಯಾವಂತ ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ಇಂಥ ಒಂದು ಸಾಹಿತ್ಯ ಪರಂಪರೆ ಹೆಣ್ಣು ಮಕ್ಕಳಲ್ಲಿ ಉಳಿದು ಬಂದಿರುವುದು ಸೋಜಿಗದ ವಿಷಯವಾಗಿದೆ."[3]

ಸಂಪ್ರದಾಯದ ಪದಗಳು ಗೃಹಿಣಿಯ ಪ್ರತಿಷ್ಠೆ ಹೆಚ್ಚಿಸುವ ಸಾಧನಗಳೂ ಆಗಿದ್ದವು. ದಾಸ ಸಾಹಿತ್ಯದ ಉಗಮದ ಮೊದಲು ಇವು ಕರ್ನಾಟಕ ಸಂಗೀತದ ಅಡಿಗಟ್ಟಿನ ಮೇಲೆ ರಚಿತವಾಗಿದ್ದು ಜಾನಪದ ಶೈಲಿಯಲ್ಲಿದ್ದವು. ಗೃಹಿಣಿಯ ದೈನಂದಿನ ಆಚಾರ ವಿಚಾರಗಳಲ್ಲಿ ಹಾಸುಹೊಕ್ಕಾಗಿದ್ದವು. ಗೃಹ ಕೃತ್ಯದಲ್ಲಿನ ಆಯಾಸ, ಬೇಸರ ಕಾಣದಂತೆ ಮನಶ್ಶಾಂತಿ ಉಂಟು ಮಾಡಲು ಈ ಹಾಡುಗಳು ಸಾಧನವಾಗಿದ್ದವು.

ಇಂತಹ ಹಾಡುಗಳ ರಚನೆಯ ಉದ್ದೇಶ ಷೋಡಶ ಕರ್ಮಗಳಲ್ಲಿ ನಡೆಸುವ ಶಾಸ್ತ್ರಗಳ ವಿಧಿವಿಧಾನವನ್ನು ತಿಳಿಸುವುದು ಮತ್ತು ವ್ರತಾದಿಗಳನ್ನು ಮಾಡುವ ಕ್ರಮ ಮತ್ತು ಅದರ ಫಲಶೃತಿಯನ್ನು ತಿಳಿಸುವುದು. "ಈ ಹಾಡುಗಳು ಸಮಷ್ಠಿ ಚರಣಗಳಿಂದ ಕೂಡಿದ್ದು, ಪ್ರತಿಯೊಂದು ನುಡಿಯೂ ಶಾಸ್ತ್ರದ ವಿಧಿ–ವಿಧಾನಗಳನ್ನು ಕ್ರಮವಾಗಿ ತಿಳಿಸುವ ಸೂಚನೆಗಳಂತಿವೆ. ಇದರಿಂದಾಗಿ ಯಾವ ಶಾಸ್ತ್ರವನ್ನೂ ಬಿಡದೆ ನಡೆಸುವ ಉತ್ಸಾಹ, ಸಂತೋಷ, ತೃಪ್ತಿಯೂ ಉಂಟಾಗುತ್ತದೆ."[4] ಮಹಿಳೆಗೆ ಜ್ಞಾನ, ಭಕ್ತಿ ಬೆಳೆಸಿಕೊಳ್ಳಲು, ಪುರಾಣೇತಿಹಾಸಗಳ ಪರಿಚಯ ಉಂಟಾಗಿ ಜ್ಞಾನದ ಹರಿವು ಹೆಚ್ಚಲು ಈ ಹಾಡುಗಳು ಸಹಕಾರಿಯಾಗಿವೆ– ದಾಸ ಸಾಹಿತ್ಯದ ಉಗಮದ ನಂತರ ಹರಿದಾಸರು ಮಹಿಳೆಗೆ ಪ್ರಿಯವಾದ 'ಹಾಡಿನ' ರೂಪದಲ್ಲಿ ವೇದೋಪನಿಷತ್ತುಗಳ ಸಾರ ಸಂಗ್ರಹವನ್ನು ಹೇಳುತ್ತಾ ಅವಳ ಜ್ಞಾನ ಸಂಪತ್ತನ್ನು ಹೆಚ್ಚಿಸಲು ಕಾರಣರಾಗಿದ್ದಾರೆ. ಮಹಿಳೆಯರು ಸಂಪ್ರದಾಯ ಉಳಿಸಬಲ್ಲರೆಂಬ ದೃಷ್ಟಿಯಿಂದ ಹರಿದಾಸರು ಮಹಿಳೆಯರಿಗಾಗಿಯೇ ಸಂಪ್ರದಾಯದ ಹಾಡುಗಳನ್ನು ರಚಿಸಿದ್ದಾರೆ. ಗುರುರಾಮ ವಿಠಲರು, ಮೈಸೂರು ಆಸ್ಥಾನ ವಿದ್ವಾನ್ ಜಯರಾಮಾಚಾರ್ಯರು (ನರಹರಿ ಅಂಕಿತ), ಏರಿ ಶೇಷಾಚಾರ್ಯರು, ಅನಂತಾದ್ರೀಶರು ಮತ್ತು ಅನೇಕ ಹರಿದಾಸರು ಮಹಿಳೆಯರಿಗಾಗಿಯೇ ಸಂಪ್ರದಾಯದ ಹಾಡುಗಳನ್ನು ರಚಿಸಿದ್ದಾರೆ. ಪ್ರಸನ್ನ ತೀರ್ಥರು ಮತ್ತು ಹೆಜ್ಜಾಜಿ ಶ್ಯಾಮಶರ್ಮರ ಕೆಲವು ಕೀರ್ತನೆಗಳೂ ಕೂಡ ಮಹಿಳೆಯರ ಪೂಜಾ ಪದ್ಧತಿಗಳಿಗೆ ಅನುಗುಣವಾಗಿ ರಚನೆಯಾಗಿವೆ. 'ಕಲ್ಯಾಣ ಗೀತಾವಳಿ' ಎಂಬ ಸಂಪ್ರದಾಯದ ಹಾಡುಗಳ ಸಂಕಲನ ಮೂವತ್ತರ ದಶಕದಲ್ಲೇ ಆರೇಳು ಮುದ್ರಣಗಳನ್ನು ಕಂಡಿತ್ತು. ಇದರಲ್ಲಿನ ಎಲ್ಲ ಕೀರ್ತನೆಗಳೂ ಸಂಪ್ರದಾಯದ ಹಾಡುಗಳೇ.

ಸಂಪ್ರದಾಯದ ಹಾಡುಗಳನ್ನು ಅಧ್ಯಯನದ ದೃಷ್ಟಿಯಿಂದ ಈ ರೀತಿ ವಿಭಾಗಿಸಲಾಗಿದೆ.

- ವ್ರತ ಕಥೆ – ಪೂಜಾ ವಿಧಾನ ಪದ್ಧತಿ
- ಷೋಡಶ ಕರ್ಮಗಳು – ಆ ಸಂದರ್ಭದ ಧಾರ್ಮಿಕ ಸಂಪ್ರದಾಯಗಳು
- ಸ್ಥಳೀಯ ಸಂಪ್ರದಾಯಗಳು
- ಬೀಗರ ಹಾಡುಗಳು

ವ್ರತ ಕಥೆ–ಪೂಜಾ ವಿಧಾನ ಪದ್ಧತಿ:

ವ್ರತವೆಂಬುದು ಧಾರ್ಮಿಕ ಕರ್ಮ. ಇದಕ್ಕೆ ನೋಂಪಿ, ನೋವಿ, ನೋಮಿ ಎಂತಲೂ ಹೆಸರಿದೆ. ವ್ರತಗಳಲ್ಲಿ ಸ್ನಾನ, ಉಪವಾಸ, ಜಾಗರಣೆ, ಪೂಜೆ, ಪ್ರಾರ್ಥನೆಗಳೇ ಮೊದಲಾದ ನಿಯಮಗಳಿರುತ್ತವೆ. ಯಾವುದೇ ವ್ರತಕ್ಕೂ ಅದರದ್ದೇ ಆದ ಪ್ರಶಸ್ತ ಕಾಲ, ವಿಧಿ–ವಿಧಾನಗಳಿವೆ. ಕೆಲವು ವ್ರತಗಳನ್ನು ಅಪೇಕ್ಷಿತ ಫಲಗಳನ್ನು ಪಡೆಯಲು ಮಾಡಿದರೆ ಮತ್ತೆ ಕೆಲವನ್ನು ಭಗವಂತನ ಪ್ರೀತಿಗೋಸ್ಕರ ಮಾಡಲಾಗುತ್ತದೆ.

ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರು ವ್ರತಗಳನ್ನು ಹೀಗೆ ವಿಭಾಗಿಸಿದ್ದಾರೆ.

1. **ನಿತ್ಯ ವ್ರತ:** ಗೌರಿಪೂಜೆ, ತುಳಸೀಪೂಜೆ, ಏಕಾದಶಿ, ಪ್ರದೋಷ, ಕಾರ್ತೀಕ ಸೋಮವಾರ, ಶ್ರಾವಣ ಶನಿವಾರ ಇತ್ಯಾದಿ

2. **ನೈಮಿತ್ತಿಕ ವ್ರತ:** ಯುಗಾದಿ, ಮಹಾಲಯ, ಶಿವರಾತ್ರಿ, ಜಯಂತಿಗಳ ಆಚರಣೆ ಇತ್ಯಾದಿ

3. **ಕಾಮ್ಯ ವ್ರತ:** ನಿಶ್ಚಿತ ಫಲಗಳನ್ನು ಪಡೆಯಲು ನಡೆಸುವ ವ್ರತಗಳು. ಉದಾಹರಣೆಗೆ: ಆಯಸ್ಸು, ಸಂಪತ್ತು, ಸಂತಾನ ಪಡೆಯಲು.

ಹಿಂದಿನ ಕಾಲದಲ್ಲಿ 'ಅಷ್ಟವರ್ಷೇಭವೇತ್ ಕನ್ಯಾ ಲಗ್ನಂ' ಎಂದು ಹೆಣ್ಣು ಮಕ್ಕಳು ವಯಸ್ಸಿಗೆ ಬರುವ ಮೊದಲೇ ವಿವಾಹ ಮಾಡುತ್ತಿದ್ದರು. ಪ್ರಾಪ್ತ ವಯಸ್ಕರಾಗುವವರೆಗೆ ತೌರಿನಲ್ಲೇ ಇರುತ್ತಿದ್ದ ಹೆಣ್ಣು ಮಕ್ಕಳು ತಮ್ಮ ಮುಂದಿನ ಜೀವನಕ್ಕೆ ಅಗತ್ಯವಾದ ಅನೇಕ ವಿಚಾರಗಳನ್ನು ತವರಿನಲ್ಲೇ ಕಲಿಯುತ್ತಿದ್ದರು. ತನ್ನ ಪತಿಯ ಶ್ರೇಯಸ್ಸಿಗಾಗಿ, ಭವಿಷ್ಯದ ಉನ್ನತಿಗಾಗಿ ಅನೇಕ ವ್ರತಗಳನ್ನು ನಡೆಸುತ್ತಿದ್ದರು. "ಮನೆಯ ಹಿರಿಯರು ತಾವು ಪರಂಪರೆಯಾಗಿ ನಡೆಸಿಕೊಂಡು ಬಂದ ನೋಂಪಿಗಳನ್ನು ತಮ್ಮ ಮಕ್ಕಳಿಗೂ ಹೇಳಿ, ಅವರಿಂದಲೂ ಅವುಗಳನ್ನು ಮಾಡಿಸುತ್ತಿದ್ದರು. ಹೆಚ್ಚು ಖರ್ಚು ವೆಚ್ಚಗಳಿಲ್ಲದೆ ಸುಲಭವೂ, ಸರಳವೂ ಆದ ನೋಂಪಿಗಳು ಅವು. ಆ ನೋಂಪಿಗಳು ಮಾಡುವವರಲ್ಲಿ ಜೀವನ ಶ್ರದ್ಧೆಯನ್ನೂ, ಆತ್ಮ ಬಲವನ್ನೂ, ಸದಾಚಾರ, ಸದ್ಗುಣಗಳನ್ನೂ ಬೆಳೆಸುತ್ತಿದ್ದವು."[5] ಗೃಹಿಣೀ ಜೀವನಕ್ಕೆ ಬೇಕಾದ ತಾಳ್ಮೆ, ಸಹನೆ, ಸಹಿಷ್ಣುತೆ, ದೈವಭಕ್ತಿ,

ವಿನಯ-ವಿಧೇಯತೆ, ತ್ಯಾಗಮನೋಭಾವ ಮೈಗೂಡಿಸಿಕೊಳ್ಳಲು ವ್ರತಾದಿಗಳನ್ನು ಆಚರಿಸಲಾಗುತ್ತಿತ್ತು. "ಇಂತಹ ತ್ಯಾಗ ಜೀವನಕ್ಕೆ ಅಡಿಪಾಯವಾಗಿ ಬಾಲ್ಯದಿಂದಲೇ ಅವಳಿಗೆ ತರಬೇತಿ ಕೊಡಲಾಗುತ್ತಿತ್ತು. ಆ ತರಬೇತಿಯ ಕ್ರಮವೇ ನೋಂಪಿ, ವ್ರತ, ದಾನ, ಧರ್ಮ, ಮೊದಲಾದವುಗಳ ಆಚರಣೆ. ತರಬೇತಿ ಇಲ್ಲದೆ ಯಾವ ಕೆಲಸವೂ ಸರಿಯಾಗಿ ನಡೆಯುವುದಿಲ್ಲ. ಹೀಗೆ ಅಭ್ಯಾಸಗಳು ಧಾರ್ಮಿಕ ಹಿನ್ನೆಲೆಯಲ್ಲಿ ನಡೆಯುತ್ತಿದ್ದರಿಂದ ಅವಳ ಕಾಲ ಸದ್ವಿನಿಯೋಗವಾಗುತ್ತಿತ್ತು.[6]

ಸಾಮಾನ್ಯವಾಗಿ ವ್ರತ ಕ್ರಮದಲ್ಲಿ ದಾನ-ಧರ್ಮಗಳು ಬಹುವಾಗಿ ಪ್ರಸ್ತಾಪಿಸಲ್ಪಟ್ಟಿವೆ. ಪುರುಷ ಪ್ರಧಾನ ಸಮಾಜದಲ್ಲಿ ಧನಾರ್ಜನೆ, ಗೃಹ ರಕ್ಷಣೆ ಪುರುಷನದ್ದಾದರೂ, ಮನೆಯ ಸಂಪೂರ್ಣ ಅಧಿಕಾರ ಗೃಹಿಣಿಯದ್ದಾಗಿರುತ್ತದೆ. ಅದನ್ನು ನಿಭಾಯಿಸಲು ಮಾನಸಿಕ ಶಕ್ತಿ ಬೇಕು. ನಿಸ್ವಾರ್ಥವಾಗಿ ಗೃಹಿಣಿಯು ಕರ್ತವ್ಯ ಪಾಲಿಸಿ ಹುಟ್ಟಿದ ಮತ್ತು ಮೆಟ್ಟಿದ ಮನೆಗಳ ಗೌರವ ಕಾಪಾಡಲು ವ್ರತಾದಿಗಳ ಆಚರಣೆ ಸಹಕಾರಿ. ಹೆಣ್ಣಿನ ಸಹಕಾರವಿಲ್ಲದೆ ಪುರುಷ ಏನನ್ನು ಮಾಡಲೂ ಸಾಧ್ಯವಿಲ್ಲ. "ಹೆಂಡತಿಯ ಸಹಕಾರವಿಲ್ಲದೆ ಗಂಡನು ಏನೂ ಮಾಡುವಂತಿಲ್ಲ".[7] ಉದಾಹರಣೆಗೆ ದಾನ, ಧರ್ಮ ಕಾರ್ಯಗಳಿಗೂ ಸಹ ಒಂದು ಉದ್ಧರಣೆ ನೀರು ಹಾಕಿಸಿಕೊಂಡು ಅವಳ ಅನುಮತಿ ಪಡೆಯಬೇಕಾಗುತ್ತದೆ. ಕೇವಲ ಅಂಧಾನುಕರಣೆಯಾಗಲ್ಲದೆ ವ್ರತಗಳು ನೀಡುವ ಭಾವನಾತ್ಮಕ ತೃಪ್ತಿಗಾಗಿ ಮತ್ತು ಅವುಗಳ ಆಂತರಿಕ ಮೌಲ್ಯಗಳಿಗಾಗಿ ಆಧುನಿಕ ಮಹಿಳೆಯರೂ ವ್ರತಾದಿಗಳನ್ನು ಆಚರಿಸುತ್ತಾರೆ.

ಹಿಂದೂ ಗೃಹಿಣಿಯರಿಗೆ ಆದಿ ಶಕ್ತಿಯ ರೂಪಗಳಾದ ಲಕ್ಷ್ಮಿ, ಪಾರ್ವತಿ, ಸರಸ್ವತಿಯರಲ್ಲಿ ಅತೀ ಪ್ರಿಯಳಾದವಳು ಗೌರಿ ದೇವಿ. ಸೌಭಾಗ್ಯ, ಐದೆತನ ಕರುಣಿಸುವ ದೇವಿ ಎಂಬ ಕಾರಣಕ್ಕೆ ಆಕೆಗೆ ಪ್ರಾಶಸ್ತ್ಯ ಹೆಚ್ಚು. "ಹಿಂದೂ ಗೃಹಿಣಿಯರಿಗೆ ಅದರಲ್ಲೂ ಮುಖ್ಯವಾಗಿ ಸ್ಮಾರ್ತ ಹಾಗೂ ಮಾಧ್ವ ಸಂಪ್ರದಾಯದ ಬ್ರಾಹ್ಮಣ ಗೃಹಿಣಿಯರಿಗೆ ಸರ್ವಮಂಗಳೆಯಾದ ಗೌರೀದೇವಿಯ ವ್ರತವು ಅತ್ಯಂತ ಮಹತ್ವವುಳ್ಳದ್ದು. ಗೌರೀದೇವಿಯು ಐದೆತನದ ಸೌಭಾಗ್ಯವನ್ನು ಕರುಣಿಸುವ ದೇವತೆಯೆಂಬ ಶ್ರದ್ಧೆಯೇ ಇದಕ್ಕೆ ಕಾರಣ."[8] ಮಹಿಳೆಯರಿಗೆ ಹೆಚ್ಚು ಆತ್ಮೀಯಳಾದ ಗೌರಿಯನ್ನು ಪ್ರತಿನಿತ್ಯವೂ ಪೂಜಿಸುತ್ತಾರೆ. ಇದಕ್ಕೆ ನಿದರ್ಶನವಾಗಿ ಹಲವಾರು ರೀತಿಯ ಗೌರಿ ವ್ರತಗಳನ್ನು ಆಚರಿಸುವ ಪದ್ಧತಿಯಿದೆ. ಸ್ವರ್ಣಗೌರಿ, ದಿವಸೀಗೌರಿ, ಮಂಗಳಗೌರಿ, ಮೌನಗೌರಿ, ಚೈತ್ರದಗೌರಿ, ಸೀಗೇಗೌರಿ, ಕೇದಾರೇಶ್ವರಿಗೌರಿ, ಅಷ್ಟಮಿಗೌರಿ, ಕಾರ್ತೀಕಗೌರಿ, ಹಿರೇಗೌರಿ, ಮಾಘದಗೌರಿ, ಶನಿವಾರದಗೌರಿ, ಹೀಗೆ ನಾನಾ ಹೆಸರುಗಳಿಂದ ಗೌರಿ ಪೂಜೆ ಮಾಡಲಾಗುತ್ತದೆ.

1. <u>ತದಿಗೆ ಗೌರಿ ವ್ರತ:</u>

ತದಿಗೆ ಗೌರಿ, ಚೈತ್ರದ ಗೌರಿ, ಉಯ್ಯಾಲೆಗೌರಿ, ಸೌಭಾಗ್ಯಗೌರಿ ಎಂದೆಲ್ಲ ಈ ವ್ರತಕ್ಕೆ ಹೇಳಲಾಗುತ್ತದೆ. ಚೈತ್ರ ಮಾಸದ ತದಿಗೆಯಿಂದ ವೈಶಾಖ ಶುದ್ಧ ತದಿಗೆಯವರೆಗೆ ಒಂದು ತಿಂಗಳ ಕಾಲ ನಡೆಯುತ್ತದೆ. ಮದುವೆಯಾದ ಹೆಣ್ಣು ಮಕ್ಕಳು 5 ವರ್ಷ ಈ ವ್ರತವನ್ನು ಆಚರಿಸಬೇಕು. ಉಯ್ಯಾಲೆಗೌರಿಯನ್ನು ಪೂಜಿಸಲು ಚೈತ್ರ ಶುದ್ಧ ತದಿಗೆಯಂದು ಗೌರಿಯನ್ನು ಸ್ಥಾಪಿಸಲಾಗುತ್ತದೆ. ಬಾಳೆಕಂಬ, ತಳಿರು ತೋರಣ ಕಟ್ಟಿದ ಮಂಟಪದಲ್ಲಿ ಉಯ್ಯಾಲೆ ಕಟ್ಟಿ, ಅಲಂಕರಿಸಿ, ಅದರಲ್ಲಿ ಧಾನ್ಯವನ್ನು ಹರವಿ ಕಲಶ ಸ್ಥಾಪಿಸಲಾಗುತ್ತದೆ. ದೊಡ್ಡಿ ಸುಧಾಬಾಯಿ ಮತ್ತು ಕೋಲಾರ ಪದ್ಮಾಬಾಯಿ ಈ ವ್ರತದ ಹಾಡನ್ನು ಬರೆದಿದ್ದಾರೆ.

ಓಕುಳಿ ಕಲಶವ ತುಂಬುತಲಿಡುವೆ ।
ಜೋಕೆಯಿಂದ ದೀವಿಗೆ ಹಚ್ಚಿಡುವೆ ॥
ಪಾಕ ಭಕ್ಷ್ಯ ನೈವೇದ್ಯ ಮಾಡುವೆ ।
ಸ್ವೀಕರಿಸಮ್ಮ ಆರುತಿ ಬೆಳಗುವೆ [9]

ಕಲಶದ ಮುಂದೆ ಅರಿಶಿನದ ಗೌರಿ ಇಟ್ಟು ಮರಳಿನಲ್ಲಿ ಐದು ಕೊಂತಿಗಳನ್ನು ಮಾಡಿ ಸ್ಥಾಪಿಸಿ ಬಳೆ, ಬಿಚ್ಚೋಲೆ, ಕರಿಮಣಿ ಸರ ಇಟ್ಟು ಪೂಜಿಸುತ್ತಾರೆ. ಮುತ್ತೈದೆಯರಿಗೆ ಬಾಗಿನ, ಕಣ, ದಕ್ಷಿಣೆ, ತಾಂಬೂಲ ಕೊಟ್ಟು ಆಶೀರ್ವಾದ ಪಡೆಯುತ್ತಾರೆ.

ತಿಂಗಳು ಮೀರಲು ಅಂಗನೆ ನಿನ್ನಯ ।
ಹೊಂಗಳಶವ ಕೊಂತಿಗಳ ಸಮೇತ
ಮಂಗಳ ಜಲದಿ ವಿಸರ್ಜಿಸಿ ಶ್ರೀಹರಿ ।
ರಂಗ ನಾಗೇಶ ಶಯನಗರ್ಪಿಸುವೆ [10]

ತದಿಗೆ ಗೌರಿ ವ್ರತವನ್ನು ಆಜೀವ ವ್ರತವಾಗಿ ಪರಿಗಣಿಸಿ ಪೂಜಿಸುವುದೂ ಇದೆ. ಇದರ ಜೊತೆಯಲ್ಲಿ ಕಾಲು ತೊಳೆಯುವ ನೋಹಿಯನ್ನೂ ಆಚರಿಸಲಾಗುತ್ತದೆ. ಸಂಜೆ ಮುತ್ತೈದೆಯರನ್ನು ಕರೆದು ಅವರ ಕೈ, ಕಾಲು, ಕೆನ್ನೆಗಳಿಗೆ ಅರಿಶಿನವನ್ನು ತೊಡೆದು ಪಾನಕ, ಕೋಸಂಬರಿ, ತಾಂಬೂಲ, ದಕ್ಷಿಣೆ ನೀಡಿ, ನಮಸ್ಕರಿಸಿ ಆಶೀರ್ವಾದ ಪಡೆಯುವ ಸಂಪ್ರದಾಯವಿದೆ.

2. <u>ದಿವಸೀಗೌರಿ ವ್ರತ:</u>

ದಿವಸೀಗೌರಿಯನ್ನು ಆಷಾಢ ಮಾಸದ ಅಮಾವಾಸ್ಯೆಯಂದು ಆಚರಿಸಲಾಗುತ್ತದೆ. ಇದನ್ನು ದೀಪಸ್ತಂಭ ಗೌರಿ, ಜ್ಯೋತಿರ್ಭಿಮೇಶ್ವರ ವ್ರತ, ಪತಿ ಸಂಜೀವಿನಿ ಎಂಬ ಹೆಸರುಗಳಿಂದಲೂ ಕರೆಯಲಾಗುತ್ತದೆ. ಬಾಲ್ಯದಿಂದಲೇ ಮಾಡುವ ಈ ವ್ರತವನ್ನು ವಿವಾಹವಾದ 9 ವರ್ಷಗಳವರೆಗೆ ಆಚರಿಸಿ ದೀಪದಾನ ಕೊಡಲಾಗುತ್ತದೆ. ಭವಿಷ್ಯೋತ್ತರ ಪುರಾಣದಲ್ಲಿ ಈ ವ್ರತದ ಉಲ್ಲೇಖವಿದೆ. ದಿವಸೀಗೌರಿ ವ್ರತದ ಹಾಡನ್ನು

ಓರವಾಯಿ ಲಕ್ಷ್ಮೀದೇವಮ್ಮ, ದೊಡ್ಡಿ ಸುಧಾಬಾಯಿ, ಕೋಲಾರ ಪದ್ಮಾಬಾಯಿ ಮತ್ತು ಹರಪನಹಳ್ಳಿ ಭೀಮವ್ವ ರಚಿಸಿದ್ದಾರೆ.

ಹಿಂದೆ ಸೌರಾಷ್ಟ್ರವೆಂಬ ದೇಶದಲ್ಲಿ ವಜ್ರಬಾಹುವೆಂಬ ರಾಜನಿದ್ದನು. ಅವನಿಗೆ ಒಬ್ಬ ಧೀರನೂ, ಸುಂದರನೂ, ಸರ್ವಶಾಸ್ತ್ರ ಪರಿಚಿತನೂ ಆದ ಕಾಳಿಂಗನೆಂಬ ಮಗನಿದ್ದನು. ಆ ಮಗನು ವಿಧಿ ನಿಯಮದಂತೆ ಮರಣ ಹೊಂದಿದನು. ಮೃತನಾದ ಮಗನಿಗೆ ವಿವಾಹ ಮಾಡಿ ನಂತರ ಸಂಸ್ಕಾರ ನಡೆಸಲು ಉದ್ದೇಶಿಸಿ

ಮೃತನಾದ ಸುತನಿಗೆ । ಸತಿಯ ಕೊಡಬೇಕೆಂದು ಸಾರಿಸಿದ
ಸತತ ದ್ರವ್ಯಗಳ ಕೊಡುವೆನೆಂದು ಸಾರಿಸಿದ
ಸತತ ದ್ರವ್ಯ ಕೊಡುವೆನೆಂದು ಮಾತನಾಡಿದೆ ದ್ವಿಜಸುತನ
ಸತಿಯ ತ್ಯಜಿಸಿ ಹೋಗಿರಲು ನಿಜಸುತಗೆ ಭಗಿನಿಯ
ಕೊಡುವೆನೆಂದು ನುಡಿದಾನು [11]

ಸತ್ಕರ್ಮ ನಿರತನಾದ ಮಾಧವನೆಂಬ ಬ್ರಾಹ್ಮಣನು ದಾರಿದ್ರ್ಯವಶದಿಂದ ಬಳಲುತ್ತಿರಲು ತನ್ನ ಮಗಳನ್ನು ಮೃತ ರಾಜ ಪುತ್ರನಿಗೆ ನೀಡಲು ಮುಂದಾಗುತ್ತಾನೆ. ನಂತರ ರಾಜ ತನ್ನ ಮಗನನ್ನು ಮತ್ತು ಸೊಸೆಯನ್ನು ಚಿತೆಯ ಮೇಲಿರಿಸಿ ಅಷ್ಟರಲ್ಲಿ ಸಾಯಂಕಾಲವಾಗಲು ಮನೆಗೆ ಹಿಂತಿರುಗುತ್ತಾನೆ. ಸೊಸೆಯನ್ನು ಮನೆಗೆ ಬಾರೆಂದರೆ, ಪತಿಯನ್ನು ಬಿಟ್ಟು ಬಂದರೆ ಪಾತಿವ್ರತ್ಯವು ಇರುವುದಿಲ್ಲವೆಂದು ಹೇಳಿ ಅಲ್ಲೇ ಉಳಿಯುತ್ತಾಳೆ. ಗೂಬೆಗಳ ಕೂಗು, ದುಷ್ಟ ಶಕ್ತಿಗಳ ಹಾವಳಿಯಿಂದ ಹೆದರಿ ಆ ಬಾಲೆಯು ಭಗವಂತನ ಮೊರೆ ಹೋಗುತ್ತಾಳೆ. ಮರುದಿನ ಆ ಪುರದ ಬಾಲಕಿಯರು ಮಾಡುತ್ತಿದ್ದ ವ್ರತವನ್ನು ಅರಿತು ದಿವಸಿ ಗೌರಿ ವ್ರತವನ್ನು ಆಚರಿಸುತ್ತಾಳೆ.

ನಾರುಬತ್ತಿ ನೀರು ಎಣ್ಣೆ ಗೌರಿಗೆ ಮಾಡಿದಳು
ಅಪಾರ ಸದಿಗೆ ಮುರಿದು ಗೌರಿ ಪೂಜಿಸಿದಳು
ಹರ ತಾ ಭಂಡಾರ ಒಡೆದು ಹರುಷಗರೆದನು
ವರ ಕಾಳಿಂಗ ಕ್ಷಣದೊಳು ಎದ್ದು ಮಾತನಾಡಿದನು
ಪತಿಯ ಸಹಿತಾಗಿ ತಮ್ಮ ಗೃಹಕೆ ಬಂದರು
ಸತತ ನಾರಸಿಂಹನ ಸ್ಮರಣೆ ಮಾಡಿದರು [12]

ದಿವಸೀ ವ್ರತ ಆಚರಿಸುವುದರ ಮೂಲಕ ತನ್ನ ಪತಿಯನ್ನು ಬದುಕಿಸಿಕೊಂಡ ಬಾಲೆಯ ಕಥೆಯು ಹಾಡಿನಲ್ಲಿ ವಿವರಿಸಲ್ಪಟ್ಟಿದೆ. ಆ ವ್ರತವನ್ನು ಮಾಡುವ ವಿಧಾನವನ್ನು ಈ ರೀತಿ ಹೇಳಲಾಗಿದೆ.

ಮಣ್ಣಿನವೆರಡು । ಸಣ್ಣ ದೀವಿಗೆ ಮಾಡಿ ।
ಸುಣ್ಣದ ಚುಕ್ಕೆ । ಅರಿಶಿನ ಕೋಲೆ ॥
ಬಣ್ಣದ ಅರಿಶಿನ । ಬೇರು ಕುಂಕುಮವಿಟ್ಟು ।
ಪುನ್ನಾಗ ಪಾದರಿ । ಅರ್ಪಿಸು ಕೋಲೆ ॥
ಶಂಕರನರ್ಧಾಂಗಿ । ಶಂಕರಿ ದೇವಿಯ ।
ಕಂಕಣ ಸೂತ್ರವ । ಕಟ್ಟಿಕೊ ಕೋಲೆ ।
ಕಂಕಣ ಸೂತ್ರದ ಕೈಯಿಂದ ಗೌರಿಗೆ ।
ಶಂಕೆ ಇಲ್ಲದೆ ಜ್ಯೋತಿ ಬೆಳಗಮ್ಮ [13]

3. <u>ಮಂಗಳ ಗೌರಿ:</u>

ಮಂಗಳ ಗೌರಿ ವ್ರತದ ಉಲ್ಲೇಖವು ಭವಿಷ್ಯೋತ್ತರ ಪುರಾಣದಲ್ಲಿದೆ. ಶ್ರಾವಣ ಮಾಸದ ಮಂಗಳವಾರಗಳಂದು ವಿವಾಹಿತ ಸ್ತ್ರೀಯರು ಐದು ವರ್ಷ ಈ ವ್ರತವನ್ನು ಆಚರಿಸಬೇಕು. ಪತಿಗೆ ದೀರ್ಘಾಯಸ್ಸು ಉಂಟಾಗಲೆಂದು ಮಾಡುವ ವ್ರತವಿದು. ಶ್ರೀಕೃಷ್ಣನು ಧರ್ಮರಾಯನಿಗೆ ಈ ವ್ರತವನ್ನು ಹೇಳಿದನೆಂಬ ಪ್ರತೀತಿಯಿದೆ. ಸುವರ್ಣಾವತಿಯೆಂಬ ಪಟ್ಟಣದ ದೊರೆ ಶ್ರೀಪಾದನ ಪತ್ನಿ ಕನಕಮಂಜುಳೆ. ಧರ್ಮಿಷ್ಠನಾದ ರಾಜನಿಗೆ ಮಕ್ಕಳಿರಲಿಲ್ಲ. ಒಮ್ಮೆ ಪರಮೇಶ್ವರನು ತಿರುಕನ ವೇಷದಲ್ಲಿ ಭಿಕ್ಷಕ್ಕೆ ಬರುವನು. ಮಂಜುಳೆಯ ಭಿಕ್ಷೆಯನ್ನು ತಾನು ಸ್ವೀಕರಿಸದೆ ಈಶಾನ್ಯ ಮೂಲೆಯಲ್ಲಿ ಚೆಲ್ಲಿ ಹೊರಟು ಹೋಗುತ್ತಾನೆ. ಮರುದಿನ ಬಂದಾಗ ಕಾರಣ ಕೇಳಲು ಮಕ್ಕಳಿಲ್ಲದವರ ಭಿಕ್ಷೆ ಬೇಡವೆಂದ ಹರನ ಚರಣಕ್ಕೆ ಬಿದ್ದು ಹದಿನಾರು ವರುಷದ ಮಗನನ್ನು ವರ ಪಡೆಯುತ್ತಾರೆ.

ಜಾತವಾಗಲು ನಾಮಕರಣ ಮಾಡುತ ಚಂದ್ರಶೇಖರ–
ನೆಂದ್ಹೆಸರಿಡುತ ಜಾವಳ ಜುಟ್ಟು
ಪ್ರೀತಿಂದುಪನಯನ ಮಾಡುತ ವಿದ್ಯೆಗಳ ಕಲಿಸುತ
ಆತಘದಿನಾರ್‍ವರುಷ ಬರುತಿರೆ
ಮಾತುಳನ ಕರೆತಂದು ಬ್ಯಾಗನೆ
ಪ್ರೀತಿಯಿಂದ್ಹಣಕೊಟ್ಟು ಕಾಶಿಯಾತ್ರೆಗೆನುತಲಿ ಕಳುಹೆ ಬ್ಯಾಗನೆ [14]

ಕನಕಮಂಜುಳೆಯ ಮಗನಿಗೆ ನಡೆಸಿದ ಜಾತಕರ್ಮ, ನಾಮಕರಣ, ಜಾವಳ, ಜುಟ್ಟು ಬಿಡಿಸಿದ್ದು ಮತ್ತು ಉಪನಯನಗಳ ವಿವರ ಕವಯತ್ರಿ ನೀಡಿದ್ದಾರೆ. ಕಾಶೀಯಾತ್ರೆಗೆ ಮಾವನ ಜೊತೆಯಲ್ಲಿ ಹೊರಟ ಚಂದ್ರಶೇಖರನು ಮಂಡೋರಾಯನ ಪುರದ ರಾಜನ ಉದ್ಯಾನವನದ ಬಳಿ ಬರುತ್ತಾನೆ. ಅಲ್ಲಿ ರಾಜಕುಮಾರಿ ಮತ್ತು ಅವಳ ಗೆಳತಿಯರು ಹೂವು ಕೊಯ್ಯುವಾಗ ಒಬ್ಬಳು ಕೆಟ್ಟ ಮಾತನ್ನು ಆಡಿದಾಗ

ಒಂದಕ್ಕೊಂದು ಮಾತಾಡೆ ರಾಜ
ನಂದನೆಯು ತಾ ನೊಂದು ಕೊಳ್ಳದೆ
ನಂದಿವಾಹನನರಸಿ ದಯವಿರಲೆಂದು ನಡೆದಳು ಮಂದಿರಕೆ [15]

ಮಂಗಳಗೌರಿಯ ದಯದಿಂದ ಬಂದ ವಿಪತ್ತುಗಳನ್ನು ಜಯಿಸುವೆನೆಂದ ರಾಜಕುಮಾರಿಯ ಮಾತನ್ನು ಕೇಳಿ ಮೆಚ್ಚಿ ಅವಳನ್ನು ವಿವಾಹವಾಗುತ್ತಾನೆ. ಧಾರೆ, ಮಂಗಳ ಸೂತ್ರ ಬಂಧನ, ಲಾಜಹೋಮ, ಭೂಮವೇ ಮೊದಲಾದ ಮದುವೆಗೆ ಸಂಬಂಧಿಸಿದ ವಿಧಿ ವಿಧಾನಗಳನ್ನು ಈ ಹಾಡಿನಲ್ಲಿ ಹೇಳಲಾಗಿದೆ. ಅಂದಿನಿರುಳು ಸತಿಪತಿಯರು ಆನಂದದಿಂದಿರುವಾಗ ಚಂದ್ರಶೇಖರ ಹಸಿವೆ ಎಂದಾಗ ಲಡ್ಡಿಗೆ ತುಪ್ಪವನ್ನು ಬಟ್ಟಲಲ್ಲಿ ತಂದು ಕೊಡುತ್ತಾಳೆ. ಆ ಬಟ್ಟಲಿನಲ್ಲಿ ಚಂದ್ರಶೇಖರ ತನ್ನ ಮುದ್ರೆಯುಂಗುರ ಹಾಕುವನು. ಆಗ ಪಾರ್ವತಿ ದೇವಿ ಬಂದು:

ಖದ್ರುದೇವಿಸುತ ಬರುವನೆಂದ್ಹೇಳಿ ಕಳಸವ
ಅತಿ ಬ್ಯಾಗದಿ ತುಂಬಿಟ್ಟಳುರಗವ [16]

ಅತ್ತ ಕಾಶಿಗೆ ಅಳಿಯ ಮಾವಂದಿರು ಹೋದಾಗ ಈ ವಿಷಯಗಳನ್ನರಿಯದ ರಾಜ ಬೆಳಗಾದ ನಂತರ ಕುಷ್ಟಿಯನ್ನು ಕರೆತಂದು ಹಸೆಗೆ ಬರಲು ಮಗಳನ್ನು ಕರೆಯುವನು. ರಾಜಕುಮಾರಿ ಬಂದು ಆತ ತನ್ನ ಪತಿಯಲ್ಲವೆಂದು ಹೇಳಿ ಹೆತ್ತ ಜನಕನಿಗೆ ಅನ್ನ ಕ್ಷೇತ್ರವ ಇಟ್ಟು ನಿತ್ಯ ಸಂತರ್ಪಣೆ ನಡೆಸಲು ಕೋರುತ್ತಾಳೆ. ಕಾಶಿಯಿಂದ ಹಿಂತಿರುಗಿ ಬಂದ ಚಂದ್ರಶೇಖರ ಮತ್ತವನ ಮಾವನು ಅನ್ನ ಛತ್ರದಲ್ಲಿ ಭೋಜನಕ್ಕೆ ಕುಳಿತಿದ್ದಾಗ ಗುರುತು ಹಿಡಿದ ರಾಜಕುಮಾರಿ ಆತನೇ ತನ್ನ ಪತಿ ಎನ್ನುತ್ತಾಳೆ. ಸಾಕ್ಷಿ ಕೇಳಲು ಮುದ್ರಿಕೆ ತಂದು ತೋರಿಸುತ್ತಾಳೆ. ಕಲಶದಲ್ಲಿ ತುಂಬಿದ್ದ ಹಾವು ಮುತ್ತಿನಹಾರವಾಗಿರಲು ಅದನ್ನು ಅವಳ ಕೊರಳಿಗೆ ಹಾಕಿ ಹರಸುತ್ತಾರೆ. ರಾಜ ಮಗಳು ಅಳಿಯನಿಗೆ ನಾನಾ ವಿಧದ ಉಪಚಾರಗಳನ್ನು ಮಾಡಿ ಚಂದ್ರಶೇಖರನ ರಾಜ್ಯಕ್ಕೆ ಸಕಲ ಮರ್ಯಾದೆಗಳೊಂದಿಗೆ ಕಳುಹಿಸುತ್ತಾನೆ. ಸೊಸೆಯ ಸಹಿತ ಬದುಕಿ ಬಂದ ಮಗನನ್ನು ಕಂಡು ಕನಕಮಂಜುಳೆ ಸಂತಸದಿಂದ ಮಗನನ್ನು ಬಿಗಿದಪ್ಪಿ ಕೇಳುತ್ತಾಳೆ.

ದಾವ ಪುಣ್ಯದ ಫಲದಿಂದ ನಿನ್ನರಸನ ಪ್ರಾಣ ಪಡೆದಿಯೆನಲು
ಮಂಗಳಗೌರಿ ದೇವಿ
ದಯವಿರಲೆಂದು ಹೇಳಲು ಶ್ರೀಗೌರಿ ಕಥೆಯನು
ಕಾಮಿತವನದೊಳಗೆ ದ್ರೌಪದಿಗ್ಹೇಳಿದನು
ಭೀಮೇಶಕೃಷ್ಣನು ಮಾಡಿದರೆ ಮುತ್ತೈದೆತನಗಳ
ಬೇಡಿದಿಷ್ಟಾರ್ಥಗಳ ಕೊಡುವೋಳು [17]

ಮುತ್ತೈದೆತನ, ಪುತ್ರ ಸಂತಾನ ಪ್ರಾಪ್ತಿ, ಸೌಭಾಗ್ಯ ಸಿದ್ಧಿಗಳೇ ಈ ವ್ರತದ ಉದ್ದೇಶಿತ ಫಲಗಳು. ಭಗವಂತನ ಕರುಣೆ, ಪ್ರಸಾದಗಳಿಂದ ಮಾತ್ರವೇ ಅವು ದೊರೆಯುವುದೆಂದು ದೃಢವಾದ ನಂಬಿಕೆ ಇಲ್ಲಿದೆ. ಭೀಮವ್ವ ವರ್ಣಿಸಿರುವ ಭಕ್ಷ್ಯ ಭೋಜ್ಯಗಳಂತೂ ಎಂಥವರ ಬಾಯಲ್ಲೂ ನೀರೂರಿಸುವಂತಿದೆ. ಮುತ್ತಿನ ಹರಿವಾಣದಲ್ಲಿ ಮಾಲತಿ, ಗೌಲಿ, ಅಪ್ಪುಗುಳ್ಳ, ಶ್ಯಾವಿಗೆ, ಪರಡಿಪಾಯಸ, ಎಣ್ಣೋರಿಗೆ, ಬೀಸೋರಿಗೆ, ಗುಳ್ಳೋರಿಗೆ, ಮಂಡಿಗೆ, ಚೂರ್ಮಲಾಡು, ಚಕ್ಕುಲಿ, ಕರ್ಜಿಕಾಯಿ, ದಧ್ಯನ್ನ, ಆಂಬೊಡೆ, ಸೀಕರ್ಣಿ, ಸಾರು, ಸಾಂಬಾರು ಎಲ್ಲವನ್ನೂ ಅಂದವಾಗಿ ಬಿಡಿಸಿ ಮಂಗಳಗೌರಿಯ ನೈವೇದ್ಯಕ್ಕೆ ಇರಿಸುವರು. ಹುಟ್ಟಿದ ಮಕ್ಕಳಿಗೆ ಮಾಡುವ ಜಾತಕರ್ಮವೇ ಮೊದಲಾದ ಕರ್ಮಗಳೂ ಈ ಹಾಡಿನಲ್ಲಿ ದಾಖಲಾಗಿವೆ. ಓರವಾಯಿ ಲಕ್ಷ್ಮೀದೇವಮ್ಮ, ಹರಪನಹಳ್ಳಿ ಭೀಮವ್ವ, ಕೋಲಾರ ಪದ್ಮಾಬಾಯಿ, ದೊಡ್ಡಿ ಸುಧಾಬಾಯಿ ಈ ವ್ರತದ ಹಾಡನ್ನು ಬೇರೆ ಬೇರೆ ಮಟ್ಟುಗಳಲ್ಲಿ ರಚಿಸಿದ್ದಾರೆ.

4. ಸ್ವರ್ಣಗೌರಿ ವ್ರತ:

ಸ್ವರ್ಣಗೌರಿ ವ್ರತದ ಉಲ್ಲೇಖವು ಸ್ಕಾಂದ ಪುರಾಣದಲ್ಲಿದೆ. ಈಶ್ವರನು ಸ್ಕಂದನಿಗೆ ಈ ಕಥೆಯನ್ನು ಹೇಳಿದನೆಂದು ತಿಳಿದುಬರುತ್ತದೆ. ಗೌರಿಯು ತೌರಿಗೆ ಬಂದ ವರ್ಣನೆ ಈ ವ್ರತಕಥೆಯಲ್ಲಿದೆ. ಹೆಣ್ಣು ಮಕ್ಕಳು ತವರಿಗೆ ಬಂದಾಗ ಕಾಣುವ ಸಂಭ್ರಮ ಮತ್ತೆ ಗಂಡನ ಮನೆಗೆ ಹೋಗುವಾಗ ಉಡಿ ತುಂಬುವ, ಬುತ್ತಿ ಕಟ್ಟಿ ಕೊಡುವ ಹಾಗೆ ಗೌರಿಯನ್ನೂ ಸ್ಥಾಪಿಸಿ ಪೂಜಿಸಿ ಕಳುಹಿಸಿಕೊಡಲಾಗುತ್ತದೆ. ಓರಬಾಯಿ ಲಕ್ಷ್ಮೀದೇವಮ್ಮ, ಕೋಲಾರ ಪದ್ಮಾಬಾಯಿ, ದೊಡ್ಡಿ ಸುಧಾಬಾಯಿ ಈ ವ್ರತದ ಕಥೆ ಹಾಡನ್ನು ರಚಿಸಿದ್ದಾರೆ. ಸರಸ್ವತೀ ನದೀ ತೀರದ ವಿಮಲಾಖ್ಯ ಪಟ್ಟಣದ ದೊರೆ ಚಂದ್ರಪ್ರಭ. ದೊರೆಯು ಸದಾ ಕಾಲ ಹಿರಿಯ ಪತ್ನಿಯ ಬಳಿಯೇ ಇರುತ್ತ ಕಿರಿಯವಳನ್ನು ಮರೆತಿದ್ದ. ಒಮ್ಮೆ ರಾಜನು ಬೇಟೆಯಾಡಲು ಹೋದಾಗ ಅಲ್ಲಿ ಒಂದು ಸುಂದರವಾದ ಸರೋವರವನ್ನು ಕಾಣುತ್ತಾನೆ. ಆ ಸರೋವರದ ತೀರದಲ್ಲಿ ಅಪ್ಸರ ಸ್ತ್ರೀಯರು ವ್ರತವನ್ನು ಮಾಡುತ್ತ ಇರುವುದನ್ನು ನೋಡಿ ಆ ವ್ರತದ ವಿವರಗಳನ್ನು ತಿಳಿಸಲು ಕೋರುತ್ತಾನೆ. ತಾನೂ ಆ ವ್ರತವನ್ನು ನೇಮದಿಂದ ಮಾಡುವುದಾಗಿ ಹೇಳಿದ ರಾಜನ ಮಾತುಗಳನ್ನು ಕೇಳಿ

> ಕನ್ನೀಕೆಯರು ಮನ್ನಿಸಿ ರಾಜನಿಗೆ
> ಸ್ವರ್ಣಗೌರೀ ವ್ರತವನು ಪೇಳಿದರು
> ನಿರ್ಮಲ ಚಿತ್ತದಲಿ ಪೂಜೆಯ ಮಾಡಿ
> ಸ್ವರ್ಣಗೌರೀ ದಾರ ಕೊಟ್ಟರಾಗ [18]

ಸಂತಸಗೊಂಡ ರಾಜನು ಅರಮನೆಗೆ ಬಂದನು. ಅವನ ಕೈಗೆ ಕಟ್ಟಿದ್ದ ದಾರವನ್ನು ನೋಡಿ ಸಿಟ್ಟಾದ ಹಿರಿಯ ರಾಣಿ

ಥಟ್ಟನೆ ಹರದು ಸುಟ್ಟುಬಿಡುವೆನೆಂದು । ಥಟ್ಟನೆ
ಗಿಡದ ಮ್ಯಾಲೊಗೆದಳು [19]

ಒಣಗಿ ನಿಂತಿದ್ದ ಗಿಡವು ದಾರದ ಪ್ರಭಾವದಿಂದ ಮತ್ತೆ ಚಿಗುರಿತು. ಕಿರಿಯ ರಾಣಿ ಆ ದಾರವನ್ನು ಭಕ್ತಿಯಿಂದ ತೆಗೆದುಕೊಂಡು ವ್ರತವನ್ನು ಮಾಡಿದಳು. ರಾಜನಿಗೆ ದೊಡ್ಡವಳ ಮೇಲೆ ಕೋಪ ಬಂದು ಅವಳನ್ನು ತ್ಯಜಿಸಿ ಚಿಕ್ಕವಳ ಬಳಿ ಬರುತ್ತಾನೆ. ಅಡವಿ ಸೇರಿದ ಹಿರಿಯ ರಾಣಿ ಹಗಲು, ಇರುಳು ತಿಳಿಯದೆ ಚಿತ್ತಭ್ರಮಣೆಯಾದವಳಂತೆ ಅಲೆಯುತ್ತ ಬಂದು ಋಷಿಗಳನ್ನು ಕಂಡು ಸಹಾಯ ಬೇಡಿದಾಗ ಅವರೂ ಅವಳನ್ನು ತಿರಸ್ಕರಿಸುತ್ತಾರೆ.

ತೋಳವೆರಡು ಕಂಡಳು ಕೋಮಲಾಂಗಿ
ತಾನು ಕಳವಳಗೊಳ್ಳುತ್ತಾ
ಅಡವಿ ಗಜ, ಸಿಂಹ, ವ್ಯಾಘ್ರಗಳನೆ ನೋಡುತ್ತ ।
ಗಡಗಡ ನಡುಗಿದಳು ಮನದೊಳಗೆ [20]

ಕಂಡಲ್ಲಿ ತಿರುಗುತ್ತ, ಕಳವಳಗೊಳ್ಳುತ್ತ, ಹಸಿವೆ, ಬಾಯಾರಿಕೆಗಳಿಂದ ತತ್ತರಿಸಿದ ರಾಣಿಯು ಒಬ್ಬ ನಾಗಕನ್ನಿಕೆಯು ಗೌರಿ ವ್ರತ ಮಾಡುವುದನ್ನು ನೋಡುತ್ತಾಳೆ. ಆಗ ಪತಿಯ ದಾರಕ್ಕೆ ಮಾಡಿದ ಅವಮಾನ ನೆನಪಾಗಿ ಅದರಿಂದಲೇ ಈ ಗತಿ ಆಯಿತೆಂದು ತಿಳಿದು ಗೌರಿಯನ್ನು ಕುರಿತು ತಪಸ್ಸು ಮಾಡುತ್ತಾಳೆ.

ಸ್ವರ್ಣ ಗೌರೀದೇವಿ ಕರುಣಿಸಿ ಎನ್ನನು ಕಾಪಾಡೆ ನೀ ಹರಿಣಾಕ್ಷಿ
ದಾರಕ್ಕೆ ಮಾಡಿದ ಅಪರಾಧಗಳ ಮನ್ನಿಸೆ ಚರಣದಲಿ ಬಿದ್ದು ಬೇಡಿದಳು [21]

ಅವಳ ತಪಕ್ಕೆ ಮೆಚ್ಚಿ ಗೌರಿ ಪ್ರತ್ಯಕ್ಷಳಾಗಿ ವರ ನೀಡುತ್ತಾಳೆ. ರಾಣಿಯು ತನ್ನ ರಾಜ್ಯಕ್ಕೆ ಬರುತ್ತಾಳೆ. ಹತ್ತಾರು ವರ್ಷಗಳು ಇಬ್ಬರು ರಾಣಿಯರೂ ಗೌರೀ ಪೂಜೆ ಮಾಡಿ ದಾರ ಕಟ್ಟಿಕೊಂಡು ವಿಪ್ರರಿಗೆ ಭೋಜನ ಮಾಡಿಸಿ ದಕ್ಷಿಣೆ ನೀಡಿ ಅಕ್ಷಯ ಫಲಗಳನ್ನು ಹೊಂದುತ್ತಾರೆ. ಈ ವ್ರತ ಮಾಡಿದರೆ ಬರುವ ಫಲ

ಸ್ವರ್ಣಗೌರಿಯ ಪೂಜೆ । ಮಾನವರು ಮಾಡಿದರೆ
ಧನ್ಯರಾಗುವರು ಜಗದೊಳಗೆ ।
ಘನ್ನಮಹಿಮಳು ಅವರ ಮನೆಯೊಳಿದ್ದು
ಉನ್ನತ ಐಶ್ವರ್ಯ ಕೊಡುತಿಹಳು [22]

ಭಾದ್ರಪದ ಶುದ್ಧ ತದಿಗೆಯಂದು ಸ್ವರ್ಣ ಗೌರಿಯನ್ನು ಪೂಜಿಸಿ ಆ ದಿನ ಕಟ್ಟಿಕೊಳ್ಳುವ ದಾರಕ್ಕೆ ಬಹಳ ಮಹತ್ವವಿದೆ. ದೈವವನ್ನು ನಿಂದಿಸುವವರಿಗೆ ಶಿಕ್ಷೆಯೂ ಭಕ್ತಿಯಿಂದ ಪೂಜಿಸುವವರಿಗೆ ರಕ್ಷೆಯೂ ದೊರಕುವುದೆಂಬ ಭಾವ ಇಲ್ಲಿ ವ್ಯಕ್ತವಾಗಿದೆ.

5. <u>ಸಂಪತ್ತು ಶುಕ್ರವಾರದ ಗೌರಿ ಕಥೆ:</u>

ಶ್ರಾವಣ ಮಾಸದ ಎಲ್ಲ ಶುಕ್ರವಾರಗಳು ಸಂಪತ್ತು ಶುಕ್ರವಾರಗಳೆನಿಸುತ್ತವೆ. ಶುಕ್ರವಾರವು ಲಕ್ಷ್ಮೀದೇವಿಗೆ ಪ್ರಶಸ್ತವಾದುದು. ಭೀಮವ್ವನವರು ಸಂಪತ್ತು ಶುಕ್ರವಾರದ ವ್ರತ ಮತ್ತು ಹಾಡನ್ನು ತಿಳಿಸಿದ್ದಾರೆ. ಈ ವ್ರತದ ಉದ್ದೇಶ ಸೌಮಾಂಗಲ್ಯ ಪ್ರಾಪ್ತಿ ಮತ್ತು ಗಂಡು ಮಕ್ಕಳ ಆಯುಷ್ಯ ವರ್ಧನೆ. ಈ ಕಥೆಯಲ್ಲಿ ಒಬ್ಬ ರಾಣಿ ಬಂಜೆಯಾಗಿರುತ್ತಾಳೆ. ತನ್ನ ಗಂಡ ಇನ್ನೊಂದು ಮದುವೆ ಮಾಡಿಕೊಳ್ಳುವುದನ್ನು ತಪ್ಪಿಸಲು ತಾನು ಬಸುರಿಯೆಂದು ನಟಿಸುತ್ತಾಳೆ. ಹರಪನಹಳ್ಳಿ ಭೀಮವ್ವ, ದೊಡ್ಡಿ ಸುಧಾಬಾಯಿ ಈ ಹಾಡನ್ನು ರಚಿಸಿದ್ದಾರೆ.

ಮೂರು ತಿಂಗಳಿಗೆ ರಾಜನರಸಿಗೆ ಮೊಗ್ಗೆಯ ।
ಏಳು ತಿಂಗಳಿಗೆ ಹೂವ್ವ ಮುಡಿಸಿ
ಎಂಟು ತಿಂಗಳಿಗೆ ಸೀಮಂತಾದ್ಯುತ್ಸವವ ಮಾಡೆ
ಬಂತಾಗ ನವಮಾಸಗಳು [23]

ಒಂಬತ್ತು ತಿಂಗಳ ನಂತರ ಸೂಲಗಿತ್ತಿಯ ಸಹಾಯದಿಂದ ಬಡ ಬ್ರಾಹ್ಮಣನ ಹೆಂಡತಿ ಹೆತ್ತ ಮಗುವನ್ನು ತರಿಸಿ ತನ್ನ ಮಗುವೆಂದು ಪ್ರಕಟಿಸುತ್ತಾಳೆ. ರಾಜ ಆ ಮಗುವಿಗೆ ಜಾತಕ ಬರೆಸಿ ಬ್ರಾಹ್ಮಣರನ್ನು ದಾನಗಳಿಂದ ಸಂತೋಷಗೊಳಿಸುತ್ತಾನೆ.

ನಾಮಕರಣ ಜಾವಳ ಜುಟ್ಟು ಉಪನಯನ
ಪ್ರೇಮದಿಂದ್ವಿದ್ಯವ ಕಲಿಸಿ
ಸೋಮನಂದದಿ ಹೊರಗ್ಹೊರಟು ತ-
ಮ್ಮಮ್ಮನ ನೋಡಿ ಮೋಹಿಸಿದನಾ ಕ್ಷಣದಿ [24]

ಈ ಮಗು ದೊಡ್ಡವನಾಗಿ ಬೀದಿಯಲ್ಲಿ ಹೋಗುವಾಗ ತನ್ನ ಹೆತ್ತ ತಾಯಿಯನ್ನು ಕಂಡು ಮೋಹಪರವಶನಾಗುತ್ತಾನೆ. ಅರಮನೆಗೆ ಬರುವಾಗ ಕರುವನ್ನು ಎಡವುತ್ತಾನೆ. ಆ ಕರು ತನ್ನ ತಾಯಿಯ ಬಳಿ ದೂರು ಹೇಳಿದಾಗ ತನ್ನ ತಾಯಿಯನ್ನೇ ಅರಿಯದವ ತಮ್ಮನ್ನು ಹೇಗೆ ಅರಿಯುತ್ತಾನೆಂದು ಹಸು ಸಂತೈಸುತ್ತದೆ. ತನ್ನ ಹಿರಿಯರನ್ನು, ತಂದೆ-ತಾಯಿಯರ ಬಗ್ಗೆ ವಿಚಾರಿಸುತ್ತಾನೆ. ಆಗ ಅವರ ಸಲಹೆಯಂತೆ ಪ್ರಯಾಗಕ್ಕೆ ಹೋಗಿ ಅಲ್ಲಿ ಭಾಗೀರಥೀ ಸ್ನಾನ ಮಾಡುವಾಗ ನಾಲ್ಕು ಹಸ್ತಗಳನ್ನು ಕಾಣುತ್ತಾನೆ. ಹೆತ್ತವರು, ಸಾಕಿದವರು ಇರುವರೆಂಬ ವಿಚಾರ ತಿಳಿದುಬರುತ್ತದೆ. ಗಂಗಾ ಸ್ನಾನ ಮಾಡಿ ಬಂದ ರಾಜ ಪುತ್ರ

ಬ್ರಾಹ್ಮಣರಿಗೆ ಸಂತರ್ಪಣೆ ಏರ್ಪಡಿಸುತ್ತಾನೆ. ಒಂದು ಮನೆಯ ಬ್ರಾಹ್ಮಣ ಮುತ್ತೈದೆಯರು ಬಂದಿರುವುದಿಲ್ಲ. ಆಕೆಗೆ ಹೇಳಿ ಕಳಿಸಲು ಶುಕ್ರವಾರದ ಶ್ರೀಗೌರಿವ್ರತವನ್ನು ಪೂರೈಸಿ ರಾಜನರಮನೆಗೆ ಬರುತ್ತಾಳೆ. ಹಸಿರು ಬಳೆ ತೊಡದ ಬಾಳೆಯೆಲೆಯಲ್ಲಿ ಉಣ್ಣದ ನೇಮ ನಡೆಸುತ್ತಾಳೆ.

ತನ್ನ ಹೆತ್ತವರನ್ನು ಹುಡುಕಿದ ರಾಜಕುಮಾರ ಅವರನ್ನೂ ಅರಮನೆಗೆ ಕರೆತರುತ್ತಾನೆ. ನಂತರ ರಾಜಕುಮಾರನ ವಿವಾಹವಾಗಿ ಶ್ರೀಗೌರಿಯ ಪೂಜೆ ಮಾಡುತ್ತಾ ಸುಖದಿಂದಿದ್ದರು. ಈ ವ್ರತ ಮಾಡಿದರ ಬರುವ ಫಲವನ್ನು ಹಾಡಿನಲ್ಲಿ ತಿಳಿಸಲಾಗಿದೆ.

ಬಿತ್ತಿದ ಬೆಳೆರಾಸಿ ಒಕ್ಕುವ ಧಾನ್ಯವು
ಉಕ್ಕುವ ಕ್ಷೀರದಂದದಲಿ
ಲೆಕ್ಕವಿಲ್ಲದೆ ಮಕ್ಕಳಾಗೋರು ಮನೆ ತುಂಬ
ಮುತ್ತೈದೆತನವ ನೀಡುವಳು [25]

6. <u>ಐದು ಶುಕ್ರವಾರದ ಹಾಡು:</u>

ಶ್ರಾವಣ ಮಾಸದ ಶುಕ್ರವಾರಗಳಂದು ಶ್ರೀಮಹಾಲಕ್ಷ್ಮಿಯನ್ನು ಪೂಜಿಸುವ ಆ ಮೂಲಕ ಸಂಪತ್ತು, ಸೌಭಾಗ್ಯ ಪಡೆಯುವ ವ್ರತವಿದು. ಹರಪನಹಳ್ಳಿ ಭೀಮವ್ವ ಈ ಕೃತಿ ರಚಿಸಿದ್ದಾರೆ. ಒಂದು ಪಟ್ಟಣದಲ್ಲಿ ಒಬ್ಬ ಬಡ ಬ್ರಾಹ್ಮಣನಿದ್ದ. ಹೆಂಡತಿ ಮಕ್ಕಳೊಂದಿಗೆ, ಸೊಸೆಯರು, ಮೊಮ್ಮಕ್ಕಳೊಂದಿಗೆ ದೊಡ್ಡ ಕುಟುಂಬದಲ್ಲಿ ಅಶನವಸನಕ್ಕಿಲ್ಲದೆ ಬನ್ನಬಡುತ್ತಿದ್ದನು. ಒಮ್ಮೆ ಆ ಬ್ರಾಹ್ಮಣ ಗೋಪಾಳಕ್ಕೆ ಹೋದಾಗ ಆ ಮನೆಯಲ್ಲಿ

ಒಂದು ದಿನ ಮಂದಿರದಲ್ಲಿ । ಚಂದಾದಿ ಸುಣ್ಣ
ಸಾರಣೆಯೂ ॥ ರಂಗವಾಲಿಯ ಚಿತ್ರ ಬಣ್ಣ ಕರಣ ಮಾಡಿ ।
ಮುಂದೆ ತೋರಣವ ಕಟ್ಟುತಿಹರು [26]

ಇದನ್ನು ಕಂಡ ಬ್ರಾಹ್ಮಣನು ಅಂದೇನು ವಿಶೇಷವೆಂದು ಕೇಳಲು ಶ್ರಾವಣ ಸಂಪತ್ತು ಶುಕ್ರವಾರ ಲಕ್ಷ್ಮಿ ಪೂಜೆಯ ವಿಚಾರ ತಿಳಿದು ತನಗೂ ಒಂದು ಚಟ್ಟಿಗೆ ಬರೆದು ಕೊಟ್ಟರೆ ತಾನೂ ಪೂಜಿಸುವುದಾಗಿ ಹೇಳುತ್ತಾನೆ. ಅವರು ಕೊಟ್ಟ ಚಟಿಗೆಯನ್ನು ಹಿಡಿದು ಗೋಪಾಳಕ್ಕೆ ಹೋದರೆ ಗೋಧಿ, ಅಕ್ಕಿ, ಬೆಲ್ಲ, ಬೇಳೆ, ತುಪ್ಪವನ್ನು ಧಾರಾಳವಾಗಿ ಭಿಕ್ಷೆ ಹಾಕುತ್ತಾರೆ. ಮನೆಗೆ ಬಂದು ಲಕ್ಷ್ಮೀ ಪೂಜೆ ಮಾಡಲು ನಿಶ್ಚಯಿಸಿ ಒಬ್ಬ ಮುತ್ತೈದೆಯನ್ನು ಭೋಜನಕ್ಕೆ ಕರೆಯಲು ಹೇಳುತ್ತಾನೆ. ಚಿಕ್ಕ ಸೊಸೆ ಕುಂಕುಮ ಎಣ್ಣೆ ತೆಗೆದುಕೊಂಡು ಮುತ್ತೈದೆಗೆ ಹೇಳಲು ಹೊರಟಾಗ ಚೊಕ್ಕ ಚಿನ್ನದ ಗೊಂಬೆಯಂತಿದ್ದ ಒಬ್ಬಾಕೆ ಬಂದು ತನಗೇ ಔತಣಕ್ಕೆ ಹೇಳೆಂದು ಕೇಳುತ್ತಾಳೆ. ಸೊಸೆಯು ಒಪ್ಪಿ ಮನೆಗೆ ಬಂದು ಮಾವನಿಗೆ ಈ ವಿಷಯವನ್ನು ತಿಳಿಸುತ್ತಾಳೆ. ಆ

ಮನೆಯವರೆಲ್ಲ ಪೂಜೆಗೆ ಸಿದ್ಧತೆ ಮಾಡಿಕೊಂಡು ಮಂಟಪ ರಚಿಸಿ ಚಟ್ಟಿಗೆಯೊಳಗೆ ಪಂಚಫಲಗಳನ್ನು ಹಾಕಿ ಮಹಾಲಕ್ಷ್ಮಿಯನ್ನು ಪ್ರತಿಷ್ಠೆ ಮಾಡಿ ಸಂಭ್ರಮದಿಂದ

ಅರಿಶಿನ ಕುಂಕುಮ ಗಂಧ ಬುಕ್ಕಿಟ್ಟು ಗೆಜ್ಜೆ
ವಸ್ತ್ರವು ಪಾರಿಜಾತ ಸಂಪಿಗೆಯು
ಮುಡಿಸಿ ಮಲ್ಲಿಗೆ ದಂಡೆ ಇಡಿಸಿ ತೆಂಗಿನಕಾಯಿ
ಉಡಿ ತುಂಬುತ್ತಿತ್ತಿ ಫಲಗಳು [27]

ಲಕ್ಷ್ಮೀದೇವಿಗೆ ಪೂಜಾದಿಗಳನ್ನು ಮಾಡಿ ನೈವೇದ್ಯಕ್ಕೆಂದು ಮಾಡಿದ್ದ ಭಕ್ಷ್ಯಗಳ ವರ್ಣನೆಯೂ ಇಲ್ಲಿ ಬರುತ್ತದೆ. ಲಕ್ಷ್ಮೀದೇವಿಯ ನೈವೇದ್ಯಕ್ಕೆ ಮಾಡಿದ್ದ ಅಡಿಗೆಗಳ ವರ್ಣನೆಯಿಂದ ಪಾಕಶಾಸ್ತ್ರದಲ್ಲಿ ಭೀಮವ್ವನಿಗೆ ಇದ್ದ ಕೌಶಲ ವ್ಯಕ್ತವಾಗುತ್ತದೆ. ಸಿರಿವಂತರ ಮನೆಗಳಲ್ಲಿ ಇದ್ದ ಅಡಿಗೆಗಳ ವೈವಿಧ್ಯ ಇದಾಗಿದೆ. (ವಿವರಗಳಿಗೆ ಅನುಬಂಧ–1 ನೋಡಿ) ಇಷ್ಟೆಲ್ಲಾ ಆದ ಮೇಲೆ ಸುಗಂಧಿತ ಅಡಿಕೆ ಮತ್ತು ಎಲೆಯ ತಾಂಬೂಲ ಸಮರ್ಪಣೆ. ಪೂಜೆ ಮುಗಿದು ನೈವೇದ್ಯ ಆದ ನಂತರವೂ ಮುತ್ತೈದೆ ಬರದಿದ್ದಾಗ ಆಕೆಗಾಗಿ ಒಂದು ಎಲೆಯಲ್ಲಿ ಎಲ್ಲವನ್ನೂ ಬಡಿಸಿ ಮುಚ್ಚಿಟ್ಟು ಎಲ್ಲರೂ ಊಟ ಮಾಡುತ್ತಾರೆ. ಎರಡನೇ ವಾರ ಇನ್ನೊಬ್ಬ ಸೊಸೆ ಕುಂಕುಮ ಎಣ್ಣೆ ತೆಗೆದುಕೊಂಡು ಹೊರಡುತ್ತಾಳೆ. ಮತ್ತೆ ಅದೇ ಮುತ್ತೈದೆ ತನಗೇ ಆಹ್ವಾನ ನೀಡೆಂದಾಗ ಸೊಸೆಯು ಹಿಂದಿನ ವಾರ ಬಡಿಸಿಟ್ಟ ಎಲೆಯನ್ನೇ ಬೇಕಾದರೆ ಉಣ್ಣು ಹೋಗೆಂದು ಜರೆಯುತ್ತಾಳೆ. ಆಗ ಆ ಮುತ್ತೈದೆ

ತಂಗಳೂಟಗಳುಂಬೋ ಕಂಗಾಳಿ ನಾನಲ್ಲ
ಬಂಗಾರದಂಥ ಮುತ್ತೈದೆ
ತಿಂಗಳಾಗಲಿ ಹಂಗುನೂಲು ಕಟ್ಟಿ ನಿನ್ನೆಲೆ
ತಂಗಳು ನಿನಗುಣಿಸುವೆನು [28]

ಆ ವಾರವೂ ಮುತ್ತೈದೆ ಬರುವುದಿಲ್ಲ. ಹೀಗೆ ನಾಲ್ಕು ವಾರಗಳು ಕಳೆದು ಐದನೇ ವಾರ ಬ್ರಾಹ್ಮಣನ ಮಡದಿಯೇ ಮುತ್ತೈದೆಯನ್ನು ಕರೆಯಲು ಹೊರಟಾಗ ಅದೇ ಮುತ್ತೈದೆ ಬಂದು 'ಬಂದ ಔತಣ ಗಂಡು ಮಕ್ಕಳ ಭಾಗ್ಯ' ಎಂದು ಹೇಳಿ ದಿವಾಕರ ಮುಳುಗೋ ಸಮಯಕ್ಕೆ ಬರುವೆನೆಂದು ಹೇಳುತ್ತಾಳೆ. ಐದನೇ ವಾರ ಮಹಾಲಕ್ಷ್ಮಿಯು ಪಚ್ಚ ಕರ್ಪೂರ, ಪುನುಗು, ಸಂಪಿಗೆ ಎಣ್ಣೆ ಬೆರೆಸಿದ ನೀರಿನಲ್ಲಿ ಮಿಂದು ಆಭರಣಗಳಿಂದ ಅಲಂಕರಿಸಿಕೊಂಡು ಎಲ್ಲರೂ ನಿಂತು ನೋಡುತ್ತಿರಲು ಬಡವರ ಮನೆಗೆ ಬಂದು ದೇವರ ಮನೆಯಲ್ಲಿ ಕೂರುತ್ತಾಳೆ. ಅವಳನ್ನು ಕಂಡವರು ಸೌಂದರ್ಯಕ್ಕೆ ಮರುಳಾಗಿ ಕೈ ಮುಗಿದು ಸಾಷ್ಟಾಂಗವೆರಗಿ ನೋಡುತ್ತಿರುತ್ತಾರೆ. ಲಕ್ಷ್ಮಿಯು ಬಡವರ ಮನೆ ಹೊಕ್ಕ ತಕ್ಷಣ ಆ ಮನೆಯು ಅರಮನೆಯಾಗುತ್ತದೆ.

ಸುತ್ತಲೂ ವನವಾಗಿ ನಾನಾ ರೀತಿಯ ಫಲ, ಪುಷ್ಪಗಳು, ಪಕ್ಷಿಗಳಿಂದ ತುಂಬಿ ಹೋಗುತ್ತದೆ. ಅಂದಿನ ಪೂಜೆಯ ನಂತರ:

ನಾಲ್ಕು ವಾರಗಳ ಎಲೆ ತೆಗೆದು ನೋಡಿದರೆ
ಹಾಕಿದನ್ನವು ಅಣಿಮುತ್ತು
ಶಾಕಪಾಕವು ಪಲ್ಯಪರಮಾನ್ನ ಭಕ್ಷ್ಯ
ಬಂಗಾರ ರಜತ ಬಾಳೆಯೆಲೆಯು [29]

ನಾಲ್ಕು ಮಂದಿ ಸೊಸೆಯರು ಆ ಎಲೆಗಳಲ್ಲಿ ಊಟ ಮಾಡಿ ಸಂತರ ಪಡುತ್ತಾರೆ. ಈ ವ್ರತವನ್ನು ಆಚರಿಸಿದರೆ ಕಿವುಡನಿಗೆ ಕಿವಿ, ಕುರುಡನಿಗೆ ಕಂಗಳು ಬರುವುವು. ಬರಡು ಆಕಳು ಹೈನವಾಗುವುದು, ಬಂಜೆಗೆ ಮಕ್ಕಳಾಗುವುದು. ಮುತ್ತೈದೆತನ ಸ್ಥಿರವಾಗಿ ಭೀಮೇಶಕೃಷ್ಣನ ಕೃಪೆ ದೊರಕುವುದೆಂಬ ಫಲಶ್ರುತಿಯನ್ನು ಈ ಹಾಡು ಒಳಗೊಂಡಿದೆ. ಹೆಣ್ಣಿನ ಜೀವನದ ಗುರಿಯಾದ 'ಗಂಡು ಮಕ್ಕಳ ಭಾಗ್ಯ' ಮತ್ತು ಮುತ್ತೈದೆತನಗಳು ಬೇಡುವುದೇ ಈ ವ್ರತಗಳಲ್ಲಿನ ಸಮಾನ ಅಂಶ. ವರ್ಣನೆಗಳಂತೂ ಭೀಮವ್ವನವರ ಜೀವನ ಪ್ರೀತಿಯನ್ನು ತೋರಿಸುತ್ತದೆ. ಹೆಣ್ಣಿಗೆ ಸಹಜವಾದ ಸೀರೆ, ಒಡವೆಗಳ ವ್ಯಾಮೋಹ ಈ ಹಾಡುಗಳಲ್ಲಿ ವ್ಯಕ್ತವಾಗಿದೆ. ಸ್ತ್ರೀ ಸಹಜ ವ್ಯಾಮೋಹಗಳನ್ನು ಭೀಮವ್ವ ಗುರುತಿಸಿದ್ದಾರೆ ಮತ್ತು ತಮ್ಮ ಕೃತಿಗಳಲ್ಲಿ ಬಳಸಿಕೊಂಡಿದ್ದಾರೆ.

7. ಬುಧ-ಬೃಹಸ್ಪತಿ ಹಾಡು:

ಬುಧ-ಬೃಹಸ್ಪತಿ ಹಾಡು ಹರಪನಹಳ್ಳಿ ಭೀಮವ್ವನವರು ತ್ರಿಪದಿ ಛಂದಸ್ಸಿನಲ್ಲಿ ರಚಿಸಿದ ಕೃತಿ. ಶ್ರಾವಣ ಮಾಸದ ಮೊದಲ ಬುಧವಾರ ಬುಧ-ಬೃಹಸ್ಪತಿಗಳ ಚಿತ್ರ ಬರೆದು ಪೂಜಿಸಿದರೆ ಇಷ್ಟಾರ್ಥಗಳು ನೆರವೇರುವ ಮತ್ತು ತಿರಸ್ಕರಿಸಿ ಹಳಿದರೆ ಉಂಟಾಗುವ ದುಷ್ಫಲಗಳನ್ನೂ ಕಥೆಯಲ್ಲಿ ಹೇಳಿದೆ. ಭೀಮವ್ವ ಈ ಹಾಡಿನಲ್ಲಿ ಹರಿಭಕ್ತನಾದ ಬುಧ-ಬೃಹಸ್ಪತಿ ವ್ರತದ ಮಹಿಮೆಯನ್ನು ಹೇಳಿದ್ದಾರೆ.

ಒಂದು ಪಟ್ಟಣದಲ್ಲಿದ್ದ ಒಬ್ಬ ಬಡ ಬ್ರಾಹ್ಮಣ ತನ್ನ ಹೆಂಡತಿ, ನಾಲ್ಕು ಜನ ಗಂಡು ಮಕ್ಕಳು, ಸೊಸೆಯರು ಮತ್ತು ಬಹಳ ಮಂದಿ ಮೊಮ್ಮಕ್ಕಳೊಡನೆ ಜೀವನ ನಡೆಸುತ್ತಿದ್ದನು. ಪ್ರತಿ ದಿನ ಬೆಳಿಗ್ಗೆ ನಾಲ್ಕು ಮಂದಿ ಗಂಡು ಮಕ್ಕಳು ಗೋಪಾಳಕ್ಕೆ ಹೋಗಿ ತಂದ ನಾಲ್ಕು ಸೇರು ಜೋಳದಲ್ಲಿ ಅರ್ಧ ಹೊಟ್ಟೆ ಉಂಡು ನೇಮ ನಿಷ್ಠೆಗಳಿಂದ ಇರುತ್ತಿದ್ದರು. ಹೀಗಿರಲು ಒಂದು ದಿನ ಇಬ್ಬರು ಬ್ರಾಹ್ಮಣರು ಬಂದು ಭಿಕ್ಷೆ ಬೇಡಿದಾಗ ಹಿರಿಯ ಸೊಸೆ ಅವರನ್ನು ಆದರಿಸಿ, ನಮಸ್ಕರಿಸಿ ಒಳಗೆ ಕರೆಯುತ್ತಾಳೆ. ಆ ಬ್ರಾಹ್ಮಣರು ಹಸಿವೆ ನೀರಡಿಕೆಗಳಿಂದ ಬಳಲಿರುವುದಾಗಿ ಹೇಳಿ ಆಹಾರ ಕೇಳುತ್ತಾರೆ.

ಭಿಕ್ಷಕೆ ಹೋದವರು ಈ ಕ್ಷಣದಿ ಬರುವೋರು
ಅರೆ ಕ್ಷಣ ನೀವು ತಡೆದರೆ ಜೋಳದ
ಭಕ್ಷ್ಯವನೆ ಮಾಡಿ ಬಡಿಸುವೆನು [30]

ಆ ಬ್ರಾಹ್ಮಣರು ತಮಗೆ ಭೋಜನ ಮಾಡಿಸಿದರೆ ತೃಪ್ತರಾಗಿ ಹರಸಿ ಹೊರಡುವೆನೆಂದು ಹೇಳುತ್ತಾರೆ. ಮಡಿಯುಟ್ಟು ಆಕೆ ಭಕ್ಕರಿ (ಜೋಳದ ರೊಟ್ಟಿ)ಯನ್ನು ಮಾಡಿ ನಾಲ್ಕು ರೊಟ್ಟಿಗಳಲ್ಲಿ ಎಂಟು ಮಕ್ಕಳಿಗೆ ನೀಡುತ್ತಿದ್ದುದ್ದನ್ನು ಸಂತೋಷದಿಂದ ದ್ವಿಜರಿಗೆ ಬಡಿಸುತ್ತಾಳೆ. ಭಕ್ಕರಿಯ ಜೊತೆಗೆ

ಬೆಣ್ಣೆ, ಬೆಲ್ಲ ತುಪ್ಪ ಕರಣೆ ಕರಣೆ ಕೆನೆಮೊಸರು
ನುಣ್ಣನೆ ತವ್ವೆ ಅರೆದ ಕೊಬ್ಬರಿ ಖಾರ
ಉಣ್ಣಿರೆಂದ್ಹಾಕುತಿರಲಾಗ [31]

ಉಂಡು ತೃಪ್ತರಾದ ಬ್ರಾಹ್ಮಣರು ತಾವು ಬುಧ–ಬೃಹಸ್ಪತಿಯರೆಂದು ಹೇಳಿ ಅಡಿಗೆಯ ಒಲೆಯ ಗೋಡೆಯಲ್ಲಿ ತಮ್ಮನ್ನು ಬರೆದು ಪೂಜಿಸಿದರೆ ಅನ್ನವನ್ನೂ, ಪೆಟ್ಟಿಗೆಯ ಮೇಲೆ ಬರೆದು ಪೂಜಿಸಿದರೆ ಸಂಪತ್ತನ್ನೂ ಕೊಡುವೆವೆಂದು ಹೇಳುತ್ತಾರೆ. ಆಕೆ ಬುಧ–ಬೃಹಸ್ಪತಿಗಳ ಚಿತ್ರ ಬರೆದು ಗಂಧಾಕ್ಷತೆ, ಪುಷ್ಪಗಳಿಂದ ಪೂಜಿಸಿ ಉತ್ತರಾಣಿ ಅಕ್ಕಿಯ ಮಂತ್ರಾಕ್ಷತೆ ಹಾಕಿ ಬೇಡುತ್ತಾಳೆ.

ಮರುದಿನ ಗೋಪಾಳಕ್ಕೆ ಹೋದಾಗ ಅವರ ನಿರೀಕ್ಷೆಗೆ ಮೀರಿ ಅತ್ಯಧಿಕ ಭಿಕ್ಷೆ ದೊರೆತು ಮನೆಗೆ ಮರಳುತ್ತಾರೆ. ಮನೆಯಲ್ಲಿ ಬರೆದಿದ್ದ ಬುಧ–ಬೃಹಸ್ಪತಿಗಳ ಚಿತ್ರದ ವಿವರ ತಿಳಿದು ನಿರಂತರ ಪೂಜೆ ಮಾಡುವೆವೆಂದು ಸಂತಸ ಪಡುತ್ತಾರೆ. ಅನ್ನ, ಭಕ್ಕರಿ, ಬ್ಯಾಳೆ ತವ್ವೆ, ಬೆಲ್ಲ, ಪಲ್ಯ, ಬೆಣ್ಣೆಯನ್ನು ನೈವೇದ್ಯ ಮಾಡುತ್ತಾರೆ.

ದಿನ ದಿನಕ್ಕೂ ಅವರ ಮನೆ ಸಂಪತ್ತು ಹೆಚ್ಚಾಗುತ್ತದೆ. ಹಿರಿಯ ಮಗನು ದೇಶ ಸಂಚಾರಕ್ಕೆ ಹೊರಡುತ್ತಾನೆ. ಚಂದ್ರಮತಿ ರಾಜ್ಯದ ಚಂದ್ರಶೇಖರನೆಂಬ ರಾಜನು ಮೃತನಾಗಿದ್ದು, ಆ ರಾಜ್ಯಕ್ಕೆ ಅರಸನನ್ನು ಆರಿಸಲು ಆನೆಯ ಕೈಯಲ್ಲಿ ಹಾರ ಕೊಟ್ಟು ಅದರ ಹಿಂದೆ ಮಂತ್ರಿಗಳು ಬರುತ್ತಿರುವಾಗ ಆನೆಯು ಬ್ರಾಹ್ಮಣನ ಮಗನಿಗೆ ಹಾರ ಹಾಕುತ್ತದೆ. ರಾಜನಾದ ಆ ದ್ವಿಜನ ಮಗನು ತಮ್ಮವರನ್ನು ಕರೆಸಿಕೊಳ್ಳಬೇಕೆಂದು ಬುಧ–ಬೃಹಸ್ಪತಿ ಪೂಜೆ ಮಾಡುತ್ತಿದ್ದನು. ಬುಧ–ಬೃಹಸ್ಪತಿಗಳು ಆತನ ಮನೆಗೆ ಬಂದಾಗ ಮಂಡಿಗೆ, ಫೇಣಿ ಮಾಡುವೆನೆಂದಾಗ ಬುಧ–ಬೃಹಸ್ಪತಿಗಳು ಭಕ್ಕರಿಯ ನೈವೇದ್ಯ ಬಯಸುತ್ತಾರೆ.

ಮೃಷ್ಟಾನ್ನವು ಜೋಳದ್ಹಿಟ್ಟಿನ ಭಕ್ಕರಿಯು
ತುಪ್ಪಕೆನೆಮೊಸರು ತುಂಬ್ಹಾಯಿ ರುಚಿಯಾದ
ಚಟ್ಟಣಿ ಶಾಖ ಸೂಪ ಶಾಲ್ಯಾನ್ನ [32]

ತೃಪ್ತರಾದ ಬುಧ–ಬೃಹಸ್ಪತಿಗಳು ಸಂಭ್ರಮದಿಂದ ರಾಜ್ಯವಾಳಲು ಹರಸಿ ಹೋಗುತ್ತಾರೆ. ಇತ್ತ ಬಡ ಬ್ರಾಹ್ಮಣನ ಮನೆಯಲ್ಲಿ ಅವನ ಮಕ್ಕಳು ಹಿರಿಯ ಸೊಸೆ ಬರೆದಿದ್ದ ಗೊಂಬೆಯನ್ನು ಅಳಿಸಿ ನೈವೇದ್ಯವನ್ನು ಉಂಡು ವ್ರತ ಕೆಡಿಸುತ್ತಾರೆ. ಆ ದಿನದಿಂದ ಮತ್ತೆ ದಾರಿದ್ರ್ಯ ಬಂದು ಆವರಿಸುತ್ತದೆ. ಪರವೂರಿಗೆ ಹೋಗಿ ಕಟ್ಟಿಗೆ ಒಡೆದು ಜೀವನ ನಡೆಸುತ್ತಿರುತ್ತಾರೆ. ಒಂದು ಬಾರಿ ಅರಮನೆಯಲ್ಲಿ ಊಳಿಗ ಮಾಡುತ್ತಿದ್ದಾಗ ರಾಜ ಅವರನ್ನು ಗುರುತು ಹಿಡಿದು ಮಂತ್ರಿಯನ್ನು ಅವರ ವಿವರ ತಿಳಿಯಲು ಕಳಿಸುತ್ತಾನೆ. ರಾಜನು ತನ್ನವರನ್ನು ಹನ್ನೆರಡು ವರ್ಷಗಳ ನಂತರ ನೋಡುವಾಗ ದೇವಾಲಯದಲ್ಲಿ ತೈಲದ ಕೊಪ್ಪರಿಗೆಯಲ್ಲಿ ಮುಖ ನೋಡಲು ಜ್ಯೋತಿಷ್ಕರು ಹೇಳುತ್ತಾರೆ. ವಿಷಯ ತಿಳಿದ ಬಡ ಬ್ರಾಹ್ಮಣನ ಕುಟುಂಬ ಸಂತಸ ಹೊಂದುತ್ತದೆ. ಊರನ್ನೆಲ್ಲ ಶೃಂಗರಿಸಿ ಭೇರಿ, ನಗಾರಿ ಹೊಯಿಸುತ್ತ, ಬಾಜಾ ಬಜಂತ್ರಿ ತಂದು ಪಲ್ಲಕ್ಕಿ, ರಥಗಳನ್ನು ತಂದು ರಾಜನ ಬಾಂಧವರನ್ನು ಗುಡಿಗೆ ಕರೆತಂದು ಎಣ್ಣೆಯೊಳಗೆ ಬಗ್ಗಿ ನೋಡಿ ಎಲ್ಲರೂ ಒಂದಾಗುತ್ತಾರೆ. ಆ ನಂತರ ಶ್ರೀಹರಿಯ ಪೂಜೆ ಮಾಡಿ ಅರಮನೆಗೆ ಎಲ್ಲರೂ ಬರುತ್ತಾರೆ. ಊರಿಗೆಲ್ಲ ಭೂರಿ ಭೋಜನ ಮಾಡಿಸಿ ಎಲ್ಲ ಮಕ್ಕಳ ವಿವಾಹ ನಡೆಸುತ್ತಾರೆ.

ಹುಟ್ಟು ಬಡವರು ತಮ್ಮ ದಾರಿದ್ರ್ಯ ಕಳೆದುಕೊಂಡ ಕಥೆಯನ್ನು ಭೀಮವ್ವ ವರ್ಣಿಸಿದ್ದಾರೆ. ಮುತ್ತೈದೆತನ, ಸಂತಾನ, ಸಂಪತ್ತು ಮತ್ತು ಬೇಡಿದ ಇಷ್ಟಾರ್ಥಗಳನ್ನು ಶ್ರೀಕಾಂತ ನೀಡುವನೆಂಬ ಫಲಶ್ರುತಿಯನ್ನೂ ಹೇಳಿದ್ದಾರೆ.

8. <u>ಶ್ರಾವಣ ಶನಿವಾರ ಲಕ್ಷ್ಮೀ ಕಥೆ:</u>

ಈ ಕೃತಿಯನ್ನು ಭೀಮವ್ವ ಸಾಂಗತ್ಯದಲ್ಲಿ ರಚಿಸಿದ್ದಾರೆ. ದೇವಿಗೆ ನೈವೇದ್ಯ ಮಾಡಿದ, ನುಚ್ಚು ಮಜ್ಜಿಗೆ, ಕಟ್ಟಂಬಲಿ, ಹಿಂಡಿ ಪಲ್ಯಗಳನ್ನು ಅವಹೇಳನ ಮಾಡಿದ ರಾಣಿ ಪಡುವ ಪಾಡನ್ನು ಪಶ್ಚಾತ್ತಾಪ ಪಟ್ಟು ವ್ರತ ಮಾಡಿ ಪ್ರಸಾದ ಸ್ವೀಕರಿಸಿದ ಮೇಲೆ ಮೊದಲಿನ ಐಶ್ವರ್ಯ ಪಡೆದ ಕಥೆ ಇದಾಗಿದೆ.

ಒಂದು ಪಟ್ಟಣದ ರಾಜನ ಆಶ್ರಯದಲ್ಲಿ ಮಂತ್ರಿಯಾಗಿದ್ದ ಸೋಮೇಶಭಟ್ಟ ಸಂಸಾರದಲ್ಲಿ ಮಕ್ಕಳು ಸೊಸೆಯರೊಂದಿಗೆ ಸುಖವಾಗಿದ್ದ. ಅವನ ಪತ್ನಿ ಸೋಮೇಜಮ್ಮ ಶುಕ್ರವಾರ ಲಕ್ಷ್ಮಿಯನ್ನು ಸಾಂಗವಾಗಿ ಪೂಜಿಸಿ ನಾನಾ ವಿಧ ಭಕ್ಷ್ಯಗಳ ನೈವೇದ್ಯ ಮಾಡಿ ಮಾರನೇ ದಿನ ಶನಿವಾರ ಲಕ್ಷ್ಮಿಯನ್ನು ಪೂಜಿಸಿ

ಹಿಟ್ಟಿನ ಕಡುವು ಹಿಂಡಿಯ ಪಲ್ಯವನು ಮಾಡಿ
ಅಚ್ಚೆಳ್ಳು ಗಾಣದೆಣ್ಣೆಯನು
ನುಚ್ಚು ಮಜ್ಜಿಗೆ ಹುಳಿ, ತಿಳಿಯ ಕಟ್ಟಂಬಲಿ
ಇಟ್ಟರು ನೈವೇದ್ಯಗಳನು [33]

ಭೋಜನಕ್ಕೆ ಕುಳಿತಾಗ ರಾಜನ ಮಡದಿಯು ಗೌರಿಯ ಸಂಪತ್ತನ್ನು ಜರೆದು ಒಂದೊಂದು ಅಡಿಗೆಯನ್ನೂ ನಿಂದಿಸಿ ತೂಗುಮಣೆಯಲ್ಲಿ ಕಾಲುಗಳನ್ನು ಇಳಿಬಿಟ್ಟು ಕೂರುತ್ತಾಳೆ. ಆ ದಿನದ ಅಡಿಗೆಯನ್ನು ಆಡಿಕೊಳ್ಳುವಾಗ ಅವಳ ಸಂಪತ್ತು ಕುಂದಿ ಪರರಾಜರು ಮುತ್ತಿಗೆ ಹಾಕಿ ಕಾಡು ಪಾಲಾಗುತ್ತಾಳೆ. ಅವಳ ಮಕ್ಕಳು ಅವಳಿಗೆ ಜನಿಸಿದಾಗ ಬಾಳೆಯೆಲೆಯಲ್ಲಿ ಸುತ್ತಿಟ್ಟು ಅಲ್ಲಿಂದ ಅವಳು ಅವಳ ಪತಿ ಹೊರಟು ಹೋಗುತ್ತಾರೆ. ತುಳಸಿಗೆಂದು ಬಂದ ಸೋಮೇಶಭಟ್ಟ ಆ ಮಕ್ಕಳನ್ನು ಕೊಂಡೊಯ್ದು ಸಾಕುತ್ತಾನೆ. ಹೆಣ್ಣು ಮಕ್ಕಳಿಲ್ಲದ ಅವನ ಆ ಮಕ್ಕಳನ್ನು ಸಾಯಕ್ಕ, ಧೇಯಕ್ಕನೆಂದು ಹೆಸರಿಟ್ಟು ಸಾಕುತ್ತಾನೆ. ವಯಸ್ಸಿಗೆ ಬಂದ ಹೆಣ್ಣು ಮಕ್ಕಳಿಗೆ ಮದುವೆ ಮಾಡುತ್ತಾನೆ. ಅಕ್ಕನನ್ನು ಅರಸನಿಗೆ ತಂಗಿಯನ್ನು ಪ್ರಧಾನಿಗೆ ಲಗ್ನ ಮಾಡುತ್ತಾರೆ.

ತಾಯಿಯ ಅಪ್ಪಣೆಯಂತೆ ಸಾಯಕ್ಕ ವ್ರತ ಮಾಡುತ್ತಾ ಸಂತಾನ ಸಂಪತ್ತಿನಿಂದ ಸುಖವಾಗಿರಲು ಧೇಯಕ್ಕ ಆ ವ್ರತ ಮರೆತು ರಾಜನನ್ನು ಸೆರೆಹಾಕಿ ಊಟಕ್ಕೂ ಇಲ್ಲದೆ ದಾರಿದ್ರ್ಯ ಪ್ರಾಪ್ತವಾಗುತ್ತದೆ. ಒಮ್ಮೆ ತಾಯಿ ಮಕ್ಕಳು ಕುಳಿತು ಮಾತನಾಡಿ ತಾಯಿಯ ತಂಗಿಯ ಬಗ್ಗೆ ತಿಳಿಯುತ್ತಾರೆ. ಆಗ ಒಬ್ಬ ಮಗನು ಸಾಯಕ್ಕನನ್ನು ಕಂಡು ಬರುವುದಾಗಿ ಹೋಗುತ್ತಾನೆ. ಹೊಳೆ ದಂಡೆಗೆ ಬಂದ ಅವನನ್ನು ಯಾರೆಂದು ವಿಚಾರಿಸಲು ಧೇಯಕ್ಕನ ಕುಮಾರನೆಂದು ಹೇಳುತ್ತಾನೆ. ಸಾಯಕ್ಕ ಅವನನ್ನು ಹಿತ್ತಿಲ ಬಾಗಿಲಿಂದ ಕರೆತಂದು ಉಪಚರಿಸುತ್ತಾಳೆ. ಅಕ್ಕನ ದಾರಿದ್ರ್ಯದ ಕಥೆ ಕೇಳಿ ಮರುಗಿ ಕೋಲಿನಲ್ಲಿ ಹಣ ತುಂಬಿ ಕಳುಹಿಸುತ್ತಾಳೆ. ದಾರಿಯಲ್ಲಿ ಗೋಪಾಲಕನು ಆ ಕೋಲನ್ನು ಕಸಿದುಕೊಂಡು ಹೋಗುತ್ತಾನೆ. ಅವನು ಮನೆಗೆ ಬಂದು ತಾಯಿಗೆ ಈ ವಾರ್ತೆ ಹೇಳಿದಾಗ ಇನ್ನೊಬ್ಬ ಮಗ ಸಾಯಕ್ಕನ ಬಳಿಗೆ ಹೊರಡುತ್ತಾನೆ. ಈ ಬಾರಿ ಬುತ್ತಿಯಲ್ಲಿ ಹಣ ಕಟ್ಟಿ ಕಳಿಸಿದರೆ ಕಾಗೆ ಎತ್ತಿ ಕೊಂಡೊಯ್ಯುತ್ತದೆ. ಮೂರನೆಯ ಮಗನಿಗೆ ಬುರುಡೆಯಲ್ಲಿ ಹಣ ತುಂಬಿ ಕಳಿಸಿದಾಗ ಬಾವಿಗೆ ಬಿದ್ದು ಹೋಗುತ್ತದೆ. ನಾಲ್ಕನೆಯ ಮಗನೂ ಬರಿಗೈಲಿ ಬಂದಾಗ ತಾನೇ ಹೊರಡುವೆನೆಂದು ಧೇಯಕ್ಕ ನಿರ್ಧರಿಸುತ್ತಾಳೆ. ಆಗ ಅವಳ ದಾರಿದ್ರ್ಯವನ್ನು ಕವಯತ್ರಿ ಹೀಗೆ ವರ್ಣಿಸಿದ್ದಾರೆ.

ಉಟ್ಟಳು ಮಾರು ಸೀರೆಯನು ತೋಳಿನಲಿ
ತೊಟ್ಟಳು ಚಿಂದಿ ಕುಪ್ಪಸವ
ಕಟ್ಟಿದ್ದ ಜಡೆಗೆಣ್ಣೆ ಹಚ್ಚಿ ತಳುಪನ್ನಾಕಿ
ಬಟ್ಟು ಕುಂಕುಮವ ತೀಡಿದಳು

ಒಂದೊಂದು ಕರಿಯ ಗಾಜಿನ ಬಳೆ ಕೈಯಲ್ಲಿ
ಬಂದಳು ನಿಮ್ಮ ಧೇಯಕ್ಕ ನೆನುತಾ [34]

ಅಡಿಗೆ, ಅಲಂಕಾರ, ಒಡವೆ, ಸಂಪತ್ತಿನ ವರ್ಣನೆಗಳಂತೆ ದಾರಿದ್ರ್ಯದ ವರ್ಣನೆಯನ್ನೂ ಭೀಮವ್ವ ಸಮರ್ಥವಾಗಿ ಮಾಡಿದ್ದಾರೆ.

ಕಂದಿಕುಂದಿದ ಕೂಸನ್ನೆತ್ತಿಕೊಂಡು ಬಂದು ತಂಗಿಗೆ ಹೇಳಿಕಳಿಸುತ್ತಾಳೆ. ಧೇಯಕ್ಕನನ್ನು ಮನೆಗೆ ಕರೆತಂದು ಎಲ್ಲರೂ ಅವಳ ಚರಣಕ್ಕೆರಗಿ ಉಪಚರಿಸುತ್ತಾರೆ. ಅಂದು ಶುಕ್ರವಾರ ಹೋಳಿಗೆ, ಶಾವಿಗೆ ಪಾಯಸ ಮುಂತಾದ ಭಕ್ಷ್ಯಗಳಿಂದ ನೈವೇದ್ಯವಾಗಿ ಲಕ್ಷ್ಮೀ ಪೂಜೆ ನಡೆಯುತ್ತದೆ. ಮಾರನೇ ದಿನ ಸೊಸೆಯರನ್ನು ಕರೆದು ಸಾಯಕ್ಕ ಬಿಳಿ ಜೋಳ ಕುಟ್ಟಿ ಅಡಿಗೆ ಮಾಡಲು ಹೇಳುತ್ತಾಳೆ.

ಹುಳಿನುಚ್ಚು ಮಾಡುವೆ ತುಳಿಯಕಟ್ಟಂಬಲಿ
ಎಳೆಸೊಪ್ಪಿನ್ಹಿಂಡಿ ಪಲ್ಯವನು
ತಿಳಿಯಾದ ಎಳ್ಳೆಣ್ಣೆ ತರಿಸಬೇಕ್ಹಿಟ್ಟಿನ
ಕಡುವನು ಮಾಡಬೇಕೆನುತ [35]

ಇದನ್ನು ಕೇಳಿ ಧೇಯಕ್ಕ ತಲ್ಲಣಿಸುತ್ತಾಳೆ. ತಂಗೆ ಬೇಕೆಂದೇ ಬಡವಳೆಂಬ ಅಲಕ್ಷ್ಯದಿಂದ ಅಂತಹ ಅಡಿಗೆ ಮಾಡುವಳೆಂದು ತಿಳಿದು ದನಗಳ ಕೊಟ್ಟಿಗೆಯಲ್ಲಿ ಸೊಪ್ಪುಗಳನು ಹೊದ್ದುಕೊಂಡು ಗೋದಲಿಯಲ್ಲಿ ಮಲಗುತ್ತಾಳೆ. ಮಧ್ಯಾಹ್ನ ಪೂಜೆ, ಅಡಿಗೆ ಆದ ನಂತರ ಎಲ್ಲರೂ ಧೇಯಕ್ಕನನ್ನು ಹುಡುಕುತ್ತ ಬಂದು ಎತ್ತಿನ ಗೋದಲಿಯಿಂದ ಕರೆ ತರುತ್ತಾರೆ. ಅವಳ ಉರಿ ಮೋರೆ ಕಂಡು ಕಾರಣ ಕೇಳಿದಾಗ:

ಕೆಟ್ಟು ಬಡವರು ಬರುವುದುಂಟೆ ಜಗದೊಳು
ಅಟ್ಟುಂಬ ಮನೆಯ ಬಾಗಿಲಿಗೆ [36]
– – – – – – – – – – – – – –

ಖಗರಾಜನಲಿ ನೊಣವು ಬಂದು ಸೇರಿ
ಬೀಗತನ ಮಾಡೇನೆಂಬೋದುಚಿತವೆ [37]

ಸಿಟ್ಟಿನಿಂದ ಧೇಯಕ್ಕ ಇಂದಿನ ದುರ್ಭಿಕ್ಷದಡಿಗೆಯಿಂದ ತನಗೆ ಅವಮಾನವಾಯಿತೆಂದು ಅಕ್ಕಸದಿಂದ ಮಾತನಾಡುತ್ತಾಳೆ. ಆಗ ಸಾಯಕ್ಕ ತಮ್ಮ ತಾಯಿ ಹೇಳಿದ ಶನಿವಾರದ ವ್ರತದ ಬಗ್ಗೆ ನೆನಪಿಸುತ್ತಾಳೆ. ಧೇಯಕ್ಕ ತನ್ನ ತಪ್ಪಿಗೆ ಮರುಗಿ ತಂಗಿಯೊಡನೆ ಶ್ರೀಗೌರಿಯನ್ನು ಪೂಜಿಸುತ್ತಾಳೆ. ಆ ದಿನ ಗೌರಿ ಪೂಜೆ ಮಾಡಿದ ರೀತಿ ವಿವರಿಸುತ್ತಾರೆ.

ಎರೆದು ಪೀತಾಂಬರ ಉಡಿಸಿ ತಂದಿಟ್ಟರು
ಪರಿ ಪರಿ ವಸ್ತ್ರಾಭರಣ
ವರಮಣಿಮಯದ ಮಂಟಪದಲಿ ಚಟ್ಟಿಗೆ
ಬರೆದಿಟ್ಟರಾಗ ಪೀಠದಲಿ

ಹಾಕಿದರೈದು ಫಲಗಳಕ್ಕಿ ಅದರೊಳು
ನಾಲ್ಕೆಂಟು ನಂದಾ ದೀವಿಗೆಯ
ಶ್ರೀಕಮಲೆಯ ಮಧ್ಯದಲಿ ಸ್ಥಾಪನೆ ಮಾಡ್ಯ-
ನೇಕ ಭಕ್ತಿಂದ ಕುಳಿತರು [38]

ಶ್ರೀಗೌರಿಯನ್ನು ಪೂಜಿಸಿದ ಧೇಯಕ್ಕನಿಗೆ ಗೌರಿಯು ಅಷ್ಟ ಸೌಭಾಗ್ಯ, ಮುತ್ತೈದೆತನ ಕರುಣಿಸುತ್ತಾಳೆ. ಧೇಯಕ್ಕನ ಗಂಡನಿಗೆ ರಾಜ್ಯ ನೀಡುತ್ತಾಳೆ. ಗೌರಿಗೆ ಅಕ್ಕ ತಂಗಿಯರು ಆರತಿ ಎತ್ತಿ ಸಕಲ ಜನರ ಸಹಿತ ಭೋಜನ ಮಾಡಿ ಕುಳಿತಿರುವಾಗ ಧೇಯಕ್ಕನ ಗಂಡ ವಾದ್ಯಗಳ ಸಮೇತ ರಥದಲ್ಲಿ ಬಂದು ಅಕ್ಕ-ತಂಗಿಯರನ್ನು ಕರೆದೊಯ್ಯಲು ಬರುತ್ತಾನೆ. ಗೌರಿಯ ಪಲ್ಲಕ್ಕಿಯನ್ನು ಜೊತೆಯಲ್ಲಿ ಒಯ್ಯುತ್ತಾರೆ. ಧೇಯಕ್ಕನ ಕುಮಾರರಿಗೆ ಆ ಹಿಂದೆ ಸಾಯಕ್ಕ ನೀಡಿದ್ದ ಹಣವನ್ನು ಹಿಂತಿರುಗಿಸುತ್ತಾರೆ. ಗೋಪಾಲಕನು ಕೋಲನ್ನು, ಕಾಗೆಯು ಹಣದ ಬುತ್ತಿ ಗಂಟನ್ನು ಹಾಕಿದಾಗ ಮಕ್ಕಳು ತೆಗೆದುಕೊಂಡು ನಡೆಯುತ್ತಾರೆ. ಬುರುಡೆ ಹಣವು ದೊರೆಯುತ್ತದೆ. ಹೀಗೆ ಧೇಯಕ್ಕನ ರಾಜ್ಯಕ್ಕೆ ಹೋಗುತ್ತಿರುವಾಗ ಮಳೆ ಬಂದು ದಾರಿಯಲ್ಲಿ ಒಂದು ತೋಟದಲ್ಲಿ ಆಶ್ರಯ ಪಡೆಯುತ್ತಾರೆ. ಅಲ್ಲಿ ಒಬ್ಬ ಸ್ತ್ರೀಯು ತಾನು ಸೋಮೇಶಮ್ಮನ ಮನೆಯಲ್ಲಿ ಗೌರಿಗೆ ದ್ರೋಹ ಮಾಡಿದ್ದಾಗಿ ಹೇಳಿ ತನ್ನ ಮಕ್ಕಳ ಬಗ್ಗೆ ಹೇಳುತ್ತಾಳೆ. ಆಗ ಸಾಯಕ್ಕ, ಧೇಯಕ್ಕರು ಅವಳ ಮಕ್ಕಳೆಂದು ತಿಳಿದು ಬರುತ್ತದೆ. ತಂದೆ-ತಾಯಿಯರನ್ನೂ ಜೊತೆಯಲ್ಲಿ ಕರೆದುಕೊಂಡು ಅರಮನೆಗೆ ಬಂದು ಶ್ರೀಗೌರಿಯನ್ನು ಸಿಂಹಾಸನದಲ್ಲಿ ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಈ ವ್ರತವನ್ನು ಭಕ್ತಿಯಿಂದ ಮಾಡಿದರೆ:

ಭಕ್ತಿಯಿಂದಲಿ ಮಾಡೆ ಮುಕ್ತರಾಗುವರು ಧ-
ರ್ಮಾರ್ಥ ಕಾಮ್ಯವು ಫಲಿಸುವುದು
ಮುತ್ತೈದೆತನ ಧನಧಾನ್ಯ ಸಂತಾನ ಸ-
ಮಸ್ತ ಕಾರ್ಯವು ಸಿದ್ಧಿ ಉಂಟು [39]

ಎಂಬ ಫಲಶ್ರುತಿಯನ್ನೂ ತಿಳಿಸಿದ್ದಾರೆ. ಸ್ತ್ರೀಯರಿಗೆ ಮುಖ್ಯವಾದ ಸಂತಾನ, ಮುತ್ತೈದೆತನಗಳನ್ನು ಬೇಡುವುದೇ ಈ ವ್ರತಗಳ ಮುಖ್ಯ ಉದ್ದೇಶವಾಗಿದೆ. ವ್ರತಗಳನ್ನು ಭಕ್ತಿಯಿಂದ ಮಾಡಿದರೆ ಬರುವ ಫಲವನ್ನೂ, ನಿಂದಿಸಿದರೆ ಉಂಟಾಗುವ ದೌರ್ಭಾಗ್ಯವನ್ನೂ ಇಲ್ಲಿ ವರ್ಣಿಸಲಾಗಿದೆ. ನಂತರ ಪಶ್ಚಾತ್ತಾಪಪಟ್ಟು ಪೂಜೆ ಮಾಡಿದರೆ ಒಲಿವ ದೇವಿಯ ಕಾರುಣ್ಯವನ್ನು ಚಿತ್ರಿಸಲಾಗಿದೆ.

9. <u>ವರಮಹಾಲಕ್ಷ್ಮೀ ವ್ರತ:</u>

ನಿಡಗುರುಕಿ ಜೀವೂಬಾಯಿ, ಕೋಲಾರ ಪದ್ಮಾಬಾಯಿ ಮತ್ತು ದೊಡ್ಡಿಸುಧಾಬಾಯಿ ಈ ವ್ರತದ ಹಾಡನ್ನು ರಚಿಸಿದ್ದಾರೆ. ಪಾರ್ವತೀ ದೇವಿಗೆ ಪರಮೇಶ್ವರನು ಈ ವ್ರತವನ್ನು ಹೇಳಿದ್ದಾಗಿ ಭವಿಷ್ಯೋತ್ತರ ಪುರಾಣದಲ್ಲಿ ಈ ವ್ರತದ ಉಲ್ಲೇಖವಿದೆ. ಶ್ರಾವಣ ಮಾಸದ ಎರಡನೆಯ ಶುಕ್ರವಾರ ವರಮಹಾಲಕ್ಷ್ಮೀ ವ್ರತವನ್ನು ಆಚರಿಸಲಾಗುತ್ತದೆ. ಕುಂಡಿನವೆಂಬ ನಗರದಲ್ಲಿ ಚಾರುಮತಿಯೆಂಬ ಬಡ ಬ್ರಾಹ್ಮಣನ ಪತ್ನಿ ಇದ್ದಳು. ಪತಿವ್ರತೆಯಾದ ಈಕೆ ಪತಿಗೆ ಅನುಕೂಲಕರಳಾಗಿ ಎಲ್ಲರಲ್ಲಿಯೂ ವಿನಯದಿಂದ ಇರುತ್ತಿದ್ದಳು.

ಹೀಗಿರುವಾಗ ಒಂದು ದಿನ ನಾಲ್ಕನೇ ಜಾವದಲ್ಲಿ ಕನಸಿನಲ್ಲಿ ಕಮಲವನ್ನು ಹಿಡಿದ ಸ್ತ್ರೀಯನ್ನು ಕಂಡು ಪೂಜೆ ಮಾಡಿದಳು. ಆರತಿ ಎತ್ತುವ ಸಮಯಕ್ಕೆ ಎಚ್ಚರವಾಯಿತು. ಮಾರನೇ ದಿನ ಹಿರಿಯ ಮುತ್ತೈದೆಯರನ್ನು ಕರೆದು ಸ್ವಪ್ನ ವೃತ್ತಾಂತವನ್ನು ಹೇಳಿ ಅದರ ಅರ್ಥವನ್ನು ಕೇಳಿದಳು. ಆಗ ಅವರೆಲ್ಲ ಸಾಕ್ಷಾತ್ ಲಕ್ಷ್ಮೀದೇವಿಯೇ ಕನಸಲ್ಲಿ ಬಂದಿದ್ದಾಳೆಂದು ಹೇಳಿ:

ಶ್ರಾವಣ ಮಾಸದಲಿ ಪೌರ್ಣಮಿ
ಭಾರ್ಗವವಾಸರದಲಿ
ಚಾರುಮತಿ ನೀ ಪೂಜಿಸೆನ್ನುತ
ನಾರೇರೆಲ್ಲರು ನುಡಿದರು [40]

ಜೀವೂಬಾಯಿಯವರು ಗದ್ಯ ರೂಪವನ್ನೂ ಈ ಕೃತಿಯಲ್ಲಿ ಬಳಸಿದ್ದಾರೆ. ವ್ರತ ಮಾಡುವ ಮುನ್ನ ನಡೆಸಬೇಕಾದ ಸಿದ್ಧತೆಗಳ ಬಗ್ಗೆ ತಿಳಿಸುತ್ತಾರೆ. ಶ್ರಾವಣ ಮಾಸ ಬರುವುದನ್ನೇ ಚಾರುಮತಿ ಕಾಯುತ್ತಿದ್ದಳು. "ಮಾಡಿ ಸುಣ್ಣಕಾರಣೆಯು ಸಾರಣೆಯು ಬಹಳ ಪರಿ ಚಿತ್ರಗಳ ಬರೆದು ತಳಿರು ತೋರಣ ಕಟ್ಟಿ ವಿಧ ವಿಧದ ಫಲಗಳನ್ನು ತರಿಸಿ ಬಹು ವಿಧದ ಪುಷ್ಪಗಳಿಂದಲಂಕರಿಸಿ ಮನೆಯ ಮಧ್ಯದಿ ತೋರ ಮಂಟಪವನಿರಿಸುತ ಕದಳಿ ಕಂಬವು ತೋರಣೆವನೆ ಕಟ್ಟಿ ಮಂಟಪದ ಮಧ್ಯದಲಿ ತಂಡುಲವ ಹಾಸುತ್ತ ಕಲಶದಲಿ ಪಂಚಪಲ್ಲವಗಳ್ಹಾಕಿ" [41] ಎಂದು ಮಾಡಬೇಕಾದ ಸಿದ್ಧತೆಗಳನ್ನೆಲ್ಲಾ ತಿಳಿಸುತ್ತಾರೆ. ತಾನೂ ಶೃಂಗರಿತಳಾಗಿ ಚಾರುಮತಿ ಲಕ್ಷ್ಮಿಯನ್ನು ಹಸೆಗೆ ಕರೆಯುತ್ತಾಳೆ. ಆಗ ಆಕೆ ಲಕ್ಷ್ಮೀದೇವಿ ಧರಿಸುವ ಒಡವೆಗಳ ಬಗ್ಗ ಹೇಳುತ್ತಾಳೆ. ಪಟ್ಟೆ ಪೀತಾಂಬರ, ವಜ್ರದ ಪಟ್ಟಿ, ಕಟ್ಟಾಣಿ, ಸರಿಗೆ, ಏಕಾವಳಿ, ಮುತ್ತಿನಹಾರ, ಉಂಗುರ, ಅಡ್ಡಿಕೆ, ವಂಕಿ, ಕಂಕಣ, ಬಳೆ, ಮುಕರ, ಬುಲಾಕು, ಓಲೆ, ಚಳಕುಂಬು ಬಾವಲಿ, ಕಿರೀಟ, ಹೆರಳು ಬಂಗಾರ, ಗೊಂಡ್ಯ, ರಾಗಟೆ, ನಾಗಮುರಿಗೆ, ಕಾಲಗೆಜ್ಜೆ, ರುಳಿ, ಪೈಜಣ, ಸರಿಗೆ, ಬುಗುಡಿ, ಈ ಎಲ್ಲ ಒಡವೆಗಳಿಂದ ಅಲಂಕೃತಳಾದ ಲಕ್ಷ್ಮಿಯನ್ನು ಸ್ಥಾಪಿಸಿ ಚಾರುಮತಿ ಪೂಜಿಸುತ್ತಾಳೆ. ಪೂಜೆಯ ನಂತರ ಲಕ್ಷ್ಮೀದೇವಿಗೆ ಉಡಿ ತುಂಬುವುದನ್ನು ಇಲ್ಲಿ ವರ್ಣಿಸಲಾಗಿದೆ. ಮುತ್ತು ತೆತ್ತಿಸಿದ ತಟ್ಟೆಯಲ್ಲಿ

ಜಂಬು ನೇರಳೆ ಲಿಂಬೆ ಕಿತ್ತಳೆ ದಾ-
ಳಿಂಬ ದ್ರಾಕ್ಷಿಯು
ಅಂಬುಜಾಕ್ಷಿಗೆ ತೆಂಗಿನ ಫಲ
ಬಾಳೆ ಮಾವಿನ ಫಲಗಳು [42]

ಕೊಬ್ಬರಿ ಬಟ್ಟಲಿನಲ್ಲಿ ಹುರಿಗಡಲೆ ತುಂಬಿ ಅರಿಶಿನದ ಬೇರು, ಅಡಿಕೆ, ಅಕ್ಕಿ ಬೆರೆಸಿ ಉಡಿ ತುಂಬುವ ವಿಧಾನವನ್ನು ವರ್ಣಿಸಲಾಗಿದೆ. ಜರಿಯ ಪೀತಾಂಬರ, ಸರಿಗೆ ಅಂಚಿನ ಕುಪ್ಪುಸವನ್ನು ಲಕ್ಷ್ಮಿಗೆ ಅರ್ಪಿಸುತ್ತಾಳೆ

ಚಾರುಮತಿ. ನಂತರ ಆರತಿ ಎತ್ತುವಾಗ ಹಾಡಿರುವ ಹಾಡಿನಲ್ಲಿ ಶ್ರೀಹರಿಯ ದಶಾವತಾರಗಳನ್ನು ವರ್ಣಿಸಲಾಗಿದೆ.

ನೀರೊಳಾಡಿ ಮಂದರಗಿರಿ ಧರಿಸಿದ
ವರಹನಾದ ನಾರಸಿಂಹ ವಾಮನ ರಾಣಿಗೆ

ಕೊಡಲಿ ಪಿಡಿದು ತನ್ನ ಮಡದಿಯನರಸಿದ
ಉಡುವ ಸೀರೆಯ ಕದ್ದ
ತುಡುಗ ಕೃಷ್ಣನ ರಾಣಿಗಾರುತಿ

ಕಪಟದಿಂದಲಿ ತ್ರಿಪುರಾಂಗನೆಯರ ಕೂಡಿ
ಚಪಲ ಚಿತ್ತದಿ ತೇಜಿಯನೇರಿದನರಸಿಗೆ [43]

ಶ್ರೀಹರಿಯ ರಾಣಿಗೆ ಆರುತಿ ಎತ್ತಿ ಲಕ್ಷ್ಮೀಯನ್ನು ಸ್ತುತಿಸಿ ವರ ಬೇಡುತ್ತಾಳೆ. ಪರಿಪರಿಯಾಗಿ ಸ್ತೋತ್ರ ಮಾಡಿ ಧೂಪ ದೀಪ ನೈವೇದ್ಯಗಳನ್ನು ಅರ್ಪಿಸಿ, ಬ್ರಾಹ್ಮಣ ಸುವಾಸಿನಿಯರಿಗೆ ಗಂಧ, ಪುಷ್ಪ, ತಾಂಬೂಲ, ಅರಿಶಿನ, ಕುಂಕುಮ ನೀಡುತ್ತಾಳೆ. ಯಾವ ವ್ರತವನ್ನು ಮಾಡಿದರೂ ಪುನಃ ಪೂಜೆ ಮಾಡುವುದು ಸಂಪ್ರದಾಯ ಅದನ್ನು ಕವಯತ್ರಿ ಇಲ್ಲಿ ದಾಖಲಿಸಿದ್ದಾರೆ.

ಪ್ರಾರ್ಥನೆ ಮಾಡುತ ಶ್ರೀಮಹಲಕ್ಷ್ಮಿಗೆ
ಪ್ರೀತಿಲಿ ಪುನಃ ಪೂಜೆಯ ಮಾಡಿ
ಪ್ರಾರ್ಥಿಸಿ ಕೊಂಡಳು ಮನದ ಇಷ್ಟಾರ್ಥವ [44]

ಈ ವ್ರತ ಮಾಡಿ ಸಕಲ ಸಂಪತ್ತು ಪಡೆದ ಚಾರುಮತಿಯ ಈ ಕಥೆ ಹೇಳಿ ಕೇಳಿದವರಿಗೆ ಲಕ್ಷ್ಮೀಶನೇ ಒಲಿಯುವನೆಂದು ಪ್ರತೀತಿ. ಈ ವ್ರತವು ಬ್ರಹ್ಮಾಂಡಪುರಾಣದಲ್ಲಿ ಉಲ್ಲೇಖಿಸಲ್ಪಟ್ಟಿರುವ ಕಥೆಯೆಂದು ಜೀವೂಬಾಯಿ ಹೇಳಿದ್ದಾರೆ. ಆದರೆ ಈ ವ್ರತದ ಉಲ್ಲೇಖ ಈಗಾಗಲೇ ಮೇಲೆ ಹೇಳಿರುವಂತೆ ಭವಿಷ್ಯೋತ್ತರ ಪುರಾಣದಲ್ಲಿದೆ. ಭಕ್ತಿಯಿಂದ ಪೂಜಿಸುವವರ ಕ್ಲೇಶಗಳು ಕಳೆದು ಸುಖಿಸುವರೆಂಬ ಫಲಶ್ರುತಿಯನ್ನೂ ಇಲ್ಲಿ ಹೇಳಲಾಗಿದೆ. ಅದನ್ನು ಕೋಲಾರ ಪದ್ಮಾಬಾಯಿಯವರು ಚಾರುಮತಿ ವ್ರತ ನಡೆಸಿ ಪಡೆದ ಫಲಗಳನ್ನು ಫಲಶ್ರುತಿಯನ್ನು ಹೀಗೆ ದಾಖಲಿಸಿದ್ದಾರೆ.

ಇಹಪರ ಸಾಧನ ನಡೆಸಿ । ಗೃಹದಲಿ ಶಾಂತಿಯ ನಿಲಿಸಿ ।
ಚಂದದಿ ಮಾಡುತ ಸಕಲೈಶ್ವರ್ಯವ । ಪೊಂದಿ ಸುಖಿಸಿದಳು ॥

ಭಕ್ತಿಯಲಿ ಈ ವ್ರತವ । ತಪ್ಪದೆ ಮಾಡುವ ನರರ ।
ಪಕ್ಷಿಗಮನ ಹರಿ ಲಕುಮಿದೇವಿ ಸಂ । ರಕ್ಷಣೆ ಮಾಡುವಳು [45]

10. ವಟ ಸಾವಿತ್ರೀ ವ್ರತ:

ಇಂದಿರಾಬಾಯಿ ವಾಮನಾಚಾರ್ಯ ಕಟ್ಟಿ ಇದನ್ನು ರಚಿಸಿದ್ದಾರೆ. ಶ್ರೀವಟ ಸಾವಿತ್ರೀ ವ್ರತವು ಜೇಷ್ಠ ಶುದ್ಧ ಹುಣ್ಣಿಮೆಯಂದು ಆಚರಿಸಲ್ಪಡುತ್ತದೆ. ಪತಿಯ ಅಲ್ಪಾಯುಷ್ಯ ಕಳೆದು ಯಮನಿಂದ ಪತಿಯ ಪ್ರಾಣವನ್ನು ಮರಳಿ ಪಡೆದ ಸಾವಿತ್ರೀ ದೇವಿಯ ಕಥೆಯಿದು. ಅನಸೂಯಾದೇವಿ ಉಪದೇಶಿಸಿದ ಮಂತ್ರವನ್ನು ಪಠಿಸುತ್ತಾ ವ್ರತ ಮಾಡಿ ಸಾವಿತ್ರಿ ಪತಿ ಸತ್ಯವಾನನ ಅಪಮೃತ್ಯುವನ್ನು ಗೆಲ್ಲುತ್ತಾಳೆ. ಮದ್ರದೇಶದ ರಾಜನಾದ ಅಶ್ವಪತಿಯು ಬಹಳ ಕಾಲ ಮಕ್ಕಳಿಲ್ಲದೆ ಕಾಡಿಗೆ ಹೋಗಿ ತಪಸ್ಸು ಮಾಡಿ ವರ ಪಡೆದು ಬರುತ್ತಾನೆ. ಆನಂತರ ಅವನಿಗೆ ಒಬ್ಬ ಮಗಳು ಹುಟ್ಟುತ್ತಾಳೆ. ಸಾವಿತ್ರಿ ಎಂಬ ಹೆಸರನ್ನಿಟ್ಟು ಆ ಮಗುವನ್ನು ಸಾಕುತ್ತಾರೆ. ಆ ಬಾಲಕಿ ಯುಕ್ತ ವಯಸ್ಸಿಗೆ ಬಂದಾಗ ರಾಜನು ಮಗಳಿಗೆ ತಕ್ಕ ವರನಿಗಾಗಿ ಹುಡುಕುತ್ತಾನೆ. ದೇಶ ದೇಶಗಳ ದೊರೆಗಳು ಬಂದರೂ ಯಾರೂ ಸಾವಿತ್ರಿಗೆ ತಕ್ಕವರೆನಿಸುವುದಿಲ್ಲ. ಆಗ ಸಾವಿತ್ರಿಯು

ತಾತ ಮಾಡದಿರು ಚಿಂತೆಯನು
ತೀರ್ಥಯಾತ್ರೆ ಮಾಡ್ವದಕಿನ್ನು
ಅಪ್ಪಣೆ ಪಾಲಿಸಿರೆನಗಿನ್ನು ನಾಥ
ಹುಡುಕಲು ಹೋಗುವೆನು [46]

ಹಡೆದವರ ಅಪ್ಪಣೆ ಪಡೆದು ತಾನೇ ತನ್ನ ಪತಿಯನ್ನು ಅರಸಿಕೊಂಡು ಸಾವಿತ್ರಿ ಹೊರಡುತ್ತಾಳೆ. ಹೆಣ್ಣು ಮಕ್ಕಳಿಗೆ ಆಯ್ಕೆಯ ಸ್ವಾತಂತ್ರ್ಯವಿದ್ದುದನ್ನು ಇಲ್ಲಿ ಕಾಣಬಹುದು. ದ್ಯುಮತ್ಸೇನನೆಂಬ ರಾಜನು ರಾಜ್ಯ ಭ್ರಷ್ಟನಾಗಿ ಅಡವಿಯಲ್ಲಿ ಹೆಂಡತಿ ಮಗನೊಡನೆ ನೇಮದಿಂದ ಜಪ, ತಪ, ಹೋಮಗಳನ್ನು ಮಾಡುತ್ತಾ ಇರುವುದನ್ನು ಸಾವಿತ್ರಿ ಕಂಡು ರಾಜ ಪುತ್ರ ಸತ್ಯವಾನನನ್ನು ವರಿಸಲು ತೀರ್ಮಾನಿಸುತ್ತಾಳೆ. ತನ್ನ ರಾಜ್ಯಕ್ಕೆ ಮರಳಿ ಬರುತ್ತಾಳೆ. ಇತ್ತ ಮಗಳ ಹಾದಿ ಕಾಯುತ್ತಿದ್ದ ಅಶ್ವಪತಿಯ ಅರಮನೆಗೆ ನಾರದರು ಬಂದು ಸಾವಿತ್ರಿ ಮೆಚ್ಚಿರುವ ಸತ್ಯವಾನನ ಆಯುಷ್ಯ ಅಲ್ಪವೆಂದು ತಿಳಿಸುತ್ತಾರೆ. ಇದನ್ನು ಕೇಳಿ ರಾಜನು ಮಗಳು ಬಂದು ತನ್ನ ಮನದ ಆಸೆಯನ್ನು ತಿಳಿಸಿದಾಗ

ಎನ್ನ ಹಡೆದವ್ವ ಬಿಡು ನಿನ್ನ ಮನದ್ಹಟವ
ಪೊಡವಿ ಆಳುವ ದೊರೆಯ ನೋಡಿ ಕೊಡುವೆ ನಿನ್ನ
ಕೇಡು ಬಯಸಲಿ ಬೇಡ [47]

ತಂದೆ ನಾನಾ ಪರಿಯಲ್ಲಿ ಹೇಳಿದರೂ ಕೇಳದೆ ಸಾವಿತ್ರಿ ಸತ್ಯವಾನನ ಕೈ ಹಿಡಿಯುತ್ತಾಳೆ. ದ್ಯುಮತ್ಸೇನನ ಬಳಿ ಬಂದು ಅಶ್ವಪತಿ ರಾಜನು ಮಗಳ ವಿವಾಹದ ವಿಷಯ ತಿಳಿಸಿದಾಗ

ನಿಮಗೆ ನಾವು ಸರಿಯೇ ಎನುತ
ಸುಮ್ಮನೇಕೆ ಹಾಸ್ಯವೆನುತ [48]

ಎಂದು ದ್ಯುಮತ್ಸೇನನು ಹೇಳುತ್ತಾನೆ. ಕಣ್ಣುಗಳಿಲ್ಲದ ಸತ್ಯವಾನನ ತಂದೆ ತಾಯಿಯರನ್ನು ಒಪ್ಪಿಸಿ ವಿವಾಹ ನಡೆಸುತ್ತಾನೆ ಅಶ್ವಪತಿ. ಹೀಗೆ ಸಾವಿತ್ರಿಯು ಪತಿ, ಅತ್ತೆ, ಮಾವನ ಸೇವೆಯನ್ನು ನಿಷ್ಠೆಯಿಂದ ಮಾಡುತ್ತಾ ಕಾಲ ಕಳೆಯುತ್ತಿರುವಾಗ ಸತ್ಯವಾನನ ಆಯುಷ್ಯ ಮುಗಿಯುತ್ತಾ ಬರುತ್ತದೆ. ಸಾವಿತ್ರಿಯು ಗೌರಿ ಪೂಜೆ (ವ್ರತ) ಮಾಡಲು ನಿರ್ಧರಿಸಿ ಹಿರಿಯರ ಅಪ್ಪಣೆ ಪಡೆದು ಮೂರು ದಿನ ನಿರಾಹಾರದಿಂದ ಗೌರಿಯ ವ್ರತ ಮಾಡುತ್ತಾಳೆ. ಸಮಿತ್ತುಗಳನ್ನು ತರಲು ಸತ್ಯವಾನ ಕಾಡಿಗೆ ಹೊರಡುತ್ತಾನೆ. ಸಾವಿತ್ರಿಯೂ ಆತನೊಡನೆ ಹೊರಡುತ್ತಾಳೆ. ವ್ರತದಿಂದ ನಿತ್ರಾಣಳಾದ ಸಾವಿತ್ರಿಯನ್ನು ಹಿರಿಯರು ತಡೆದರೂ ಆಕೆ ಪತಿಯ ಹಿಂದೆ ನಡೆಯುತ್ತಾಳೆ. ಆ ದಿನ ಪ್ರಾತಃ ಕಾಲದಲ್ಲಿ ಸತ್ಯವಾನ ಸಾವಿತ್ರಿಯರು ಕಾಡಿನಲ್ಲಿ ಹೋಗುತ್ತಿರುವಾಗ

ವನದ ಶೋಭೆ ನೋಡೆ ಚಂದ್ರಮುಖಿ
ಅಲ್ಲಿ ನೋಡೆ ಗಿಳಿ ನವಿಲುಗಳು ಇಲ್ಲಿ
ನೋಡೆ ಹರಿವೋ ಜಲಗಳು [49]

ಎಂದು ಸತ್ಯವಾನನ ಕಾಡನ್ನು ಅದರ ಸೊಬಗನ್ನು ವರ್ಣಿಸುವಾಗ ಸಾವಿತ್ರಿ ಅನ್ಯ ಮನಸ್ಕತೆಯಿಂದಲೇ ಉತ್ತರಿಸುತ್ತಾ ನಡೆಯುತ್ತಾಳೆ. ಹೂವು, ಹಣ್ಣು, ಸಂಗ್ರಹಿಸಿ ಬಳಲಿದ ಸಾವಿತ್ರಿ ಹಿಂದಿರುಗುವ ಮಾತನಾಡುತ್ತಾಳೆ. ಸತ್ಯವಾನ ಕಟ್ಟಿಗೆಗಾಗಿ ಮರ ಹತ್ತಿ ತಲೆ ನೋವೆಂದು ಇಳಿದು ಬಂದು ಸಾವಿತ್ರಿಯ ಮಡಿಲಿನಲ್ಲಿ ಮಲಗುತ್ತಾನೆ. ಯಮದೂತರು ಸತ್ಯವಾನನ ಪ್ರಾಣ ಹರಣಕ್ಕೆ ಬಂದು ಅವರ ಸುತ್ತ ಇದ್ದ ಅಗ್ನಿಯನ್ನು ಕಂಡು ಹೊರಟು ಹೋಗುತ್ತಾರೆ. ಆಗ ಮಹಿಷಾರೂಢನಾಗಿ ಯಮನೇ ಬರುತ್ತಾನೆ. ಸತ್ಯವಾನನ ಪ್ರಾಣವನ್ನು ತನ್ನ ಪಾಶದಲ್ಲಿ ಬಂಧಿಸಿ ಒಯ್ಯುವಾಗ ಸಾವಿತ್ರಿಯು ಸತ್ಯವಾನನ ದೇಹವನ್ನು ರಕ್ಷಿಸುವಂತೆ ವನ ದೇವತೆಗೆ ಆಣೆ ಮಾಡಿ ಯಮನ ಹಿಂದೆಯೇ ಹೋಗುತ್ತಾಳೆ. ಅದನ್ನು ಕಂಡ ಯಮನು ವರ ನೀಡಿ ಅವಳನ್ನು ಹಿಂದಕ್ಕೆ ಕಳಿಸಲು ಯತ್ನಿಸುತ್ತಾನೆ. ತನ್ನ ಅತ್ತೆ ಮಾವರಿಗೆ ಕಣ್ಣು ಮತ್ತು ರಾಜ್ಯ ದೊರಕಲೆಂಬ ವರ ಕೇಳುತ್ತಾಳೆ. ಅದನ್ನು ನೀಡಿ ಯಮ ಮುಂದೆ ಸಾಗಿದಾಗ ಮತ್ತೆ ಅವನನ್ನು ಅನುಸರಿಸುತ್ತಾಳೆ. ಎರಡನೇ ಬಾರಿ ತನ್ನ ತಂದೆಗೆ ನೂರು ಜನ ಗಂಡು ಮಕ್ಕಳಾಗುವಂತೆ ವರ ಪಡೆದು ಮತ್ತೂ ಹಿಂಬಾಲಿಸುತ್ತಾಳೆ. ಆಗ ಯಮನು ವರ ಕೊಟ್ಟ ಮೇಲೂ ಹಿಂಬಾಲಿಸುವುದೇಕೆಂದು ಕೇಳಿದಾಗ

ಮುಂದೆ ಪೋಗಿ ವಂದಿಸುತ
ಕಂದರ ಕೊಟ್ಟು ಸಲಹೆಂತೆನಲು
ಇಂದು ಕೊಟ್ಟೆನೆಂದು ನುಡಿದುನಡೆದಾಧರ್ಮಜನು [50]

ಹಾಗೆ ಹೇಳಿದ ಮೇಲೂ ಯಮನನ್ನು ಸಾವಿತ್ರಿ ಅನುಸರಿಸಿದಾಗ ಯಮನು ಮತ್ತೇಕೆ ಬರುವಳೆಂದು ಕೇಳಿದಾಗ 'ನೀ ಕೊಟ್ಟ ಪುತ್ರರ ಯಾರಿಗೆ ಪಡೆಯಲಿ' ಎಂದು ಸಿಕ್ಕಿ ಹಾಕಿಸುತ್ತಾಳೆ. ಯಮಧರ್ಮನು ಸೋತು

ಸತ್ಯವಾನನ ಪ್ರಾಣವನ್ನು ವಾಪಸ್ಸು ಕೊಡುತ್ತಾನೆ. ತನ್ನ ಪತಿಯ ಜೊತೆಗೆ ತಿರುಗಿ ಬಂದ ಸಾವಿತ್ರಿಯನ್ನು ಕಣ್ಣುಗಳನ್ನು ಪಡೆದುಕೊಂಡ ಅತ್ತೆ ಮಾವಂದಿರು ಬರಮಾಡಿಕೊಂಡು ತಡವೇಕಾಯಿತೆಂದು ಪ್ರಶ್ನಿಸುತ್ತಾರೆ. ಆಗ ಸಾವಿತ್ರಿ ಎಲ್ಲ ವೃತ್ತಾಂತವನ್ನು ಹೇಳುತ್ತಾಳೆ. ದ್ಯುಮತ್ಸೇನನ ರಾಜ್ಯ ಮರಳಿ ದೊರೆಯುತ್ತದೆ.

ಪತಿವ್ರತೆ ಸಾವಿತ್ರಿ ಸತ್ಯವಾನನ ಕಥೆಯ
ನಿತ್ಯದಲಿ ಭಕ್ತಿಂದ ಬರೆದೋದಿ ಕೇಳ್ದವರಿಗೆ
ಚತುರತನದಲಿ ಯಮದೂತರ ಸೋಲಿಸಲಹುದು । ಪತಿಯ
ಆಯುಷ್ಯ ಮುತ್ತೈದೆತನ ಹೆಚ್ಚುವುದು [51]

ಎಂಬ ಫಲಶ್ರುತಿಯೊಂದಿಗೆ ಈ ಕಥೆ ಮುಗಿಯುತ್ತದೆ. ಅಲ್ಪಾಯುಷಿಯಾದ ಪತಿಯನ್ನು ತನ್ನ ಪಾತಿವ್ರತ್ಯ ಪ್ರಭಾವದಿಂದ ಬದುಕಿಸಿಕೊಂಡ ಸಾವಿತ್ರಿಯ ಕಥೆಯು ಹೆಣ್ಣುಮಕ್ಕಳ ಪ್ರಥಮ ಆದ್ಯತೆಯಾದ ಮುತ್ತೈದೆತನವನ್ನು ಕಾಪಾಡಿಕೊಳ್ಳುವ ಮನದ ತುಡಿತವಾಗಿದೆ. ಸಾವಿತ್ರಿಯ ಪತಿಭಕ್ತಿ, ಅತ್ತೆ–ಮಾವಂದಿರಲ್ಲಿದ್ದ ಗೌರವ, ವಿಧೇಯತೆಗಳು ಹೆಣ್ಣು ಮಕ್ಕಳು ಬಾಳಬೇಕಾದ ರೀತಿಯನ್ನು ತಿಳಿಸಿಕೊಡುತ್ತದೆ. ಮನೋದೃಢತೆಯಿಂದ ಏನು ಬೇಕಾದರೂ ಸಾಧಿಸಬಹುದೆಂಬ ನೀತಿ ವೇದ್ಯವಾಗುತ್ತದೆ.

11. <u>ಅಷ್ಟಮಿ ಗೌರಿ (ಎಳೆ ಅಷ್ಟಮಿ):</u>

ದೊಡ್ಡಿ ಸುಧಾಬಾಯಿ ಈ ಕೃತಿಯನ್ನು ರಚಿಸಿದ್ದಾರೆ. ಭಾದ್ರಪದ ಮಾಸದ ಶುದ್ಧ ಅಷ್ಟಮಿಯಂದು ಈ ವ್ರತವನ್ನು ಆಚರಿಸುವ ವಾಡಿಕೆಯಿದೆ. ಹಿಂದಿನ ದಿನ ಅಂದರೆ ಸಪ್ತಮಿ ಅನುರಾಧಾ ನಕ್ಷತ್ರವಿರುವಾಗ ದಾರ ತಯಾರಿಸಿ ಅದನ್ನು ಬೆಳ್ಳಿ, ತಾಮ್ರ ಅಥವಾ ಮಣ್ಣಿನ ಚಟಿಗೆಯಲ್ಲಿ ಹಾಕಿ ಮೇಲೆ ಗೌರಿ ಮುಖ ಬರೆದು ಅಷ್ಟಮಿಯಿಂದ ಪೂಜಿಸಿ, ಮಾರನೇ ದಿನ ನವಮಿಯಂದು ದಾರವನ್ನು ಧರಿಸುವ ಸಂಪ್ರದಾಯವಿದೆಯೆಂದು ತಿಳಿದು ಬರುತ್ತದೆ. ಈ ವ್ರತದ ವಿಶೇಷವೆಂದರೆ ಹಿಂದಿನ ದಿನ ಮಾಡಿದ್ದ ಭಕ್ಷ್ಯದ ತಂಗಳನ್ನು ವ್ರತದ ದಿನ ಉಣ್ಣುವುದು. ಬಂದವರಿಗೂ ಅದನ್ನೇ ಬಡಿಸುವ ಪರಿಪಾಠವಿದೆ. ಈ ವ್ರತದ ಕಥೆ ಹೀಗಿದೆ.

ಚಂದ್ರಪುರದ ಅರಸು ಚಂದ್ರಪ್ರಭ. ಅವನಿಗೆ ಕಾಂತೆ, ಸುಕಾಂತೆ ಎಂಬ ಇಬ್ಬರು ಹೆಂಡತಿಯರು. ರಾಜ ಕಿರಿಯ ಹೆಂಡತಿ ಸುಕಾಂತೆಯೊಡನೆಯೇ ಇರುತ್ತಿದ್ದನು. ಒಮ್ಮೆ ರಾಜನು ಬೇಟೆಗೆ ಹೋದಾಗ ನಾಗಕನ್ನಿಕೆಯರು ಮಾಡುತ್ತಿದ್ದ ಈ ವ್ರತದ ಬಗ್ಗೆ ತಿಳಿದು ಕೈಯಲ್ಲಿ ದಾರ ಧರಿಸಿ ಬರುತ್ತಾನೆ.

ಚಿಕ್ಕ ರಾಣಿ ದಾರ ನೋಡಿದಾಕ್ಷಣದಿ ಎಸೆದಾಳು ಪಡವಲ ಗಿಡದ ಮೇಲೆ
ವಣ ವಣ ಗಿಡ ಚಿಗುರಿ ಹೂವುಕಾಯಿ ಆಗಿ ಕಷ್ಟ ಬಂದಿತು ಚಿಕ್ಕ ಹೆಂಡತಿಗೆ [52]

ಆ ದಾರವನ್ನು ಕೆಲಸದವಳು ತಂದು ಹಿರಿಯ ರಾಣಿಗೆ ಕೊಡುತ್ತಾಳೆ. ಕಾಂತೆಯು ಭಕ್ತಿಯಿಂದ ವ್ರತವನ್ನು ಮಾಡಿದಾಗ ಸಾಕ್ಷಾತ್ ಲಕ್ಷ್ಮೀದೇವಿಯೇ ಮುಪ್ಪಿನ ಮುತ್ತೈದೆಯಾಗಿ ಕಾಂತೆಯಿತ್ತ ಬಾಗಿನ ಸ್ವೀಕರಿಸುತ್ತಾಳೆ. ಆ ಹೊತ್ತಿಗೆ ರಾಜ್ಯ ಕಳೆದುಕೊಂಡಿದ್ದ ರಾಜ, ಲಕ್ಷ್ಮಿಯ ಶಾಪದಿಂದ ಹಂದಿ ಮುಖ ಹೊತ್ತ ಸುಕಾಂತೆ ಇಬ್ಬರೂ ಕಾಂತೆಯ ಬಳಿ ಬರುತ್ತಾರೆ. ರಾಜನಿಗೆ ರಾಜ್ಯ, ಸುಕಾಂತೆಗೆ ಹಿಂದಿನ ರೂಪ ಎರಡೂ ಲಕ್ಷ್ಮಿಯ ಪೂಜೆಯ ನಂತರ ದೊರಕುತ್ತದೆ. ಈ ವ್ರತ ಮಾಡುವ ವಿಧಾನವು ಶ್ರೀಮತಿ ದೊಡ್ಡಿ ಸುಧಾಬಾಯಿಯವರ ಹಾಡಿನಲ್ಲಿ ಹೀಗೆ ಬಂದಿದೆ.

ಹಿಂದಿನ ದಿನ ಅನುರಾಧ ನಕ್ಷತ್ರದಿ ಚೆಂದದಿ ದಾರ ತೆಕ್ಕೊಂಡು
ಸಣ್ಣ ಗಿಂಡಿಲಿ ಲಕ್ಷ್ಮಿ ಪ್ರತಿಮೆ ಸಹಿತ ಇಟ್ಟು ಆವಾಹನೆ ಮಾಡಬೇಕು [53]

ಈ ಸಣ್ಣ ಕೃತಿಯಲ್ಲಿ ಕವಯತ್ರಿಯು ಪೂಜಾ ವಿಧಾನ, ಕಥೆ, ಫಲಶ್ರುತಿ ಎಲ್ಲವನ್ನೂ ವಿವರಿಸಿದ್ದಾರೆ.

12. <u>ಗೋಪದ್ಮ ವ್ರತ:</u>

ಪಿ.ವಿ. ಕೃಷ್ಣಾಬಾಯಿ ಈ ಹಾಡನ್ನು ರಚಿಸಿದ್ದಾರೆ (ಅಪ್ರಕಟಿತ). ಗೋಪದ್ಮ ವ್ರತವು ಚಾತುರ್ಮಾಸ ವ್ರತವಾಗಿದೆ. ಪದ್ಮ ಪುರಾಣದಲ್ಲಿ ಇದರ ಉಲ್ಲೇಖವಿದೆ. ಆಷಾಢ ಶುದ್ಧ ಏಕಾದಶಿಯಿಂದ ಕಾರ್ತೀಕ ಶುದ್ಧ ದ್ವಾದಶಿಯವರೆಗೆ ನಾಲ್ಕು ತಿಂಗಳು ಈ ವ್ರತವನ್ನು ಆಚರಿಸಲಾಗುತ್ತದೆ. ಈ ವ್ರತದಲ್ಲಿ 33 ಸಂಖ್ಯೆಗೆ ವಿಶೇಷ ಪ್ರಾಧಾನ್ಯವಿದೆ. 33 ಪದ್ಮ, 33 ನಮಸ್ಕಾರ, 33 ಅರ್ಘ್ಯ ಹೀಗೆ 33 ಸಂಖ್ಯೆಗೆ ಮಹತ್ವವಿದೆ. ಐದು ವರ್ಷ ಆಚರಿಸಲಾಗುವ ಈ ವ್ರತದ ಕೊನೆಯಲ್ಲಿ ಗೋದಾನ ನೀಡುವ ನಿಯಮವಿದೆ. ಶ್ರೀಕೃಷ್ಣನ ತಂಗಿ ಸುಭದ್ರೆ ಈ ವ್ರತವನ್ನು ಮಾಡಿರುವುದಿಲ್ಲ. ಆಗ ಯಮನು ಅವಳ ಬೆನ್ನು ಹುರಿಯನ್ನು ಬೇಲಿಗೆ ಬಿಗಿದು, ನರವನ್ನು ತಂತಿಗೆ ಬಿಗಿಯಿರೆಂದು ಹೇಳುತ್ತಾನೆ. ಆಗ ಕೃಷ್ಣನು ಸುಭದ್ರೆಯಲ್ಲಿಗೆ ಬಂದು ಗೋಪದ್ಮ ವ್ರತದ ಮಹತ್ವ ತಿಳಿಸುತ್ತಾನೆ. ನಂತರ ಸುಭದ್ರೆ ಈ ವ್ರತವನ್ನು ಆಚರಿಸಿ ವಿಷ್ಣುಲೋಕ ಹೊಂದುತ್ತಾಳೆ. ಪಿ.ವಿ. ಕೃಷ್ಣಾಬಾಯಿಯವರು ರಚಿಸಿರುವ ಗೋಪದ್ಮದ ಹಾಡಿನಲ್ಲಿ ಈ ವ್ರತವನ್ನು ಮಾಡುವ ವಿಧಾನ, ಮಾಡಿದರೆ ಬರುವ ಫಲ, ಮಾಡದಿದ್ದರೆ ಉಂಟಾಗುವ ಪರಿಣಾಮ ಎಲ್ಲವೂ ದಾಖಲಾಗಿದೆ.

ಇಂದ್ರನ ಸಭೆಯಲ್ಲಿ ಚಂದ್ರ, ಸೂರ್ಯ ಇತರ ಎಲ್ಲ ದೇವತೆಗಳು ಶ್ರೀಕೃಷ್ಣನ ಸಹಿತ ಕುಳಿತಿರುತ್ತಾರೆ. ಗೋಪದ್ಮ ವ್ರತವನ್ನು ಯಾರು ಮಾಡಿರುವರೆಂಬ ವಿಚಾರ ಬರುತ್ತದೆ. ಇಂದ್ರದೇವಿ, ಚಂದ್ರದೇವಿ, ತಾರಾದೇವಿ, ತುಳಸಾದೇವಿ ಎಲ್ಲರೂ ಮಾಡಿದ್ದು ಶ್ರೀಕೃಷ್ಣನ ತಂಗಿ ಸುಭದ್ರೆ ಮಾಡಿಲ್ಲವೆಂದು ತಿಳಿದು ಬರುತ್ತದೆ.

ಅವಳ ಬೆನ್ನ ಚರ್ಮ ತೆಗೆದು ತವಕದಿಂದ ಭೇರಿಗ್ಹಾಕಿ
ಅವಳ ಬದಿಯ ಚರ್ಮ ತಮಟೆಗ್ಹಾಕಿ ಎಂದರೂ [54]

ಈ ಮಾತನ್ನು ಕೇಳಿದ ಕೃಷ್ಣ ತಂಗಿಯ ಮನೆಗೆ ಬರುತ್ತಾನೆ. ಸುಭದ್ರೆ ಅಣ್ಣನ ಪಾದಗಳನ್ನು ತೊಳೆದು, ರನ್ನದ ಪೀಠದಲ್ಲಿ ಕುಳ್ಳಿರಿಸಿ, ಕೃಷ್ಣನನ್ನು ಪೂಜಿಸಿ, ಭಕ್ತಿಯಿಂದ ನಮಸ್ಕರಿಸಿ ತನ್ನ ಅಣ್ಣನ ಮನೆಯವರು ಕ್ಷೇಮವೇ ಎಂದು ಪ್ರಶ್ನಿಸುತ್ತಾಳೆ. ಆಗ ಕೃಷ್ಣನು ಹರುಷದಿಂದ ತಂಗಿಗೆ ವ್ರತದ ಬಗ್ಗೆ ತಿಳಿಸುತ್ತಾನೆ. ದೇವಕಿಯಂತಹ ತಾಯಿ, ವಸುದೇವನಂಥ ತಂದೆ, ಕೃಷ್ಣನಂಥ ಅಣ್ಣ, ಅರ್ಜುನನಂಥ ಗಂಡನಿರುವಾಗ ವ್ರತಗಳೇಕೆ ಎಂದು ಸುಭದ್ರೆ ಪ್ರಶ್ನಿಸಿದಾಗ ಕೃಷ್ಣ 'ರೂಢಿಯಲ್ಲಿ ಮನುಜಧರ್ಮ ನೋಡು ಎಂದನೂ', ನರಕದಲ್ಲಿ ಗೋಪದ್ಮ ಮಾಡದ ಸ್ತ್ರೀಯರಿಗೆ ನೀಡುವ ಶಿಕ್ಷೆ ಬಗ್ಗೆ ಕೃಷ್ಣ ಹೇಳುತ್ತಾನೆ. ಆಗ ಸುಭದ್ರೆ ವ್ರತ ಮಾಡುವ ವಿಧಾನ ಕೇಳುತ್ತಾಳೆ. ತಂಗಿಯ ಮಾತನ್ನು ಕೇಳಿ ಕೃಷ್ಣ ವ್ರತದ ಕ್ರಮವನ್ನು ತಿಳಿಸುತ್ತಾನೆ.

ಅಚ್ಚ ಕರೀ ಆಕಳು ಕಟ್ಟೋ ಕಡೆ ಮೆಟ್ಟೋ ಕಡೆ ।
ಚಚ್ಚೌಕವಾಗಿ ಗೋಮಯದಿ ಸಾರಿಸು ॥
ಮುತ್ತು ಹವಳ ಹಾಕಿ ಕಲ್ಲು ಕುಟ್ಟಿದ ರಂಗೋಲಿಯಲ್ಲಿ
ಚಕ್ರ ಶಂಖ ಗದಾಪದ್ಮ ಮಧ್ಯ ಕಮಲವೂ ॥
ಬರೆವ ರಂಗವಾಲಿಗೇ ತುಂಬಿ ಪಂಚವರ್ಣವನ್ನು
ಅರಿಶಿನ ಕುಂಕುಮ ಪೂಜೆ ಮಾಡಿ ಹರುಷದಿಂದಲೀ ॥

ಗೋವು ಬರೆದು ಕರುವ ಬರೆದು । ಗೋವಿನುದರದಲಿ
ಮೂವತ್ಮೂರು ಪದ್ಮ ಕರುವಿನುದರದಿ ಐದು ಪದ್ಮವೂ [55]

ಮೂವತ್ತೆಂಟು ಪದ್ಮಗಳನ್ನು ಬರೆದು ಅರಿಶಿನ, ಕುಂಕುಮ, ಗಂಧ, ಅಕ್ಷತೆಗಳಿಂದ ಪೂಜಿಸಿ ನೈವೇದ್ಯ ಮಾಡಿ, ಮೂವತ್ತೆಂಟು ನಮಸ್ಕಾರ, ಮೂವತ್ತೆಂಟು ಅರ್ಘ್ಯ ಕೊಡಬೇಕು ಎಂದು ಹೇಳುತ್ತಾನೆ. ಐದು ವರ್ಷ ಈ ವ್ರತ ಮಾಡಿ ಪ್ರತಿ ವರ್ಷವೂ ದಾನ ಕೊಡಬೇಕು ಎಂದು ಹೇಳುತ್ತಾನೆ. ದಾನ ಕೊಡುವ ಎಲೆ, ಅಡಿಕೆ, ಭಕ್ಷ್ಯ, ದಕ್ಷಿಣೆ ಎಲ್ಲವೂ 38 ಸಂಖ್ಯೆಯಲ್ಲಿರಬೇಕು. ದಾನವನ್ನು ಅಣ್ಣ ತಮ್ಮಂದಿರಿಗೆ ಕೊಡಬೇಕು. ಸೋದರರಿಲ್ಲದವರು ವೇದಶಾಸ್ತ್ರ ತಿಳಿದ ಬ್ರಾಹ್ಮಣನಿಗೆ ಕೊಡಬೇಕು ಎನ್ನುತ್ತಾನೆ. ಈ ವ್ರತವನ್ನು ಮಾಡಿದರೆ ದೊರಕುವ ಫಲವನ್ನು ಹೀಗೆ ತಿಳಿಸುತ್ತಾರೆ.

ಭಕ್ತಿಯಿಂದ ಈ ವ್ರತವ ಸ್ತೋತ್ರದಿಂದ ಮಾಡೆ ।
ಸತ್ಪುತ್ರ ಸಂತಾನ ಅಷ್ಟೈಶ್ವರ್ಯ ಕೊಡುವ ಭಕ್ತ ವತ್ಸಲಾ ॥

ನೇಮದಿಂದ ಈ ವ್ರತವ ಪ್ರೇಮದಿಂದ ಮಾಡಿದರೇ ।
ಗೋವಪಾಲ ಶ್ರೀಕೃಷ್ಣಸ್ವಾಮಿ ಅಷ್ಟೈಶ್ವರ್ಯ ಕೊಡುವನೂ ॥

ಐದು ವರ್ಷ ಈ ವ್ರತವ ಐದೆಯರು ಮಾಡಿದರೇ ।
ಐದೆತನ ಸ್ಥಿರವಾಗಿ ಕೊಡುವ ಐದು ರೂಪನೂ [56]

ಹೀಗೆ ಫಲಶ್ರುತಿ ತಿಳಿಸಿ ತಮ್ಮ ಆರಾಧ್ಯ ದೈವ 'ಸಿತಗಿರೀಶ ನರಸಿಂಹನಿಗೆ' ಈ ಕೃತಿಯನ್ನು ಅಂಕಿತಗೊಳಿಸುತ್ತಾರೆ. 42 ನುಡಿಗಳ ಈ ಹಾಡಿನಲ್ಲಿ ವ್ರತದ ಮಹಿಮೆ, ಮಾಡುವ ವಿಧಾನ, ಫಲಶ್ರುತಿ ಎಲ್ಲವೂ ದಾಖಲಾಗಿದೆ.

ಕೋಲಾರ ಪದ್ಮಾಬಾಯಿಯವರು 'ಗೌರೀಪೂಜಾಪಾದರಿ' ಎನ್ನುವ ಗ್ರಂಥವನ್ನು ರಚಿಸಿದ್ದು, ಅದರಲ್ಲಿ 38 ಹಾಡುಗಳಿವೆ. ಚೈತ್ರದಿಂದ ಮೊದಲುಗೊಂಡು ಪ್ರತಿ ಮಾಸದಲ್ಲಿ ಆಚರಿಸುವ ಗೌರೀ ವ್ರತಗಳ ಬಗ್ಗೆ ಹಾಡು ರಚಿಸಿದ್ದಾರೆ. ಆಶ್ವಯುಜ ಸೀಗೇಗೌರಿ, ಕಾರ್ತೀಕ ಕೇದಾರೇಶ್ವರಿ ಗೌರಿ, ಕಾರ್ತೀಕ ಗೌರಿ ಕಾತ್ಯಾಯಿನಿ, ಹಿರೀಗೌರಿ, ಮಾಘದ ಮೌನಗೌರಿ ವ್ರತಗಳ ಕುರಿತು ಹೇಳುತ್ತಾರೆ.

ಸೀಗೇಗೌರಿಯ ಪೂಜೆಯನ್ನು ಆಶ್ವೀಜ ಶುದ್ಧ ದ್ವಾದಶಿಯಿಂದ ಹುಣ್ಣಿಮೆಯವರೆಗೆ ಮಾಡಲಾಗುತ್ತದೆ. ಐದನೆ ದಿನ ಉಡಿ ತುಂಬಿ, ಸಕ್ಕರೆ, ಬೆಲ್ಲ, ತಂಬಿಟ್ಟನಾರತಿ ಮಾಡಿ ಬೆಡಗಿನ ವನದಲ್ಲಿ ಬಿಡಬೇಕು ಎಂದು ಪದ್ಮಾಬಾಯಿ ಹೇಳುತ್ತಾರೆ.

ಕಾರ್ತೀಕ ಅಮಾವಾಸ್ಯೆಯ ದಿನ ಕೇದಾರೇಶ್ವರಿ ಗೌರಿ ಪೂಜೆ ಮಾಡಲಾಗುತ್ತದೆ. ಈ ಗೌರಿಗೆ

ಇಪ್ಪತ್ತೊಂದು ಗ್ರಂಥಿಯದಾರ ।
ಇಪ್ಪತ್ತೊಂದು ಎಲೆ ಅಡಿಕೆ ॥
ಇಪ್ಪತ್ತೊಂದು ಅರಿಶಿನ ಬೇರನು ।
ಇಪ್ಪತ್ತೊಂದು ಫಲಗಳನಿರಿಸುವೆ [57]

ಎನ್ನುವುದು ವಿಶೇಷ

ಕಾರ್ತೀಕ ಶುದ್ಧ ತದಿಗೆಯಿಂದ ಒಂದು ತಿಂಗಳ ಕಾಲ ಕಾತ್ಯಾಯಿನಿ ಗೌರಿ ಪೂಜೆ ನಡೆಯುತ್ತದೆ. ಮದುವೆಯಾಗದ ಹೆಣ್ಣು ಮಕ್ಕಳಿಗೆ ವಿವಾಹವಾಗುವುದು ಮತ್ತು ವಿವಾಹಿತ ಸ್ತ್ರೀಯರಿಗೆ ಸೌಭಾಗ್ಯ ಹೆಚ್ಚುವುದು.

ಹಿರೇಗೌರಿಯ ಪೂಜೆ ಕಾರ್ತೀಕ ಶುದ್ಧ ದ್ವಾದಶಿಯಂದು ಆಚರಿಸಲ್ಪಡುತ್ತದೆ.

13. <u>ಮಾಘದ ಮೌನಗೌರಿ:</u>

ಮಾಘ ಶುದ್ಧ ತದಿಗೆಯಿಂದ ಫಾಲ್ಗುಣ ಶುದ್ಧ ತದಿಗೆಯವರೆಗೆ ಮೌನಗೌರಿ ವ್ರತ ಆಚರಿಸಲಾಗುತ್ತದೆ. ಒಂದು ತಿಂಗಳು ಬೆಳಗಿನ ಜಾವ ಎದ್ದು ಮೌನವಾಗಿ ಪೂಜೆ ಮಾಡಿ ನಂತರ ಸೂರ್ಯನನ್ನು ನೋಡಿ

ಮಾತನಾಡಬೇಕು. ಗೌರಿಯನ್ನು ಕೂರಿಸುವುದು ಹೇಗೆಂಬ ವಿವರಗಳನ್ನು ಈ ಹಾಡಿನ ಪ್ರಾರಂಭದಲ್ಲಿ ಪದ್ಮಾಬಾಯಿ ನೀಡುತ್ತಾರೆ.

ಅರಿಶಿನ ಕೊಂಬಿನಲಿ । ಅರಿಸಿಗೌರಿಯ ಸ್ಮರಿಸಿ ।
ಅರಿಶಿನದ ವಸ್ತ್ರಗಳ । ನುಡಿಸುತ್ತಾ ॥
ಹರನರಸಿ ಗೌರಿಗೆ । ಅರಿಶಿನ, ಕುಂಕುಮ ।
ಕರಿಮಣಿ, ಮಾಂಗಲ್ಯ ಕಟ್ಟುವೆನಾ [58]

ಗೌರಿಯನ್ನು ಸ್ಥಾಪಿಸಿ, ಪೂಜಿಸಿ, ನೈವೇದ್ಯ, ಆರುತಿಗಳನ್ನು ಮಾಡಿ ಫಾಲ್ಗುಣ ಮಾಸ ಶುದ್ಧ ತದಿಗೆಯಂದು ವಿಸರ್ಜಿಸುತ್ತಾರೆಂದು ಈಕೆ ತಿಳಿಸುತ್ತಾರೆ.

ಫಾಲ್ಗುಣಸಿತ ತದಿಗೆ । ಫಾಲನೇತ್ರನ ಸತಿಗೆ ।
ಮೇಲುತ್ಸವಗೈದು । ಹೂವೀಳ್ಯವ ॥
ಮೇಲುತ್ಸವಗೈದು । ಹೂವಿನ ವನದಲ್ಲಿ
ಬೀಳ್ಗೊಟ್ಟು ವ್ರತವನ್ನು ಮುಗಿಸುವೆನು [59]

ಮೌನಗೌರಿಯು ಸಂತಾನ, ಸಂಪತ್ತು, ಮುತ್ತೈದೆತನ ನೀಡುವಳೆಂದು ತಿಳಿಸುತ್ತಾರೆ.

14. <u>ರಥಸಪ್ತಮಿ:</u>

ರಥಸಪ್ತಮಿಯಂದು ಸೂರ್ಯನು ರಥವನೇರಿ ಹೊರಡುವನೆಂದು ಹೇಳಲಾಗುತ್ತದೆ. ಅಂದು ಏಳು ಎಕ್ಕದ ಎಲೆಗಳನ್ನು ಇಟ್ಟುಕೊಂಡು ಸ್ನಾನ ಮಾಡುತ್ತಾರೆ. ಅಂದಿನ ದಿನವೂ ಎಳ್ಳುಬೆಲ್ಲ ನಿವೇದಿಸಿ ಬೀರುತ್ತಾರೆ. ಚಿಕ್ಕ ಮಕ್ಕಳಿಗೆ (5 ವರ್ಷದೊಳಗಿನ) ಹುಟ್ಟಿದ ವರ್ಷದಿಂದ ಐದು ವರ್ಷ ತುಂಬುವವರೆಗೆ 'ಕರಿ ಎರೆಯುವ' ಶಾಸ್ತ್ರ ಮಾಡುತ್ತಾರೆ. ಕೆಲವು ಕಡೆ ಸಂಕ್ರಾಂತಿಯ ದಿನವೇ ಇದನ್ನು ಮಾಡುತ್ತಾರೆ.

ಸೂರ್ಯನು ರಥಸಪ್ತಮಿಯಂದು ರಥವನ್ನೇರೆ ಮೂರು ಲೋಕ ಬೆಳಗುತ್ತ ತಮವನ್ನು ಭೇದಿಸುವನೆಂದು ಅಂಬಾಬಾಯಿ ಹೇಳುತ್ತಾರೆ.

ಸಪ್ತ ಹಯೆಗಳ್ ಕಟ್ಟುತ । ಚಕ್ರೇಕ ರಥಕೆ
ಸಪ್ತ ಋಷಿಗಳ್ ಪೊಗಳುತ । ಅರುಣ ಸಾರಥ್ಯ
ಸಪ್ತ ಜಿಹ್ವನ ತೆರದಿ ತೋರುತ
ಸಪ್ತ ಶರಧಿಯ ದಾಟಿ ಸಾರುತ
ಸಪ್ತಗಿರಿ ಮೇರು ಸುತ್ತುತಾ ರಥ
ಸಪ್ತಮಿ ಶುಭ ದಿವಸದಲ್ಲಿ [60]

ಉತ್ತರಾಯಣ ಪುಣ್ಯ ಕಾಲದಲ್ಲಿ ತನ್ನ ಪತ್ನೀಸಮೇತನಾಗಿ ರಥವೇರಿ ಬಂದು ಉತ್ತಮರಿಗೆ ಒಳ್ಳೆಯ ದಾರಿ ತೋರುವನೆಂದು ಅಂಬಾಬಾಯಿ ಹೇಳುತ್ತಾರೆ. ಪಿ.ವಿ. ಕೃಷ್ಣಾಬಾಯಿಯವರೂ ಒಂದು ಹಾಡನ್ನು ಬರೆದಿದ್ದು ಸೂರ್ಯನಿಗೆ ಆರತಿ ಬೆಳಗುವ ಮೂಲಕ ಸ್ತುತಿಸುತ್ತಾರೆ.

ಅಜ್ಞಾನವ ಪರಿಹರಿಸೆನುತಾ । ವರ
ಸುಜ್ಞಾನವನಿತ್ತು ಪೊರೆ ಎನುತಾ । ಸಿರಿ
ಭಾಗ್ಯವನಿತ್ತು ಪರಿಪಾಲಿಸೆನುತಾ । ವರ
ಸಂಜ್ಞಾದೇವಿಯ ರಮಣನಿಗೆ ರತ್ನಾದಾರತಿಯಾ ಬೆಳಗೀರೆ [61]

ರಥಸಪ್ತಮಿಯಂದು ಚಿಕ್ಕ ಮಕ್ಕಳಿಗೆ ದೃಷ್ಟಿ ಪರಿಹಾರಕ್ಕೆಂದು 'ಕರಿ' ಎರೆಯುತ್ತಾರೆ. ಬದರೀ ಫಲ (ಬೋರೇ ಹಣ್ಣು) ಕಾಸು, ಕಬ್ಬಿನ ತುಂಡುಗಳು, ಇತ್ಯಾದಿಗಳನ್ನು ಮಗುವಿಗೆ ತಲೆ ಮೇಲೆ ಎರೆದು ಆರತಿ ಮಾಡಿ ಮುತ್ತೈದೆಯರನ್ನು ಕರೆದು ಅರಿಶಿನ ಕುಂಕುಮ ತಾಂಬೂಲ ನೀಡುತ್ತಾರೆ.

ಫಲವ ನೆರೆದರು ಬದರಿ ಫಲವನೆರೆದರು ಶ್ರೀರಾಮಕೃಷ್ಣರಿಗೆ ಬೇಗಾ
ಬನ್ನಿ ಶ್ರೀಕೃಷ್ಣನಿಗೆ ಎಣ್ಣೆ ಹಚ್ಚಿ ಎರೆದು ಬೇಗ । ಕೆನ್ನೆಗೆ ದೃಷ್ಟಿಬೊಟ್ಟನಿಟ್ಟು
ಪಟ್ಟೆ ಪೀತಾಂಬರ ಉಡಿಸಿದರು [62]

ಮಗುವಿಗೆ ಕರಿ ಎರೆದು ಆರತಿ ಮಾಡಿ ಎಳ್ಳು ಬೆಲ್ಲ ಬೀರುವ ಸಂಪ್ರದಾಯವಿದೆ.

15. <u>ಅನಂತವ್ರತ ಕಥೆ:</u>

ಭವಿಷ್ಯೋತ್ತರ ಪುರಾಣದಲ್ಲಿ ಪ್ರಸ್ತಾಪಿಸಿರುವ ಅನಂತನ ಚತುರ್ದಶಿ ವ್ರತವನ್ನು ಭಾದ್ರಪದ ಶುದ್ಧ ಚತುರ್ದಶಿಯಂದು ಆಚರಿಸಲಾಗುತ್ತದೆ. ಪಾಂಡವರು ವನವಾಸ ಕಾಲದಲ್ಲಿ ಕಷ್ಟ ಪಡುತ್ತಿದ್ದ ಸಂದರ್ಭದಲ್ಲಿ ಶ್ರೀಕೃಷ್ಣನು ಈ ವ್ರತದ ಬಗ್ಗೆ ಪಾಂಡವರಿಗೆ ತಿಳಿಸುತ್ತಾನೆ. ಅಂಬಾಬಾಯಿಯವರು 36 ವಾರ್ಧಕ ಷಟ್ಪದಿಗಳಲ್ಲಿ ಈ ವ್ರತ ಕಥೆ ಹಾಡನ್ನು ರಚಿಸಿದ್ದಾರೆ. ಗಿರಿಯಮ್ಮನವರ ಒಂದು ಕೃತಿಯು ದೊರೆತಿದೆ. ಇಂದಿರಾಬಾಯಿ ವಾ. ಕಟ್ಟಿಯವರು ಅನಂತನ ಕಥೆ ಹಾಡನ್ನು ರಚಿಸಿದ್ದಾರೆ. ಹಿಂದೆ ಈ ವ್ರತ ಮಾಡಿ ಯಾರು ಯಾವ ಫಲಗಳನ್ನು ಪಡೆದರೆಂಬ ಧರ್ಮರಾಯನ ಮಾತಿಗೆ ಕೃಷ್ಣ ಕಥೆಯನ್ನು ಹೇಳುತ್ತಾನೆ. ಕೃತಯುಗದಲ್ಲಿ ಸುಮಂತನೆಂಬ ಬ್ರಾಹ್ಮಣನು ಭೃಗುಮುನಿಯ ಮಗಳು ದೀಕ್ಷೆಯನ್ನು ವಿವಾಹವಾಗುತ್ತಾನೆ. ಇವರಿಗೆ ಶೀಲೆ ಎಂಬ ಮಗಳು ಜನಿಸುತ್ತಾಳೆ. ದೀಕ್ಷೆಯು ಮರಣ ಹೊಂದಿದ್ದರಿಂದ ಕರ್ಕಸಿ ಎಂಬಾಕೆಯನ್ನು ಸುಮಂತನು ವಿವಾಹವಾಗುತ್ತಾನೆ. ಕಠಿಣಳಾಗಿ, ಕ್ರೂರಳಾದ ಕರ್ಕಸಿ ಆಚಾರ ಹೀನಳೂ ಆಗಿದ್ದಳು. ಮಗಳು ಶೀಲೆ ಸದ್ಗುಣಗಳಿಂದ ತುಂಬಿ ಬೆಳೆದವಳು. ಅಂಬಾಬಾಯಿ ಅವಳ ವಿವಾಹ ಪ್ರಸಂಗವನ್ನು ಹೇಳುತ್ತಾರೆ.

ದಿನ ದಿನಕೆ ವರ್ಧಿಸುವ ತನಯಳ್ಯೌವ್ವನ ಕಂಡು ।
ಮನದಿ ಚಿಂತಿಸುತಿರುವ ಅನಿತರೊಳು ಕೌಂಡಿಣ್ಯ ।
ಮುನಿಯೋರ್ವ ಕನ್ಯಾರ್ಥಿಯಾಗಿ ಬರುತಿರೆ ಧಾರೆ ಎರೆದು ಪಾಥೇಯ ಕೊಡಲು ।
ವನಿತೆಯನು ಬೆಸಗೊಳಲು ಕನಲೆ ಕರ್ಕಸಿ ಚಂಡಿ ।
ತನಗೆ ತೋರಿದನಿತ್ತು ತನಯಳಿಗೆ ಬುದ್ಧಿಯನು ।
ವಿನಯದಲಿ ಪೇಳಿ ಪತಿ ಮನದಂತೆ ನಡೆ ಎನುತ ಘನರಥವನಿತ್ತೂ ಕಳುಹೆ [63]

ಪತಿಯೊಡನೆ ಹೊರಟ ಶೀಲೆ ಮಾರ್ಗ ಮಧ್ಯದಲ್ಲಿ ಪತಿಯು ಮಧ್ಯಾಹ್ನದ ಕರ್ಮಗಳನ್ನು ನಡೆಸಲು ನದಿಗೆ ಹೊರಡುತ್ತಾನೆ. ಅಲ್ಲಿ ಅನೇಕ ಸ್ತ್ರೀಯರು ವ್ರತ ಮಾಡುವುದನ್ನು ಕಂಡು ಶೀಲೆ ಅವರನ್ನು ಕೇಳುತ್ತಾಳೆ. ಶೀಲೆಯು ತಾನೂ ಆ ವ್ರತವನ್ನು ಆಚರಿಸಲು ಮನದಲ್ಲಿ ಯೋಚಿಸಿ ಅವರಿಂದ ವ್ರತದ ವಿಧಾನವನ್ನು ಕೇಳುತ್ತಾಳೆ.

ದರ್ಭೆಯಿಂದ ಅನಂತನಾಕೃತಿಯ ರಚಿಸುತಲಿ ।
ಶುಭ್ರ ಕಲಶವನಿಟ್ಟು ದೋರ ಸಹಿತದಿ ಪೂಜೆ ।
ಹಬ್ಬಿ ಜಗ ತುಂಬಿಹನನಂತ ನಾಮಕನೆಂದು ವಿವಿಧೋಪಚಾರದಿ ।
ಶುಭ್ರ ವಸ್ತ್ರಾಕ್ಷತೆಗಳಿಂಧೂಪ ದೀಪ ಫಲ ।
ಗರ್ಭದಲಿ ಜಗವ ಧರಿಸಿದಗೆ ಗೈಯುತ ಎರಗಿ ।
ಅಭ್ರಮದ ಸದ್ಭಕ್ತಿಯಿಂದ ಸ್ತೋತ್ರವಗೈದು ಧರಿಸುವುದು ಸೂತ್ರ ಮುದದಿ [64]

ಶೀಲೆಯು ತಾನು ಪೂಜೆ ಮಾಡಿ ದೋರವನ್ನು ಧರಿಸಿ ಹಿಂದಿರುಗಿ ಬಂದು ರಥದಲ್ಲಿ ಕುಳಿತಿರುತ್ತಾಳೆ. ಕೌಂಡಿಣ್ಯನ ಮನೆ ಸಿರಿ ಸಂಪತ್ತಿನಿಂದ ತುಂಬಿ ಹೋಗುತ್ತದೆ. ಒಂದು ದಿನ ಕೌಂಡಿಣ್ಯ ತನ್ನ ಹೆಂಡತಿಯ ಕೈಲಿದ್ದ ದಾರದ ಬಗ್ಗೆ ತಿಳಿದು ಕೋಪದಿಂದ ಅದನ್ನು ಕಿತ್ತು ಅಗ್ನಿಗೆ ಹಾಕುತ್ತಾನೆ. ಶೀಲೆ ತಕ್ಷಣ ದುಃಖದಿಂದ ಅದನ್ನು ಹಾಲಿನಲ್ಲಿ ನೆನೆಸಿ ಎತ್ತಿಡುತ್ತಾಳೆ. ಇದರಿಂದ ಸಂಪತ್ತನ್ನೆಲ್ಲ ಕಳೆದುಕೊಂಡು ಕೌಂಡಿಣ್ಯ ಪತ್ನಿಯಿಂದ ಅನಂತನ ಮಹಿಮೆಯನ್ನು ಅರಿಯುತ್ತಾನೆ. ಅನಂತನನ್ನು ಕಾಣಲು ಕಾಡಿಗೆ ಹೊರಟ ಕೌಂಡಿಣ್ಯನು ದಾರಿಯಲ್ಲಿ ಸಿಕ್ಕ ಪಶು, ಪಕ್ಷಿಗಳನ್ನು 'ಅನಂತನನ್ನು ಕಂಡಿರಾ' ಎಂದು ಪ್ರಶ್ನಿಸುತ್ತಾ ಬರುತ್ತಾನೆ. ಗಿರಿಯಮ್ಮನ ಕೃತಿಯಲ್ಲಿ ಈ ಪ್ರಸಂಗವು ಅಕ್ಕ ಮಹಾದೇವಿಯು ಚನ್ನಮಲ್ಲಿಕಾರ್ಜುನನನ್ನು ಕಾಣಲು ಹಂಬಲಿಸಿ ಗಿಡ, ಮರ, ಪಶು, ಪಕ್ಷಿಗಳನ್ನು 'ಮಲ್ಲಿಕಾರ್ಜುನನನ್ನು ಕಂಡಿರಾ' ಎಂದು ಪ್ರಶ್ನಿಸುವುದನ್ನು ನೆನಪಿಗೆ ತರುತ್ತದೆ.

ತೀವ್ರದಲಿ ಮುನಿ ಬರುವ ಪಥದಲೀ ।
ತಾವಿನಲಿ ಗಾರ್ಧಭವ ಕಂಡನು ।
ತಾವು ತಮ್ಮೊಳಗ್ದರಿವ ಸರಸಿಯ ಕಂಡು ಕೇಳಿದನೂ ॥
– – – – – – – – – – – – – – – – – – –

ಅಸುರೋದ್ಧರನ ನೀವು ಕಂಡಿರೆಂದೆನುತಾ ।
ದೆಸೆದೆಸೆಗೆ ಹುಡುಕುತಲೆ ಬರುತಿರೆ
ವಾಯಸವು ಒಣಮರದ ಮೇಲಿರೆ ಕಂಡು ಕೇಳಿದನೂ [65]

ಕಂಗೆಟ್ಟು, ಅನಂತನನ್ನು ಕಾಣಲು ಹಂಬಲಿಸಿ ಬರುತ್ತಿರುವ ಕೌಂಡಿಣ್ಯನ ಮುಂದೆ ಶ್ರೀಹರಿ ವೃದ್ಧನ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಅನಂತನನ್ನು ಕಂಡಿರುವನೇ ಎಂದು ಆ ಬ್ರಾಹ್ಮಣನನ್ನು ಕೇಳಿದಾಗ ವೃದ್ಧನು ತಾನೇ ಅನಂತನೆಂದು ತನ್ನ ಅದ್ಭುತ ರೂಪದ ದರ್ಶನ ಮಾಡಿಸುತ್ತಾನೆ. ಶ್ರೀಹರಿಯ ಆ ರೂಪವನ್ನು ಅಂಬಾಬಾಯಿ ಹೇಳುವ ರೀತಿ ಇಲ್ಲಿದೆ.

ಶಂಖ ಚಕ್ರಾಂಕಿತದ ಚತುರ್ಭುಜವು ಶ್ರೀವತ್ಸ ।
ಕುಂಕುಮಾಂಕಿತ ಚರಣ ಅರುಣವರ್ಣಾಂಬರವು ।
ಕಂಕಣವು ಕಟಿಸೂತ್ರ ಕಂಠಮುತ್ತಿನ ಹಾರ ಶಿರದಿ ಮುಕುಟವು ತಿಲಕವು ॥
ಸಂಕಟವ ಪರಿಹರಿಪ ವದನಾರವಿಂದ ಭೂ ।
ಪಂಕಜೋದ್ಭವೆಯರೆಡಬಲದಿ ಶೋಭಿಸುತಿರಲು
ತಾ ಕಂಡು ಮುನಿತನುವು ರೋಮಾಂಚವೇರುತಲಿ ನುತಿಸಿ ಮನದಣಿಯ ನಮಿಸೆ [66]

ಹರಿಯನ್ನು ಸಾಕ್ಷಾತ್ಕಾರ ಮಾಡಿಕೊಂಡು ಅನುಗ್ರಹ ಪಡೆದ ಕೌಂಡಿಣ್ಯನು ಹಿಂದಿರುಗಿ ಬಂದು ತನ್ನ ಪತ್ನಿಯೊಡನೆ ಈ ವ್ರತವನ್ನು ಆಚರಿಸುತ್ತಾನೆ ಎಂದು ಕೃಷ್ಣನು ಧರ್ಮರಾಜನಿಗೆ ಹೇಳುತ್ತಾನೆ.

ಈ ವ್ರತವನ್ನು ಮಾಡಿ ಉದ್ಯಾಪನೆ ಮಾಡಿದವರಿಗೆ ಬೇಡಿದ ಇಷ್ಟಾರ್ಥಗಳನ್ನು ಅನಂತನಾದ ಶ್ರೀಹರಿ ನೀಡುವನು ಎಂಬ ಫಲ ಶ್ರುತಿಯೊಂದಿಗೆ ಕೃತಿ ಮುಕ್ತಾಯವಾಗುತ್ತದೆ.

16. ಸತ್ಯನಾರಾಯಣ ಕಥೆ:

ಓರವಾಯಿ ಲಕ್ಷ್ಮೀದೇವಮ್ಮ ಮತ್ತು ಇಂದಿರಾಬಾಯಿ ಕಟ್ಟಿಯವರು ಸತ್ಯನಾರಾಯಣ ಕಥೆಯ ಹಾಡನ್ನು ಬರೆದಿದ್ದಾರೆ. ಸ್ಕಂದಪುರಾಣದ ರೇವಾ ಖಂಡದಲ್ಲಿ ಈ ವ್ರತದ ಪ್ರಸ್ತಾಪವಿದೆ. ಶೌನಕಾದಿ ಮುನಿಗಳಿಗೆ ಸೂತರು ಈ ಕಥೆಯನ್ನು ತಿಳಿಸುತ್ತಾರೆ. ಹೆಚ್ಚು ಪ್ರಚಲಿತವಿರುವ ಈ ಕಥೆಯು 5 ಅಧ್ಯಾಯಗಳಲ್ಲಿದೆ. ಈ ದಾಸ ಮಹಿಳೆಯರೂ 5 ಅಧ್ಯಾಯಗಳಲ್ಲಿ ಕಥೆಯನ್ನು ಹೇಳಿದ್ದಾರೆ. ಮೊದಲ ಅಧ್ಯಾಯದಲ್ಲಿ ಸೂತರು ಶೌನಕಾದಿಗಳಿಗೆ ಸತ್ಯದೇವನ ವಿಚಾರ ಹೇಳುತ್ತಾರೆ. ಎರಡನೆಯ ಅಧ್ಯಾಯದಲ್ಲಿ ಕಾಶಿಯಲ್ಲಿದ್ದ ಬ್ರಾಹ್ಮಣನು ಬಹಳ ಕಷ್ಟದಿಂದಿದ್ದಾಗ ನಾರಾಯಣನು ಮುದುಕನ ವೇಷದಲ್ಲಿ ಬಂದು

ಸತ್ಯದೇವರ ಪೂಜೆ ಭಕ್ತಿಲಿ ಮಾಡಯ್ಯ
ಅತ್ಯಂತ ಐಶ್ವರ್ಯಬಹುದೂ ।
ಭಕ್ತಿಯಿಂದಲಿ ಕೇಳಿ । ಮನೆಗೆ ತಾ ಬಂದು ।
ಅರ್ತಿಲಿ ಪೂಜೆ ಮಾಡಿದನು [67]

ಅಲ್ಲಿಗೆ ಬಂದ ಒಬ್ಬ ಕಟ್ಟಿಗೆಯವನು ಪೂಜೆ ನೋಡಿ ಪ್ರಸಾದ ತೆಗೆದುಕೊಂಡು ತಾನೂ ಪೂಜೆ ಮಾಡುತ್ತಾನೆ. ಈ ವ್ರತದ ಮಹಿಮೆಯಿಂದ ಕಟ್ಟಿಗೆಯವನು ಸಕಲ ಸಂಪತ್ತು, ಶ್ರೇಷ್ಠ ಪದವಿ ಪಡೆದನೆಂಬಲ್ಲಿಗೆ ಎರಡನೆಯ ಅಧ್ಯಾಯ ಮುಗಿಯುತ್ತದೆ.

ಮೂರನೆ ಅಧ್ಯಾಯದಲ್ಲಿ ಉಲ್ಕಾಮುಖನೆಂಬ ರಾಜನು ವ್ರತ ಮಾಡಿದ ವಿವರಗಳಿವೆ. ಅಲ್ಲಿಗೆ ಬಂದ ಒಬ್ಬ ವರ್ತಕನು ಮಕ್ಕಳ ಭಾಗ್ಯಕ್ಕಾಗಿ ಹರಕೆ ಹೊರುತ್ತಾನೆ. ಕಲಾವತಿ ಎಂಬ ಮಗಳು ಹುಟ್ಟಿದ ನಂತರ ಪತ್ನಿ ಸತ್ಯನಾರಾಯಣ ವ್ರತ ಮಾಡಬೇಕೆಂದಾಗಲೆಲ್ಲಾ ಅನೇಕ ಕಾರಣಗಳನ್ನು ಕೊಟ್ಟು ಮುಂದೆ ಹಾಕುತ್ತಾನೆ. ವರ್ತಕನು ತನ್ನ ಅಳಿಯನ ಸಹಿತ ವ್ಯಾಪಾರಕ್ಕಾಗಿ ಸಿಂಧೂ ನದಿಯ ತೀರಕ್ಕೆ ಬರುತ್ತಾನೆ.

ಧರ್ಮಶಾಲೆಯಲ್ಲಿ ಮಾವ ಅಳಿಯ ಮಲಗಿರುವಾಗ ನಾರಾಯಣನು ತನ್ನ ಮಾಯೆಯಿಂದ ಅವರನ್ನು ಕಳ್ಳರಂತೆ ಮಾಡುತ್ತಾನೆ.

ನಿದ್ದಿ ಬಂದವರನ್ನು ಒದ್ದೊಡೆದು ಎಬ್ಬಿಸಿ । ಕದ್ದ
ಕಳ್ಳರು ನೀವೆಂದೆನುತ
ಜಪ್ಪಿಸಿ ತಂದು ರಾಜನೆದುರಿಗೆ ನಿಲ್ಲಿಸಲು ।
ದಬ್ಬಿದರು ನಿಗಡದೊಳಗೆ [68]

ಇತ್ತ ವರ್ತಕನ ಪತ್ನಿ, ಮಗಳು ದಾರಿದ್ರ್ಯದಿಂದ ನೊಂದು ಪಕ್ಕದ ಮನೆಯಲ್ಲಿ ನಡೆದ ಸತ್ಯನಾರಾಯಣ ಪೂಜೆ ನೋಡಿ ಪ್ರಸಾದ ತೆಗೆದುಕೊಂಡು, ತಾನೂ ವ್ರತ ಮಾಡುತ್ತಾಳೆ. ರಾಜನಿಂದ ವರ್ತಕನನ್ನು ಸತ್ಯನಾರಾಯಣ ಸ್ವಾಮಿಯೇ ಬಿಡಿಸುತ್ತಾನೆ. ನಾಲ್ಕನೇ ಅಧ್ಯಾಯದಲ್ಲಿ ಉನ್ನತವಾದ ನಾವೆಯಲ್ಲಿ ಹೊನ್ನು, ಹಣ, ಬಂಗಾರಗಳನ್ನು ಇಟ್ಟುಕೊಂಡು ವರ್ತಕ ಅಳಿಯನೊಡನೆ ತನ್ನ ಊರಿಗೆ ಹಿಂದಿರುಗಲು ಹೊರಡುತ್ತಾನೆ. ಮತ್ತೆ ನಾರಾಯಣನು ಸನ್ಯಾಸಿ ವೇಷದಲ್ಲಿ ಬಂದು ನಾವೆಯಲ್ಲಿ ಏನಿದೆಯೆಂದಾಗ:

ಸೊಕ್ಕಿನಿಂದಲಿ ಆ ಸಾಧು ತಸ್ಕರ । ನೆಂದು ।
ಪತ್ರ ಲತೆಗಳೆಂದು ನುಡಿದ
ತಕ್ಕ ಶಿಕ್ಷೆಯ ಮಾಡಿ । ಸೊಕ್ಕು ಮಾರಿಡುವೆನೆಂದು ।
ಅಷ್ಟೆ ಆಗಲಿ ಎಂದು ನುಡಿದ [69]

ಮಾವ ಅಳಿಯ ಹಡಗಿನಲ್ಲಿದ್ದ ಲತೆ, ಪತ್ರಗಳನ್ನು ಕಂಡು ಹೌಹಾರಿ ಸತ್ಯನಾರಾಯಣನಲ್ಲಿ ಶರಣು ಬರುತ್ತಾರೆ. ಮೊದಲಿನಂತೆ ಅವರ ನಾವೆ ಸಂಪತ್ತಿನಿಂದ ತುಂಬಿ ತುಳುಕುತ್ತದೆ. ತಮ್ಮ ಊರಿಗೆ ಬಂದ ಮಾವ ಅಳಿಯನ ವಿಚಾರವನ್ನು ಕಲಾವತಿಗೆ ತಿಳಿಸಲು ಆಕೆ ಪ್ರಸಾದ ಸ್ವೀಕರಿಸದೇ ಪತಿಯನ್ನು ಕಾಣಲು ಆತುರದಿಂದ ಓಡಿ ಬರುತ್ತಾಳೆ. ಆಗ ಹಡಗು ನೀರಿನಲ್ಲಿ ಮುಳುಗುತ್ತದೆ. ಮತ್ತೆ ಹೋಗಿ ಪ್ರಸಾದ ಸ್ವೀಕರಿಸಿ ಬಂದಾಗ ಪತಿ ಮತ್ತು ತಂದೆ ಕಾಣುತ್ತಾರೆ. ಎಲ್ಲರೂ ಶ್ರದ್ಧಾ ಭಕ್ತಿಗಳಿಂದ ಪೂಜೆ ಮಾಡುತ್ತಾರೆ. ಐದನೆಯ ಅಧ್ಯಾಯದಲ್ಲಿ ತುಂಗಧ್ವಜನೆಂಬ ರಾಜನು ಬೇಟೆಗೆ ಹೋದಾಗ ಅಲ್ಲಿ ಸತ್ಯನಾರಾಯಣ ಪ್ರಸಾದ ನೀಡಿದರೆ:

ಹರಿಯ ಪ್ರಸಾದ ಮುಂದಿರಿಸಲು
ತಿರಿಗಿ ನೋಡದೆ ತೆರಳಲೂ ತರುಳರು
ಅರಸಿಯರು ಸಿರಿ ಸಂಪತ್ತೆಲ್ಲಾ
ಅರಕ್ಷಣದಿ ಮರೆಯಾಗಲೂ [70]

ಮತ್ತೆ ಆ ರಾಜನು ವ್ರತ ಆಚರಿಸಿ ಅಂತ್ಯದಲ್ಲಿ ಮುಕ್ತಿ ಹೊಂದುತ್ತಾನೆ. ಈ ವ್ರತ ಆಚರಿಸಿದರೆ ಇಷ್ಟಾರ್ಥಗಳೆಲ್ಲ ಈಡೇರುವವೆಂಬ ಫಲಶ್ರುತಿಯೊಂದಿಗೆ ಈ ಹಾಡು ಮುಕ್ತಾಯವಾಗುತ್ತದೆ.

17. <u>ರಾಮದೇವರ ಕಥೆ:</u>

ಓರವಾಯಿ ಲಕ್ಷ್ಮೀದೇವಮ್ಮನವರು ರಾಮದೇವರ ಕಥೆಯನ್ನು ಬರೆದಿದ್ದಾರೆ. ಈ ಹಾಡನ್ನು ಹಲವು ದಾಸರ ಕೃತಿಗಳಲ್ಲೂ ಕಾಣಬಹುದು. ಕೇಶವಭಟ್ಟನೆಂಬ ಬ್ರಾಹ್ಮಣನು ಬಡತನದಲ್ಲಿ ಬೇಯುತ್ತಿದ್ದಾಗ ಒಮ್ಮೆ ಕಷ್ಟ ಸಹಿಸಲಾರದೆ ಅಡವಿಗೆ ಹೋಗಿ ಅಲ್ಲಿ ಮುನಿಗಳಲ್ಲಿ ತನ್ನ ಸ್ಥಿತಿ ಹೇಳುತ್ತಾನೆ. ಆಗ ಮುನಿಗಳು ರಾಮನ ಪೂಜಾವ್ರತವನ್ನು ತಿಳಿಸುತ್ತಾರೆ. ಹಿಟ್ಟು, ಬೆಲ್ಲ, ತುಪ್ಪದಿಂದ ಉಂಡೆ ಮಾಡಿ ರಾಮನಿಗರ್ಪಿಸಿ ತಾನು ಸ್ವೀಕರಿಸಲು ಹೇಳುತ್ತಾರೆ. ಹಾಗೆಯೇ ಮಾಡಿ ಕೇಶವಭಟ್ಟ ಸಕಲ ಸೌಭಾಗ್ಯ ಪಡೆಯುತ್ತಾನೆ. ಸಂಪತ್ತು ಬಂದಾಗ ಗಂಗಾಸ್ನಾನಕ್ಕೆಂದು ಕಾಶಿಗೆ ಹೋಗುತ್ತಾನೆ. ತನ್ನ ಮಗನಿಗೆ ಶನಿವಾರ ರಾಮನ ಪೂಜೆ ತಪ್ಪಿಸಬಾರದೆಂದು ಹೇಳಿ ಹೋಗುತ್ತಾನೆ. ಮಗ ನಾರಾಯಣಭಟ್ಟ ಪೂಜೆ ಮಾಡಿ ಕಥೆ ಹೇಳಲು ತಾಯಿಯನ್ನು ಕರೆದಾಗ ಅವಳು ಉಪೇಕ್ಷೆ ಮಾಡುತ್ತಾಳೆ. ಸಂಪತ್ತೆಲ್ಲ ತೊಡೆದು ಹೋಗಿ:

ಉಪ್ಪರಿಗ್ಹೋಯಿತು ತಿಪ್ಪೆ ಕುಣಿಯಾಯಿತು ।
ಕಪ್ಪಕಾಸುಗಳೆಲ್ಲ ಕಳೆದೋಯಿತು ।
ಕಪ್ಪಾಯಿತು ದೇಹ ಕಂದಿ ಕುಂದ್ಹೋಯಿತು ।
ಒಪ್ಪಿತು ಗಾಜಿನ ಬಳೆಯ ಕೈಯ [71]

ಗಂಗಾ ಸ್ನಾನ ಮಾಡಿ ಬಂದ ಕೇಶವಭಟ್ಟ ತನ್ನ ಮನೆ ಕಾಣದೆ ಬಂದು ವಿಚಾರವೆಲ್ಲ ತಿಳಿದು ಮಗನನ್ನು ಮನೆಯಿಂದ ಹೊರ ಕಳಿಸಿ ಶ್ರೀರಾಮನನ್ನು ಕಂಡು ಬರಬೇಕೆಂದು ಹೇಳುತ್ತಾನೆ. ತಂದೆಯ ಮಾತಿನಂತೆ ಹೊರಟ ನಾರಾಯಣಭಟ್ಟನ ಮಗಳನ್ನು ಅವನ ಹೆಂಡತಿ ಅವನ ಜೊತೆಯಲ್ಲೇ ಕಳಿಸುತ್ತಾಳೆ. ಮಗಳ ವಿವಾಹ ಮಾಡಿ ರಾಮ ಪೂಜೆ ಮಾಡಲು ಉಪದೇಶಿಸಿ ನಾರಾಯಣಭಟ್ಟ ಮುಂದೆ ಹೊರಟಾಗ ದಾರಿಯಲ್ಲಿ ಸಿಕ್ಕಿದ ಅಂಧ, ಕುಂಟರಿಗೆ ಈ ಕಥೆ ಉಪದೇಶಿಸುತ್ತಾನೆ. ಮುಂದುವರಿದು ಒಬ್ಬ ಬಡ ಮುತ್ತೈದೆಗೆ ರಾಮ ಕಥೆ ಉಪದೇಶಿಸುತ್ತಾನೆ. ಆಕೆಯ ಮಗ ಆ ರಾಜ್ಯಕ್ಕೆ ರಾಜನಾಗುತ್ತಾನೆ.

ನಂತರ ನಾರಾಯಣ ಭಟ್ಟನಿಗೆ ರಾಮನ ದರ್ಶನವಾಗುತ್ತದೆ. ತಿರುಗಿ ಬಂದ ನಾರಾಯಣ ಭಟ್ಟ ಮುತ್ತೈದೆಯ ಮಗನಾದ ರಾಜನಿಂದ ಕಾಣಿಕೆ ಪಡೆದು ರಾಮ ಕಥೆಯ ಪ್ರಭಾವದಿಂದ ಅಂಗವೈಕಲ್ಯ ಕಳೆದುಕೊಂಡ ಕುರುಡ, ಕುಂಟರನ್ನು ಕಂಡು ಮಗಳ ಮನೆಗೆ ಬರುತ್ತಾನೆ. ಅಲ್ಲಿಂದ ತನ್ನ ಮನೆಗೆ ಬರುತ್ತಾನೆ. ಅಲ್ಲಿ ಕಂಡ ಕೇಶವಭಟ್ಟನ ವೈಭವವನ್ನು ಹೀಗೆ ಹೇಳಲಾಗಿದೆ.

ಮುತ್ತು ಮಾಣಿಕ್ಯದಿಂದ ಕಟ್ಟಿದ ತೋರಣ ।
ಉಪ್ಪರಿಗೆ ಉಪವನಗಳಿಂದ ।
ಅತ್ಯಂತ ಐಶ್ವರ್ಯ ರಾಮನ ದಯದಿಂದ ।
ಒಪ್ಪಿದ ಕೇಶವಭಟ್ಟನಾಗ [72]

ತನ್ನ ಮನೆಯಲ್ಲಿ ನಾರಾಯಣಭಟ್ಟ ಊರವರನ್ನೆಲ್ಲ ಕರೆದು ರಾಮ ಪೂಜೆ ಮಾಡಿದಾಗ ರಾಮ, ಸೀತಾ, ಲಕ್ಷ್ಮಣ ಸಮೇತನಾಗಿ ದರ್ಶನವೀಯುತ್ತಾನೆ. ಇಷ್ಟಾರ್ಥಗಳನ್ನೆಲ್ಲ ಕರುಣಿಸುವ ರಾಮನ ಕಥೆಯನ್ನು 'ನರಸಿಂಹ ವಿಠಲ'ನಿಗೆ ಲಕ್ಷ್ಮೀದೇವಮ್ಮ ಅರ್ಪಿಸಿದ್ದಾರೆ.

18. <u>ಶ್ಯಮಂತಕೋಪಾಖ್ಯಾನ:</u>

ಸ್ಯಮಂತಕೋಪಾಖ್ಯಾನ ವ್ರತ ಕಥೆಯ ಹಾಡನ್ನು ಪಿ.ವಿ. ಕೃಷ್ಣಾಬಾಯಿ ಮತ್ತು ಇಂದಿರಾಬಾಯಿ ವಾ. ಕಟ್ಟಿಯವರು ರಚಿಸಿದ್ದಾರೆ. ಭಾದ್ರಪದ ಶುಕ್ಲ ಚತುರ್ಥಿಯಂದು ಆಚರಿಸಲ್ಪಡುವ ಸಿದ್ಧಿ ವಿನಾಯಕ ವ್ರತದ ಮಹಿಮೆಯನ್ನು ಇದು ತಿಳಿಸುತ್ತದೆ. ಸ್ಕಾಂದ ಪುರಾಣದಲ್ಲಿ ಈ ವ್ರತದ ಉಲ್ಲೇಖವಿದೆ. ಪರಮೇಶ್ವರನು ಸ್ಕಂದನಿಗೆ ತಿಳಿಸಿದ ಈ ವ್ರತವನ್ನು ಸೂತ ಮುನಿಗಳು ಧರ್ಮರಾಯನಿಗೆ ವಿವರಿಸುತ್ತಾರೆ.

ಗಣಪತಿಯು ಚಂದ್ರಲೋಕದಲ್ಲಿ ವಿಹರಿಸುತ್ತಿರುವಾಗ ಇಲಿಯ ಮೇಲೆ ಕುಳಿತ ಗಣಪನನ್ನು ಕಂಡು ಚಂದ್ರನು ಅಪಹಾಸ್ಯದಿಂದ ನಗುತ್ತಾನೆ. ಆಗ ಗಣಪತಿಯು ಭಾದ್ರಪದ ಶುದ್ಧ ಚತುರ್ಥಿಯಂದು ಚಂದ್ರನನ್ನು ಕಂಡರೆ ಅವರಿಗೆ ಅಪವಾದ ಬರಲಿ ಎಂದು ಶಾಪ ನೀಡುತ್ತಾನೆ. ಕೃಷ್ಣನಿಗೂ ಈ ಅಪವಾದ ತಪ್ಪಲಿಲ್ಲವೆಂಬ

ಕಥೆಯನ್ನು ಈ ವ್ರತ ತಿಳಿಸುತ್ತದೆ. ಸತ್ರಾಜಿತನು ಸೂರ್ಯನ ಅನುಗ್ರಹದಿಂದ ಶ್ಯಮಂತಕ ಮಣಿಯನ್ನು ಪಡೆಯುತ್ತಾನೆ. ಸತ್ರಾಜಿತನು ಆ ಮಣಿ ಧರಿಸಿ ದ್ವಾರಕೆಗೆ ಬರುತ್ತಾನೆ.

ಆ ರತ್ನವ ಧರಿಸಿರುವಗೆ ಗಣಪಾ । ಬೇಡಿದಿಷ್ಟಾರ್ಥ ಕೊಡುವುದು ಗಣಪಾ ।
ಕೃಷ್ಣನು ಸಭೆಯಲಿ ಕುಳಿತರೆ ಗಣಪಾ । ರತ್ನ ಧರಿಸಿ ನೃಪ ಬಂದನು ಗಣಪಾ ।

ಕೋಟಿ ಸೂರ್ಯ ಸಂಕಾಶದಿ ಗಣಪಾ । ಸಾಟಿರಹಿತ ಸಭೆ ಬೆಳಗಿತು ಗಣಪಾ ।
ಎನಗೆ ರತ್ನ ಕೊಡು ಎನುತಲಿ ಗಣಪಾ । ಜನಪತಿಯನು ಹರಿ ಬೇಡಿದ ಗಣಪಾ [73]

ಕೃಷ್ಣನಿಗೆ ಮಣಿಯನ್ನು ಕೊಡದೆ ತನ್ನ ತಮ್ಮ ಪ್ರಸೇನನಿಗೆ ಆ ಮಣಿಯನ್ನು ನೀಡುತ್ತಾನೆ. ಪ್ರಸೇನನು ಆ ಮಣಿ ಧರಿಸಿ ಬೇಟೆಗೆ ಹೋಗುತ್ತಾನೆ. ಒಂದು ಸಿಂಹವು ಅವನನ್ನು ಕೊಂದು ಮಣಿಯನ್ನು ತೆಗೆದುಕೊಳ್ಳುತ್ತದೆ. ಆ ಸಿಂಹವನ್ನು ಕರಡಿ ಕೊಂದು ಮಣಿಯನ್ನು ತನ್ನ ಗುಹೆಗೆ ಒಯ್ಯುತ್ತದೆ. ಕೃಷ್ಣನು ಚೌತಿಯ ಚಂದ್ರನನ್ನು ನೋಡಿದ ಕಾರಣದಿಂದ ಆ ಮಣಿಯನ್ನು ಅವನೇ ಅಪಹರಿಸಿದನೆಂಬ ಅಪವಾದ ಬರುತ್ತದೆ. ಆ ಮಣಿಯನ್ನು ತರಲು ಕೃಷ್ಣ ಕಾಡಿಗೆ ಹೊರಡುತ್ತಾನೆ. ಅಲ್ಲಿ ಜಾಂಬವಂತನ ಮನೆಯಲ್ಲಿ ಮಣಿಯು ಕಂಡು ಬರುತ್ತದೆ.

ಹರಿಯೆಂದರಿಯದೆ । ಮಾಡಿತು ಯುದ್ಧವು ಕರಡಿಯು ಕುಣಿದಾಡಿ ।
ಶಿರದಿ ಗುದ್ದಲು ತೆರೆಯಲು ಕಣ್ಣು ಶ್ರೀರಾಮ ರೂಪವ ನೋಡಿ [74]

ಶ್ರೀರಾಮನನ್ನು ಕಂಡ ಜಾಂಬವಂತನು ಕೃಷ್ಣನಿಗೆ ಎರಗಿ ಮಗಳು ಜಾಂಬವತಿ ಮತ್ತು ಮಣಿ ಎರಡನ್ನೂ ನೀಡಿ ಕಳುಹಿಸುತ್ತಾನೆ. ಕೃಷ್ಣನು ಜಾಂಬವಂತನ ಗುಹೆ ಪ್ರವೇಶಿಸಿ ಕೆಲವು ದಿನಗಳವರೆಗೂ ಬಾರದ್ದು ಕಂಡು ಎಲ್ಲರೂ ಕೃಷ್ಣನು ಬದುಕಿರಲಾರನೆಂದು ತಿಳಿದು ಗೋಳಿಡುತ್ತಾ ಹೊರಟು ಹೋಗುತ್ತಾರೆ. ಮತ್ತೆ ದ್ವಾರಕೆಗೆ ಬಂದ ಕೃಷ್ಣನನ್ನು ಕಂಡು ಸತ್ರಾಜಿತ ಪಶ್ಚಾತ್ತಾಪಪಟ್ಟು ತನ್ನ ಮಗಳು ಸತ್ಯಭಾಮೆಯನ್ನು ಕೃಷ್ಣನಿಗೆ ಕೊಟ್ಟು ಮದುವೆ ಮಾಡಿಸುತ್ತಾನೆ.

ಅಂದು ಚಂದ್ರನ ಕಂಡ ದೋಷದಿ ಗಣಪಾ । ಬಂದಿದ್ದಿತು ಅಪವಾದವು ಗಣಪಾ ।
ಇಂದು ನಿನ್ನ ಪೂಜೆ ಮಾಡೆ ಗಣಪಾ । ಬಂದಪವಾದವು ಹರಿದಿತು ಗಣಪಾ [75]

ಸ್ಯಮಂತಕೋಪಾಖ್ಯಾನವನ್ನು ಕೇಳಿದರೆ ಚಂದ್ರನನ್ನು ಕಂಡ ದೋಷ ಪರಿಹಾರವಾಗುವುದು. ಗಣಪನನ್ನು ಪೂಜಿಸಿದರೆ, ಈ ಕಥೆ ಕೇಳಿದರೆ ಪುತ್ರ ಸಂತಾನ, ಸಂಪತ್ತು, ಮುತ್ತೈದೆತನ, ಚೌತಿ ಚಂದ್ರನನ್ನು ಕಂಡ ಭಯ ದೂರಾಗುವುದು ಎಂಬ ವಿಚಾರವನ್ನು ಇಂದಿರಾಬಾಯಿ ಹೇಳಿದ್ದಾರೆ.

ಷೋಡಶ ಕರ್ಮಗಳು – ಆ ಸಂದರ್ಭದ ಧಾರ್ಮಿಕ ಸಂಪ್ರದಾಯಗಳು:

'ಜನ್ಮನಾ ಜಾಯತೇ ಜಂತುಃ' ಎಂಬ ಮಾತಿನಂತೆ ಮನುಷ್ಯನೂ ಒಂದು ಪ್ರಾಣಿ. ಆದರೆ ಇತರ ಪ್ರಾಣಿಗಳಿಂದ ಮನುಷ್ಯನನ್ನು ಪ್ರತ್ಯೇಕಿಸುವುದು ಅವನಲ್ಲಿನ ಸಂಸ್ಕೃತಿ. ಮಾನವನಿಗೆ ನೀಡುವ ಹಲವು ಸಂಸ್ಕಾರಗಳಿಂದ ಅವನು ಮನುಷ್ಯನಾಗಬಲ್ಲ. ಗರ್ಭಾವಸ್ಥೆಯಿಂದಲೂ ಸಂಸ್ಕಾರಗಳು ನಡೆದು ಮನುಷ್ಯ ಜೀವಿ ಸುಸಂಸ್ಕೃತನಾಗಲು (ಹದಿನಾರು) ಷೋಡಶ ಕರ್ಮಗಳನ್ನು ಹೇಳಲಾಗಿದೆ. "ಮಾನವನು ಪರಿಪೂರ್ಣತೆಯತ್ತ ಸಾಗಲು ತಾಯಿಯ ಗರ್ಭದಲ್ಲಿರುವಾಗಿನಿಂದಲೇ ಅವನು ಹಲವು ಸಂಸ್ಕಾರಗಳನ್ನು ಪಡೆಯಬೇಕಾಗುತ್ತದೆ."[76] ಪ್ರತಿಯೊಂದು ಸಂಸ್ಕಾರವೂ ತನ್ನದೇ ಆದ ಉದ್ದೇಶ್ಯ, ವೈಶಿಷ್ಟ್ಯ ಮತ್ತು ಮಹತ್ವವನ್ನು ಹೊಂದಿದೆ. ಸಂಸ್ಕಾರಗಳ ಈ ಉದ್ದೇಶ್ಯ ಮತ್ತು ಮಹತ್ವಗಳನ್ನು ಪ್ರಾಚೀನಕಾಲದ ಕೆಲವು ಸೂತ್ರಕಾರರೂ, ಸ್ಮೃತಿಕಾರರೂ ಮತ್ತೆ ಕೆಲವು ವ್ಯಾಖ್ಯಾನಕಾರರೂ ಮತ್ತು ಪ್ರಯೋಗ ಕರ್ತೃಗಳು ಕೆಲವು ಕಡೆ ಸ್ಪಷ್ಟವಾಗಿ ಮತ್ತು ಕೆಲವೆಡೆ ಸೂಚನಾತ್ಮಕವಾಗಿಯೂ ಹೇಳಿದ್ದಾರೆ."[77]

ವೈದಿಕ ಧರ್ಮದಲ್ಲಿ ಮುಖ್ಯವಾಗಿ ಷೋಡಶ (ಹದಿನಾರು) ಸಂಸ್ಕಾರಗಳನ್ನು ಹೇಳಲಾಗಿದೆ. ಗರ್ಭಾದಾನ, ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಕರ್ಣವೇಧ, ಉಪನಯನ, ಕೇಶಾಂತ (ಗೋದಾನ), ಉಪಾಕರ್ಮ, ವೇದವ್ರತ, ಸಮಾವರ್ತನ, ವಿವಾಹ ಮತ್ತು ಅಂತ್ಯೇಷ್ಟಿ. ಶಾಸ್ತ್ರಗಳನ್ನು ಆಚರಣೆಗಳನ್ನು ಮಂತ್ರ ಸಹಿತವಾಗಿ ಪುರೋಹಿತರ ಸಹಾಯದಿಂದ ಮಾಡುವುದು ಶಿಷ್ಟ ಸಂಪ್ರದಾಯ. ಮಂತ್ರ ರಹಿತವಾದ ಆಚರಣೆಗಳಲ್ಲಿ ಕನ್ನಡದ ಸಂಪ್ರದಾಯದ ಹಾಡುಗಳೇ ಆಧಾರವಾಗಿದ್ದು ಹೆಂಗಳೆಯರು ಸಂಭ್ರಮದಿಂದ ಹಾಡುತ್ತಾ ಪಾಲ್ಗೊಳ್ಳುತ್ತಾರೆ. ಈ ಹದಿನಾರು ಕರ್ಮಗಳಲ್ಲಿ ಕೆಲವು ವೈದಿಕ ಸಂಸ್ಕಾರಗಳಾಗಿದ್ದು ಮಹಿಳೆಯರ ಪಾತ್ರ ಅವುಗಳಲ್ಲಿ ಕಂಡುಬರುವುದಿಲ್ಲ. ಸೀಮಂತ, ಜಾತಕರ್ಮ, ನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಅಕ್ಷರಾಭ್ಯಾಸ, ಕುಯಿಲು ಹೋಗುವುದು, ಹೊಳೆ ಮೆಟ್ಟುವುದು, ಉಪನಯನ, ವಿವಾಹ ಮುಂತಾದ ಸಂಸ್ಕಾರಗಳನ್ನು ನಡೆಸುವಾಗ ಹಾಡುವಂತಹ ಶಾಸ್ತ್ರದ ಹಾಡುಗಳು ಸಾಕಷ್ಟು ರಚನೆಯಾಗಿವೆ.

ಮಹಿಳಾ ಹರಿದಾಸರ ಹಾಡುಗಳಲ್ಲಿ ಈ ಶಾಸ್ತ್ರ ಸಂಪ್ರದಾಯಗಳ ವಿವರಣೆಯಿದೆ. ಈ ಶಾಸ್ತ್ರದ ಹಾಡುಗಳು ಗೃಹಿಣಿಯರಿಗೆ ಮನರಂಜನೆಯ ಸಾಧನವೂ ಆಗಿದೆ. ಜನರ ಒಡನಾಟದಲ್ಲಿ ಸಂಬಂಧಗಳನ್ನು ಗಟ್ಟಿಗೊಳಿಸುವ ಉದ್ದೇಶದಿಂದ ಇವು ರಚಿತವಾಗಿವೆ. ಮಗುವಿನ ಜನನ ಪೂರ್ವದಿಂದಲೂ ಜೀವನದ ಅತಿ ವೈಭವದ ಕಾರ್ಯಕ್ರಮವಾದ ವಿವಾಹದವರೆಗೂ ಶಾಸ್ತ್ರದ ಹಾಡುಗಳಿವೆ. ದಾಸ ಮಹಿಳೆಯರೇ ಅಲ್ಲದೆ

ಅನೇಕ ಪುರುಷರೂ ಈ ಸಂಪ್ರದಾಯದ ಹಾಡುಗಳನ್ನು ರಚಿಸಿದ್ದಾರೆ. ಯಾವುದೇ ಸಂದರ್ಭ ಕಳೆಗಟ್ಟ ಬೇಕಾದರೆ ಇಂತಹ ಹಾಡುಗಳು ಮುಖ್ಯ. ಆ ಮೂಲಕ ಆ ಸಂದರ್ಭದ ಜೀವಂತಿಕೆ ಎದ್ದು ಕಾಣುತ್ತದೆ.

ಮಹಿಳಾ ಹರಿದಾಸರ ರಚನೆಗಳಲ್ಲಿ ಸಂಪ್ರದಾಯ ಮತ್ತು ಅದರ ಆಚರಣೆಗಳ ವಿಧಿ ವಿಧಾನಗಳು ವಿವರಿಸಲ್ಪಟ್ಟಿವೆ.

ಷೋಡಶ ಸಂಸ್ಕಾರಗಳಲ್ಲಿ ಮೊದಲನೆಯದು ಪುಂಸವನ, ಗಂಡು ಮಗುವನ್ನೇ ಪಡೆಯಬೇಕೆಂದು ನಡೆಸುವ ಒಂದು ಸಂಸ್ಕಾರ. ಸಾಮಾನ್ಯವಾಗಿ ಇದನ್ನು 3ನೇ ತಿಂಗಳಿನಲ್ಲಿ ಮಾಡಲಾಗುತ್ತದೆ. 5ನೇ ತಿಂಗಳಿನಲ್ಲಿ ಹೂ ಮುಡಿಸುವ ಶಾಸ್ತ್ರ, 7ನೇ ತಿಂಗಳಿನಲ್ಲಿ ಬಳೆ ತೊಡಿಸುವ, ಎಂಟನೇ ತಿಂಗಳಲ್ಲಿ ಸೀಮಂತ ಕಾರ್ಯಗಳನ್ನು ನಡೆಸಲಾಗುತ್ತದೆ. ಬಸುರಿಗೆ ಬಗೆ ಬಗೆ ಅಲಂಕಾರ, ತಿಂಡಿ ತಿನಿಸುಗಳ ಉಪಚಾರ, ಹಣ್ಣು ಹಂಪಲುಗಳ ಸೇವನೆ ಮುಂತಾದವುಗಳನ್ನು ನಡೆಸಿ, ಉಡಿ ತುಂಬಿ ಸದಾ ಸಂತೋಷದಿಂದಿರುವಂತೆ ನೋಡಿಕೊಳ್ಳಲಾಗುತ್ತದೆ. ಮೂರನೆಯ ತಿಂಗಳಿನಲ್ಲಿ ಕೆಂದೆಂಗು, ಹೊಂಬಾಳೆ, ಆಲದ ಬಿಳಲು ಮೊದಲಾದ ಔಷಧೋಪಚಾರ ನಡೆಸಿ ಗರ್ಭ ಸ್ಥಿರವಾಗುವಂತೆ ಮಾಡಲಾಗುತ್ತದೆ. ಐದನೇ ತಿಂಗಳಿನಲ್ಲಿ ಹೂ ಮುಡಿಸುವ ಶಾಸ್ತ್ರವನ್ನು ಹೆಳವನಕಟ್ಟೆ ಗಿರಿಯಮ್ಮ 'ಲವಕುಶ ಕಾಳಗ'ದಲ್ಲಿ ವಿವರಿಸುತ್ತಾಳೆ. ಸೀತೆಗೆ ಹೂ ಮುಡಿಸಿದ ಸಂಭ್ರಮ ಇಲ್ಲಿ ಕಂಡು ಬರುತ್ತದೆ.

ಸಣ್ಣ ಮಲ್ಲಿಗೆ ದಂಡೆ ಸೂಸಕ ಮುಡಿದಂಡೆ
ರನ್ನ ಮಾಣಿಕ್ಯದ ತೊಂಡಲವು
ಪನ್ನಗಧರನರಸಿ ಮಡದಿ ಸೀತಾಂಗನೆಗೆ
ಸಣ್ಣ ಮಲ್ಲಿಗೆ ಮುಡಿಸೋರು

ಅಚ್ಚ ಮಲ್ಲಿಗೆ ದಂಡೆ ಸೂಸಕ ಮುಡಿದಂಡೆ
ಮುತ್ತು ಮಾಣಿಕದ ತೊಂಡಲವು
ಪಕ್ಷಿವಾಹನನರಸಿ ಮಡದಿ ಸೀತಾಂಗನೆಗೆ
ಅಚ್ಚ ಮಲ್ಲಿಗೆ ಮುಡಿಸೋರು [78]

ಏಳನೆಯ ತಿಂಗಳಿನಲ್ಲಿ ಬಳೆ ತೊಡಿಸುವ ಶಾಸ್ತ್ರ ನಡೆಯುತ್ತದೆ. ಶುಭ ಸಂಕೇತವೂ, ಶಾಂತ ಚಿತ್ತಕ್ಕೆ ಪೂರಕವೂ, ಮನೋಲ್ಲಾಸಕರವೂ ಆದ ಹಸಿರು ಬಣ್ಣದ ಸೀರೆ, ಬಳೆಯನ್ನು ಗರ್ಭಿಣಿಗೆ ಧರಿಸುವ ಸಂಪ್ರದಾಯವಿದೆ. ಆ ದಿನ ಸುವಾಸಿನಿಯರಿಗೆ ಬಳೆ ತೊಡಿಸಿ, ಹಬ್ಬ ಮಾಡಿ, ಸಂಜೆಯಲ್ಲಿ ತಿಂಡಿ–ತಿನಿಸು. ಹಣ್ಣು–ಹಂಪಲುಗಳನ್ನು ಉಡಿ ತುಂಬಿ, ಆರತಿ ಮಾಡುವ ರೂಢಿಯಿದೆ. ಬಳೆ ತೊಡಿಸುವ ಶಾಸ್ತ್ರದಲ್ಲಿ ಹಾಡುವ ಹಾಡನ್ನು ಮಂಜುಳಾ ಸುಬ್ಬರಾವ್‌ರವರು ಹೀಗೆ ಹೇಳುತ್ತಾರೆ.

ಬಳೆಗಾತಿ ಬಳೆ ತಂದೆ
ಮಂದಿರಕೆ ನಾ ಬಂದೆ

ಗಾಜಿನ ಬಳೆ ಶ್ರೇಷ್ಠ ರೋಜ ಬಣ್ಣವು ಇಷ್ಟ
ಈ ಜಗದಿ ನಾ ನಿನಗೆ ಬಳೆಯ ತೊಡಿಪಾ
ಸೋಜಿಗ ಭಾಗ್ಯವು ಎಷ್ಟೆಂತ ಪೇಳಲಿ
ನೀ ಜಾಣೆ ಎನ್ನಮನದಿ ಇರು ನೀ ನಿತ್ಯ [79]

ಮಹಾಲಕ್ಷ್ಮೀದೇವಿಗೆ ಬಳೆ ತೊಡಿಸುವ ಈ ಹಾಡು ಗರ್ಭಿಣಿಗೆ ಬಳೆ ತೊಡಿಸುವಾಗ ಹಾಡಬಹುದಾಗಿದೆ. ಸುವಾಸಿನಿಯರು ಬಳೆ ತೊಟ್ಟುಕೊಳ್ಳುವಾಗ 'ದುರ್ಗಾ ಸುಳಾದಿ' ಹೇಳಿ ತೊಟ್ಟು ಕೊಳ್ಳುವ ವಾಡಿಕೆಯಿದೆ.

ಗರ್ಭಿಣಿ ಸ್ತ್ರೀಗೆ ಬಯಕೆಗಳು ಸಹಜ. ಹರಪನಹಳ್ಳಿ ಭೀಮವ್ವನವರು ತಮ್ಮ ಒಂದು ಕೀರ್ತನೆಯಲ್ಲಿ ಸುಭದ್ರೆಯು ಯಾವ ತಿಂಗಳಿನಲ್ಲಿ ಏನು ಬಯಸಿದಳೆಂದು ತಿಳಿಸಿದ್ದಾರೆ.

ಒಂದು ತಿಂಗಳು ತುಂಬಲು ಸುಭದ್ರ
ಅಂಜೂರಿ, ದ್ರಾಕ್ಷಿ, ನೇರಳೆ, ಕಿತ್ತಳೆ ಬಯಸಿದಳು

ನಾಲ್ಕು ತಿಂಗಳು ತುಂಬಲು ಸುಭದ್ರ
ಆಕಳ ತುಪ್ಪ ಅನಾರಸ ಬಯಸಿದಳು

ಐದು ತಿಂಗಳು ತುಂಬಲು ಸುಭದ್ರ
ಕೆನೆಮೊಸರ್ಹಾಕಿದ ಬುತ್ತಿ ಚಿತ್ರಾನ್ನವ ಬಯಸಿದಳು [80]

ಗರ್ಭಿಣಿಗೆ ಯಾವ ತಿಂಗಳಿನಲ್ಲಿ ಯಾವ ಬಯಕೆ ಮೂಡುವುದೆಂಬುದನ್ನು ಭೀಮವ್ವ ಹೇಳಿದ್ದಾರೆ.

ಸೀಮಂತವು 8ನೇ ತಿಂಗಳಿನಲ್ಲಿ ಮಾಡುವ ಶಾಸ್ತ್ರ. ಮುಂದೆ ಹುಟ್ಟುವ ಮಗು ಬೌದ್ಧಿಕವಾಗಿ, ಶಾರೀರಿಕವಾಗಿ, ಮಾನಸಿಕವಾಗಿ ಸದೃಢವಾಗಿರಲೆಂಬ ಉದ್ದೇಶದಿಂದ ನಡೆಸುವ ಒಂದು ಸಂಸ್ಕಾರ. ಸೀಮಂತದಂದು ಗರ್ಭಿಣಿಗೆ ಮೃಷ್ಟಾನ್ನ ಭೋಜನ ಮಾಡಿಸಿ, ಉಡಿ ತುಂಬಿ, ಆರತಿ ಮಾಡುವ ಸಂಪ್ರದಾಯವಿದೆ. 'ಲವಕುಶರ ಕಾಳಗ'ದಲ್ಲಿ ಗಿರಿಯಮ್ಮ ಸೀತೆಗೆ ಸೀಮಂತ ಮಾಡಿದ ವಿವರಗಳನ್ನು ಹೇಳಿದ್ದಾಳೆ. ಸೀತೆಯು 'ರಾಮನನ್ನಗಲಿದ ತನಗೇಕೆ ಸೀಮಂತ'ವೆಂದಾಗ ಋಷಿ ಪತ್ನಿಯರು ತವರಿನವರು

ಹೂವ ಮುಡಿಸುವ ಕ್ರಮ ಎಂದು ಸಮಾಧಾನ ಪಡಿಸುತ್ತಾರೆ. ಋಷಿ ಪತ್ನಿಯರು ಸೀತೆಗೆ ಮಂಗಳ ಸ್ನಾನ ಮಾಡಿಸಿ, ನವ ವಸ್ತ್ರಗಳನ್ನು ಉಡಿಸಿ, ಹೂವ ಮುಡಿಸಿ ಮುತ್ತಿನಾರುತಿ ಮಾಡುತ್ತಾರೆ. ಗರ್ಭಿಣಿಗೆ ಬಯಕೆಯ ಊಟವನ್ನು ಮಾಡಿಸಿ ಎಲ್ಲರಿಗೂ ಭೋಜನ ಮಾಡಿಸುತ್ತಾರೆ.

ಅಂದು ವಾಲ್ಮೀಕನ ಆಶ್ರಮದೊಳಗೆಲ್ಲ
ಭೋಜನ ಪಂಕ್ತಿ ಸಾಗಿದವು
ಹಾಲುಂಡಿ ಹೊಯ್ಗಡಬು ಕ್ಷೀರಶಾವಿಗಿ ಘೃತ
ಶಾಲ್ಯಾನ್ನ ಶಾಕಪಾಕಗಳು [81]

ನಾನಾ ವಿಧವಾದ ಭಕ್ಷ್ಯ ಭೋಜ್ಯಗಳನ್ನು ಉಂಡು ತಾಂಬೂಲ ಹಾಕಿ ಋಷಿಗಳು ಸೀತೆಯನ್ನು ಹರಸುತ್ತಾರೆ.

ಆಗ ಬ್ರಾಹ್ಮಣರೆಲ್ಲ ವೇದ ಮಂತ್ರವ ಹೇಳಿ
ಬಾಲರ ಪಡೆದು ಸುಖದಲ್ಲಿ
ಶ್ರೀರಾಮರ ಕೂಡಿ ಅಯೋಧ್ಯೆಯ ಆಳೆಂದು
ಮೋದದಕ್ಷತೆ ತಳಿದರು [82]

ಬಸುರಿಯ ಬಯಕೆ ತೀರಿಸಿ ಉಡಿ ತುಂಬುವ ಸಂಭ್ರಮವನ್ನು ನಿಡಗುರುಕಿ ಜೀವೂಬಾಯಿ ಹೀಗೆ ಹೇಳುತ್ತಾರೆ.

ನಿಂಬೆ ನೇರಳೆ ಜಂಬು ದ್ರಾಕ್ಷಿ ಕದಳಿ ಫಲಗಳಿಂ
ಅಂಬುಜಾಕ್ಷನರಸಿಗೆ ದಾಳಿಂಬೆ ತೆಂಗು ಸಹಿತದಿ
ಅಂಬುಧಿಯೊಳ್ ಜನಿಸಿದ ಮುಕುಂದನರಸಿಗೆ
ಅಂಬುಜಾಕ್ಷಿಯರೆಲ್ಲ ನೆರೆದು ಸಂಭ್ರಮ ಪಡುತಲಿ [83]

ಉಡಿ ತುಂಬುವ ವಸ್ತುಗಳು ಯಾವುದೆಂಬ ವಿವರ ಭೀಮವ್ವನವರ ಹಾಡಿನಲ್ಲಿ ದೊರಕುತ್ತದೆ.

ಉಡಿಯ ತುಂಬಿರೆ ನಮ್ಮ ಉಡುರಾಜಮುಖಿಗೆ
ಉಡಿಯ ತುಂಬಿರೆ ನಮ್ಮ
ಕಡಲೆ ಕೊಬ್ಬರಿ ಬಟ್ಟಲೊಳು ಬಾಳೆ ಫಲಗ-
ಳ್ವುಡಿಯ ತುಂಬಿರೆ ನಮ್ಮ

ಜಂಬು ನೇರಲ ಗೊನೆ ಜಾಂಬೂಫಲಗಳು
ನಿಂಬೆ ದಾಳಿಂಬೆ ಔದುಂಬ್ರ ಫಲಗಳು
ಉತ್ತತ್ತಿ ದ್ರಾಕ್ಷಿ ಕಿತ್ತಳೆ ಸೀತಾಫಲವು
ಅಕ್ಕಿ ಅಂಜೂರ ಉತ್ತತ್ತಿ ಫಲಗಳು
ಶ್ರೇಷ್ಠ ಭೀಮೇಶ ಕೃಷ್ಣನ ಪಟ್ಟದರಸಿ
ಗ್ಹಚ್ಚಿ ಕುಂಕುಮ ವೀಳ್ಯ ಕೊಟ್ಟು ರುಕ್ಮಿಣಿಗೆ [84]

ಹೆಣ್ಣಿಗೆ ಗರ್ಭಾವಸ್ಥೆ ಸೂಕ್ಷ್ಮತೆಯಿಂದ ಕೂಡಿದ್ದು ಆ ಸಮಯದಲ್ಲಿ ಅವಳನ್ನು ಆದಷ್ಟೂ ಸುಖ, ಸಂತೋಷಗಳಿಂದ ಆರೋಗ್ಯಕರವಾಗಿ ಇರಬೇಕೆಂದು ನಮ್ಮ ಪೂರ್ವಿಕರ ಅಭಿಪ್ರಾಯ. ಈ ಎಲ್ಲ ಶಾಸ್ತ್ರಗಳ ಮೂಲಕ ಅವಳ ಚಿತ್ತವನ್ನು ಪ್ರಸನ್ನವಾಗಿಸುವ ಪ್ರಯತ್ನಗಳು ಈ ಮೂಲಕ ನಡೆಯುತ್ತಿತ್ತು. ಇಂತಹ ಸಂದರ್ಭಗಳಿಗಾಗಿ ರಚಿತವಾದ ಹಾಡುಗಳೂ ವೈಶಿಷ್ಟ್ಯತೆಗಳಿಂದ ಕೂಡಿವೆ.

ಜಾತಕರ್ಮ:

ಮಗು ಹುಟ್ಟಿದ ತಕ್ಷಣ, ಹೊಕ್ಕಳು ಬಳ್ಳಿ ಕತ್ತರಿಸುವುದಕ್ಕೂ ಮೊದಲು ಈ ಸಂಸ್ಕಾರ ನಡೆಸಲಾಗುತ್ತದೆ. ಹಸುವಿನ ತುಪ್ಪ, ಜೇನುತುಪ್ಪ ಬೆರೆಸಿ ಚಿನ್ನದ ಕಡ್ಡಿಯಿಂದ ಮಗುವಿಗೆ ತಿನ್ನಿಸಲಾಗುತ್ತದೆ. ಮಂತ್ರ ಸಹಿತವಾದ ಕರ್ಮ ಇದು. ಗಿರಿಯಮ್ಮ 'ಲವಕುಶರ ಕಾಳಗ'ದಲ್ಲಿ ವಾಲ್ಮೀಕಿ ಮಹರ್ಷಿಗಳು ಲವಕುಶರಿಗೆ ಜಾತಕರ್ಮ ನಡೆಸಿದ್ದನ್ನು ವಿವರಿಸಿದ್ದಾಳೆ.

ಚಿನ್ನರಿಬ್ಬರ ನಾಮನಕ್ಷತ್ರ ಬರೆವುದಕೆ
ಚೆನ್ನಾಗಿ ಮುನಿಗಳು ಕರೆಸಿದರು
ಜಾತಕರ್ಮವ ಮಾಡಿ ಮಧುವಿಟ್ಟು ಮುದದಿಂದ
ವಾಲ್ಮೀಕ ದಕ್ಷಿಣೆಯ ಕೊಟ್ಟನು [85]

ಉದ್ಧಾಳೀಕನ ಕಥೆಯಲ್ಲೂ ಜಾತಕರ್ಮ ನಡೆಸಿದ ಪ್ರಸ್ತಾಪವಿದೆ.

ನಾಮಕರಣ:

ಹುಟ್ಟಿದ ಮಗುವಿಗೆ ಹೆಸರನ್ನಿಡುವ ಸಂಸ್ಕಾರವೇ ನಾಮಕರಣ. ಸಾಮಾನ್ಯವಾಗಿ ಮಗು ಹುಟ್ಟಿದ ಹನ್ನೊಂದನೆಯ ದಿನ ನಾಮಕರಣ ಮಾಡುವ ಸಂಪ್ರದಾಯವಿದೆ. ಇದರ ಜೊತೆಯಲ್ಲಿ 'ತೊಟ್ಟಿಲ ಶಾಸ್ತ್ರ', 'ಬಜೆ ಬೆಣ್ಣೆ ತಿನ್ನಿಸುವ ಶಾಸ್ತ್ರ', 'ಕುಯಿಲು ಹೋಗುವ' ಮುಂತಾದ ಆಚರಣೆಗಳು ನಡೆಯುತ್ತವೆ.

ನವಜಾತ ಶಿಶು ಮತ್ತು ಬಾಣಂತಿಯನ್ನು ಬಹಳ ಶ್ರದ್ಧೆವಹಿಸಿ ಕಾಪಾಡಲಾಗುತ್ತದೆ. ಮಗು ಹುಟ್ಟಿದ ಒಂಭತ್ತನೆಯ ದಿನ 'ಗೆದ್ದ ವೀಳ್ಯ' ಎಂದು ಸಕ್ಕರೆ ಕೊಬ್ಬರಿ ಹಂಚುವರು. ಹತ್ತನೆಯ ದಿನ ಕಡುಬಿನ ಬಾಗಿನ ನೀಡುತ್ತಾರೆ. ಅದೇ ದಿನ ಬಾಣಂತಿಯು ಸ್ನಾನಕ್ಕೆ ಮೊದಲು ಹೊಕ್ಕುಳ ಹುರಿ ಕೊಯ್ದು ಮಗುವಿಗೂ ತಾಯಿಗೂ ಸೂರ್ಯನ ದರ್ಶನ ಮಾಡಿಸಿ ಕತ್ತಿಗೆ ಪೂಜೆ ಮಾಡುವ ಶಾಸ್ತ್ರಕ್ಕೆ 'ಕುಯಿಲು ಹೋಗುವುದು' ಎನ್ನುತ್ತಾರೆ. ಬಾಣಂತಿಗೆ ದೃಷ್ಟಿ ತಾಕದಿರಲೆಂದು ಅಣಕು ಬಾಣಂತಿಯನ್ನು ಸೃಷ್ಟಿಸಿ 'ಕುಯಿಲು ಮುತ್ತೈದೆ' ಎಂದು ಕರೆಯುತ್ತಾರೆ. ಗುಂಡು ಕಲ್ಲನ್ನು 'ಗುಂಡಪ್ಪ' ಎಂದು ಕುಯಿಲು ಮುತ್ತೈದೆಯ ಮಗು ಎಂದು ಹೇಳಿ ಎಲ್ಲ ಶಾಸ್ತ್ರಗಳನ್ನು ಮೊದಲು ಗುಂಡಪ್ಪ ಮತ್ತು ಅವನ ತಾಯಿಗೆ ಮಾಡಿ ನಂತರ ಮಗು ಬಾಣಂತಿಗೆ ಮಾಡುತ್ತಾರೆ. ಬೇವು ಆರೋಗ್ಯ ಸೂಚಕವೂ, ಕ್ರಿಮಿನಾಶಕವೂ ಆದ್ದರಿಂದ ಮಕ್ಕಳಿಗೆ, ಬಾಣಂತಿಯರಿಗೆ

ಬಹಳ ಉಪಯುಕ್ತ. ಬಾಣಂತಿ ಬೇವು ಮತ್ತು ಕುಡುಗೋಲನ್ನು ಹಿಡಿದು ಸೂರ್ಯ ದರ್ಶನಕ್ಕೆ ಬರುತ್ತಾಳೆ. ಅಲ್ಲಿ ಮಣೆ ಮೇಲೆ ನಿಂತು ಬೇವಿನಿಂದ ಬೆನ್ನೀರು ಹಾಕಿಸಿಕೊಂಡು ಸೂರ್ಯನಿಗೆ ಅರ್ಘ್ಯ ಕೊಟ್ಟು ನಮಸ್ಕರಿಸಿ ಆರೋಗ್ಯಕಾರಕ ಸೂರ್ಯನನ್ನು ಹಿಂತಿರುಗಿ ನೋಡುತ್ತಾ ಒಳ ಹೋಗುತ್ತಾಳೆ. ಮತ್ತೆ ಮತ್ತೆ ಮಕ್ಕಳಾಗಲೆಂಬುದಕ್ಕಾಗಿ ಸೂರ್ಯನನ್ನು ತಿರುಗಿ ನೋಡುವುದು. ಗಿರಿಯಮ್ಮ 'ಲವಕುಶ ಕಾಳಗ'ದಲ್ಲಿ ಕುಯಿಲೊಕ್ಕುಮಿಂದ ಬಗೆ ಉಲ್ಲೇಖಿಸಿದ್ದಾಳೆ. ಹಾಗೆಯೇ ಪಿ.ವಿ. ಕೃಷ್ಣಾಬಾಯಿಯವರು ಒಂದು ಹಾಡನ್ನೇ ರಚಿಸಿದ್ದಾರೆ.

> ವಸುದೇವ ಸುತನ ಜನನಿಗೇ । ದಶರಾತ್ರಿ
> ಯಾಗಿರಲೂ । ಎಸೆವ ಮಾಣಿಕದಾ । ಕೊ
> ಯಿಲಾನೂ । ಕೊಯಿಲಾನೂ ಶ್ರೀರಂಗನರಸೀ ।
> ಶಶಿಮುಖಿಯರು ಹಸೆಗೆ ಕರೆದಾರೂ
> ಬಾಣಂತಿ ಯಶೋದೆ ಬೇವೂ ಕುಡಿಗೋಲ
> ಪಿಡಿದೂ । ಬೇಗದಲಿ ಬಂದೂ ಕುಳಿತಾಳೂ ।
> ______________________________
> ______________________________
>
> ಬೇವು ಕುಡಿಗೋಲಾ ಪಿಡಿದೂ । ಬಾಲನಾ
> ಎತ್ತೀಕೊಂಡು । ಸೂರ್ಯಗರ್ಘ್ಯವ ತಾ
> ಕೊಟ್ಟು ॥ ಕಾಂತೆ ಪ್ರಜ್ವಲಿಸುತ್ತಾ [86]

ಕುಯಿಲು ಹೋಗುವ ವಿಧಿ ವಿಧಾನಗಳ, ಅದಕ್ಕಾಗಿ ಮಾಡಿದ ಸಿದ್ಧತೆಗಳನ್ನೆಲ್ಲ ಈಕೆ ಇಲ್ಲಿ ದಾಖಲಿಸುತ್ತಾರೆ. ಕುಯಿಲು ಶಾಸ್ತ್ರದ ನಂತರ ಮಂಗಳ ಸ್ನಾನ ಮಾಡಿ ಮಗು, ಬಾಣಂತಿ ನಾಮಕರಣ ಶಾಸ್ತ್ರಕ್ಕೆ ಅಣಿಯಾಗುವರು. ಶಾಸ್ತ್ರೋಕ್ತವಾಗಿ ನಾಮಕರಣವಾದ ನಂತರ ಅಂದಿನ ಸಂಜೆ 'ತೊಟ್ಟಿಲ ಶಾಸ್ತ್ರ', ಬಜೆಬೆಣ್ಣೆಯಿಡುವ ಶಾಸ್ತ್ರ ನಡೆಯುತ್ತದೆ. ಹನ್ನೊಂದನೆಯ ದಿನವೇ ಕಿವಿ ಚುಚ್ಚುವ ಶಾಸ್ತ್ರವೂ ರೂಢಿಯಲ್ಲಿದೆ. ಮಗುವನ್ನು ಮಲಗಿಸುವ ತೊಟ್ಟಿಲನ್ನು ಅಲಂಕರಿಸಿ ಮೊದಲಿಗೆ ಗಣಪತಿ ಪೂಜೆ ನಂತರ ತೊಟ್ಟಿಲ ಪೂಜೆ ಕ್ರಮವಾಗಿ ನಡೆದು ಹೆಂಗಳೆಯರಿಗೆ ಮನರಂಜನೆಯನ್ನು, ಅಮಿತ ಉತ್ಸಾಹವನ್ನು ಉಂಟು ಮಾಡುತ್ತದೆ. ಪ್ರತಿಯೊಂದು ಶಾಸ್ತ್ರವನ್ನು ಮೊದಲು ಗುಂಡಪ್ಪನಿಗೆ ಮಾಡಿ ನಂತರ ಮಗುವಿಗೆ ಮಾಡಲಾಗುತ್ತದೆ. ಇದರ ಉದ್ದೇಶ ಮಗುವಿಗೆ ದೃಷ್ಟಿಯಾಗದಿರಲಿ ಮತ್ತು ಮಗು ಗುಂಡುಕಲ್ಲಿನಂತೆ ಗುಂಡಾಗಿ ಆರೋಗ್ಯದಿಂದಿರಲಿ ಎಂದು. ಮೊದಲಿಗೆ ತೊಟ್ಟಿಲಿಗೆ ಗುಂಡಪ್ಪನನ್ನು ಹಾಕುವಾಗ ಹಾಡುವ ಹಾಡಿನಲ್ಲಿ ಹಾಸ್ಯ ತುಂಬಿರುತ್ತದೆ. ಮಂಜುಳಾ ಸುಬ್ಬರಾವ್‌ರವರ ಗುಂಡಪ್ಪನ ಜೋಗುಳ ಹೀಗಿದೆ:

ಪುಟ್ಟ ಕಂದನ್ನ ತೊಟ್ಟಿಲೊಳಿಟ್ಟು
ಥಟ್ಟನೆ ನಿನ್ನ ಕಾಲ್‌ಬಳಿ ಇಟ್ಟು
____

____
ಮತ್ತೆ ಬೇಡಲು ನಿನಗೆ ಗೊತ್ತೇ ಇಲ್ಲ
ವತ್ತಿ ಹೂರಣ ಅರೆಯುವರೆಲ್ಲ
ಸುತ್ತಾಡುವೆ ಒರಳಲ್ಲಿ ನೀನು ಗುಂಡಣ್ಣ
ಎತ್ತಾಡಿಸುವರಾರು ನಿನಗೆ ಕಲ್ಲಣ್ಣ [87]

ಯಾವಾಗಲೂ ಅಳುವ ಕಂದನಲ್ಲ ನೀನು, ನಿನ್ನ ಹೆಸರನ್ನೇ ಇಟ್ಟಿರುವೆನು ಕಂದನಿಗೆ ಚೆನ್ನಾಗಿ ಪಾಲಿಸು ಎಂದು ಬೇಡುತ್ತಾ ಮಗುವನ್ನು ತೊಟ್ಟಿಲಿಗೆ ಹಾಕುತ್ತಾರೆ. ಮೂರು ಬಾರಿ ತೊಟ್ಟಿಲ ಮೇಲಿನಿಂದ ತೆಗೆದುಕೊಂಡು ಕೆಳಗಿನಿಂದ ಕೊಟ್ಟು ನಂತರ ತೊಟ್ಟಿಲಿಗೆ ಹಾಕುವ ಸಂಪ್ರದಾಯವಿದೆ. ಈ ಕ್ರಮವನ್ನು ಭೀಮವ್ವ ತಮ್ಮ ಕೀರ್ತನೆಯಲ್ಲಿ ಶ್ರೀಹರಿಯ 24 ನಾಮಗಳನ್ನು ಬಳಸಿ ಮೂರು ನುಡಿಗಳಲ್ಲಿ ಹಾಡಿದ್ದಾರೆ. ನಿಡಗುರುಕಿ ಜೀವೂಬಾಯಿಯವರ ಒಂದು ಕೀರ್ತನೆಯೂ ಈ ವಿಧಿವಿಧಾನಗಳನ್ನು ತಿಳಿಸುತ್ತದೆ. ಜೀವೂ ಬಾಯಿಯವರು ತೊಟ್ಟಿಲನ್ನು ಶೃಂಗರಿಸಿದ ಬಗೆಯನ್ನು ಹೀಗೆ ಹೀಳಿದ್ದಾರೆ.

ಚಿನ್ನದ ತೊಟ್ಲಿಗೆ ರನ್ನದ ಮಲಕು
ಕನ್ನಡಿ ಹೊಳೆವೊ ಮೇಲ್ಕಟ್ಟಿನ ಬೆಳಕು
ಸ್ವರ್ಣ ಮಂಟಪದಿ ರಾಜಿಪ ದಿವ್ಯ ಹೊಳಪು
ಕರ್ನೇರಲಂಕರಿಸಿ ನಲಿಯುವ ಕುಲುಕು ಜೋ ಜೋ [88]

ಗಲಗಲಿ ಅವ್ವನವರ ಜೋಗುಳದ ಹಾಡಿನಲ್ಲಿ ಯಶೋದೆ ಕೃಷ್ಣನ ತೊಟ್ಟಿಲನ್ನು ಶೃಂಗರಿಸಿದ ಪರಿ ಹೀಗಿದೆ.

ಅತಿ–ಬ್ಯಾಗ ವಿಶ್ವಕರ್ಮನ ಕರೆಸಿದಳು
ರತ್ನ ಮಾಣಿಕ ಮುತ್ತುಗಳ ತೆತ್ತಿಸಿದಳು
ಮತಿ–ಯಿಂದ ದಶರೂಪಗಳ ರಚಿಸಿಹಳು
ಮನ್ಮಥನ ಪಿತನು ಪವಡಿಸುವ ತೊಟ್ಟಿಲೊಳು ಜೋ ಜೋ [89]

ಶೃತಿ ತತಿ ಮಯವಾದ ರತ್ನದ ಕಾಲುಗಳು, ದೇವತೆಗಳೆ ತುಂಬಿದ್ದ ಕೀಲುಗಳನ್ನುಳ್ಳ ತೊಟ್ಟಿಲನ್ನು ಗೋಪಿ ಶೃಂಗರಿಸಿ, ತೊಟ್ಟಿಲ ಸುತ್ತ ಬಾಳೆಕಂಬ, ಜ್ಯೋತಿಗಳಿಂದ ಅಲಂಕರಿಸಿದಳು. ಹಸಿರು ಅಂಗಿ, ಕುಂಚಿಗಿ (ಟೋಪಿ) ಮಾಣಿಕದ ವಸ್ತ್ರಗಳಿಂದ ಮಗುವನ್ನು ಶೃಂಗರಿಸಿ.

ಕೂಸಿನ ಕೊಳ್ಳಿರಿ ದೋಷರಹಿತನ
ವಾಸುದೇವನ ತನ್ನಿ ವಾಸಗಾರನ
ಕೇಶವ ಕೊಳ್ಳಿ ಉಲ್ಲಾಸ ಭರಿತನ
ಶ್ರೀಶನ ತನ್ನಿ ಸರ್ವೇಶ ಸುಂದರನ ಜೋ ಜೋ ।

ಮಾರನಯ್ಯನ ತಾರೆಂದು ಭಾರತಿಯು
ವಾರಿಜಾಕ್ಷನ ಕೊಳ್ಳಿರೆಂದು ಸರಸ್ವತಿಯು
ಸೂರ್ಯ ಮೇರು ಸುತ್ತ ಎಂತಪ್ಪ ಹರಿಯು
ಮೂರೆರಡು ಬಾರಿ ಎತ್ತಿ ಮಲಗಿಸ ಸತಿಯು ಜೋ ಜೋ [90]

ಹೀಗೆ ತೊಟ್ಟಿಲಿಗೆ ಹಾಕಿದ ಮಗುವಿಗೆ ಸೋದರತ್ತೆಯೇ ಹೆಸರಿಡಬೇಕೆಂಬ ನಿಯಮವಿದೆ. ಕೃಷ್ಣನಿಗೆ ಅವನ ಸೋದರತ್ತೆ ಕುಂತಿ ಬಂದು ಹೆಸರನ್ನಿಡುತ್ತಾಳೆ.

ಸೋದರತ್ತೆ ಕುಂತಿ ಸೊಗಸಿಗೆ ಬಂದು
ಮಾಧವ ಅಂತ್ಹೆಸರಿಟ್ಟಳು ಬಂದು
ಆದರದಿ ಗೋಪ ಉಡುಗೊರೆ ಕೊಟ್ಟ ತಂದು
ವಿನೋದದಿ ಗೋಪಿ ಗುದ್ದಿದಳು ಒಂದೊಂದು ಜೋ ಜೋ [91]

ಸೋದರತ್ತೆ ಹೆಸರಿಟ್ಟಾಗ ಉಡುಗೊರೆ ಕೊಟ್ಟು ವಿನೋದಕ್ಕಾಗಿ ಅವಳ ಬೆನ್ನಿಗೆ ಗುದ್ದು ಕೊಡುವುದು ರೂಢಿಯಲ್ಲಿದೆ.

ತೊಟ್ಟಿಲಿಗೆ ಮೊದಲ ಬಾರಿ ಹಾಕಿದಾಗ ಮಗುವಿಗೆ ಬಜೆಬೇರನ್ನು ಅರೆದು ಬೆಣ್ಣೆ ಕಲಿಸಿ ತಿನ್ನಿಸುವ ಪರಿಪಾಠವಿದೆ. ಬಜೆಬೆಣ್ಣೆಯಿಟ್ಟ ಕ್ರಮವನ್ನು ಸರಸ್ವತಿ ಬಾಯಿಯವರ ಹಾಡಿನಲ್ಲಿ ಕಾಣಬಹುದಾಗಿದೆ.

ಬಜೆಬೆಣ್ಣೆನಿಡುವೆನು ಬಾ ರಂಗ ಮೋಹನಾಂಗ ಕೃಷ್ಣಾ

ಮೀಸಲಳಿದ್ದಾಲು ಕಾಸಿದ ಮೊಸರನ್ನ
ಸೋಸಿಲಿ ಕಡೆದ ಬೆಣ್ಣೆ ವಾಸುದೇವನೆ ನಾ [92]

ಬಜಬೆಣ್ಣೆಗಾಗಿ ಮನೆ ಮನೆಗಳಿಂದ (ಕನಿಷ್ಠ 5) ಹಾಲು, ಬೆಣ್ಣೆ ಬೇಡಿ ತರುವ ಪದ್ಧತಿಯಿತ್ತು. ಮಗು 'ಕೃಷ್ಣನಂತೆ ಮನೆ ಮನೆಗೂ ಹೋಗಿ ಹಾಲು ಬೆಣ್ಣೆಗಳನ್ನು ಕುಡಿದು ತಿಂದು ಪುಷ್ಟಿಯಾಗಿ ಬೆಳೆಯಲೆಂದೇ ಭಾವನೆ. ಹೀಗೆ ಬೆಳೆದ ಮಕ್ಕಳನ್ನು ಕಂಡರೆ ಎಲ್ಲರಿಗೂ ಪ್ರೀತಿ.' [93] ಹಿರಿಯ ಮುತ್ತೈದೆಯ ನೇತೃತ್ವದಲ್ಲಿ ಎಲ್ಲ ಕಾರ್ಯಗಳು ನಡೆಯುತ್ತವೆ.

ಹನ್ನೊಂದನೆಯ ದಿನವೇ ಕಿವಿ ಚುಚ್ಚುವ ಶಾಸ್ತ್ರವನ್ನೂ ಮಾಡುವ ಸಂಪ್ರದಾಯವಿದೆ. ಕಿವಿ ಚುಚ್ಚುವ ಶಾಸ್ತ್ರಕ್ಕೆ ಹಿರಿಯರು ಹೂವಿನ ತೊಟ್ಟನ್ನು ಸುಣ್ಣದಲ್ಲಿ ಅದ್ದಿ ಕಿವಿಯಲ್ಲಿ ಗುರುತು ಮಾಡಿ ನಂತರ ಕಿವಿಯನ್ನು

ಚುಚ್ಚಿ ಆಭರಣ ಹಾಕುತ್ತಾರೆ. ಪಿ.ವಿ. ಕೃಷ್ಣಾಬಾಯಿ ತಮ್ಮ ಒಂದು ಹಾಡಿನಲ್ಲಿ ಈ ಶಾಸ್ತ್ರದ ವಿವರಗಳನ್ನು ತಿಳಿಸಿದ್ದಾರೆ.

ದಿನ ವಳ್ಳೆದೆಂದು । ಗೋಕುಲ ಶ್ರಿಂಗಾರ ಮಾಡಿ
ತನಯ ಕೃಷ್ಣಯ್ಯನಾ ಕಿವಿಯಾನೂ ಕಿವಿಯಾ
ಕುಕ್ಕುವೆನೆಂದು । ನೆನೆದಳೆ ಗೋಪಿ ಮನಾದಲ್ಲಿ ॥

ಚಂದ್ರಮನಾ ರಾಣಿ ಗಂಧದಲಿ ಬಟ್ಟಿಟ್ಟು

ಸೂರ್ಯಮನಾ ರಾಣಿ ಸುಣ್ಣದಲಿ ಬಟ್ಟಿಟ್ಟು

ಸಿತಗಿರಿವಾಸಾಶ್ರೀಪತಿನಾರಾಸಿಂಹನಾ । ಸುತನೆಂದು
ಗೋಪಿ ನೆನೆಯುತ್ತ । ನೆನೆಯುತ್ತ ಕರ್ನದಲೀ ರತು
ನದ ಕಂಬಗಳ ಧರೀಸೋಳೂ [94]

ಕಿವಿಯನ್ನು ಚಿನ್ನದ ಕಡ್ಡಿಯಲ್ಲಿ ಚುಚ್ಚಲಾಗುತ್ತದೆ. ಮಗುವಿಗೆ ಕಿವಿ ಚುಚ್ಚಿದಾಗ ಮಗುವಿನ ಕಿವಿಗೆ 'ಕರ್' ಎಂಬ ಶಬ್ದ ಕೇಳುತ್ತದೆ. ಎರಡೂ ಬಾರಿ ಆ ಶಬ್ದ ಕೇಳಿದಾಗ ವೇದನೆ ಉಂಟಾಗುತ್ತದೆ. ಆ ಶಬ್ದ ಬಂದಾಗಲೆಲ್ಲ ನೋವಾಗುವುದಿಲ್ಲವೆಂದು ಭಾವನೆ ಬರಿಸಲು ಒಣ ಕೊಬ್ಬರಿಯನ್ನು ಶಿಶುವಿನ ಕಿವಿಯ ಬಳಿ ಮುರಿಯಲಾಗುತ್ತದೆ. ಶಬ್ದ ಬಂದಾಗಲೆಲ್ಲ ನೋವಾಗುವುದಿಲ್ಲವೆಂದು ಸಮಾಧಾನ ಶಿಶುವಿಗೆ ಉಂಟಾಗುತ್ತದೆ. ಈ ಸಂಗತಿಯನ್ನು ಪಿ.ವಿ. ಕೃಷ್ಣಾಬಾಯಿ ತಮ್ಮ ಇನ್ನೊಂದು ಕಿವಿ ಚುಚ್ಚಿದ ಹಾಡಿನಲ್ಲಿ ಹೇಳುತ್ತಾರೆ.

ವೇದನೆ ಸಹಿಸದೆ ಕೃಷ್ಣಾ ಬಲು ರೋಧನವನು ಮಾಡುತಿರಲೂ ॥
ಆದರಿಸುತ ಬಾಲನ ಕರ್ಣದೊಳು ಗೋಪೀ ॥
ಮೋದದಿಂ ಕೊಬರಿಯ । ಮುರಿದು ಬಾಯೊಳಗಿಟ್ಟು ।
ಊದಿ ಸಂತೈಸಿ ನಲೀದಾಳೂ [95]

ಎಲ್ಲ ಶಾಸ್ತ್ರಗಳು ಮುಗಿದ ಬಳಿಕ ಮಗುವಿಗೆ ರಕ್ಷೆಯಿಡುತ್ತಾರೆ. ಮಂಜುಳಾ ಸುಬ್ಬರಾವ್ ರಕ್ಷೆ ಇಡುವ ಹಾಡನ್ನು ಹೀಗೆ ಹೇಳುತ್ತಾರೆ.

ರಕ್ಷೆ ಇಡುವೆನು ನಂದ ಕಂದ
ರಕ್ಷೆ ಇಡುವೆನು ರಕ್ಷೆ ಇಡುವೆ

ಕಂಗಳಿಗೆ ಕಾಮನ ರಕ್ಷೆ ಇಡುವೆನು
ಅಂಗಾಲಿಗೆ ಶ್ರೀರಂಗನ ರಕ್ಷೆ

ಹಿಂಗದ ಭೀಮನ ರಕ್ಷೆ ಬೆನ್ನಿಗೆ
ಮುಂಗೈಗೆ ಮುರಾರಿ ರಕ್ಷೆ ಗೋಪಾಲ [96]

ರಕ್ಷೆಯಿಟ್ಟು ಆರತಿ ಮಾಡಿ ಅಂದಿನ ಕಲಾಪಗಳನ್ನು ಮುಗಿಸುತ್ತಾರೆ.

ಮಿತ್ರೆ ಯಶೋದೆ ಶ್ರೀಕೃಷ್ಣ ಮೂರುತಿಗೇ
ಹಚ್ಚಿ ಕುಂಕುಮ ವೀಳ್ಯವ ನೀಡುತಲೀ ಅರ್ಥಿಯಿಂ
ದಲಿ ಮಂತ್ರಾಕ್ಷತೆಗಳ । ಹರಸುತ್ತ ತಳಿದು ಆರುತಿ
ಮಾಡುತ್ತಾ [97]

ಪಿ.ವಿ. ಕೃಷ್ಣಾಬಾಯಿಯವರು ಆರತಿಯ ಹಾಡನ್ನು ರಚಿಸಿದ್ದಾರೆ. ಇನ್ನೂ ಅನೇಕ ಆರತಿಯ ಹಾಡುಗಳು ಮಹಿಳಾ ಹರಿದಾಸರ ಕೃತಿಗಳಲ್ಲಿ ಸೇರಿವೆ. ಈ ಎಲ್ಲ ಸಂಪ್ರದಾಯಗಳೆಡೆಗೆ ಬೆಳಕು ಚೆಲ್ಲುವ ಇನ್ನೂ ಅನೇಕ ಕೃತಿಗಳು ರಚನೆಯಾಗಿವೆ.

<u>ನಿಷ್ಕ್ರಮಣ:</u>

ಮೊಟ್ಟ ಮೊದಲ ಬಾರಿಗೆ ಮಗುವನ್ನು ಮನೆಯಿಂದ ಹೊರಗೆ ಒಯ್ಯುವಾಗ ಮಾಡುವ ಒಂದು ಕ್ರಿಯೆ. ಮನೆಯಲ್ಲೇ ಸುರಕ್ಷಿತವಾಗಿ ಇರುತ್ತಿದ್ದ ಮಗುವಿಗೆ ಹೊರಗಿನ ಪ್ರಪಂಚದ ಪರಿಚಯ ಮಾಡಿಸುವ ಸಲುವಾಗಿ ಮಗುವಿಗೆ ಸೂರ್ಯ, ಚಂದ್ರ, ಅಗ್ನಿ, ದನಗಳನ್ನು ತೋರಿಸುವುದು. ದೇವಾಲಯಕ್ಕೆ ಹೋಗಿ. ಆಪ್ತ ಬಂಧುಗಳ ಮನೆಗೆ ಕರೆದುಕೊಂಡು ಹೋಗುವುದು, ಎಲ್ಲವೂ ಇದರಲ್ಲಿ ಸೇರಿದೆ. ಬಾಣಂತಿಯೂ ವಿಶ್ರಾಂತಿ ಪಡೆಯುತ್ತಾ ನೀರನ್ನು ಮುಟ್ಟದೆ ಇರುವ ಕಾರಣ, ಗಂಗಾ ಪೂಜೆ ಮಾಡಿಸುವ ಮೂಲಕ ತನ್ನ ಗೃಹಕೃತ್ಯಗಳಿಗೆ ಹಿಂತಿರುಗಲು ಈ ಕ್ರಿಯೆ ನೆರವಾಗುತ್ತದೆ. ಇದಕ್ಕೆ 'ಹೊಳೆ ಮೆಟ್ಟುವುದು' ಎಂದೂ ಹೇಳಲಾಗುತ್ತದೆ. ಗಿರಿಯಮ್ಮನ ಕೃತಿಯಲ್ಲಿ ಸೀತೆ ಗಂಗಾ ಪೂಜೆ ಮಾಡಿ ಮಕ್ಕಳನ್ನು ಮೊದಲ ಬಾರಿ ಹೊರಗೆ ಒಯ್ದಿದ್ದರ ಬಗ್ಗೆ ಮಾಹಿತಿಯಿದೆ.

ಕಂದನ್ನೆತ್ತಿ ಸೀತೆ ನೀರ ಹೊಳೆಗ್ಹೋಗೆ
ವಾನರಂಗಳ ವಯ್ವುವೆಂದು
ದೇವಿ ಮುನಿದರೆ ಶಾಪ ತಟ್ಟುವುದೆಂದು
ಬಾಲನ ದರ್ಭಿಯಲಿ ನಿರ್ಮಿಸಿದ [98]

ಹೊಳೆ ಮೆಟ್ಟಿದ ನಂತರ ವಿಶ್ರಾಂತಿ, ಆರೈಕೆಯಲ್ಲಿದ್ದ ಬಾಣಂತಿ ತನ್ನ ದೈನಂದಿನ ಕೆಲಸ ಕಾರ್ಯಗಳನ್ನು ಮಾಡಲು ಆರಂಭಿಸಬಹುದು. ಬಾಣಂತಿಗೆ ವಿಶ್ರಾಂತಿ, ಆರೈಕೆ ಬಹು ಮುಖ್ಯವಾದ್ದರಿಂದ ಶಾಸ್ತ್ರಗಳ ಮೂಲಕ ಕಟ್ಟು ಪಾಡುಗಳನ್ನು ವಿಧಿಸಲಾಗುತ್ತಿತ್ತು. ಇದನ್ನು ಮಹಿಳಾ ಹರಿದಾಸರ ಕೃತಿಗಳಲ್ಲಿ ಕಾಣಬಹುದಾಗಿದೆ.

<u>ಅನ್ನ ಪ್ರಾಶನ:</u>

ಮಗುವಿಗೆ ಶಾರೀರಿಕವಾಗಿ ದೃಢತೆ ಉಂಟಾಗಲು ಆಹಾರವು ಅಗತ್ಯವಾಗಿದ್ದು ಇತರ ಆಹಾರಗಳನ್ನು ಕೊಡುವ ಅವಶ್ಯಕತೆಯಿದೆ. ಮೊದಲ ಬಾರಿ ಮಗುವಿಗೆ ಅನ್ನವನ್ನು ತಿನ್ನಿಸುವ ಕ್ರಮವೇ ಅನ್ನಪ್ರಾಶನ. ತುಪ್ಪ, ಹಾಲು, ಸಕ್ಕರೆ ಹಾಕಿದ ಅನ್ನವನ್ನು ಚಿನ್ನದ ಚಮಚದಲ್ಲಿ ತಿನ್ನಿಸಬೇಕೆಂದಿದೆ. ಬೆಳ್ಳಿಯ ಪಾತ್ರೆ ಅಥವಾ ತಟ್ಟೆಯಲ್ಲಿ ತಿನ್ನಿಸುವುದು ವಾಡಿಕೆಯಲ್ಲಿದೆ. ಶ್ರೀಕೃಷ್ಣನಿಗೆ ಅನ್ನಪ್ರಾಶನ ಮಾಡಿಸಿದ ಸಂದರ್ಭವನ್ನು ಪಿ.ವಿ. ಕೃಷ್ಣಾಬಾಯಿ ತಮ್ಮ ಒಂದು ಹಾಡಿನಲ್ಲಿ ವಿವರಿಸುತ್ತಾರೆ.

> ಕೃಷ್ಣಗೆ ನಂದಗೋಪ । ದಿವ್ಯ ಅನ್ನಪ್ರಾಶನ
> ವ ಮಾಡಿಸಲೂ ॥ ಖರ್ನೆ ಗೋಪಿಯ ಸಹ ವಿ
> ಪ್ರ ಮುತ್ತೈದೇರ । ಚೆನ್ನಾಗಿ ಪೂಜಿಸಿ ಆರ್ಶೀವಾದವ
> ಗೊಂಡು ರನ್ನದ ಪೀಠದಲಿ ಕುಳೀತಿದ್ದಾ ॥
>
> ---
>
> ಅಳಬಾಳೆಲೆಗಳನ್ಹಾಕೀ । ದಿವ್ಯ ಠಾಣಾ ದೀವಿಗೆ
> ಗಳ ಬೆಳಗೀ ॥ ಬಾಲೆಯರೆಲ್ಲ ಪಾತ್ರಾಭಿಗಾರವ
> ಮಾಡೆ । ಬಾಲಕೃಷ್ಣಗೆ ಶುಭ ನಾರಿಯರೆಲ್ಲರು ।
>
> ---
>
> ಕೃಷ್ಣಗೆ ಭೋಜನವ ಮಾಡಿಸಲೂ ॥ ಆಗ ವಿಪ್ರರು
> ಜಯ ಜಯವೆನಲೂ ॥ ಉತ್ಕೃಷ್ಣ ಅನ್ನ ಮುಹೂರ್ತದ
> ಸಮಯದಿ ಮುತ್ತೈದೆರೆಲ್ಲರು ಹರಸಿ ಕುಂಕುಮವಿಟ್ಟು ।
> ಕೃಷ್ಣಾಗಾರತೀಯಾ ಬೆಳಾಗೀರೇ [99]

ಇದೇ ಹಾಡಿನಲ್ಲಿ ನಾನಾ ಬಗೆಯ ಭಕ್ಷ್ಯಗಳನ್ನು ಕೃಷ್ಣಾಬಾಯಿಯವರು ಹೆಸರಿಸಿದ್ದಾರೆ. ಪ್ರತಿ ಕಾರ್ಯಕ್ರಮಗಳಲ್ಲೂ ಆರುತಿ ಇದ್ದೇ ಇರುತ್ತದೆ. ಅನ್ನ ಮುಹೂರ್ತದ ನಂತರವೂ ಆರತಿ ಬೆಳಗಿದ ಕ್ರಮವನ್ನೂ ತಿಳಿಸಿದ್ದಾರೆ.

<u>ಚೂಡಾಕರ್ಮ:</u>

ಮನೆಯೆ ಮೊದಲ ಪಾಠಶಾಲೆ ಎಂಬಂತೆ ಮಗು ಮೂರು ವರ್ಷಗಳಲ್ಲಿ ಅನೇಕ ಸಂಗತಿಗಳನ್ನು ತಿಳಿದುಕೊಂಡಿರುತ್ತದೆ. ಹೆಣ್ಣು ಮಕ್ಕಳಿಗೆ ಮನೆಯೇ ಮುಖ್ಯ. ಗಂಡು ಮಕ್ಕಳಿಗೆ ಹೊರಗಿನ ವಾತಾವರಣ, ವ್ಯವಹಾರ, ಸಾಮಾಜಿಕ ಪ್ರಜ್ಞೆ ಅಗತ್ಯ. ವ್ಯವಹಾರ ಸಾಧನೆಗೆ ಅಗತ್ಯವಾದ ವಿದ್ಯೆ ಕಲಿಸುವ ಮೊದಲು 'ಅಕ್ಷರಾಭ್ಯಾಸ' ಸಂಸ್ಕಾರ ನಡೆಸಲಾಗುತ್ತದೆ. ಗಂಡು ಮಕ್ಕಳಿಗೆ ಅಲಂಕಾರದ ಬಗ್ಗೆ ಗಮನ ಹರಿಯದೆ

ಇರಲೆಂಬ ಕಾರಣಕ್ಕೆ ಮುಂಗೂದಲನ್ನು ತೆಗೆಸಿ 'ಶಿಖೆ' ಇಡಿಸುತ್ತಾರೆ. ಈ ಶಿಖೆ ಇಡಿಸುವ ಸಂಸ್ಕಾರಕ್ಕೆ 'ಚೌಲ' ಎನ್ನಲಾಗುತ್ತದೆ. ಚೂಡಾ ಕರ್ಮ ಎಂಬ ಹೆಸರೂ ಇದಕ್ಕಿದೆ. ಚೌಲ ಸಂಸ್ಕಾರಕ್ಕೆ ಸಂಬಂಧಿಸಿದಂತೆ ಪಿ.ವಿ. ಕೃಷ್ಣಾಬಾಯಿಯವರ ಒಂದು ಹಾಡಿನ ಸಾಲುಗಳು ಹೀಗಿವೆ:

ಮುತ್ತಿನ ಹಸೆಮಣೆ ಮೇಲೆ । ಮಿತ್ರೆಯಶೋದೆ
ನಂದ ಗೋಪಾ ॥ ಕೃಷ್ಣಾ ಮೂರುತಿಯ ಸಹೀತಾಗೀ
ಸಹಿತಾಗೀ ಕುಳಿತಿರಲೂ ಮಿತ್ರೆಯರು ಹಸೆಗೆ ಕರೆದಾರೂ

ಪಾಂಡವಪಾಲ ಶ್ರೀಹರಿಗೇ । ಚಂಡಿಕೆನೆಸಗಲು ಭೂಮಿ
ಮಂಡಲ ಸುರರೂ ಜಯವೆಂದೂ ॥ ಜಯವೆಂದೂ ಶ್ರೀ
ಹರಿಯಾ ಮಂಡೆಯೊಳಕ್ಷತೆ ತಳಿದಾರೂ ಶೋಭಾನೆ

ಕಾಡಾನೆಯ ಪೊರೆದ ಶ್ರೀಹರಿಗೇ । ಚೂಡಾಕರ್ಮವ
ನೆಸಗೇ ನೋಡುತ್ತ ಸುರರು ಜಯಾವೆಂದು
ಜಯವೆಂದು ಮಂಗಳವಾ ಪಾಡಿ ಆರತಿಯಾ ಬೆಳಾಗೀರೆ ಶೋಭಾನೆ [100]

ಚೌಲದ ಜೊತೆಗೇ ಅಕ್ಷರಾಭ್ಯಾಸವನ್ನು ಮಾಡಲಾಗುತ್ತಿತ್ತು. ಮೊದಲು ಗಣಪನನ್ನು ಪೂಜಿಸಿ, ವಿದ್ಯಾಧಿದೇವತೆಯಾದ ಸರಸ್ವತಿಯನ್ನು ಪೂಜಿಸುತ್ತಾರೆ. ಅಕ್ಕಿಯಲ್ಲಿ ಓಂಕಾರ, ಶ್ರೀಕಾರ ಬರೆಸಿ ಅಕ್ಷರ ತಿದ್ದಿಸುತ್ತಾರೆ. ಪಂಡಿತರ ಮಂತ್ರಗಳ ಜೊತೆಗೇ ನಡೆಯುವ ಈ ಕರ್ಮಗಳಲ್ಲಿ ಹೆಂಗಳೆಯರ ಹಾಡುಗಳೂ ಮುಖ್ಯ ಸ್ಥಾನ ಪಡೆದಿವೆ. ಕೃಷ್ಣನಿಗೆ ಅಕ್ಷರಾಭ್ಯಾಸ ಮಾಡಿಸಿದ್ದನ್ನು ಪಿ.ವಿ. ಕೃಷ್ಣಾಬಾಯಿ ಅದೇ ಕೀರ್ತನೆಯಲ್ಲಿ ಹೀಗೆ ಹೇಳುತ್ತಾರೆ.

ಕ್ಷರಾಕ್ಷರಪೂರ್ಣನಿಗೆ ಅಕ್ಷರಾಭ್ಯಾಸವನೆಸಗೇ ।
ಇಕ್ಷುಕದಳಿಯೂ ಫಲಾಪುಷ್ಪ । ಫಲಪುಷ್ಪ
ಗಣಪನಿಗೆ ಚಕ್ಕುಲಿ ಲಡ್ಡಿಗೆಗಳಾ ಸಲಿಸೋರೂ ಶೋಭಾನೆ [101]

ಗಿರಿಯಮ್ಮ ರಚಿಸಿರುವ ಉದ್ದಾಳೀಕನ ಕಥೆಯಲ್ಲಿ ಉದ್ದಾಳೀಕನು ತನ್ನ ಮಗನಿಗೆ ಅಕ್ಷರಾಭ್ಯಾಸ ಮಾಡಿಸಿದ ಕ್ರಮವನ್ನು ಹೀಗೆ ದಾಖಲಿಸುತ್ತಾಳೆ.

ಅಕ್ಷರಾಭ್ಯಾಸವ ಮಾಡಬೇಕೆಂದು ಗಂಧಾಕ್ಷತೆ ಫಲಪುಷ್ಪಗಳಿಂದ
ಇಕ್ಷು ದಂಡವು ಕದಳಿ ಭಕ್ಷ್ಯ, ಮೋದಕ, ಚಿಗಳಿ ಸಾಕ್ಷಾತ್
ಗಣಪಗೊಂದಿಸಿದ

ಸರಸ್ವತಿ ಗಣಪಗೆರಗಿ ತಾನು (ತಂಡುಲ) ಹರವಿದ
ಹಲಗೆಯ ಮೇಲೆ

ಓನ್ನಮೋ ನಾರಾಯಣನೆನುತಲೆ ಬರೆದನು
ತನಯನ ಕೈಲಿ ಓದಿಸಿದಾ [102]

ಅಕ್ಕಿಯಲ್ಲಿ ಅಕ್ಷರ ತಿದ್ದಿಸುವ ಕ್ರಮ ಇಲ್ಲಿ ಕಂಡು ಬರುತ್ತದೆ. ಗಣಪನಿಗೆ ನಿವೇದಿಸುವ ಕಬ್ಬು, ಬಾಳೆ, ಮೋದಕ, ಚಿಗುಳಿ, ಚಕ್ಕುಲಿ, ಲಡ್ಡಿಗೆಗಳ ಪ್ರಸ್ತಾಪವು ಈ ಎರಡೂ ಹಾಡುಗಳಲ್ಲಿ ಕಂಡು ಬರುತ್ತದೆ.

ಉಪನಯನ:

ಗಂಡು ಮಕ್ಕಳಿಗೆ ಎಂಟನೇ ವರ್ಷದಲ್ಲಿ ಮೋಕ್ಷಕ್ಕೆ ಮೂಲವಾದ ಬ್ರಹ್ಮವಿದ್ಯೆ ಕಲಿಯಲು ಅಧಿಕಾರ ನೀಡುವ ಉಪನಯನ ಸಂಸ್ಕಾರವನ್ನು ನಡೆಸಲಾಗುತ್ತದೆ. ಒಂದೆ ಉಪನೀತನಾದ ವಟುವು ಗುರುಕುಲದಲ್ಲಿದ್ದುಕೊಂಡು ವಿದ್ಯಾರ್ಜನೆ ಮಾಡಬೇಕಾಗಿತ್ತು. ಬ್ರಹ್ಮಚರ್ಯಾಶ್ರಮದ ನಿಯಮಗಳನ್ನು ಪಾಲಿಸುತ್ತಾ ವೇದಾದಿಗಳ ಅಧ್ಯಯನದ ಜೊತೆಗೆ ಜೀವನಾವಶ್ಯಕವಾದ ವಿದ್ಯೆಗಳನ್ನೂ ಕಲಿಯಬೇಕಿತ್ತು. ಗುರು ಮುಖದಿಂದ ವೇದ, ವೇದಾಂತ, ಶಾಸ್ತ್ರ ಮುಂತಾದವುಗಳನ್ನು ಕಲಿಯಲು 'ಉಪನಯನ' ಅಥವಾ 'ಬ್ರಹ್ಮೋಪದೇಶ' ಸಂಸ್ಕಾರ ಅಗತ್ಯ. ಉಪನಯನ ಕರ್ಮದಲ್ಲಿ ಪಂಡಿತರ ಮಂತ್ರಗಳು ಅತೀ ಮುಖ್ಯವಾದರೂ, ಹೆಂಗಳೆಯರ ಶಾಸ್ತ್ರ ಸಂಪ್ರದಾಯ ಹಾಡುಗಳೂ ಅಷ್ಟೇ ಮುಖ್ಯ. ಕನ್ನಡದ ಈ ಹಾಡುಗಳು ತಿಳಿಸುವ ಶಾಸ್ತ್ರಾರ್ಥ ನಿಯಮಗಳನ್ನು ಸರಳವಾಗಿ ತಿಳಿಸಿಕೊಡುತ್ತವೆ. ಉಪನಯನ ಸಮಾರಂಭದಲ್ಲಿ ನಡೆಯುವ ಮುಖ್ಯ ಶಾಸ್ತ್ರಗಳೆಂದರೆ, ಪುಣ್ಯಾಹ, ನಾಂದಿ, ನವಗ್ರಹ ಪೂಜೆ, ಹೋಮ, ಚೌಲ, ವಟು ಪೂಜೆ, ಚೌಲ ಪಂಕ್ತಿ (ಮಾತೃ ಸಹಭೋಜನ) ಯಜ್ಞೋಪವೀತಧಾರಣೆ, ಬ್ರಹ್ಮೋಪದೇಶ, ಮಾತೃಭಿಕ್ಷೆ, ಫಲಪೂಜೆ, ಭೂಮ, ಇತ್ಯಾದಿ. ಇದಕ್ಕೆ ಮೊದಲು ನಡೆಯುವ ತೈಲಶಾಸ್ತ್ರ, ಮಲ್ನೀರು ಶಾಸ್ತ್ರ, ತವರುಡುಗೆ, ಸಂಡಿಗೆ ಮುಹೂರ್ತ, ದೇವರ ಸಮಾರಾಧನೆ, ಇತ್ಯಾದಿ ಕಾರ್ಯಕ್ರಮಗಳಲ್ಲಿ ಹೆಂಗಳೆಯರ ಹಾಡೇ ಮುಖ್ಯ. ನಿಡಗುರುಕಿ ಜೀವೂಬಾಯಿಯವರ 'ಶ್ರೀರಾಮಜನನ ಸೀತಾಕಲ್ಯಾಣ' ಮತ್ತು ಗಿರಿಯಮ್ಮನ ದೀರ್ಘಕೃತಿಗಳಲ್ಲಿ ಉಪನಯನದ ಪ್ರಸ್ತಾಪವಷ್ಟೇ ಇದೆ. ಪಿ.ವಿ. ಕೃಷ್ಣಾಬಾಯಿ 'ಮುಂಜಿ ಹಾಡು' ಎಂಬ ಹಾಡಿನಲ್ಲಿ ಉಪನಯನದಲ್ಲಿ ನಡೆಯುವ ಎಲ್ಲ ಶಾಸ್ತ್ರಗಳ ಬಗ್ಗೆ ತಿಳಿಸಿದ್ದಾರೆ. ಇಲ್ಲಿನವರೆಗೆ ಸಿಕ್ಕಿರುವ ದೀರ್ಘವಾದ ಹಾಡು ಇದೊಂದೇ ಆಗಿದೆ.

ಶುಭಕಾರ್ಯ ನಡೆಯುವ ದಿವಸ ಉಪನಯನವಾಗುವ ಮಗುವಿಗೆ ಮತ್ತು ತಂದೆ–ತಾಯಿಯರಿಗೆ ಎಣ್ಣೆ ಶಾಸ್ತ್ರ ಮಾಡುವ ವಾಡಿಕೆಯಿದೆ. ಅಲ್ಲಿಂದ ಪ್ರಾರಂಭವಾಗುವ ಎಲ್ಲ ಕಾರ್ಯಕ್ರಮಗಳು ಈ ಹಾಡಿನಲ್ಲಿವೆ.

ಶ್ರೀರಾಮಗೆ ಮಾಡಿದರುಪನಯನವನೂ ಆ ದಶರಥ
ನೃಪನೂ ॥ ಶ್ರೀರಾಮಗೆ ಮಾಡಿದರುಪನಯನವನೂ

ಸೂರ್ಯ ಜಾತಾಶ್ರೀರಘುನಾಥಾ । ಮಾತಾಪಿತೃಗಳ ಸಹ
ಸೂರ್ಯೋದಯ ಕಾಲದಿ ಹಸೆಯಲಿ ಕುಳಿತಾ ॥ ಕುಂಕುಮವೀಳ್ಯವನಿತ್ತು
ನಾರಿಯರು ಪಾಡುತ ಆರತಿ ಮಾಡುವ ತೈಲಶಾಸ್ತ್ರವ ಮಾಡೀ [103]

ಎಣ್ಣೆಶಾಸ್ತ್ರದ ನಂತರ ಮಂಗಳ ಸ್ನಾನ ಮಾಡಿ ಮಲ್ನೀರು ಶಾಸ್ತ್ರ ಆಚರಿಸಲಾಗುತ್ತದೆ. ಶಾಸ್ತ್ರ ನೀರನ್ನು ಐದು ಜನ ಮುತ್ತೈದೆಯರು ತಾಯಿ ಮತ್ತು ಮಗನನ್ನು ಹಸೆಯ ಮೇಲೆ ನಿಲ್ಲಿಸಿ ತಾಯಿಯ ಬೆನ್ನಿನ ನೀರು ಮಗನ ಮೇಲೆ ಬೀಳುವಂತೆ ಹಾಕುತ್ತಾರೆ. ಉಪನಯನದ ನಂತರ ಗುರುಕುಲದಲ್ಲಿ ಮಗ ಯಾವ ತಾಯಿಯ ಪೋಷಣೆಯಲ್ಲಿಯಾದರೂ ಚೆನ್ನಾಗಿರಲಿ ಎಂಬ ಉದ್ದೇಶ ಇದಕ್ಕಿದೆ.

ಗಂಗಾಜನಕನಿಗೇ ಮಂಗಳ ಸ್ನಾನಾ ॥ ಮಾಡಿಸಿ ಮಾತಾಸುತರಂ
ಗಾಳದಿ ಮಣೆಯಲಿ ನಿಂತರು ವಾರದ ಕಲಶಗಳಲಿ ಅಂ
ಗಾನೆಯರು ಮಲ್ನೀರೆರೆದರು ನಾನಾ ಬಂಧುಗಳುಡುಗೊರೆ
ಗಳ ತಂದಿತ್ತರು ತೌರ್ಮನೆ ಉಡುಗೊರೆಯನ್ನಾ [104]

ಮಲ್ನೀರು ಶಾಸ್ತ್ರದ ಸಂದರ್ಭದಲ್ಲಿ ತಾಯಿಗೆ ತೌರು ಮನೆಯವರು ಉಡುಗೊರೆ ನೀಡುವ ಸಂಪ್ರದಾಯವೂ ಇಲ್ಲಿ ದಾಖಲಾಗಿದೆ. ಈ ಸಂದರ್ಭದಲ್ಲಿ ಅರಿಸಿನ ಕುಟ್ಟುವ ಮತ್ತು ಸಂಡಿಗೆ ಮುಹೂರ್ತವನ್ನೂ ನಡೆಸಲಾಗುತ್ತದೆ.

ಸಾಂಬಜನರ್ಚಿಸಿ । ಕುಟ್ಟುವಲರಿಸಿನ ಸಂಡಿಗೆ ಮು
ಹೂರ್ತಾದಿ ಸಾಂಗದಿ ನಡೆಸುತ [105]

ಇದರ ನಂತರ ದೇವರ ಸಮಾರಾಧನೆ ನಡೆಸಿದ ಉಲ್ಲೇಖವಿದೆ. ಇವೆಲ್ಲವೂ ಉಪನಯನದ ಪೂರ್ವಭಾವಿ ಕಾರ್ಯಕ್ರಮಗಳಾಗಿವೆ. ಈ ಕಾರ್ಯಕ್ರಮಗಳನ್ನು ಹಿರಿಯ ಮುತ್ತೈದೆಯರ ನೇತೃತ್ವದಲ್ಲಿ ನಡೆಸಲಾಗುತ್ತದೆ.

ಯಾವುದೇ ಶುಭ ಕಾರ್ಯವನ್ನು ನಡೆಸಬೇಕಾದರೂ ಶುದ್ಧಿಗಾಗಿ ನಡೆಸುವ ಕಾರ್ಯಕ್ರಮವೇ ಪುಣ್ಯಾಹ. ಪಂಚ ಭೂತಗಳನ್ನು, ಅವುಗಳ ಅಧಿದೇವತೆಗಳನ್ನೂ ಆಹ್ವಾನಿಸಿ ಸ್ಥಳ ಶುದ್ಧಿ, ದೇಹ ಶುದ್ಧಿ, ಮನ ಶುದ್ಧಿ, ಆತ್ಮ ಶುದ್ಧಿ ಪಡೆಯುವ ಒಂದು ಸಂಪ್ರದಾಯ. ಕುಲದೇವರನ್ನು, ಕುಲದ ಹಿಂದಿನ ಸರ್ವ ಪಿತೃಗಳನ್ನೂ, ಸಪ್ತ ಮಾತೃಕೆಯರನ್ನೂ ಆಹ್ವಾನಿಸಿ, ಪೂಜಿಸಿ, ಅನುಗ್ರಹ ಆಶೀರ್ವಾದ ಪಡೆಯುವ ಕ್ರಮವೇ ನಾಂದಿ. ನವಗ್ರಹಗಳ ಪ್ರೀತಿಗಾಗಿ ನವಗ್ರಹ ಪೂಜೆ ನಡೆಸಿ ವಟುವಿಗೆ ಚೌಲ ಕರ್ಮ ನೆರವೇರಿಸಲಾಗುತ್ತದೆ.

ನಂತರ ಚೌಲ ಪಂಕ್ತಿ ಅಥವಾ ಮಾತೃ ಸಹ ಭೋಜನ ನಡೆಯುತ್ತದೆ. ಬ್ರಹ್ಮೋಪದೇಶದ ಮೊದಲು ವಟುವು ತಾಯಿಯ ಜೊತೆ ಒಂದೇ ಎಲೆಯಲ್ಲಿ ಭೋಜನ ಮಾಡುವುದಕ್ಕೆ ಚೌಲಪಂಕ್ತಿ ಎನ್ನಲಾಗುತ್ತದೆ. ಉಪನಯನದ ನಂತರ ತಾಯಿಯ ಎಂಜಲನ್ನೂ ತಿನ್ನುವಂತಿಲ್ಲ. ಈ ಎಲ್ಲ ಕ್ರಮಗಳನ್ನು ಪಿ.ವಿ. ಕೃಷ್ಣಾಬಾಯಿ ಒಂದೇ ನುಡಿಯಲ್ಲಿ ಹೇಳಿದ್ದಾರೆ.

ಚೆಣ್ಣ ಸಹ ಮಾಡೀ ಕುಲದೇವ ಪೂಜಾದೇ ಸಮಾ
ರಾಧನೆಯನ್ನೂ ಮಾಡಿ । ವಿಪ್ರಸುವಾಸಿನಿ ಪೂಜಾ ॥
ಪುಣ್ಯಾಹವ ಮಾಡೀ । ಚೆನ್ನಾಗಿ ನಾಂದೀ ನವಗ್ರಹ
ಪೂಜಾ । ಚೌಲವ ಮಾಡಿಸಿ ವರ ಚೆಣ್ಣನಿಗೆ
ಚೌಲ ಪಂಕ್ತಿಯ ಭೋಜನ ವ್ಯಾಚರಿಸೀ ಸಣ್ಣ ವಟು
ಗಳ ಪೂಜಾ ॥ ಚೆಣ್ಣಗೆ ಮಾತೃ ಭೋಜನ ಮಾಡಿಸಿ ।
ವರ ಕರ್ನೆಯರಾರತಿ ಬೆಳಗಲು ರಾಜಾ [106]

ಈ ಕ್ರಮಗಳ ನಂತರ ವಿಧಿ ಪೂರ್ವಕವಾಗಿ ಯಜ್ಞೋಪವೀತಧಾರಣೆ ನಡೆಯುತ್ತದೆ.

ನೋಡಲು ಶುಭ ಮುಹೂರ್ತವದೂ ॥ ಯಜ್ಞೋಪವೀ
ತವ ॥ ನಂದೂ ದಾನ ಮಾಡಿದ ವಿಪ್ರರ ಕರೆದೂ ॥
ದಕ್ಷಿಣೆ ಸಹ ನಲಿದೂ ॥ ಕುಂದಣದೆ ಯಜ್ಞೋಪವೀತವ
ಶ್ರೀರಾಮಚಂದ್ರಗೆ ಧಾರಣೆ ಮಾಡಿದ ನಲಿದೂ [107]

ಯಜ್ಞೋಪವೀತ ಧಾರಣೆ ಮಾಡಿ ವಟುವಿಗೆ ತಂದೆ ಬ್ರಹ್ಮೋಪದೇಶ ಮಾಡಬೇಕು. ಗಾಯತ್ರೀ ಮಂತ್ರವನ್ನು ತಂದೆ ವಟುವಿನ ಬಲಗಿವಿಯಲ್ಲಿ ಉಪದೇಶಿಸುವುದಕ್ಕೆ ಬ್ರಹ್ಮೋಪದೇಶ ಎನ್ನಲಾಗುತ್ತದೆ.

ಮೌಂಜೀ ಕೌಪೀನವ ದಂಡವ ಧರಿಸೀ ॥ ತಂದೆಯ
ಪಾದ ಪೂಜಿಸೀ ॥ ರಾಮ ಚಂದ್ರಾನ ದಶರಥ ತೊಡೆ
ಯೊಳಗಿರಿಸೀ ॥ ಪೀತಾಂಬ್ರವ ಹೊದಿಸೀ ॥ ಕಂದಾಗೆ
ಗಾಯತ್ರಿಯ ಉಪದೇಶಿಸಿ ವಾತ್ಸಲ್ಯದಿ ಹರಸಿ [108]

ಬ್ರಹ್ಮೋಪದೇಶ ಪಡೆದ ವಟುವು ಗುರುಕುಲದಲ್ಲಿ ವಿದ್ಯಾರ್ಜನೆ ಮಾಡಬೇಕಾದ್ದರಿಂದ ಗುರು ಪತ್ನಿಯೇ ಅನ್ನ ನೀಡಬೇಕಾಗಿತ್ತು. ಗೃಹಸ್ಥರ ಮನೆಯಿಂದ ಭಿಕ್ಷೆ ತಂದು ಬ್ರಹ್ಮಚಾರಿ ಜೀವಿಸಬೇಕಿತ್ತು. ಹಾಗಾಗಿ 'ಮಾತೃ ಭಿಕ್ಷೆ' ಹಾಕುವ ಕ್ರಮವಿದೆ. ತಾಯಿಯು ತನ್ನ ಮಗ ಹಸಿವಿನಿಂದ ನರಳದಿರಲೆಂದು ಮೊದಲು ಭಿಕ್ಷೆ ಹಾಕುವುದಕ್ಕೆ ಮಾತೃ ಭಿಕ್ಷೆ ಎನ್ನುವರು. ನಂತರ ಇತರ ಮುತ್ತೈದೆಯರು ಭಿಕ್ಷೆ ಹಾಕುವ

ಸಂಪ್ರದಾಯವಿದೆ. ಎಲ್ಲ ತಾಯಂದಿರೂ ಮಾತೃ ಸ್ವರೂಪರೆಂಬ ಉದಾತ್ತ ಭಾವನೆ ಇಲ್ಲಿ ವ್ಯಕ್ತವಾಗಿದೆ. ಪಿ.ವಿ. ಕೃಷ್ಣಾಬಾಯಿ ಮಾತೃ ಭಿಕ್ಷೆ ಹಾಕಿದ್ದನ್ನು ಹೀಗೆ ಹೇಳಿದ್ದಾರೆ.

ಮಾತಾ ಕೌಸಲ್ಯೆಯ ಪಾದವ ಪೂಜಿಸಿ ಭಯ ಭಕ್ತಿಲಿ ನಮಿಸೀ ॥
ಪೋತಾ ನವರತ್ನದ ಪಾತ್ರೆಯ ಧರಿಸೀ ಭವತೀ ಭಿಕ್ಷಾಂದೇಹಿ ಎನು
ತಾ ತಾ ಬೇಡಲು ಮನದೊಳಗ್ಹರ್ಷಿಸೀ ॥ ನಾನಾ ಫಲ ಭಿಕ್ಷವ
ಮಾತಾ ಭಿಕ್ಷವ ನೀಡಿದಳ್ಹರಸೀ ॥ ಬಂಧುಗಳಾಗಮಿಸೀ ಪ್ರೀತಿಯಿಂದ
ಭಿಕ್ಷವ ನೀಡುತಲಿರೆ ಆತ ಗುರುಗಳಿಗೆ ಒಪ್ಪಿಸಿದ [109]

ಗಿರಿಯಮ್ಮ ಮತ್ತು ಜೀವೂಬಾಯಿಯವರ ದೀರ್ಘ ಕೃತಿಗಳಲ್ಲಿ ಉಪನಯನದ ಉಲ್ಲೇಖ ಮಾತ್ರವಿದ್ದು ಕೃಷ್ಣಾಬಾಯಿ 12 ನುಡಿಗಳ ಹಾಡನ್ನೇ ರಚಿಸಿದ್ದಾರೆ. ಇದರಲ್ಲಿ ಉಪನಯನ ಕರ್ಮದ ಎಲ್ಲ ವಿಧಿ ವಿಧಾನಗಳ ವಿವರಣೆಯಿದೆ. ಬ್ರಹ್ಮಚಾರಿಯಾದ ವಟುವು ತನ್ನ ವೈಯಕ್ತಿಕ ಸುಖ ಮರೆತು ಮುಂದಿನ ಜೀವನಕ್ಕೆ ಅವಶ್ಯಕವಾದ ವಿದ್ಯೆ ಸಂಪಾದಿಸಲು ಬ್ರಹ್ಮೋಪದೇಶವು ಒಂದು ಅಗತ್ಯ ಸಂಸ್ಕಾರವಾಗಿದೆ.

ವಿವಾಹ:

ಮಾನವನು ಋಣ ತ್ರಯಗಳನ್ನು ಹೊಂದಿರುತ್ತಾನೆ. ದೇವ, ಋಷಿ ಮತ್ತು ಪಿತೃಋಣಗಳನ್ನು ಪ್ರತಿಯೊಬ್ಬ ಮಾನವನೂ ತೀರಿಸಲೇಬೇಕು. ಯಜ್ಞ-ಯಾಗಾದಿಗಳನ್ನು ಮಾಡುವ ಮೂಲಕ ದೇವ ಋಣವನ್ನು, ಅಧ್ಯಯನದಿಂದ ಋಷಿ ಋಣವನ್ನು ಮತ್ತು ಸತ್ಸಂತಾನ ಪಡೆಯುವುದರಿಂದ ಪಿತೃಋಣವನ್ನು ತೀರಿಸಬೇಕೆಂದು ತಿಳಿಸಲಾಗಿದೆ. ಇದಕ್ಕಾಗಿ ವಿವಾಹ ಬಂಧನದಿಂದ ಗೃಹಸ್ಥಾಶ್ರಮ ಸ್ವೀಕರಿಸಬೇಕು. ಗೃಹಸ್ಥನನ್ನು ಆಶ್ರಯಿಸಿಯೇ ಇತರ ಆಶ್ರಮಿಗಳು ಜೀವಿಸಬೇಕಾಗುತ್ತದೆ. ಗೃಹಸ್ಥಾಶ್ರಮವು ಶ್ರೇಷ್ಠ ಆಶ್ರಮವೆಂದು ಕರೆಸಿಕೊಳ್ಳುತ್ತದೆ. ಧರ್ಮ, ಅರ್ಥ, ಕಾಮಗಳ ಸಿದ್ಧಿಗೂ ವಿವಾಹವು ಅಗತ್ಯ. ವಿವಾಹವು ಜೀವನದ ಅತಿ ದೊಡ್ಡ ಸಮಾರಂಭ ಮತ್ತು ಅತಿ ಮುಖ್ಯ ಸಂಸ್ಕಾರವಾಗಿದೆ.

ಹೆಣ್ಣು ಮಕ್ಕಳಿಗೆ ವಿವಾಹವು 'ಉಪನಯನ'ದ ಸ್ಥಾನದಲ್ಲಿರುತ್ತದೆ. ಅವಿವಾಹಿತರಿಗೆ ಧರ್ಮ-ಕಾರ್ಯಗಳ ಅಧಿಕಾರವಿರುವುದಿಲ್ಲ. ವಿವಾಹದ ನಂತರ ಪತಿಯ ಯಜ್ಞಯಾಗಾದಿಗಳಲ್ಲಿ ಭಾಗಿಯಾಗುವ ಅವಕಾಶ ಕನ್ಯೆಗೆ ಬಂದರೆ, ಪತ್ನಿಯಿಂದ ಪತಿಗೂ ಧರ್ಮ ಕಾರ್ಯಗಳನ್ನು ನಡೆಸುವ ಅಧಿಕಾರ ದೊರಕುತ್ತದೆ. ಸ್ತ್ರೀ-ಪುರುಷರ ಸಂಬಂಧವನ್ನು ಈ ಸಂಸ್ಕಾರವು ನಿರ್ಧರಿಸುವುದರಿಂದ ಇದಕ್ಕೆ ಧಾರ್ಮಿಕ ಹಾಗೂ ಸಾಮಾಜಿಕ ಮಹತ್ವವೂ ಇದೆ. "ಗಂಡು ಹೆಣ್ಣುಗಳ ಸಹಕಾರ ಜೀವನವೇ ಸಂಸಾರ. ಈ ಸಾಗರಕ್ಕೆ ಧುಮುಕುವ ಮುನ್ನ ಗಂಡು ಮತ್ತು ಹೆಣ್ಣುಗಳಿಗೆ ವಿಧಿಸುವ ಧರ್ಮದ ಕಟ್ಟಳೆಯ ವಿಧಿ ವಿಧಾನವೇ 'ವಿವಾಹ'.[110]

ವಿವಾಹ ಸಂದರ್ಭದಲ್ಲಿ ಹಾಡುವ ಹಾಡುಗಳ ಮೊತ್ತ ದೊಡ್ಡದೇ ಎನ್ನಬಹುದು. ವಿವಾಹದ ಶಾಸ್ತ್ರ, ಸಂಪ್ರದಾಯಗಳಿಗೆ ಅನುಗುಣವಾಗಿ ಸಾಕಷ್ಟು ಹಾಡುಗಳೂ ಸೃಷ್ಟಿಯಾಗಿವೆ. ವಿವಾಹ ಸಂದರ್ಭದ ಪ್ರತಿ ಸಣ್ಣ ಶಾಸ್ತ್ರವನ್ನೂ ಶುಭವೆಂದೇ ಪರಿಗಣಿಸಿ ಸುಮುಹೂರ್ತದಲ್ಲಿ ಅವುಗಳನ್ನು ಹಿರಿಯ ಮುತ್ತೈದೆಯರಿಂದ ಪ್ರಾರಂಭ ಮಾಡಿಸುತ್ತಿದ್ದರು. ಹಾಡಿನ ಹಿಮ್ಮೇಳವಿಲ್ಲದೆ ಯಾವ ಶಾಸ್ತ್ರವೂ ನಡೆಯುವುದಿಲ್ಲ. ಮದುವೆಯ ಹಾಡುಗಳು ಹೆಂಗಸರಿಗೆ ಜೀವನದ ಅತಿ ಮುಖ್ಯ ಅಂಗವಾಗಿತ್ತು. ಪ್ರತಿಯೊಂದು ಶಾಸ್ತ್ರದಲ್ಲೂ ಹಾಡು ಹೇಳುತ್ತಾ ಸಡಗರ ಸಂಭ್ರಮಗಳಿಂದ ಮಹಿಳೆಯರು ಪಾಲ್ಗೊಳ್ಳುತ್ತಾರೆ. ವಧುವೂ ಸಹ ಹಾಡುಗಳನ್ನು ಕಲಿತಿರಬೇಕಾಗುತ್ತಿತ್ತು. ಪ್ರತಿ ಕಲಾಪದಲ್ಲೂ ಹಾಡಿನದೇ ಮೇಲುಗೈಯಾಗಿರುವುದು ಅದರ ಪ್ರಾಮುಖ್ಯತೆ ತಿಳಿಸುತ್ತದೆ. "ಶಕುನ ನೋಡಿದ್ದು, ಅರಿಶಿನ ಕುಟ್ಟಿದ್ದು, ಗೋಧಿ ಬೀಸಿದ್ದು, ಸಂಡಿಗೆ ಇಟ್ಟಿದ್ದು, ಎಣ್ಣೆ ಹಚ್ಚಿದ್ದು, ಬಚ್ಚಲು ಬಣ್ಣ ಓದಿಸಿದ್ದು, ಕಳಸ ಕನ್ನಡಿ ಹಿಡಿದದ್ದು, ಅಂಜನ ಹಚ್ಚಿದ್ದು, ಬಿಡದಿ ಬಿಡಿಸಿದ್ದು. ವರ ಪೂಜೆ, ಅಘ್ಯಕಧಾರೆ, ಕಾಶೀಯಾತ್ರೆ, ಗೌರಿಪೂಜೆ, ಜೀರಿಗೆ ಬೆಲ್ಲ ತಳೆದದ್ದು, ಧಾರೆ, ಹೆಣ್ಣು ಗೆದ್ದದ್ದು, ಕೈ ಹಿಡಿದದ್ದು, ಕರಿಮಣಿ ಕಟ್ಟಿದ್ದು, ಉಂಗುರು ಇಟ್ಟಿದ್ದು, ಸಭಾ ಪೂಜೆ, ಹೋಮಾಗ್ನಿ ತಂದದ್ದು, ಉಡುಗೊರೆ ಓದಿಸಿದ್ದು, ಬಾಗಿಲು ತಡೆದದ್ದು, ಭೂಮ ಬಡಿಸಿದ್ದು, ಆಪೋಷನ ಹಾಕಿದ್ದು, ಅತ್ತೆಯ ಕೈ ಹಿಡಿದದ್ದು, ಹೊಳಲು ಸುತ್ತಿದ್ದು, ಮನೆ ತುಂಬಿಸಿದ್ದು, ಇವೇ ಹಲವು ಹನ್ನೊಂದು ಸಂದರ್ಭಗಳಲ್ಲಿ ಮುತ್ತೈದೆಯರು ಆಯಾ ಶಾಸ್ತ್ರಕ್ಕೆ ತಕ್ಕಂತೆ ಹಾಡುಗಳನ್ನು ಹೇಳುತ್ತಿರುವರು. [111]

ವಿವಾಹ ಸಂದರ್ಭದಲ್ಲಿ ಪ್ರತಿ ಚಿಕ್ಕ ಶಾಸ್ತ್ರವೂ ಬಹು ಮುಖ್ಯ ಹಾಗಾಗಿ ಎಲ್ಲ ಸಂದರ್ಭಗಳಿಗೂ ತಕ್ಕಂತೆ ಹಾಡುಗಳು ರಚಿತವಾಗಿವೆ. ಯಾವುದೇ ಶುಭ ಕಾರ್ಯಕ್ಕೂ ಮೊದಲು ದೇವರನ್ನು ಪ್ರಾರ್ಥಿಸುವುದು, ಮನೆ ದೇವರನ್ನು ಪೂಜಿಸಿ ಕೆಲಸ ಪ್ರಾರಂಭಿಸುವುದು ವಾಡಿಕೆ. ವಿವಾಹದಲ್ಲಿಯೂ 'ದೇವರ ಸಮಾರಾಧನೆ'ಯನ್ನು ನೆರವೇರಿಸಿ ಕಾರ್ಯ ಪ್ರಾರಂಭಿಸಲಾಗುತ್ತದೆ. ದಾಸ ಮಹಿಳೆಯರು ವಿವಾಹ ಸಂಪ್ರದಾಯದ ಹಾಡುಗಳನ್ನು ತಮ್ಮ ದೀರ್ಘ ಕೀರ್ತನೆಗಳಲ್ಲಿ ತಿಳಿಸುತ್ತಾರೆ. ಮಂಜುಳಾ ಸುಬ್ಬರಾವ್‌ರವರು ಬಿಡಿ ಬಿಡಿಯಾಗಿ ಈ ಹಾಡುಗಳನ್ನು ರಚಿಸಿದ್ದಾರೆ. ನಂಜನಗೂಡು ತಿರುಮಲಾಂಬ 'ಭದ್ರ ಗೀತಾವಳಿ' ಎಂಬ ವಿವಾಹ ಸಂಬಂಧಿತ ಹಾಡುಗಳನ್ನು ರಚಿಸಿದ್ದಾರೆ.

<u>ದೇವರ ಸಮಾರಾಧನೆ:</u>

ದೇವರ ಸಮಾರಾಧನೆಯೆಂದು ದೇವರನ್ನು ಪೂಜಿಸಿ ವಧುವಿಗೆ ಬಳೆ ಇಡಿಸಿ, ಮುತ್ತೈದೆರಯೆಲ್ಲ ಸೇರಿ ಅರಿಶಿನ ಕುಟ್ಟುವ, ಗೋಧಿ ಬೀಸುವ, ಸಂಡಿಗೆ ಇಡುವ ಶಾಸ್ತ್ರ ಮಾಡುತ್ತಾರೆ. ಮಂಜುಳಾ ಸುಬ್ಬರಾವ್ ಅದನ್ನು ಹೀಗೆ ಹೇಳುತ್ತಾರೆ:

ರಂಗೋಲೆ ಕೆಮ್ಮಣ್ಣು ಬೀಸೊ ಕಲ್ಲಿಗೆ ಬಳಿಯೋಣ
ಅಂಗಾನೆರೆಲ್ಲ ಸೇರೋಣ
ಸುವ್ವಿ ಸುವ್ವೀ ಸುವ್ವಾಲೆ

ಐದು ಮುತ್ತೈದೇರು ಗೋಧಿಯ ಬೀಸೋಣ
ಮದುವಣಿಗನಾ ಕೂಡಿ ಹಾಡೋಣ [112]

ಮದುವೆಯ ಹಿಂದಿನ ದಿನ ವರಪೂಜೆ ಶಾಸ್ತ್ರ ನಡೆಯುತ್ತದೆ. ಬೀಗರನ್ನು ಎದುರುಗೊಂಡು ಎದುರಕ್ಕಿ ಬೀರಿ ವರನನ್ನು ಬಿಡಾರಕ್ಕೆ ಕರೆ ತಂದು ವರಪೂಜೆ ಶಾಸ್ತ್ರ ನಡೆಸುತ್ತಾರೆ. ವಿಜಯಲಕ್ಷ್ಮಿ ರಾಘವೇಂದ್ರಾಚಾರ್ಯರವರು ಶ್ರೀರಾಮ ಪಾರಿಜಾತ ಎಂಬ ದೀರ್ಘ ಕೃತಿಯಲ್ಲಿ ರಾಮನಿಗೆ ವರಪೂಜೆ ನಡೆಸಿದ್ದನ್ನು:

ವರಪೂಜೆ ಮಾಡಿದಳು । ಅರಸಿ ಸುನಯನೆ ವರ ರಘುರಾಮನಿಗೆ ॥
ಹರವಾದ ಹಣೆಯಲ್ಲಿ ವರ ಕುಂಕುಮವಿಟ್ಟು [113]

ವಿವಾಹದ ದಿನ ವರ ಕಾಶೀಯಾತ್ರೆಗೆ ಹೋದದ್ದನ್ನು 'ರುಕ್ಮಿಣೀ ಪರಿಣಯ' ಎಂಬ ದೀರ್ಘ ಕೃತಿಯಲ್ಲಿ ಮಂಜುಳಾ ಸುಬ್ಬರಾವ್ ಹೀಗೆ ಹೇಳುತ್ತಾರೆ.

ಕಾಶೀ ಯಾತ್ರೆಗೆ ಹೊರಟ ಕೃಷ್ಣನಿಗೆ

ಕೋಡಗ ಕೂಡಿದಗೆ ಕೋಡ ಬಳೆ ಹಾಕಿ
ಕೂಡಿಸಿ ರತ್ನಮಯ ಪೀಠದಲಿ

ಉಡಿಸಿ ವಸನವನು ಪಿಡಿದು ಛತ್ರಿಯನು
ಮುಡಿಗೆ ರುಮಾಲನ್ನು ಕಟ್ಟುತಲೀ
ನಡುಘಣಿಗೆ ಭಾಷಿಂಗ ಕಟ್ಟುತ
ಅಡಿಯನ್ನಿಡಿಸಿ ಹರಿವಾಣದಲ್ಲಿ [114]

ವರನ ಕಾಲು ತೊಳೆದು ವಿವಾಹ ಮಂಟಪಕ್ಕೆ ಕರೆ ತರುತ್ತಾರೆ. ಇತ್ತ ವಧುವು ಗೌರೀ ಪೂಜೆ ಮುಗಿಸಿ ವಿವಾಹ ಶಾಸ್ತ್ರಕ್ಕೆ ಅಣಿಯಾಗುತ್ತಾಳೆ. ಭೀಮವ್ವ 'ಸುಭದ್ರಾ ಕಲ್ಯಾಣ' ಎಂಬ ದೀರ್ಘ ಕೃತಿಯಲ್ಲಿ ಸುಭದ್ರೆ ಗೌರಿ ಪೂಜೆ ಮಾಡಿದ್ದು ಹೇಳುತ್ತಾರೆ.

ನಾಂದಿ ಸ್ಥಾಪನೆ ಮಾಡುತಲಾಗ
ಮಂಗಳ ಗೌರಿಯ ಪೂಜಿಸುತ
ಇಂದ್ರನು ತರಿಸಿಟ್ಟಸ್ತ್ರಾಭರಣ
ತಂದಿಟ್ಟಳು ಶಚಿ ನಗುತ [115]

ಗೌರಿ ಪೂಜೆ ಮುಗಿಸಿ ವಿವಾಹ ಮಂಟಪಕ್ಕೆ ಬಂದ ವಧುವನ್ನು ಅಂತರಪಟದ ಒಂದೆ ನಿಲ್ಲಿಸಿ ಮುಹೂರ್ತಕ್ಕೆ ಸರಿಯಾಗಿ 'ಜೀರಿಗೆ ಬೆಲ್ಲ' ಹಾಕಿಸಿ ನಂತರ ಕನ್ಯಾದಾನ, ಧಾರೆ, ಮಾಂಗಲ್ಯಧಾರಣೆಗಳು ಕ್ರಮವಾಗಿ ನಡೆಯುತ್ತದೆ.

ಅಚ್ಚಯಮುನೆ ಭಾಗೀರಥಿ ಉದಕದಿ
ಪಾರ್ಥರಾಯನ ಪಾದವ ತೊಳೆದು
ಕೊಟ್ಟರು ಕನ್ಯಾದಾನವ ಮಾಡಿ ಕೃ
ತಾರ್ಥನಾದೆನೆಂದ್ವಸುದೇವ

ಅಷ್ಟಪತ್ರಿಕೆ ಉಡಿಸಿದರಾಗಲೆ ಮಂಗ–
ಳಾಷ್ಟಕವನು ಹೇಳುತ ದ್ವಿಜರು
ಮುತ್ತು ಮಾಣಿಕ್ಯದ ಮಂಗಳ ಸೂತ್ರ
ಕಟ್ಟಿದ ಪಾರ್ಥರಾಯನು ನಗುತ [116]

ಎಂದು ಭೀಮವ್ವ 'ಸುಭದ್ರಾ ಕಲ್ಯಾಣ'ದಲ್ಲಿ ಹೇಳುತ್ತಾರೆ. ಮಂಗಳ ಸೂತ್ರ ಕಟ್ಟಿದ ನಂತರ ಲಾಜಾಹೋಮ, ಭೂಮ, ನಾಕಬಲಿ (ನಾಗೋಲಿ) ಶಾಸ್ತ್ರಗಳ ವಿವರಗಳನ್ನು ನಿಡಗುರುಕಿ ಜೀವೂಬಾಯಿ ನೀಡುತ್ತಾರೆ.

ಲಾಜಾ ಹೋಮವ ಕಂಕಣ ಬಿಚ್ಚಿ
ರಾಜಿಪ ಹರಿ ಭೂಮ ಮೋಜಾಗಿ ನಡೆಸುತ್ತ

ನಾಕ ಬಲಿಯ ಮುಗಿಸಿ ನಾಗವೇಣಿಯ ಕೂಡಿ
ಬೇಗದಿಂದೋಕುಳಿಗಳನಾಡಿಸಿ ಹರುಷದಿ [117]

ಲಾಜಾ ಹೋಮ, ಸಪ್ತಪದಿ ಮುಗಿಸಿ ಭೂಮದ ಸಂಭ್ರಮವನ್ನು ವಿಜಯಲಕ್ಷ್ಮಿ ರಾಘವೇಂದ್ರಾಚಾರ್ಯ ಹೀಗೆ ಹೇಳುತ್ತಾರೆ.

ಹೊನ್ನಿನ ಅಗ್ರದ ಬಾಳೆಲೆ ಸುತ್ತ ಬಣ್ಣ ಬಣ್ಣದ ರಂಗೋಲಿ ।
ಬಿನ್ನಾಣದಿಂದಲಿ ಬಿಡಿಸಿಹರು ಕನ್ಯೆಯರು ಏಕಾಗ್ರಚಿತ್ತದಲಿ ॥
ಚಿನ್ನದ ರನ್ನದ ಸಾಲು ದೀಪಗಳ ಚೆನ್ನಾಗಿ ಬೆಳಗಿಹರು ಒಲಿವಿಲಿ ।
ಪನ್ನೀರು ಚಂದನ ಸುಗಂಧ ಅತ್ತರು ನೀಡಿಹರಲ್ಲಿ ನಲಿವಿನಲಿ [118]

ವಿಧ ವಿಧವಾದ ಭಕ್ಷ್ಯಗಳನ್ನು ಬಡಿಸಿ ವಧೂವರರ ಭೋಜನದ ಕೊನೆಯಲ್ಲಿ ಆಪೋಷನ ಹಾಕಿದ್ದನ್ನು ಭೀಮವ್ವ ಹೇಳುತ್ತಾರೆ.

ಆಪೋಷನವ ಹಾಕಿ ಒಯ್ಯಾರಿ ಲೋಕ ಸುಂದರಿ
ಶ್ರೀಪತಿ ಕರದಲ್ಲಿ ಘೃತಧಾರೆ ಲೋ-
ಕಪಿತನಾಗಿದ್ದ ಕಂಸಾರಿ ಕೈಯಲ್ಲಿ ತ್ರಿಧಾರೆ [119]

ಮದುವೆಯಲ್ಲಿ ಸಂಭ್ರಮ ಹೆಚ್ಚಿಸಲು ಬಾಗಿಲು ತಡೆಯುವುದು, ಅಕ್ಕಿಯಾನೆ, ಉಪ್ಪಿನಾನೆ ಇಡಿಸುವುದು, ಕಂದನನ್ನಾಡಿಸುವ ಶಾಸ್ತ್ರಗಳನ್ನು ನಡೆಸುತ್ತಾರೆ ಅದನ್ನು ಭೀಮವ್ವ ಹೀಗೆ ಹೇಳುತ್ತಾರೆ.

ಬ್ಯಾಗ ದೇವಕ್ಕಿ ಸಿಂಧೂಪವ ಸುತ್ತಲು
ನಾಗವಲ್ಲಿಯ ಮಾಡಿದರಾಗ

ಉಪ್ಪು ಅಕ್ಕಿ (ಯ)ಲಿ ಗಜಗಳ ಬರೆದು
ಒಪ್ಪದಿಂದ್ಥಿಡಿ ಹಿಡಿ ಎನುತಿರಲು
ತೊಟ್ಟಿಲು ಕಟ್ಟಿ ಜೋಗುಳವನು ಪಾಡಲು
ಅರ್ಥಿನಲಿ ಕಂದನನ್ನಾಡಿಸಿದರಾಗ [120]

ಬಾಗಿಲು ತಡೆದ ಹಾಡನ್ನು ಭೀಮವ್ವ ಪಾರ್ವತಿ-ಶಂಕರರ ಸಂವಾದ ರೂಪದಲ್ಲಿ ರಚಿಸಿದ್ದಾರೆ. ಶಿವನು ತಾನು ಬಂದಿರುವುದಾಗಿ ಹೇಳಿ ಬಾಗಿಲು ತೆರೆಯಲು ಪಾರ್ವತಿಯಲ್ಲಿ ಕೇಳುತ್ತಾನೆ.

ಭೂತಗಣಂಗಳ ನಾಥನಾಗಿರುವೊ ಪ್ರ-
ಖ್ಯಾತನು ನಾನು ಬಂದೀನೆ ಸದ್ಯೋ-
ಜಾತನು ನಾನು ಬಂದೀನೆ

ಎಂದಾಗ ಶಿವೆ

ಭೂತಗಣವ ಕೂಡಿ ಯಾತಕೆ ಬರುವುದು
ಭೀತಿಬಡುವೆ ಮುಂಚೆ ಸಾಗೋ ನಾ
ಭೀತಿ ಬಡುವೆ ಮುಂಚೆ ಸಾಗೋ [121]

ಉರುಟಣೆ ಮಾಡುವ ಮೂಲಕ ವಧೂವರರಲ್ಲಿ ಸಲಿಗೆ ಬೆಳೆಯಲೆಂದು ಅರಿಶಿನ ಹಚ್ಚುವ, ಚೆಂಡಾಟವಾಡುವ ಸಂಪ್ರದಾಯವಿದೆ. ನಂಜನಗೂಡು ತಿರುಮಲಾಂಬಾ ಉರುಟಣೆ ಹಾಡನ್ನು ಹೇಳುವ ಪರಿ ಇಂತಿದೆ.

ಸ್ಮರಣತಾ ಶ್ರೀಕಾಂತ ವರದಾತಾ ರಘುನಾಥ
ವರಕಪೋಲವ ತಾರೈ ಅರಿಸಿನ ಹಚ್ಚುವೆನು [122]

ಕೊನೆಯಲ್ಲಿ ಹೆಣ್ಣೊಪ್ಪಿಸಿ ಮಗಳಿಗೆ ಬುದ್ಧಿವಾದ ಹೇಳಿ ಅವಳನ್ನು ಗಂಡನ ಮನೆಗೆ ಕಳುಹಿಸುತ್ತಾರೆ. ಹೆತ್ತು ಸಾಕಿ ಬೆಳೆಸಿದ ಮಗಳನ್ನು ಇತರರ ಮನೆಗೆ ಕಳುಹಿಸುವಾಗ ಭೀಷ್ಮಕರಾಜ ಕಣ್ಣೀರಿಟ್ಟನೆಂದು ಮಂಜುಳಾ ಸುಬ್ಬರಾವ್ ಹೇಳುತ್ತಾರೆ.

ಪಾಲು ಫಲಂಗಳಿತ್ತು ಪಾಲಾಬ್ಧಿಕನ್ನಿಕೆಯ
ಪಾಲಿಸು ಎಂತೆಂದು ಪಾಲ ಸವಿದ ಮೇಲೆ
ಪಾಲಶಯನನ ತೊಡೆ ಮೇಲಿಟ್ಟು

ಕಣ್ಣೀರು ಜಲದಿಂದಲಿ ತನ್ನ ಕಪೋಲನೆನೆಸಿ
ಕನ್ನಿಕೆ ರುಕ್ಮಿಣಿಯ ಕನ್ಯದಾನವಗೈದು
ಧನ್ಯತಾನಾಗಲು ಅನಂತ ಮಹಿಮೆಗೆ [123]

ವಧುವು ಅತ್ತೆ ಮನೆಗೆ ಬಂದು ಪಡಿ ಎಡವಿ, ದೇವರ ಮನೆಗೆ ಹೋಗಿ ಚೆಟ್ಟು ಬಡಿದು ಅತ್ತೆಯ ಸೀರೆಗೆ ಕೈ ಒರೆಸುತ್ತಾಳೆ. ಆ ಸೀರೆ ಅವಳಿಗೇ ಸೇರುತ್ತದೆ. ಭೀಮವ್ವ 'ಸುಭದ್ರಾ ಕಲ್ಯಾಣ' ದಲ್ಲಿ ಇದನ್ನು ನಿರೂಪಿಸುತ್ತಾರೆ.

ಮುತ್ತಿನ ರಾಸಿ ತೆಗೆಯಲಾಗ
ಪುತ್ಥಳಿ ಸರ ಕೊರಳಿಗೆ ಹಾಕಿ
ತುಪ್ಪದ ಚೆಟ್ಟು ಬಡಿದಳ್ಸಂಭ್ರಮದಿತ-
ಮ್ಮತ್ತೆಯ ಸೆರಗಿನಲ್ಲೊರೆಸಿದಳು [124]

ನಂತರ ಮಗಳಿಗೆ ಬುದ್ಧಿ ಹೇಳಿ ಗಂಡನೊಡನೆ ಕಳುಹಿಸುತ್ತಾರೆ. ನಿಡಗುರುಕಿ ಜೀವೂಬಾಯಿ, ಮಂಜುಳಾಸುಬ್ಬರಾವ್, ದೊಡ್ಡಿ ಸುಧಾಬಾಯಿಯವರು ಪತಿಯ ಮನೆಯಲ್ಲಿ ಸುಖವಾಗಿ ಬಾಳು, ಉದಯಕಾಲದಲ್ಲೆದ್ದು ಹರಿಸ್ಮರಣೆ ಮಾಡುತ್ತ, ಗುರು ಹಿರಿಯರಿಗೆ ವಂದಿಸಿ ಮನೆವಾರ್ತೆ ಮಾಡಲು ಹೇಳುತ್ತಾರೆ.. ಜೀವೂಬಾಯಿಯವರು,

ರತ್ನಾಕರನು ತಂದೆ ಎನುತ ಗರ್ವಿಸಬೇಡ
ಮತ್ತೆ ಸರಿಯಾರು ಎಂದೆನಲು ಬೇಡ
ಚಿತ್ತಜನಯ್ಯನ ಮನವರಿತು ನಡೆಯಮ್ಮ
ಹೊತ್ತು ಹೊತ್ತಿಗೆ ಪತಿಯ ಸೇವೆ ನಿರತಳಾಗಿ [125]

ತಂದೆಯ ಮನೆಯ ಸಂಪತ್ತನ್ನು ನೆನೆಯದೆ, ತಾನೇ ಹೆಚ್ಚೆಂದು ಭಾವಿಸದೆ ಪತಿಯ ಮನವರಿತು ನಡೆಯಲು ಹೇಳುತ್ತಾರೆ. ಇನ್ನೊಂದು ಕೀರ್ತನೆಯಲ್ಲಿ ಶಿವನ ಬಡತನವನ್ನು ಎಲ್ಲಿಯೂ ಹೇಳದೆ ಹೊಂದಿಕೊಂಡು ಬಾಳಲು ಹೇಳುತ್ತಾರೆ. ಸೀತಾಬಾಯಿ ರಾ. ಪುರೋಹಿತರವರು

ನೆರೆಹೊರೆಯವರೊಡನೆ ಗರುವ ತೋರಿಸದಲೆ
ಮರಿಯಾದೆಯಿಂದ ಸಹಕರಿಸು ಮಗಳೇ ಹರಿಕಡಲ
ಗಿರೀಶನಾಸ್ಮರಣೆಯ ಮಾಡುತಲೆ ಅರುಂಧತಿಯಂತೆ
ನೀನು ಅರಿತು ಬಾಳಮ್ಮ [126]

ಎಲ್ಲ ಸಂದರ್ಭಗಳಲ್ಲೂ ಆರತಿ ಮಾಡುವುದು ವಾಡಿಕೆ. ಆರತಿ ಹಾಡುಗಳಂತೂ ಹಲವಾರು ಮಹಿಳೆಯರು ರಚಿಸಿದ್ದಾರೆ. ವಿವಾಹ ಸಮಯದ ಹಾಡುಗಳನ್ನು ದಾಸ ಮಹಿಳೆಯರಲ್ಲದೆ ಇನ್ನಿತರರೂ ರಚಿಸಿದ್ದಾರೆ. ಈ ವರ್ಗದ ಹಾಡುಗಳು ಸಂಖ್ಯೆ ದೊಡ್ಡದಿದೆ. ಅತಿ ಚಿಕ್ಕ ಶಾಸ್ತ್ರಕ್ಕೂ ಹಾಡುಗಳಿವೆ. ಅಂಕಿತವಿರುವ ದಾಸ ಮಹಿಳೆಯರ ಹಾಡುಗಳನ್ನು ಮಾತ್ರ ಇಲ್ಲಿ ಪರಿಗಣಿಸಲಾಗಿದೆ.

ಸ್ಥಳೀಯ ಸಂಪ್ರದಾಯಗಳು:

ತಲೆಮಾರಿನಿಂದ ತಲೆಮಾರಿಗೆ ಸಾಗಿಕೊಂಡು ಬಂದಿರುವ ಸಂಪ್ರದಾಯಗಳು, ಒಂದು ವಿಶಿಷ್ಟ ಉದ್ದೇಶದಿಂದ ಕೂಡಿ, ಸಾಮೂಹಿಕವಾಗಿ ನಡೆದು ಬರುತ್ತಿರುವ ಪದ್ಧತಿಗಳಾಗಿವೆ. ಸಾಮಾಜಿಕ ನಿಯಂತ್ರಣಕ್ಕಾಗಿ ಈ ಸಂಪ್ರದಾಯ, ರೂಢಿಗಳ ಅಗತ್ಯವಿದೆ. ಸಹಕಾರ ಭಾವ, ಸಾಮೂಹಿಕ ಪ್ರಜ್ಞೆ, ಇತ್ಯಾದಿಗಳನ್ನು ಮೂಡಿಸಲು, ನೆಮ್ಮದಿಯ ಜೀವನ ಸಾಗಿಸಲು ಸಂಪ್ರದಾಯಗಳು ಬೇಕೇ ಬೇಕು. ಈ ಸಂಪ್ರದಾಯಗಳು ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತವೆ. ಒಂದು ಸ್ಥಳದಲ್ಲಿ ನಡೆಯುವ ಆಚರಣೆಗಳು, ಸಂಪ್ರದಾಯಗಳು ಇನ್ನೊಂದು ಸ್ಥಳದಲ್ಲಿ ಬೇರೆ ರೂಪದಲ್ಲಿ ಕಾಣಿಸಿಕೊಳ್ಳಬಹುದು. ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾದ ಇತರೆಡೆಗಳಲ್ಲಿ ಕಂಡು ಬರದ ಸಂಪ್ರದಾಯಗಳನ್ನು ಸ್ಥಳೀಯ ಸಂಪ್ರದಾಯಗಳು ಎನ್ನಲಾಗುತ್ತದೆ.

ಕರ್ನಾಟಕದ ಮಹಿಳಾ ಹರಿದಾಸರು ಅಂತಹ ಕೆಲವು ವಿಶಿಷ್ಟ ಸಂಪ್ರದಾಯಗಳನ್ನು ತಮ್ಮ ಕೃತಿಗಳಲ್ಲಿ ಪ್ರಸ್ತಾಪಿಸಿದ್ದಾರೆ. ಉತ್ತರ ಕರ್ನಾಟಕದ ಬ್ರಾಹ್ಮಣರಲ್ಲಿ ಮಾತ್ರ ಕಂಡು ಬರುವ ಈ ವಿಶಿಷ್ಟ ಆಚರಣೆಗಳು ದಾಸ ಮಹಿಳೆಯರ ಕೃತಿಗಳಲ್ಲಿ ದಾಖಲಾಗಿವೆ.

ಗಲಗಲಿ ಅವ್ವನವರ 'ಮೋರೆಗೆ ನೀರು ತಂದ ಹಾಡು' ವಿವಾಹ ಸಂದರ್ಭದ ಹಾಡು. ವಿವಾಹ ಸಂದರ್ಭದಲ್ಲಿ ಹೆಣ್ಣಿನ ಕಡೆಯವರು ಗಂಡಿನ ಕಡೆಯ ಬೀಗರಿಗೆ ಮೋರೆಗೆ ನೀರು ತರುವುದು ಸಂಪ್ರದಾಯ. ಉತ್ತರ ಕರ್ನಾಟಕದ ಮದುವೆಗಳಲ್ಲಿ ಇಂದಿಗೂ ಈ ಸಂಪ್ರದಾಯದ ಆಚರಣೆಯಲ್ಲಿದೆ. ಮೋರೆಗೆ ನೀರು ತಂದಾಗ ಪರಸ್ಪರ ನಿಂದೆ, ಮೂದಲಿಕೆ, ಇರುವುದು ಸಹಜ. ಈ ನಿಂದೆ ಮೂದಲಿಕೆಗಳು ಕೇವಲ

ರಂಜನೆಗಾಗಿ. ಅವ್ವನವರು ದೇವರ ಪಾತ್ರಗಳ ಮೂಲಕ ಈ ಸಂಪ್ರದಾಯವನ್ನು ನಿರೂಪಿಸಿದ್ದಾರೆ. ಈ ಹಾಡುಗಳಲ್ಲಿ ನಿಂದಾಸ್ತುತಿ ರೂಪದಲ್ಲಿರುವ ಪರಮಾತ್ಮನ ಸ್ತುತಿಗಳನ್ನು ಕಾಣಬಹುದು.

ಪವಿತ್ರ ನದಿಯಾದ ಭಾಗೀರಥಿಯು ಬೀಗಿತ್ತಿ ಅದಿತಿಯ ಮನೆಗೆ ಮೋರೆಗೆ ನೀರು ತಂದಾಗ ಅದಿತಿ ನಿದ್ರಿಸುತ್ತಿರುತ್ತಾಳೆ.

ಅಷ್ಟಮದವೇರಿ ಅದಿತಿಗಿಷ್ಟು ಎಚ್ಚರಿಲ್ಲ ಅಷ್ಟೂರು ನೋಡಿ ನಗುವಂತೆ
ಅಷ್ಟೂರು ನೋಡಿ ನಗುವಂತೆ ಕುಂಭಕರ್ಣ ಸೋತೆಂತ ಕೊಟ್ಟ ಜಯಪ್ರದ [127]

ನಿದ್ರೆಯ ಮಬ್ಬಿನಲ್ಲಿದ್ದ ಅದಿತಿಯನ್ನು ಕಂಡು ಕುಂಭಕರ್ಣನೇ ಸೋತೆನೆಂದು ಜಯಪತ್ರ ನೀಡಿದ ಎನ್ನುತ್ತಾರೆ. 'ಆರು ತಾಸಾದರೂ ತೀರದಲ್ಲಿ ನಿದ್ರಿ ಬೀಗಿತ್ತಿಗೆ' ಎಂದು ಭಾಗೀರಥಿ ವ್ಯಂಗವಾಡಿದಾಗ ಅದಿತಿ ಮತ್ತು ಅವಳ ಪರಿವಾರದವರು

ಏನ ಜಾಹ್ನವಿ ನಿನ್ನ ಮಾನ ಬಹಳ ಮೀನಗೊಳಕಿನ ನೀರ ತಂದಿ ಕೇಳ
ಮಿತ್ರಿಯರು ನಾವೆಲ್ಲ ಅರ್ಥಿಯಿಂದ ಬರುವಾಗ ಸತ್ತ ಕನ್ನಡಿ ಬೆಳಕು ಕಂಡಿತಲ [128]

ಭಾಗೀರಥಿ ತನ್ನ ಪರಿವಾರದೊಡನೆ ಅದಿತಿಯ ಮನೆಗೆ ಬಂದಾಗ ರತ್ನದ ದೀಪಗಳಿಂದ ಬೆಳಗುತ್ತಿದ್ದ ಅರಮನೆ ಕತ್ತಲಾಯಿತು. ಸೂರ್ಯನ ಮೋರೆಯೂ ಬಾಡಿತು, ಎಂದು ಪ್ರತಿಯಾಗಿ ಕಟಕಿಯಾಡಿದಾಗ ಭಾಗೀರಥಿಯು

ಜಾಹ್ನವಿ ನಾ ನಮ್ಮ ಜನನಿಗತಿ ಭಕುತಿಯಲಿ ಅಭಿಷೇಕಿಸಬೇಕು ಎಂದು ತಂದೆ ।
ಹೀನ ಅದಿತಿ ನೀನು ಹೀಂಗ ಜರಿಯಲಿನಹುದ ಶ್ರೀರಮೀ ಅರಸಗೆ ಸಮ್ಮತವೇನ [129]

ಶ್ರೀಹರಿಯನ್ನು ಪಡೆದ ಜನನಿ ಅದಿತಿಗೆ ನೀರು ತಂದರೆ ಹೀಗೆ ಜರಿಯಬಹುದೇ ಎಂದು ಭಾಗೀರಥಿ ಪ್ರಶ್ನಿಸಿದ ಕೂಡಲೇ ಎರಡೂ ಕಡೆಯವರು ವಿರಸ ಮರೆತು ಮುಂದಿನ ಕಾರ್ಯಗಳಿಗೆ ಸಿದ್ಧವಾಗುತ್ತಾರೆ.

ನೇಮ ಬಿಡಿಸುವುದು:

ಹರಪನಹಳ್ಳಿ ಭೀಮವ್ವನವರ ಸಂಪತ್ತು ಶುಕ್ರವಾರದ ಗೌರಿ ಕತೆಯಲ್ಲಿ 'ನೇಮ ಬಿಡಿಸುವ' ಸಂಪ್ರದಾಯವನ್ನು ಹೇಳುತ್ತಾರೆ. ಶ್ರಾವಣ ಮಾಸದ ಶುಕ್ರವಾರಗಳಂದು ಗೌರಿ ಪೂಜೆ ಮಾಡುವ ವಿಧಾನ. ಕತೆಯನ್ನು ಭೀಮವ್ವ ಹೇಳುತ್ತಾರೆ. ಈ ವ್ರತದ ಉದ್ದೇಶ ಸೌಮಾಂಗಲ್ಯ ಪ್ರಾಪ್ತಿ ಮತ್ತು ಗಂಡು ಮಕ್ಕಳ ಆಯುಷ್ಯ ಹೆಚ್ಚಿಸುವುದಾಗಿದೆ. ಈ ಕತೆಯಲ್ಲಿ ಬಡ ಬ್ರಾಹ್ಮಣನ ಮಗು ರಾಣಿಯ ಮನೆಯಲ್ಲಿ ಬೆಳೆಯುತ್ತಿರುತ್ತದೆ. ಒಮ್ಮೆ ತನ್ನ ಸ್ವಂತ ತಾಯಿಯನ್ನು ಕಂಡ ರಾಜಕುಮಾರ ಅವಳಲ್ಲಿ ಮೋಹಗೊಳ್ಳುತ್ತಾನೆ. ಈ ವಿಷಯವನ್ನು ಹಿರಿಯರಲ್ಲಿ ತಿಳಿಸಿದಾಗ ಅವರ ಸಲಹೆಯಂತೆ ಪ್ರಯಾಗಕ್ಕೆ ಹೋಗಿ ಅಲ್ಲಿ ಭಾಗೀರಥಿ

ಸ್ನಾನ ಮಾಡುವಾಗ ನಾಲ್ಕು ಹಸ್ತಗಳನ್ನು ಕಾಣುತ್ತಾನೆ. ಆಗ ಅವನಿಗೆ ಹೆತ್ತವರು, ಸಾಕಿದವರು ಇರುವುದಾಗಿ ತಿಳಿದು ಬರುತ್ತದೆ.

ಗಂಗಾಸ್ನಾನ ಮಾಡಿ ಬಂದ ರಾಜಪುತ್ರ ಬ್ರಾಹ್ಮಣರಿಗೆ ಸಂತರ್ಪಣೆ ಏರ್ಪಡಿಸುತ್ತಾನೆ. ಒಂದು ಮನೆಯ ಬ್ರಾಹ್ಮಣ, ಮುತ್ತೈದೆ ಮಾತ್ರ ಸಂತರ್ಪಣೆಗೆ ಬಂದಿರುವುದಿಲ್ಲ. ಆ ಮನೆಯ ಮುತ್ತೈದೆಗೆ ಹೇಳಿ ಕಳಿಸಿದಾಗ ಆಕೆ ಶುಕ್ರವಾರದ ಶ್ರೀಗೌರಿ ವ್ರತವನ್ನು ಪೂರೈಸಿ ರಾಜನರಮನೆಗೆ ಬರುತ್ತಾಳೆ.

ಮೂರು ಕಾಲಿನಮಣೆ ಮುಂದೆ ತಂದಿಟ್ಟರೆ
ಕೂಡಲಾಗದು ನಮ್ಮ ವ್ರತವು
ಹಾಗಲ್ಹಂದರ ಪೋಗಲು ಹಸುರುಬಳೆಯ ಬಿಟ್ಟು
ನೀಲನಿಟ್ಟಳು ಕರದಲ್ಲಿ
ಹಸುರು ಪೀತಾಂಬರ ಹಸನಾದ ಕುಡಿಯೆಲೆ
– – – – – – – – – – – – – – – –
ಶಶಿಮುಖಿ ಅದು ಒಲ್ಲೆನುತ [130]

ಬಡವನ ಮಡದಿಯ ಬಡಿವಾರ ನೋಡೆ ಎಂದು ಎಲ್ಲರೂ ಆಡಿಕೊಂಡರೂ ತನ್ನ ಮಗನ ಆಯುಷ್ಯ ಹೆಚ್ಚಲೆಂದು ನೇಮ ನಡೆಸುತ್ತಾಳೆ. ಮೊದಲು ಗಂಡು ಮಗು ಹುಟ್ಟಿದರೆ ತಾಯಿಯು ಹಸಿರು ಸೀರೆ, ಬಳೆ ತೊಡಬಾರದು. ಹಾಗಲದ ಹಂದರದ ಕೆಳಗೆ ನಡೆಯಬಾರದು. ಕುಡಿ ಬಾಳೆಯೆಲೆಯಲ್ಲಿ ಉಣಬಾರದು, ಹೊಸ ಮೊರದಲ್ಲಿ ಬಡಿಸಿದ್ದನ್ನು ಸೇವಿಸಬಾರದೆಂಬ ನಿಯಮಗಳಿವೆ. ಇದನ್ನು ಭೀಮವ್ವ ತಮ್ಮ ಕೃತಿಯಲ್ಲಿ ನಿರೂಪಿಸುತ್ತಾರೆ.

ಈ ವ್ರತವು ಮಗನ ಮದುವೆಯವರೆಗೂ ಮುಂದುವರೆಯುತ್ತದೆ. ಮಗನ ಮದುವೆಯಲ್ಲಿ 'ನೇಮ ಬಿಡಿಸುವ' ಶಾಸ್ತ್ರ ಮಾಡುತ್ತಾರೆ. ನೇಮ ಬಿಡಿಸುವ ಶಾಸ್ತ್ರವನ್ನು ಅದರ ವಿವರಗಳನ್ನು ಈ ಹಾಡಿನಲ್ಲಿ ಕಾಣಬಹುದಾಗಿದೆ. ತನ್ನ ಹೆತ್ತವರನ್ನು ಹುಡುಕಿದ ರಾಜಕುಮಾರ ಅವರನ್ನು ಅರಮನೆಗೆ ಕರೆತರುತ್ತಾನೆ. ಅವನ ವಿವಾಹ ಸಂದರ್ಭದಲ್ಲಿ

ಹಾಗಲ್ಹಂದರದೊಳಗ್ಹಸಿರು ಪತ್ತಲ ಕೊಟ್ಟು
ಆಗ ನೇಮವ ಬಿಡಿಸಿದರು
ಡಾಗು ಕುಡಿ ಬಾಳೆ ಎಲೆಯ ಭೂಮವನುಂಡು
ನಾಗವಾಲಿಗಳ ಮಾಡಿದರು [131]

ರಾಜಪುತ್ರನ ತಾಯಿ, ಬ್ರಾಹ್ಮಣನ ಮಡದಿಯನ್ನು ಹಾಗಲ ಹಂದರದೊಳಗೆ ಕರೆತಂದು ಹಸಿರು ಸೀರೆ ಉಡಿಸಿ, ಕುಡಿ ಬಾಳೆ ಎಲೆಯಲ್ಲಿ ಭೋಜನ ಮಾಡಿಸಿ 'ನೇಮ' ಬಿಡಿಸುತ್ತಾರೆ. ಸ್ಥಳೀಯವಾಗಿ ನಡೆಸಲಾಗುವ ಇಂತಹ ಸಂಪ್ರದಾಯಗಳನ್ನು ಮಹಿಳೆಯರು ತಮ್ಮ ಸಾಹಿತ್ಯದಲ್ಲಿ ದಾಖಲಿಸಿದ್ದಾರೆ.

ಬೀಗರ ಹಾಡುಗಳು:

ವಿವಾಹವು ಮಾನವ ಜೀವನದ ಬಹು ಮುಖ್ಯ ಘಟ್ಟ. ಸಾಮರಸ್ಯ ಮತ್ತು ಎರಡೂ ಕುಟುಂಬಗಳ ನಡುವಿನ ಸೌಹಾರ್ದಯುತ ಸಂಬಂಧಕ್ಕೆ ವಿವಾಹ ಮೊದಲ ಮೆಟ್ಟಿಲು. ಧಾರ್ಮಿಕ ವಿಧಿ-ವಿಧಾನಗಳನ್ನು ಒಳಗೊಂಡ ವಿವಾಹದ ಸಂಪ್ರದಾಯಗಳೂ ಅತಿ ಮಹತ್ವದ್ದಾಗಿವೆ. ಮದುವೆಯ ನಂತರ ಬೀಗರಲ್ಲಿರಬೇಕಾದ ಮಧುರ ಬಾಂಧವ್ಯಕ್ಕೆ ಸಂಪ್ರದಾಯಗಳ ಪಾಲನೆ ಅತಿ ಮುಖ್ಯ. ಹಿಂದಿನ ಕಾಲದಲ್ಲಿ ಮದುವೆಯು ಮನೆಗಳಲ್ಲೇ ನಡೆಯುತ್ತಿದ್ದು, ಅದಕ್ಕೆ ಬೇಕಾದ ಸಿದ್ಧತೆಗಳೆಲ್ಲವೂ ನಡೆಯುತ್ತಿದ್ದವು. ಅತಿ ಸಣ್ಣ ಶಾಸ್ತ್ರವೂ ಶುಭವೆಂದೇ ಪರಿಗಣಿಸಲಾಗುತ್ತಿದ್ದು ಪ್ರತಿ ಸಂದರ್ಭದಲ್ಲೂ ಹಾಡುಗಳನ್ನು ಹೇಳಲಾಗುತ್ತಿತ್ತು. ಮದುವೆಯ ಮೂಲಕ ಪರಸ್ಪರ ಬೀಗರಾಗುವ ಸಂಬಂಧಿಗಳಲ್ಲಿ ಸಾಮರಸ್ಯ ಏರ್ಪಡುವುದೂ ಅವಶ್ಯಕ.

ಮದುವೆಯಲ್ಲಿ ಮೋಜಿಗಾಗಿ ಹಾಡುವ ಹಾಡುಗಳೇ ಬೀಗರ ಹಾಡುಗಳು. ಮುಖ್ಯವಾಗಿ ಇವು ಹಾಸ್ಯದ ರಚನೆಗಳು. ಬೀಗರು ಪರಸ್ಪರ ಜರೆಯುತ್ತಾ, ತಮಾಷೆ ಮಾಡುವುದೇ ಇವುಗಳ ವಸ್ತು. ಸಾಮಾನ್ಯವಾಗಿ ಈ ಹಾಡುಗಳನ್ನು ವಧೂವರರನ್ನು ಭೂಮಕ್ಕೆ ಕೂರಿಸಿದಾಗ ಹೇಳಲಾಗುತ್ತಿತ್ತು. "ವಧೂವರರಿಗೆ ಭೂಮಕ್ಕೆ ಕೂರಿಸಿ ಅವರ ಸನಿಹದಲ್ಲಿ ಬೀಗರಿಗೆ (ಗಂಡಿನವರಿಗೆ) ಎಲೆಗಳನ್ನು ಹಾಕಿ ಕಾದಿರಿಸಿ ರಂಗೋಲಿ, ದೀಪಗಳು, ಗಂಧದ ಕಡ್ಡಿಗಳು ಮುಂತಾದವುಗಳಿಂದ ಅವರಿಗೆ ಉಪಚಾರ ಮಾಡುವ ಪದ್ಧತಿ".[132] ಭೂಮಕ್ಕೆ ಬಡಿಸಿ ಅರ್ಧ ಊಟ ಮುಗಿದ ನಂತರ ಈ ಬೀಗರ ಹಾಡುಗಳನ್ನು ಹಾಡಲಾಗುತ್ತದೆ. ಹೆಣ್ಣಿನ ಮತ್ತು ಗಂಡಿನ ಕಡೆಯವರು ಪರಸ್ಪರ ಜರೆಯುತ್ತಾ ಯಾರೂ ಸೋಲಬಾರದೆಂಬ ಹಠದಿಂದ ಆ ಸಂದರ್ಭಕ್ಕೆ ತಕ್ಕಂತೆ ಹಾಡುಗಳನ್ನು ಕಟ್ಟಿ ಹೇಳುತ್ತಿದ್ದರು. ಕೆಲವು ಬಾರಿ ಹಾಸ್ಯ ಎಲ್ಲೆ ಮೀರಿದಾಗ ಜಗಳಗಳಾಗುವುದೂ ಉಂಟು. ಹೀಗಾಗಿ ಬೀಗರ ಹಾಡುಗಳಿಗೆ ಜಗಳದ ಹಾಡು ಎಂತಲೂ ಹೆಸರಿದೆ. ಇತ್ತೀಚಿನ ದಿನಗಳಲ್ಲಿ ವಿವಾಹ ಸಂದರ್ಭದಲ್ಲಿ ಹಾಡುವ ಹಾಡುಗಳು ಕಣ್ಮರೆಯಾಗುತ್ತಿವೆ.

ಸಾಮಾನ್ಯವಾಗಿ ಬೀಗರ ಹಾಡುಗಳಲ್ಲಿ ಪರಿಹಾಸ್ಯಕ್ಕೆ ಒಳಗಾಗುವ ವ್ಯಕ್ತಿ ಹೆಣ್ಣಿನ ತಾಯಿ. ಹೆಣ್ಣಿನ ತಾಯಿಗೆ ಕೆಲಸ ಹೆಚ್ಚು ಹಾಗಾಗಿ ಆತಂಕವೂ ಹೆಚ್ಚು. ಅವಳ ಆತಂಕವು ವಿನೋದದ ವಸ್ತುವಾಗಿ ಗಂಡಿನವರ ಪರಿಹಾಸ್ಯಕ್ಕೆ ಗುರಿಯಾಗುತ್ತದೆ. ಕೆಲವು ಬಾರಿ ವ್ಯಾವಹಾರಿಕವಾಗಿಯೂ ಹಾಡುವುದುಂಟು. ಗಂಡಿನವರ

ಕೆಣಕುವ ಹಾಸ್ಯದ ಹಾಡುಗಳಿಗೆ ಹೆಣ್ಣಿನವರು ಸರಿಯಾಗಿ ತಿರುಗೇಟು ನೀಡುವುದಿದೆ. ಕೊನೆಗೆ ಪರಸ್ಪರ ರಾಜಿಯಾಗುವ ಹಾಡುಗಳನ್ನು ಹಾಡಲಾಗುತ್ತದೆ. ಈ ಹಾಡುಗಳ ಉದ್ದೇಶ ಬೀಗರ ನಡುವೆ ಅನ್ಯೋನ್ಯತೆಯ ವೃದ್ಧಿ ಮತ್ತು ಸಮಯಕ್ಕೆ ತಕ್ಕಂತೆ ಉತ್ತರ ಕೊಡುವ ಜಾಣ್ಮೆಯನ್ನು ತೋರ್ಪಡಿಸುವ ಬುದ್ಧಿವಂತಿಕೆ.

ಮನರಂಜನೆಗಾಗಿ ಹುಟ್ಟಿಕೊಂಡ ಬೀಗರ ಹಾಡುಗಳನ್ನು 18ನೇ ಶತಮಾನದಲ್ಲಿ ಹಾಡಲಾಗುತ್ತಿತ್ತು. ನಂತರ 50–60 ವರ್ಷಗಳ ನಂತರ ಕಣ್ಮರೆಯಾಯಿತು. ಈ ಹಾಡುಗಳಲ್ಲಿ ನಿಂದೆ, ವ್ಯಕ್ತಿ ನಿಂದೆ, ನಿಂದೆಗಾಗಿ ನಿಂದೆ ಕಂಡು ಬರುತ್ತವೆ. ಈ ಹಾಡುಗಳಲ್ಲಿ ಅಂಕಿತಗಳಿರುವುದಿಲ್ಲ. ಮಹಿಳೆಯರು ಪುರುಷರು ಇಬ್ಬರೂ ಈ ಹಾಡುಗಳನ್ನು ರಚಿಸಿರುವ ಸಾಧ್ಯತೆಯಿದೆ. ಹಾಗಾಗಿ ಅಂಕಿತವಿಲ್ಲದಿರುವುದರಿಂದ ಬೀಗರ ಹಾಡುಗಳ ಕರ್ತೃತ್ವವನ್ನು ನಿರ್ಧರಿಸಲು ಸಾಧ್ಯವಿಲ್ಲ.

ಸಂಪ್ರದಾಯದಂತೆ ಸ್ತ್ರೀಯರಿಗೆ ವೇದಾಧಿಕಾರವಿಲ್ಲ. ಮಂತ್ರ ಹೇಳುತ್ತಾ ಪೂಜೆ ಮಾಡುವಂತಿಲ್ಲ. ಬಹಿರಂಗವಾಗಿ ಇದನ್ನು ಅಂದಿನ ಸ್ತ್ರೀಯರು ಪ್ರತಿಭಟಿಸದಿದ್ದರೂ, ಅದಕ್ಕೆ ಪರ್ಯಾಯವಾಗಿ ಕನ್ನಡದಲ್ಲಿ ವ್ರತಕಥೆ ಹಾಡುಗಳನ್ನು ರಚಿಸಿದರು. ವ್ರತ ಕಥೆ, ಪೂಜಾ ವಿಧಾನ, ಫಲಶೃತಿ ಎಲ್ಲವನ್ನೂ ಒಳಗೊಂಡಂತೆ ಹಾಡುಗಳನ್ನು ರಚಿಸುವುದರ ಮೂಲಕ ಸ್ತ್ರೀಯರು ಒಂದು ರೀತಿಯ ಕ್ರಾಂತಿಯನ್ನೇ ಮಾಡಿದರು. ಸಂಸ್ಕೃತದಲ್ಲಿದ್ದ ವ್ರತಾದಿಗಳ ತರ್ಜುಮೆ ಕೆಲಸವನ್ನು ಮಾಡಿ ಈ ರೀತಿ ಸಮಾಜದ ಕಟ್ಟುಪಾಡುಗಳನ್ನು ಮೌನವಾಗಿ ಪ್ರತಿಭಟಿಸುವ ಕಾರ್ಯವನ್ನು ಮಾಡಿದರು. ಸಂಸ್ಕೃತ ಶ್ಲೋಕ, ಮಂತ್ರಗಳನ್ನು ಪಠಿಸದೇ ಸರಳ ಕನ್ನಡದಲ್ಲಿ ವ್ರತ ಕಥೆ ಹಾಡುಗಳನ್ನು ರಚಿಸಿ ವ್ರತಾದಿಗಳನ್ನು ಮಾಡುವ ಮೂಲಕ ಸ್ತ್ರೀಯರು ವೇದ ಮಂತ್ರಗಳನ್ನು ಹೇಳದೆಯೂ ವ್ರತ ಮಾಡುವ ಧೈರ್ಯ ತೋರಿದರು.

ವ್ರತಗಳ ಸಂದರ್ಭದಲ್ಲಿ, ಷೋಡಶ ಕರ್ಮಗಳ ಸಂದರ್ಭದಲ್ಲಿ ಅದರಲ್ಲೂ ವಿವಾಹ ಕರ್ಮದ ಪ್ರತಿ ಚಿಕ್ಕ, ಚಿಕ್ಕ ಕಾರ್ಯಕ್ರಮಗಳಿಗೆ ತಕ್ಕಂತೆ ಹಾಡುಗಳನ್ನು ರಚಿಸಿದ್ದಾರೆ. ವ್ರತ ಕಥೆಗಳಲ್ಲಿ ವ್ರತದ ಮೂಲ ಆಶಯಕ್ಕೆ ಧಕ್ಕೆ ಬಾರದಂತೆ ತಮ್ಮದೇ ರೀತಿಯಲ್ಲಿ ಕಥೆ ಹೇಳಿದ್ದಾರೆ. ಪುರಾಣ ಮೂಲದ ಕಥೆಗಳನ್ನು ಹಾಡಿನ ರೂಪಕ್ಕಿಳಿಸಿ ಸಂಪ್ರದಾಯಗಳ ಆಚರಣೆಗಳನ್ನು ಸುಲಭವಾಗಿಸಿದ್ದಾರೆ.

ಅಡಿ ಟಿಪ್ಪಣಿ

ಲೇಖಕರ ಹೆಸರು	ಕೃತಿಯ ಹೆಸರು	ಪುಟ ಸಂಖ್ಯೆ
1. ಶ್ರೀಮತಿ ವಾಗೀಶ್ವರಿ ಶಾಸ್ತ್ರಿ	ಹೃದಯ ಸಂಪುಟ	ಮುನ್ನುಡಿ, ಪುಟ–XIV
2. ಅದೇ		ಪುಟ– XVIII
3. ಅದೇ		ಪುಟ– XX
4. ಅದೇ		ಪುಟ–4
5. ಮತಿಘಟ್ಟ ಕೃಷ್ಣಮೂರ್ತಿ	ಗೃಹಿಣೀ ಗೀತೆಗಳು	ಪುಟ–340
6. ಶ್ರೀಮತಿ ವಾಗೀಶ್ವರಿ ಶಾಸ್ತ್ರಿ	ಹೃದಯ ಸಂಪುಟ	ಪುಟ–290
7. ಅದೇ		ಪುಟ–290
8. ಮತಿಘಟ್ಟ ಕೃಷ್ಣಮೂರ್ತಿ	ಗೃಹಿಣೀ ಗೀತೆಗಳು	ಪುಟ–341
9. ಕೋಲಾರ ಪದ್ಮಾಬಾಯಿ	ಸುಜ್ಞಾನ ಪ್ರಸಾರ ಸುಮಾವಳಿ ಸೌರಭ, ಸಂ–1	ಪುಟ–192
10. ಅದೇ		ಪುಟ–193
11. ರುಕ್ಮಿಣಿ ಗಿರಿಮಾಜಿ	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4, ಓರವಾಯಿ ಲಕ್ಷ್ಮೀದೇವಮ್ಮನವರ	ಪುಟ–142
12. ಅದೇ		ಪುಟ–143
13. ಕೋಲಾರ ಪದ್ಮಾಬಾಯಿ	ಸುಜ್ಞಾನ ಪ್ರಸಾರ ಸುಮಾವಳಿ ಸೌರಭ, ಸಂ–1	ಪುಟ–193
14. ಟಿ.ಎನ್. ನಾಗರತ್ನ ಅಕ್ಕಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಸಂ–19, ಹರಪನಹಳ್ಳಿ ಭೀಮವ್ವನ	ಪುಟ–293
15. ಅದೇ		ಪುಟ–293
16. ಅದೇ		ಪುಟ–294
17. ಅದೇ		ಪುಟ–295
18. ರುಕ್ಮಿಣಿ ಗಿರಿಮಾಜಿ	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4, ಓರವಾಯಿ ಲಕ್ಷ್ಮೀದೇವಮ್ಮ	ಪುಟ–247
19. ಅದೇ		ಪುಟ–248
20. ಅದೇ		ಪುಟ–249
21. ಅದೇ		ಪುಟ–249
22. ಅದೇ		ಪುಟ–250
23. ಟಿ.ಎನ್. ನಾಗರತ್ನ ಅಕ್ಕಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಸಂ–19, ಹರಪನಹಳ್ಳಿ ಭೀಮವ್ವ	ಪುಟ–300
24. ಅದೇ		ಪುಟ–301

25. ಅದೇ		ಪುಟ–309
26. ಅದೇ		ಪುಟ–48
27. ಅದೇ		ಪುಟ–50
28. ಅದೇ		ಪುಟ–53
29. ಅದೇ		ಪುಟ–65
30. ಅದೇ		ಪುಟ–251
31. ಅದೇ		ಪುಟ–252
32. ಅದೇ		ಪುಟ–255
33. ಅದೇ		ಪುಟ–276
34. ಅದೇ		ಪುಟ–282
35. ಅದೇ		ಪುಟ–283
36. ಅದೇ		ಪುಟ–285
37. ಅದೇ		ಪುಟ–285
38. ಅದೇ		ಪುಟ–286
39. ಅದೇ		ಪುಟ–292
40. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–2, ನಿಡಗುರುಕಿ ಜೀವೂಬಾಯಿ	ಪುಟ–436
41. ಅದೇ		ಪುಟ–436
42. ಅದೇ		ಪುಟ–442
43. ಅದೇ		ಪುಟ–442
44. ಅದೇ		ಪುಟ–495
45. ಕೋಲಾರ ಪದ್ಮಾಬಾಯಿ	ಸುಜ್ಞಾನ ಪ್ರಸಾಸ ಸುಮಾವಳಿ ಸೌರಭ, ಸಂ–1	ಪುಟ–140
46. ಇಂದಿರಾಬಾಯಿ ಕಟ್ಟಿ	ಹರಿ ಭಕ್ತಿ ಪದಗಳ ಸಂಗ್ರಹ	ಪುಟ–40
47. ಅದೇ		ಪುಟ–41
48. ಅದೇ		ಪುಟ–42
49. ಅದೇ		ಪುಟ–43
50. ಅದೇ		ಪುಟ–44
51. ಅದೇ		ಪುಟ–46
52. ದೊಡ್ಡಿ ಸುಧಾಬಾಯಿ	ಕಪಿಲಾತರಂಗ ಸುಧಾ	ಪುಟ–232
53. ಅದೇ		ಪುಟ–232
54. ಪಿ.ವಿ. ಕೃಷ್ಣಾಬಾಯಿ	ಅಪ್ರಕಟಿತ	
55. ಅದೇ		
56. ಅದೇ		
57. ಅದೇ		
58. ಕೋಲಾರ ಪದ್ಮಾಬಾಯಿ	ಸುಜ್ಞಾನ ಪ್ರಸಾರ ಸುಮಾವಳಿ ಸೌರಭ,	ಪುಟ–206

	ಸಂ–1	
59. ಅದೇ		ಪುಟ–207
60. ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–3, ಅಂಬಾಬಾಯಿ	ಪುಟ–330
61. ಪಿ.ವಿ. ಕೃಷ್ಣಾಬಾಯಿ	ಅಪ್ರಕಟಿತ	
62. ದೊಡ್ಡಿ ಕೃಷ್ಣಾಬಾಯಿ	ಕಪಿಲಾತರಂಗ ಸುಧಾ	ಪುಟ–256
63. ಅಂಬಾಬಾಯಿ	ಅಪ್ರಕಟಿತ	
64. ಅದೇ		
65. ವಾಗೀಶ್ವರ ಶಾಸ್ತ್ರಿ	ಹೃದಯ ಸಂಪುಟ	ಪುಟ–353
66. ಅಂಬಾಬಾಯಿ	ಅಪ್ರಕಟಿತ	
67. ರುಕ್ಮಿಣಿ ಗಿರಿಮಾಜಿ	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4, ಓರವಾಯಿ ಲಕ್ಷ್ಮೀದೇವಮ್ಮ	ಪುಟ–253
68. ಅದೇ		ಪುಟ–255
69. ಅದೇ		ಪುಟ–257
70. ಇಂದಿರಾಬಾಯಿ ಕಟ್ಟಿ	ಹರಿಭಕ್ತಿ ಪದಗಳ ಸಂಗ್ರಹ	ಪುಟ–19
71. ರುಕ್ಮಿಣಿ ಗಿರಿಮಾಜಿ	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4 , ಓರವಾಯಿ ಲಕ್ಷ್ಮೀದೇವಮ್ಮ	ಪುಟ–175
72. ಅದೇ		ಪುಟ–182
73. ಪಿ.ವಿ. ಕೃಷ್ಣಾಬಾಯಿ	ಅಪ್ರಕಟಿತ	
74. ಇಂದಿರಾಬಾಯಿ ಕಟ್ಟಿ	ಹರಿಭಕ್ತಿ ಪದಗಳ ಸಂಗ್ರಹ	ಪುಟ–11
75. ಪಿ.ವಿ. ಕೃಷ್ಣಾಬಾಯಿ	ಅಪ್ರಕಟಿತ	
76. ಮತಿಘಟ್ಟ ಕೃಷ್ಣಮೂರ್ತಿ	ಗೃಹಿಣೀ ಗೀತೆಗಳು	ಪುಟ–739
77. ಅನಂತರಂಗಾಚಾರ್ಯ	ಸಂಸ್ಕಾರ ಮಹೋದಧಿಃ	ಪುಟ–30
78. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–1, ಹೆಳವನಕಟ್ಟೆ ಗಿರಿಯಮ್ಮ	ಪುಟ–246
79. ಮಂಜುಳಾ ಸುಬ್ಬರಾವ್	ಸಂಪ್ರದಾಯ ಗೀತಗಳು	ಪುಟ–10
80. ಟಿ.ಎನ್. ನಾಗರತ್ನ ಅಕ್ಕಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಸಂ–19, ಹರಪನಹಳ್ಳಿ ಭೀಮವ್ವ	ಪುಟ–206, 207
81. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–1, ಹೆಳವನಕಟ್ಟೆ ಗಿರಿಯಮ್ಮ	ಪುಟ–246
82. ಅದೇ		ಪುಟ–246
83. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–2, ನಿಡಗುರುಕಿ ಜೀವೂಬಾಯಿ	ಪುಟ–154

84. ಟಿ.ಎನ್. ನಾಗರತ್ನ ಅಕ್ಕಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಸಂ–19, ಹರಪನಹಳ್ಳಿ ಭೀಮವ್ವ	ಪುಟ–249
85. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–1, ಹೆಳವನಕಟ್ಟೆ ಗಿರಿಯಮ್ಮ	ಪುಟ–249
86. ಪಿ.ವಿ. ಕೃಷ್ಣಾಬಾಯಿ	ಅಪ್ರಕಟಿತ	
87. ಮಂಜುಳಾ ಸುಬ್ಬರಾವ್	ಸಂಪ್ರದಾಯ ಗೀತೆಗಳು	ಪುಟ–14
88. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–2, ನಿಡಗುರುಕಿ ಜೀವೂಬಾಯಿ	ಪುಟ–154
89. ಹಣಮಂತ ತಾಸಗಾಂವಕರ	ಸಮಗ್ರ ದಾಸ ಸಾಹಿತ್ಯ, ಸಂ–7, ಗಲಗಲಿ ಅವ್ವ	ಪುಟ–333
90. ಅದೇ		ಪುಟ–336
91. ಅದೇ		ಪುಟ–337
92. ನಳಿನಿವೆಂಕಟೇಶ್ ಮೀನಾರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4, ಸರಸ್ವತಿಬಾಯಿ	ಪುಟ–635
93. ವಾಗೀಶ್ವರಿ ಶಾಸ್ತ್ರಿ	ಹೃದಯ ಸಂಪುಟ	ಪುಟ–39
94. ಪಿ.ವಿ. ಕೃಷ್ಣಾಬಾಯಿ	ಅಪ್ರಕಟಿತ ಹಸ್ತ ಪ್ರತಿ	
95. ಅದೇ		
96. ಮಂಜುಳಾ ಸುಬ್ಬರಾವ್	ಸಂಪ್ರದಾಯ ಗೀತೆಗಳು	ಪುಟ–19
97. ಪಿ.ವಿ. ಕೃಷ್ಣಾಬಾಯಿ	ಅಪ್ರಕಟಿತ ಹಸ್ತ ಪ್ರತಿ	
98. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–1, ಹೆಳವನಕಟ್ಟೆ ಗಿರಿಯಮ್ಮ	ಪುಟ–248
99. ಪಿ.ವಿ. ಕೃಷ್ಣಾಬಾಯಿ	ಅಪ್ರಕಟಿತ ಹಸ್ತ ಪ್ರತಿ	
100. ಅದೇ		
101. ಅದೇ		
102. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–1, ಹೆಳವನಕಟ್ಟೆ ಗಿರಿಯಮ್ಮ	ಪುಟ–99
103. ಪಿ.ವಿ. ಕೃಷ್ಣಾಬಾಯಿ	ಅಪ್ರಕಟಿತ ಹಸ್ತ ಪ್ರತಿ	
104. ಅದೇ		
105. ಅದೇ		
106. ಅದೇ		
107. ಅದೇ		
108. ಅದೇ		
109. ಅದೇ		
110. ವಾಗೀಶ್ವರಿ ಶಾಸ್ತ್ರಿ	ಹೃದಯ ಸಂಪುಟ	ಪುಟ–50

111. ಮತಿಘಟ್ಟ ಕೃಷ್ಣಮೂರ್ತಿ	ಗೃಹಿಣೀ ಗೀತೆಗಳು	ಪುಟ–749
112. ಮಂಜುಳಾ ಸುಬ್ಬರಾವ್	ಸಂಪ್ರದಾಯ ಗೀತೆಗಳು	ಪುಟ–4
113. ವಿಜಯಲಕ್ಷ್ಮಿ ರಾಘವೇಂದ್ರಾಚಾರ್ಯ	ಶ್ರೀರಾಮ ಪಾರಿಜಾತ	ಪುಟ–29
114. ಮಂಜುಳಾ ಸುಬ್ಬರಾವ್	ರುಕ್ಮಿಣೀ ಪರಿಣಯ	ಪುಟ–29
115. ಟಿ.ಎನ್. ನಾಗರತ್ನ ಅಕ್ಕಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಸಂ–19, ಹರಪನಹಳ್ಳಿ ಭೀಮವ್ವ	ಪುಟ–676
116. ಅದೇ		ಪುಟ–677
117. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–2, ನಿಡಗುರುಕಿ ಜೀವೂಬಾಯಿ	ಪುಟ–272
118. ವಿಜಯಲಕ್ಷ್ಮಿ ರಾಘವೇಂದ್ರಾಚಾರ್ಯ	ಶ್ರೀರಾಮ ಪಾರಿಜಾತ	ಪುಟ–35
119. ಟಿ.ಎನ್. ನಾಗರತ್ನ ಅಕ್ಕಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಸಂ–19, ಹರಪನಹಳ್ಳಿ ಭೀಮವ್ವ	ಪುಟ–190
120. ಅದೇ		ಪುಟ–681
121. ಅದೇ		ಪುಟ–196
122. ಎಚ್.ಎಸ್. ಪದ್ಮಾಮೂರ್ತಿ	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4, ನಂಜನಗೂಡು ತಿರುಮಲಾಂಬಾ	ಪುಟ–419
123. ಮಂಜುಳಾ ಸುಬ್ಬರಾವ್	ಶ್ರೀರುಕ್ಮಿಣಿ ಪರಿಣಯ	ಪುಟ–36
124. ಟಿ.ಎನ್. ನಾಗರತ್ನ ಅಕ್ಕಮಹಾದೇವಿ	ಸಮಗ್ರ ದಾಸ ಸಾಹಿತ್ಯ, ಸಂ–19, ಹರಪನಹಳ್ಳಿ ಭೀಮವ್ವ	ಪುಟ–681
125. ಲೀಲಾವತಿ ಎಸ್. ರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–2, ನಿಡಗುರುಕಿ ಜೀವೂಬಾಯಿ	ಪುಟ–169
126. ಸೀತಾಬಾಯಿ ರಾ. ಪುರೋಹಿತ	ಹರಿಕಡಲಾಮೃತ	ಪುಟ–54
127. ಎಂ.ಆರ್. ಲಕ್ಷ್ಮೀದೇವಿ	ಗಲಗಲಿ ಅವ್ವ	ಪುಟ–17
128. ಅದೇ		ಪುಟ–17
129. ಅದೇ		ಪುಟ–18
130.	ಸಮಗ್ರ ದಾಸ ಸಾಹಿತ್ಯ, ಸಂ–19, ಹರಪನಹಳ್ಳಿ ಭೀಮವ್ವ	ಪುಟ–303, 304
131. ಅದೇ		ಪುಟ–308
132. ವಾಗೀಶ್ವರಿ ಶಾಸ್ತ್ರಿ	ಹೃದಯ ಸಂಪುಟ	ಪುಟ–55

ಅಧ್ಯಾಯ–7

ಭಾಷೆ–ಶೈಲಿ

ಹರಿದಾಸರಿಗೆ ಕನ್ನಡ–ಸಂಸ್ಕೃತಗಳ ಜ್ಞಾನದ ಜೊತೆಗೆ ಮಾಧ್ವ ತತ್ವ, ಪುರಾಣಗಳು, ಮಹಾಕಾವ್ಯಗಳ ಪರಿಚಯವೂ ಇತ್ತು. ಒಂದು ಸಿದ್ಧ ಸಂಪ್ರದಾಯಕ್ಕೆ ಬದ್ಧರಾಗಿ ಅವರು ಸಾಹಿತ್ಯ ರಚನೆ ಮಾಡಿದರು. ಇವರಿಗೆ ಕಾವ್ಯವು ಮತಧರ್ಮದ ಪ್ರಚಾರಕ್ಕೆ ಮಾಧ್ಯಮ. "ಮತ ಧರ್ಮದ ಚೌಕಟ್ಟಿನಲ್ಲಿಯೇ ಕವಿಯ ಚಿಂತನೆಗಳು ಮುಂದುವರೆದಾಗ ಕಾವ್ಯ ಕ್ಷೇತ್ರದ ವ್ಯಾಪ್ತಿ ಕಡಿಮೆಯಾಗುತ್ತದೆ."[1] ದಾಸ ಪರಂಪರೆಯ ಚೌಕಟ್ಟಿನಲ್ಲಿಯೇ ಹರಿದಾಸರು ಕೃತಿಗಳನ್ನು ರಚಿಸಿದ ಕಾರಣ ಕವಿಗಿರುವ ಸ್ವಾತಂತ್ರ್ಯ ಹರಿದಾಸರಿಗೆ ಸಿಗಲಿಲ್ಲ. "ವಚನಕಾರರಾಗಲೀ, ಹರಿದಾಸರಾಗಲೀ ತಮ್ಮ ಅಂತರಂಗದ ವಿವಿಧ ಅನುಭವಗಳನ್ನು ತಾದಾತ್ಮ್ಯ ಭಾವದಿಂದ ತಿಳಿಯಾದ ನುಡಿಗಳಲ್ಲಿ, ವ್ಯಕ್ತಪಡಿಸುವುದರಿಂದ ಅವು ಸಾಹಿತ್ಯದ ಅನೇಕ ಲಕ್ಷಣಗಳನ್ನು ಒಳಗೊಂಡಿದೆ. ಆದ್ದರಿಂದ ಅವುಗಳನ್ನು ಕನ್ನಡ ಸಾಹಿತ್ಯದ ಒಂದು ಪ್ರಕಾರವಾಗಿ ಪರಿಗಣಿಸಲಾಗಿದೆ."[2] ಆದರೆ ಹರಿದಾಸರಿಗೆ ಇದ್ದ ಸೌಲಭ್ಯ, ಸ್ವಾತಂತ್ರ್ಯಗಳು ಕೂಡ ದಾಸ ಮಹಿಳೆಯರಿಗೆ ಇರಲಿಲ್ಲ. ಲೌಕಿಕ ವಿದ್ಯೆ ಪಡೆಯದ ನಿರಕ್ಷರಿಗಳಾಗಿದ್ದರೂ ತಾವು ಕೇಳಿದ ಕಥೆಗಳನ್ನು, ಪ್ರಸಂಗಗಳನ್ನು, ಶಾಸ್ತ್ರ ಸಂಪ್ರದಾಯಗಳನ್ನು ಕುರಿತು ಹಾಡು ಕಟ್ಟಿದರು. ತಮಗೆ ಪರಿಚಯವಿದ್ದ ಹಾಡಿನ ಲಯಗಳನ್ನು ಅನುಕರಣೆ ಮಾಡಿದರು. ದಾಸ ಮಹಿಳೆಯರ ಕೃತಿಗಳಲ್ಲಿ ಕಂಡು ಬರುವ ಛಂದೋ ರೂಪಗಳು, ಅಲಂಕಾರಗಳು, ಕಾವ್ಯ ಚಮತ್ಕಾರಗಳು. ಸಂಖ್ಯಾರ್ಥಗಳು, ಶಬ್ದ ಸಂಪತ್ತು, ಮುಂತಾದವುಗಳಲ್ಲಿ ಅವರ ಪ್ರತಿಭೆ ಅನಾವರಣಗೊಂಡಿದೆ.

ಛಂದೋರೂಪಗಳು:

ದಾಸ ಮಹಿಳೆಯರು ಹರಿದಾಸರ ಸಂಪ್ರದಾಯದಂತೆ ಕೀರ್ತನೆ, ಸುಳಾದಿ ಮತ್ತು ಉಗಾಭೋಗಗಳನ್ನು ರಚಿಸಿದ್ದಾರೆ. ಜೊತೆಗೆ ತ್ರಿಪದಿ, ಸಾಂಗತ್ಯ, ಷಟ್ಪದಿ, ಆರ್ಯ, ಸೀಸ ಪದ್ಯ, ವಿಲಂಜಿತ ತ್ವರಿತ ಬಂಧಗಳು, ವೃತ್ತ ನಾಮ ಇತ್ಯಾದಿ ಛಂದಸ್ಸುಗಳನ್ನು ಬಳಸಿ ಕೃತಿ ರಚನೆ ಮಾಡಿದ್ದಾರೆ. ಖಂಡ ಕಾವ್ಯಗಳಲ್ಲಿ ವಿವಿಧ ಛಂದಸ್ಸುಗಳಲ್ಲಿ ಕೃತಿ ರಚಿಸಿರುವುದು ಅವರ ಪರಿಣತಿಗೆ ದ್ಯೋತಕವಾಗಿದೆ.

ತ್ರಿಪದಿ:

ತ್ರಿಪದಿಯನ್ನು ಕನ್ನಡ ಛಂದಸ್ಸಿನ ಗಾಯತ್ರಿ ಎಂದೇ ಹೇಳಲಾಗುತ್ತದೆ. ಇದು ಭಾವಾಭಿವ್ಯಕ್ತಿಗೆ ಸೂಕ್ತವಾದ ಬಂಧ. ಮಹಿಳಾ ಹರಿದಾಸರ ಕೃತಿಗಳಲ್ಲಿ ಕಂಡು ಬರುವ ತ್ರಿಪದಿಗಳು ತತ್ವ ಸುವಾಲಿ ಧಾಟಿಯ ತ್ರಿಪದಿಗಳು. ಈ ತ್ರಿಪದಿಗಳನ್ನು ಹಾಡುವ ಧಾಟಿಯಲ್ಲಿ ಬರೆಯಲಾಗಿದೆ. ಅಂಬಾಬಾಯಿಯವರ ಶ್ರೀಕೃಷ್ಣ ಬಾಲ ಲೀಲೆ ಮತ್ತು ಭೀಮವ್ವನವರ ಸ್ತುತಿ ಮಣಿಮಾಲಿಕೆ ಇವುಗಳಿಗೆ ಉದಾಹರಣೆಗಳು.

ತ್ರಿಪದಿಯು ಅಂಶ ಛಂದಸ್ಸಿಗೆ ಸೇರಿದ್ದು, ವಿಷ್ಣು ಗಣ ಪ್ರಧಾನವಾದ ಮೂರು ಪಾದಗಳ ರಚನೆ. 6 ಮತ್ತು 10ನೇ ಗಣ ಬ್ರಹ್ಮ ಗಣ ಉಳಿದವು ವಿಷ್ಣು ಗಣಗಳು

ವಿ ವಿ ವಿ ವಿ
ವಿ ಬ್ರ ವಿ ವಿ
ವಿ ಬ್ರ ವಿ

ಇದು ಲಾಕ್ಷಣಿಕರು ಹೇಳುವ ತ್ರಿಪದಿಯ ಲಕ್ಷಣ. ಶುದ್ಧ ತ್ರಿಪದಿಗೆ ಉದಾಹರಣೆಯನ್ನು ಭೀಮವ್ವನ ಸ್ತುತಿ ಮಣಿ ಮಾಲಿಕೆಯಲ್ಲಿ ಕಾಣಬಹುದು.

ಹೊತ್ತು ಹೋ. ಗುತಲಿದೆ. ಮೃತ್ಯು ಕೂ. ಗುತಲಿದೆ ವಿ.ವಿ.ವಿ.ವಿ
ವ್ಯರ್ಥವಾ. ಗುವುದೋ. ಈ ಜನ್ಮ. ನಿನನಾಮ ವಿ.ಬ್ರ.ವಿ.ವಿ
ಎತ್ತರ. ವೆನಗೆ. ನಿಲುಕದು ವಿಬ್ರವಿ

–ಭೀಮವ್ವ

ತ್ರಿಪದಿ ಛಂದಸ್ಸಿನಲ್ಲಿ ದೀರ್ಘ ಕಾವ್ಯಗಳು ಕಡಿಮೆ. ಕಾವ್ಯ ನಿರೂಪಣೆಗೆ ತ್ರಿಪದಿಯ ಮೂರು ಪಾದಗಳ ವ್ಯಾಪ್ತಿ ಸಾಕಾಗುವುದಿಲ್ಲ. ಬಿಡಿ ಬಿಡಿಯಾದ ತತ್ವಗಳನ್ನು, ನೀತಿಯನ್ನೂ, ಅನುಭವದ ಮಾತುಗಳನ್ನು, ಸ್ತೋತ್ರಗಳನ್ನು ಹೇಳಲು ತ್ರಿಪದಿ ಸೂಕ್ತವಾದ ಛಂದಸ್ಸು. ಭೀಮವ್ವನವರ ಬುಧ–ಬೃಹಸ್ಪತಿ ಹಾಡು ೧೧೧ ತ್ರಿಪದಿಗಳಲ್ಲೂ, ಅಂಬಾಬಾಯಿಯವರ ಕೃಷ್ಣ ಬಾಲ ಲೀಲೆ ೩೮೯ ತ್ರಿಪದಿಗಳಲ್ಲೂ ರಚಿತವಾಗಿದ್ದು ಇಲ್ಲಿ ಕಥೆ ನಿಮಿತ್ತ ಮಾತ್ರ. ಸ್ತುತಿ ಭಾಗವೇ ಪ್ರಮುಖವಾಗಿದೆ. ಹಾಡುಗಬ್ಬಗಳಲ್ಲಿ ತ್ರಿಪದಿಯ ನಿಯಮ ಅನೇಕ ಕಡೆ ಪಾಲಿತವಾಗಿಲ್ಲ. ವಿಷ್ಣು ಗಣಗಳಿಗೆ ಬದಲಾಗಿ ರುದ್ರಗಣ ಬಂದಿರುವುದುಂಟು.

ವಿಷ್ಣು ಗಣಗಳಿಗೆ ಪರ್ಯಾಯವಾಗಿ ಪಂಚ ಮಾತ್ರಾ ಗಣಗಳು ಬಂದಿರುವುದು ಇದಕ್ಕೆ ಕಾರಣ. ಸುವ್ವಾಲಿಗಳಲ್ಲಿ ಪಂಚ ಮಾತ್ರಾಗಣಗಳು ಬಳಕೆ ಆಗಿರುವುದೇ ಹೆಚ್ಚು.

ಮಧುರೆಯಲಿ ದೇವಕಿಯು ಮದು ಮಗಳು ಆಗಿರಲು	ರು. ರು. ರು. ರು.
ಮುದದಿಂದ ರಥದಿ ಕುಳ್ಳಿರಿಸಿ ಕುಳ್ಳಿರಿಸಿ ಪತಿಯೊಡನೆ	ವಿ. ಬ್ರ. ರು. ರು.
ಸುದತಿಯರ ಮೇಳ ಬರುತಿರಲು	ರು. ಬ್ರ. ರು.

ಇದು ಸುವ್ವಾಲಿಯ ಲಿಖಿತ ರೂಪ.

ಮಧುರೆಯಲಿ. ದೇವಕಿಯು. ಮದುಮಗಳು. ಆಗಿರಲು	5.5.5.5
ಮುದದಿಂದ. ರಥದಿ. ಕುಳ್ಳಿರಿಸಿ	5.3.5
ಮುದದಿಂದ. ರಥದಿ, ಕುಳ್ಳಿರಿಸಿ. ಪತಿಯೊಡನೆ	5.3.5.5
ಸುದತಿಯರ. ಮೇಳ. ಬರುತಿರಲು	5.3.5

–ಅಂಬಾಬಾಯಿ

ಇದು ಸುವ್ವಾಲಿಯ ಹಾಡುವ ರೂಪ.

ಹಲವಾರು ತ್ರಿಪದಿಗಳಲ್ಲಿ ಬ್ರಹ್ಮ ಗಣಕ್ಕೆ ಪರ್ಯಾಯವಾಗಿ 3 ಮಾತ್ರೆ ಬರುವ ಬದಲು 5 ಮಾತ್ರೆಯ ಗಣವೇ ಬಂದಿದ್ದು ಶುದ್ಧ ಮಾತ್ರಾ ತ್ರಿಪದಿಗಳೂ ಆಗಿವೆ.

ರಮ್ಮೆಯರ. ಸನುಆಗ. ಸುಮ್ಮನಸ. ರೊಡಗೂಡಿ	5.5.5.5
ತಮ್ಮನಿಗೆ. ತಮ್ಮನಾ. ಗವತರಿಸೆ	5.5.5
ತಮ್ಮನಿಗೆ. ತಮ್ಮನಾ. ಗವತರಿಸೆ. ಮನಮಾಡಿ	5.5.5.5
ಚಿನ್ಮಯನು. ಧರೆಗಿಳಿದು. ಬಂದಾನು	5.5.5

–ಅಂಬಾಬಾಯಿ

ಸಾಂಗತ್ಯ:

ತ್ರಿಪದಿಯಂತೆ ಸಾಂಗತ್ಯವೂ ಒಂದು ಹಾಡುಗಬ್ಬ. ಕಥಾ ನಿರೂಪಣೆಗೆ ಸೂಕ್ತವಾಗಿ ಹೊಂದುವ ಛಂದೋಲಯ ಇದು. ಕೀರ್ತನೆಗಳನ್ನು ಬಿಟ್ಟರೆ ಮಹಿಳಾ ಹರಿದಾಸರು ಹೆಚ್ಚಾಗಿ ಬಳಸಿರುವುದೇ ಸಾಂಗತ್ಯ. ಮಹಿಳಾ ದಾಸರ ಸಂಪ್ರದಾಯದ ಹಾಡುಗಳಲ್ಲಿ ಬರುವ ವ್ರತ ಕಥೆಗಳು, ಖಂಡ ಕಾವ್ಯಗಳು, ಕಥನ ಗೀತೆಗಳು ಸಾಂಗತ್ಯದಲ್ಲೇ ಇವೆ. ಗಿರಿಯಮ್ಮನ ಚಂದ್ರಹಾಸನ ಕಥೆ, ಲವಕುಶರ ಕಾಳಗ ಮತ್ತು ಭೀಮವ್ವನ ಬಹಳಷ್ಟು ಕಥನ ಕಾವ್ಯಗಳು ಸಾಂಗತ್ಯದಲ್ಲಿವೆ. ಸಾಂಗತ್ಯದ ಲಕ್ಷಣ ಹೀಗಿವೆ.

ವಿ ವಿ ವಿ ವಿ	ನಾಲ್ಕು ಪಾದಗಳು. 14 ಗಣಗಳು ಏಳು ಮತ್ತು ಹದಿನಾಲ್ಕನೇ ಗಣ
ವಿ ವಿ ಬ್ರ	ಬ್ರಹ್ಮ ಉಳಿದವು ವಿಷ್ಣು ಇದು ಸಾಂಗತ್ಯದ ವಿನ್ಯಾಸ
ವಿ ವಿ ವಿ ವಿ	
ವಿ ವಿ ಬ್ರ	

ದೇವಾದಿ. ದೇವನೆ. ದೇವಲೋ. ಕದಿಸುತ್ತಿ	ವಿ ವಿ ವಿ ವಿ
ಈ ಪಾರಿ. ಜಾತವ. ತಂದೆ	ವಿ ವಿ ಬ್ರ
ದೇವಿರು. ಕ್ಮಿಣಿಗೀಗ. ಮುಡಿಸೆಂದು. ನಾರಂದ	ವಿ ವಿ ವಿ ವಿ
ಸಾಮಿಯ. ಚರಣಕ. ರ್ಪಿಸಿದ	ವಿ ವಿ ಬ್ರ

–ಭೀಮವ್ವ

ವ್ರತ ಕಥೆಗಳು ಮತ್ತು ಕಥನ ಗೀತೆಗಳ ಸಾಂಗತ್ಯ ಶುದ್ಧ ಅಂಶ ಬಂಧವಾಗಿ ಉಳಿದಿಲ್ಲ. ಪಂಚ ಮಾತ್ರಾಗಣಗಳಿಗೆ ಪರಿವರ್ತನೆಯಾಗಿದೆ. ಹಾಡುವ ಧಾಟಿಯಲ್ಲೂ ಬದಲಾವಣೆ ಮಾಡಲಾಗಿದೆ.

ಷಟ್ಪದಿ:

ಷಟ್ಪದಿಯು ಆರು ಪಾದಗಳುಳ್ಳ ಪದ್ಯ ರೂಪ. ಷಟ್ಪದಿಗಳ ಒಂದು, ಎರಡು, ನಾಲ್ಕು ಮತ್ತು ಐದನೇ ಪಾದಗಳ ಗಣವಿನ್ಯಾಸ ಒಂದೇ ರೀತಿ ಇದ್ದು, ಮೂರು ಮತ್ತು ಆರನೆಯ ಪಾದಗಳ ಗಣ ವಿನ್ಯಾಸ ಒಂದೇ ರೀತಿ ಇರುತ್ತದೆ. ಮೂರು ಮತ್ತು ಆರನೇ ಪಾದದ ಕೊನೆಯ ಅಕ್ಷರ ಲಘುವಾಗಿದ್ದರೂ 'ಗುರು'ವೆಂದೇ ಪರಿಗಣಿಸಬೇಕು. ಮಹಿಳಾ ಹರಿದಾಸರು ಭಾಮಿನೀ ಭೋಗ ಹಾಗೂ ವಾರ್ಧಕ ಷಟ್ಪದಿಗಳನ್ನು ಬಳಸಿದ್ದಾರೆ.

ಭಾಮಿನಿ ಷಟ್ಪದಿ:

ಭಾಮಿನಿಯು ದೀರ್ಘ ಕಾವ್ಯಗಳಿಗೆ ಹೊಂದುವಂತಹ ಛಂದೋಬಂಧ. ಇದರ ನಡೆ ಸಾವಧಾನ. ಬೆಡಗಿನ ನಡೆ, ಸಾವಧಾನ ಗತಿಯಾದರೂ ನಡೆಯಲ್ಲಿ ಭಾವವನ್ನು ಹಿಡಿದಿಡಬಲ್ಲ ಬಂಧ.

ಲಕ್ಷಣ: 1, 2, 4, 5ನೇ ಪಾದಗಳಲ್ಲಿ 3, 4 ರಂತೆ ಎರಡು ಗಣಗಳು, 3 ಮತ್ತು 6ನೆಯ ಪಾದಗಳಲ್ಲಿ, 3, 4ರ ಮೂರು ಮೂರು ಗಣಗಳು ಒಂದು ಗುರು ಬರಬೇಕು.

ಉದಾಹರಣೆಗೆ:

ಕಡಲ. ಶಯನನ. ಗುಣವ. ಪಾಡುತ	3 4 3 4
ಬಡವ. ವಿಪ್ರನು. ಬರಲು. ಅವನಿಗೆ	3 4 3 4
ಹಿಡಿಯ. ತಂಡುಲ. ಕೊಡಲು. ನಾಅ. ಸ್ವತಂತ್ರ. ಳಾಗಿರು. ವೆ	3 4 3 4 3 4 ಗು
ವಡವೆ. ವಸ್ತುಗ. ಳನ್ನೆ. ಯಾಚಿಸಿ	3 4 3 4
ಕೊಡಲು. ಎನಗದು. ಸಾಧ್ಯ . ವಿಲ್ಲವು	3 4 3 4
ಕೊಡದಿ. ರಲು ಈ. ವಿಪ್ರ ನಾಗ್ರಹ. ಬಿಡದೆ. ವದಗುವ.ದು	3 4 3 4 3 4 ಗು

– ನಿಡಗುರುಕಿ ಜೀವೂಬಾಯಿ

ಭೋಗ ಷಟ್ಪದಿ:

ಭೋಗ ಷಟ್ಪದಿಯು ತ್ರಿಮಾತ್ರಾಗಣಗಳಿಂದ ಕೂಡಿದ ಷಟ್ಪದಿ. ಇದರ ನಡೆ ಶರ, ಪರಿವರ್ಧಿನಿಗಳಂತೆ ತೀರಾ ನಿಧಾನವಲ್ಲದಿದ್ದರೂ, ಮಧ್ಯಗತಿಯಲ್ಲಿ ಸಾಗುತ್ತದೆ. ಮಂಜುಳಾ ಸುಬ್ಬರಾವ್‌ರವರು "ಶ್ರೀಸುಮಧ್ವ ವಿಜಯ" ಎಂಬ ಕೃತಿಯನ್ನು ಭೋಗ ಷಟ್ಪದಿಯಲ್ಲಿ ರಚಿಸಿದ್ದಾರೆ.

ಲಕ್ಷಣ: 1, 2, 4, 5ನೇ ಪಾದಗಳಲ್ಲಿ 3 ಮಾತ್ರೆಯ ನಾಲ್ಕು ಗಣಗಳು, 3 ಮತ್ತು 6ನೇ ಪಾದಗಳಲ್ಲಿ 3 ಮಾತ್ರೆಯ ಆರು ಗಣಗಳು ಮತ್ತು ಕೊನೆಯಲ್ಲಿ ಒಂದು ಗುರು ಬರುತ್ತದೆ.

ಸಿರಿಯ. ಹರಿಯ. ಸುತನು. ವಾಯು	3 3 3 3
ಸಿರಿಯು. ಹರಿಯು. ಸನ್ನಿ. ಧಾನ	3 3 3 3
ದೊರಕೆ. ದಂಪ. ತಿಗಳಿ.ಗೆ ಖಳೆ. ಉಕ್ಕಿತು	3 3 3 3 3 3 ಗು
ಧರಿಸಿ. ಶುದ್ಧ. ವಸನ. ಪತ್ನಿ	3 3 3
ಹರಿಸೆ. ತಮವು. ಗರ್ಭ. ಧರಿಸಿ	3 3 3
ಹರಿಯ. ಆಜ್ಞೆ. ಒಂದು. ಅಂಶ. ವಾಯು. ಸೇರ್ವರು.	3 3 3 3 3 3 ಗು

ಆರ್ಯೆ:

ದಾಸ ಮಹಿಳೆಯರ ಕಥನ ಕವನಗಳಲ್ಲಿ ಬಹಳವಾಗಿ ಬಳಕೆಯಾಗಿರುವ ಹಾಡುಗಬ್ಬ ಆರ್ಯೆ. ನಾಗವರ್ಮನ ಛಂದೋಂಬುಧಿಯ ಲಕ್ಷಣದಂತೆ ಇದು ಮಾತ್ರಾಗಣ ಘಟಿತ ಆರ್ಯೆ ಅಲ್ಲ. ಇದು ಅಂಶ ಛಂದಸ್ಸು. ವಿಷ್ಣು ಗಣಗಳು ಪ್ರಧಾನವಾಗಿರುವ ಹಾಡು. ಹರಿದಾಸಿಯರು ಪೀಠಿಕಾ ನಿರೂಪಣೆಗೆ ಒಂದೋ ಎರಡೋ ಆರ್ಯೆಯನ್ನು ಬಳಸಿ ಅನಂತರ ಪಲ್ಲವಿ, ಅನುಪಲ್ಲವಿ ಇರುವ ಕೀರ್ತನೆಗಳಲ್ಲಿ ಕಥಾ ಭಾಗವನ್ನು ಮುಂದುವರೆಸುತ್ತಾರೆ. ನಿರೂಪಣೆಗೆ ಆರ್ಯೆ ಮತ್ತು ಸಂಭಾಷಣೆಗೆ ಪದ, ಇವೆರಡನ್ನೂ ಸಂಯೋಜಿಸಿ ಬರೆದ ರಚನೆಗಳಿವು. ವೃತ್ತ ನಾಮ ಅಥವಾ ವೃತ್ತ ಪದಗಳ ಮಾದರಿಯಲ್ಲೇ ಇವರ ಆರ್ಯಾಪದಗಳು ರಚಿತವಾಗಿವೆ. ಯಕ್ಷಗಾನ ಕೃತಿಗಳಲ್ಲೂ ಇದೇ ಮಾದರಿಯನ್ನು ಗಮನಿಸಬಹುದು. ಆರ್ಯೆಯ ಗಣ ವಿನ್ಯಾಸ

ವಿ ವಿ ವಿ ವಿ
ವಿ ವಿ ರು
ವಿ ವಿ ವಿ ವಿ
ವಿ ವಿ ರು

ಹೀಗೆನು. ತಲಿ ಕುಡಿ. ಪೋಗಲು. ವಿಷವನು ವಿ ವಿ ವಿ ವಿ
ಸಾಗರ. ಶಯನನು. ನೋಡುತಲಿ ವಿ ವಿ ರು
ನೀಡಿದ. ಮೂಗುತಿ. ಬೀಳಲು. ವಿಷದಲಿ ವಿ ವಿ ವಿ ವಿ
ಸೋಜಿಗ. ದಲಿಕಂ. ಗಳ ತೆರೆದು ವಿ ವಿ ರು

–ನಿಡಗುರುಕಿ ಜೀವೂಬಾಯಿ

ಈ ನಿಯಮಗಳು ಅನೇಕ ಕಡೆ ಪಾಲಿತವಾಗಿಲ್ಲ. ರುದ್ರ ಗಣಕ್ಕೆ ಬದಲಾಗಿ ವಿಷ್ಣುಗಣಗಳು ಬಂದಿರುವುದುಂಟು. ಹೀಗೆಯೇ ವಿಷ್ಣು ಗಣಗಳಿಗೆ ಪರ್ಯಾಯವಾಗಿ ಪಂಚಮಾತ್ರಾಗಣಗಳು ಬಳಕೆಯಾಗಿವೆ. ಆರ್ಯೆಯ ನಂತರ ಕೀರ್ತನೆಗಳನ್ನು ಬಳಸುವುದು ಒಂದು ವಿಧವಾದರೆ ಆರ್ಯೆಯ ಅನಂತರ ಬೇರೆ ಛಂದೋ ರೂಪಗಳನ್ನು ಬಳಸಿರುವ ಉದಾಹರಣೆಗಳು ಇವೆ.

ಸೀಸಪದ್ಯ:

ಶ್ರೀಪಾದರಾಜಾದಿ ಹರಿದಾಸರಿಂದ ಪ್ರಾರಂಭಿಸಿ ಈಚಿನ ಹರಿದಾಸರ ಕೃತಿಗಳವರೆಗೂ ಸೀಸ ಪದ್ಯಗಳ ಬಳಕೆ ತೀರಾ ಕಡಿಮೆಯೆಂದೇ ಭಾವಿಸಬೇಕು. ಯಕ್ಷಗಾನ ಕಾವ್ಯಗಳ ಪ್ರಭಾವದಿಂದಲೋ, ಅಥವಾ ತೆಲುಗು ಕಾವ್ಯಗಳ ಸಂಪರ್ಕದಿಂದಲೋ ಸೀಸ ಪದ್ಯಗಳ ಬಳಕೆ ಅರ್ವಾಚೀನ ಮಹಿಳಾ ಹರಿದಾಸರಲ್ಲಿ ಯಥೇಚ್ಛವಾಗಿ ಕಂಡು ಬರುತ್ತದೆ. ನಿಡಗುರುಕಿ ಜೀವೂಬಾಯಿ ಮತ್ತು ಕೋಲಾರ ಪದ್ಮಾಬಾಯಿಯವರ ಕೃತಿಗಳಲ್ಲಿ ಸೀಸ ಪದ್ಯಕ್ಕೆ ಸಾಕಷ್ಟು ಉದಾಹರಣೆಗಳು ಕಂಡು ಬರುತ್ತವೆ.

ಸೀಸ ಪದ್ಯವು ತೆಲುಗಿನಲ್ಲಿ ಹೆಚ್ಚು ಜನಪ್ರಿಯವಾಗಿರುವ ಬಂಧ. ಸೀಸಪದ್ಯದಲ್ಲಿ ನಾಲ್ಕು ಸಮಪಾದಗಳಿರುತ್ತವೆ. ಪ್ರತಿ ಪಾದದಲ್ಲೂ 6 ವಿಷ್ಣು ಗಣ ಮತ್ತು 2 ಬ್ರಹ್ಮಗಣ ಬರುತ್ತವೆ. ಪ್ರತಿ ಪಾದದಲ್ಲಿಯೂ 6 ಪಂಚ ಮಾತ್ರಾಗಣ, 2 ತ್ರಿಮಾತ್ರಾಗಣಗಳಿದ್ದು, ಮೂವತ್ತಾರು ಮಾತ್ರೆಗಳಿರುತ್ತವೆ.

"ಸೀಸ ಪದ್ಯ ಅಂಶಗಣ ಘಟಿತವಾಗಿದ್ದು ಕಾಲ ಕ್ರಮೇಣ ಮಾತ್ರಾಗಣಕ್ಕೆ ಬದಲಾಯಿತು."[3] ಕನ್ನಡ, ತೆಲುಗು, ಎರಡೂ ತಿಳಿದಿದ್ದ ದಾಸ ಮಹಿಳೆಯರು ಇದನ್ನು ಬಳಸಿದ್ದಾರೆ.

ತಂದೆಯಾ. ಡಿದವಾಕ್ಯ. ಕಂದಸಿರ. ದಿವಹಿಸಿ ವಿ ವಿ ವಿ ವಿ
ಚಂದದಾ. ಭರಣದ. ಸಹಿತ. ಪೊರಟು ವಿ ವಿ ಬ್ರ ಬ್ರ
ಚಂದುಳ್ಳ. ರಾಜರಲಿ. ಪೊಂದಿ ಸ್ನೇ. ಹಮಾಡಿ ವಿ ವಿ ವಿ ವಿ
ಬಿಂದಿಗೆ. ಹಣಗಳಾ. ಪೊಂದಿ. ಸುತಲಿ ವಿ ವಿ ಬ್ರ ಬ್ರ
ಈ ರೀತಿ. ಯಿಂದವ್ಯಾ. ಪಾರ ಮಾ. ಡುತಲಿರಲು ವಿ ವಿ ವಿ ವಿ
ಯಾರು ಸರಿ. ಯಿಲ್ಲತನ. ಗೆಂದು. ಮುದದಿ ವಿ ವಿ ಬ್ರ ಬ್ರ
ದಾರಿದ್ರ್ಯ. ಪೀಡಿತರ. ನೋಡದಲೆ. ಕಂಗಳಲಿ ವಿ ವಿ ವಿ ವಿ
ನೀಡದೆ. ಭಿಕ್ಷವನು. ಲೋಭ. ದಿಂದ ವಿ ವಿ ಬ್ರ ಬ್ರ

ಸೀಸ ಪದ್ಯದ ಪ್ರತಿ ಪಾದವನ್ನು ವಿಭಜಿಸಿ ನಾಲ್ಕು ಪಾದಗಳನ್ನು ಎಂಟು ಪಾದಗಳಾಗಿ ಮಾಡಿಕೊಳ್ಳಲಾಗಿದೆ. ವಿಷ್ಣು ಗಣ ಬರಬೇಕಾದ ಕಡೆ ಕೆಲವು ಬಾರಿ ರುದ್ರ ಗಣಗಳು ಬರುವುದೂ ಉಂಟು. ಸೀಸ ಪದ್ಯವು ಪಂಚ ಮಾತ್ರಾಗಣಕ್ಕೆ ಪರಿವರ್ತಿತವಾದದ್ದೇ ಇದಕ್ಕೆ ಕಾರಣ. ಪ್ರತಿ ಸೀಸ ಪದ್ಯವಾದ ಮೇಲೆ ತೆಲುಗಿನ ತೇಟ ಗೀತೆಯನ್ನು ಹೋಲುವ ಒಂದು ಗೀತೆ ಇರುತ್ತದೆ.

ಜೀವೂಬಾಯಿಯವರ ಕೃತಿಗಳಲ್ಲಿ ಒಟ್ಟು ನಾಲ್ಕು ಸೀಸ ಪದ್ಯಗಳನ್ನು ಗುರುತಿಸಬಹುದು. ಕೋಲಾರ ಪದ್ಮಾಬಾಯಿಯವರ ಕೃತಿಗಳಲ್ಲಿ ಹನ್ನೊಂದು ಸೀಸ ಪದ್ಯಗಳನ್ನು ಗುರುತಿಸಬಹುದು.

ವರಣ (ಅತೀತಾಕ್ಷರ ಪ್ರಾಸ):

ಛಂದಸ್ಸಿನ ಲಕ್ಷಣಗಳಾಗಿ ಬರುವ ಆದಿಪ್ರಾಸ, ಅಂತ್ಯಪ್ರಾಸ ಇವುಗಳ ಜೊತೆಗೆ ಅನುಪ್ರಾಸ, ವಡಿ, ವರಣ, ಯತ್ಯಕ್ಷರ ಅಂತ್ಯಪ್ರಾಸ ಇವುಗಳ ಬಳಕೆಯನ್ನು ಕಾವ್ಯಗಳಲ್ಲಿ ಕಾಣಬಹುದು. ಪದ್ಯದ ಪಾದ ದ್ವಂದ್ವಗಳ ಮಧ್ಯದಲ್ಲಿ ಅಥವಾ ಪ್ರತಿ ಪಾದದ ಅಂತ್ಯದಲ್ಲಿ ಲಯದ ಗತಿಯಿಂದ ಪ್ರತ್ಯೇಕವಾಗಿ ನಿಲ್ಲುವ ಅಕ್ಷರ ಪುಂಜವನ್ನು ಯಕ್ಷಗಾನ ಕಾವ್ಯಗಳಲ್ಲಿ 'ವರಣ' ಎನ್ನುತ್ತಾರೆ. ಇವು ತಾಳದ ಗಣನೆಗೆ ಸಿಗದ ಅಕ್ಷರ ಪುಂಜಗಳಾಗಿರುತ್ತವೆ. ಕೀರ್ತನೆಗಳಲ್ಲಿ ವರಣದ ಬಳಕೆ ಸಾಮಾನ್ಯ.

ಉದಾಹರಣೆಗೆ:

ವಿಪ್ರ ಅರ್ಪಿಸಿದ ಅವಲಕ್ಕಿ । ಅದ
ಒಪ್ಪಿಡಿಯಲಿ ತಿಂದು ಕೊಟ್ಟೆಯೊ ಅರ್ಥಿ
ವಿಪ್ರ ಮಡದಿಯರಿತ್ತ ಬುತ್ತಿ । ತಿಂದು
ತೃಪ್ತನಾಗಿ ನೀನು ಕೊಟ್ಟೆಯೊ ಮುಕ್ತಿ

ಭೋಗ ಭಾಗ್ಯಗಳ ಕೊಟ್ಟಿರುವೆ । ಎನಗೆ
ಯೋಗ ಮಾರ್ಗವ ತೋರಲು ಮರೆತಿರುವೆ
ಈಗ ಅದನೆ ಬೇಡುತಿರುವೆ । ಹರಿ
ನಾಗಶಯನನೆ ಬೇಗ ನೀಡೆನಗೆ **ಕೋಲಾರ ಪದ್ಮಾಬಾಯಿ**

ಮೇಲಿನ ಉದಾಹರಣೆಗಳಲ್ಲಿ ಬರುವ ಒಂದು ಮತ್ತು ಮೂರನೇ ಪಾದಗಳಲ್ಲಿ ಬರುವ ಅತೀತಾಕ್ಷರಗಳು ವರಣಕ್ಕೆ ಉದಾಹರಣೆ.

ಮಿಶ್ರಲಯಗಳು:

ಹರಿದಾಸರು ಮತ್ತು ದಾಸ ಮಹಿಳೆಯರ ಕೃತಿಗಳಲ್ಲಿ ಅಂಶ ಮತ್ತು ಮಾತ್ರಾ ಛಂದಸ್ಸುಗಳ ಮಿಶ್ರ ಲಯಗಳನ್ನು ಬೇರೆ ಬೇರೆ ಬಂಧಗಳಲ್ಲಿ ಗುರುತಿಸಬಹುದು. ಒಂದು ನುಡಿಯಲ್ಲಿ ಒಂದು ಘಟಕ ಅಂಶ

ಛಂದಸ್ಸಾಗಿದ್ದರೆ ಮತ್ತೊಂದು ಘಟಕ ಮಾತ್ರಾ ಛಂದಸ್ಸಾಗಿರುತ್ತದೆ. ಇಂತಹ 'ವಿಲಂಬಿತ ತ್ವರಿತ' ಬಂಧಗಳು ದಾಸ ಮಹಿಳೆಯರು ಕೃತಿಗಳಲ್ಲಿ ಸಾಕಷ್ಟು ಬಳಕೆಯಾಗಿವೆ.

ಹರಿಮಂ. ದಿರ ಮಹಾ. ದ್ವಾರ । ಬಹು	ವಿ ವಿ ಬ್ರ । ವರಣ
ಜನರು ಕೂ. ಡಿಹರು ವಿ. ಸ್ತಾರ । ಬೀದಿ	ವಿ ವಿ ಬ್ರ । ವರಣ
ನಡೆದು ಪ್ರ. ದಕ್ಷಿಣಾ. ಕಾರ । ಭೂ	ವಿ ವಿ ಬ್ರ । ವರಣ
ವರಹನ. ಸ್ವಾಮಿ ಕಾ. ಸಾರ । ಆಹ	ವಿ ವಿ ಬ್ರ । ವರಣ
ಹರುಷದಿಂ. ದಶ್ವತ್ಥ. ತರುವಕಂ. ಡೆರಗಿ ಹರಿ	5 5 5 5
ದರುಶಾನ. ಕಾಗಿ ಹಾ. ರಯಿಸುವಾ. ಜನತತೀ	5 5 5 5

–ಅಂಬಾಬಾಯಿ

ಹೇಮದ್ವಾ. ರದಿನಿಂತ. ಜನರು । ನಮ್ಮ	ವಿ ವಿ ಬ್ರ । ವರಣ
ಸ್ವಾಮಿಶೃಂ. ಗಾರನೋ. ಡುವರು । ಶ್ರೀನಿ	ವಿ ವಿ ಬ್ರ । ವರಣ
ವಾಸನೆ. ಸಲಹುಎಂ. ಬುವರು । ಪಾಹಿ	ವಿ ವಿ ಬ್ರ । ವರಣ
ಪಾಹಿಶ್ರೀ. ಪತಿ ಎನ್ನು. ತಿಹರು । ಶ್ರೀಶ	ವಿ ವಿ ಬ್ರ । ವರಣ
ಗೋವಿಂದ. ಗೋವಿಂದ. ಗೋವಿಂದ. ಮಾಧವಾ	5 5 5 5
ಮಾತುಳಾಂ. ತಕದೇವ. ಮಾತುಲಾ. ಲಿಸುಎಂದು	5 5 5 5

– ನಿಡಗುರುಕಿ ಜೀವೂಬಾಯಿ

ಯತ್ಯಕ್ಷರ ಅಂತ್ಯಪ್ರಾಸ:

ಹರಿದಾಸರ ಮತ್ತು ಹರಿದಾಸಿಯರ ಪದಗಳಲ್ಲಿ ವಿಶಿಷ್ಟ ಪ್ರಾಸವು ಸಾಕಷ್ಟು ಬಳಕೆಯಾಗಿದೆ. "ಒಂದು ಪಾದದಲ್ಲಿ ಯತಿಯ ಸ್ಥಾನದ ಅಕ್ಷರಕ್ಕೂ, ಪಾದದ ಅಂತ್ಯಾಕ್ಷರಕ್ಕೂ ಪ್ರಾಸ ಏರ್ಪಟ್ಟರೆ ಅದನ್ನು ಯತ್ಯಕ್ಷರ ಅಂತ್ಯಪ್ರಾಸ ಎನ್ನಬಹುದು. ಹರಿದಾಸರ ಪದಗಳಲ್ಲಿ ಇಂತಹ ವಿಶಿಷ್ಟ ಪ್ರಾಸ ಸಾಕಷ್ಟು ಬಳಕೆಯಾಗಿದೆ. ನಿಧಾನವಾದ ಪದ್ಯ ನಡಿಗೆಯಲ್ಲಿ ಪರಿಣಾಮಕಾರಿಯಾದ ಆಂದೋಳಿತ ಲಯವನ್ನು ತರುವ ದೃಷ್ಟಿಯಿಂದ ಹರಿದಾಸರು ಯತ್ಯಕ್ಷರ ಅಂತ್ಯಪ್ರಾಸವನ್ನು ಬಳಸಿದ್ದಾರೆ."[4] ಸಮರ್ಪಣಾ ಭಾವದ ಕೀರ್ತನೆಗಳಲ್ಲಿ ಇವುಗಳನ್ನು ಕಾಣಬಹುದು.

ವರವಾಮನಾಕಾರ । ಪರಮ ಕರುಣಾಸಾರ
ಶರಣ ಜನ ಮಂದಾರ । ಭಯ ವಿದೂರ

ಅಕ್ಷ ವಿದ್ಯಾ ನಿಪುಣ । ಅಕ್ಷಯಾತ್ಮಕ ಸುಗುಣ
ಅಕ್ಷಯತರ ಸುವಚನ । ಲಸಿತ ವದನ — ನಂಜನಗೂಡು ತಿರುಮಲಾಂಬಾ

ನೋಡಿರಿ ರಾಘವೇಂದ್ರರ । ಮಾಡಿರಿ ನಮಸ್ಕಾರ
ಬೇಡಿದ ಇಷ್ಟವರ । ನೀಡುವರು ನಮ್ಮ ಯತಿವರ **ಭೀಮವ್ವ**

ಜಗನ್ಮೋಹನಾಕಾರಳೂ । ಶ್ರೀಹರಿಯ
ಜಗಸೃಷ್ಟಿಗನುಕೂಲಳೂ ।
ಬಗೆಬಗೆಯವತಾರಳೂ । ಕ್ಷಣ ಹರಿಯ
ಅಗಲದಂತಿರುತಿಪ್ಪಳೂ । **ಅಂಬಾಬಾಯಿ**

ವೃತ್ತನಾಮ:

ವೃತ್ತನಾಮವನ್ನು ಕನ್ನಡದಲ್ಲಿ ಮೊದಲಿಗೆ ಬಳಕೆಯಲ್ಲಿ ತಂದವರು ಶ್ರೀಪಾದರಾಜರು. ಪದ ಮತ್ತು ವೃತ್ತಗಳನ್ನು ಕೂಡಿಸಿ ಬರೆಯುವುದನ್ನು 'ವೃತ್ತಪದ' ಅಥವಾ 'ವೃತ್ತ ನಾಮ' ಎನ್ನಲಾಗುತ್ತದೆ. ಹರಿದಾಸ ಸಾಹಿತ್ಯದಲ್ಲಿ ವೃತ್ತನಾಮಗಳು ಅಪರೂಪ. "ಈ ಪದ್ಯ ಜಾತಿಯ ವೃತ್ತ ಅಕ್ಷರ ಛಂದಸ್ಸು. ಪದ ಅಂಶ ಅಥವಾ ಮಾತ್ರಾ ಛಂದಸ್ಸು. ಒಂದು ಪದ, ಒಂದು ವೃತ್ತ ಹೀಗೆ ಎರಡನ್ನೂ ಸೇರಿಸಿ ಬರೆಯುವ ವೃತ್ತನಾಮ ಒಂದು ಮಿಶ್ರ ಪ್ರಯೋಗ."[5] ಶ್ರೀಪಾದರಾಜರು, ಶ್ರೀವಾದಿರಾಜರು, ಜಗನ್ನಾಥದಾಸರು, ಗುರುಗೋಪಾಲ ದಾಸರು ವೃತ್ತನಾಮಗಳನ್ನು ರಚಿಸಿದ್ದಾರೆ. ಮಹಿಳಾ ಹರಿದಾಸರಲ್ಲಿ ವೃತ್ತ ನಾಮವು ಅತೀ ವಿರಳ. ಅಂಬಾಬಾಯಿಯವರು 'ನೋಡಿದ್ಯಾ ಕೃಷ್ಣನ ರೂಪವ' ಮತ್ತು 'ರಕ್ಷಿಸೋ ಕರಿಗಿರಿ ನರಹರಿ' ಎಂಬ ಎರಡು ವೃತ್ತನಾಮಗಳನ್ನು ರಚಿಸಿದ್ದಾರೆ. ಎರಡೂ ಕೃತಿಗಳಲ್ಲಿ ತಲಾ ಎಂಟು ವೃತ್ತಗಳಿವೆ. ಇಲ್ಲಿನ ಎಲ್ಲ ವೃತ್ತಗಳೂ ಶಾರ್ದೂಲ ವಿಕ್ರೀಡಿತ ವೃತ್ತವನ್ನು ಹೋಲುತ್ತವೆ. ಆದರೆ ಇವು ಶುದ್ಧ ಶಾರ್ದೂಲ ವಿಕ್ರೀಡಿತಗಳಲ್ಲ. ಇವುಗಳಲ್ಲಿನ ಪದದ ಭಾಗಗಳು ಸಾಮಾನ್ಯವಾಗಿ ಮಾತ್ರಾ ಛಂದಸ್ಸಿನ ಅಷ್ಟಪದಿಗಳಾಗಿವೆ.

ಅಲಂಕಾರ:

ಕಾವ್ಯ ಲಕ್ಷಣಗಳನ್ನು ಆಧರಿಸಿ ಒಂದು ಕಾವ್ಯ ಹೃದ್ಯವಾಗುತ್ತದೆ. ಅಲಂಕಾರಗಳು ಕಾವ್ಯದ ಸೌಂದರ್ಯವನ್ನು ಹೆಚ್ಚು ಮಾಡುತ್ತವೆ. ಅಲಂಕಾರವನ್ನು ಎರಡು ರೀತಿಯಲ್ಲಿ ಅರ್ಥೈಸಲಾಗುತ್ತದೆ. ಶಬ್ದ ವೈಚಿತ್ರ್ಯ ಹೇಳುವಲ್ಲಿ ಸಂಕುಚಿತಾರ್ಥದಲ್ಲಿಯೂ, ರಸ ಧ್ವನಿಗಳನ್ನು ಒಳಗೊಳ್ಳುವ ವಿಶಾಲಾರ್ಥದಲ್ಲಿ ಕಾವ್ಯ ಸೌಂದರ್ಯವನ್ನು ಈ ಶಬ್ದದಿಂದ ನಿರ್ದೇಶಿಸಲಾಗುತ್ತದೆ. ಸೌಂದರ್ಯಾನುಭವದ ವಿವರಣೆಯೇ ಅಲಂಕಾರಶಾಸ್ತ್ರ. ದಂಡಿಯು 'ಕಾವ್ಯಕ್ಕೆ ಶೋಭೆಯುಂಟು ಮಾಡುವ ಧರ್ಮಗಳೇ ಅಲಂಕಾರಗಳು' ಎನ್ನುತ್ತಾನೆ. ಕಾವ್ಯವು ಗ್ರಾಹ್ಯವಾಗುವುದು ಅಲಂಕಾರಗಳಿಂದ ಎಂದು ವಾಮನನ ಅಭಿಮತ. ಅಲಂಕಾರವನ್ನು 'ಸೌಂದರ್ಯ' ಅಥವಾ 'ಕಾವ್ಯ ಶೋಭೆ' ಎನ್ನಬಹುದು.

ಶಬ್ದ ಅಥವಾ ಅಕ್ಷರಗಳ ಜೋಡಣೆಯ ಚಮತ್ಕಾರದಿಂದ ಕಾವ್ಯ/ಮಾತಿನ ಸೌಂದರ್ಯ ಹೆಚ್ಚಿದರೆ ಅದು ಶಬ್ದಾಲಂಕಾರವೆನಿಸುತ್ತದೆ.

ಅಡಿಗಡಿಗೇ ನುಡಿ ನುಡಿಗೇ ಎಡಬಿಡದೇ ಭಜಿಸುವೆನಾ
ತಡ ಮಾಡದೆ ದಯೆ ತೋರುವುದೈ
ಬಿಡೆ ಬಿಡೆ ನಿಮ್ಮಯ ಅಡಿಗಳ ನಾನೆಯಾ

ಹೊಳೆಯ ತುಂಬಿಸಿ ಇಳೆಯೊಳಗೆ ಮಳೆ ಸ್ವಾಮಿಗಳೆಂದೆನಿಸಿ
ನಳಿನನಾಭನ ಭಜಿಸಿ ಭಕ್ತರ ಕಳವಳ ಪರಿಹರಿಸಿ

ಛಿಟಿ ಛಿಟಿಲೆಂದಾರ್ಭಟಿಸಿ ಕಂಬವು ಸಿಡಿಯೆ
ಕಟಿಕಟಿ ಮಸಿದಗ್ನಿ ನಿಟ್ಟುಸಿರಿನಿಂ ಹಲ್ಗಳ
ಕಟಿಕಟಿ ಕಡಿವುಬ್ಬಸ ತೋರಿನಿಂದ
ಕಠಿಣ ಮೂರುತಿಯೆ   ಗಿರಿಯಮ್ಮ

ಉಪಮೆ, ರೂಪಕ, ಉತ್ಪ್ರೇಕ್ಷೆ, ಶ್ಲೇಷಾಲಂಕಾರ ಇತ್ಯಾದಿಗಳು ಅರ್ಥಾಲಂಕಾರಗಳೆನಿಸುತ್ತವೆ. ಮಹಿಳಾ ಹರಿದಾಸರು ತಮ್ಮ ದೀರ್ಘ ಕೀರ್ತನೆಗಳಲ್ಲಿ ಉಪಮಾಲಂಕಾರವನ್ನು ಹೆಚ್ಚಾಗಿ ಬಳಸಿದ್ದಾರೆ.
ಎರಡು ವಸ್ತುಗಳಿಗೆ ಪರಸ್ಪರ ಇರುವ ಹೋಲಿಕೆಯನ್ನು ಹೇಳುವುದು ಉಪಮಾಲಂಕಾರ.

ಗಲಗಲಿ ಅವ್ವನವರು ಬಳಸಿರುವ ಕೆಲವು ಉಪಮೆಗಳು.

- ಈಚಲ ಗಿಡದಲ್ಲಿ ಗೋಕ್ಷೀರ ಕರೆದಂತೆ ನೀಚರ ಸಂಗ
- ಒಳ್ಳೆ ಮನುಜರ ಸಂಗ ಮಲ್ಲಿಗೆ ಮುಡಿದಂತೆ
- ಕ್ಷುಲ್ಲಕುಮತರ ಸಹವಾಸವೆಂಬೋದು ನೀರುಳ್ಳಿ ತಿಂದ ಪರಿಯಂತೆ
- ಚಂದ್ರನಂತೊಪ್ಪುತ ವಂದಿಸಿ ಐವರು
- ತಾರಕ್ಕಿ ಹೊಳೆವಂತೆ ತೋರ ದೀವಿಗೆ ಎಷ್ಟ
- ಪಾಮರರ ಸಹವಾಸ ಬೇವಿನ ಹಾಲು ಕುಡಿದಂತೆ
- ಬಾಳ್ವೆವಂತರ ಸಹವಾಸ ಹೋಳಿಗೆ ಉಂಡಂತೆ
- ಬಾಳುವೆಗೆಟ್ಟ ಅಧಮರ ಸಹವಾಸ ಹೇಳಲಾರದು ಮೆದ್ದಂತೆ
- ಬೆಳದಿಂಗಳ ಬೆಳಗುವ ವಸ್ತ್ರ ಕಂಗಳಿಗೆ ಸೂರ್ಯ ಹೊಳೆವಂತೆ
- ಭಾವಜ್ಞರ ಸಂಗ ಶಾವಿಗೆ ಉಂಡಂತೆ

ಭೀಮವ್ವನವರ ಕೃತಿಗಳಲ್ಲಿನ ಕೆಲವು ಉಪಮೆಗಳು:

- ಅಂದ ಮಾತನು ಕೇಳುತ ರಾಜ ಕೆಂಡದಂತೆ ಕುಪಿತನಾಗಿ
- ಅಚ್ಚ ಮುತ್ತಿನಂತ್ಹೊಳೆವೊ ಮಚ್ಚಲೋಚನೆ
- ಅಡುಗೆ ಮಾಡುವವನ ಕೈ ಹುಟ್ಟಿನಂತೆ ನಡೆಯದೋ ನಮ್ಮ ಸ್ವಾತಂತ್ರ್ಯ
- ಆಲಯದಂಥ ಕಿವಿಗಳು, ಗಾಲಿಯಂಥ ಹರಳಿನ್ವಾಲೆಗಳು, ಪರ್ವತದಂತೆ ಹೊಟ್ಟೆ ಬೆನ್ನುಗಳು
- ಒದರಿಕೊಂಡರು ಕೇಳದೇನು ಬಿದಿರಿನಂತೆ ಇರುವಿರಲ್ಲ
- ಗೋಕುಲದೊಳು ಕೃಷ್ಣ ಬಂದಂತೆ ನಿನ್ನ ತಂದೆ ಸಾಕಿದಳೆಶೋದನಂತೆ
- ಚಂಚಲಾಕ್ಷಿ ನಿನ್ನ ದೇಹ ಮಿಂಚಿನಂತೆ ಹೊಳೆವೊ ಕಾಂತಿ
- ಧಡಧಡ ರಥ ಶಬ್ದ ಸಿಡಿಲು ಬಡಿದಂತೆ ಕೇಳಿ
- ಮೊಸರ ತಂದ್ಹಾಲಿಗೆಪ್ಪಿಟ್ಟಂತೆ
- ಹಸಿರು ಗಿಡದ ಮ್ಯಾಲೆ ಮೊಸರು ಚೆಲ್ಲಿದಂತೆ
- ಸರ್ಪನಂದದಿ ಉಸುರ್ಹಾಕುತ
- ಸೂಜಿ ಮಲ್ಲಿಗೆ ಬಳ್ಳಿ ಸುತ್ತಿಕೊಂಡಂತೆ

ಗಿರಿಯಮ್ಮ ಬಳಸಿರುವ ಉಪಮೆಗಳು:

- ಅರಗಾಯ ಹೊಂದಿನ ನಾಗರ ಮರಿಯಂದದಿ
- ಓಣ್ಯೋಳು ಚೆಲ್ಲಿದ ಅಣಿ ಮುತ್ತಾರಿಸಿ ನೂಲಿಗೆ ಪೋಣಿಸಿದಂತೆ
- ಕಡಲುಬ್ಬಿದಂತೆ ಉಲ್ಲಾಸದಿ ರಾತ್ರೆಯ ಕಳೆದಳು
- ಚಿತ್ರದಲ್ಬರೆದ ಪುತ್ಥಳಿಯಂದದಲಿ
- ನೀರ ಬೊಬ್ಬುಳಿಯಂದದ ದೇಹ
- ಬೆಕ್ಕಿನ ಬಾಯ ಮೂಷಕದಂತೆ ಮಿಡುಕುತಲಿಪ್ಪ
- ಮತ್ಸ್ಯ ಮಾಣಿಕ ನುಂಗಿ ಇಪ್ಪತೆರನಂತೆ
- ಸಿಂಗನ ಮರಿಯಂತೆ ಸೆಳೆನಡು ಬಳುಕುತ

ಗಿರಿಯಮ್ಮ ಚಂದ್ರಹಾಸನ ಕಥೆಯನ್ನು ಸಾಂಗತ್ಯದ ಹಾಡುಗಬ್ಬವಾಗಿ ಪರಿವರ್ತಿಸಿದ್ದಾಳೆ. ಮೂಲದ ಬಿಗಿ ಬಂಧಗಳು ಇಲ್ಲಿ ಸರಳೀಕರಣಗೊಂಡಿವೆ. ಲಕ್ಷ್ಮೀಶನು ಬಳಸುವ ಹಲವಾರು ಪದಗಳು, ಪದಪಂಕ್ತಿಗಳು, ಉಪಮೆಗಳು ಇವುಗಳನ್ನು ಕೆಲವೊಮ್ಮೆ ಯಥಾವತ್ತಾಗಿ, ಕೆಲವೊಮ್ಮೆ ಸರಳೀಕರಿಸಿ ಬಳಸಿದ್ದಾಳೆ. ಕ್ಲಿಷ್ಟವಾದ ಭಾಗಗಳನ್ನು ಬಳಸುವ ಗೋಜಿಗೆ ಹೋಗಿಲ್ಲ. ಲಕ್ಷ್ಮೀಶನ ಕಾವ್ಯದಲ್ಲಿ ಕಂಡು ಬರುವ ಪದಬಂಧಗಳ

ಪ್ರೌಢಿಮೆ ಗಿರಿಯಮ್ಮನಲ್ಲಿ ಇಲ್ಲ. ಇದನ್ನು ದೋಷವೆಂದು ಹೇಳಲಾಗದು. ಏಕೆಂದರೆ ವಾರ್ಧಕ ಷಟ್ಪದಿಯ ಪ್ರೌಢ ಪದ ಪ್ರಯೋಗಗಳ ಕ್ಲಿಷ್ಟತೆಯನ್ನು ಸರಳೀಗೊಳಿಸುವುದು ಗಿರಿಯಮ್ಮನ ಉದ್ದೇಶವಾಗಿತ್ತು.

ಗಮಕಿಗಳ ಹಾಗೂ ವ್ಯಾಖ್ಯಾನಕಾರರ ಸಹಾಯವಿಲ್ಲದೆ ಮೂಲಕೃತಿಯನ್ನು ಸರಳವಾಗಿ ಹಾಡುಗಬ್ಬವಾಗಿಸುವುದು ಗಿರಿಯಮ್ಮನ ಉದ್ದೇಶ. ಏಕೆಂದರೆ ಹಾಡುತ್ತಿರುವವಳು ಅತಿ ಪ್ರೌಢೆಯಲ್ಲ. ಕೇಳುತ್ತಿರುವವರೂ ಕೂಡ ಜನ ಸಾಮಾನ್ಯರು, ಅವಿದ್ಯಾವಂತರು ಹಾಗೂ ಮಹಿಳೆಯರು. ಆದ್ದರಿಂದ ಇಲ್ಲಿ ಕಥೆಗೆ ಪ್ರಾಮುಖ್ಯತೆಯೇ ಹೊರತು ಉಪಮೆ, ವರ್ಣನೆಗಳಿಗೆ ಹೆಚ್ಚು ಅವಕಾಶವಿಲ್ಲ. ಗಿರಿಯಮ್ಮ ಬಳಸಿರುವ ಒಂದಷ್ಟು ಉಪಮೆಗಳೂ ಕೂಡ ಲಕ್ಷ್ಮೀಶ ಬಳಸಿರುವ ಉಪಮೆಗಳೇ ಆಗಿವೆ.

ಉದಾಹರಣೆಗೆ:

- ಅರಗಿಳಿಯನ್ನು ಬಾವುಗ ಪಿಡಿದಂತೆ
- ಕಾಗೆಯ ಕೈಯ ಕೋಗಿಲೆಯಂತೆ
- ಕಾಳರಕ್ಕಸರು ಪ್ರಹ್ಲಾದನ ಪಿಡಿದಂತೆ
- ಗಾಳಿಗೊಡ್ಡಿದ ಸೊಡರಂತೆ
- ತಾವರೆಯೊಳಗಣ ಉದಕದಂದದಲಿ
- ನೆಗಳು ನೀರೊಳಗೆ ಗಜವ ಪಿಡಿದಂತೆ
- ಪಾತಕರೊಳಗಿದನ ಪರಮಾತ್ಮನಂತೆ
- ಯಮದೂತರೆಳೆಯ ಅಜಾಮಿಳನಂತೆ
- ರಾವು ತುಡುಕಿದ ಚಂದ್ರನಂತೆ

ಇವೆಲ್ಲವೂ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಬರುವ ಉಪಮೆಗಳೇ ಆಗಿವೆ. 28ನೇ ಸಂಧಿ 30, 31ನೇ ಪದ್ಯದಲ್ಲಿ 'ಕರುಬರಿದ್ದೂರಿಂದೆ ಕಾಡೊಳೆತೆನಿಸುವಂತೆ' ಎಂಬ ಲಕ್ಷ್ಮೀಶನ ಉಪಮೆಯನ್ನು "ಊರಿಗಿಂತ ಕಾಡು ಲೇಸಾಯಿತು" ಎಂದು ಸರಳೀಕರಣಗೊಳಿಸಿದ್ದಾಳೆ. ಲಕ್ಷ್ಮೀಶನ ಕಾವ್ಯದ ಗಾಂಭೀರ್ಯ, ಪದಲಾಲಿತ್ಯ ಗಿರಿಯಮ್ಮನಲ್ಲಿ ಕಂಡು ಬರುವುದಿಲ್ಲ.

ಇತರ ಮಹಿಳಾ ದಾಸರಲ್ಲಿ:

- ಕಬ್ಬು ಬಿಲ್ಲನು ಪೋಲ್ವ ಪುಬ್ಬು
- ಕ್ಷೀರಸಾಗರದಲ್ಲಿ ಪವಡಿಸಿಹ ಹರಿಗೆ ಕ್ಷೀರ ಬಿಂದುಗಳು ಮೈಯೊಳಗೆ ಬಿದ್ದಂತೆ
- ದೀಪದಂದದಿ ಕರುಣ ನೇತ್ರವು, ಚಾಪದಂದದಿ ಪುಬ್ಬುಗಳು
- ಪವಳದಂತೆ ಅಧರಕಾಂತಿ, ಕೊರಳಿನಲ್ಲಿ ವೈಜಯಂತಿ **–ಯದುಗಿರಿಯಮ್ಮ**

- ಅಗ್ನಿಯಂತೆ ಪವಿತ್ರರು
- ಇಬ್ಬರು ಸಹೋದರರು ಹಬ್ಬಿತು ಸುಖವು ಕಬ್ಬಿನಾ ಮೇಲೆ ಜೇನಿಟ್ಟಂತಾಯಿತು
- ಉಡುರಾಜನಂತೆ ತಿಲಕದಾ ಕಾಂತಿ
- ಚಂದ್ರಮನಂತೆ ಶಾಂತ ಗುಣದವರು
- ಸೋಗೆ ನವಿಲಂತೆ ತನ್ನ ಸೋಗುಗಳ ತೋರುತಲಿ
- ಸ್ಮರನ ಚಾಪದಂತೆ ಹುಬ್ಬೆಗರಿಸುತಾ
- ಹುಣ್ಣಿಮೆ ಚಂದ್ರನಂತೆ ಸುಂದರ ಮುಖದವಳೇ **–ಒರವಾಯಿ ಲಕ್ಷ್ಮೀದೇವಮ್ಮ**

- ಕೆಂಗಣ್ಣು ಕಿಡಿರೋಷ ಸಿಂಗದಾ ಮುಖಭಾವ
  ಭಂಗಿಯನು ಕುಡಿದವೋಲ್ ಕಂಡು ಬರುವ **–ನಂಜನಗೂಡು ತಿರುಮಲಾಂಬಾ**

- ಜಲದ ಮಧ್ಯದಿ ಇರುವ ಮೀನವನು ಕಾದ
  ಮಳಲಿನೊಳಗೆ ತೆಗೆದು ಬಿಸುಟಿದಂತಾಯಿತು

- ಬಲವಾಗಿ ಘಾಯವ ಪೊಂದಿದ ಸ್ಥಾನದಲ್ಲಿ
  ಸಲೆ ಕಾದ ಆಯಸ ಸೆಳೆಯನೆಳೆದಂತಾಯ್ತು

- ಹೊಳೆಯ ಈಜುವೆನೆಂದು ಬಲು ಹೆಮ್ಮೆಯಿಂದಲಿ
  ಸೆಳವಿಗೆ ಸಿಕ್ಕು ಬಿದ್ದ ಮನುಜನ ತೆರನಾಯ್ತು **– ಕಳಸದ ಸುಂದರಮ್ಮ**

ರೂಪಕಗಳು:

- ಇಂದು ವದನೆ ಜಾನಕಿ
- ಕನ್ನಡಿ ಕದುಪಿನ ಕಾಂತೆ
- ಕುಡಿತೆ ಗಂಗಳ ಕೋಮಲೆಯರು
- ಕುಂತಲ ಕದುಪಿನ ಕಾಂತೆಯರು
- ಮರಿದುಂಬಿಗುರುಳ ಬಾಲೆಯರು
- ವಾರಿಜ ಮುಖಿಯರು **– ಗಿರಿಯಮ್ಮ**

- ಅಂಬುಜಾಮುಖಿಭಾಮೆ ಬಿಂಬಾಧರಳೆ
- ಅರವಿಂದದಳಾಕ್ಷ
- ಕಮಲನಾಭನ ಮುಖ ಕಮಲ
- ನೇತ್ರವೆಂಬೊ ಕುಮುದ ಚಕ್ಕನರಳುತ
- ಪದ್ಮ ಪಾದದ ಪರಮಾತ್ಮ **– ಗಲಗಲಿ ಅವ್ವ**

- ಕನ್ನಡಿ ಕದಪಿನ್ವೊಯ್ಯಾರಿ
- ಕೃಷ್ಣನಂಘ್ರಿ ಕಮಲ
- ಕಂಜಾಕ್ಷಿ ದ್ರೌಪದಿ
- ಕೋಲು ಮಿಂಚಿನ ಕಾಂತಿ ಭಾಮೆ ಚೆಲ್ವಕೆಯು
- ಭ್ರಮರ ಕುಂತಳೆ
- ಸಿಂಧುಸುತನ ಸೋಲಿಸೋ ಮುಖ **–ಭೀಮವ್ವ**

ಉತ್ಪ್ರೇಕ್ಷೆ:

ಭೀಮವ್ವ ಶ್ರೀಕೃಷ್ಣ ಲೀಲೆಯನ್ನು ಹೇಳುವಾಗ ಗೋಪಿಯರು ಕೃಷ್ಣನ ಕೊಳಲಗಾನವನ್ನು ಕೇಳಿ ಮೋಹಿತರಾಗಿ ವರ್ತಿಸಿದ ಪರಿಯನ್ನು ಉತ್ಪ್ರೇಕ್ಷೆಯೆನಿಸುವಂತೆ ಚಿತ್ರಿಸಿದ್ದಾರೆ.

ಉಕ್ಕುವೊ ಹಾಲಿಗೆ ಉರಿ ಮಾಡಿ ಮತ್ತಿಷ್ಟು
ಮಕ್ಕಳ ಕಣ್ಣಿಗೆ ಬಿಗಿದು ಅಳುವೊ
ಮಕ್ಕಳ ಕಣ್ಣಿಗೆ ಬಿಗಿದು
ಬೆಕ್ಕಿನ ಬಗಲಲೆತ್ತಿ ಮುದ್ದಾಡುತ
– – – – – – – – – – – – – –

ಹಲ್ಲಿಗೆ ಕುಂಕುಮ ಗಲ್ಲಕ್ಕೆ ಕಾಡಿಗೆ
ಚೆಲ್ವ ಹಣೆಗೆ ಅರಿಶಿನ ತೀಡಿ
ಚೆಲ್ವ ಹಣೆಗೆ ಅರಿಶಿನವ
ಫುಲ್ಲಾಕ್ಷರಲ್ಲಿ ಕಸ್ತೂರಿ ತಿಲಕವನ್ನಿಟ್ಟು

ನಳ ಚರಿತ್ರೆಯಲ್ಲಿ ನಳನು ಋತುಪರ್ಣನ ರಥವನ್ನು ನಡೆಸಿಕೊಂಡು ಬಂದ ರೀತಿಯನ್ನು ಭೀಮವ್ವ ಹೀಗೆ ಹೇಳುತ್ತಾರೆ.

ಧಡಧಡ ರಥ ಶಬ್ದ ಸಿಡಿಲು ಬಡಿದಂತೆ ಕೇಳಿ
ತಡೆಯದೆ ನಮ್ಮ ಕಿವಿ ಒಡೆದು ಹೋಗುತಾವಲ್ಲೆ
– – – – – – – – – – – – – – – –

ದಿಡ್ಡಿ ಕಿಂಡಿಯ ಒಳಗೆ ದೊಡ್ಡ ರಥ ನಡೆಸುವ
ಬಾಡಿದ್ದ ಮೊಗ್ಗು ಬಾಯ್ ಬಿಟ್ಟು ಅರಳಿದುವಲ್ಲೆ

ಗಲಗಲಿ ಅವ್ವನವರು ಮುಯ್ಯದ ಹಾಡಿನಲ್ಲಿ ಕೃಷ್ಣನು ಜಯಭೇರಿ ಹೊಯಿಸಿದ ರೀತಿ ಹೀಗಿದೆ

ಕೋಟಿ ಕೋಟಿ ಹಿಲಾಲು ಥಾಟಾಗಿ ತೋರುವ
ಹಾಟಗಾಂಬರನ ಮನೆ ಮುಂದೆ
ಹಾಟಗಾಂಬರನ ಮನೆ ಮುಂದೆ
ಪಾಟಿಸಿ ನೋಡೋ ಪ್ರಜರೆಷ್ಟ ಎಲೆ ಸಖಿ
- - - - - - - - - - - - - - - - - -

ಸಿಡಿಲು ಘರ್ಜಿಸಿದಂತೆ ಬಿಡುವ ಬಾಣಗಳೆಷ್ಟ
ಧಡ ಧಡ ಹಾರುವ ಬಿರುಸೆಷ್ಟ
ಧಡ ಧಡ ಹಾರುವ ಬಿರುಸೆಷ್ಟು ಮುಯ್ಯದ ಬೆಡಗ
ವರ್ಣಿಸಲು ವಶವಲ್ಲ ಎಲೆ ಸಖಿ

ಹೀಗೆ ಉತ್ಪ್ರೇಕ್ಷೆಯನ್ನು ತಮ್ಮ ಕೃತಿಗಳಲ್ಲಿ ತಂದಿದ್ದಾರೆ.

ರಸ ನಿರೂಪಣೆ:

ಮಹಿಳಾ ಹರಿದಾಸರು ಕೀರ್ತನೆಗಳನ್ನು, ದೀರ್ಘ ಕೃತಿಗಳನ್ನು ಭಕ್ತಿಯ ಹಿನ್ನೆಲೆಯಲ್ಲಿ ರಚನೆ ಮಾಡಿದರು. ಹೀಗಾಗಿ ಮಹಾಕಾವ್ಯಗಳಲ್ಲಿ ಕಂಡು ಬರುವ ಅಷ್ಟಾದಶ ವರ್ಣನೆಗಳಾಗಲೀ, ರಸ ಪ್ರತಿಪಾದನೆಯಾಗಲೀ ಕಾಣಲಾರೆವು. ಭಕ್ತಿಭಾವ ಉಳಿದೆಲ್ಲ ಭಾವಗಳನ್ನು ಮೀರಿ ನಿಲ್ಲುವುದರಿಂದ ಭಕ್ತಿಗೆ ಪೋಷಕವಾಗುವ ದಾಸ್ಯ, ದೈನ್ಯತೆ, ಶೋಕ ಇವುಗಳ ನಿರೂಪಣೆಗೆ ಪ್ರಾಧಾನ್ಯ ದೊರೆತಿದೆ. ಆದರೂ ಖಂಡ ಕಾವ್ಯಗಳಲ್ಲಿ ಕರುಣ ಮತ್ತು ಹಾಸ್ಯ ರಸಗಳ ಉಲ್ಲೇಖಗಳನ್ನು ಕಾಣಬಹುದು.

ಬದುಕಿನ ಸುಖ, ಸಂತೋಷ, ಸಂಸಾರ, ಪ್ರೀತಿ, ಪ್ರೇಮ ಇವುಗಳಿಂದ ವಂಚಿತರಾಗಿದ್ದ ಮಹಿಳೆಯರ ಕೃತಿಗಳಲ್ಲಿ ಶೃಂಗಾರವನ್ನು ನಿರೀಕ್ಷಿಸುವುದು ಸರಿಯಲ್ಲ. ಸಂಸಾರದ, ಹೊರಗಿನ ಪ್ರಪಂಚದ ಅರಿವೇ ಇಲ್ಲದ ಇವರ ಕೃತಿಗಳಲ್ಲಿ, ವೀರ, ರೌದ್ರ ರಸಗಳ ನಿರೂಪಣೆಯನ್ನು ನಿರೀಕ್ಷಿಸಲಾಗದು. ಒಂದು ವೇಳೆ ಇಂಥ ಪ್ರಸಂಗಗಳು ಇದ್ದರೆ ಅವು ಕೂಡ ಹಿಂದಿನ ಯಾವುದೋ ಕಾವ್ಯದ, ಪುರಾಣದ ಅಧ್ಯಯನದ ಹಿನ್ನೆಲೆಯಲ್ಲಿ ಬಂದಿದೆ.

ಕರುಣ ರಸದ ಸ್ಥಾಯೀ ಭಾವ ಶೋಕ. ಗಿರಿಯಮ್ಮನ "ಉದ್ದಾಳೀಕನ ಕಥೆ"ಯಲ್ಲಿ ರಾಜಕುವರಿ ವಿವಾಹವಾಗದೆ ಗರ್ಭ ಧರಿಸಿದ ಸಂಗತಿ ತಿಳಿದ ಅವಳ ಹೆತ್ತವರು ಅನುಭವಿಸುವ ನೋವು, ಸಂಕಟಗಳನ್ನು ಹೇಳುವಾಗ ಕರುಣ ರಸ ವ್ಯಕ್ತವಾಗುತ್ತದೆ. ಮಗಳನ್ನು ಕಾಡಿನಲ್ಲಿ ಬಿಟ್ಟು ಬರಲು ರಾಜ ಆಜ್ಞಾಪಿಸಿದಾಗ, ರಾಣಿಯು

ಕಾರುಣ್ಯದಿಂದಲೆ ಸಲಹಿದ ಮಗಳನು
ಅರಣ್ಯಕೆ ಗುರಿ ಮಾಡಿ
ನಾರಿ ನಿನ್ನನಗಲಿ ನಾನೆಂತು ಜೀವಿಪೆನೆಂದು
ತಾಯಿ ಕಂಬನಿದುಂಬಿದಳು
– – – – – – – – – – – – – –

ಏಳುತ್ತಲೊಮ್ಮೆ ಬಿಮ್ಮನೆ ತಾ ಮರುಗಿದಳು ಕು
ಮಾರಿಯ ಮೇಲೆ ಸ್ನೇಹದಲಿ
ಆಲೋಚನೆ ಮಾಡುವ ಹಿರಿಯರ ಕಾಣೆನು
ಹಾ ವಿಧಿಯೆಂದ್ಹೊರಳಿದಳು

ಗಿರಿಯಮ್ಮನ 'ಲವಕುಶ ಕಾಳಗ'ದಲ್ಲಿ ಸೀತೆಯು ಚಿತ್ರ ಪಟ ಬರೆದು ರಾಮನಿಂದ ದೂಷಿಸಲ್ಪಟ್ಟಾಗ ಅವಳಿಗಾದ ದುಃಖವು ಕರುಣ ರಸವನ್ನು ಅಭಿವ್ಯಕ್ತಿಸುತ್ತದೆ.

ಭೂದೇವಿ ಮಗಳಾಗಿ ನಾ ಜನಿಸಿದೆ
ನಾಡ ದೇವರ ಮರೆ ಹೊಕ್ಕೆ ।

ರಾಮರ ಪಾದವೆ ಗತಿ ಎಂದು ನಂಬಿದೆ
ಮಾರಿ ಬಾಹೋದು ಕಾಣಲಿಲ್ಲ

ತಾಟಗಿತ್ತಿ ಬಂದು ಪಾಪಕ್ಕೆ ಪಠ ಬರೆದು
ನೂಕಿಬಿಟ್ಟಳು ಎನ್ನ ಮೇಲೆ ।

ಬಂದ ಮಾರಿ ಒಲ್ಲೆನೆಂದರೆ ಬಿಡುವುದೇ
ಇದು ನನ್ನ ವಿಧಿ ಕಾಡಲಾಗಿ

ಎಂದು ದುಃಖಿಸುತ್ತಾಳೆ. ತನ್ನದಲ್ಲದ ತಪ್ಪಿಗೆ ಆದ ಅನ್ಯಾಯಕ್ಕೆ ಪರಿತಪಿಸುತ್ತಾಳೆ.

'ನಳ ಚರಿತ್ರೆ'ಯಲ್ಲಿ ನಳನು ತನ್ನ ರಾಜ್ಯವನ್ನು ಕಳೆದುಕೊಂಡು ದಮಯಂತಿಯೊಡನೆ ಕಾಡಿಗೆ ಬರುತ್ತಾನೆ. ಕಾಡಿನಲ್ಲಿ ಅವಳನ್ನು ಬಿಟ್ಟು ಕಣ್ಮರೆಯಾಗುವ ಭಾವುಕ ಸಂದರ್ಭವನ್ನು ಭೀಮವ್ವ ಹೀಗೆ

ನಿರೂಪಿಸುತ್ತಾಳೆ. ಸತಿಯನ್ನು ತಾನು ಕಾಡಿನಲ್ಲೇ ಬಿಟ್ಟು ಹೋದರೆ ಆಕೆ ತಂದೆಯ ಮನೆಗೆ ಹಿಂತಿರುಗುವಳೆಂದು ಬಗೆದು ನಳ ಅವಳನ್ನು ಬಿಟ್ಟು ಹೋಗಲು ನಿಶ್ಚಯಿಸುತ್ತಾನೆ.

ನಡೆದು ಹೋದನು ನಾಲ್ಕು ಮೂರ್ಛೆಜ್ಜೆನಿಕ್ಕುತ ಕೋಮಲಾಂಗಿ
ಕಡೆಗೆ ಕಾಲೇಳದೆ ತಿರುಗಿ ತಾ ಬಂದನು ಕೋಮಲಾಂಗಿ
– – – – – – – – – – – – – – – – – – – –

ಅತ್ತ ಪೋಗುವ ಇತ್ತ ಬರುವೋನು ಭರದಿಂದ ಕೋಮಲಾಂಗಿ
ತೊಟ್ಟಿಲು ತೂಗುವಂದದಿ ತಿರುಗ್ಯಾಡುವ ಕೋಮಲಾಂಗಿ

ನಳನ ಮನಸ್ಥಿತಿಯನ್ನು ಕವಯತ್ರಿ ಕರುಣಾ ಜನಕವಾಗಿ ಚಿತ್ರಿಸಿದ್ದಾರೆ. ಮನಸ್ಸು ಗಟ್ಟಿ ಮಾಡಿಕೊಂಡು ನಳ ಸತಿಯನ್ನು ಬಿಟ್ಟು ಹೊರಟು ಹೋಗುತ್ತಾನೆ. ದಮಯಂತಿ ನಿದ್ರೆಯಿಂದ ಎಚ್ಚೆತ್ತು ತನ್ನ ಪತಿ ಇಲ್ಲದಿರುವುದನ್ನು ಕಂಡು ವಿಹ್ವಲಳಾಗುತ್ತಾಳೆ. ಅಡವಿಯಲ್ಲಿನ ಗಿಡ ಮರಗಳನ್ನೆಲ್ಲಾ ಕೇಳುತ್ತಾ ಪತಿಯನ್ನು ಹುಡುಕುತ್ತಾ

ಶೋಕದಿಂದ ಬಂದೆ ನಾನಶೋಕ ವೃಕ್ಷ ನಿನ್ನ ಮುಂದೆ
ನಾ ಕೈ ಮುಗಿದು ಕೇಳಿಕೊಂಬೆ ಅಶೋಕಳನ್ನು ಮಾಡು

ಎಂದು ವಿಲಾಪಿಸುತ್ತಾಳೆ. ಇತ್ತ ನಳ

ಬಡಬಡನೆ ನಡೆಯುತಲಿ ಎಡವ್ಯಡವಿ ಬೀಳುತಲಿ
ಕಡೆಗಣ್ಣಿಂದುದಕ ದಡದಡನೆ ಸುರಿಸುತಲಿ
ಜಡೆ ಮುಡಿಯ ಬಿಟ್ಟಾಗ ಹುಡಿಯಲ್ಲಿ ಹೊರಳುತಿರೆ

ಬಂದ ಸರ್ಪ ಕಚ್ಚಿ ವಿಕಾರ ರೂಪ ಪಡೆಯುತ್ತಾನೆ.

<u>ಹಾಸ್ಯ:</u>

ದಾಸ ಮಹಿಳೆಯರ ಕೃತಿಗಳಲ್ಲಿ ಹಾಸ್ಯದ ಕಲ್ಪನೆಯೂ ಅಲ್ಲಲ್ಲಿ ಬಂದಿದೆ. ಬದುಕಿನ ನೋವನ್ನು ಮರೆಯಲು ಹಾಸ್ಯ ಪ್ರಸಂಗಗಳ ಸೃಷ್ಟಿಯ ಮೂಲಕ ಮಹಿಳೆಯರು ನಕ್ಕಿದ್ದಾರೆ. ಭೀಮವ್ವನವರ 'ಪತಿ ದಾನ ಕೊಟ್ಟ ಹಾಡು'. ಇದರಲ್ಲಿ ಹಾಸ್ಯದ ಕಲ್ಪನೆಯಿದೆ. ಸತ್ಯಭಾಮೆ ವ್ರತ ಮಾಡಿ ಬ್ರಾಹ್ಮಣರನ್ನು ಕರೆದು ಆದರಿಸಿ ಕೃಷ್ಣನನ್ನು ದಾನ ಕೊಡುವುದಾಗಿ ಯಾರಾದರೂ ಸ್ವೀಕರಿಸಬೇಕಾಗಿ ಕೇಳಿಕೊಳ್ಳುತ್ತಾಳೆ. ಆಗ

ಮುಪ್ಪಿನವರು ನೋಡೆ ನಾವು ಚಿ–
ಕ್ಕ ಪ್ರಾಯದ ಸತಿಯು ನಮಗೆ
ಮತ್ತು ನಿನ್ನ ಪತಿಯ ಒಯ್ದು
ಭ್ರಷ್ಟರಾದೇವಲ್ಲೆ ನಾವು
– – – – – – – – – – – –

ಹುಟ್ಟಿ ಬ್ರಹ್ಮಚಾರಿ ಮಗನು
ಪುತ್ರನೊಬ್ಬ ಮನೆಯೊಳಿರಲು
ಮತ್ತು ಕನ್ಯೆ ತಂದು ಮದುವೆ
ಮಾಡು ಮಾಡೆಂದು ಕಾಡಿದರ್ಹ್ಯಾಗೆ

ಕೃಷ್ಣನನ್ನು ದಾನವಾಗಿ ಪಡೆಯಲು ಒಪ್ಪದ ಬ್ರಾಹ್ಮಣರ ಮಾತುಗಳಲ್ಲಿ ಹಾಸ್ಯ ಹರಿದಾಡುತ್ತದೆ.

ಅವ್ವನವರ ಮುಯ್ಯದ ಹಾಡುಗಳ ಒಂದು ಕೀರ್ತನೆಯಲ್ಲಿ ಹಾಸ್ಯ ತುಂಬಿ ಬಂದಿದೆ.

ಶ್ರೀಶನ ಸತಿಯರ ಹಾಸ್ಯವ ಮಾಡುತ
ಸೋಸಿರೆ ಕೋಲ ಹೊಯ್ದೇವ ಕೋಲ
– – – – – – – – – – – –
ಗಂಡನ ಬಳಗವ ಕಂಡರೆ ನಿನಗಾಗದು
ಲೆಂಡರ ಮನೆಗೆ ನಡೆದ್ಹೋಗಿ
ಲೆಂಡರ ಮನೆಗೆ ನಡೆದ್ಹೋಗಿ ಸೇರಿದ್ದು
ಪಂಡಿತರು ಕಂಡು ನಗುತಾರೆ
– – – – – – – – – – – –

ಹಲವು ರಾಯರ ಗೆದ್ದ ಬಲು ಧೀರರೆಲ್ಲ
ನಿನ್ನ ಬಲೆಯೊಳಗೆ ಬಿದ್ದು ಬಳಲೋರು
ಬಲೆಯೊಳು ಬಿದ್ದು ಬಳಲೋಲು ಇದ ಕಂಡು
ಬಲರಾಮ ತಾನು ನಗುತಾನ

ಎಂದೆಲ್ಲಾ ಹಾಸ್ಯ ಮಾಡುತ್ತಾ "ಗಂಡು ಗಚ್ಚಿಯ ಕಟ್ಟಿ ಗಂಡಸಿನಂತೆ ಧನುವೆತ್ತಿ ಕಾದಿದ ಬಂಡುಗಾರತಿ ನಿನ್ನ ತಂಗಿ" ಎಂದು ಜರಿದು ಹಾಸ್ಯದ ಹೊಳೆ ಹರಿಸುತ್ತಾಳೆ.

<u>ರೌದ್ರ:</u>

ಪ್ರಾಸಂಗಿಕವಾಗಿ ರೌದ್ರ ರಸದ ಒಂದು ಉದಾಹರಣೆಯನ್ನು ಭೀಮವ್ವನ "ರತಿ ಕಲ್ಯಾಣ"ದಲ್ಲಿ ಕಾಣಬಹುದು. ದ್ರೌಪದಿ ಕೌಂಡ್ರಿಕನ ಎದುರು ಯುದ್ಧಕ್ಕೆ ನಿಂತಾಗ ಅವಳ ರೂಪವನ್ನು ರುದ್ರ ಭೀಕರವಾಗಿ ವರ್ಣಿಸುತ್ತಾಳೆ.

ಆಲಯದಂಥ ಕಿವಿಗಳು ಬಂಡಿ–
ಗಾಲಿಯಂಥ (ಹ) ಹರಳಿನ್ವಾಲೆಗಳು
ಜೋಲು ಬಿದ್ದಂಥ ತುಟಿಗಳು ದೊಡ್ಡ
ಭೇರಿಯಂತಿದ್ದ ಸ್ತನಗಳ ಕಾಮನ–
ಬಿಲ್ಮೊಡಿದಂತೆ ನೀಲವೇಣಿಯ ಹುಬ್ಬುಗಳು ವಿ–
ಶಾಲ ನೇತ್ರದಿ ಕಿಡಿಗಳು ಹೂಬಾಣದಂತಾಗ್ಹಾರುತಿರಲು

ರಥ ಚಕ್ರದಂಥ ನೇತ್ರಗಳು ತಿರು-
ಗುತಲಿದ್ದ ಕಣ್ಣು ಗುಡ್ಡೆಗಳು ಉ-
ನ್ನತವಾದ ಮೂಗು ಮಾಟಗಳು ಪ-
ರ್ವತದಂತೆ ಹೊಟ್ಟೆ ಬೆನ್ನುಗಳು
ಮಿತಿಯುಯಿಲ್ಲದೆ ತೆರೆದು ಬಾಯಾರ್ಭಟದಿ
ಕೋರೆಹಲ್ಲು ನಾಲಿಗೆ
ಶತಯೋಜನ ಪರಿಯಂತ್ರ ಚಾಚಿ ಅತಿ
ಭಯಂಕರವಾಗಿ ತೋರ್ಪಳು

ಕಾಲಯಮನಂತೆ ದ್ರೌಪದಿ ಕಾಣುತ್ತಿದ್ದಳೆಂದು ಭೀಮವ್ವ ಹೇಳುತ್ತಾಳೆ.

ಶಬ್ದ ಸಂಪತ್ತು:

ಹರಿದಾಸರು ಅಂದಿನ ಸಮಾಜದ ಅಗತ್ಯಕ್ಕೆ ತಕ್ಕ ಹಾಗೆ ದೇಸಿ ನುಡಿ ಬಳಸಿದರು. ಪಂಡಿತ ಭಾಷೆಯಿಂದ ಜನರು ಬಳಸುವ ಭಾಷೆಯ ಕಡೆ ಗಮನ ಹರಿಸಿದರು. ದಾಸ ಮಹಿಳೆಯರು ತಮ್ಮ ಪರಿಸರದಲ್ಲಿ ಬಳಸಲ್ಪಡುತ್ತಿದ್ದ ಶಬ್ದಗಳನ್ನು, ಪಾರಿಭಾಷಿಕ ಪದಗಳನ್ನು ಬಳಸಿದರು. ಸೂತ್ರ ಪ್ರಾಯವಾದ ಹೇಳಿಕೆಗಳು, ಗಾದೆ ಮಾತುಗಳು ಅವರ ಬರಹಗಳಲ್ಲಿ ಸಾಕಷ್ಟು ದೊರೆಯುತ್ತವೆ.

- ಕರುವು ನೆನಿಸಿಕೊಂಡು ತುರವೂ ತಾನೇ ಬಂದಂತೆ
- ಕೆರೆಯ ನೀರನು ಕೆರೆಗೆ ಚೆಲ್ಲಿ
- ಕೆಟ್ಟು ನೆಂಟರ ಮನೆ ಸೇರುವುದಕ್ಕಿಂತ ಅಡವಿಯಲ್ಲಾವಾಸವೇ ಲೇಸು
- ಕೆಂಡಕ್ಕೆ ಗೊರಲೆ ಮುತ್ತುವುದುಂಟೆ
- ನಾಲಿಗಿಲ್ಲದ ಗಂಟೆ ಬಾರಿಸಿದರದರಿಂದ ನಾದ ಉಂಟಾಗೋದೇ
- ನಂಬಲಾಗಲು ಮಣ್ಣು ಬೊಂಬೆಯಂದದ ದೇಹ
- ನದಿಯೊಳಗಲ್ಪ ಹಳ್ಳವು ಬಂದು ಸೇರಲು ಅದು ಲಕ್ಷಿಯಾಗಿ ತೋರುವುದೇ
- ಪರರ ಮಂದಿರ ವಾಸ ಪರಮ ಕಷ್ಟ
- ಹೇಳಿದ ಮಾತು ಕಟ್ಟಿದ ಕೂಳು ನಿಲ್ಲವು

-ಭೀಮವ್ವ

- ಉರಗ ಹಿರಿಯದೆಂದು ಎರಗೋದೇನವ್ವ
- ಬಾಳುವರ ಮನೆ ಮುಂದೆ ಕೋಳಿ ಕೂಗಿದಂತೆ
- ಮದ್ಗುಣಿಕೆ ಹೂವು ಉದ್ದಾದರೇನ ಮುದ್ದು ಮಲ್ಲಿಗೆಗೆ ಸರಿಯೇನ
- ಸರ್ಪದೊಳಗೆ ಸ್ನೇಹ ಬೆರೆಸಿದವರುಂಟೇ

-ಗಲಗಲಿ ಅವ್ವ

- ಆಳು ಮಾಡೋ ಪಾಪ ಅರಸು ಮಾಡೋ ಪಾಪ ಭೂಮಿನಾಳೋ ರಾಯರಿಗೆ
- ಕೋಪದ ವೇಳೆಗೆ ಮೂಗು ಕೊಯ್ದರೆ ಶಾಂತದ ವೇಳೆ ಹತ್ತುವುದೇ
- ಮಿಸುನಿಯ ಅಲಗೆಂದು ಬಸಿರೊಳಗಿಡುವರೆ
- ಶ್ವಾನ ಮುಟ್ಟಿದ ಭಾಂಡ ಬಾಹುದೆ ನಿಳಯಕ್ಕೆ
- ಹೆಂಗಸು ಹೆಡೆತಲೆ ಮೃತ್ಯು ಎಂಬರು ಜನ

–ಗಿರಿಯಮ್ಮ

- ಪತಿಯ ನಿಂದಕರಿಗೆ ಗತಿಯಿಲ್ಲ
- ಪಾರ್ವತಿಗೆ ಗಂಡ ಹಾಲಾಹಲವುಂಡ
- ಮಾನಾಪಮಾನಗಳು ದೀನನಾಥನಧೀನ
- ಮಡಿಗೆ ಮಜ್ಜನ ಚೆಂದ ಅಡಿಗೆ ಊಟಕೆ ಚೆಂದ
- ಯೋಗಿಗೆ ತಪ ಚೆಂದ ಭೋಗಿಗೆ ಸುಖ ಚೆಂದ

–ಅಂಬಾಬಾಯಿ

ಇಂತಹ ಜನಬಳಕೆಯ ಗಾದೆಗಳನ್ನು ಕಾವ್ಯ ಮಾಧ್ಯಮದಲ್ಲಿ ಅಳವಡಿಸುವ ಮೂಲಕ ಕಾವ್ಯ ಭಾಷೆಗೆ ಸಹಜತೆಯನ್ನು ತಂದಿದ್ದಾರೆ.

ಕಾವ್ಯ ಚಮತ್ಕಾರ:

ಒಂದು ಶಬ್ದಕ್ಕೆ ಇರಬಹುದಾದ ಹಲವು ಅರ್ಥಗಳನ್ನು ಒಂದೇ ಪದ್ಯ ಭಾಗದಲ್ಲಿ ಅಳವಡಿಸುವ ಕಾವ್ಯ ಚಮತ್ಕಾರಗಳು ಮಹಿಳಾ ಹರಿದಾಸರಲ್ಲಿ ಇದೆ. ಓರವಾಯಿ ಲಕ್ಷ್ಮೀದೇವಮ್ಮ "ತರಕಾರಿ ಹಾಡಿ"ನಲ್ಲಿ ಶ್ಲೇಷೆಯನ್ನು ಬಳಸಿದ್ದಾರೆ.

ನಿನ್ನ ದಾಸರ ಬಿಟ್ಟ ನಾ ಬಾಳೆಕಾಯೋ
ಸಣ್ಣ ಮೂರುತಿ ನೀ ನೆಂಬೆಕಾಯೋ
ಮಾರ ಜನಕನೆ ಅಳಿದೆ ಮಾವನ್ನಕಾಯೋ
ಸಾರಿ ಕರೆದರೆ ನೀ ಬಾರೆಕಾಯೋ
ಮಾರ ಜನಕ ನರಸಿಂಹ ವಿಠಲ ನೀ
ಮಾಡಿದೆಲ್ಲವು ಎನಗೆ ಸಮತೆ ಕಾಯೊ

–ಓರವಾಯಿ ಲಕ್ಷ್ಮೀದೇವಮ್ಮ

ಮೇಲ್ನೋಟಕ್ಕೆ ಇಲ್ಲಿ ಬಾಳೆಕಾಯಿ, ನಿಂಬೆಕಾಯಿ, ಬಾರೆಕಾಯಿ, ಸೌತೆಕಾಯಿ–ಇತ್ಯಾದಿ ಕಾಯಿಗಳ ಉಲ್ಲೇಖವಿದೆ. 'ಕಾಯಿ' ಪದವನ್ನು ವ್ಯಕ್ತಿಗೆ ಅನ್ವಯಿಸಿದರೆ ಅವನಿನ್ನೂ ಪರಿಪಕ್ವವಾಗಿಲ್ಲ ಕಾಯಾಗಿಯೇ ಇದ್ದಾನೆ ಎಂಬ ಅರ್ಥ ಧ್ವನಿಸುತ್ತದೆ. 'ಕಾಯೋ' ಎಂಬುದನ್ನು ಕ್ರಿಯಾಪದದ ಸಂಬೋಧನ ರೂಪದಲ್ಲಿ

ಬಳಸಿದರೆ ಬರುವ ಅರ್ಥವೇ ಬೇರೆ. ನಿನ್ನ ದಾಸರನ್ನು ಬಿಟ್ಟು ನಾ ಬಾಳಲಾರೆ ಕಾಪಾಡು. ನಿನ್ನನ್ನು ಬಾಲಕನ ರೂಪಿನಿಂದ ಪರಿಭಾವಿಸುತ್ತೇನೆ ಕಾಪಾಡು. ನೀನು ಮನ್ಮಥನ ತಂದೆ, ಅಧರ್ಮದಿಂದ ನಡೆದುಕೊಂಡ ಮಾವನನ್ನೇ ಕೊಂದವನು, ಧರ್ಮ ಮಾರ್ಗದಲ್ಲಿರುವ ನನ್ನನ್ನು ಕಾಪಾಡು. ಭಕ್ತರು ಕರೆದರೆ ನೀನು ಬರುವವನಲ್ಲ ಕಾಪಾಡು. ನಿನ್ನ ಕೃಪೆ ಅವಕೃಪೆಗಳೆರಡನ್ನೂ ಸಮಾನವಾಗಿ ಕಾಣುತ್ತೇನೆ ಕಾಪಾಡು ಎಂಬ ಶರಣಾಗತಿಯ ಅರ್ಥ ಧ್ವನಿಸುತ್ತದೆ.

ಮುಂಡಿಗೆ:

ಮುಂಡಿಗೆ ದಾಸ ಸಾಹಿತ್ಯದ ಒಂದು ಪ್ರಕಾರ. ಹರಿದಾಸರು ಆಧ್ಯಾತ್ಮದ ಅಭಿವ್ಯಕ್ತಿಗೆ ಕೆಲ ಗಾಢರೂಪದ, ಗೂಡಾರ್ಥ ಗರ್ಭಿತವಾದ, ಬುದ್ಧಿಗೆ ಕಸರತ್ತು ನೀಡುವ ಕೃತಿಗಳನ್ನು ರಚಿಸಿದ್ದಾರೆ. ಇಂತಹ ರಚನೆಗಳಿಗೆ ಒಗಟುಗಳು, ಬೆಡಗಿನ ಹಾಡುಗಳು, ಒಡಸು, ಭಾರೂಡ, ಮುಂತಾದ ಹೆಸರುಗಳಿವೆ. ಮುಂಡಿಗೆಗಳ ಅಂತರಾರ್ಥವನ್ನು ತಿಳಿಯುವುದು ಅಷ್ಟು ಸುಲಭವಲ್ಲ. ಅವನ್ನು ಬಿಡಿಸಲು ತಾಳ್ಮೆ ಬೇಕು, ಜಾಣ್ಮೆ ಬೇಕು, ಚಾತುರ್ಯದಿಂದ ಮುಂಡಿಗೆಗಳನ್ನು ಬಿಡಿಸಬೇಕು. ಮುಂಡಿಗೆಗಳು ಗಹನವಾದ ತತ್ವಗಳನ್ನು ದೇವರ ನಾಮದ ರೂಪದಲ್ಲಿ ಹೇಳುವಂತಹ ರಚನೆಗಳಾಗಿವೆ. ಮುಂಡಿಗೆಗಳು ಹೇಳುವವರ ಬುದ್ಧಿ ಶಕ್ತಿಯನ್ನು ಕೇಳುವವರ ಪೌರಾಣಿಕ ಜ್ಞಾನವನ್ನು ಅವಲಂಬಿಸಿರುತ್ತದೆ. ಭಾರತ, ಪುರಾಣ, ಇತಿಹಾಸಗಳ ಹಿನ್ನೆಲೆಯಿಲ್ಲದೆ ಮುಂಡಿಗೆಗಳನ್ನು ರಚಿಸುವುದು, ಬಿಡಿಸುವುದು ಕಷ್ಟ. ಮಹಿಳಾ ಹರಿದಾಸರಲ್ಲಿ ಇಂತಹ ಚಮತ್ಕಾರಗಳು ಅಪರೂಪವೇ. ಶಾಸ್ತ್ರಜ್ಞಾನ ಮತ್ತು ಪುರಾಣ ಪ್ರಜ್ಞೆ ಇದ್ದ ಮಹಿಳೆಯರು, ಇಂತಹ ಚಮತ್ಕಾರಿಕ ಕೃತಿಗಳನ್ನು ರಚಿಸಿದ್ದಾರೆ.

ಭೀಮವ್ವನವರು "ರಾಸಿ ಹಾಡು" ಎಂಬ ಒಂದು ಕೃತಿಯಲ್ಲಿ ಹನ್ನೆರಡು ರಾಶಿಗಳನ್ನು ಕುರಿತು ಒಗಟಿನ ಮಾದರಿಯಲ್ಲಿ ಪೌರಾಣಿಕ ಪ್ರಸಂಗಗಳನ್ನು ವಿವರಿಸುತ್ತಾರೆ.

ಅಂಬಾಬಾಯಿಯವರ ಒಂದು ತ್ರಿಪದಿ ಹೀಗಿದೆ.

ರಮ್ಮೆಯರಸನು ಆಗ ಸುಮ್ಮನ ಸರೊಡಗೂಡಿ
ತಮ್ಮನಿಗೆ ತಮ್ಮನಾಗ್ಯವತರಿಸೆ । ಅವತರಿಸೆ ಮನ ಮಾಡಿ
ಚಿನ್ಮಯನು ಧರೆಗಿಳಿದು ಬಂದಾನು

ರಮೆಯರಸನಾದ ಶ್ರೀಹರಿಯು, ಸುಮ್ಮನಸರು ಎಂದರೆ ದೇವತೆಗಳ ಜೊತೆಗೂಡಿ ರಾಮಾವತಾರದಲ್ಲಿ ತನ್ನ ತಮ್ಮನಾಗಿದ್ದ ಲಕ್ಷ್ಮಣನಿಗೆ (ಶೇಷದೇವರಿಗೆ) ಕೃಷ್ಣಾವತಾರದಲ್ಲಿ ತಮ್ಮನಾಗಿ ಅವತರಿಸಿದನು. ರಾಮನ

ತಮ್ಮ ಲಕ್ಷ್ಮಣ, ಕೃಷ್ಣನಿಗೆ ಅಣ್ಣ ಬಲರಾಮ, ಶೇಷದೇವರು ಎರಡೂ ಅವತಾರಗಳಲ್ಲಿ ತಮ್ಮನಾಗಿ, ಅಣ್ಣನಾಗಿ ಹರಿಯ ಜೊತೆಯಲ್ಲಿದ್ದುದನ್ನು, ಚಿನ್ಮಯನಾದ ಕೃಷ್ಣ ಧರೆಯಲ್ಲಿ ಅವತರಿಸಿದನೆಂದು ಹೇಳುತ್ತಾರೆ.

ಸಂಖ್ಯಾರ್ಥ ರೂಪಗಳು:

ದಾಸ ಮಹಿಳೆಯರು ಸಂಖ್ಯೆಗಳನ್ನು ಬಳಸಿ ಚಮತ್ಕಾರಿಕ ಕೃತಿಗಳನ್ನು ರಚಿಸಿದ್ದಾರೆ. ಅಂಬಾಬಾಯಿಯವರು ಸಂಖ್ಯೆ ಎಂಟನ್ನು ಬಳಸಿಕೊಂಡು ಶ್ರೀಹರಿಗೆ ಸಂಖ್ಯೆ ಎಂಟರ ನಡುವೆ ಇರುವ ನಂಟನ್ನು ನಿರೂಪಿಸುತ್ತಾರೆ. ಕಂಟಕಹರನಾದ ಶ್ರೀಹರಿಗೂ ಎಂಟನೇ ಸಂಖ್ಯೆಗೂ ಇರುವ ಸಂಬಂಧ ನೆನೆಯುತ್ತಾ ಅವನನ್ನು ಹೃನ್ಮಂಟಪಕ್ಕೆ ಆಹ್ವಾನಿಸುವ ಅವರ ಕೃತಿಯು ಹೀಗಿದೆ.

ಕಂಟಕದ ಭವ ಹರಿಸೊ ಕರುಣಾ ಜಲಧಿ
ನೆಂಟ ನೀನಾಗಿ ಹೃನ್ಮಂಟಪದೊಳಗೆ ॥ ಪ ॥

ಎಂಟಕ್ಷರನುತನೆ ಎಂಟು ರೂಪಾತ್ಮಕನೆ
ಎಂಟು ಮೂರು ತತ್ವ ನಿರ್ಮಿಸಿಹನೆ
ಎಂಟು ದಳದಲಿ ನಿಂತು ಎಂಟು ವಿಧ ಪ್ರೇರಿಸುತ
ಎಂಟು ದಿಕ್ಪತಿಗಳಿಂ ಸೇವೆ ಕೊಳುತಿಹನೆ ॥ 1 ॥

ಎಂಟು ವಿಧ ಕರ್ತೃವೆ ಎಂಟು ಭಾಗ್ಯಯುತನೆ
ಎಂಟು ಬಾಹು ಎಂಟು ಆಯುಧ ಧರನೆ
ಎಂಟು ಪತ್ನಿಯರಿಂದ ಎಂಟು ಅವತಾರಿ
ನೆಂಟರೊಡನೆ ಜಗದ ಕಂಟಕರ ಸದೆದನೆ ॥ 2 ॥
ಎಂಟೆರಡು ಕಲೆ ಪೂರ್ಣ ವೆಂಕಟರಮಣನೆ
ಎಂಟು ವಿಧ ಮದಗಳನು ಭೇದಿಸುತಲಿ
ಎಂಟೆರೆಡು ಒಂದು ಇಂದ್ರಿಯ ನಿನ್ನ ಕಡೆ ಮಾಡಿ
ಭಂಟನೆನಿಸೆನ್ನ ಶ್ರೀಗೋಪಾಲಕೃಷ್ಣ ವಿಠಲ ॥ 3 ॥

'ಓಂ ನಮೋ ನಾರಾಯಣಾಯ' ಎಂಬ ಅಷ್ಟಾಕ್ಷರಗಳಿಂದ ಸ್ತುತ್ಯನಾದ ಶ್ರೀಹರಿಯು ಅಷ್ಟ ರೂಪಾತ್ಮಕನು. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ನಾರಾಯಣ, ವರಾಹ, ವಾಮನ ಮತ್ತು ನೃಸಿಂಹ ಎಂಬುವು ಅಷ್ಟರೂಪಗಳು.

ಎಂಟು ಮೂರು ತತ್ವ: ಚತುರ್ವಿಂಶತಿ ತತ್ವಗಳು (24 ತತ್ವಗಳು):

ವಾಕ್, ಪಾಣಿ, ಪಾದ, ವಾಯು, ಉಪಸ್ಥ ಎಂಬ ಪಂಚಕರ್ಮೇಂದ್ರಿಯಗಳು, ಶ್ರೋತ್ರ, ಚಕ್ಷು, ತ್ವಕ್, ಜಿಹ್ವಾ, ಘ್ರಾಣ ಎಂಬ ಪಂಚ ಜ್ಞಾನೇಂದ್ರಿಯಗಳು, ಆಕಾಶ, ವಾಯು, ತೇಜ, ಜಲ, ಪೃಥ್ವಿ ಪಂಚಭೂತಗಳು. ಶಬ್ದ, ರಸ, ಸ್ಪರ್ಶ, ಗಂಧ, ರೂಪ, ಪಂಚತನ್ಮಾತ್ರಗಳು ಮತ್ತು ಅವ್ಯಕ್ತ ತತ್ವ, ಅಹಂಕಾರ ತತ್ವ, ಮಹತತ್ವ ಮತ್ತು ಮನಸ್ತತ್ವಗಳು ಸೇರಿದರೆ 24 ತತ್ವಗಳಾಗುತ್ತವೆ. ಈ ಚತುರ್ವಿಂಶತಿ ತತ್ವಗಳನ್ನು ನಿರ್ಮಿಸಿದವನು ಶ್ರೀಹರಿ.

ಎಂಟು ದಳದಲಿ ನಿಂತು: ಭೂಮಿ, ಅಪ್ಪು, ತೇಜ, ವಾಯು, ಆಕಾಶ, ಮನಸ್ಸು, ಬುದ್ಧಿ, ಅಹಂಕಾರ–ಈ ಅಷ್ಟ ಪ್ರಕೃತಿಗಳಲ್ಲಿ ನಿಂತಿಹ ಹರಿ.

ಎಂಟು ವಿಧ ಪ್ರೇರಿಸುತ: ಆತ್ಮ ನಿವೇದನೆಗೆ ಪೂರ್ವಭಾವಿಯಾಗಿ ಎಂಟು ಭಾವಗಳನ್ನು ಪ್ರೇರಿಸುವವನು ಶ್ರೀಹರಿ. ಶ್ರವಣ, ಕೀರ್ತನ, ಸ್ಮರಣ, ಪಾದ ಸೇವನ, ಅರ್ಚನ, ವಂದನ, ದಾಸ್ಯ ಇವು ಎಂಟು ಭಾವಗಳು.

ಅಷ್ಟ ದಿಕ್ಪತಿಗಳಿಂ ಸೇವೆ ಕೊಳತಿಹನೆ: ಕುಬೇರ (ಉತ್ತರ), ಯಮ (ದಕ್ಷಿಣ), ಪೂರ್ವ (ಇಂದ್ರ), ವರುಣ (ಪಶ್ಚಿಮ), ಮಹೇಶ (ಈಶಾನ್ಯ), ನಿಋುಋುತಿ (ನೈರುತ್ಯ), ಅಗ್ನಿ (ಆಗ್ನೇಯ), ಪ್ರವಾಹವಾಯು (ವಾಯುವ್ಯ) ಇವರುಗಳಿಂದ ಸೇವೆ ಸ್ವೀಕರಿಸುವವನು ಶ್ರೀಹರಿ.

ನು2:

ಸೃಷ್ಟಿ, ಸ್ಥಿತಿ, ಲಯ, ಜ್ಞಾನ, ಅಜ್ಞಾನ, ನಿಯಮನ, ಬಂಧ, ಮೋಕ್ಷ–ಇವು ಶ್ರೀಹರಿಯ ಅಷ್ಟವಿಧ ಕಾರ್ಯಗಳು

ಹಸ್ತಿ, ಅಶ್ವ, ಛತ್ರ, ಚಾಮರ, ಆಂದೋಲ, ಸೈನ್ಯ, ಕೋಶ, ರಾಜ್ಯ–ಇವು ಅಷ್ಟ ಭಾಗ್ಯಗಳು

ಅಷ್ಟ ಪತ್ನಿಯರು (ಕೃಷ್ಣನ ಎಂಟು ಪತ್ನಿಯರು) ರುಕ್ಮಿಣಿ, ಸತ್ಯಭಾಮೆ, ಮಿತ್ರವಿಂದೆ, ಕಾಳಿಂದಿ, ಲಕ್ಷಣಾ, ಸತ್ಯಾ, ಭದ್ರಾ, ಜಾಂಬುವತಿ

ಎಂಟು ಅವತಾರಿ: ದೇವಕಿಯ ಅಷ್ಟಮ ಗರ್ಭದಲ್ಲಿ ಜನಿಸಿದವನು, ಅಷ್ಟಮಿಯ ದಿನ ಜನಿಸಿದವನು, ದಶಾವತಾರಗಳಲ್ಲಿ ಎಂಟನೇ ಅವತಾರ ಕೃಷ್ಣಾವತಾರ. ಪಾಂಡವರೊಡಗೂಡಿ ಜಗತ್ತಿಗೆ ಕಂಟಕರಾದ ಕೌರವರನ್ನು ನಾಶ ಮಾಡಲು ಅವತರಿಸಿದವನು.

ನು3:

ಎಂಟೆರಡು ಕಲೆಗಳು: ಕಣ್ಣು, ಕಿವಿ, ಮೂಗು, ಚರ್ಮ, ನಾಲಗೆ, ಮುಖ, ಕೈ, ಕಾಲು, ಆಸನ, ಉಪಸ್ಥ, ಚಿತ್ತ, ಮನ, ಅಹಂಕಾರ, ವಿದ್ಯಾ, ವಾಕ್, ಶಕ್ತಿ ಇವುಗಳ ಕಾರ್ಯಗಳು. ಹದಿನಾರು ಕಲೆಗಳಿಂದ ಶೋಭಿಸುವ ಪೂರ್ಣ ಚಂದ್ರನಂತೆ ಪರಿಪೂರ್ಣನಾದವನು. ಅನಂತ ಕಲ್ಯಾಣ ಗುಣ ಪರಿಪೂರ್ಣನಾದ ಶ್ರೀಹರಿ.

ಎಂಟು ವಿಧ ಮದ: ಅನ್ನ ಮದ, ಅರ್ಥಮದ, ಪ್ರಾಯಮದ, ರೂಪಮದ, ತಮಸತ್ವ ಮದ, ಧಾತ್ರಿವಶತ್ವ ಮದ, ವೈಭವ ಮದ, ಎದುರಾಳಿ ಇಲ್ಲೆಂಬ ಮದ – ಇವುಗಳನ್ನು ಭೇದಿಸಬಲ್ಲ ಶ್ರೀಹರಿ.

ಎಂಟೆರಡು ಒಂದು ಇಂದ್ರಿಯ (ಏಕಾದಶೇಂದ್ರಿಯಗಳು) ಕಿವಿ, ಕಣ್ಣು, ಮೂಗು, ನಾಲಗೆ, ಚರ್ಮ, ಮುಖ, ಕೈ, ಕಾಲು, ಗುದ, ಉಪಸ್ಥ, ಮನಸ್ಸು – ಇಂದ್ರಿಯಗಳನ್ನು ಶ್ರೀಹರಿಯನ್ನೇ ಚಿಂತಿಸುವಂತೆ ಮಾಡು ಎಂದು ಪ್ರಾರ್ಥಿಸುತ್ತಾರೆ. ಎಂಟರ ಸಂಖ್ಯೆಯ ವಿಶೇಷಣಗಳಲ್ಲಿ 'ಈಶತ್ವ'ವನ್ನು ಎತ್ತಿ ಹಿಡಿದು ದಾಸತ್ವಕ್ಕೆ ಮೊರೆಯಿಡುತ್ತಾರೆ.

ಸರಸ್ವತೀಬಾಯಿಯವರು ಸಂಖ್ಯೆ 4ರ ಮಹತ್ವವನ್ನು ಚಮತ್ಕಾರಿಕವಾಗಿ ಹೇಳುತ್ತಾರೆ

ನಾಲ್ಕು ವೇದದ ಸಾರ ನಾಲ್ಕು ಯುಗದಾಧಾರ
ನಾಲ್ಕು ಮುಖನಲಿ ನೆಲೆಸಿ ಸೃಷ್ಟಿಕಾರ್ಯವ ನಡೆಸಿ
ನಾಲ್ಕು ಮುಖ ಬೊಮ್ಮನಲಿ ನಾನಿಲ್ಲವೆನಿಸಿ
ನಾಲ್ಕು ಯುಗದಲಿ ಜನಿಸಿದ ರಕ್ಕಸರಿಗೆ ತಿಳಿಸಿ
ನಾಲ್ಕು ಲೋಕದಿ ಮೆರೆದ ನಾಕ ಚರ ವಂದ್ಯ
ನಾಲ್ಕು ಹಸ್ತದಿ ನಾಲ್ಕು ವೇದ ತಂದಾ ಮೂರ್ತಿ
ನಾಲ್ಕು ವೇದದ ಸಾರದಮೃತ ಭಕ್ತರಿಗಿತ್ತು
ಹದಿನಾಲ್ಕು ಲೋಕಕೆ ನಾನೇ ಕರ್ತನೆಂದೆನಿಸಿ
ನಾಲ್ಕು ವಿಧದಲಿ ಕಾವ ಶ್ರೀಶ್ರೀನಿವಾಸನ ಭಕ್ತರಾದರೆ
ಈ ಕಲಿಯುಗದಲಿ ನಾಲ್ಕು ಜನರು ಮೆಚ್ಚುವರು ನಿಮ್ಮ
ಹರಿ ಭಕ್ತರೆ ಕೇಳಿ

ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಇವುಗಳ ಪ್ರತಿಪಾದ್ಯ ಶ್ರೀಹರಿಯು, ನಾಲ್ಕು ಯುಗಗಳಿಗೆ ಕೃತ, ತ್ರೇತಾ, ದ್ವಾಪರ, ಕಲಿಯುಗಗಳಿಗೆ ಆಧಾರವಾಗಿದ್ದಾನೆ. ನಾಲ್ಕು ಮುಖದ ಬ್ರಹ್ಮನಲ್ಲಿ ನಿಂತು ತಾನೇ ಸೃಷ್ಟಿ ಕಾರ್ಯ ನಡೆಸುತ್ತಾನೆ. ನಾಲ್ಕು ಯುಗಗಳಲ್ಲಿ ಜನಿಸಿದ ರಕ್ಕಸರನ್ನು ನಿಗ್ರಹಿಸಿದವನು ಶ್ರೀಹರಿ. ಕೃತಯುಗದಲ್ಲಿ ಹಿರಣ್ಯಕಶಿಪು–ಹಿರಣ್ಯಾಕ್ಷ, ತ್ರೇತಾಯುಗದಲ್ಲಿ ರಾವಣ–ಕುಂಭಕರ್ಣ, ದ್ವಾಪರದಲ್ಲಿ

ಶಿಶುಪಾಲ-ದಂತವಕ್ತ್ರ ಮತ್ತು ಕಲಿಯುಗದಲ್ಲಿ ಅಸುರಾವೇಶವುಳ್ಳ ಹರಿದ್ವೇಷಿಗಳನ್ನು ನಿಗ್ರಹ ಮಾಡಿದವನು ಶ್ರೀಹರಿಯೇ.

ನಾಲ್ಕು ಲೋಕದಿ ಮೆರೆದ: ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಎಂಬ ನಾಲ್ಕು ಮುಕ್ತಿ ಲೋಕಗಳಲ್ಲಿರುವ ನಾಕಚರ (ಇಂದ್ರಾದಿ ದೇವತೆಗಳು) ರಿಂದ ವಂದಿತನಾದವನು. ತನ್ನ ನಾಲ್ಕು ಹಸ್ತಗಳಿಂದ ನಾಲ್ಕು ವೇದಗಳನ್ನು ತಂದಂತಹ ನಾರಾಯಣನು ವೇದಗಳ ಸಾರಾಮೃತವನ್ನು ಭಕ್ತರಿಗೆ ನೀಡುತ್ತಾನೆ. ಹದಿನಾಲ್ಕು ಲೋಕಗಳಿಗೆ ಅಧಿಪತಿಯಾಗಿ ಚತುರವಸ್ಥೆಗಳಲ್ಲಿ ಬಾಲ್ಯ, ಕೌಮಾರ್ಯ, ಯೌವನ, ವೃದ್ಧಾಪ್ಯ ಎಂಬ ನಾಲ್ಕು ವಿಧದಲ್ಲಿ ಶ್ರೀಶ್ರೀನಿವಾಸನ ಭಕ್ತರಾದರೆ ನಾಲ್ಕು ಜನ ತತ್ವಾಭಿಮಾನಿ ದೇವತೆಗಳು ಮೆಚ್ಚುವರು. ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಎಂಬ ನಾಲ್ಕು ತತ್ವಾಭಿಮಾನಿ ದೇವತಾ ರೂಪಗಳು.

<u>ಒಂದು ಕ್ರಿಯೆ-ಪ್ರತಿಕ್ರಿಯೆ:</u>

ಸುಬ್ಬರಾಯದಾಸರು ತಮ್ಮ ಶಿಷ್ಯರೊಡನೆ ನಿರಂತರ ಪತ್ರ ವ್ಯವಹಾರ ನಡೆಸುತ್ತಿದ್ದರು. ಅವರ ಶಿಷ್ಯರಾದ ಅಂಬಾಬಾಯಿಯವರು ಎಷ್ಟೋ ವೇಳೆ ಪದ್ಯ ರೂಪದಲ್ಲೂ ಪತ್ರ ಬರೆಯುತ್ತಿದ್ದರು. ಸಂಗತಿ, ಸಂದರ್ಭಗಳಿಗೆ ಪ್ರತಿಕ್ರಿಯೆ ಕೂಡ ಪದ್ಯ ರೂಪದಲ್ಲೇ ಇರುತ್ತಿತ್ತು. ದಾಸ ಕೂಟದ ಸಮಸ್ತ ಜವಾಬ್ದಾರಿಯನ್ನು ತಂದೆಮುದ್ದುಮೋಹನದಾಸರೊಬ್ಬರೇ ನಿರ್ವಹಿಸುತ್ತಿದ್ದು, ಶಿಷ್ಯರಿಗೆ ಕೆಲವು ಜವಾಬ್ದಾರಿಗಳನ್ನು ವಹಿಸಿದ್ದರು. ನಿತ್ಯಾನಂದವಿಠಲ ದಾಸರಿಗೆ ಹೆಚ್ಚಿನ ಜವಾಬ್ದಾರಿವಹಿಸಬೇಕೆಂಬ ಅಪೇಕ್ಷೆ ಅವರಿಗಿತ್ತು. ಅದನ್ನು ಎಷ್ಟೋ ಬಾರಿ ಶಿಷ್ಯರುಗಳ ಬಳಿ ತಿಳಿಸಿದ್ದರು. ಆದರೆ ನಿತ್ಯಾನಂದವಿಠಲರು ತಮಗೆ ಅಷ್ಟು ಸಾಮರ್ಥ್ಯವಿಲ್ಲವೆಂದು, ತಮಗಿಂತ ಸಮರ್ಥರು ಸಾಕಷ್ಟು ಮಂದಿ ಇದ್ದಾರೆಂದು ಹೊಣೆಗಾರಿಕೆಯನ್ನು ವಹಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದರು. ಗುರುಗಳ ಅಪೇಕ್ಷೆಗೆ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ, ಬದಲಿಗೆ "ಬಿನ್ನೈಸಲೇನಯ್ಯ ಘನ್ನ ಗುರುವೆ" ಎಂಬ ಕೀರ್ತನೆಯಲ್ಲಿ ತಮಗಿಂತ ಯೋಗ್ಯರಾದವರ ಪಟ್ಟಿಯನ್ನೇ ನೀಡಿದ್ದಾರೆ.

ಬಿನ್ನೈಸಲೇನಯ್ಯ ಘನ್ನಗುರುವೆ ॥ ಪ ॥
ಎನ್ನ ಯೋಗ್ಯತೆಯು ಇನ್ನು ಹೊಸದೆ ॥ ಅ.ಪ ॥

ಅರಸಿ ನೋಡಲು ಇನ್ನೂ ಗುರು ಆಜ್ಞೆ ಧರಿಪರಲಿ
ಧೀರರಾಗಿಹರಯ್ಯ ವರಗುರು ಗೋಪಾಲರು
ವೀರದೀಕ್ಷೆಯಿಂದ ಗುರುಭಕ್ತಿ ಮಾಳ್ಪುದಕೆ
ಶೂರರಾಗಿಹರಿನ್ನು **ವರಗೋಪಾಲಕೃಷ್ಣರು** ॥ 1 ॥

ಗಾಯನವ ಪಾಡುವೆನೆನೆ ಗಾಯಕರು ರಘುರಾಮರು
ಕಾಯ ಕಷ್ಟವ ಪಡುವೆನೆನೆ ಹೋಯಿತು ವೇದವ್ಯಾಸಾಖ್ಯರ ಹಿಂದೆ

ಭಯ ಭಕ್ತಿತೋರ್ಪೆನೆನೆ ನ್ಯಾಯದಲಿ ಸೀತಾರಾಮರು
ವ್ಯಾಖ್ಯಾನದಲಿ ನೋಡೆ ವ್ಯಾಖ್ಯಾನಕರ್ತಪದ್ಮನಾಭರು ॥ 2 ॥

ಶುದ್ಧ ಮನದಲಿ ನಿಮ್ಮ ಪಾದವಪೂಜಿಪೆನೆನೆ
ಶ್ರದ್ಧೆಯಿಂಮಾಡಿಹರು ರಮಾಕಾಂತರು
ಅದ್ದುರಿಯಿಂದಲಿ ನಿಮ್ಮ ಮೋದಗೊಳಿಸುವೆನೆನೆ
ಸಿದ್ಧವಾಗಿಹರು ಪೂರ್ಣಬೋಧ ಪತಿದಾಸರು ॥ 3 ॥

ಮಾನಸ ಪೂಜೆಯನು ನಾ ಮಾಡುವೆನು ಎನೆ
ಘನ್ನ ಸುರೇಂದ್ರರು ಅಣಿಯಾಗಿ ಇಹರಿನ್ನು
ಚೆನ್ನವೈರಾಗ್ಯವನ್ನು ಇನ್ನು ಹೊಂದುವೆನೆನೆ
ಮುನ್ನ ಧರಿಸಿಹರಯ್ಯ ಶ್ರೀಮಧ್ವಾಂತರ್ಗತರು ॥ 4 ॥

ಜ್ಞಾನ ಭಕುತಿ ವೈರಾಗ್ಯಸಾಧನಗಳನೆಲ್ಲ
ಚನ್ನಾಗಿ ಪೊಂದಿಹರು ಮುನ್ನಪೇಳ್ದಪರು
ಎನ್ನಲಾವುದು ಒಂದು ಇನ್ನಿಲ್ಲದಿದ್ದರು
ಚಿಣ್ಣನಂತೆ ಕಾಡುವೆನು ಶ್ರೀನಿತ್ಯಾನಂದ ವಿಠಲಪ್ರಿಯ [6] ॥ 5 ॥

ಅಂಬಾಬಾಯಿಯವರಿಗೆ ಇದು ಸರಿಯೆನಿಸಲಿಲ್ಲವೆಂದು ತೋರುತ್ತದೆ. ಅದೇ ಕೀರ್ತನೆಯ ಧಾಟಿಯಲ್ಲಿ ಅಂಬಾಬಾಯಿಯವರು ನಿತ್ಯಾನಂದವಿಠಲರ ಚಿಂತನೆಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ನೀಡುತ್ತಾರೆ. ಆ ಕೀರ್ತನೆ ಹೀಗಿದೆ.

ಬಿನ್ನೈಸಲೇನಿನ್ನು ಎನ್ನ ಗುರುವೆ ॥ ಪ ॥
ನಿಮ್ಮ ನಿತ್ಯಾನಂದನಿರುವ ಬಗೆಯನ್ನ ॥ ಅ.ಪ ॥

ತನ್ನ ಕಾರ್ಯಗಳನ್ನ ನಿಮ್ಮ ಮೇಲೊರಗಿಸಿ
ಚೆನ್ನನಂದದಿ ನಿಮ್ಮ ಕಾಡುತಿಹನು
ತನ್ನಿಂದಲಾಗದ ಕಾರ್ಯಗಳು ಇನ್ನುಂಟೆ
ತನ್ನ ತಾನೇ ಮರೆತಂತೆ ಇರುತಿಹನು

ತನ್ನ ಮಾರ್ಗಕೆ ಬರುವ ಜೀವರುಗಳೆಲ್ಲರನು
ನಿಮ್ಮ ವಶಕೊಪ್ಪಿಸಿ ಒರೆಯಾಗಿಹನು
ತಾನೊಬ್ಬ ನಿಮ್ಮಿಂದ ತೇರ್ಗಡೆಯಾದ ಮೇಲೆ
ತನ್ನವರ ತಾನು ಸಲಹದೆ ಇರುತಿಹರೆ

ಬನ್ನಬಡುತಲಿ ಇರುವ ಘನ್ನ ಜೀವರುಗಳನು
ಮನ್ನಿಸಿ ಕರೆದು ಅಂಕಿತವಿತ್ತಿರಿ
ಇನ್ನಾದರೂ ತಾನು ನಿಮ್ಮ ಕಾರ್ಯಕೆ ನಿಂತು
ನಿಮ್ಮ ಸೇವೆಯ ಮಾಡದಲೆ ಇರುತಿಹನು

ಒಂದೊಂದು ಸೇವೆಗೆ ಒಬ್ಬೊಬ್ಬರಿಹರೆಂದು
ಮುಂದೆ ತನಗಾವುದೂ ತಿಳಿಯದೆಂದು
ಇಂದು ಈ ಪರಿಯಿಂದ ಇರುತಿಹುದು ನ್ಯಾಯವೆ
ತಂದೆ ಮುದ್ದುಮೋಹನ ಗುರುವೆ ನೀವು ಪೇಳಿ

ಸಾಕು ನಿಮ್ಮಯ ಶ್ರಮವ ನೋಡಲಾರೆನು ನಾನು
ಈ ಕಂದನಿಗೆ ಇನ್ನ ವರವ ಕೊಟ್ಟು
ಲೋಕ ಕಾರ್ಯವ ನಡೆಸಿ ನೋಡಿ ಸಂತಸಪಡಿರಿ
ಲೋಕೇಶ ಗೋಪಾಲವಿಠಲಪ್ರಿಯರೆ [7]

ದಾಸ ಪಂಥದ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ನಿತ್ಯಾನಂತ ವಿಠಲರು ಹಿಂದೇಟು ಹಾಕುತ್ತಿದ್ದ ರೀತಿ ಅವರು ನೀಡುತ್ತಿದ್ದ ನೆಪಗಳು ಅದಕ್ಕೆ ಅಂಬಾಬಾಯಿ ನೀಡಿದ ಪ್ರತಿಕ್ರಿಯೆ ಇವೆಲ್ಲ ಬಾಯಿ ಮಾತಿನ ಚರ್ಚೆ ಸಂಭಾಷಣೆಗಳಲ್ಲಿ ಮುಕ್ತಾಯವಾಗಬಹುದಿತ್ತು. ಅದನ್ನು ಕೀರ್ತನ ಮಾಧ್ಯಮದಲ್ಲಿ ದಾಖಲಿಸಿದ್ದು ಅಂಬಾಬಾಯಿ ಅವರ ವೈಶಿಷ್ಟ್ಯ.

ಅಡಿ ಟಿಪ್ಪಣಿ

ಲೇಖಕರ ಹೆಸರು	ಕೃತಿಯ ಹೆಸರು	ಪುಟ ಸಂಖ್ಯೆ
1. ಅನಂತಪದ್ಮನಾಭರಾವ್	19ನೇ ಶತಮಾನದ ಹರಿದಾಸ ಸಾಹಿತ್ಯ	ಪುಟ–176
2. ಜಿ. ವರದರಾಜರಾವ್	ಹರಿದಾಸ ಸಾಹಿತ್ಯ ಸಾರ	ಪುಟ–325
3. ಅನಂತಪದ್ಮನಾಭರಾವ್	19ನೇ ಶತಮಾನದ ಹರಿದಾಸ ಸಾಹಿತ್ಯ	ಪುಟ–137
4. ಅದೇ		ಪುಟ–149
5. ಅದೇ		ಪುಟ–124
6. ನಿತ್ಯಾನಂದ ವಿಠಲ,	ಅಪ್ರಕಟಿತ ಹಸ್ತಪ್ರತಿ	
7. ಅನಂತಪದ್ಮನಾಭರಾವ್	ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–3, ಅಂಬಾಬಾಯಿ	ಪುಟ–239

ಌಌ

ಅಧ್ಯಾಯ–8

ಅಜ್ಞಾತ ಮಹಿಳಾ ಹರಿದಾಸರು

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಕವಿಗಳ ನಡುವೆ ಕವಯತ್ರಿಯರೂ ಕಾಣಿಸಿಕೊಳ್ಳುತ್ತಾರೆ. 'ಕನ್ನಡ ಕವಿ ಚರಿತೆ'ಯಲ್ಲಿ ದಾಖಲಾಗಿರುವ ಕವಯತ್ರಿಯರ ಸಂಖ್ಯೆಯೂ ವಿರಳ. ದಾಸ ಸಾಹಿತ್ಯಕ್ಕೂ ಈ ಮಾತು ಅನ್ವಯವಾಗುತ್ತದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಚನಕಾರ್ತಿಯರನ್ನು ಗುರುತಿಸಿದಂತೆ ದಾಸ ಮಹಿಳೆಯರನ್ನು ಗುರುತಿಸಲಾಗಿಲ್ಲ. ವಚನಕಾರ್ತಿಯರು ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲೂ ಅಭಿವ್ಯಕ್ತಿ ಸ್ವಾತಂತ್ರ್ಯ ವಹಿಸಿದರು. ದಾಸ ಮಹಿಳೆಯರಿಗೆ ಹೋಲಿಸಿದರೆ ಶಿವಶರಣೆಯರೇ ಅಧಿಕ ಸಂಖ್ಯೆಯಲ್ಲಿ ಕಂಡು ಬರುತ್ತಿದ್ದರು. 17ರಿಂದ 20ನೇ ಶತಮಾನಗಳಲ್ಲಿ ಮಹಿಳಾ ದಾಸರ ಸಂಖ್ಯೆ ಅಧಿಕವಾಗುತ್ತ ಹೋಯಿತು. ತಮ್ಮ ಹಿಂದಿನ ದಾಸರ ಸಾಹಿತ್ಯ ಉಳಿಸಿ, ತಾವೂ ರಚನೆ ಮಾಡಿ, ದಾಸ ಸಾಹಿತ್ಯದ, ಸಂಪ್ರದಾಯದ ಉಳಿವಿಗೆ ಕಾರಣರಾದ ಮಹಿಳಾ ದಾಸರಲ್ಲಿ ಅನೇಕರು ಅಜ್ಞಾತರಾಗಿಯೇ ಉಳಿದಿದ್ದಾರೆ. ತಮ್ಮ ಮೌಲಿಕ ರಚನೆಗಳಿಂದ ದಾಸ ವಾಹಿನಿಯನ್ನು ಸಮೃದ್ಧಗೊಳಿಸಿದರೂ ಈ ಮಹಿಳೆಯರು ಅಜ್ಞಾತರಾದುದೇಕೆಂಬ ಪ್ರಶ್ನೆ ಬರುವುದು ಸಹಜ.

ಮೊದಲಿಗೆ ಅಜ್ಞಾತರೆಂದರೆ ಯಾರು ಎನ್ನುವ ಪ್ರಶ್ನೆಗೆ ಅನಂತಪದ್ಮನಾಭರಾವ್‌ರವರು 'ಅಜ್ಞಾತ ಕವಯತ್ರಿಯರು' ಎಂಬ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ:

1. ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗದೆ, ಯಾರ ಬಗ್ಗೆ ಪರಿಚಯ, ವಿಮರ್ಶೆ ಲೇಖನಗಳಿಲ್ಲವೊ, ಇಂದಿನ ಲೇಖಕಿಯರಿಗೆ ಯಾರ ಪರಿಚಯ ಇಲ್ಲವೋ ಅವರು ಅಜ್ಞಾತರು.
2. ಕೆಲವರ ಕೃತಿಗಳು ಒಂದು ಕಾಲದಲ್ಲಿ, ಒಂದು ವರ್ಗದಲ್ಲಿ ಮಾತ್ರ ಪ್ರಸಿದ್ಧವಾಗಿದ್ದು, ಪ್ರಕಟವಾಗಿದ್ದರೂ ಇಂದಿನವರಿಗೆ ಆ ಬಗ್ಗೆ ಗೊತ್ತಿಲ್ಲದವರು ಅಜ್ಞಾತರು.
3. 'ಕರ್ನಾಟಕ ಕವಯತ್ರಿಯರು' ಎಂಬ ಪ್ರೌಢ ಪ್ರಬಂಧ ಬರೆದು ಡಾಕ್ಟರೇಟ್ ಪದವಿ ಪಡೆದಿರುವ ಡಾ|| ಸರೋಜಿನಿ ಮಹಿಷಿಯವರ ಗ್ರಂಥದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ 'ನಮ್ಮ ಲೇಖಕಿಯರು' ಗಳಲ್ಲಿ, ಉಲ್ಲೇಖವಿಲ್ಲದವರು ಅಜ್ಞಾತರು.
4. ಇಂದಿಗೂ ಜೀವಂತವಿದ್ದು ತಮ್ಮ ಪರಿಸರದಲ್ಲಿ ಮಾತ್ರ ಪ್ರಸಿದ್ಧರಾಗಿ ಹೊರಗಿನ ಸಾಹಿತ್ಯ ಪ್ರಪಂಚದಲ್ಲಿ, ಪ್ರಚಾರ ವಂಚಿತರಾದವರು ಅಜ್ಞಾತರು.
5. ನೂರಾರು ಕೃತಿಗಳನ್ನು ಬರೆದು ಪ್ರಕಟಿಸುವ ಅವಕಾಶವಿಲ್ಲದೆ, ಬರಹ ಮಾತ್ರದಿಂದ ತೃಪ್ತರಾದ ಕವಯತ್ರಿಯರು.

6. ಅನೇಕ ಮಂದಿ ಸಂಪ್ರದಾಯಕ್ಕೆ ಬದ್ಧರಾಗಿ ಹೊರ ಪ್ರಪಂಚದೊಡನೆ ಒಂದಾಗದೆ ಅಜ್ಞಾತರಾಗಿ ಉಳಿದಿದ್ದಾರೆ.

ಡಾ॥ ಸರೋಜಿನಿ ಮಹಿಷಿಯವರು ಭೀಮವ್ವ ಮತ್ತು ಕೆಲವು ದಾಸ ಮಹಿಳೆಯರನ್ನು ತಮ್ಮ ಗ್ರಂಥದಲ್ಲಿ ಪರಿಚಯಿಸಿದ್ದಾರೆ. ಪಂಡರೀನಾಥಾಚಾರ್ಯ ಗಲಗಲಿಯವರು ತಮ್ಮ 'ಮಾಧ್ವ ವಾಙ್ಮಯ ತಪಸ್ವಿಗಳು' ಗ್ರಂಥದಲ್ಲಿ ಗಲಗಲಿ ಅವ್ವನವರನ್ನು ಅವರ ಶಿಷ್ಯೆ ಪ್ರಯಾಗವ್ವನನ್ನು ಗುರುತಿಸಿದ್ದಾರೆ. 'ಅಜ್ಞಾತ ಕವಯತ್ರಿಯರು' ಎಂಬ ಗ್ರಂಥದಲ್ಲಿ ಎಂ.ಆರ್. ಲಕ್ಷ್ಮೀದೇವಿಯವರು ತುಳಸಾಬಾಯಿ, ಶಾಂತಿಬಾಯಿ, ತುಂಗಮ್ಮ, ಓರವಾಯಿಲಕ್ಷ್ಮೀದೇವಮ್ಮ, ಹಾಡಿನವೆಂಕಮ್ಮ, ಕೋಲಾರಪದ್ಮಾಬಾಯಿಯವರನ್ನು ಪರಿಚಯಿಸಿದ್ದಾರೆ.

ಅದೇ ಗ್ರಂಥದ ಇನ್ನೊಂದು ಲೇಖನದಲ್ಲಿ ಅನಂತಪದ್ಮನಾಭರಾವ್‌ರವರು ಶಾಂತಾಬಾಯಿ ನೀಲಗಾರ, ಪದ್ಮಾವತಿಬಾಯಿ, ಕೋಲಾರ ಪದ್ಮಾಬಾಯಿ, ದೊಡ್ಡಿ ಸುಧಾಬಾಯಿ, ರುಕ್ಮಿಣಿ ಗಿರಿಮಾಜಿ, ಪಿ.ವಿ. ಕೃಷ್ಣಾಬಾಯಿ, ಬೆಲ್ಲಾಲ ಬೊಮ್ಮಸಂದ್ರದ ಭಾಗೀರಥಮ್ಮ, ದಡಿಗದ ಲಕ್ಷ್ಮೀನರಸಮ್ಮ ಮುಂತಾದ ದಾಸ ಮಹಿಳೆಯರ ಬಗ್ಗೆ ಉಲ್ಲೇಖಿಸುತ್ತಾರೆ. ಇತ್ತೀಚೆಗೆ ಸಮಗ್ರ ದಾಸ ಸಾಹಿತ್ಯ ಸಂಪುಟಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿದ್ದು ಅದರಲ್ಲಿ 14 ಮಂದಿ ದಾಸ ಮಹಿಳೆಯರ ಕೃತಿಗಳು ಬೆಳಕು ಕಂಡಿವೆ. ಜಯಲಕ್ಷ್ಮಿಮಂಗಳಮೂರ್ತಿಯವರೂ ತಮ್ಮ ಸಂಶೋಧನಾ ಪ್ರಬಂಧದಲ್ಲಿ ಹಲವಾರು ಮಹಿಳೆಯರನ್ನು ಪ್ರಸ್ತಾಪಿಸಿದ್ದಾರೆ. ಇವರನ್ನು ಬಿಟ್ಟು ಉಳಿದವರೆಲ್ಲ ಅಜ್ಞಾತರೇ.

ಅಂಬಾಬಾಯಿಯವರ ಕೃತಿಗಳು ದಾಸ ಸಾಹಿತ್ಯ ಸಂಪುಟಗಳಲ್ಲಿ ಪ್ರಕಟವಾಗಿದ್ದರೂ ಇನ್ನೂ ಹೆಚ್ಚಿನ ಅಪ್ರಕಟಿತ ಕೃತಿಗಳಿವೆ. ಪಿ.ವಿ. ಕೃಷ್ಣಾಬಾಯಿ, ಅಂಜನಾಗುಡಿ, ಸುಶೀಲಕಾಂತರಾವ್, ಉಮಾಮಾಧವರಾವ್, ಚಂದೂಬಾಯಿನಾಯಕ, ಸರೋಜಾಬಾಯಿ, ಜಲಜಾಗಂಗೂರ, ಇತ್ಯಾದಿ ದಾಸ ಮಹಿಳೆಯರು ಕೆಲವು ಕೃತಿಗಳು ಪ್ರಕಟವಾಗಿದ್ದರೂ ಅಜ್ಞಾತರಾಗಿಯೇ ಉಳಿದಿದ್ದಾರೆ. ಹಾಗೆಯೇ ಇವರ ಅಪ್ರಕಟಿತ ಕೃತಿಗಳೂ ಸಾಕಷ್ಟಿವೆ.

ದಾಸ ಮಹಿಳೆಯರು ಅಜ್ಞಾತರಾಗಿಯೇ ಉಳಿದಿರುವುದಕ್ಕೆ ಕಾರಣಗಳು ಇಲ್ಲದಿಲ್ಲ. ಹರಿದಾಸ ಮಹಿಳೆಯರಲ್ಲಿ ಮಧ್ಯಮ ಅಥವಾ ಉನ್ನತ ವರ್ಗದ ಮಹಿಳೆಯರು ಇದ್ದರೂ ವರ್ಣಾಶ್ರಮದ ಕಟ್ಟುಪಾಡುಗಳು, ಸಂಪ್ರದಾಯದ ಅಡೆತಡೆಗಳಿಂದ ದಾಸ ಮಹಿಳೆಯರು ಬೆಳಕಿಗೆ ಬರಲಾಗಲಿಲ್ಲ.

"ಕಟ್ಟುನಿಟ್ಟಿನ ವರ್ಣಾಶ್ರಮ ಧರ್ಮದ ಹಂಗನ್ನು ಕಿತ್ತೊಗೆಯಲು ಅಥವಾ ತೀವ್ರ ಸುಧಾರಣೆಗೆ ಒಳಪಡಿಸಿಕೊಳ್ಳಲು ಅವರಿಗೆ ಸಾಧ್ಯವಾಗದಿದ್ದುದು ಮತ್ತೊಂದು ಮುಖ್ಯ ಕಾರಣವಿರಬಹುದು. ಈ ವರ್ಣಾಶ್ರಮದ ಕಟ್ಟು ಪಾಡುಗಳ ಹೇರಿಕೆಯಿಂದ ಹರಿದಾಸಿಯರು ಹೆಚ್ಚಾಗಿ ಬೆಳಕಿಗೆ ಬರಲಾಗಲಿಲ್ಲ."[1]

ಅಂದಿನ ದಿನಗಳಲ್ಲಿ ಹೆಣ್ಣು ಮಕ್ಕಳಿಗೆ ಶಾಲಾ ವಿದ್ಯಾಭ್ಯಾಸದ ಸೌಕರ್ಯವಿರಲಿಲ್ಲ. ಸ್ವತಂತ್ರವಾಗಿ ಹೊರಗೆ ಬರುವುದು ಸಾಧ್ಯವಿರಲಿಲ್ಲ. ತನ್ನ ಮನೆ, ಗಂಡ, ಮಕ್ಕಳೇ ಆಕೆಯ ಪ್ರಪಂಚವಾಗಿತ್ತು. ತನ್ನ ಬದುಕಿನ ಆಶೋತ್ತರಗಳನ್ನು ಅಧ್ಯಾತ್ಮ, ಪುರಾಣ–ಪ್ರವಚನಗಳಲ್ಲಿ ಕಂಡುಕೊಳ್ಳಬೇಕಾದ ಸಂದರ್ಭವಿದ್ದಿತು. ಹರಿದಾಸರಿಗೆ ಇದ್ದಂತಹ ಸ್ವಾತಂತ್ರ್ಯ ಹರಿದಾಸಿಯರಿಗೆ ಇರಲಿಲ್ಲ. ವಿದ್ಯೆ, ಶಾಸ್ತ್ರಾಧ್ಯಯನ, ಅಂಕಿತ, ಧಾರ್ಮಿಕ ಮುಕ್ತ ವಾತಾವರಣ ಹರಿದಾಸಿಯರಿಗೆ ಹರಿದಾಸರಷ್ಟು ಉದಾರವಾಗಿ ಸಿಕ್ಕಿರಲಿಲ್ಲ. ಹೆಣ್ಣು, ಗೃಹಿಣಿಯಾಗಿ ಮಕ್ಕಳ ಪಾಲನೆ, ಅತಿಥಿ ಸತ್ಕಾರ ಮತ್ತು ಅಡುಗೆ ಮನೆಯ ಕೆಲಸ, ಗೃಹಕೃತ್ಯಗಳಿಗಾಗಿ ಸೀಮಿತಳಾಗಿದ್ದಳು. ಸಾಮಾಜಿಕ ಜೀವನದಲ್ಲಿ ಇವರ ಪಾಲು ಇರಲಿಲ್ಲ. ಈ ಎಲ್ಲ ಕಾರಣಗಳಿಂದ ಬಹಳಷ್ಟು ಸಂಖ್ಯೆಯ ಹರಿದಾಸಿಯರಿದ್ದರೂ ಬೆಳಕಿಗೆ ಬರಲಿಲ್ಲ. ಕೆಲವರ ಕೃತಿಗಳು ಅಜ್ಞಾತವಾದರೆ, ಕೆಲವರ ವೈಯಕ್ತಿಕ ವಿವರಗಳು ಅಜ್ಞಾತವಾದವು.

ತಂದೆಮುದ್ದುಮೋಹನವಿಠಲದಾಸರು, ಗುರುಗೋವಿಂದವಿಠಲದಾಸರು, ಉರಗಾದ್ರಿವಿಠಲದಾಸರು, ವೆಂಕಟದಾಸರು (ಸುಬ್ಬರಾಯದಾಸರ ಪುತ್ರ) ಮತ್ತು ನಿತ್ಯಾನಂದವಿಠಲರಿಂದ ಅಂಕಿತ ಪಡೆದ ಮಹಿಳೆಯರ ವಿವರವನ್ನು ದಾಖಲೆಯ ದೃಷ್ಟಿಯಿಂದ ಇಲ್ಲಿ ಸಂಗ್ರಹಿಸಲಾಗಿದೆ. ಗುರುಗಳಿಂದ ಅಧಿಕೃತವಾಗಿ ಅಂಕಿತ ಪಡೆದು ದಾಸ ಸಾಹಿತ್ಯ ರಚನೆ, ರಕ್ಷಣೆ, ಪ್ರಚಾರ, ದಾಸ ಪಂಥದ ಅನುಷ್ಠಾನದಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹಿಳೆಯರ ಸಂಖ್ಯೆ ಸುಮಾರು 600ನ್ನೂ ಮೀರುತ್ತದೆ. ಗುರುಗೋವಿಂದವಿಠಲರ ಶಿಷ್ಯರಲ್ಲಿ ಅನೇಕರು 20ನೇ ಶತಮಾನದ ಕೊನೆಯ ಭಾಗದಲ್ಲಿ ಅಂಕಿತ ಪಡೆದಿರುವುದನ್ನು ಗಮನಿಸಿದರೆ ದಾಸ ವಾಹಿನಿ ಸಮಕಾಲೀನ ಸಾಹಿತ್ಯ ಸಂದರ್ಭದಲ್ಲೂ ತಟಸ್ಥವಾಗದೆ ಜೀವಂತವಾಗಿದೆ ಎನ್ನಬಹುದು.

ತಂದೆ ಮುದ್ದುಮೋಹನವಿಠಲದಾಸರಿಂದ ಅಂಕಿತ ಪಡೆದ ಮಹಿಳೆಯರು. (ಆವರಣದಲ್ಲಿರುವುದು ಅಂಕಿತ ಸಂಖ್ಯೆ)

ಹೆಸರು	ಅಂಕಿತ	ಸ್ಥಳ
1. ಅನಸೂಯಾಬಾಯಿ (43)	ಆನಂದಗುರುಮೂರ್ತಿ ವಿಠಲ	ಶ್ರೀರಂಗ
2. ಅನಸೂಯಾಬಾಯಿ (721)	ಶ್ರೀಕಾಂತಮನೋಹರ ವಿಠಲ	ಬಳ್ಳಾರಿ
3. ಅನಸೂಯ (744)	ಶ್ರೀಕಾಂತರಾಮ ವಿಠಲ	--
4. ಅಕ್ಕವ್ವ (874)	ಸದಾನಂದಸ್ವಾಮಿ ವಿಠಲ	ಕದರಮಂಡಲಗಿ
5. ಅಚ್ಚಮ್ಮ (218)	ಜಗತ್ಪತಿ ವಿಠಲ	ಸೀಗೆಬೇಲಿ ಬೆಂಗಳೂರು
6. ಅಹಲ್ಯಾಬಾಯಿ (746)	ಸುಜ್ಞಾನದಾಯಕ ವಿಠಲ	ಬೆಂಗಳೂರು
7. ಅಂಬಾಬಾಯಿ (147)	ಗೋಪಾಲಕೃಷ್ಣ ವಿಠಲ	ಚಿತ್ರದುರ್ಗ
8. ಅಂಬಾಬಾಯಿ (857)	ಸರ್ವಪಾಲಕ ವಿಠಲ	ಹಾಸನ
9. ಅರ್ಕಾವತಿ ಬಾಯಿ (383)	ಪರಸುಖಕಾರಣ ವಿಠಲ	ಬೆಂಗಳೂರು
10. ಅನಸೂಯಾಬಾಯಿ (407)	ಪತಿಪ್ರೇರಕ ವಿಠಲ	5-6-1937
11. ಅಂಬಾಬಾಯಿ (456)	ಮಾಧವವಿಠಲ	ಪೆನುಗೊಂಡೆ
12. ಅಚ್ಚಮ್ಮ (496)	ಮಾಧವಸ್ವಾಮಿ ವಿಠಲ	ರಾಮನಗರ
13. ಅಹಲ್ಯಾಬಾಯಿ (544)	ರಮಾರಮಣವಿಠಲ	ಬೆಂಗಳೂರು/ಚೆನ್ನಗಿರಿ
14. ಇಂದಿರ (41)	ಆನಂದಲೀಲವಿಠಲ	ಕದರಮಂಡಲಗಿ
15. ಇಂದಿರ (73)	ಉದಾರಗುಣಭರಿತ ವಿಠಲ	ಶಿಡ್ಲಘಟ್ಟ
16. ಇಂದಿರಬಾಯಿ (56)	ಇಂದಿರಾರಮಣ ವಿಠಲ	ಅಲಹಾಬಾದ್
17. ಇಂದಿರಾಬಾಯಿ (777)	ಶ್ರೀಪತಿಮೋಹನ ವಿಠಲ	ಬಸವನಗುಡಿ, ಬೆಂಗಳೂರು
18. ಇಂದಿರಾಬಾಯಿ (327)	ನೀಲಾಪತಿ ವಿಠಲ	ಚಿತ್ರದುರ್ಗ
19. ಇಂದಿರಾಬಾಯಿ (347)	ನಾರದಪ್ರಿಯವಿಠಲ	ಮಾಂಡವಿಶೆಟ್ಟಿಹಳ್ಳಿ
20. ಇಂದಿರಾಬಾಯಿ (498)	ಶಿರಿನಾಥವಿಠಲ	ಚಿತ್ರದುರ್ಗ
21. ಇಂದಿರಾಬಾಯಿ (890)	ಸಾಕಾರಮೂರ್ತಿವಿಠಲ	ರಾಣೆಬೆನ್ನೂರು
22. ಎಂಕಮ್ಮ (207)	ಜಗದೊಡೆಯ ವಿಠಲ	ಹಾಸನ
23. ಎಂಕಮ್ಮ (149)	ಗಂಗಾಪಿತವಿಠಲ	ಚಿತ್ರದುರ್ಗ
24. ಎಂಕಮ್ಮ (999)	ಜ್ಞಾನಾತ್ಮಕ ವಿಠಲ	ಶೇಷಾದ್ರಿಪುರ
25. ಕಮಲಾಬಾಯಿ (486)	ಮುಕ್ತಿಕಾರಣ ವಿಠಲ	ಧಾರವಾಡ
26. ಕಮಲಮ್ಮ (461)	ಮಾಯಾರಮಣ ವಿಠಲ	ಚಿತ್ರದುರ್ಗ
27. ಕಮಲಾಬಾಯಿ (388)	ಪುರಾತನಪುರುಷ ವಿಠಲ	ಬೆಂಗಳೂರು
28. ಕಮಲಾಬಾಯಿ (399)	ಪರಮಪಾವನ ವಿಠಲ	ಬೆಂಗಳೂರು
29. ಕಮಲಮ್ಮ (401)	ಪಾವನ ಚರಿತ ವಿಠಲ	ಆನೆಗೋಡು
30. ಕಮಲಾಬಾಯಿ (454)	ಮುಕ್ತಾಶ್ರಯವಿಠಲ	ಚಿತ್ರದುರ್ಗ
31. ಕಮಲಮ್ಮ (179)	ಗುರುಮುಖ್ಯಪ್ರಾಣಪತಿ ವಿಠಲ	ಜಯಸಿಂಹಪುರ
32. ಕಮಲಮ್ಮ (490)	ಮಂಗಳಮಹಿಮಶುಭಾಂಗವಿಠಲ	--
33. ಕಮಲಾಬಾಯಿ (301)	ದೇವನಾಥ ವಿಠಲ	ಹಾಸನ

34. ಕಮಲು (218)	ಜಯಾಮೋಹನವಿಠಲ	ನಂಜನಗೂಡು
35. ಕಲ್ಲಮ್ಮ (313)	ಧನ್ವಂತರಿದೇವ ವಿಠಲ	--
36. ಕಲ್ಯಾಣಮ್ಮ (257)	ಜಗತ್ಪತಿ ಕೇಶವ ವಿಠಲ	--
37. ಕಪಿಲ (470)	ಮಾಮನೋಹರ ವಿಠಲ	ನಂಜನಗೂಡು
38. ಕಮಲಾಬಾಯಿ (2)	ಅಗಣಿತಮಹಿಮ ವಿಠಲ	ವೇಲೂರು
39. ಕಮಲಾಬಾಯಿ (14)	ಅಪಾರಮಹಿಮವಿಠಲ	ದೇವನೂರು ಬಾಣಾವರ
40. ಕಮಲಾಬಾಯಿ (89)	ಆನಂದಸಾಂದ್ರ ವಿಠಲ	ಕದರ ಮಂಡಲಗಿ
41. ಕಪಿಲಮ್ಮ (137)	ಕಮಲಾಕಾಂತಮೋಹನ ವಿಠಲ	--
42. ಕಮಲಾಬಾಯಿ (600)	ಲಾವಣ್ಯಗುಣನಿಧಿ ವಿಠಲ	--
43. ಕಮಲಾಬಾಯಿ (657)	ವಿಜಯರಂಗೇಶ ವಿಠಲ	--
44. ಕಮಲಾಬಾಯಿ (863)	ಸಕಲೇಶಕೃಷ್ಣ ವಿಠಲ	ತಿಪಟೂರು
45. ಕಮಲಾಬಾಯಿ (964)	ಸರ್ವೇಷ್ಟದಾಯಕ ವಿಠಲ	ಕಡಪ
46. ಕಮಲಾಬಾಯಿ (979)	ಸುಖಾತ್ಮಕರಾಮ ವಿಠಲ	--
47. ಕಮಲಮ್ಮ (972)	ಸರ್ವಗುಣ ಸಂಪನ್ನ ವಿಠಲ	--
48. ಕಲ್ಯಾಣಿ ಕೃಷ್ಣಾಚಾರ್ (776)	ಶ್ರೀಕಾಂತ ವರದೇಶ ವಿಠಲ	ಮೈಸೂರು
49. ಕಾವೇರಿಬಾಯಿ (494)	ಮಹಾಸ್ವಾಮಿ ವಿಠಲ	--
50. ಕಾವೇರಮ್ಮ (38)	ಆನಂದಸಾಂದ್ರ ವಿಠಲ	ಬಸವನಗುಡಿ, ಬೆಂಗಳೂರು
51. ಕಾವೇರಮ್ಮ (121)	ಕಮಲಾಲೋಲ ವಿಠಲ	ರಾಮೋಹಳ್ಳಿ
52. ಕಾವೇರಮ್ಮ (656)	ವಸುದೇವಸುತ ಕೃಷ್ಣ ವಿಠಲ	--
53. ಕಾವೇರಮ್ಮ (905)	ಸದಾನಂದಮೂರ್ತಿ ವಿಠಲ	--
54. ಕಾವೇರಮ್ಮ (366)	ಪದ್ಮಾವತಿಪ್ರಿಯ ವಿಠಲ	ಮೈಸೂರು
55. ಕಾವೇರಮ್ಮ (453)	ಮಾಯಾವರದ ವಿಠಲ	ಚಿತ್ರದುರ್ಗ
56. ಕಾಂತಿಮಂತಮ್ಮ (807)	ಸದಾಶಿರೋಮಣಿ ವಿಠಲ	ಮೈಸೂರು
57. ಕಿಟ್ಟಮ್ಮ (191)	ಚಿದಾನಂದ ವಿಠಲ	--
58. ಕುಮಾರಮ್ಮ (417)	ಪರಿಪೂರ್ಣಮೋಹನ ವಿಠಲ	16-11-1939
59. ಕುಸುಮಾಬಾಯಿ (222)	ಜಗತ್ಪಾವನ ವಿಠಲ	--
60. ಕೆಂಚವ್ವ (256)	ಜಗತ್ಪತಿ ಕೇಶವ ವಿಠಲ	--
61. ಕೃಷ್ಣಾಬಾಯಿ (895)	ಸುಂದರಾಕೃತಿ ವಿಠಲ	ಕದರಮಂಡಲಗಿ
62. ಕೃಷ್ಣಮ್ಮ (459)	ಮುರಳೀಲೋಲ ವಿಠಲ	ಚಿತ್ರದುರ್ಗ
63. ಕೃಷ್ಣವೇಣಿಬಾಯಿ (66)	ಇಂದಿರಾರಾಧ್ಯವಿಠಲ	ಬೆಂಗಳೂರು
64. ಕೃಷ್ಣವೇಣಿಬಾಯಿ (90)	ಕಂಜನಾಭಮೋಹನವಿಠಲ	ಹಾಸನ
65. ಕುಂತಲಾಬಾಯಿ (361)	ಪುಂಡರೀಕಾಕ್ಷ ವಿಠಲ	ಬೆಂಗಳೂರು
66. ಗಿರೀಬಾಯಿ (409)	ಪರಮಪಾವನಮೂರ್ತಿರಾಮ ವಿಠಲ	ಬೇಲೂರು
67. ಗುಂಡಮ್ಮ (531)	ರುಕ್ಮಿಣೀಶ ವಿಠಲ	ಚಿತ್ರದುರ್ಗ
68. ಗುಂಡಮ್ಮ (546)	ರಮಾಪ್ರಿಯವಿಠಲ	--
69. ಗುಂಡಮ್ಮ (628)	ವಿಹಂಗನಾಥಗಮನ ವಿಠಲ	ಅರಸೀಕೆರೆ

70. ಗೋಪಮ್ಮ (705)	ಶಿರಿಕೇಶವ ವಿಠಲ	ಬೆಂಗಳೂರು
71. ಗೋಪಮ್ಮ (697)	ಸತ್ಯೇಶವಿಠಲ	ಚಿತ್ರದುರ್ಗ
72. ಗೋಪಮ್ಮ (536)	ರಾಜೀವಲೋಚನ ವಿಠಲ	ಬೆಂಗಳೂರು
73. ಗೋಪವ್ವ (122)	ಕನಕಾದ್ರಿವಾಸ ವಿಠಲ	--
74. ಗೋದಾವರಿಬಾಯಿ (266)	ಜಯಗೋಪಾಲ ವಿಠಲ	ಪ್ರೊದಟೂರು
75. ಗೋದಾವರಿ (304)	ದಿವ್ಯಮೂರ್ತಿವಿಠಲ	ಕದರಮಂಡಲಗಿ
76. ಗೋಪೀಬಾಯಿ (476)	ಮಂಗಳಮೋಹನ ವಿಠಲ	ತರೀಕೆರೆ
77. ಗೌರಮ್ಮ (580)	ಲಕ್ಷ್ಮೀನಾರಾಯಣಮೋಹನ ವಿಠಲ	ಹಾಸನ
78. ಗಂಗಮ್ಮ (146)	ಗಂಗಾಜನಕವಿಠಲ	ಕಮಕೇರಿ
79. ಗಂಗಮ್ಮ (940)	ಸಕಲಾತ್ಮವಿಠಲ	--
80. ಗಂಗಾಬಾಯಿ (394)	ಪರಮಕೃಪಾಕರೇಶ ವಿಠಲ	--
81. ಗಂಗಾಬಾಯಿ (157)	ಗೋವಿಂದರಾಮವಿಠಲ	ಹರಿಹರ
82. ಗಂಗೂಬಾಯಿ/ರಂಗೂಬಾಯಿ (299)	ಧರಾರಮಣ ವಿಠಲ	ಬೆಂಗಳೂರು/ಚೆನ್ನಗಿರಿ
83. ಗಂಗಾಬಾಯಿ (120)	ಕಮನೀಯಗುಣಪೂರ್ಣವಿಠಲ	--
84. ಚಂದ್ರ (190)	ಚಿನ್ಮಯ ವಿಠಲ	ಚಿತ್ರದುರ್ಗ
85. ಚಂದ್ರವದನ	ಇಂದಿರಾಪತಿ ವಿಠಲ	ಚಿತ್ರದುರ್ಗ
86. ಛಾಯಮ್ಮ (850)	ಸುರನಾಥರಾಮವಿಠಲ	--
87. ಜಯಮ್ಮ (539)	ರಮಾಮನೋಹರರಾಮವಿಠಲ	ಅರಸೀಕೆರೆ
88. ಜಯಮ್ಮ (566)	ರಾಮಕೃಷ್ಣಹರಿವಿಠಲ	ಹೊಸದುರ್ಗ
89. ಜಯಮ್ಮ	ಕಮಲಪ್ರಿಯವಿಠಲ	--
90. ಜಯಮ್ಮ	ಕಂಜನಾಭವಿಠಲ	ಬೆಂಗಳೂರು
91. ಜಯಲಕ್ಷ್ಮಿ (898)	ಸದಾನಂದಕರ ವಿಠಲ	ಹಿಂದೂಪುರ
92. ಜಾನಕಮ್ಮ (859)	ಸುರನಾಥರಾಮವಿಠಲ	ಅರಸೀಕೆರೆ
93. ಜಾನಕೀಬಾಯಿ (396)	ಪರಸೌಖ್ಯಪ್ರದವಿಠಲ	ಕದರಮಂಡಲಗಿ
94. ಜಾನಕೀಬಾಯಿ (254)	ಜಯತೀರ್ಥವರದ ವಿಠಲ	--
95. ಜಾನಕೀಬಾಯಿ (269)	ಜಯಗೋಪಾಲಸ್ವಾಮಿ ವಿಠಲ	ಕಡಪ
96. ಜಾನಕೀಬಾಯಿ (819)	ಸುಜ್ಞಾನದಾಯಕ ವಿಠಲ	ಶಿಡ್ಲಘಟ್ಟ/ಹೊಸಕೋಟೆ
97. ಜೀವೂಬಾಯಿ (535)	ರಮಾಧವರಾಮವಿಠಲ	ಬೆಂಗಳೂರು
98. ಜೀವೂಬಾಯಿ	ಕಲುಷದೂರವಿಠಲ	ಬೆಂಗಳೂರು
99. ಜೀವೂಬಾಯಿ (925)	ಸುಜ್ಞಾನಪ್ರಿಯ ವಿಠಲ	--
100. ತಾಯಮ್ಮ (528)	ರಘುನಂದನವಿಠಲ	ವಿ.ವಿ.ಪುರ/ಬೆಂಗಳೂರು
101. ತಾರಮ್ಮ (884)	ಸುಗುಣಾಕರವಿಠಲ	ಬಸವನಗುಡಿ, ಬೆಂಗಳೂರು
102. ತಾರಾಬಾಯಿ (713)	ಶ್ರೀದೇವಿಪತಿ ವಿಠಲ	ಅರಸೀಕೆರೆ
103. ತಿಪ್ಪಮ್ಮ (840)	ಸರ್ವಾಂತರ್ಗತ ವಿಠಲ	ಬೆಂಗಳೂರು

104. ತಿಪ್ಪವ್ವ (894)	ಸೌಂದರ್ಯಸಾರ ವಿಠಲ	ಕದರಮಂಡಲಗಿ
105. ತಂಗವ್ವ (524)	ರಂಗನಾಥ ವಿಠಲ	ಕಮಕೇರಿ
106. ತುಳಸಮ್ಮ (387)	ಪದ್ಮೇಶವಿಠಲ	ರಾಣೆಬೆನ್ನೂರು
107. ತುಳಸೀಬಾಯಿ (381)	ಪವಮಾನವಂದಿತ ವಿಠಲ	ಹರಿಹರ
108. ತುಳಸಮ್ಮ (787)	ಸದಾನಂದಗುಣಭರಿತ ವಿಠಲ	ಬೆಂಗಳೂರು
109. ತುಳಸಾಬಾಯಿ	ವೈಕುಂಠನಾರಾಯಣವಿಠಲ	ಕದರಮಂಡಲಗಿ
110. ತುಳಸಾಬಾಯಿ (161)	ಗೋಕುಲಾನಂದ ವಿಠಲ	ಕದರಮಂಡಲಗಿ
111. ತುಳಸಮ್ಮ (340)	ನಾರದಪ್ರಿಯವಿಠಲ	--
112. ತುಂಗಮ್ಮ	ಆಹ್ಲಾದಪ್ರದ ವಿಠಲ	--
113. ತುಂಗಮ್ಮ (414)	ಪಂಕಜನಾಭ ವಿಠಲ	--
114. ತುಂಗಮ್ಮ (586)	ಲಕ್ಷ್ಮೀನಾರಾಯಣ ವಿಠಲ	ಬೆಂಗಳೂರು
115. ತುಂಗಮ್ಮ (308)	ದೇವತಾಂತರ್ಯಾಮಿ ವಿಠಲ	ಹುಬ್ಬಳ್ಳಿ
116. ತುಂಗಾಬಾಯಿ	ಕೃಷ್ಣಾರಮಣಪ್ರಿಯ ವಿಠಲ	--
117. ತುಳಸಾಬಾಯಿ (798)	ಸದ್ಗುರುನಾಥ ವಿಠಲ	ಉಸ್ಲೂರಪೇಟೆ
118. ದಮಯಂತಿ	ಕಮಲೇಶವಿಠಲ	ಬಸವನಗುಡಿ, ಬೆಂಗಳೂರು
119. ದುರ್ಗಾಬಾಯಿ (423)	ಪರಮಶುಭಕರವಿಠಲ	ಪುಂಗನೂರು
120. ದ್ವಾರಕಾಬಾಯಿ (228)	ಜಗನ್ಮೋಹನವಿಠಲ	ರಾಣೆಬೆನ್ನೂರು
121. ಧನಲಕ್ಷ್ಮಮ್ಮ (292)	ದಯಾಸಾಂದ್ರ ವಿಠಲ	ಬೆಂಗಳೂರು
122. ನರಸು (375)	ಪರಮಪುರುಷಾರ್ಥಪ್ರದವಿಠಲ	ಶೇಷಾದ್ರಿಪುರ, ಬೆಂಗಳೂರು
123. ನರಸೂಬಾಯಿ (650)	ವೇದಮಯ ವಿಠಲ	--
124. ನರಸಮ್ಮ (549)	ರಮಾನಾಥಮೋಹನ ವಿಠಲ	ಅರಸೀಕೆರೆ
125. ನರಸಮ್ಮ	ಗಾನಲೋಲವಿಠಲ	ಪಂಡರಹಳ್ಳಿ
126. ನರಸಮ್ಮ (166)	ಗುರುರಾಜಪ್ರಿಯವಿಠಲ	ರಟ್ಟಿಹಳ್ಳಿ
127. ನರಸಮ್ಮ (320)	ನರಸಾರಥಿ ವಿಠಲ	ಇರಕಸಂದ್ರ/ ದೇವರಾಯನದುರ್ಗ
128. ನರಸಮ್ಮ (349)	ನಿತ್ಯಮಂಗಳ ಚರಿತ ವಿಠಲ	--
129. ನಾಗಮ್ಮ (204)	ಜಾನಕೀಪತಿ ವಿಠಲ	ಚಿತ್ರದುರ್ಗ
130. ನಾಗಮ್ಮ (989)	ಹಯಾಸ್ಯವಿಠಲ	ಚಿಕ್ಕೇರೂರು
131. ನಾಗಮ್ಮ (458)	ಮಧ್ವರಮಣವಿಠಲ	ಚಿತ್ರದುರ್ಗ
132. ನಾಗಮ್ಮ (607)	ಲಕ್ಷ್ಮೀಕಾಂತವಿಠಲ	ಚಿತ್ರದುರ್ಗ
133. ನಾಗಮ್ಮ (625)	ಶ್ರೀಲೋಲ ವಿಠಲ	ಊರುಡಿಗೆರೆ
134. ನಾಗವೇಣಿ (829)	ಸೀತಾವಲ್ಲಭವಿಠಲ	ರಾಣೆಬೆನ್ನೂರು
135. ನಾಗೂಬಾಯಿ (182)	ಗುಣಭರಿತವಿಠಲ	--
136. ನಾಗಮಣಿ (971)	ಸರ್ವನಾಮಕ ವಿಠಲ	--
137. ನಾಗರತ್ನಬಾಯಿ (692)	ಶಿರಿನಿಧಿವಿಠಲ	ಚಿತ್ರದುರ್ಗ
138. ನೀಲಾಬಾಯಿ (336)	ನೀರಜಸಂಭವನುತವಿಠಲ	ಪುಂಗನೂರು

139.	ಪದ್ದಮ್ಮ (364)	ಪದ್ಮೇಶವಿಠಲ	ಚಿತ್ರದುರ್ಗ
140.	ಪದ್ಮಮ್ಮ (1001)	ಜ್ಞಾನಾತ್ಮಕಸ್ವಾಮಿ ವಿಠಲ	--
141.	ಪದ್ಮಾವತಿ (270)	ಜಯಾರಮಣಮೋಹನವಿಠಲ	ಕಡಪ
142.	ಪದ್ಮಾವತಿ (530)	ರಾಧಾಪ್ರಿಯವಿಠಲ	ಚಿತ್ರದುರ್ಗ
143.	ಪದ್ಮಾವತಿ (474)	ಮಂಗಳನಾಮವಿಠಲ	ಬೆಂಗಳೂರು
144.	ಪದ್ಮಾವತಿ (928)	ಸನಾತನರಾಮವಿಠಲ	ಬೆಂಗಳೂರು
145.	ಪದ್ಮಾಬಾಯಿ (736)	ಶ್ರೀನಿವಸಮೂರ್ತಿವಿಠಲ	ಧಾರವಾಡ
146.	ಪದ್ಮಾವತಮ್ಮ (516)	ಯಾದವಕೃಷ್ಣವಿಠಲ	ಶೇಷಾದ್ರಿಪುರಂ, ಬೆಂಗಳೂರು
147.	ಪದ್ಮಾವತೀಬಾಯಿ (384)	ಪೂರ್ಣಸೌಖ್ಯದಾಯಕ ವಿಠಲ	ಚನ್ನಗಿರಿ
148.	ಪದ್ಮಾವತೀಬಾಯಿ (435)	ಭೂದೇವಿಪತಿ ವಿಠಲ	ಅರಸೀಕೆರೆ
149.	ಪದ್ಮಾವತೀಬಾಯಿ (488)	ಮಾರುತಿಪ್ರಿಯ ವಿಠಲ	ಚಿಕ್ಕೇರೂರು
150.	ಪದ್ಮಾವತೀಬಾಯಿ (504)	ಮಧ್ವನಾಥವಿಠಲ	--
151.	ಪದ್ಮಾವತೀಬಾಯಿ (573)	ರಮಾಲೋಲವಿಠಲ	ನಂಜನಗೂಡು
152.	ಪದ್ಮಾವತೀಬಾಯಿ (727)	ಶರ್ವಾದಿಪತಿವಂದ್ಯವಿಠಲ	ಪುಂಗನೂರು
153.	ಪದ್ಮಾವತಮ್ಮ	ಕೈವಲ್ಯಪ್ರದವಿಠಲ	ತೋಕಲಹಳ್ಳಿ
154.	ಪದ್ಮಾವತಿಬಾಯಿ	ಉದಧಿಶಯನವಿಠಲ	ಬೆಂಗಳೂರು
155.	ಪದ್ಮಾವತಮ್ಮ (175)	ಗಜೇಂದ್ರವರದವಿಠಲ	ಆನೆಗೋಡು
156.	ಪದ್ಮಾವತಮ್ಮ (193)	ಚಿದಾನಂದಸ್ವಾಮಿವಿಠಲ	ಬಸವನಗುಡಿ, ಬೆಂಗಳೂರು
157.	ಪುಟ್ಟಮ್ಮ (853)	ಸುಧಾಪ್ರಿಯವಿಠಲ	ಕೊಗ್ಗನೂರು
158.	ಪುಟ್ಟಮ್ಮ (378)	ಪ್ರಣತಾರ್ಥಿಹರವಿಠಲ	ಅರಸೀಕೆರೆ
159.	ಪುಟ್ಟಕಾಳಮ್ಮ (332)	ನಿತ್ಯತೃಪ್ತವಿಠಲ	ಅರಸೀಕೆರೆ
160.	ಫಣಿರಾಜರತ್ನ (422)	ಫಣಿರಾಜಶಯನವಿಠಲ	ಹಿರಿಯೂರು
161.	ಬಾಳವ್ವ (876)	ಸುಮನಸಾರ್ಚಿತ ವಿಠಲ	ಕದರಮಂಡಲಗಿ
162.	ಭವಾನಿ (351)	ನಿರವದ್ಯವಿಠಲ	ಬೆಂಗಳೂರು
163.	ಭವಾನಮ್ಮ (785)	ಸೀತಾಪತಿವಿಠಲ	ಹರಿಹರ
164.	ಭಾಗವ್ವ (290)	ದಶರಥರಾಮವಿಠಲ	ಕಮಕೇರಿ
165.	ಭಾಗಮ್ಮ	ಲೀಲಾಮೂರ್ತಿವಿಠಲ	ಕ್ಲೋಸ್‌ಪೇಟೆ/ರಾಮನಗರ
166.	ಭಾಗ್ಯ (747)	ಶ್ರೀಕಾಂತಪೂರ್ಣವಿಠಲ	ಆನೆಗೋಡು
167.	ಭಾಗ್ಯಲಕ್ಷ್ಮಮ್ಮ (441)	ಭುವನೇಶವಿಠಲ	--
168.	ಭಾಗ್ಯಲಕ್ಷ್ಮಮ್ಮ (307)	ದೇವತಾಂತರ್ಗತವಿಠಲ	ಬೆಂಗಳೂರು
169.	ಭಾರತೀದೇವಿ (217)	ಜಯಾಲೋಲವಿಠಲ	ನಂಜನಗೂಡು
170.	ಭಾರತೀಬಾಯಿ (334)	ನಿರ್ವಾಣದಾಯಕ ವಿಠಲ	ಕದರಮಂಡಲಗಿ
171.	ಭಾರತೀಬಾಯಿ (685)	ಶ್ರೀಪತಿಮೋಹನವಿಠಲ	ಬೆಂಗಳೂರು
172.	ಭಾರ್ಗವಿಬಾಯಿ (502)	ಮಾರಮಣದೇವವಿಠಲ	--
173.	ಭಾಗೀರಥಿಬಾಯಿ (168)	ಗುಣನಿಲಯವಿಠಲ	ಬಸವನಗುಡಿ, ಬೆಂಗಳೂರು

174.	ಭಾಗೀರಥಮ್ಮ (226)	ಜಗಸ್ವಾಮಿ ವಿಠಲ	ಬಸವನಗುಡಿ, ಬೆಂಗಳೂರು
175.	ಭಾಗೀರಥೀಬಾಯಿ (302)	ದಯಾಪರಮೂರ್ತಿವಿಠಲ	ಕದರಮಂಡಲಗಿ
176.	ಭಾಗೀರಥಮ್ಮ (818)	ಸನ್ಮಂಗಳಾತ್ಮಕವಿಠಲ	ಸಿದ್ಧಿಕಟ್ಟೆ, ಬೆಂಗಳೂರು
177.	ಭಾರತಮ್ಮ (814)	ಸರ್ವಾಧಾರವಿಠಲ	ವಿ.ವಿ.ಪುರಂ, ಬೆಂಗಳೂರು
178.	ಭಾಗೀರಥಮ್ಮ (370)	ಪ್ರಾಣಮಯಪ್ರದ್ಯುಮ್ನವಿಠಲ	ಬೆಂಗಳೂರು
179.	ಭಾಗೀರಥಿ (473)	ಮಂಗಳಕರವಿಠಲ	ಬೆಂಗಳೂರು
180.	ಭಾಗೀರಥಿಬಾಯಿ (968)	ಸರ್ವೇಶಪೂರ್ಣವಿಠಲ	--
181.	ಭಾಗೀರಥಮ್ಮ (942)	ಸುರಮುನಿನಾಥಪ್ರಿಯವಿಠಲ	ರಾಮನಗರ
182.	ಭಾಗೀರಥಮ್ಮ (949)	ಸ್ವಾಮಿರಾಯವಿಠಲ	ಮುಂಬಯಿ
183.	ಭಾಗೀರಥೀಬಾಯಿ (462)	ಸುಧಾಪ್ರಿಯವಿಠಲ	--
184.	ಭೀಮಕ್ಕ (424)	ಭಾವಜಪಿತ ವಿಠಲ	ಇರಕಸಂದ್ರ
185.	ಭೀಮವ್ವ (875)	ಸುರಮುನಿನಾಥವಿಠಲ	ಕದರಮಂಡಲಗಿ
186.	ಮಧುರಾಬಾಯಿ	ಆನಂದಪುರುಷವಿಠಲ	--
187.	ಮಣಿಬಾಯಿ	ಕಮಲಾಲೋಲವಿಠಲ	ಕಡಪ
188.	ಮಾಲಕ್ಷಮ್ಮ	ಕರಿಗಿರಿವಾಸವಿಠಲ	ಚಿತ್ರದುರ್ಗ
189.	ಮಹಾಲಕ್ಷ್ಮಮ್ಮ	ಅಮರೇಂದ್ರವಿಠಲ	ಹಾಸನ
190.	ಮಾಲತಿ (440)	ಬ್ರಹ್ಮಣ್ಯದೇವ ವಿಠಲ	--
191.	ಯಮುನಾಬಾಯಿ (738)	ಶ್ರೀಮಾಧವಮೋಹನವಿಠಲ	ಮದರಾಸು
192.	ಯಮುನಾಬಾಯಿ (372)	ಪ್ರಾಣಕಾಂತವಿಠಲ	ಬಳ್ಳಾರಿ
193.	ಯಮುನಾಬಾಯಿ (537)	ರಮಾಪತಿವಿಠಲ	ಬಾಗೇನಹಳ್ಳಿ
194.	ಯಮುನಾಬಾಯಿ (306)	ದೋಷರಹಿತ ವಿಠಲ	ಬೆಂಗಳೂರು
195.	ಯಶೋದ (271)	ಜಯಪದ್ಮಾಕ್ಷವಿಠಲ	ಕಡಪ
196.	ಯಂಕಮ್ಮ (429)	ಭಕ್ತಿಪ್ರಿಯವಿಠಲ	ಚಿತ್ರದುರ್ಗ
197.	ಯಂಕಮ್ಮ (802)	ಸಕಲಸುಖಪೂರ್ಣವಿಠಲ	ಬೆಂಗಳೂರು
198.	ಯಂಕಮ್ಮ (310)	ದೇವಾಶ್ರಯವಿಠಲ	--
199.	ರಖಮಾ	ಆನಂದನಿಧಿವಿಠಲ	ಬಸವನಗುಡಿ, ಬೆಂಗಳೂರು
200.	ರಖಮಾಬಾಯಿ (268)	ಜಯರಘುರಾಮಚಂದ್ರವಿಠಲ	--
201.	ರಮಾಬಾಯಿ	ಆದಿಕಾರಣಮೂರ್ತಿವಿಠಲ	ಕಾನಕಾನಹಳ್ಳಿ
202.	ರಮಾಬಾಯಿ	ಕಲ್ಯಾಣಗುಣಪೂರ್ಣವಿಠಲ	ಬೆಂಗಳೂರು
203.	ರಮಾಬಾಯಿ	ವೇದಸುವೇದ್ಯ ವಿಠಲ	ರಾಣೇಬೆನ್ನೂರು
204.	ರಮಾಬಾಯಿ	ಪರವಾಸುದೇವವಿಠಲ	--
205.	ರಖಮಾಬಾಯಿ	ಕೈವಲ್ಯಪತಿವಿಠಲ	ಬೆಂಗಳೂರು
206.	ರಮಾಬಾಯಿ (389)	ಪರವಾಸುದೇವವಿಠಲ	ರಾಣೆಬೆನ್ನೂರು
207.	ರಮಾಬಾಯಿ (947)	ಸರ್ವಜ್ಞಮೂರ್ತಿ ವಿಠಲ	--
208.	ರತ್ನಮ್ಮ (973)	ಸದಾನಂದಕೃಷ್ಣವಿಠಲ	--
209.	ರತ್ನಮ್ಮ (757)	ಶ್ರೀಕಾಂತಮೂರ್ತಿವಿಠಲ	ಕೊಗ್ಗನೂರು

210.	ರತ್ನಮ್ಮ (760)	ಶ್ರೀಕಾಂತಸ್ವಾಮಿ ವಿಠಲ	--
211.	ರತ್ನಾಬಾಯಿ (233)	ಜಯಲಕ್ಷ್ಮೀಶ ವಿಠಲ	--
212.	ರತ್ನ (411)	ಪರಮಾತ್ಮಪೂರ್ಣವಿಠಲ	--
213.	ರತ್ನಾಬಾಯಿ (386)	ಪುರುಷೋತ್ತಮಕೃಷ್ಣವಿಠಲ	--
214.	ರಾಘಮ್ಮ	ಆದಿದೇವವಿಠಲ	ಪ್ರೊದಟೂರು
215.	ರಾಜಮ್ಮ	ಅನಾದಿಪುರುಷವಿಠಲ	ನರಸಪ್ಪನಪಾಳ್ಯ
216.	ರಾಜಮ್ಮ	ಕಮಲಾರಮಣವಿಠಲ	ಹಾಸನ
217.	ರಾಜಮ್ಮ (709)	ಶ್ರೀಜಯನಾಥವಿಠಲ	ನಂಜನಗೂಡು
218.	ರಾಜಮ್ಮ (692)	ಶಿರಿಮಾಧವವಿಠಲ	ಮೈಸೂರು
219.	ರಾಜೀಬಾಯಿ (587)	ಲಕ್ಷ್ಮೀನಾಥವಿಠಲ	ಬಸವನಗುಡಿ, ಬೆಂಗಳೂರು
220.	ರಮಾಬಾಯಿ (541)	ರಮಾಮನೋಹರವಿಠಲ	ರಾಣೇಬೆನ್ನೂರು
221.	ರಾಜಮ್ಮ (618)	ವೈಕುಂಠವಾಸವಿಠಲ	ಚಿತ್ರದುರ್ಗ
222.	ರಾಧಾಬಾಯಿ (437)	ವಿಶ್ವೇಶಪೂರ್ಣವಿಠಲ	ಅರಸೀಕೆರೆ
223.	ರಾಧಾಬಾಯಿ (804)	ಸುಜ್ಞಾನಮೂರುತಿವಿಠಲ	ಬೆಂಗಳೂರು
224.	ರಾಧಾಬಾಯಿ	ಕಾಮಿತವರದವಿಠಲ	ಬೆಂಗಳೂರು
225.	ರಾಧಾಬಾಯಿ	ಜಯಹರಿವಿಠಲ	--
226.	ರಿಂದಮ್ಮ (177)	ಗೋಪಾಲಸ್ವಾಮಿವಿಠಲ	--
227.	ರಿಂದವ್ವ (686)	ಶಿರಿಇಂದಿರಾಪತಿವಿಠಲ	ಕಮಕೇರಿ
228.	ರುಕ್ಮಿಣಮ್ಮ (718)	ಶುಭಗುಣಸಾಂದ್ರ ವಿಠಲ	ತಾಯಲೂರು
229.	ರುಕ್ಮಿಣೀಬಾಯಿ (369)	ಫಣಿರಾಜಶಯನವಿಠಲ	ಬೆಂಗಳೂರು
230.	ರುಕ್ಮಿಣೀಬಾಯಿ (538)	ರಮಾರಮಣಮೋಹನವಿಠಲ	--
231.	ರಂಗಮ್ಮ (881)	ಸುರವರಪೂಜಿತರಾಮವಿಠಲ	ಬಳೇಪೇಟೆ, ಬೆಂಗಳೂರು
232.	ರಂಗಮ್ಮ (280)	ಜಲಜಾಕ್ಷರಾಮವಿಠಲ	ರಾಮೋಹಳ್ಳಿ
233.	ರಂಗೂಬಾಯಿ (732)	ಶ್ರೀಮಾರುತೀಶವಿಠಲ	ಕದರಮಂಡಲಗಿ
234.	ರಂಗೂಬಾಯಿ (346)	ನಿರಾಮಯವಿಠಲ	ರಾಣೆಬೆನ್ನೂರು
235.	ರಂಗನಾಯಕಮ್ಮ (291)	ದಯಾಪೂರ್ಣವಿಠಲ	ಬೆಂಗಳೂರು
236.	ಲಲಿತಮ್ಮ (443)	ಭಯಪರಿಹಾರಕ ವಿಠಲ	ಬೆಂಗಳೂರು
237.	ಲಲಿತಮ್ಮ (495)	ಮಂಗಳಮೂರ್ತಿವಿಹಂಗಗಮನ ವಿಠಲ	ದಾವಣಗೆರೆ
238.	ಲಲಿತಾಬಾಯಿ (715)	ಶ್ರೀಇಂದಿರಾಲೋಲವಿಠಲ	ಬೆಂಗಳೂರು
239.	ಲಕ್ಷ್ಮಮ್ಮ (585)	ಲಕ್ಷ್ಮೀನರಸಿಂಹವಿಠಲ	ಹರಿಹರ
240.	ಲಕ್ಷ್ಮಮ್ಮ (517)	ಯಜ್ಞೇಶವಿಠಲ	--
241.	ಲಕ್ಷ್ಮಮ್ಮ (108)	ಕರುಣಾಮಯವಿಠಲ	ಹರಿಹರ
242.	ಲಕ್ಷ್ಮಮ್ಮ ಬಾಯಿ (29)	ಆದಿಪುರುಷರಾಮವಿಠಲ	ಶೀಗೇನಹಳ್ಳಿ
243.	ಲಕ್ಷ್ಮಮ್ಮ (705)	ಶ್ರೀನಿಕೇತನವಿಠಲ	ಅರಸೀಕೆರೆ
244.	ಲಕ್ಷ್ಮಮ್ಮ (682)	ಶಿರಿಮಾಧವವಿಠಲ	ಹರ್ತಿ ಮಾಗಡಿ ತಾ॥

245.	ಲಕ್ಷ್ಮಮ್ಮ (681)	ಶಿರಿಕೃಪಾನಿಧಿರಾಮವಿಠಲ	ಶೇಷಾದ್ರಿಪುರ, ಬೆಂಗಳೂರು
246.	ಲಕ್ಷ್ಮಮ್ಮ (806)	ಸಚ್ಚಿದಾನಂದಸ್ವಾಮಿವಿಠಲ	ಬೆಂಗಳೂರು
247.	ಲಕ್ಷ್ಮಮ್ಮ (869)	ಸ್ವಾಮಿಗುರುವಿಠಲ	ಕಲ್ಕೆರೆ
248.	ಲಕ್ಷ್ಮಮ್ಮ (263)	ಜಯನಾರಾಯಣವಿಠಲ	ಬಾಗಲೂರು
249.	ಲಕ್ಷ್ಮೀ (200)	ಜಯಗೋಪಾಲವಿಠಲ	ಬೆಂಗಳೂರು
250.	ಲಕ್ಷ್ಮೀಬಾಯಿ (223)	ಜಗತ್ಕಾರಣವಿಠಲ	ಸುಬ್ಬನಹಳ್ಳಿ
251.	ಲಕ್ಷ್ಮೀಬಾಯಿ (363)	ಪಂಢರಿನಾಥವಿಠಲ	ಚಿತ್ರದುರ್ಗ
252.	ಲಕ್ಷ್ಮೀದೇವಮ್ಮ (373)	ಪ್ರಾಣವಲ್ಲಭವಿಠಲ	ಶೇಷಾದ್ರಿಪುರ, ಬೆಂಗಳೂರು
253.	ಲಕ್ಷ್ಮೀಬಾಯಿ (353)	ಸಿರಿನಾರಾಯಣವಿಠಲ	ಬೆಂಗಳೂರು
254.	ಲಕ್ಷ್ಮೀಬಾಯಿ (856)	ಸುರರಾಜವರದ ವಿಠಲ	ಹಾಸನ
255.	ಲಕ್ಷ್ಮೀಬಾಯಿ (871)	ಸರ್ವನಾಮಕವಿಠಲ	ಹಗಡೆ
256.	ಲಕ್ಷ್ಮೀಬಾಯಿ (879)	ಸರ್ವೇಷ್ಟಪ್ರದವಿಠಲ	ರಾಣೇಬೆನ್ನೂರು
257.	ಲೀಲಾಬಾಯಿ (958)	ಸುಖಮಯಶ್ರೀಶವಿಠಲ	ರಾಣೇಬೆನ್ನೂರು
258.	ವತ್ಸಲ (954)	ಸರ್ವನಿಯಾಮಕ ವಿಠಲ	--
259.	ವನಮಾಲಿ	ಗಜವರದವಿಠಲ	ಕದರುಮಂಡಲಗಿ
260.	ವಿಜಯಮ್ಮ (916)	ಸಚ್ಚಿದಾನಂದರೂಪವಿಠಲ	--
261.	ವಿಜಯಬಾಯಿ (123)	ಕಮಲನಾಥಸ್ವಾಮಿ ವಿಠಲ	--
262.	ವಿನೋದಾಬಾಯಿ (1004)	ಜ್ಞಾನಾತ್ಮಕ ವಿಠಲ	--
263.	ವಿಮಲ (597)	ಲಕ್ಷ್ಮೀಪತಿವರದ ವಿಠಲ	--
264.	ವೇಣೂಬಾಯಿ (704)	ಶಿರಿಮುಕುಂದವಿಠಲ	ಬೆಂಗಳೂರು
265.	ವೇಣುಬಾಯಿ (211)	ಜಗದೇಕನಾಥವಿಠಲ	ಶಿಡ್ಲಘಟ್ಟ
266.	ವೇಣಮ್ಮ (58)	ಇಂದಿರಾವಲ್ಲಭವಿಠಲ	ಪಾಂಡವಪುರ
267.	ವೆಂಕಮ್ಮ (59)	ಇಷ್ಟಾರ್ಥಪ್ರದ ವಿಠಲ	ಅರಸೀಕೆರೆ
268.	ವೆಂಕಮ್ಮ ರಾಣ್ಯದ (795)	ಸದಮಲಾನಂದವಿಠಲ	ಚಳ್ಳಕೆರೆ
269.	ವೆಂಕಮ್ಮ (991)	ಹನುಮೇಶರಾಮವಿಠಲ	--
270.	ವೆಂಕಮ್ಮ (405)	ಪೂರ್ಣಜ್ಞಾನವಿಠಲ	ಬೆಂಗಳೂರು
271.	ವೆಂಕಮ್ಮ (515)	ಯಾದವೇಂದ್ರವಿಠಲ	ಹರಿಹರ
272.	ವೆಂಕೂಬಾಯಿ (808)	ಸೀತಾಪತಿರಾಮವಿಠಲ	ಹುಣಸೂರು
273.	ವೆಂಕೂಬಾಯಿ (479)	ಮನೋಮಯವಿಠಲ	ಕದರಮಂಡಲಗಿ
274.	ವೆಂಕೂಬಾಯಿ/ ವೇಣೂಬಾಯಿ (844)	ಸಕಲಸುಖಭರಿತವಿಠಲ	ಬೆಂಗಳೂರು
275.	ವೆಂಕೂಬಾಯಿ (644)	ವಿಜಯಮಿತ್ರವಿಠಲ	ಕದರಮಂಡಲಗಿ
276.	ವೆಂಕೂಬಾಯಿ (674)	ಶಿರಿರಾಮವಿಠಲ	ಬೆಂಗಳೂರು
277.	ವೆಂಕಟಲಕ್ಷ್ಮಮ್ಮ (377)	ಪನ್ನಗಾಚಲನಿವಾಸವಿಠಲ	ಅರಸೀಕೆರೆ
278.	ವೆಂಕಟಲಕ್ಷ್ಮಮ್ಮ (568)	ರಘುನಂದನರಾಮವಿಠಲ	--
279.	ವೆಂಕಟಲಕ್ಷ್ಮಮ್ಮ (660)	ವೆಂಕಟಾದ್ರಿವಾಸವಿಠಲ	ಕ್ಲೋಸ್‌ಪೇಟೆ/ರಾಮನಗರ

280.	ಶಕುಂತಲಾ (164)	ಗಾನಪ್ರಿಯವಿಠಲ	ರಾಣೇಬೆನ್ನೂರು
281.	ಶಕುಂತಲಾಬಾಯಿ (851)	ಸುಖನಿಧಿವಿಠಲ	ಬೆಂಗಳೂರು
282.	ಶಾರದಾಬಾಯಿ (618)	ವ್ಯಾಸಮುನಿವರದವಿಠಲ	ಮೈಸೂರು
283.	ಶಾರದಮ್ಮ (930)	ಸುರಾಗ್ರಗಣ್ಯವಿಠಲ	--
284.	ಶಾರದಮ್ಮ (934)	ಸುರವರೇಣ್ಯವಿಠಲ	--
285.	ಶೇಷಮ್ಮ (420)	ಪರಮಪುರುಷಕೃಷ್ಣವಿಠಲ	ಬೆಂಗಳೂರು
286.	ಶೇಷಮ್ಮ (508)	ಮಂಗಳಮೂರ್ತಿಮೋಹನವಿಠಲ	--
287.	ಶೇಷಮ್ಮ (324)	ನಾಗಶಯನವಿಠಲ	ಕಮಕೇರಿ
288.	ಶಾರದಾಬಾಯಿ (92)	ಕೃಷ್ಣಾನಂದವಿಠಲ	ಬೆಂಗಳೂರು
289.	ಶೇಷಮ್ಮ (150)	ಗಜವರದವಿಠಲ	ಚಿತ್ರದುರ್ಗ
290.	ಶೇಷಮ್ಮ (630)	ವೆಂಕಟಗಿರಿನಾಥವಿಠಲ	ಬೆಂಗಳೂರು
291.	ಶಾಂತಮ್ಮ (237)	ಜಯಭಾರತೀರಮಣವಿಠಲ	ಶ್ರೀರಂಗ
292.	ಶಾಂತಿಬಾಯಿ (40)	ಆನಂದಪ್ರದವಿಠಲ	--
293.	ಶಾಂತಿಬಾಯಿ (47)	ಆನಂದನಿಧಿವಿಠಲ	--
294.	ಸರೋಜ (711)	ಶಾಂತಿಪ್ರಿಯವಿಠಲ	ನಂಜನಗೂಡು
295.	ಸರೋಜಾಬಾಯಿ (141)	ಕಲ್ಯಾಣದಾಯಕವಿಠಲ	ಜಯಸಿಂಗಪುರ
296.	ಸರಸ್ವತಿಬಾಯಿ (105)	ಕಮಲಾಕಾಂತರಾಮವಿಠಲ	ಚೌಟಕುಂಟಪಲ್ಲಿ
297.	ಸಣ್ಣಮ್ಮ (98)	ಕೃಷ್ಣಮೂರ್ತಿವಿಠಲ	ಅರಸೀಕೆರೆ
298.	ಸರೋಜಮ್ಮ (348)	ನಿತ್ಯಾನಂದಮೂರ್ತಿವಿಠಲ	ಚಾಮರಾಜಪೇಟೆ, ಬೆಂಗಳೂರು
299.	ಸರೋಜಾಬಾಯಿ (800)	ಸುರನಾಥಮೋಹನವಿಠಲ	ಹಾಸನ
300.	ಸರೋಜಾಬಾಯಿ (843)	ಸುಖಸಾಂದ್ರವಿಠಲ	ಬೆಂಗಳೂರು
301.	ಸರಸ್ವತೀಬಾಯಿ (199)	ಸರಸಿಜಾಕ್ಷಶ್ರೀನಿವಾಸ ವಿಠಲ	ಪುಂಗನೂರು
302.	ಸರಸ್ವತೀಬಾಯಿ (1000)	ಜ್ಞಾನನಿಧಿ ವಿಠಲ	ವಿ.ವಿ.ಪುರಂ, ಬೆಂಗಳೂರು
303.	ಸತ್ಯಭಾಮ (882)	ಸನಕಾದಿವಂದ್ಯ ವಿಠಲ	ಮದರಾಸು
304.	ಸರಸ್ವತೀಬಾಯಿ (477)	ಮಾರಜನಕವಿಠಲ	ತರೀಕೆರೆ
305.	ಸರಸಮ್ಮ (533)	ರಮಾವಲ್ಲಭವಿಠಲ	ಚಿತ್ರದುರ್ಗ
306.	ಸಾಕಮ್ಮ (127)	ಕರಿಗಿರೀಶವಿಠಲ	ಚಿತ್ರದುರ್ಗ
307.	ಸಾವಿತ್ರಮ್ಮ (1)	ಅಕ್ರೂರವರದವಿಠಲ	--
308.	ಸಾವಿತ್ರಮ್ಮ (198)	ಗುರುವೆಂಕಟೇಶವಿಠಲ	ಸವಣೂರು
309.	ಸಾವಿತ್ರಮ್ಮ (374)	ಪೂತಾತ್ಮವಿಠಲ	ಸಿದ್ಧಿಕಟ್ಟೆ
310.	ಸಾವಿತ್ರಿ (403)	ಪಾಂಡುರಂಗಪರಿಪೂರ್ಣವಿಠಲ	--
311.	ಸಾವಿತ್ರಮ್ಮ (471)	ಮಾರಮಣವಿಠಲ	ಚಿತ್ರದುರ್ಗ
312.	ಸಾವಿತ್ರಮ್ಮ (413)	ಪರಮಕೃಪಾನಿಧಿ	--
313.	ಸಾವಿತ್ರಮ್ಮ (505)	ಮುಕ್ತಿದಾಯಕಮೋಹನವಿಠಲ	2-11-1939
314.	ಸಾವಿತ್ರಮ್ಮ (602)	ಲೋಕಪ್ರಿಯರಾಮವಿಠಲ	--

315.	ಸಾವಿತ್ರಮ್ಮ (623)	ವಿಶ್ವೇಶವಿಠಲ	ಶೇಷಾದ್ರಿಪುರ, ಬೆಂಗಳೂರು
316.	ಸಾವಿತ್ರಮ್ಮ (631)	ವಿಶ್ವಾಧಾರವಿಠಲ	ಹರಪನಹಳ್ಳಿ
317.	ಸೀತಮ್ಮ (356)	ಪರಮಾನಂದವಿಠಲ	ಅರಸೀಕೆರೆ
318.	ಸೀತಮ್ಮ (596)	ಲಕ್ಷ್ಮೀಶಮೋಹನವಿಠಲ	ಚಿತ್ರದುರ್ಗ
319.	ಸೀತಮ್ಮ (621)	ವಟಪತ್ರಶಯನವಿಠಲ	ಬೆಂಗಳೂರು
320.	ಸೀತಮ್ಮ (778)	ಶ್ರೀಮನೋರಮವಿಠಲ	--
321.	ಸೀತಮ್ಮ (55)	ಇಂದಿರೇಶವಿಠಲ	ಸಿದ್ಧಿಕಟ್ಟೆ, ಬೆಂಗಳೂರು
322.	ಸೀತಮ್ಮ (376)	ಪರಮಪವಿತ್ರವಿಠಲ	ಅರಸೀಕೆರೆ
323.	ಸೀತಮ್ಮ (402)	ಪರಮಪಾವನಸ್ವಾಮಿವಿಠಲ	ಆನೆಗೋಡು
324.	ಸೀತಾಬಾಯಿ (433)	ಭೂಕಾಂತವಿಠಲ	ಹಾಸನ
325.	ಸೀತಾಬಾಯಿ (140)	ಕಮಲಾಪತಿವಾಸುದೇವವಿಠಲ	--
326.	ಸೀತಾಬಾಯಿ (592)	ಲಕ್ಷ್ಮೀಶವಿಠಲ	ಕದರಮಂಡಲಗಿ
327.	ಸೀತಾಬಾಯಿ (978)	ಸುಂದರಾಕಾರವಿಠಲ	--
328.	ಸೀತಾಬಾಯಿ (358)	ಪಾರ್ಥಸಾರಥಿವಿಠಲ	ಚಿತ್ರದುರ್ಗ
329.	ಸೀತಾಬಾಯಿ (251)	ಜಯಜಾನಕೀಕಾಂತವಿಠಲ	--
330.	ಸೀತಾಬಾಯಿ (335)	ನಿತ್ಯಸುಧಾಪ್ರಿಯವಿಠಲ	ಕದರಮಂಡಲಗಿ
331.	ಸುಗುಣಾಬಾಯಿ (101)	ಕರಿರಾಜವರದವಿಠಲ	ಬೆಂಗಳೂರು/ಚನ್ನಗಿರಿ
332.	ಸುಬ್ಬಮ್ಮ (22)	ಅಮರೇಂದ್ರವಂದ್ಯವಿಠಲ	--
333.	ಸುಬ್ಬಮ್ಮ/ಬೇಬಮ್ಮ (579)	ಲಕುಮೀಶವಿಠಲ	ಚಿತ್ರದುರ್ಗ
334.	ಸುಬ್ಬಮ್ಮ (400)	ಪರಮಪಾವನಮೂರ್ತಿವಿಠಲ	ಆನೆಗೋಡು
335.	ಸುಬ್ಬಮ್ಮ (583)	ಲಕ್ಷ್ಮೀಪ್ರಿಯವಿಠಲ	ಶಿವಮೊಗ್ಗ
336.	ಸುಬ್ಬಮ್ಮ (584)	ಲಕ್ಷ್ಮೀಪ್ರಿಯವಿಠಲ	--
337.	ಸುಬ್ಬಮ್ಮ (769)	ಶೇಷಶಯನವೆಂಕಟೇಶವಿಠಲ	ಜಗಳೂರು
338.	ಸುಬ್ಬಮ್ಮ (791)	ಸುಖಪೂರ್ಣವಿಠಲ	--
339.	ಸುಭದ್ರಾಬಾಯಿ (626)	ತೀರಗೋಚರವಿಠಲ	ಸಿದ್ಧಿಕಟ್ಟೆ, ಬೆಂಗಳೂರು
340.	ಸುಬ್ಬಮ್ಮ (791)	ಸುಖಪೂರ್ಣವಿಠಲ	--
341.	ಸುಭದ್ರಾಬಾಯಿ (841)	ಸುರರಾಜವಿಠಲ	ಬೆಂಗಳೂರು
342.	ಸುಭದ್ರಾಬಾಯಿ (868)	ಸನಾತನಪುರುಷವಿಠಲ	--
343.	ಸುಶೀಲ (745)	ಶ್ರೀಪತಿಕೃಷ್ಣವಿಠಲ	--
344.	ಸುಶೀಲಬಾಯಿ (95)	ಕಾರುಣ್ಯಮೂರ್ತಿವಿಠಲ	ಶೇಷಾದ್ರಿಪುರ, ಬೆಂಗಳೂರು
345.	ಸೇತೂಬಾಯಿ (653)	ವಾಸುದೇವಾನಂದವಿಠಲ	ಕಡಪ
346.	ಸೇತೂಬಾಯಿ (992)	ಕ್ಷೇಮಕರವಿಠಲ	ಶೇಷಾದ್ರಿಪುರ, ಬೆಂಗಳೂರು
347.	ಸೇತೂಬಾಯಿ	ಮಾಧವಮೋಹನವಿಠಲ	ಬೆಂಗಳೂರು
348.	ಸೇತೂಬಾಯಿ (483)	ಮುಕ್ತೇಶವಿಠಲ	ಕದರಮಂಡಲಗಿ
349.	ಸೇತೂಬಾಯಿ (926)	ಸುಗುಣಮಹೋದಧಿವಿಠಲ	--
350.	ಸೇತೂಬಾಯಿ (117)	ಕಮಲೇಶರಾಮವಿಠಲ	ಈರೋಡ್

351.	ಸೇತೂಬಾಯಿ (199)	ಜಯರಾಮವಿಠಲ	ಬೆಂಗಳೂರು
352.	ಸೇತೂಬಾಯಿ (286)	ತಂದೆರಾಘವೇಂದ್ರಗುರುವಿಠಲ	--
353.	ಸೇತೂಬಾಯಿ (341)	ನಾರಾಯಣವಾಸುದೇವವಿಠಲ	--
354.	ಸೋನಮ್ಮ (156)	ಗುರುಮಾಧವ ವಿಠಲ	ನಂಜನಗೂಡು
355.	ಸೋನೂಬಾಯಿ (1002)	ಜ್ಞಾನಪ್ರದ ವಿಠಲ	--
356.	ಸೋನಾಬಾಯಿ (482)	ಮುಕುಂದಮುರಮರ್ದನ ವಿಠಲ	ಕದರಮಂಡಲಗಿ
357.	ಸೋನೂಬಾಯಿ/ ಸೇತೂಬಾಯಿ (901)	ಸೀತಾಕಾಂತ ಮನೋಹರ ವಿಠಲ	ಪಲ್ಲಡವಪುರ
358.	ಸಿಂಧೂಬಾಯಿ (1001)	ಜ್ಞಾನದಾಯಕ ಸ್ವಾಮಿ ವಿಠಲ	ರಾಣೇಬೆನ್ನೂರು
359.	ಸುಂದರಮ್ಮ (112)	ಕಮಲಾನಂದಪ್ರದವಿಠಲ	ಕೊಲ್ಲಾಪುರ
360.	ಸುಂದರಮ್ಮ (124)	ಕಮಲಾನಂದಪ್ರದವಿಠಲ	--
361.	ಸುಂದರಮ್ಮ (426)	ಭಾಗವತಜನಪ್ರಿಯವಿಠಲ	ಅರಕೆರೆ
362.	ಸುಂದರಮ್ಮ (462)	ಮಂಗಳಾತ್ಮಕರಾಮವಿಠಲ	ಬೆಂಗಳೂರು
363.	ಸುಂದರಮ್ಮ (497)	ಮಾಧವನರಹರಿ ವಿಠಲ	--
364.	ಸುಂದರಮ್ಮ (624)	ವೆಂಕಟಾಚಲಸ್ವಾಮಿ ವಿಠಲ	ಚಿತ್ರದುರ್ಗ
365.	ಸುಂದರಮ್ಮ (735)	ಶುಭಫಲದಾಯಕ ವಿಠಲ	--
366.	ಸುಂದರಮ್ಮ (786)	ಸುರೇಶವಿಠಲ	ಹರಿಹರ
367.	ಸುಂದರಮ್ಮ (865)	ಸತ್ಯಪೂರ್ಣವಿಠಲ	ಚಾಮರಾಜಪೇಟೆ, ಬೆಂಗಳೂರು
368.	ಸುಂದರಮ್ಮ (903)	ಸುಜ್ಞಾನನಿಧಿ ವಿಠಲ	--
369.	ಸುಂದರಾಬಾಯಿ (133)	ಕಮಲಾಪ್ರಿಯವಿಠಲ	ಬಸವನಗುಡಿ, ಬೆಂಗಳೂರು
370.	ಸುಂದರಾಬಾಯಿ (963)	ಸುಧಾರಮಣವಿಠಲ	ಕಡಪ
371.	ಸುಂದರಾಬಾಯಿ (997)	ಜ್ಞಾನಪೂರ್ಣವಿಠಲ	ಬೆಂಗಳೂರು
372.	ಸುಂದರಾಬಾಯಿ (371)	ಪರಾತ್ಪರವಿಠಲ	ವಿವಿಪುರ, ಬೆಂಗಳೂರು
373.	ಸುಂದರಾಬಾಯಿ	ಪ್ರಕಾಶಮಯವಿಠಲ	--
374.	ಸುಂದರಾಬಾಯಿ (465)	ಮಧುಸೂದನಮೋಹನವಿಠಲ	ಸಿದ್ಧೀಕಟ್ಟೆ, ಬೆಂಗಳೂರು
375.	ಸುಂದರಾಬಾಯಿ (665)	ವಾಸುದೇವಾನಂತವಿಠಲ	ಕ್ಲೋಸ್‌ಪೇಟೆ (ರಾಮನಗರ)
376.	ಸುಂದರಾಬಾಯಿ (900)	ಸುರವರಪೂಜಿತ ವಿಠಲ	--
377.	ಹುಚ್ಚವ್ವ (ಕೋದಂಡಿ)	ಜಯಪರಾತ್ಪರವಿಠಲ	ಬಸವನಗುಡಿ, ಬೆಂಗಳೂರು
378.	ಹೇಮಾವತಿಬಾಯಿ (739)	ಶ್ರೀರಮಾಮನೋವಲ್ಲಭವಿಠಲ	ಈರೋಡು

ತಂದೆ ಮುದ್ದು ಮೋಹನದಾಸರಿಂದ ಅಂಕಿತ ಪಡೆದು ಹೆಸರು ತಿಳಿಯದ ದಾಸ ಮಹಿಳೆಯರು:

ಅಂಕಿತ	ಪಡೆದವರ ವಿವರ	ಸ್ಥಳ
1. ಅನಂತಶಯನ ವಿಠಲ (8)	ಪದ್ಮನಾಭದಾಸರ ಪತ್ನಿ	ಪಲ್ಲಡಂ
2. ಅನಂತಾನಂತ ವಿಠಲ (12)	ದೀಪದ ನರಸಪ್ಪನವರ ಪತ್ನಿ	ಬೆಂಗಳೂರು
3. ಅಭಯಪ್ರದ ವಿಠಲ (16)	ಕೃಷ್ಣಸ್ವಾಮಿಯವರ ಪತ್ನಿ	--
4. ಆನಂದವಿಠಲ	ಲಕ್ಷ್ಮಣರಾಯರ ಪತ್ನಿ	ಚಿತ್ರದುರ್ಗ
5. ಕಾಮಿತಾರ್ಥಪ್ರದ ವಿಠಲ (78)	ವೆಂಕಣ್ಣನ ಪತ್ನಿ	ಬೆಂಗಳೂರು
6. ಕಮಲಾಕ್ಷವಿಠಲ (83)	ನಾರಾಯಣರಾಯರ ಪತ್ನಿ	ಚಿತ್ರದುರ್ಗ
7. ಕಮಲಾಕಾಂತವಿಠಲ (82)	ವರಗುರುಗೋಪಾಲರ ಪತ್ನಿ	ಬೆಂಗಳೂರು/ಹಾಸನ
8. ಕಮಲಾನಾಥವಿಠಲ	ಪುಟ್ಟಾಚಾರ್ಯರಮಗಳು	ಬೆಂಗಳೂರು/ಚಿತ್ರದುರ್ಗ
9. ಕರುಣಾಪಯೋನಿಧಿ ವಿಠಲ (77)	ತುಳಸಮ್ಮನ ಅಕ್ಕ	ಬಸವನಗುಡಿ, ಬೆಂಗಳೂರು
10. ಕಲ್ಯಾಣಗುಣಸ್ವಾಮಿಭರಿತ ವಿಠಲ	ತುಲಸಮ್ಮನ ಮಗಳು	14–3–1930
11. ಕಮಲಾರಮಣವಿಠಲ	ನರಸಣ್ಣನ ಹೆಂಡತಿ	ಕೆ.ಜಿ.ಎಫ್.
12. ಕಮಲೇಶ ಮೋಹನ ವಿಠಲ	ನರಸಣ್ಣನ ಹೆಂಡತಿ ತಂಗಿ ಮಗಳು	ಕೆ.ಜಿ.ಎಫ್.
13. ಕೃಷ್ಣಾನಂದ ವಿಠಲ (130)	--	ರಾಮನಗರ
14. ಗುರುವಾಸುದೇವ ವಿಠಲ (21)	ಎಚ್.ಆರ್. ಶಾಮರಾವ್ ಮಗಳು	--
15. ಜಯಾರಮಣ ವಿಠಲ (201)	ಸುರೇಂದ್ರರ ಪತ್ನಿ	ಹೊಳೆನರಸೀಪುರ
16. ಜನಾರ್ಧನ ವಿಠಲ (206)	ಮುಕ್ತೇಶರ ತಾಯಿ	ಚಿತ್ರದುರ್ಗ
17. ಜಯರಾಮಚಂದ್ರವಿಠಲ (241)	ಸುಬ್ಬರಾವ್ ಪತ್ನಿ	--
18. ಜಯಶ್ರೀನಿವಾಸವಿಠಲ (279)	ಡಿ.ವಿ. ರಾವ್ ಮಗಳು	ವಿ.ವಿ.ಪುರಂ, ಬೆಂಗಳೂರು
19. ಜಾನಕೀರಮಣವಿಠಲ (198)	ವಾಮನಕೃಷ್ಣದೇಶಪಾಂಡೆ ಪತ್ನಿ	ಕಮಕೇರಿ
20. ದಯಾಮಯವಿಠಲ (293)	ಹೃಷೀಕೇಶರ ಪತ್ನಿ	ಅರಸೀಕೆರೆ
21. ದಯಾನಂದ ಸ್ವಾಮಿ (314)	ಮಡಿಹೆಂಗಸು	ಮದನಪಲ್ಲಿ
22. ನರಹರಿಮೂರ್ತಿ ವಿಠಲ	ರತ್ನಮ್ಮನ ಮಗಳು	ಕ್ಲೋಸ್‌ಪೇಟೆ
23. ಪೂರ್ಣಾನಂದಾತ್ಮಕ ವಿಠಲ (412)	ಸುಬ್ಬರಾವ್ ಪತ್ನಿ	--
24. ಭುವನಾಧಿಪತಿ ವಿಠಲ (439)	ಲಕ್ಷ್ಮಣನ ಪತ್ನಿ	--
25. ಮಾಮನೋಹರ ರಾಮ ವಿಠಲ (478)	ಸೀತಮ್ಮನ ಅಕ್ಕ	ಬೆಂಗಳೂರು
26. ಮಂಗಳಮಹಿಮವಿಠಲ (503)	ಲಕ್ಷ್ಮೀಕಾಂತರಾಯರ ಪತ್ನಿ	--
27. ಯಾದವೇಶ ವಿಠಲ (519)	ಸುಬ್ಬರಾಯರ ಪತ್ನಿ	ರಾಮನಗರ/ಕ್ಲೋಸ್‌ಪೇಟೆ
28. ರಮಾನಾಥವಿಠಲ (532)	ಪುಟ್ಟಾಚಾರ್ಯರ ತಂಗಿ	ಚಿತ್ರದುರ್ಗ
29. ಲಕ್ಷ್ಮೀರಮಣವಿಠಲ (577)	ಪುಟ್ಟಾಚಾರ್ಯರ ಪತ್ನಿ	ಅರಸೀಕೆರೆ
30. ಲೋಕೇಶವಿಠಲ (578)	ರಂಗನಾಥರಾಯರ ಪತ್ನಿ	ಬೆಂಗಳೂರು

31. ಲಕ್ಷ್ಮೀನರಸಿಂಹಸ್ವಾಮಿ ವಿಠಲ (606)	ನರಸಮ್ಮನ ಅಕ್ಕ	--
32. ವಿಶ್ವಕಾರಣ ವಿಠಲ (652)	ಶಾಮಣ್ಣನಾಯ್ಕರ ಅಕ್ಕ	ರಾಣೇಬೆನ್ನೂರು
33. ವೆಂಕಟನಾಥವಿಠಲ (646)	ಲಕ್ಷ್ಮಣನ ಅತ್ತೆ	--
34. ಶಿರಿರಾಮಕೃಷ್ಣ ವಿಠಲ (690)	ದೊಡ್ಡರಾಜಾರಾವ್ ಪತ್ನಿ	ಅರಸೀಕೆರೆ
35. ಶ್ರೀಧರವಿಠಲ (694)	ಶ್ಯಾಮರಾಯರ ಪತ್ನಿ	ಚಿತ್ರದುರ್ಗ
36. ಶ್ರೀರಮಣವಿಠಲ (700)	ನರಹರಿರಾವ್ ಪತ್ನಿ	ನಿಜಗಲ್
37. ಶ್ರೀಲಕ್ಷ್ಮೀವೆಂಕಟೇಶ ವಿಠಲ (728)	ಸಬ್-ರಿಜಿಸ್ಟ್ರಾರ್ ಪತ್ನಿ	ಪುಂಗನೂರು
38. ಸೀತಾಕಾಂತ ವಿಠಲ (793)	ಕೃಷ್ಣಮೂರ್ತಿ ಪತ್ನಿ	ಚಿತ್ರದುರ್ಗ
39. ಸುಗುಣಾಸಾಂದ್ರ ವಿಠಲ (801)	ಪಿ. ಕೃಷ್ಣರಾಯರ ಪತ್ನಿ	ಹಾಸನ
40. ಸತ್ಯಮೂರ್ತಿ ವಿಠಲ (821)	ಸ್ಟೇಷನ್ ಮಾಸ್ಟರ್ ಮಾಧವರಾಯರ ಪತ್ನಿ	ಹರಿಹರ
41. ಸನ್ಮಂಗಳಪ್ರದ ಮೋಹನ ವಿಠಲ (849)	ನರಸಿಂಗರಾಯರ ಪತ್ನಿ	ಬೆಂಗಳೂರು
42. ಸಾರತರ ವಿಠಲ (883)	ಪ್ರಾಣಪ್ರಿಯರ ತಂಗಿ	ರಾಣೇಬೆನ್ನೂರು
43. ಸಮೀರವಂದ್ಯ ವಿಠಲ (887)	ರೈಲ್ವೇ ಗೋಪಾಲರಾಯರ ಪತ್ನಿ	--
44. ಸದಾನಂದಪೂರ್ಣವಿಠಲ (952)	ತುಳಸಮ್ಮನ ಮಗಳು	--
45. ಸುಜ್ಞಾನಲೋಲ ವಿಠಲ (967)	ಸರಸ್ವತಿಬಾಯಿ ಮಗಳು	--
46. ಸೀತಾನಾಥವಿಠಲ (918)	ಮಂಗಳಪ್ರದರ ಪತ್ನಿ	--
47. ಸರ್ವೇಶಮೂರ್ತಿ ವಿಠಲ (955)	ಬೋಧರಾಯಾಚಾರ್ಯರ ಪತ್ನಿ	ರಾಣೆಬೆನ್ನೂರು
48. ಸದಾನಂದರಾಮ ವಿಠಲ (924)	ನವರತ್ನ ರಾಮರಾವ್ ಮಗಳು	ಬೆಂಗಳೂರು

ಶ್ರೀಗುರುಗೋವಿಂದವಿಠಲದಾಸರು ಅಂಕಿತ ನೀಡಿದ ಮಹಿಳೆಯರು:

ಹೆಸರು	ಅಂಕಿತ	ಅಂಕಿತ ಪಡೆದ ದಿನಾಂಕ	ಸ್ಥಳ
1. ಅನುರಾಧ	ಪುಂಡರೀಕವರದರಿ ವಿಠಲ	9–3–81	ಬಳ್ಳಾರಿ
2. ಅಮೃತಾಮೋಹನ್	ಪದ್ಮಾಪತಿ ವಿಠಲ	24–2–70	ಪುಣೆ
3. ಅಲಕನಂದಾ	ಲೀಲಾಮನೋಹರವಿಠಲ	12–9–81	ಬಳ್ಳಾರಿ
4. ಅಹಲ್ಯಾಬಾಯಿ	ವಿಧಿಮಾತೆಪತಿ ವಿಠಲ	--	ಬೆಂಗಳೂರು
5. ಅಂಜನಾಗುಡಿ	ಆನಂದಾದ್ರಿವಿಠಲ	10–8–79	ಬೆಳಗಾವಿ
6. ಅಂಬುಜಾಬಾಯಿ	ವೆಂಕಟಗಿರಿವಿಠಲ	22–2–76	ಆಯನೂರು
7. ಇಂದಿರಾಬಾಯಿ	ವರಾಹಹರಿವಿಠಲ	20–2–76	ಬೆಂಗಳೂರು
8. ಇಂದುಮತಿಬಾಯಿ	ಶ್ರೀದನರಹರಿವಿಠಲ	29–4–79	ರಾಯಚೂರು
9. ಉಮಾಮಾಧವರಾವ್	ವಾಸುಕೀಶಯನವಿಠಲ	9–11–64	ಮೈಸೂರು
10. ಉಷಾ	ಮೋಹನಕೃಷ್ಣ ವಿಠಲ	10–7–80	ಬಿಜಾಪುರ

11. ಕಮಲಮ್ಮ	ಭೂರಮಣರಘುರಾಮ ವಿಠಲ	4–9–65	ಮೈಸೂರು
12. ಕಮಲಮ್ಮ	ಪ್ರದ್ಯುಮ್ನವಿಠಲ	4–6–72	ಬಳ್ಳಾರಿ
13. ಕಮಲಮ್ಮಸಾರಂಗದ	ಭೀಮಾತಟಹರಿವಿಠಲ	5–1–82	ಬಳ್ಳಾರಿ
14. ಕಮಲಾಬಾಯಿ ಕಟ್ಟಿ	ಸೀತಾಮನೋಹರ ವಿಠಲ	10–1–80	ಬೆಂಗಳೂರು
15. ಕಲ್ಯಾಣಿ	ರಾಧಾರಮಣವಿಠಲ	17–10–66	ಬೆಂಗಳೂರು
16. ಕಲ್ಯಾಣಿ	ಋಗ್ವೇದಪ್ರಿಯವಿಠಲ	17–6–74	ಪ್ರೊದಟೂರು
17. ಕಾವೇರಿಬಾಯಿ	ಮನುಜಮೃಗವೇಷವಿಠಲ	11–12–78	ಮದರಾಸು
18. ಕಾವೇರಮ್ಮ ಎಂ.	ಮಾಧವಸ್ವಾಮಿ ವಿಠಲ	8–10–79	ಬಳ್ಳಾರಿ
19. ಕುಸುಮಾಬಾಯಿ	ಮೂಲಕಾರಣ ವಿಠಲ	1–8–78	ಕರೀಂನಗರ
20. ಕೃಷ್ಣವೇಣಮ್ಮ	ಲಕ್ಷ್ಮೀಪತಿ ವಿಠಲ	12–9–81	––
21. ಗಾಯತ್ರಿ	ರಂಗನಾಥ ವಿಠಲ	3–2–81	ಗುಂತಕಲ್
22. ಗಿರಿಜ	ಮಾಧವಭೂವರಾಹವಿಠಲ	4–11–74	ಕುಪ್ಪಂ
23. ಗೀತಾ	ಸಿರಿಕೃಷ್ಣ ವಿಠಲ	13–3–76	ಬೆಂಗಳೂರು
24. ಗೀತಾ	ಗೋಪಿನಾಥವಿಠಲ	10–1–80	ಹೈದರಾಬಾದ್
25. ಗೀತಾ	ಹನುಮನುತ ವಿಠಲ	26–8–80	ಬಳ್ಳಾರಿ
26. ಗೀತಾಕಡಿದಾಳ್	ಪ್ರಾಣೇಶಹರಿವಿಠಲ	26–5–81	ಬಿಜಾಪುರ
27. ಚಂದ್ರಲೇಖ	ಹನುಮೇಶವಿಠಲ	24–9–68	ಮೈಸೂರು
28. ಚಂದ್ರಿಕಾ ಬಿ.ಎಸ್.	ಪ್ರಹ್ಲಾದವರದ ವಿಠಲ	––	ಬೆಂಗಳೂರು
29. ಚಂಪ	ಗುರುಮಧ್ವೇಶ ವಿಠಲ	1–5–74	ಚಿತ್ರದುರ್ಗ
30. ಜಯಶ್ರೀ ಎಸ್.	ಜಯಶ್ರೀವೀರಹರಿವಿಠಲ	20–6–73	ಬೆಂಗಳೂರು
31. ಜಯಶ್ರೀ	ರಾಮಾನಂದವಿಠಲ	6–10–79	ಬಳ್ಳಾರಿ
32. ಜಾನಕಮ್ಮ	ಶೇಷನುತಸಿರಿರಾಮವಿಠಲ	3–3–74	ಕುಪ್ಪಂ
33. ಜಾಹ್ನವಿ	ಶೇಷವಂದ್ಯಹರಿವಿಠಲ	14–10–79	ಹನೂರು
34. ಜಾಹ್ನವಿ	ಶ್ರವಣಾನಂದವಿಠಲ	20–6–82	ಮೈಸೂರು
35. ಜ್ಯೋತ್ಸ್ನಾ	ಗೋಪೀಶವಿಠಲ	28–8–72	ಮುಂಬೈ
36. ತಾರಾ	ಶ್ರೀನರಸಿಂಹವಿಠಲ	––	ಬೆಳಗಾವಿ
37. ತುಳಸಮ್ಮ ಹುಯಿಲಗೋಳ	ರುದ್ರವಂದಿತ ವಿಠಲ	3–1–81	ಹುಬ್ಬಳ್ಳಿ
38. ತ್ರಿವೇಣಿಬಾಯಿ	ಶೇಷಪರ್ಯಂಕಶಯನ ವಿಠಲ	16–8–73	ವಿಜಯವಾಡ
39. ತ್ರಿವೇಣಿ	ಲಕ್ಷ್ಮೀನರಹರಿ ವಿಠಲ	3–12–72	ಬಳ್ಳಾರಿ
40. ದೀಪಿಕಾ	ಯತಿಸನ್ನುತ ವಿಠಲ	––	ಮುಂಬೈ
41. ನರ್ಮದಾ	ಚಂದ್ರಭಾಗಾಹರಿವಿಠಲ	6–5–81	ಅನಂತಪುರ
42. ನರಸಕ್ಕ ಗಂ.ಭಾ.	ಶ್ರೀಕರಾರ್ಚಿತ ವಿಠಲ	29–4–79	ರಾಯಚೂರು
43. ನಳಿನಿಬಾಯಿ	ಕೈವಲ್ಯಪತಿವಿಠಲ	26–8–80	ಬಳ್ಳಾರಿ
44. ನಾಗರತ್ನಮ್ಮ	ನಾರಾಯಣಾಚ್ಯುತ ವಿಠಲ	17–10–73	ಬೆಂಗಳೂರು
45. ನಾಗವೇಣಿ	ತಿರುಮಲೇಶ ವಿಠಲ	16–8–75	ಹರಪನಹಳ್ಳಿ

46. ನಾಗಮ್ಮ ಗಂ.ಭಾ	ದಾಮಶೋಭಿತವಿಠಲ	21–11–75	ಬಳ್ಳಾರಿ
47. ನಾಗಮಣಿದೇವಿ	ಸರ್ಪಾದ್ರಿವಾಸ ವಿಠಲ	--	ಹೈದರಾಬಾದ್
48. ನಿರ್ಮಲ	ಮುರಳೀವಿಹಾರಿ ವಿಠಲ	3–2–81	ಮೈಸೂರು
49. ನೀಲಾ	ಭಾರತಿಪತಿನುತ ವಿಠಲ	9–11–64	ಮೈಸೂರು
50. ನೀಲಾನಂದಕುಮಾರ	ವೇದನಿಧಿಹರಿ ವಿಠಲ	16–1–80	ಬೆಂಗಳೂರು
51. ಪದ್ಮ	ಕನಕಾದ್ರಿ ಹರಿವಿಠಲ	26–8–80	ಬಳ್ಳಾರಿ
52. ಪದ್ಮಜ	ಕದರಿನರಹರಿ ವಿಠಲ	7–4–81	ವೆಲ್ಲೂರು
53. ಪದ್ಮಜ	ಹನುಮವರದ ವಿಠಲ	--	ಹೈದರಾಬಾದ್
54. ಪದ್ಮಾವತಿ	ಶಿರಿಪ್ರಾಣಪತಿ ವಿಠಲ	12–10–67	ರಾಯಚೂರು
55. ಪದ್ಮಾವತಿಬಾಯಿ	ವಾಣಿಪತಿನುತವಿಠಲ	--	ಮಧುಗಿರಿ
56. ಪದ್ಮಾವತಮ್ಮ	ಶ್ರೀರಂಗಶಾಯಿ ವಿಠಲ	15–2–73	ಮೈಸೂರು
57. ಪನ್ನಗಾ	ರಾಮಕೃಷ್ಣ ವಿಠಲ	29–4–79	ಸಿಕಂದರಾಬಾದ್
58. ಪರಿಮಳ	ಶ್ರೀಕೃಷ್ಣಹರಿ ವಿಠಲ	26–6–80	ಬೆಂಗಳೂರು
59. ಪರಿಮಳ	ಶೇಷನುತಗೋಪ ವಿಠಲ	25–7–80	ಮೈಸೂರು
60. ಪರಿಮಳಬಾಯಿ	ರಮಾವಿನುತ ವಿಠಲ	17–10–72	ಹೊಸಪೇಟೆ
61. ಪ್ರತಿಭಾ ಆತನೂರಕರೆ	ಆಪದ್ಬಾಂಧವ ವಿಠಲ	13–9–81	ಬಿಜಾಪುರ
62. ಪದ್ಮಾವತಿಬಾಯಿ	ಶ್ರೀಗೋವಿಂದ ವಿಠಲ	25–12–82	--
63. ಪ್ರಭಾ	ಬಾಲಕೃಷ್ಣಹರಿ ವಿಠಲ	4–12–82	ಬಳ್ಳಾರಿ
64. ಪ್ರಭಾವತಿ	ಮನ್ಮಥಪಿತ ವಿಠಲ	10–1–70	ಮೈಸೂರು
65. ಪ್ರೇಮ	ಆನಂದನಿಲಯ ವಿಠಲ	1–9–68	ಮೈಸೂರು
66. ಪ್ರೇಮ	ಕಮಲಾಲಯ ವಿಠಲ	--	ಬೆಂಗಳೂರು
67. ಪ್ರೇಮಲತ	ಪಾಂಡುರಂಗವಿಠಲ	1–3–74	ಬೆಂಗಳೂರು
68. ಬನ್ನೂಬಾಯಿ	ಶ್ರೀನಿವಾಸಾದ್ರಿ ವಿಠಲ	--	ಬಾಗಲಕೋಟೆ
69. ಭಾಗ್ಯಲಕ್ಷ್ಮಿ	ಸುಂದರಾಂಗ ವಿಠಲ	9–10–75	ಹರಪನಹಳ್ಳಿ
70. ಭಾರತಿಬಾಯಿ	ಮೋದಪ್ರದ ನರಹರಿ	24–11–75	ಬಿಜಾಪುರ
71. ಮನೋರಮ	ಗುರುಭಾರತೀಶಪ್ರಿಯ ವಿಠಲ	12–1–74	ರಾಯಚೂರು
72. ಮಾಯಾ	ಮುಚುಕುಂದವರದ ವಿಠಲ	14–1–80	ಹೈದರಾಬಾದ್
73. ಮಾಲತಿ	ಅಕ್ರೂರವರದ ವಿಠಲ	5–6–81	ಬೆಂಗಳೂರು
74. ಮುಕ್ತಾಬಾಯಿ	ವರದ ನರಹರಿ ವಿಠಲ	26–6–72	ದೆಹಲಿ
75. ಮೈತ್ರೇಯಿ ವೈ.ಎಸ್.	ಆನಂದಗಿರಿವಿಠಲ	5–1–82	ಅನಂತಪುರ
76. ಮೈನಾಬಾಯಿ	ಪರಸೌಖ್ಯಪ್ರದ ವಿಠಲ	--	ಧಾರವಾಡ
77. ಮಂಜುಳಾಬಾಯಿ	ರಘುಕುಲತಿಲಕ ವಿಠಲ	26–2–72	ದಾವಣಗೆರೆ
78. ರಕುಮಾ	ಗೋಪಾಲಹರಿ ವಿಠಲ	7–6–72	ಬಳ್ಳಾರಿ
79. ರಕುಮಬಾಯಿ	ಹರಿಗೋವಿಂದ ವಿಠಲ	2–2–78	ಹೈದರಾಬಾದ್
80. ರತ್ನಮ್ಮ ಹುಯಿಲಗೋಳ	ಹಯಾನನವಿಠಲ	25–3–70	ಬಳ್ಳಾರಿ

81. ರತ್ನಮ್ಮ ಎಂ.ರಂ.ಭಾ	ಅನಂತಗಿರಿವಿಠಲ	17–7–79	ಬೆಂಗಳೂರು
82. ರಮಾಬಾಯಿ	ಲಕ್ಷ್ಮೀವೆಂಕಟೇಶ ವಿಠಲ	10–3–81	ರಾಯಚೂರು
83. ರಮಾಮಣಿ	ವೆಂಕಟನರಹರಿ ವಿಠಲ	27–3–80	ಬೆಂಗಳೂರು
84. ರಮಾಬಾಯಿ ನರಸಿಂಹಮೂರ್ತಿ	ಹರಿತ್ರಿವಿಕ್ರಮವ್ಯಾಸ ವಿಠಲ	28–1–79	ಮೈಸೂರು
85. ರಾಧಾಬದರೀನಾಥ	ಲಕ್ಷ್ಮೀಶಗೋವಿಂದ ವಿಠಲ	15–9–69	ಕೊಯಮತ್ತೂರು
86. ರಾಧಾಬಾಯಿ	ಅನಂತಶಯನ ವಿಠಲ	12–11–79	ಹೈದರಾಬಾದ್
87. ರಾಧಮ್ಮ	ಹರಿಗುರುಪ್ರಸನ್ನ ವಿಠಲ	20–10–80	ಕರ್ನೂಲು
88. ರಾಘೂಬಾಯಿ	ರಾಘವಾಹರಿ ವಿಠಲ	10–6–82	ಬೆಂಗಳೂರು
89. ರಾಧಾಬಾಯಿ	ಗುರುಹರಿ ವಿಠಲ	30–11–81	ಮೈಸೂರು
90. ರುಕ್ಮಿಣಿ	ವಾಸುದೇವ ಕೃಷ್ಣ ವಿಠಲ	19–2–69	ಬೆಂಗಳೂರು
91. ರುಕ್ಮಿಣಿಬಾಯಿ	ಹರಿಕೃಷ್ಣ ವಿಠಲ	11–8–79	ಹುಬ್ಬಳ್ಳಿ
92. ಲಕ್ಷ್ಮೀಬಾಯಿ ಕಡಿದಾಳ	ಗುರುರಾಘವೇಂದ್ರ ವಿಠಲ	10–8–79	ಬಿಜಾಪುರ
93. ಲಕ್ಷ್ಮೀದೇವಿ	ವಾದಿರಾಜ ಹರಿವಿಠಲ	5–10–81	ಬೆಳಗಾವಿ
94. ಲಕ್ಷ್ಮೀದೇವಿ ನಾರಾಯಣರಾವ್ ಕುಲಕರ್ಣಿ	ಲಕ್ಷ್ಮೀಶ ಹರಿ ವಿಠಲ	6–10–81	ಬೆಳಗಾವಿ
95. ಲೀಲಾವತಿ	ಅನಂತರಾತ್ಮಕ ವಿಠಲ	2–10–79	ಹಾನಗಲ್
96. ವತ್ಸಲಾ ಜಗನ್ನಾಥರಾವ್	ಲಕ್ಷ್ಮೀಶ ನರಹರಿ ವಿಠಲ	6–3–67	ಬೆಂಗಳೂರು
97. ವಾಣಿಪದ್ಮನಾಭರಾವ್	ಭಾರತೀಶಕಾಂತ ವಿಠಲ	15–6–73	ಬೆಂಗಳೂರು
98. ವಾಣಿ	ಋಜುರಾಜಸನ್ನುತ ವಿಠಲ	18–6–82	ಬೆಂಗಳೂರು
99. ವಿಜಯಾ ಸಿ.ಕೆ.	ಪವಮಾನ ವಿಠಲ	--	ಹೈದರಾಬಾದ್
100. ವಿಜಯಲಕ್ಷ್ಮಿ	ಪನ್ನಗಾದ್ರ ವಿಠಲ	2–7–80	ಬೆಂಗಳೂರು
101. ವೇದಾವತಿ	ವೇದಾವತಿಪತಿ ವಿಠಲ	16–8–73	ಆಯನೂರು
102. ವಿದ್ಯುತ್	ಪ್ರಾಣಪತಿ ಶ್ರೀನಿವಾಸ ವಿಠಲ	25–12–72	ಬೆಳಗಾವಿ
103. ವಿನೀತಾ	ವೇಣುಧರ ವಿಠಲ	--	ಬಳ್ಳಾರಿ
104. ವಿಮಲಾ	ಶೇಷಗಿರೀಶ ವಿಠಲ	--	ಹುಬ್ಬಳ್ಳಿ
105. ವೈದೇಹಿ	ಜಗತ್ಸಾರ ವಿಠಲ	--/5/73	ಬೆಂಗಳೂರು
106. ಶಕುಂತಲ	ಶ್ರೀವರಹರಿ ವಿಠಲ	--	ಬಳ್ಳಾರಿ
107. ಶಾಂತಾ	ಮಾಧವ ವಿಠಲ	31–3–72	ದಾವಣಗೆರೆ
108. ಶಾಂತಾಬಾಯಿ	ಅಸಾಧಾರಣ ವಿಠಲ	25–3–70	ಬಳ್ಳಾರಿ
109. ಶಾಂತಾಬಾಯಿ	ಶಿರಿಮುದ್ದುಕೃಷ್ಣ ವಿಠಲ	10–1–80	ಮೈಸೂರು
110. ಶ್ಯಾಮಲ	ತುಳಸಿವಂದಿತ ವಿಠಲ	--	ರಾಯಚೂರು
111. ಶ್ಯಾಮಲ	ಪ್ರಾಣನುತನರಸಿಂಹ ವಿಠಲ	28–1–79	ಮದರಾಸು
112. ಶೇಷಮ್ಮ	ಗಂಗಾಜನಕ ವಿಠಲ	20–2–76	ಬೆಂಗಳೂರು

113.	ಶೇಷಮ್ಮ	ಗುರುರಾಜವರದ ವಿಠಲ	10–1–80	ಗುಂತಕಲ್
114.	ಶೈಲಾ	ಲಕ್ಷ್ಮೀಶ ಹರಿ ವಿಠಲ	10–1–80	ಬಿಜಾಪುರ
115.	ಶೋಭಾ	ಪರತತ್ವ ವಿಠಲ	--	ಹರಪನಹಳ್ಳಿ
116.	ಶ್ರೀದೇವಿ	ಗುರುರಾಜಹರಿವಿಠಲ	21–8–81	ಧಾರವಾಡ
117.	ಶ್ರೀಲಕ್ಷ್ಮೀ	ರಮಾನಿವಾಸ ವಿಠಲ	--	ಹೈದರಾಬಾದ್
118.	ಸರೋಜಮ್ಮ	ಹರಿಗೋಪಾಲ ವಿಠಲ	17–6–74	ಪ್ರೊದಟೂರು
119.	ಸರೋಜಮ್ಮ	ದಾಮೋದರ ವಿಠಲ	19–5–72	ಬಳ್ಳಾರಿ
120.	ಸವಿತ	ಪ್ರಾಣನರಹರಿಮೋದ ವಿಠಲ	8–8–79	ಬಿಜಾಪುರ
121.	ಸಾವಿತ್ರಿ ಆರ್.ಕೆ.	ಮಧ್ವವರದ ವಿಠಲ	12–10–67	ಮೈಸೂರು
122.	ಸಾವಿತ್ರಮ್ಮ	ಲಕ್ಷ್ಮೀನಾರಾಯಣ ವಿಠಲ	21–2–76	ಬೆಂಗಳೂರು
123.	ಸಾವಿತ್ರಮ್ಮ	ಕಮಲಾರಮಣ ವಿಠಲ	--	ಹೈದರಾಬಾದ್
124.	ಸೀತಮ್ಮ	ಮುರಳೀಮನೋಹರ ವಿಠಲ	15–3–74	ಪ್ರೊದಟೂರು
125.	ಸೀತಾಬಾಯಿ	ವೆಂಕಟೇಶ ವಿಠಲ	25–3–70	ಬೆಂಗಳೂರು
126.	ಸೀತಾಬಾಯಿ	ಲಕ್ಷ್ಮೀಮನೋಹರ ವಿಠಲ	--	ಮೈಸೂರು
127.	ಸುಕನ್ಯ	ಸುಮನಪ್ರಿಯಗೋಪ ವಿಠಲ	10–1–80	ಮುಂಬೈ
128.	ಸುಗುಣಾಬಾಯಿ	ಭೀಮಾತಟಗ ವಿಠಲ	--	ಮಂಡ್ಯ
129.	ಸುಧಾ ಚಂಜಿ	ಪ್ರಾಣಗುರುರಾಮ ವಿಠಲ	22–11–79	ಹೈದರಾಬಾದ್
130.	ಸುಧಾ ಸಿ.ಪಿ.	ವಾಜಿವದನ ವಿಠಲ	29–10–75	ಬೆಂಗಳೂರು
131.	ಸುಧಾಬಾಯಿ	ಲಕ್ಷ್ಮೀಮನೋಜ್ಞ ವಿಠಲ	1967	ಬಳ್ಳಾರಿ
132.	ಸುಧಾಮಣಿ	ಸುಧಾಮಪ್ರಿಯ ವಿಠಲ	30–3–70	ಗುಜರಾತ್
133.	ಸುಧಾಬಾಯಿ	ಆನಂದವಾಹನ ವಿಠಲ	7–1–73	ಮೈಸೂರು
134.	ಸುಧಾಬಾಯಿ	ಗೋಪಗೋವಿಂದ ವಿಠಲ	27–1–79	ಬೆಂಗಳೂರು
135.	ಸುನಂದಾಬಾಯಿ	ದಾಸವರವರದ ವಿಠಲ	--	ಬಳ್ಳಾರಿ
136.	ಸುನಂದಾವಸಂತ ಕುಮಾರ್	ಸುಖಪೂರ್ಣ ವಿಠಲ	3–9–81	ಹೈದರಾಬಾದ್
137.	ಸುನಂದಾ ಅಪಸರಗಿ	ವಾನರವಂದ್ಯ ವಿಠಲ	1–9–68	ಬೆಳಗಾವಿ
138.	ಸುಬ್ಬಮ್ಮ	ಪ್ರಾಣಸನ್ನುತ ವಿಠಲ	--	ಅನಂತಪುರ
139.	ಸುಬ್ಬುಲಕ್ಷ್ಮೀ	ಹರಿ ವಿಠಲ	22–6–80	ಬೆಂಗಳೂರು
140.	ಸುಭದ್ರಮ್ಮ ವಿ.	ಉರುಗಗಿರಿವಾಸ ವಿಠಲ	5–2–81	ಬೆಂಗಳೂರು
141.	ಸುಭದ್ರಮ್ಮ	ಗುರುರಾಜನುತ ವಿಠಲ	20–1–71	ಸಿಕಂದರಾಬಾದ್
142.	ಸುಭದ್ರಾಬಾಯಿ	ಮಧ್ವವರದ ಕೃಷ್ಣ ವಿಠಲ	--	ರಾಯಚೂರು
143.	ಸುಶೀಲಾಬಾಯಿ	ಪ್ರಾಣಗುರುಜಯ ವಿಠಲ	20–1–71	ಬೆಂಗಳೂರು
144.	ಸುಶೀಲಾಬಾಯಿ	ಇಂದುಭಾಗಾಹರಿ ವಿಠಲ	15–10–79	ಬಿಜಾಪುರ
145.	ಸೇತುಬಾಯಿ	ರಾಘವೇಂದ್ರ ಹರಿ ವಿಠಲ	29–8–80	ಆದೋನಿ

ಶ್ರೀಉರಗಾದ್ರಿ ವಿಠಲದಾಸರಿಂದ ಅಂಕಿತ ಪಡೆದ ಮಹಿಳೆಯರ ವಿವರ

ಹೆಸರು	ಅಂಕಿತ	ಅಂಕಿತ ಪಡೆದ ದಿನಾಂಕ	ಸ್ಥಳ
1. ಅನಸೂಯ	ದಯಾನಿಧೆವಿಠಲ		ಬೆಂಗಳೂರು
2. ಇಂದುಮತಿ	ಮಹಿದಾಸವಿಠಲ		ಬೆಂಗಳೂರು
3. ಇಂದಿರಾ	ಜಾಹ್ನವಿಜನಕ ವಿಠಲ		
4. ಇಂದಿರಾಬಾಯಿ ಎಸ್.	ವಿಧಿಜನಕ ವಿಠಲ		ಬೆಂಗಳೂರು
5. ಉಷಾ	ಇಂದಿರಾಪತಿ ವಿಠಲ		ಬೆಂಗಳೂರು
6. ಕಮಲಾಬಾಯಿ	ಆನಂದಮಯವಿಠಲ	30–12–1943	ಚಿತ್ರದುರ್ಗ
7. ಕಮಲಾಬಾಯಿ	ಸುಜ್ಞಾನವಿಠಲ		ಚಿತ್ರದುರ್ಗ
8. ಗೀತಾಬಾಯಿ	ಮಾರಮಣವಿಠಲ		ಚಿತ್ರದುರ್ಗ
9. ಜೀವೂಬಾಯಿ ನಿಡಗುರಕಿ	ಕಮಲನಾಭವಿಠಲ		ಮೈಸೂರು
10. ತಾಯಮ್ಮ (ಲಕ್ಷ್ಮೀಬಾಯಿ)	ವಿಜ್ಞಾನಮಯವಿಠಲ		ಬೆಂಗಳೂರು
11. ತುಳಸಮ್ಮ	ಲಕ್ಷ್ಮೀಶವಿಠಲ	22–2–1943	ಮೈಸೂರು
12. ತುಳಸೀಬಾಯಿ ಸಿ. (ಲಕ್ಷ್ಮೀಬಾಯಿ)	ಮಾನ್ಯಮಾನದ ವಿಠಲ	11–4–1962	
13. ತುಂಗಾಬಾಯಿ	ಸಿರಿಉರಗಾದ್ರಿ ವಿಠಲ		ಚಿತ್ರದುರ್ಗ
14. ಧೋಂಡೂಬಾಯಿ	ಮಧುರಾನಾಥವಿಠಲ		ಚಿತ್ರದುರ್ಗ
15. ಪದ್ಮ	ಜಯಧನ್ವಂತ್ರಿ ವಿಠಲ		ಬೆಂಗಳೂರು
16. ಪದ್ಮಾವತಿಬಾಯಿ ದೇಶಪಾಂಡೆ	ಶ್ರೀವರದವಿಠಲ	10–2–43	ಹಾಸನ
17. ಪರಿಮಳಾಬಾಯಿ	ನರಹರಿವಿಠಲ		ಚಿಂತಾಮಣಿ
18. ಪರಿಮಳಾಬಾಯಿ ಎ.ವಿ.	ವೇದವತೀಶ ವಿಠಲ	10–10–1945	ಬೆಂಗಳೂರು
19. ಮಂಜುಳಾಬಾಯಿ	ಸಿಂಧುಶಯನ ವಿಠಲ		ಹೈದರಾಬಾದ್
20. ಯಮುನಾಬಾಯಿ	ಜ್ಞಾನಾತ್ಮವಿಠಲ		ಹರಿಹರ
21. ಯಮುನಾಬಾಯಿ	ಮುರಳೀಧರವಿಠಲ		ಪಿಳ್ಳಂಗೇರಿ
22. ರಮಾಮಣಿ	ರಮಾಮಧುಸೂದನವಿಠಲ		ತಿಪಟೂರು
23. ರಮಾಬಾಯಿ	ದಾಶರಥಿ ವಿಠಲ		ಶಿವಮೊಗ್ಗ
24. ರಾಜಮ್ಮ	ನಾರಸಿಂಹ ವಿಠಲ		ಹನುಮಂತಾಪುರ
25. ಲಕ್ಷ್ಮೀಬಾಯಿ	ಭಾರತೀಶಪ್ರಿಯ ವಿಠಲ	9–2–1943	ಹಾಸನ
26. ಲಕ್ಷ್ಮೀದೇವಮ್ಮ	ಗೋಪವಿಠಲ		ಆಯನೂರು
27. ಲಕ್ಷ್ಮೀದೇವಮ್ಮ (ಕೋಟೆ)	ಪ್ರಸನ್ನ ವಿಠಲ		ಆಯನೂರು
28. ಲಕ್ಷ್ಮೀಬಾಯಿ	ವಿಜ್ಞಾನಮಯ ವಿಠಲ		ಮುಂಬೈ
29. ಲೀಲಾವತಿ ರಾವ್	ಜ್ಞಾನಗಮ್ಯ ವಿಠಲ		ಚಿತ್ರದುರ್ಗ
30. ವನಜಾಬಾಯಿ	ಶ್ರೀಹರೇ ವಿಠಲ		ಸುರತ್ಕಲ್

31. ವನಜಾಬಾಯಿ ಟಿ.ಎಸ್.	ವೆಂಕಟೇಶ ವಿಠಲ		ದೆಹಲಿ
32. ವಸುಮತಿ	ನರಹರಿ ವಿಠಲ		ಮೈಸೂರು
33. ವೆಂಕಮ್ಮ	ಪಾರ್ಥಸಾರಥಿ ವಿಠಲ		ಮುಂಬಯಿ
34. ಶಕುಂತಲಾಬಾಯಿ	ಶೇಷಶಾಯಿ ವಿಠಲ		ಮದರಾಸು
35. ಶಾಂತ	ಹರಿಣೀಪತಿ ವಿಠಲ		
36. ಶಾಂತಮ್ಮ	ಜಯಕಾಂತ ವಿಠಲ		ಆಯನೂರು
37. ಶಾಂತಾಬಾಯಿ	ಆನಂದವಿಠಲ	30–8–1944	ಆಯನೂರು
38. ಸರೋಜಾಬಾಯಿ	ರಮಾಧವವಿಠಲ	31–8–1944	ಬೆಂಗಳೂರು
39. ಸೋನಮ್ಮ	ಕೃತೀಶ ವಿಠಲ		ಚಿತ್ರದುರ್ಗ
40. ಸುಂದರಾಬಾಯಿ	ಶ್ರೀನಾಥವಿಠಲ		ದಾವಣಗೆರೆ
41. ಸೀತಾಬಾಯಿ	ಶ್ರೀಹರಿವಿಠಲ		
42. ಡಿ. ಶೇಷಗಿರಿರಾವ್ ಪತ್ನಿ	ಭಾರ್ಗವೀಶವಿಠಲ	31–8–1944	ಬೆಂಗಳೂರು

ತಂದೆ ಮುದ್ದುಮೋಹನ ವಿಠಲರ ಮಕ್ಕಳಾದ ವೆಂಕಟದಾಸರು ಅಂಕಿತ ನೀಡಿದ ಮಹಿಳೆಯರು

ಹೆಸರು	ಅಂಕಿತ
1. ಡಿ. ಜಯವಾಣಿ	ಶ್ರೀದಾಮೋದರ ವಿಠಲ
2. ದಮಯಂತಿ ಬಾಯಿ	ಶ್ರೀನಿತ್ಯಮಂಗಳಮೂರ್ತಿ ವಿಠಲ
3. ವಿಜಯಮ್ಮ	ಸಿರಿಜಯಪ್ರಸನ್ನಮೋಹನ ವಿಠಲ
4. ಸೋನಮ್ಮ	ಶ್ರೀಕವಿಜನಪ್ರಿಯ ವಿಠಲ
5. ಪದ್ಮಮ್ಮ	ಜ್ಞಾನಮಯ ವಿಠಲ (ವೆಂಕಟದಾಸರ ಮಗಳು)
6. ಮಂಜುಳಾಬಾಯಿ	ಶ್ರೀಘನಮಹಿಮ ವಿಠಲ
7. ಟಿ. ಬಾಲಕೃಷ್ಣರಾವ್ ಪತ್ನಿ	ಶ್ರೀವರಗುರುಮೋಹನ ವಿಠಲ
8. ತುಳಸಮ್ಮನ ಸೊಸೆ	ಶ್ರೀಲೀಲಾಮನೋಹರ ವಿಠಲ

ನಿತ್ಯಾನಂದ ವಿಠಲದಾಸರು ಅಂಕಿತ ನೀಡಿದ ಮಹಿಳೆಯರು

ಹೆಸರು	ಅಂಕಿತ
1. ಅಂಜಲಿ	ಕಂಜಾಕ್ಷರಾಮವಿಠಲ
2. ಸುಮಿತ್ರ (ಸುಮಿ)	ಘೃನಿನಾಮಕ ವಿಠಲ
3. ಪದ್ಮಜ	ಪದ್ಮಿನೀಪ್ರಿಯ ವಿಠಲ

ಈಚೆಗೆ ಶ್ರೀ ಎನ್. ಅನಂತಸ್ವಾಮಿರಾವ್‌ರವರು ಪರಮಾರ್ಥ ಚಂದ್ರೋದಯದಲ್ಲಿ ಪ್ರಕಟವಾದ ಅಜ್ಞಾತ ದಾಸರ ಕೃತಿಗಳನ್ನು ಸಂಗ್ರಹಿಸಿ, 'ಕೀರ್ತನ ಚಂದ್ರೋದಯ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಅದರಲ್ಲಿ ಈ ಕೆಳಗಿನ ದಾಸ ಮಹಿಳೆಯರ ಕೀರ್ತನೆಗಳು ಪ್ರಕಟವಾಗಿವೆ.

1. ಕಮಲಾಕಾಂತವಿಠಲ: ಇವರ ಹೆಸರು ತಿಳಿದಿಲ್ಲ. 'ವರಗುರುಗೋಪಾಲ' ವಿಠಲಾಂಕಿತ ಕೃಷ್ಣಮೂರ್ತಿರಾಯರ ಪತ್ನಿ. ರಚಿಸಿರುವ ಕೀರ್ತನೆಗಳು 3.
2. ರಾಜೀವಲೋಚನವಿಠಲ: ಹೆಸರು ಗೋಪಮ್ಮ, ಕೀರ್ತನೆಗಳು 4.
3. ಇಂದಿರೇಶವಿಠಲ: ಹೆಸರು ಸೀತಮ್ಮ, ಹಾರ್ಮೋನಿಯಂ ಶೇಷಗಿರಿರಾಯರ ಪತ್ನಿ. ಒಂದು ಕೀರ್ತನೆ.
4. ಸುರೇಶವಿಠಲ: ಹೆಸರು ಸುಂದರಮ್ಮ, ರಮಾಕಾಂತವಿಠಲರ ಪತ್ನಿ, ಕೀರ್ತನೆಗಳ ಸಂಖ್ಯೆ 1.
5. ರಮಾವಲ್ಲಭವಿಠಲ: ಹೆಸರು ಸರಸಮ್ಮ ಇವರ ನಾಲ್ಕು ಅಪ್ರಕಟಿತ ಕೀರ್ತನೆಗಳನ್ನು ಪ್ರಕಟಿಸಲಾಗಿದೆ. (ಸಮಗ್ರ ದಾಸ ಸಾಹಿತ್ಯ ಸಂ.18, ಭಾಗ–4ರಲ್ಲಿ ಉಲ್ಲೇಖಿಸಲಾಗಿದೆ).
6. ಇಂದಿರಾಪತಿ ವಿಠಲ: ಹೆಸರು ಚಂದ್ರವದನ ಸ್ಥಳ ಚಿತ್ರದುರ್ಗ. ಮೂರು ಕೀರ್ತನೆಗಳನ್ನು ರಚಿಸಿದ್ದಾರೆ.

ಅಡಿ ಟಿಪ್ಪಣಿಗಳು:

ಪ್ರೊ ॥ ಎಂ.ಆರ್. ಲಕ್ಷ್ಮೀದೇವಿ ಗಲಗಲಿ ಅವ್ವ ಪುಟ–3

ಖಅ

ಅಧ್ಯಾಯ-9

ಪರಿಸಮಾಪ್ತಿ

ಕನ್ನಡ ಭಕ್ತಿ ಸಾಹಿತ್ಯ ಪ್ರಕಾರಗಳಾದ ವಚನ ಹಾಗೂ ದಾಸ ಸಾಹಿತ್ಯಗಳ ಪರಂಪರೆಯಲ್ಲಿ ಹಲವಾರು ಕವಯತ್ರಿಯರು ಮೌಲಿಕ ಕೊಡುಗೆ ನೀಡಿದ್ದಾರೆ. ಹೆಣ್ಣು ಮಕ್ಕಳು ತಮಗೆ ದೊರೆತ ಅವಕಾಶದ ಮಿತಿಯಲ್ಲೇ ಸಾಹಿತ್ಯ ಕೃಷಿ ಮಾಡಿರುವುದು ಗಮನಾರ್ಹ. ದಾಸ ಸಾಹಿತ್ಯ ವಾಹಿನಿಯಲ್ಲಿ ಗುರುತಿಸಿಕೊಂಡ ಅನೇಕ ಮಹಿಳೆಯರು ಭಕ್ತಿ ಪ್ರಧಾನವಾದ ಅಧ್ಯಾತ್ಮಿಕ ಸಾಹಿತ್ಯವನ್ನು ರಚನೆ ಮಾಡಿದ್ದಾರೆ. ಇವರಲ್ಲಿ ಬಹುತೇಕ ದಾಸ ಮಹಿಳೆಯರು ಅಜ್ಞಾತರಾಗಿಯೇ ಉಳಿದಿದ್ದಾರೆ.

ಹರಿದಾಸ ಪರಂಪರೆಯಲ್ಲಿ ರೂಢಿ, ಸಂಪ್ರದಾಯಗಳ ಚೌಕಟ್ಟಿನಲ್ಲಿಯೇ ಬಾಳಿದ ಮಹಿಳಾ ದಾಸರು ತಮ್ಮ ಬದುಕಿನ ಸಂಕಷ್ಟಗಳನ್ನು ಮರೆಯಲೆಂದೇ ಸಾಹಿತ್ಯವನ್ನು ರಚಿಸಿದವರು. ಇವರಲ್ಲಿ ಬಹಳಷ್ಟು ಮಂದಿ ಬಾಲವೈಧವ್ಯಕ್ಕೆ ಬಲಿಯಾದವರು. ಬದುಕು ಆರಂಭವಾಗುವ ಮುನ್ನವೇ ಕಷ್ಟ ಪರಂಪರೆಗಳಿಗೆ ಎದುರಾದವರು. ತಮ್ಮ ಮನದ ನೋವು, ಹತಾಶೆ, ದುಃಖಗಳನ್ನು ಸಮರ್ಥವಾಗಿ ಎದುರಿಸಲು ದಾಸ ಮಹಿಳೆಯರು ಭಕ್ತಿ, ವೈರಾಗ್ಯಗಳೆಡೆಗೆ ಹೊರಳಿದರು. ಭಕ್ತಿ ಸಾಹಿತ್ಯ ರಚನೆಯ ಮೂಲಕ ದೈವ ಕೃಪೆಗೆ ಹಂಬಲಿಸಿವರು. ಸಮಾಜ ಒಪ್ಪಿದ ಮೌಲ್ಯಗಳನ್ನು ತಾವೂ ಒಪ್ಪಿ, ಸಮಾಜದ ಕಟ್ಟುಪಾಡುಗಳಿಗೆ ಒಳಗಾಗಿಯೇ ಜೀವನವನ್ನು ಸ್ವೀಕರಿಸಿದ್ದರು. ಇಂದಿನ ಆಧುನಿಕ ಯುಗದಲ್ಲೂ ಸಮಾಜದ ಅನೇಕ ಮೌಲ್ಯಗಳಿಗೆ ಬದ್ಧವಾಗಿ ಜೀವನ ನಡೆಸುವ ಸುಶಿಕ್ಷಿತ, ವಿದ್ಯಾವಂತ ಸ್ತ್ರೀಯರು ಕೂಡ ಕಟ್ಟುಪಾಡುಗಳನ್ನು ಸಹಜವೆಂಬಂತೆ ಸ್ವೀಕರಿಸಿದ್ದಾರೆ. ಹೀಗಿರುವಾಗ ಅಂದಿನ ದಿನಗಳಲ್ಲಿನ ಸ್ತ್ರೀಯರ ಮನೋಭಾವದಲ್ಲಿ ಸ್ತ್ರೀ ಸಮಾನತೆಯಂತಹ ವಿಚಾರಗಳು ಬಂದಿರಲಾರದು.

ಸ್ವಾತಂತ್ರ್ಯಪೂರ್ವ ಕಾಲದ ಮಹಿಳೆಯರಿಗೆ ಮನೆಯೇ ಪ್ರಪಂಚವಾಗಿತ್ತು. ಗಂಡ, ಮಕ್ಕಳು, ಹಿರಿಯರ ಸೇವೆಗೇ ತಮ್ಮ ಬದುಕು ಎಂದು ಅವರು ಒಪ್ಪಿಕೊಂಡು ಬಿಟ್ಟಿದ್ದರು. ಸಂಪ್ರದಾಯ ಶರಣರಾದ ಅವರಲ್ಲಿ ಸ್ತ್ರೀ ಸಮಾನತೆ, ಸ್ತ್ರೀಪರ ಕಾಳಜಿಗಳ ಕಲ್ಪನೆಯೂ ಇರಲಿಲ್ಲ. ಹರಿದಾಸರು ನುಡಿದಂತೆ ನಡೆದರೆ ದಾಸ ಮಹಿಳೆಯರು ಬದುಕನ್ನು ಬಂದಂತೆ ಸ್ವೀಕರಿಸಿದರು. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರು 'ಇದೇ ನಮ್ಮ ಬದುಕು' ಎಂಬಂತೆ ಬಾಳಿದರು. ಸುಖ ದುಃಖಗಳನ್ನು ದೇವರ ದಯೆ, ವಿಧಿ, ಅದೃಷ್ಟ ಎಂದೇ ಪರಿಗಣಿಸಿದ್ದರು. ವೈಧವ್ಯ, ನೋವು, ಹತಾಶೆ, ಬಡತನಗಳಿಂದ ಬೇಸತ್ತ ಇವರು ಮನಸ್ಸಿನ ನೆಮ್ಮದಿಗಾಗಿ ಧಾರ್ಮಿಕ ಸಾಹಿತ್ಯದ ಮೊರೆ ಹೊಕ್ಕರು. ಹಾಗೆಯೇ ಆತ್ಮ ವಿಶ್ವಾಸ, ನೈತಿಕ ಬಲ ಪಡೆಯಲು ಅನೇಕ ವ್ರತಾದಿಗಳನ್ನು ಮಾಡುವ ಮೂಲಕ ಅವುಗಳಿಗಾಗಿ ಸಾಹಿತ್ಯ ರಚಿಸಿದರು. ಗಿರಿಯಮ್ಮ, ಭೀಮವ್ವ

ಶಾಂತಿಬಾಯಿ. ಓರವಾಯಿ ಲಕ್ಷ್ಮೀದೇವಮ್ಮ ಮುಂತಾದ ಮಹಿಳಾ ದಾಸರ ಕೃತಿಗಳಲ್ಲಿ ಬಡತನ, ನೋವು, ಸಂಕಟಗಳ ಛಾಯೆಯಿದೆ. ಆದರೂ ಬದುಕನ್ನು, ಬದುಕಿನ ಚೆಲುವನ್ನೂ ಈ ಮಹಿಳೆಯರು ಉತ್ಸಾಹದಿಂದಲೇ ಸ್ವೀಕರಿಸಿದ್ದಾರೆ. ಜೀವನ್ಮುಖಿ ಸಾಹಿತ್ಯ ರಚಿಸಿ ದುಃಖದಲ್ಲಿರುವವರಿಗೆ ಸಾಂತ್ವನ ನೀಡುವ ಶಕ್ತಿ ಪಡೆದಿದ್ದಾರೆ.

ದಾಸ ಮಹಿಳೆಯರು ಮಹಿಳೆಯರಿಗಾಗಿಯೇ ನಿರ್ಮಿಸಿದ ಸಾಹಿತ್ಯವು ಉತ್ಕೃಷ್ಠ ಸಾಹಿತ್ಯವಲ್ಲದಿದ್ದರೂ ಜನಪ್ರಿಯ ಸಾಹಿತ್ಯವಂತೂ ಹೌದು. "ದಾಸ ಚಳುವಳಿಯಲ್ಲಿ ದಾಸರಿಗೆ ಪ್ರೇರಕರಾಗಿ, ಪೂರಕವಾಗಿ ಅಷ್ಟೇ ಮಹಿಳೆ ನಿಂತಿಲ್ಲ. ಆಕೆ ದಾಸ ಸಾಹಿತ್ಯ ರಚನೆ ಹಾಗೂ ಸಂಗೋಪನೆಯ ಕಾರ್ಯದಲ್ಲಿ ಕ್ರಿಯಾತ್ಮಕವಾಗಿ ತೊಡಗಿಕೊಂಡಿದ್ದಾಳೆ.[1]" ವಚನ ಚಳುವಳಿಯಲ್ಲಿ ಎಲ್ಲ ವರ್ಗದ ಸ್ತ್ರೀಯರು ಮುಕ್ತವಾಗಿ ರಚನೆ ಕೈಗೊಂಡರು. ಆದರೆ ದಾಸ ಮಹಿಳೆಯರು ಕೌಟುಂಬಿಕ ನೆಲೆಯಲ್ಲೇ ನಿಂತು ಸಾಹಿತ್ಯ ರಚಿಸಿದರು. "ಅಕ್ಕ ಮೀರಾರಂತವರು ಭಾರತೀಯ ಸಮಾಜದ ಚೌಕಟ್ಟನ್ನು ಪ್ರಶ್ನಿಸುವ ಮೂಲಕ ಹೊಸ ವ್ಯವಸ್ಥೆಯನ್ನು ಬಯಸಿದರೆ ಮಹಿಳಾ ಹರಿದಾಸರು ಕೌಟುಂಬಿಕ ಚೌಕಟ್ಟನ್ನು ಒಪ್ಪಿಕೊಂಡೇ ಹೊಸ ಅಸ್ತಿತ್ವದ ಹುಡುಕಾಟದಲ್ಲಿ ತೊಡಗಿದವರು.[2]" ಇಂದು ದಾಸ ಸಾಹಿತ್ಯ ಕ್ರಿಯಾತ್ಮಕವಾಗಿ ಜೀವಂತವಾಗಿದೆಯೆಂದರೆ ಅದು ಮಹಿಳೆಯರಿಂದ. ದಾಸ ಸಾಹಿತ್ಯವನ್ನು ಕಟ್ಟುವದಕ್ಕಿಂತ, ದಾಸ ಸಂಸ್ಕೃತಿ ಕಟ್ಟುವಲ್ಲಿ ದಾಸ ಮಹಿಳೆಯರು ಮಹತ್ವದ ಪಾತ್ರ ವಹಿಸಿದ್ದಾರೆ.

ಇಷ್ಟೆಲ್ಲಾ ಆದರೂ ಮಹಿಳಾ ದಾಸರ ಕೃತಿಗಳು ಅವಜ್ಞೆಗೆ ಒಳಗಾಗಿದ್ದು ಪಂಡಿತರ ಪೂರ್ವಾಗ್ರಹದಿಂದ. ಧಾರ್ಮಿಕ ಸಾಹಿತ್ಯ ಪ್ರಿಯರಿಗೆ ಹರಿದಾಸರ ಬಗ್ಗೆ ಇರುವ ಉತ್ಸಾಹ ಮಹಿಳಾ ದಾಸರ ಕುರಿತು ಇಲ್ಲ. ದಾಸ ಮಹಿಳೆಯರು ಹೆಚ್ಚಾಗಿ ಬೆಳಕಿಗೆ ಬಾರದೆ ಇರುವ ಕಾರಣಗಳು ಹಲವಾರು.

- ಆ ಕಾಲದ ಹೆಣ್ಣು ಮಕ್ಕಳಿಗೆ ಶಿಕ್ಷಣದ ಸೌಲಭ್ಯವಿರಲಿಲ್ಲ.
- ಮಹಿಳಾ ಹರಿದಾಸರೆಲ್ಲ ಸಾಮಾನ್ಯವಾಗಿ ಮೇಲ್ವರ್ಗದ ಜಾತಿಗಳಿಗೆ ಸೇರಿದವರು. ಅವರ ಸಾಹಿತ್ಯ ರಚನೆಗಳು ಬಹುತೇಕ ಬ್ರಾಹ್ಮಣ ಸಂಪ್ರದಾಯಸ್ಥ ಮನೆಗಳಲ್ಲಿ ಮಾತ್ರ ಪೂಜಾ ವಿಧಾನಗಳಲ್ಲಿ, ಮತ್ತಿತರ ಶಾಸ್ತ್ರಗಳಲ್ಲಿ ಬಳಕೆಯಲ್ಲಿತ್ತು.
- ಸಂಪ್ರದಾಯಸ್ಥ ಸಮಾಜವನ್ನು ಗಮನದಲ್ಲಿಟ್ಟುಕೊಂಡು ರಚಿಸಿರುವ ಕೃತಿಗಳಾದ್ದರಿಂದ ಜನ ಸಾಮಾನ್ಯರನ್ನು ತಲುಪಲಿಲ್ಲ.
- ಜನಸಂಪರ್ಕ, ವಿದ್ವಾಂಸರ ಒಡನಾಟ ಇತ್ಯಾದಿಗಳು ಬಹುತೇಕ ದಾಸ ಮಹಿಳೆಯರಿಗೆ ಇರಲಿಲ್ಲ. ಹೊರ ಪ್ರಪಂಚದ ಆಗು ಹೋಗುಗಳ ಮಾಹಿತಿಯೂ ಇರಲಿಲ್ಲ.

ಸಮಾಜದ ಒಂದು ವರ್ಗದ ಮಹಿಳೆಯರಿಗೆ ಮಾತ್ರ ಮೀಸಲಾದ ಈ ಸಾಹಿತ್ಯ ಪ್ರಕಾರ ಜನಪದ ಸಾಹಿತ್ಯದಂತೆ ಸಾರ್ವತ್ರಿಕತೆಯನ್ನು ಪಡೆದುಕೊಳ್ಳಲಿಲ್ಲ.

"ಕಟ್ಟುನಿಟ್ಟಿನ ವರ್ಣಾಶ್ರಮ ಧರ್ಮದ ಹಂಗನ್ನು ಕಿತ್ತೊಗೆಯಲು ಅಥವಾ ತೀವ್ರ ಸುಧಾರಣೆಗೆ ಒಳಪಡಿಸಿಕೊಳ್ಳಲು ಅವರಿಗೆ ಸಾಧ್ಯವಾಗದಿದ್ದುದು ಮತ್ತೊಂದು ಮುಖ್ಯ ಕಾರಣವಿರಬಹುದು.[3]" ಮಹಿಳೆಯರು ಕೇವಲ ಮನೆ, ಮಕ್ಕಳು, ಅತಿಥಿ ಸತ್ಕಾರ, ಅಡುಗೆ ಮನೆಗೇ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದರು. ಸಮಾಜ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳದುದು ಮತ್ತೊಂದು ಕೊರತೆ.

ಹರಿದಾಸರಿಗೆ ಇದ್ದ ಸ್ವಾತಂತ್ರ್ಯ, ಸೌಲಭ್ಯಗಳು ದಾಸ ಮಹಿಳೆಯರಿಗೆ ಇರಲಿಲ್ಲ. ಗೆಜ್ಜೆ ಕಟ್ಟಿ, ತಾಳ ತಂಬೂರಿ ಹಿಡಿದು, ಯಾಯವಾರ ವೃತ್ತಿ ನಡೆಸುವುದು ಸ್ತ್ರೀಯರಿಗೆ ಸಾಧ್ಯವಿರಲಿಲ್ಲ. ಇದಕ್ಕೆ ಅಪವಾದವೆಂಬಂತೆ ದಾಸ ಮಹಿಳೆಯಾದ ಅಂಬಾಬಾಯಿಯವರು ಹರಿದಾಸರಂತೆ ಹಾಡಿ, ಗೆಜ್ಜೆ ಕಟ್ಟಿ ಕುಣಿದು ಯಾಯವಾರ ವೃತ್ತಿ ನಡೆಸಿದರು. ಅಂಬಾಬಾಯಿಯವರಂತೆ ಇತರ ದಾಸ ಮಹಿಳೆಯರು ಇರಲು ಸಾಧ್ಯವಿರಲಿಲ್ಲ. ಮಹಿಳೆಯರ ಪಾಡೇ ಹೀಗಿರುವಾಗ ವಿಧವೆಯಾದ ದಾಸ ಮಹಿಳೆಗೆ ಸಮಾಜ ಯಾವ ಸ್ಥಾನ–ಮಾನ ನೀಡಿತ್ತು ಎಂದು ತಿಳಿಯಬಹುದು. ಇಂತಹ ದಾಸ ಮಹಿಳೆಯರ ಕೃತಿಗಳು ಬೆಳಕಿಗೆ ಬರುವ ಸಂದರ್ಭಗಳೂ ಬಹಳ ಕಡಿಮೆ. "ಹರಿದಾಸಿಯರು ತಮ್ಮ ಭಾವನೆಗಳನ್ನು ಕೀರ್ತನೆ ಇಲ್ಲವೇ ಹಾಡುಗಳ ಮೂಲಕ ತಮ್ಮ ಪಾಡಿಗೆ ತಾವು ಬಹುಶಃ ಒಂಟಿಯಾಗಿ ಆತ್ಮ ನಿವೇದನೆ ಮಾಡಿಕೊಳ್ಳುತ್ತಿದ್ದರು. ಎಲ್ಲೋ ಹಬ್ಬ ಹರಿದಿನ, ವ್ರತ ಪೂಜೆಗಳಲ್ಲಿ ಹಾಡುವ ಅವಕಾಶ ಬಂದಾಗ ಅಥವಾ ಯಾರಿಗಾದರೂ ಹೇಳಿಕೊಟ್ಟಾಗ ಅವರ ಹಾಡುಗಳು ಬೆಳಕಿಗೆ ಬರುತ್ತಿದ್ದವು."[4] ವಿಧವಾ ದಾಸ ಮಹಿಳೆಯರಿಗೆ ಈ ಅವಕಾಶವೂ ಇತ್ತೋ ಇಲ್ಲವೋ.

ದಾಸ ಮಹಿಳೆಯರು ಕೀರ್ತನೆ ಮತ್ತು ದೀರ್ಘ ಕೃತಿಗಳಿಗೆ ಪೌರಾಣಿಕ ಪ್ರಸಂಗಗಳನ್ನೇ ಹೆಚ್ಚಾಗಿ ಅವಲಂಬಿಸಿದರು. ಅಲ್ಲಿ ಬರುವ ಪಾತ್ರಗಳ ಮೂಲಕ ತಮ್ಮ ಒಳತೋಟಿಯನ್ನು ನಿವೇದಿಸಿದರು. ಹೆಣ್ಣಿನ ಸಾಮ್ರಾಜ್ಯವಾದ ಅಡುಗೆ ಮನೆ, ಅಡುಗೆಗಳನ್ನು ವಿಸ್ತಾರವಾಗಿ ವರ್ಣಿಸಿದ್ದಾರೆ. ಅಲಂಕಾರದ ಪರಿ, ಒಡವೆಗಳು, ವಸ್ತ್ರಗಳು ಇವುಗಳನ್ನು ಉತ್ಸಾಹದಿಂದ ನಿರೂಪಿಸಿದ್ದಾರೆ. ಪಾತ್ರಗಳ ಜೊತೆಗೆ ಅವುಗಳ ಸಂಕಷ್ಟದೊಂದಿಗೆ ತಾವೂ ಕಣ್ಣೀರು ಹಾಕಿದ್ದಾರೆ. ವ್ರತ, ಸಂಪ್ರದಾಯ, ಆಚರಣೆಗಳಿಗೆ ಸಂಬಂಧಿಸಿದಂತೆ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸಿದ್ದಾರೆ. ಸಂಪ್ರದಾಯದ ನಿಯಮಗಳಿಗೆ ಬದ್ಧವಾಗಿದ್ದರೂ ಕೆಲವು 'ಅತಿ'ಗಳಿಗೆ ವಿರೋಧವನ್ನೂ ತೋರಿದ್ದಾರೆ. ಗಿರಿಯಮ್ಮ ಹೆಣ್ಣಿಗೆ ಬೇಕೆನಿಸಿದಾಗ ತವರಿಗೆ ಹೋಗಿ ಬರಲು ಸ್ವಾತಂತ್ರ್ಯ ಬೇಕೆಂದರೆ, ಭೀಮವ್ವ ಹೆಣ್ಣಾಗಿ ಹುಟ್ಟಿದ ಮೇಲೆ ಕಷ್ಟ ತಪ್ಪದು ಎನ್ನುತ್ತಾರೆ. ನಂಜನಗೂಡು

ತಿರುಮಲಾಂಬಾರವರು ವೈಧವ್ಯವನ್ನು ಅನೇಕ ಕೃತಿಗಳಲ್ಲಿ ಮೂಲ ವಸ್ತುವಾಗಿರಿಸಿಕೊಂಡು ಸಾಹಿತ್ಯ ರಚಿಸಿದ್ದಾರೆ. ವಿಧವೆಯರ ಬಗ್ಗೆ ಅಪಾರ ಕರುಣೆ ಆತಂಕ ಹೊಂದಿದ್ದರೂ ಎಂದಿಗೂ ಮರುವಿವಾಹಕ್ಕೆ ಮನ್ನಣೆ ನೀಡಲಿಲ್ಲ. ಅಂತಹ ವರ್ತನೆಯನ್ನು "ಸ್ವೈರಾಲಾಪ" ಎಂದೇ ಕರೆದರು.

ಪ್ರಾರಂಭದಿಂದಲೂ ಅವಜ್ಞೆಗೆ ಗುರಿಯಾಗುತ್ತಲೇ ಬಂದ ಮಹಿಳಾ ದಾಸ ಸಾಹಿತ್ಯವು ಆಧುನಿಕತೆಯ ಪ್ರಭಾವದಿಂದ ಮತ್ತಷ್ಟು ಕ್ಷೀಣಿಸಿತು. ಅವಿಭಕ್ತ ಕುಟುಂಬಗಳು ಮರೆಯಾಗಿ ಸಂಪ್ರದಾಯದ ಆಚರಣೆಗಳು ದೂರವಾಗುತ್ತಾ ಬಂದಂತೆ ಅದಕ್ಕೆ ಸಂಬಂಧಿಸಿದ ಸಾಹಿತ್ಯವೂ ಕಣ್ಮರೆಯಾಗುತ್ತಾ ಬಂತು. 20ನೇ ಶತಮಾನದ ಆದಿ ಭಾಗದಲ್ಲಿ ಮತಾಂತರ ಪ್ರಕ್ರಿಯೆಗಳು ಹೆಚ್ಚಾಗಿ ಸನಾತನ ಧರ್ಮಕ್ಕೆ ಎಲ್ಲಿ ವಿಪತ್ತು ಒದಗುತ್ತದೋ ಎಂಬ ಆತಂಕ ಈ ಮಹಿಳೆಯರಲ್ಲಿತ್ತು. ಹಿಂದೂ ಧರ್ಮವನ್ನು ರಕ್ಷಿಸುವುದೆಂದರೆ ಅದರ ಮೂಲ ಸತ್ವಗಳಾದ ರಾಮಾಯಣ, ಮಹಾಭಾರತ, ಭಾಗವತ ಇವುಗಳನ್ನು ರಕ್ಷಿಸುವುದೆಂದೇ ಸಂಪ್ರದಾಯಸ್ಥ ಮಹಿಳೆಯರು ಭಾವಿಸಿದ್ದರು. ಕುಟುಂಬದ ಪರಿಸರದಲ್ಲೋ ಅಥವಾ ಶಾಲೆಯಲ್ಲೋ ತಾವು ಕಲಿತ ಅಕ್ಷರ ಜ್ಞಾನವನ್ನು, ಛಂದೋರೂಪಗಳನ್ನು, ಓದಿದ, ಕೇಳಿದ ಕಥೆಗಳನ್ನು, ಪೌರಾಣಿಕ ಪ್ರಸಂಗಗಳನ್ನು ಮತ್ತೆ ಮತ್ತೆ ದಾಖಲಿಸಿದರು. ಹರಿದಾಸರ ಕೃತಿಗಳನ್ನು ತದ್ವತ್ತಾಗಿ ಅನುಕರಣೆ ಮಾಡಿದರು.

ಮಹಿಳೆಯರು ತಮ್ಮ ಅಧ್ಯಾತ್ಮಿಕ ತುಡಿತಗಳಿಗೆ ಕೀರ್ತನೆಗಳನ್ನು ಮಾಧ್ಯಮವನ್ನಾಗಿ ಮಾಡಿಕೊಂಡರು. ದುಃಖವಾದಾಗ ಅದನ್ನೇ ಹಾಡುವುದರ ಮೂಲಕ ನಿವಾರಣೆಗೆ ಯತ್ನಿಸಿದರು. ತಮ್ಮ ಬದುಕಿನ ಸೀಮಿತ ಗುರಿಗಳನ್ನು ಮುಟ್ಟಲು, ಹತಾಶೆಗಳನ್ನು ಮೆಟ್ಟಲು ದೈವಭಕ್ತಿಯೊಂದೇ ಅವರಿಗಿದ್ದ ದಾರಿ. ಹರಿಭಕ್ತಿಯೇ ಅವರ ಸಾಧನ ಮಾರ್ಗ. ಹೀಗೆ ಮಹಿಳಾ ದಾಸರು ಬದುಕಿದ ರೀತಿ, ಅವರಿಗಿದ್ದ ಸಾಂಸಾರಿಕ, ಸಾಹಿತ್ಯಿಕ ಮಿತಿಗಳು, ಸೀಮಿತ ದೃಷ್ಟಿಕೋನ, ಇವುಗಳ ಹಿನ್ನೆಲೆಯಲ್ಲಿ ಮಹಿಳೆಯರ ಹರಿದಾಸ ಸಾಹಿತ್ಯವನ್ನು ಕುರಿತು ವಿವೇಚಿಸಲಾಗಿದೆ. ಹರಿದಾಸ ಸಾಹಿತ್ಯ ವಿಮರ್ಶಕರು ಮತ್ತು ಸಂಶೋಧಕರು ನಿರ್ಲಕ್ಷಿಸಿದ್ದ ಮಹಿಳಾ ಹರಿದಾಸ ಸಾಹಿತ್ಯವನ್ನು ಇಲ್ಲಿ ಲಭ್ಯವಿದ್ದಷ್ಟು ಸಂಗ್ರಹಿಸಿ ಸಮೀಕ್ಷಿಸಲಾಗಿದೆ. ಹಿಂದಿನವರ ಕೀರ್ತನೆಗಳ ರಕ್ಷಣೆ, ಪ್ರಚಾರ ಮತ್ತು ಸ್ವಂತ ಕೃತಿಗಳ ಮೂಲಕ ದಾಸ ಪರಂಪರೆಯನ್ನು ಉಳಿಸಿ ಬೆಳೆಸಿದವರಲ್ಲಿ ಮಹಿಳೆಯರ ಪಾತ್ರವೂ ಉಲ್ಲೇಖನೀಯವಾದುದು.

ಮಹಿಳಾ ಹರಿದಾಸರ ವೈಶಿಷ್ಟ:

- ಮಹಿಳಾ ಹರಿದಾಸರ ವಿಶಿಷ್ಟತೆ ಏನು ಎಂಬ ಪ್ರಶ್ನೆ ಇಲ್ಲಿ ಸಹಜವಾಗಿ ಮೂಡುತ್ತದೆ. ಮಹಿಳಾ ಹರಿದಾಸರು ಪರಂಪರಾಗತ ಹರಿದಾಸ ಪರಂಪರೆಯನ್ನೇ ಮುಗ್ಧವಾಗಿ ಅನುಸರಿಸಿದ್ದಾರೆ. ಹಿಂದಿನ ಹರಿದಾಸ ಸಾಹಿತ್ಯದ ಸಾಮಾನ್ಯ ಆಶಯಗಳೇ ಇಲ್ಲಿಯೂ ಪುನರುಕ್ತಿಯಾಗಿವೆ. ಈ ಆಶಯಗಳನ್ನು

ಮತ್ತಷ್ಟು ಸರಳಗೊಳಿಸಿ ಅವಿದ್ಯಾವಂತರಾದ ಸಾಮಾನ್ಯ ಮಹಿಳೆಯರಿಗೆ ತಲುಪಿಸುವ ಉದ್ದೇಶ ಒಂದು ಕಡೆ, ಪ್ರಾಚೀನ ಹರಿದಾಸರ ಪರಂಪರೆಯ ಆಶಯಗಳನ್ನು ತಮ್ಮದೇ ಭಾಷೆಯಲ್ಲಿ ನಿರೂಪಿಸಿ ಆತ್ಮ ತೃಪ್ತಿ ಪಡೆಯುವ ಮನೋಭಾವ ಇವರದ್ದು. ದಾಸ ಸಾಹಿತ್ಯ ರಚನೆಯು ತಮಗಾಗಿ ಮತ್ತು ಇತರರಿಗಾಗಿ ಎಂದು ಭಾವಿಸಿದ್ದ ದಾಸ ಮಹಿಳೆಯರು ತಮ್ಮ ಕೃತಿಗಳ ಜೊತೆಗೆ ಇತರ ಹರಿದಾಸರ ಕೃತಿಗಳನ್ನು ಒಂದು ಸಮುದಾಯಕ್ಕೆ ಹೇಳಿಕೊಡುವ ಮೂಲಕ ದಾಸ ಸಾಹಿತ್ಯದ ಸತ್ವವನ್ನು ವರ್ಗಾವಣೆ ಮಾಡುವ ಕಾರ್ಯವನ್ನು ತಮಗರಿವಿಲ್ಲದಂತೆಯೇ ಮಾಡಿದರು. ತಮ್ಮ ರಚನೆಗಳು ಕೇವಲ ತಮ್ಮ ಆತ್ಮ ತೃಪ್ತಿಗಾಗಿ ಎಂದು ಭಾವಿಸಿದರು.

- ಕೀರ್ತನೆಗಳು, ವ್ರತಕಥೆಗಳು, ಸಂಪ್ರದಾಯದ ಹಾಡುಗಳಲ್ಲಿ ಕಂಡು ಬರುವ ಪುನರುಕ್ತಿ ಇವರಿಗೆ ದೋಷ ಎನಿಸಲಿಲ್ಲ. ಒಂದೇ ಕಾವ್ಯ ವಸ್ತುವನ್ನು ಕುರಿತು ಹಲವಾರು ಮಂದಿ ಮಹಿಳಾ ದಾಸರು ಬೇರೆ ಬೇರೆ ಶೈಲಿಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಅವರ ಮಟ್ಟಿಗೆ ಒಂದೊಂದು ಕೃತಿಯೂ ಸ್ವತಂತ್ರ ಎನಿಸಿದರೂ ಕಾವ್ಯ ವಸ್ತುವಿನಲ್ಲಿ, ನಿರೂಪಣೆಯಲ್ಲಿ, ಶೈಲಿಯಲ್ಲಿ ಹಿಂದಿನವರ ಪ್ರಭಾವವನ್ನು ನಿಚ್ಚಳವಾಗಿ ಗುರುತಿಸಬಹುದು. ಇವರು ಪರಂಪರೆಯನ್ನು ಬೆನ್ನಿಗೆ ಆನಿಸಿಕೊಂಡೇ ಬದುಕಿದವರು. ಸಂಪ್ರದಾಯ, ಪರಂಪರೆಯನ್ನು ಅನುಸರಿಸುವ ಮೂಲಕ ಅದನ್ನು ಉಳಿಸುವುದು ಅವರ ಮುಖ್ಯ ಧ್ಯೇಯವಾಗಿತ್ತೇ ಹೊರತು ಅವುಗಳನ್ನು ವಿರೋಧಿಸಿ ಸುಧಾರಣೆ ತರುವ ಯಾವ ಘನತರವಾದ ಉದ್ದೇಶವೂ ಇವರಿಗೆ ಇರಲಿಲ್ಲ. ಹರಿದಾಸರು ನಂಬಿಕೊಂಡು ಬಂದಿದ್ದ ಭಕ್ತಿ ಪ್ರಕ್ರಿಯೆಗಳ ಅನುಸಂಧಾನ, ತತ್ವ ಸಿದ್ಧಾಂತಗಳ ಉಲ್ಲೇಖಗಳು ಇದರಲ್ಲೂ ಮುಂದುವರೆದಿವೆ. ಹೀಗಾಗಿ ದಾಸ ಸಾಹಿತ್ಯದ ಸಾಮಾನ್ಯ ಆಶಯಗಳನ್ನೇ ಇವರ ರಚನೆಗಳಲ್ಲಿ ಗುರುತಿಸಬಹುದು.
- ದಾಸ ಮಹಿಳೆಯರು ತಮ್ಮನ್ನು ಹರಿದಾಸ ಪರಂಪರೆಯ ಒಂದು ಭಾಗವಾಗಿಯೇ ಗುರುತಿಸಿಕೊಂಡವರು. ಮಹಿಳಾ ದಾಸರೆಂಬ ಪ್ರತ್ಯೇಕತೆ ಸ್ಥಾಪಿಸಲಿಲ್ಲ. ಹೀಗಾಗಿ ಭಕ್ತಿಯ ವಿಷಯದಲ್ಲಿ ಪುರುಷ ದಾಸರಿಗಿಂತ ಭಿನ್ನವಾದ ವಿಶಿಷ್ಟ ಧೋರಣೆಗಳನ್ನು ಇವರಲ್ಲಿ ಗುರುತಿಸಲು ಸಾಧ್ಯವಿಲ್ಲ. ಪರಂಪರೆಯನ್ನು, ಧಾರ್ಮಿಕ ಮೌಲ್ಯಗಳನ್ನು ಹೆಣ್ಣು ಮಕ್ಕಳಲ್ಲಿ ಸ್ಥಿರಗೊಳಿಸಿ ಭಕ್ತಿ ಸಾಹಿತ್ಯವನ್ನು ಮಹಿಳೆಯರಿಗೆ ಆತ್ಮೀಯವಾಗುವಂತೆ ಮಾಡಿದ್ದು ಇವರ ವೈಶಿಷ್ಟ್ಯ.
- ದೇವರ ವಿಷಯದಲ್ಲಿ ಪುರುಷರಿಗಿಂತಲೂ ಹೆಚ್ಚಾಗಿ, ಸಹಜವಾಗಿ ಭಕ್ತಿ ಶ್ರದ್ಧೆಗಳಿರುವುದು ಮಹಿಳೆಯರಲ್ಲಿ. ಹಾಡುಗಾರಿಕೆಯೂ ಸ್ತ್ರೀಯರಿಗೆ ಸಹಜ ಮನೋಧರ್ಮ. ಸಂಸಾರ ತಾಪತ್ರಯಗಳ ಹಿಡಿತದಿಂದ ತಾತ್ಕಾಲಿಕ ಬಿಡುಗಡೆ ಹೊಂದಲು ದೈವದ ಮೊರೆಹೋಗುವುದು ಅವರಿಗೆ ಅನಿವಾರ್ಯವಾಗಿತ್ತು. ಇಂತಹ

ಸಂದರ್ಭಗಳಲ್ಲಿ ತಮ್ಮ ಸೀಮಿತ ಅನುಭವದ ವಲಯದಲ್ಲಿಯೇ ಹಾಡುಗಳನ್ನು ಕಟ್ಟಿ ಮಹಿಳೆಯರಿಗಾಗಿಯೇ ಸಾಹಿತ್ಯ ರಚಿಸಿದ್ದು ಇವರ ವೈಶಿಷ್ಟ್ಯ.

- ತಮಗೆ ವೈಧವ್ಯದಂತಹ ಅನಿವಾರ್ಯ ಸಂಕಷ್ಟ ಎದುರಾದಾಗ ಬದುಕಿನಲ್ಲಿ ಶ್ರದ್ಧೆಯನ್ನು ಕಳೆದುಕೊಳ್ಳದೆ ಸಂಪೂರ್ಣವಾಗಿ ದೇವರನ್ನೇ ಅವಲಂಬಿಸುವುದು ಸಂಸ್ಕಾರವಂತ ಮಹಿಳೆಯರ ಸಹಜ ಪ್ರವೃತ್ತಿ. ಈ ಅವಲಂಬನೆ ಹಾಡುಗಳ ರೂಪದಲ್ಲಿ ವ್ಯಕ್ತವಾಗಿದೆ. ಅವರ ಎಲ್ಲ ಭಾವನೆಗಳಿಗೆ ಪೌರಾಣಿಕ ಪಾತ್ರಗಳ ಮೂಲಕ ಅಭಿವ್ಯಕ್ತಿ ದೊರೆತಿದೆ.

- ಮಹಿಳಾ ಹರಿದಾಸರು ಶಾಸ್ತ್ರಾಭ್ಯಾಸ ಮಾಡಿದವರಲ್ಲ. ಪೂರ್ವಿಕರ ಸಂಪ್ರದಾಯ, ತಮ್ಮ ಸುತ್ತ ಮುತ್ತಲ ಸಮಾಜದಲ್ಲಿದ್ದ ಆಸ್ತಿಕ ವಾತಾವರಣ, ಕೀರ್ತನೆ, ಕಾವ್ಯ, ಪುರಾಣಗಳ ಶ್ರವಣದಿಂದ ಪಡೆದುಕೊಂಡ ತಿಳುವಳಿಕೆ ಇವಿಷ್ಟೆ ಇವರ ಕಾವ್ಯ ವಿದ್ಯಾ ಪರಿಜ್ಞಾನ.

- ಸಂಸಾರಿಗಳಾಗಿದ್ದುಕೊಂಡೇ ಪರಮಾರ್ಥ ಸಾಧನೆಯಲ್ಲಿ ತೊಡಗಿಕೊಂಡದ್ದು ಇವರ ವಿಶೇಷತೆ. ಸಂಸಾರ ತಾಪತ್ರಯಗಳಿಂದ ಪಲಾಯನ ಮಾಡುವ ವೈರಾಗ್ಯ ಇವರದ್ದಲ್ಲ. ಸಂಸಾರದಲ್ಲಿದ್ದೇ ಅಧ್ಯಾತ್ಮ ಸಾಧನೆ ಮಾಡುವ ಸ್ಥಿತ ಪ್ರಜ್ಞತೆ ಈ ದಾಸ ಮಹಿಳೆಯರದ್ದು.

- ಮಹಿಳಾ ದಾಸರಲ್ಲಿ ಬಹಳಷ್ಟು ಮಂದಿ ಮಾಧ್ವ ಮತಾವಲಂಬಿಗಳಾಗಿದ್ದರೂ ಅವರಲ್ಲಿ ಹರಿದಾಸರಿಗಿದ್ದಂತಹ ಸ್ವಮತ ವಿಷಯಕವಾದ ಹಠ ಅಥವಾ ಶಾಠ್ಯ ಇರಲಿಲ್ಲ ಎಂಬುದು ಇವರ ವೈಶಿಷ್ಟ್ಯ. ಗಲಗಲಿ ಅವ್ವನವರಂತಹ ಅತಿ ಸಂಪ್ರದಾಯದ ಮಹಿಳೆಯನ್ನು ಬಿಟ್ಟರೆ ಇನ್ನುಳಿದವರಲ್ಲಿ ಮತದ ವಿಚಾರವಾದ ಕಠಿಣತೆ ಇರಲಿಲ್ಲ.

- ದಾಸ ಮಹಿಳೆಯರ ಕೃತಿಗಳ ವಸ್ತುವಿನ ಆಯ್ಕೆಯಲ್ಲಿ ಹೊಸತನವನ್ನು ಕಾಣದಿದ್ದರೂ ಗಿರಿಯಮ್ಮನ 'ಲವಕುಶರ ಕಥೆ' ಮತ್ತು ನಿಡಗುರುಕಿ ಜೀವೂಬಾಯಿಯವರ 'ಶ್ರೀರಾಮ ಜನನ ಮತ್ತು ಸೀತಾ ಕಲ್ಯಾಣ', ಓರವಾಯಿ ಲಕ್ಷ್ಮೀದೇವಮ್ಮನವರ 'ದ್ರೌಪದಿ ವಸ್ತ್ರಾಪಹರಣ' ಮುಂತಾದ ಕೃತಿಗಳಲ್ಲಿ ಸ್ವತಂತ್ರ ಚಿಂತನೆಯ ಮಾರ್ಪಾಟುಗಳನ್ನು ಗುರುತಿಸಬಹುದು. ಈ ಮಹಿಳೆಯರು ಸಂಸ್ಕೃತ ಕಲಿತವರಲ್ಲ, ಹಾಗಾಗಿ ಅವರಲ್ಲಿ ಕನ್ನಡ ಪ್ರೇಮ ಸಹಜವಾಗಿಯೇ ಇತ್ತು. ಕನ್ನಡದಲ್ಲಿ ಸುಲಭ ಶೈಲಿಯಲ್ಲಿ ಕೃತಿಗಳನ್ನು ರಚಿಸಬೇಕೆಂಬ ಪ್ರವೃತ್ತಿಗೆ ಇದು ಪೋಷಕವಾಯಿತು. ಗಲಗಲಿಅವ್ವನಂತಹ ಕೆಲವರು ಇಲ್ಲಿ ಪ್ರತ್ಯೇಕವಾಗಿ ನಿಲ್ಲುತ್ತಾರೆ.

- ಅಂಬಾಬಾಯಿಯವರನ್ನು ಬಿಟ್ಟರೆ ಇತರ ಯಾವ ದಾಸ ಮಹಿಳೆಯರೂ ಗೆಜ್ಜೆ ಕಟ್ಟಿ, ತಾಳ ತಂಬೂರಿ ಹಿಡಿದು ಸಂಚಾರ ಹೊರಟವರಲ್ಲ. ಮನೆಯ ಸೀಮಿತ ವಾತಾವರಣದಲ್ಲಿಯೇ ಸ್ವಂತ ನೆಮ್ಮದಿಗಾಗಿ ಹಾಡುಗಳನ್ನು ರಚಿಸಿ ತಾವೇ ಹಾಡಿಕೊಂಡರು. ತಮ್ಮ ಸಾಹಿತ್ಯ ರಚನೆಯಿಂದ ಸಮಾಜವನ್ನು ಜಾಗೃತಗೊಳಿಸಬೇಕೆಂಬ ಅಥವಾ ಉದ್ಧಾರ ಮಾಡಬೇಕೆಂಬ ಯಾವ ಹುಸಿ ಕಲ್ಪನೆಯೂ ಇವರಲ್ಲಿ ಇರಲಿಲ್ಲ. ಆಸಕ್ತರಾದ ಕೆಲವೇ ಮಹಿಳೆಯರಿಗೆ ಹಾಡುವ ಕಲೆಯನ್ನು ಹೇಳಿಕೊಟ್ಟರು. ಹೀಗಾಗಿ ಇವರಲ್ಲಿ ಬಹಳಷ್ಟು ಮಂದಿಯ ಹಾಡುಗಳು ಲಿಖಿತ ರೂಪ ಪಡೆಯದೆ, ವಾಗ್ರೂಪದಲ್ಲಿ ಹರಿದು ಬಂದು ಕಾಲ ಕ್ರಮೇಣ ಮರೆಯಾಗಿರುವ ಸಾಹಿತ್ಯವೇ ಹೆಚ್ಚು.

ಪ್ರಥಮ ದಾಸ ಮಹಿಳೆಯಾದ ಗಲಗಲಿ ಅವ್ವನವರಿಂದ ಪ್ರಾರಂಭಿಸಿ ಜೀವೂಬಾಯಿಯವರವರೆಗೆ ಹದಿನಾಲ್ಕು ಮಂದಿ ದಾಸ ಮಹಿಳೆಯರ ಜೀವನ–ಕೃತಿಗಳನ್ನು ವಿಶ್ಲೇಷಣೆಯಲ್ಲಿ ಬಳಸಲಾಗಿದೆ. ಆಧುನಿಕ ಮಹಿಳಾ ಹರಿದಾಸರೆಂದು ಗುರುತಿಸಲಾಗಿರುವ ಸುಮಾರು 28 ಮಂದಿ ರಚನೆಕಾರರ ಸಾಹಿತ್ಯವೂ ಸಾಹಿತ್ಯ ಚರಿತ್ರೆಗಳಲ್ಲಾಗಲೀ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ಸಮಗ್ರ ದಾಸ ಸಾಹಿತ್ಯ ಸಂಪುಟಗಳಲ್ಲಾಗಲೀ ಉಲ್ಲೇಖವಾಗಿಲ್ಲ. ಇವರ ಬಗ್ಗೆ ಬಿಡಿ ಲೇಖನಗಳು, ಬಿಡಿ ಸಂಕಲನಗಳು ಪ್ರಕಟವಾಗಿದ್ದು, ಅಪ್ರಕಟಿತ ಸಾಮಗ್ರಿಯೇ ಹೆಚ್ಚಾಗಿದೆ. ಇವರಲ್ಲದೆ ಹರಿದಾಸ ಅಂಕಿತವನ್ನು ಪಡೆದು ದಾಸ ಮಾರ್ಗವನ್ನು ಅನುಸರಿಸಿದ ಸುಮಾರು 560 ಮಂದಿ ಮಹಿಳೆಯರನ್ನು ಅಜ್ಞಾತ ಮಹಿಳಾ ಹರಿದಾಸರು ಎಂದು ಗುರುತಿಸಲಾಗಿದೆ. ಹೀಗೆಯೇ ಅಂಕಿತವನ್ನು ಪಡೆದುಕೊಂಡು, ಅವರ ಹೆಸರೂ ಗೊತ್ತಿಲ್ಲದ ಅನಾಮಧೇಯ ಮಹಿಳಾ ಹರಿದಾಸರು ಸುಮಾರು 50 ಮಂದಿ ಇದ್ದಾರೆ. ಹರಿದಾಸ ಸಾಹಿತ್ಯದ ರಚನೆ ಮತ್ತು ರಕ್ಷಣೆಯಲ್ಲಿ ಇವರೆಲ್ಲರ ಪಾತ್ರ ಗಣನೀಯವಾದದ್ದಾದರೂ ಸಾಹಿತ್ಯ ಕೃತಿಗಳು ಲಭ್ಯವಿಲ್ಲದಿರುವುದರಿಂದ ಅಧ್ಯಯನಕ್ಕೆ ಅವಕಾಶವಾಗಿಲ್ಲ. ಮಹಿಳಾ ಹರಿದಾಸರ ಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು ಸ್ವಾತಂತ್ರ್ಯ ಪೂರ್ವದಲ್ಲಿ ಜನಿಸಿದ ಮಹಿಳಾ ಹರಿದಾಸರನ್ನು ಮಾತ್ರ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಹತ್ತೊಂಬತ್ತು, ಇಪ್ಪತ್ತನೇ ಶತಮಾನಗಳ ಅವಧಿಯಲ್ಲಿ ಸಾಂಪ್ರದಾಯಿಕವಾಗಿ ಹರಿದಾಸ ಅಂಕಿತ ಪಡೆದು ಧಾರ್ಮಿಕ ವಲಯದಲ್ಲಿ ತಮ್ಮನ್ನು ಗುರುತಿಸಿಕೊಂಡ ದಾಸ ಮಹಿಳೆಯರ ಸಂಖ್ಯೆ 800ನ್ನೂ ಮೀರುತ್ತದೆ. ಒಂದೇ ಹೆಸರಿನ ಹಲವು ವ್ಯಕ್ತಿಗಳು, ಒಂದೇ ಅಂಕಿತ ಪಡೆದುಕೊಂಡ ಹಲವು ಮಹಿಳೆಯರು, ಅಂಕಿತ ಸಾಮ್ಯ, ಇವುಗಳಿಂದ ಅಧ್ಯಯನದಲ್ಲಿ ಉಂಟಾಗಬಹುದಾದ ತೊಡಕುಗಳನ್ನು ನಿವಾರಿಸಲು ಅಂಕಿತ ಪಡೆದ ಮಹಿಳೆಯರ ವಿವರಗಳನ್ನು ಅಜ್ಞಾತ ಮಹಿಳಾ ಹರಿದಾಸರ ಭಾಗದಲ್ಲಿ ನೀಡಲಾಗಿದೆ. ಹೀಗಾಗಿ ಅರ್ವಾಚೀನ ಮಹಿಳಾ ಹರಿದಾಸರು, ಪ್ರಮುಖ ಮಹಿಳಾ ಹರಿದಾಸರು, ಆಧುನಿಕ ಮಹಿಳಾ ಹರಿದಾಸರು,

ಅಜ್ಞಾತ ಮಹಿಳಾ ಹರಿದಾಸರು ಇವೆಲ್ಲ ಅಧ್ಯಯನದ ದೃಷ್ಟಿಯಿಂದ ಮಾಡಿಕೊಂಡ ಔಪಚಾರಿಕ ವಿಭಾಗಗಳಷ್ಟೇ ಆಗಿವೆ.

ದ್ವೈತ ಸಿದ್ಧಾಂತದ ಹಿನ್ನೆಲೆಯಲ್ಲಿ ಪರಂಪರೆ, ಸಂಪ್ರದಾಯ ಮತ್ತು ನಂಬಿಕೆಗಳ ಮಿತಿಯಲ್ಲಿ ಸಾಹಿತ್ಯವನ್ನು ರಚಿಸಿದ್ದ, ಮಹಿಳಾ ಹರಿದಾಸರಿಗಿದ್ದ ಭಾರತ, ರಾಮಾಯಣ, ಭಾಗವತ ಮತ್ತು ಪುರಾಣಗಳ ಪರಿಚಯ ಅವರ ದೀರ್ಘ ಕೃತಿಗಳಲ್ಲಿ ದೊರೆಯುತ್ತವೆ. ಅಡುಗೆ, ಊಟೋಪಚಾರ, ಒಡವೆ, ವಸ್ತ್ರ, ಪೂಜೆ, ವ್ರತಗಳ ಆಚರಣೆ ಇವುಗಳ ಬಗ್ಗೆ ಮಹಿಳೆಯರು ತೋರುವ ಉತ್ಸಾಹ ಅವರ ಕೃತಿಗಳಲ್ಲಿ ವ್ಯಕ್ತವಾಗಿದೆ. ಇವುಗಳನ್ನು ಪ್ರತ್ಯೇಕವಾಗಿ ಅನುಬಂಧಗಳಲ್ಲಿ ಕೊಡಲಾಗಿದೆ.

ಒಂದು ಸಿದ್ಧ ಕಾವ್ಯ ಮಾರ್ಗವನ್ನು ಯಥಾವತ್ತಾಗಿ ಅನುಸರಿಸಿದ್ದರಿಂದ ದಾಸ ಮಹಿಳೆಯರ ಕೃತಿಗಳಲ್ಲಿ ಹಿಂದಿನ ಹರಿದಾಸರ ಭಾಷಾ ಶೈಲಿಗಳೇ ಪುನರುಕ್ತಿಯಾದಂತೆ ಕಂಡು ಬರುತ್ತದೆ. ಇದನ್ನು ಕಾವ್ಯ ದೋಷವೆಂದು ಅವರು ಪರಿಗಣಿಸಲಿಲ್ಲ. ಅನುಕರಣೆ ಅವರು ಒಪ್ಪಿಕೊಂಡ ಕಾವ್ಯ ಮಾರ್ಗ. ಹೀಗಾಗಿ ರಾಗ, ತಾಳ, ಲಯ, ಛಂದೋರೂಪಗಳು, ವಸ್ತುವಿನ ಆಯ್ಕೆ, ಕಥಾ ಸಂದರ್ಭಗಳು ಇವೆಲ್ಲವೂ ಪರಂಪರಾಗತ ಹರಿದಾಸ ಮಾರ್ಗದ ಮುಂದುವರಿಕೆಯೇ ಆಗಿದೆ.

ಜನಪದ ಹಾಡುಗಳ ಅಧ್ಯಯನ ನಡೆದಂತೆ ಬ್ರಾಹ್ಮಣರ ಸಂಪ್ರದಾಯದ ಹಾಡುಗಳ ಅಧ್ಯಯನವೂ ನಡೆದಿದ್ದರೆ ಈ ವೇಳೆಗೆ ಅನೇಕ ಮಂದಿ ಕೀರ್ತನಕಾರ್ತಿಯರ ಕೃತಿಗಳು ಪ್ರಸಿದ್ಧಿಗೆ ಬರುತ್ತಿದ್ದವು. ಆಧುನಿಕ ಯುಗದಲ್ಲಿ ಕಥೆ, ಕಾವ್ಯ, ಕಾದಂಬರಿ, ಭಾವಗೀತೆ, ಚಲನಚಿತ್ರ ಮತ್ತು ಶ್ರವ್ಯ–ದೃಶ್ಯ ಮಾಧ್ಯಮಗಳ ಜನಪ್ರಿಯತೆಯಲ್ಲಿ ಭಕ್ತಿ ಸಾಹಿತ್ಯದ ರಚನೆಯ ಕಾಲ ಮುಗಿದು ಹೋಯಿತೆಂದೇ ಭಾವಿಸಬೇಕಿಲ್ಲ. ಧಾರ್ಮಿಕ ಪ್ರವೃತ್ತಿಯ, ದಾಸ ಮಾರ್ಗದ ಅನುಸರಣೆಯನ್ನು ಆಧುನಿಕ ಮಹಿಳೆಯರಲ್ಲೂ ವ್ಯಾಪಕವಾಗಿ ಕಾಣಬಹುದು. ಇವರಲ್ಲಿ ಹರಿದಾಸರ ಕೃತಿಗಳ ಅಧ್ಯಯನ ಮಾಡುವವರು, ಅಭ್ಯಾಸ ಮಾಡಿಸುವವರು, ಸ್ವಂತ ಕೃತಿಗಳನ್ನು ಆತ್ಮ ತೃಪ್ತಿಗಾಗಿಯೋ, ಭಕ್ತಿಯ ಅಭಿವ್ಯಕ್ತಿಗಾಗಿಯೋ ರಚನೆ ಮಾಡುತ್ತಿರುವವರು ಸಾಕಷ್ಟು ಮಂದಿ ಇದ್ದಾರೆ. ತಮ್ಮನ್ನು ಯಾರಾದರೂ ಸಾಹಿತಿಗಳೆಂದು ಗುರುತಿಸಲಿ, ಬಿಡಲಿ, ವಿಚಾರವಂತರು, ವಿಮರ್ಶಕರು ಏನಾದರೂ ಹೇಳಿಕೊಳ್ಳಲಿ ಅದನ್ನು ಮನಸಿಗೆ ತಂದುಕೊಳ್ಳದೆ ನಿರ್ಲಿಪ್ತವಾಗಿ ಭಕ್ತಿ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಮಹಿಳೆಯರಿಂದ ಮಹಿಳಾ ದಾಸ ಸಾಹಿತ್ಯ ಬೆಳೆಯುತ್ತಲೇ ಇದೆ. ಇದನ್ನು ಗುರುತಿಸಿ ಕಾಲಕಾಲಕ್ಕೆ ಪ್ರಕಟಿಸಿ ದಾಖಲಿಸುವುದು ಸಾಹಿತ್ಯ ಚರಿತ್ರೆಯಲ್ಲಿ ಅಗತ್ಯವಾಗಿ ಆಗಬೇಕಾದ ಕೆಲಸ. ಇಂಥ ಪ್ರಯತ್ನಕ್ಕೆ ಪ್ರೇರಣೆ ನೀಡುವಂತಾದರೆ ಈ ಅಧ್ಯಯನದ ಉದ್ದೇಶ ಸಫಲವಾಗುತ್ತದೆಂದು ಭಾವಿಸುತ್ತೇನೆ.

ಅಡಿ ಟಿಪ್ಪಣಿ

	ಲೇಖಕರ ಹೆಸರು	ಕೃತಿಯ ಹೆಸರು	ಪುಟದ ಸಂಖ್ಯೆ
1.	ಗಾಯತ್ರಿ ನಾವಡ	ಈ ಪರಿಯ ಸೊಬಗು	ಪುಟ–328
2.	ಅದೇ		ಪುಟ–328
3.	ಎಂ.ಆರ್. ಲಕ್ಷ್ಮೀದೇವಿ	ಗಲಗಲಿ ಅವ್ವ	ಪುಟ–3
4.	ಅದೇ		ಪುಟ–6

ಅನುಬಂಧ-1

ದಾಸ ಮಹಿಳೆಯರ ಸಂಪ್ರದಾಯದ ಹಾಡುಗಳಲ್ಲಿ, ದೀರ್ಘ ಕೃತಿಗಳಲ್ಲಿ ಉಲ್ಲೇಖವಾಗಿರುವ:

1) <u>ಅಡುಗೆಗಳು:</u>

ಅತಿರಸ
ಅನಾರಸ
ಅಪ್ಪಾಲು
ಅವಲಕ್ಕಿ
ಅಕ್ಕಿ
ಅಣ್ಣಿವಾಲು
ಅನ್ನ
ಅವರಿಸಾರು
ಅಪ್ಪಗುಳ್ಳ
ಅಂಬಲಿ
ಆಂಬೊಡೆ
ಇಡ್ಡಲಿ
ಉಪ್ಪೇರಿ
ಉಪ್ಪಿನಕಡುವು
ಉಂಡೆ
ಉಪ್ಪು
ಉಪ್ಪಿನಕಾಯಿ
ಉಪ್ಪಿನೆಸರು
ಎಣ್ಣೋರಿಗೆ
ಎಳನೀರು
ಎಳ್ಳುಮಂಡಿಗೆ
ಓಗರ
ಕಜ್ಜಾಯ
ಕಡುಬು
ಕಡಲೆಗುಗ್ಗರಿ
ಕಡಲೆಹೂರಣ
ಕರ್ಪೂರದ ಅಡಿಕೆ
ಕಡಲೆ
ಕಡಲೆಬೇಳೆ ತವ್ವಿ
ಕಣಿಕ

ಕಣಕ ಹ್ವಾಲಗ
(ಕಣಕದ ಹೋಳಿಗೆ)
ಕಡಲೆಹೂರಣಗಡುವು
ಕರ್ಜಿಕಾಯಿ
ಕಲಸನ್ನ
ಕಾಯಾಲು
ಕಾಯಿರಸ
ಕೀರು
ಕೆನೆಮೊಸರು
ಕೇಸರಿಭಾತು
ಕೊಬ್ಬರಿ
ಕೊಬ್ಬರಿಖಾರ
ಕೋಸಂಬರಿ
ಕ್ಷೀರ
ಕಂದಮೂಲ
ಖಾರಚರ್ವಣೆ
ಖಂಡ ಸಕ್ಕರೆ
ಗಿಲಗಂಚಿ
ಗುಳ್ಳೋರಿಗೆ
ಗೇಹೂರಿ (ಗೇಹೂರ)
ಗೌಲಿ (ಗವಲಿ)
ಘೃತ
ಚಕ್ಕುಲಿ
ಚಟ್ಟಣೆ
ಚಿರೋಟಿ
ಚಿತ್ರಾನ್ನ
ಚಿಗುಳಿ
ಚುರ್ಮಲಾಡು
ಛಿದ್ರಾಭಕ್ಷ್ಯ
ಜಿಲೇಬಿ
ಜೇನುತುಪ್ಪ

ಜೋಳದನ್ನ
ತವ್ವೆ
ತುಪ್ಪ
ತುಪ್ಪಕಜ್ಜಾಯ
ತುರಿಗಾಯಿ ಕಡುಬು
ತುಳಿಯ ಕಟ್ಟಂಬಲಿ
ತೆಂಗಿನಕರಿ
ತೇಂತೊಳಿ (ತೇಂಗೊಳಲು)
ತೌತೌಭಾತು
ದಧ್ಯಾನ್ನ
ದಧಿ
ದೋಸೆ
ನವನೀತ
ನವಲಿಪಾಕದ ಭಕ್ಷ್ಯ
ನೊರೆಹಾಲು
ನಿಂಬೆಭಾತು
ನುಚ್ಚು (ಹುಳಿನುಚ್ಚು)
ನುಚ್ಚಿನಂಬಲಿ
ಪರಮಾನ್ನ
ಪಳದ್ಯ
ಪರಡಿ
ಪಲ್ಯ
ಪಾಯಸ
ಪಾನಕ
ಪಾಲು
ಪ್ರತಕ
ಫೇಣಿ
ಪುಷ್ಪಮಂಜರದ ಅಕ್ಕಿ ಅನ್ನ
ಬಕಾಳಿಭಾತು
ಬಜ್ಜಿ

ಬಟ್ಟಿವಿ
ಬಾಳಕ
ಬಾಳೆದಾಡಿಗೆ ಪಾಯಸ
ಬಿಳಿಯದಳಿಯದುಂಡೆ
ಬೀಸೋರಿಗೆ
ಬೇಸನ್ನು
ಬೆಣ್ಣೆ
ಬೆಲ್ಲ, ಬೇಳೆ
ಬೆಣ್ಣೆ ಚಕ್ಕುಲಿ
ಬುರುಬುರಿ
ಬುಂದ್ಯ
ಭಕ್ಕರಿ
ಮಜ್ಜಿಗೆ ಪಳಿದ್ಯ
ಮಜ್ಜಿಗೆ
ಮಾಲತಿ
ಮುಕ್‌ಸೌರಿ (ಮುಚ್ಚೋರ)
ಮುಖವಿಲಾಸ
ಮುದ್ದೆ
ಮೊಸರು, ಮೊಸರು ಬುತ್ತಿ
ಮೋತಿಚೂರು
ಮೋದಕ
ಮೇಲೋಗರ
ಮಂಡಿಗೆ
ಯಾಲಕ್ಕಿ
ರಸ
ಲಾಡು, ಲಡ್ಡಿಗೆ
ವಡೆ
ಶಾವಿಗೆ
ಶಾವಿಗೆ ಪರಮಾನ್ನ
ಶಾಲ್ಯಾನ್ನ
ಶುಂಠಿ
ಶಾಕ, ಶಾಕಪಾಕ
ಶಾಕಸೂಪ
ಶಿಖಿಯ ಉಂಡೆ
ಶಂಕ್ರಿಗಂಡನ ಅಡುಗೆ
ಸಕ್ಕರೆ
ಸಣ್ಣಕ್ಕಿ ಶಾಲ್ಯಾನ್ನ
ಸಣ್ಣರಾಜಾನ್ನದಕ್ಕಿಯ ಅನ್ನ
ಸಕ್ಕರೆ ಬುರುಡೆ
ಸಣ್ಣಸಜ್ಜಿಗೆ ಶೇವಿಗೆ
ಸಬ್ಬಿಭಾತು
ಸಾರು
ಸಾಸಿವೆ ಕಾಯಿ
ಸೀಕರ್ಣೆ
ಸೀದೋಸೆ
ಸೀಸಾರು
ಸುಕಿಯದುಂಡೆ
ಸೂಪ
ಸಂಡಿಗೆ
ಸಾಂಬಾರು
ಸೌತೆಭಾತು
ಹಪ್ಪಳ
ಹಾಲು
ಹಾಲುಂಡಿ
ಹಾಗಲದ್ಧೀರೆ
ಹಂದರದವರಿಸಾರು
ಹಿಟ್ಟಿನ ಕಡುವು
ಹಿಂಡಿಯ ಪಲ್ಯ
ಹುರಿಗಡಲೆ
ಹುಗ್ಗಿ
ಹುಳಿದೋಸೆ
ಹೂರಣಗಡುವು
ಹೊಯ್ಗಡುಬು
ಹೋಳಿಗೆ
ಕ್ಷೀರಾನ್ನ

2) <u>ಆರತಿಗಳು:</u>

ಆಭರಣಗಳ ಆರತಿ	ಧೂಪಾರತಿ	ರತ್ನದಾರತಿ/ ರಂಗಿನಾರತಿ
ಇಂದ್ರಮಣಿ ಆರುತಿ	ದುಂಡುಮಲ್ಲಿಗೆ ಆರತಿ	ವಜ್ರದಾರತಿ
ಏಕಾರತಿ	ನನಕೆ ಕಂದೀಲು ಆರತಿ	ವಜ್ರವೈಢೂರ್ಯದಾರತಿ
ಓಕುಳಿ ಆರತಿ	ನೀಲಮಣಿಆರತಿ	ವೈಢೂರ್ಯದಾರತಿ
ಕರ್ಪೂರದಾರತಿ	ನೀಲಮಾಣಿಕ್ಯದಾರತಿ	ಶರಣ್ಯದಾರತಿ
ಕದಲಾರತಿ/ ಕುಶಲದಾರತಿ	ನವರತ್ನದಾರತಿ	ಸುಮದಾರತಿ
ಕುಂದಣದಾರತಿ/ ಕನಕದಾರತಿ	ಪಚ್ಚೆಯ ಆರತಿ	ಸುವರ್ಣದಾರತಿ
ಕೆಂಪಿನಾರತಿ	ಪದ್ಮಮಣಿ ಆರತಿ	ಹರಿವಾಣದಾರತಿ
ಗಿಂಡಿಯ ಆರತಿ	ಪದುಮದಾರತಿ	ಹವಳದ ಆರತಿ
ಗೋಮೇಧಿಕದಾರತಿ	ಪುಷ್ಪರಾಗಾರತಿ	ಹರಿದ್ರದ ಆರತಿ
ಚಲ್ವನವರತ್ನದಾರತಿ	ಪ್ರೇಮದಾರತಿ	ಹೇಮಹೂ ಆರತಿ
ಚಿನ್ನದ ಆರತಿ	ಮಾಣಿಕ್ಯದಾರತಿ	ಜ್ಞಾನದಾರತಿ
ಚಿನ್ನದ್ಹರಿವಾಣದಲಿ ರತ್ನದಾರತಿ	ಮುತ್ತಿನಾರತಿ	
ದೀಪದ ಆರತಿ	ಮಂಗಳಾರತಿ	

3) ಒಡವೆಗಳು:

ಅಡ್ಡಿಕೆ	ಒಡ್ಯಾಣ, ಚಟ್ಟಿ, ಡಾಬು	ಕಿರೀಟ
ಅರಳೆಲೆ	ಓಲೆ (ವಾಲೆ)	ಕಿರುಗೆಜ್ಜೆ
ಅಸಲೀಪು (ಅಸಲಿ)	ಕಡಗ (ಹಸ್ತಕಡಗ)	ಕಿರುಗಂಟೆ
ಅಲಗೊತ್ತು	ಕರ್ಣಕುಂಡಲ	ಕಿರುಪಿಲ್ಲಿ
ಆಣುಮುತ್ತಿನ ಸರ	ಕಠ್ಠಾಣಿ, ಕಟ್ಟಾಣಿ ಮುತ್ತು	ಕಿಂಕಿಣಿ
ಆಣಿಮೆಂಟಿಕೆ	ಕಠ್ಠಾಣಿಸರ	ಕುಡಿನಾಮ
ಅಂದುಗೆ	ಕಣಕಾಲಂದಿಗೆ	ಕುರುಡಿಬಾವುಲಿ
ಇಂದ್ರಮಾಣಿಕದೋಲೆ	ಕನಕಾಭರಣ	ಕುಂಡಲ
ಇಂದ್ರಮಾಣಿಕನವರತ್ನದತೊಡಿಗೆ	ಕಡ್ಡಿಬಳೆ	ಕುಂದಣರನ್ನದಡ್ಡಿಕೆ
ಇಂದ್ರನೀಲದ ಮಣಿಖಚಿತ ಕಿರೀಟ	ಕರ್ನಕುಂಡಲ	ಕೇಯೂರ
ಉಡಿದಾರ (ಕಟಿಸೂತ್ರ)	ಕಟಿಗಂಟೆ	ಕೈಪ, ಕೈಕಟ್ಟು
ಉಡಿಗಂಟೆ	ಕಸ್ತೂರಿ ತಿಲಕ	ಕೊಪ್ಪು
ಉಡುದಾರಗೆಜ್ಜೆ	ಕದಂಬದ ಕಡಗ	ಕೌಸ್ತುಭಹಾರ
ಉಡುಗೆಜ್ಜೆ	ಕಾಲಕಡಗ	ಕೌಸ್ತುಭಮಣಿ
ಉಂಗುರ	ಕಾಲಂದುಗೆ	ಕೌಸ್ತುಭಮಾಲೆ
ಉಂಗುರಡ್ಡಿಕೆ	ಕಾಲಸರ, ಕಾಲಗೆಜ್ಜೆ	ಗಟ್ಟಿಕಂಕಣ
ಎಡೆಪಣೆ ಚಿಂತಾಕ	ಕಾಲಪೆಂಡೆ	ಗಗ್ಗರಿಗೆಜ್ಜೆ
ಏಕಾವಳಿ	ಕಾಲ್ಗಡಗ	ಗಟ್ಟಿಸರಪಳಿ
ಏಕಾವಳಿಸರ	ಕಾಲುಂಗುರ	ಗಿಳಿಗೆಜ್ಜೆ
ಒಂಟಿ	ಕಾಜಿನಬಳೆ	ಗೀರುಬಳೆ

ಗೆಜ್ಜೆ
ಗೆಜ್ಜೆಡ್ಡಿಕೆ
ಗೆಜ್ಜೆಸರಪಳಿ
ಗುಂಜೆಯದಾಡೆ
ಗುಂಡಿನಸರ
ಗೊಂಡ್ಯ (ಗೊಂಡೆ)
ಗೊಂಡೆಯ ಕಂಠಿ
ಗುಂಡುಬಿಂದಲಿ
ಗಂಟೆ ಸರಪಳಿ
ಗುಂಡು
ಗೊಂಚಲುಮುತ್ತು
ಚಳತುಂಬು
ಚಲ್ಲಣ
ಚಳಕ
ಚಳತಿಗೆ
ಚಿಂತಾಕು
ಚಿನ್ನದಕಡ್ಡಿ
ಚೂಡ್ಯ(ಚೂಡೆ) ವಂಕಿ,
ಚೂಡಾಮಣಿ
ಚೊಗೆ
ಚೌಕುಳಿ
ಚೌರಿ
ಚಂದ್ರಮುರವು
ಚಂದ್ರಹಾರ, ಚಂದ್ರಹಾರಸರ
ಚಂದ್ರಗಾವಿ
ಜಡೆಬಂಗಾರ
ಜಡೆಬಿಲ್ಲೆ
ಜರದನೆರಿಗೆ
ಜರದಪಟ್ಟೆ
ಜಾಳಿಗೆ
ಝಾಲಕ, ಝೂಲಕ
ಝುಲ್ಲರಿ (ಝುಳಕು)
ಟೊಪ್ಪಿಗೆ
ತಾಯಿತ
ತಾಳಿ
ತುಳಸೀಮಾಲೆ
ತೊಂಡಿಲು (ತೊಂಡಲ್)
ತೋಡ್ಯ (ತೋಡ)
ತೋಳಬಂದಿ
ತೋಳಬಾಪುರಿ
ದ್ರಾಕ್ಷಿಬಳ್ಳಿ
ದ್ರಾಕ್ಷಾಲತೆ
ದಟ್ಟಿ
ದೋರ್ಯ (ದೋರೆ)
ದುಂಡು
ನವರತ್ನ ಖಚಿತ ಒಡ್ಯಾಣ
ನವರತ್ನ ಖಚಿತ ಕಿರೀಟ
ನವರತ್ನ ಬಿಗಿದ ಪಟ್ಟೆ
ನವರತ್ನಸ್ಫಟಿಕ ಮುತ್ತಿನಹಾರ
ನಡುವಿನ ಕಿರುಗಂಟೆ
ನಾಗಮುರುಗಿ
ನೀಲದ ಬಾವುಲಿ
ನೂಪುರ ಗೆಜ್ಜೆ
ಪಚ್ಚೆಸರ
ಪಟ್ಟೆಚಲ್ಲಣ
ಪಟ್ಟೆನಾಮ
ಪದಕ
ಪಟ್ಟುಪಟ್ಟಾವಳಿ
ಪಾದಸರ
ಪಾದುಕೆ
ಪಾವುಡೆ

ಪಾವಡಿ
ಪಾಡಗ
ಪಾಯವಟ್ಟಿ
ಪಿಲ್ಯ, ಪಿಲ್ಲೆ
ಪುತ್ಥಳಿ
ಪೆಂಡ್ಯ
ಪೈಜಣ
ಪೊನ್ನಸರಪಳಿ
ಬಳೆ
ಬಾಜುಬಂದು
ಬಾಪುರಿ (ಬಾಹುಪುರಿ), ಭಾಪುರಿ
ಬಾವುಲಿ (ಬಾವಲಿ)
ಬಿಡಿಮುತ್ತು
ಬಿಲ್ಲೆಸರ
ಬುಗುಡಿ
ಬುಲಾಕು
ಬೆರಳ ಮುದ್ರಿಕೆ
ಬೇಸರಿ
ಬಂದಿ
ಬೈತಲೆ ಬಟ್ಟು
ಬಿಂದುಲಿ
ಭುಜಕೀರ್ತಿ
ಮಣಿಹಾರ
ಮಕರಕುಂಡಲ
ಮಲಕ

ಮಾಗಾಯಿ
ಮಾಂಗಲ್ಯಸೂತ್ರ
ಮಾಣಿಕದ ಹರಳುಂಗುರ
ಮಾಣಿಕ್ಯದ ಹಾವಿಗೆ
ಮಾಣಿಕ್ಯ ಮೌಕ್ತಿಕಹಾರ
ಮಾಣಿಕ್ಯದ ಸರಪಟ್ಟಿ
ಮಿಂಚು
ಮೀನ್‌ಬಾವುಲಿ
ಮುರಿಗೆ
ಮುರ
ಮುದ್ರಿಕೆ
ಮುರುವು
ಮುರಡಿ
ಮುದ್ರೆ
ಮುಖರ (ಮುಕುರ್ಯ)
ಮುತ್ತಿನಹಾರ
ಮುಡಿಉಂಗುರ
ಮುತ್ತಿನಭುಜಕೀರ್ತಿ
ಮುತ್ತಿನಸರ
ಮುತ್ತಿನ್ಹಾರ ಪದಕ
ಮುತ್ತಿನ ಮುಖರ
ಮುತ್ತಿನರಳೆಲೆ
ಮುರುಡಿ
ಮುರುಳಿಸರ
ಮುತ್ತಿನಗಂಟೆ

ಮುತ್ತಿನ ದಂಡೆ
ಮುತ್ತು ತಾಯಿತ
ಮುತ್ತಿನ ಬಟ್ಟು
ಮುತ್ತಿನ ಹತ್ತಕಡಗ
ಮೇಲುದ
ಮೋಹನಮಾಲೆ
ಮೆಂಟಿಕೆ
ಮೆಂಟಿಕೆ ಪಿಲ್ಲೆ
ಮಂಜಾಡಿಯ ಸರ
ಮುಂಗಯ್ಯ ಸರಿಗೆ
ರನ್ನಕಾಂಚಿಯದಾಮ
ರತ್ನ ಕಿರೀಟ
ರತ್ನದ ಚೌಕುಳಿ
ರತ್ನದ್ಹಾರ
ರತ್ನಪವಳಹಾರ
ರತ್ನ ಮುತ್ತಿನ ಚೆಂಡು
ರತ್ನಾಭರಣ
ರಾಗಟೆ
ರುಮಾಲು
ರುಳಿ
ರುಳಿಗೆಜ್ಜೆ
ಲುಲ್ಲು
ಲುಲ್ಲುರುಳಿ
ವಜ್ರದಕೊಪ್ಪು
ವಜ್ರದಡ್ಡಿಕೆ

ವಜ್ರಮಾಣಿಕದೋಲೆ	ಸಲಿಗೆ	ಹರಡಿ
ವಜ್ರದ್ಹೂವು	ಸರಪಣಿ	ಹವಳ
ವಜ್ರತೋರಮುತ್ತಿನಮಾಲೆ	ಸರಪದಕ	ಹಸ್ತಕಡಗ
ವಜ್ರದ ಪದಕ	ಸಾಲುಗಂಟೆ ಗೆಜ್ಜೆ	ಹವಳದ ಆಭರಣ
ವಜ್ರದುಂಗುರು	ಸುಪ್ಪಾಣಿ ಮುತ್ತು	ಹವಳಕಟ್ಟು
ವಜ್ರದೊಂಕಿ	ಸುರಗಿಯ ಸರ	ಹಾಸರಬಳೆ
ವಜ್ರದೋಲೆ	ಸೂಸಕ	ಹಾರ
ವಾಲಿ (ವಾಲೆ, ಓಲೆ)	ಸೂಕ್ಷ್ಮದೊಸ್ತ್ರ	ಹಿಡಿವಾಳ ಕಡಗ
ವೀರಮುದ್ರೆ	ಸೂರ್ಯ	ಹಿಂಬಳೆ
ವೈಜಯಂತಿ	ಸೊನ್ನೆದಾಮ	ಹುಲಿಯುಗುರು
ವಂಕಿ	ಹರಳ್ಹೂವು	ಹೆರಳುಬಂಗಾರ,
		ಹೆಡೆಯನಾಗ
ಸರ	ಹತ್ತಿಸರ	ಹೇಮಮಣಿಕಿರೀಟ
ಸರಹಾರ	ಹರಳೋಲೆ	ಹೊನ್ಹೂವು
ಸರಿಗೆ	ಹವಳಸರ	ಹೊನ್ನುಂಗುರ
		ಹೊನ್ನ ಸೂಡಗ,
		ಹೊಂಬಾಳೆಸರ

4) <u>ಕುಪ್ಪಸಗಳು:</u>

ಕುಸುಬೆ ಬಣ್ಣದ ಕುಪ್ಪಸ	ಜರಮಗ್ಗಿ ಕುಪ್ಪಸ	ಹಸುತಾಪ್ತಿ ಕುಪ್ಪಸ
ಕುತನಿ ಕುಪ್ಪಸ	ಪದುಮರಾಗದ ಕುಪ್ಪಸ,	
ಕಂಚುಕ	ಪಟ್ಟಾವಳಿ ಕುಪ್ಪಸ	

5) <u>ವಸ್ತ್ರಗಳು:</u>

ಅಂಗಿ	ಜರದ ಪಟ್ಟಿ	ಪಾವಡಿ
ಕೇಸರಿ ಪೀತಾಂಬರ	ಜರದ ಪೀತಾಂಬರ	ಶಾಲು
ಕಾಂಚಿಯ ದಾಮ,	ಜರದೊಲ್ಲಿ	
ಗೆಜ್ಜೆ ಸರಪಳಿ ಅಂಗಿ		
ಗೋಲಂಚಿನ ಧೋತರ	ಧೋತರ	
ಚಲ್ಲಣ	ಪಟ್ಟೆ ಚಲ್ಲಣ	
ಜರದ ನರಿಗೆ	ಪಟ್ಟಾವಳಿ ಧೋತರ	

6) <u>ವಾದ್ಯಗಳು:</u>

ಕಂಸಾಳೆ	ಜಾಗಟೆ	ದುಂದುಭಿ
ಕರಣೆ	ಡಂಕ (ಡಂಕಿ)	ನಾಗಸ್ವರ
ಕಾಳಿ (ಕಹಳೆ)	ತಂಬಟೆ	ನಿಸ್ಸಾಳೆ
ಕೊಳಲು	ತಂಬೂರಿ	ಭೇರಿ
ಗಂಟೆ	ತಾಳ ಮದ್ದಳೆ	ಶಂಖ
ಚಿನ್ನದ ಕಹಳೆ	ತುತ್ತೂರಿ	ಹೆಗ್ಗಾಳೆ (ಹೆಗ್ಗಹಳೆ)

7) <u>ಸೀರೆಗಳು:</u>

ಆಕಳ್‌ಕರಳೀ ಸೀರೆ	ಕೂಸುಂಬಿ ಸೀರೆ	ಜೋಡ್ ಪಕ್ಕಿ ಸೀರೆ
ಅತ್ತಿಹೂವಿನ ಸೀರೆ	ಕೊರ್‍ನಾಡ ಸೀರೆ	ಜಾಂಬೂನಾಜರದ ಪೀತಾಂಬರ
ಇರುವಂತಿಗ್ಹೂವಿನ ಸೀರೆ	ಕೋಲುಂಬ್ರಪೈಠಣಿ ಸೀರೆ	ಜಾಂಬೂನದಾಂಬರ
ಉದಯರಾಗದ ಸೀರೆ	ಕುಂಕುಮಗೆರೆ ಸೀರೆ	ತಬಕದ್ಹೂವಿನ ಸೀರೆ
ಉಗುರುಚುಕ್ಕಿ ಸೀರೆ	ಖಂಬಾವತಿ ಸೀರೆ	ದ್ವಾರಮನಿ ಸೀರೆ
ಉಪ್ಪಾಡಿ ಪತ್ತಲ	ಗುಲಾಬ್ಚುಕ್ಕಿ ಸೀರೆ	ನೀಲ ಪತ್ತಲ
ಊದಿಬಣ್ಣದ ಸೀರೆ	ಗುಬ್ಬಿಕಣ್ಣಿನ ಸೀರೆ	ನಿಂಬಾವಳಿ ಸೀರೆ
ಅಂಜೂರಿ ಬಣ್ಣದ ಸೀರೆ	ಗೌರಿಪಟಾವಳಿ ಸೀರೆ	ಪಗಡೆಮನೆ ಸೀರೆ
ಕರಿಯ ಹೂವಿನ ಸೀರೆ	ಗೋಧಿಮಗ್ಗಿ ಸೀರೆ	ಪಟ್ಟಾವಳಿ ಸೀರೆ
ಕರಿಯ ಚಂದರಕಾಳಿ ಸೀರೆ	ಗೊಂಬಿ ಪೈಠಣಿ ಸೀರೆ	ಪದುಮದ್ಹೂವಿನ ಸೀರೆ
ಕರಿಯ ಮಧುರೆ ಸೀರೆ	ಗೊಂಡ್ಯಮುತ್ತಿನ ಸೆರಗಿನ ಸೀರೆ	ಪಪ್ಪಳಿ
ಕವಳೆ ಹೂವಿನ ಸೀರೆ	ಚದುರಂಗಮನೆ ಸೀರೆ	ಪಂಚಪೈಠಣಿ ಸೀರೆ
ಕಡ್ಡಿಪೈಠಣಿ ಸೀರೆ	ಚಾರ್ಕಾನಿ ಪತ್ತಲ	ಪುಠಾಣ್‌ಪೈಠಣಿ ಸೀರೆ
ಕರಿಯ ಮಿರಾಣಿ ಸೀರೆ	ಚಿತ್ರಸೊಬಗಿನ ಸೀರೆ	ಬಂಗಾರದಗೆರೆ ಸೀರೆ
ಕಮಲದ್ಹೂವಿನ ಸೀರೆ	ಚಂಗಾವಿ ಪತ್ತಲ	ಬನಾರಸಸೀರೆ
ಕಸ್ತೂರಿ ಬಣ್ಣದ ಸೀರೆ	ಚಿಂತಾಕುಪೈಠಣಿ ಸೀರೆ	ಬುಟ್ಟದಾರಿ ಸೀರೆ
ಕಮಲಪೇಟಿ ಅಂಚಿನ ಸೀರೆ	ಜಗನ್ಮೋಹಿನಿ ಸೀರೆ	ಬುಗುಡಿ ಜರತಾರಂಚಿನ ಸೀರೆ
ಕಾಡಿಗ್ಗಣ್ಣಿನ ಸೀರೆ	ಜರತಾರಿಸೆರಗಿನ ಮನ್ನಾರಿ ಪತ್ತಲ	ಬಾಳೆಪಟ್ಟೆ ಸೀರೆ
ಕಿಜಡಿ ಬಣ್ಣದ ಸೀರೆ	ಜರಕಾಟಿ ಕೆಂಪು ಹೂವಿನ ಸೀರೆ	ಬದನೆಬಣ್ಣದ ಸೀರೆ
ಕುರುಡ್ಹೂವಿನ ಸೀರೆ	ಜರತಾರಂಚಿನ ಸೀರೆ	ಬಿಳಿಯಹೂವಿನ ಸೀರೆ

ಮಗ್ಗಿಸೀರೆ
ಮಧುರೆ ಪತ್ತಲ
ಮತ್ತಾರಿ ಪತ್ತಲ
ಮಾವಿನ್ಗೆರೆ ಸೀರೆ
ಮೆಂತ್ಯ ಸಾಲಿನ ಸೀರೆ
ರವಡಿಕೆ ಸೀರೆ
ರತ್ನದ್ ಪಪ್ಪಳಿ ಸೀರೆ
ರಾಗಾವಳಿ ಸೀರೆ
ರೇಷ್ಮೆ ಚುಕ್ಕೆ ಸೀರೆ
ಲಾಡ್ಲಾಪುರ ಸೀರೆ
ವರಾಹದ್ದೂವಿನ ಸೀರೆ
ವಸ್ತ್ರಗಣಿಕಿ ಸೀರೆ
ಸಕಲಾತಿ ಸೀರೆ
ಸರಪಳ್ಯಂಚಿನ ಸೀರೆ
ಸಾಸಿವೆ ಬಣ್ಣದ ಸೀರೆ
ಸಾಸ್ವೆ ಚುಕ್ಕೆ ಸೀರೆ
ಸಾರಸನ ಸೀರೆ
ಸಾರಾವಳಿ ಸೀರೆ
ಸುಗಡಿ ಬಣ್ಣದ ಸೀರೆ
ಸುರ್ತಿ ಬಣ್ಣದ ಸೀರೆ
ಸೂರ್ಯರಾಗದ ಸೀರೆ
ಹಚ್ಚನ ಗಿಳಿಗಿಡ ಸೀರೆ
ಹಸಿರು ಸಿಲಾರಿ ಸೀರೆ
ಹಳದಿ ಪೀತಾಂಬರ
ಹಾವುರಾಣಿಗೆರೆ ಸೀರೆ
ಹಾಲ್ಚಿಕ್ಕಿ ಸೀರೆ
ಹಂಡ್ಯಪೈರಣಿ ಸೀರೆ

ಅನುಬಂಧ-2

ಅಂಕಿತ ಪದಗಳು

ವಿಜಯದಾಸರಿಂದ ದ್ವಿತೀಯ ಘಟ್ಟ ಆರಂಭವಾಗಿ ಜಗನ್ನಾಥ ದಾಸರ ಕಾಲದಲ್ಲಿ ವಿಸ್ತಾರಗೊಂಡು ಹಳೆಯ ಮೈಸೂರು ಪ್ರಾಂತ್ಯಕ್ಕೂ ಹರಡಿತು. ಮೈಸೂರು, ಬೆಂಗಳೂರು, ದೇವರಾಯನದುರ್ಗ, ಹರಿದಾಸ ಕೇಂದ್ರಗಳಾದವು. ದೇವರಾಯನದುರ್ಗದ ಶ್ರೀತಂದೆ ಮುದ್ದುಮೋಹನ ವಿಠಲಾಂಕಿತ "ಪರಮ ಪ್ರಿಯ" ಸುಬ್ಬರಾಯದಾಸರು 20ನೇ ಶತಮಾನದ ಪೂರ್ವಾರ್ಧದಲ್ಲಿ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತಮಿಳುನಾಡುಗಳಲ್ಲಿ ಹರಿದಾಸ ಆಂದೋಲನವನ್ನೇ ನಡೆಸಿದವರು. ಜಾತಿ, ಮತ ಭೇದವಿಲ್ಲದೆ ಸಜ್ಜನರಾದ 1165 ಮಂದಿಗೆ ಅಂಕಿತ ಪ್ರದಾನ ಮಾಡಿದ್ದಾರೆ. 1006 ಅಂಕಿತಗಳು ದಾಖಲಾಗಿವೆ. 106 ಅಂಕಿತ ಪದಗಳು ಮಾತ್ರ ಲಭ್ಯವಿದೆ. ಅದರಲ್ಲಿ ಸುಮಾರು ನಲವತ್ತೆಂಟು ಮಹಿಳೆಯರಿದ್ದಾರೆ. ಸರಸಮ್ಮ ಮತ್ತು ದುರ್ಗದ ಗುಂಡಮ್ಮನವರ ಬಗ್ಗೆ ಈ ಅಧ್ಯಯನದಲ್ಲಿ ಉಲ್ಲೇಖವಾಗಿದ್ದು ಅವರ ಅಂಕಿತ ಪದ ಲಭ್ಯವಾಗಿದೆ. ಅಂಕಿತ ಪದದ ಒಂದು ಮಾದರಿ ಹೀಗಿದೆ.

ಅಂಕಿತ ಉಪದೇಶ ಸಾಮಾನ್ಯವಾಗಿ ಪದದ ರೂಪದಲ್ಲಿರುತ್ತದೆ. ಪಲ್ಲವಿಯಲ್ಲಿ ಶಿಷ್ಯನಿಗೆ ನೀಡಲಿರುವ ಶಿಷ್ಯನ ಬಿಂಬ ಮೂರ್ತಿಯ ಹೆಸರು ಕೊನೆಯಲ್ಲಿ ಗುರುಗಳ ಅಂಕಿತ ಇರುತ್ತದೆ.

ಅಂಕಿತ ಪಡೆದವರು: ದುರ್ಗದ ಗುಂಡಮ್ಮ

ಅಂಕಿತ: ರುಕ್ಮಿಣೀಶ ವಿಠಲ

ರುಕ್ಮಿಣೇಶವಿಠಲನೆ ನೀನಿವರ ಮನ ಪಕ್ವವ
ಗೈದು ಕಾಪಾಡು ಹರಿಯೆ ॥ ಪ ॥

ಶಕ್ರ ವಂದ್ಯನೆ ದೇವ ಜೀವಾಂತರಾತ್ಮಕನೆ ಭಯ
ಭಕ್ತಿ ಮಾರ್ಗವ ತೋರಿ ಕಾಪಾಡೊ ಹರಿಯೆ ॥ ಅ.ಪ ॥

ಸನ್ನುತಾಂಗನೆ ದೇವ ಸನ್ಮುದವ ನೀನಿತ್ತು
ಪತಿಭಕ್ತಿಯನೆ ಕೊಟ್ಟು ಕಾಪಾಡೊ ಹರಿಯೆ ॥ 1 ॥

ಜಂಗಮ ಸ್ಥಾವರ ಪರಿಪೂರ್ಣ ಶ್ರೀಕೃಷ್ಣ
ಶೃಂಗಾರ ಹರಿ ನೀನೆ ಕಾಪಾಡೊ ಹರಿಯೆ ॥ 2 ॥

ಹರಿಭಕ್ತಿ, ಗುರುಭಕ್ತಿ, ಸುಜ್ಞಾನ, ವೈರಾಗ್ಯ
ಮೊದಲಾದ ತಾರತಮ್ಯವ ತಿಳಿಸಿ ಕಾಪಾಡೊ ಹರಿಯೆ ॥

ವರ ತಂದೆ ಮುದ್ದು ಮೋಹನ ವಿಠಲನೆ
ನಿರುತ ನಿನ್ನಯ ರೂಪ ಪರಿಪೂರ್ಣವಾಗಿರಲಿ
ಮನದಿ ಹರಿಯೆ[1] ॥ 3 ॥

ಗುರುಗಳಿಂದ ಅಂಕಿತ ಪಡೆದ ನಂತರ ಶಿಷ್ಯ ನಿತ್ಯವೂ ಅಂಕಿತ ಪದವನ್ನು ಪಠಿಸಬೇಕು. "ಪಲ್ಲವಿ ಮತ್ತು ಅನುಪಲ್ಲವಿಯ ಪಠನೆಯಿಂದ ಬ್ರಹ್ಮಚರ್ಯಾದಿ ವರ್ಣಾಶ್ರಮ ಸಂಸ್ಕಾರ, ಮಧ್ಯದ ನುಡಿಗಳಿಂದ ಭಕ್ತಿ, ವೈರಾಗ್ಯ ಮತ್ತು ಜ್ಞಾನಾದಿಗಳನ್ನು ಪಡೆಯುವ ಸಂಸ್ಕಾರ, ಕಡೆಯ ನುಡಿಯಿಂದ ಜೀವನ್ಮುಕ್ತಿ ದೊರೆಯುವ ಸಂಸ್ಕಾರ ದೊರೆಯುತ್ತದೆ. ಈ ಸಂಸ್ಕಾರಗಳೇ "ಅಪರೋಕ್ಷ ಜ್ಞಾನಕ್ಕೆ" ಕಾರಣವೆಂದು ದಾಸನಾದವನು ಭಾವಿಸಬೇಕು"[2].

<u>ವೆಂಕಟದಾಸರು:</u>

ಶ್ರೀವರದರಾಜ ವಿಠಲಾಂಕಿತರಾದ ಶ್ರೀವೆಂಕಟದಾಸರು (ಸುಬ್ಬರಾಯದಾಸರ ಪುತ್ರ) ಸುಮಾರು ಎಂಟು ಜನ ಮಹಿಳೆಯರಿಗೆ ಅಂಕಿತ ನೀಡಿದ್ದು ಎಲ್ಲ ಅಂಕಿತ ಪದಗಳೂ ದೊರೆತಿವೆ.

ಅಂಕಿತ ಪಡೆದವರು: ಶ್ರೀಮತಿ ಪದ್ಮ (ಸುಬ್ಬರಾಯದಾಸರ ಮೊಮ್ಮಗಳು, ವೆಂಕಟದಾಸರ ಮಗಳು)

ಅಂಕಿತ: 'ಜ್ಞಾನಮಯ ವಿಠಲ'

ಜ್ಞಾನಮಯ ವಿಠ್ಠಲನೆ ನೀನಿವಳಿಗೆ
ಸನ್ಮುದವನೆ ಕೊಟ್ಟು ಕಾಪಾಡಬೇಕೋ ಹರಿಯೆ ॥ ಪ ॥

ಹಿಂದೆ ಮಾಡಿದ ಪಾಪರಾಶಿಗಳ ಪರಿಹರಿಸಿ ಮುಂದೆ ನೀನಿವಳ
ಕಾಪಾಡಬೇಕೊ ಹರಿಯೆ ॥ ಅ.ಪ ॥

ಸಕಲ ಕಲ್ಯಾಣ ಗುಣಪೂರ್ಣ ಸಕಲೇಷ್ಟಪ್ರದಾಯಕ
ನೀನಿವಳ ಮನದೊಳಗೆ ನೆಲೆಸಿ ನಿತ್ಯದಲಿ ಕಾಪಾಡಬೇಕೊ ಹರಿಯೆ ॥ 1 ॥

ಶ್ರೀಹರಿಯೆ ಶಿಷ್ಟ ರಕ್ಷಕ ನಿರ್ದೋಷ ನಿಗಮ ವೇದ್ಯ
ನೆಂಬ ನಾಮ ಸ್ಮರಣೆಯನು ಕೊಟ್ಟು ನಿತ್ಯದಲಿ ಕಾಪಾಡಬೇಕೊ ಹರಿಯೆ ॥ 2 ॥

ಶ್ರೀಹರಿಯೆ ಪೂಜ್ಯ ಪೂಜ್ಯಕನೆಂಬ ಅನುಸಂಧಾನವನೆ ಕೊಟ್ಟು ತಂದೆ
ಮುದ್ದು ಮೋಹನ ವಿಠ್ಠಲನೆ
ನೀನಿವಳ ಕಾಪಾಡ ಬೇಕೊ ಹರಿಯೆ[3] ॥ 3 ॥

ವೆಂಕಟದಾಸರು ತಮ್ಮ ತಂದೆಯವರ ಸೂಚನೆಗೆ ಅನುಸಾರವಾಗಿ ಅಂಕಿತವನ್ನು ನೀಡಿದ್ದು ತಮ್ಮ ತಂದೆಯ ಅಂಕಿತವನ್ನೇ ಕೊನೆಯಲ್ಲಿ ಹಾಕಿದ್ದಾರೆ.

ಗುರುಗೋವಿಂದ ವಿಠಲರು:

ಗುರುಗೋವಿಂದ ವಿಠಲದಾಸರು ಸುಮಾರು 145 ಮಂದಿ ಮಹಿಳೆಯರಿಗೆ ಅಂಕಿತ ನೀಡಿದ್ದಾರೆ. ಎಲ್ಲ ಅಂಕಿತ ಪದಗಳೂ ಲಭ್ಯವಾಗಿದೆ.

ಅಂಕಿತ ಪಡೆದವರು : ಶ್ರೀಮತಿ ಲಕ್ಷ್ಮೀದೇವಿ
ಅಂಕಿತ : 'ವಾದಿರಾಜಹರಿವಿಠಲ'
ಸ್ಥಳ : ಬೆಳಗಾವಿ

ವಾದಿರಾಜ ಹರಿವಿಠಲ । ಪರಿಪಾಲಿಸಿವಳಾ ॥ ಪ ॥
ಪರಿಪರಿಯ ವಿಧದಿಂದ । ಹರಿದಾಸ್ಯ ಬೇಡ್ವಾ ॥ ಅ.ಪ ॥

ಹರಿಗುರೂ ಹಿರಿಯರಲಿ । ಉರುತರ ಭಕ್ತಿಯುತೆ
ಮರುತ ಮತದಲಿ ದೀಕ್ಷೆ । ಪರಿಪಾಲಿಸಾ ।
ತರುಣಿ ಮಣಿಗಿತ್ತಿಹೆನು । ವರ ಸುಉಪದೇಶವನು
ಮರುತಾಂತರಾತ್ಮ ಹರಿ । ಪರಿಪಾಲಿಸಿವಳಾ ॥ 1 ॥

ಸಂಸಾರ ವೈರಾಗ್ಯ । ಕರುಣಿಸುತ ಇವಳೀಗೆ
ಕಂಸಾರಿ ತವಪಾದ । ಗುಣರೂಪ ಕರ್ಮಾ
ಶಂಸನಕೆ ಮನವಿತ್ತೂ । ಸಂಸ್ಕೃತಿಯ ಕಳೆವಂಥ
ಸಂಶಯ ರಹಿತ ಪಥ । ಹಂಸಾಖ್ಯ ತೋರೋ ॥ 2 ॥

ಆಶೆಪಾಶವ ಕಿತ್ತು । ಶ್ರೀಶನುತ್ಕರ್ಷಗಳ
ಲೇಸಾಗಿ ಭಜಿಪಂಥ । ಮೀಸಲದ ಮನವಾ ।
ಮೇಶ ಗುರುಗೋವಿಂದ । ವಿಠಲ ನೀ ನಿತ್ತಿವಳ
ಪೋಷಿಸುವುದು ಬಿಡದೆ । ವಾಸುದೇವಾಖ್ಯಾ[4] ॥ 3 ॥

ಉರಗಾದ್ರಿವಿಠಲದಾಸರು:

ಉರಗಾದ್ರಿವಿಠಲದಾಸರು ಎಂದು ಪ್ರಸಿದ್ಧರಾದ ಶ್ರೀ ಎಂ. ಶ್ರೀನಿವಾಸರಾಯರು ಸುಮಾರು ನಲವತ್ತೆರಡು ಮಹಿಳೆಯರಿಗೆ ಅಂಕಿತ ಪ್ರದಾನ ಮಾಡಿದ್ದಾರೆ. ಅವರು ನೀಡಿದ ಅಂಕಿತ ಪದದ ಮಾದರಿ ಹೀಗಿದೆ:

ಅಂಕಿತ ಪಡೆದವರು : ನಿಡಗುರುಕಿ ಜೀವೂಬಾಯಿ
ಅಂಕಿತ : ಕಮಲನಾಭ ವಿಠಲ
ಸ್ಥಳ : ಮೈಸೂರು

ಕಮಲನಾಭವಿಠ್ಠಲ ಕಾಯಬೇಕಯ್ಯ
ಶ್ರಮ ಜೀವಿ ಇವಳಿಗುತ್ತಮ ಗತಿಯಿತ್ತು ॥ ಪ ॥

ಕ್ಷಣ ಸಹ ನಿನ್ನಯ ಭಕ್ತಗಣದವರ ಸೇವೆಯನು
ದಣಿಯದಲೆ ಮಾಳ್ಪ ಲಕ್ಷಣ ಶೀಲಳೋ
ಅಣುಮಹದ್ಗತ ನಿನಗೆ ಮುಗಿದು ಬಿನ್ನೈಪೆ ಗುಣ
ಋಣವ ಪರಿಹರಿಸಿ ತಕ್ಷಣ ಪಾಲಿಸಯ್ಯ ॥ 1 ॥

ಪವಮಾನ ಶಾಸ್ತ್ರಗತ ನವ ಪ್ರಮೇಯಗಳನ್ನು
ಅವನಿಸುರರಿಂದನಿಶ ಶ್ರವಣಗೈದು
ಭವವನಧಿ ನಾವಿಕನೆ ತವನಾಮ ಸಂಸ್ಮರಣ
ದಿವರಾತ್ರಿಯಲಿ ಮಾಳ್ಪಳಿವಳನುದ್ಧರಿಸೋ ॥ 2 ॥

ಕಾಲದೇಶಾನುಕರ್ಮ ಜಾಲದಲಿ ನಿನ್ನ ಮತ
ಲೀಲೆಗಳ ಕಂಡು ಪ್ರಫುಲ್ಲ ಮನದಿ
ಕಾಳೀಶ ಉರಗಾದ್ರಿ ವಾಸ ವಿಠಲ ಹೃದಯ
ಮೂಲದಲಿ ನಿನ್ನ ನೋಳ್ಪಶೀಲ ಕರುಣಿಪುದು[5] ॥ 3 ॥

ಶ್ರೀನಿತ್ಯಾನಂದವಿಠಲರು ಮೂರು ಮಹಿಳೆಯರಿಗೆ ಅಂಕಿತ ನೀಡಿದ್ದಾರೆ. ಈ ದಾಸರುಗಳ ಪರಂಪರೆಯಲ್ಲೇ ಬಂದ ಹರಿದಾಸರು ಮಹಿಳೆಯರಿಗೂ ಅಂಕಿತ ನೀಡುತ್ತಲೇ ಇದ್ದು, ಮಹಿಳಾ ದಾಸ ಸಾಹಿತ್ಯವು ಮುಂದುವರಿಯುತ್ತಲೇ ಇದೆ.

ಅಡಿ ಟಿಪ್ಪಣಿ

ಹೆಸರು	ಪುಸ್ತಕ	ಪುಟ ಸಂಖ್ಯೆ
1. ಎ.ಎನ್. ಅನಂತಸ್ವಾಮಿರಾವ್	ಅಂಕಿತ ಪದ ಮುಕ್ತಾವಳಿ	ಪುಟ–75
2. ಡಾ॥ ಅನಂತಪದ್ಮನಾಭರಾವ್	19ನೇ ಶತಮಾನದ ಹರಿದಾಸ ಸಾಹಿತ್ಯ	ಪುಟ–208
3. ಎ.ಎನ್. ಅನಂತಸ್ವಾಮಿರಾವ್	ಅಂಕಿತ ಪದ ಮುಕ್ತಾವಳಿ	ಪುಟ–97
4. ಗುರುಗೋವಿಂದ ವಿಠಲದಾಸರ ಕೀರ್ತನೆಗಳು	ಸಮಗ್ರ ದಾಸ ಸಾಹಿತ್ಯ, ಸಂ–31, ಭಾಗ–2	ಪುಟ–368
5. ಸಂ: ಎ.ಎನ್. ಸ್ವಾಮಿರಾವ್	ಅಂಕಿತ ಪದ ಮಣಿಮಾಲಾ	ಪುಟ–64

ಉಆ

ಅನುಬಂಧ–3

ಅಪ್ರಕಟಿತ ಕೃತಿಗಳು

ದಾಸ ಮಹಿಳೆಯರಲ್ಲಿ 14 ಮಂದಿಯ ಕೃತಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಮಗ್ರ ದಾಸ ಸಾಹಿತ್ಯದಲ್ಲಿ ಪ್ರಕಟವಾಗಿದೆ. ಆದರೆ ಕೃತಿಗಳು ಪೂರ್ಣವಾಗಿ ಪ್ರಕಟಗೊಂಡಿಲ್ಲ. ಕೆಲವು ದಾಸ ಮಹಿಳೆಯರ ಒಂದೆರಡು ಕೃತಿಗಳು ಮಾತ್ರ ಮುದ್ರಣವಾಗಿದ್ದು ಅಪ್ರಕಟಿತ ಸಾಹಿತ್ಯ ಸಾಕಷ್ಟಿದೆ. ಅಪ್ರಕಟಿತ ಕೃತಿಗಳ ಬಗ್ಗೆ ಇಲ್ಲಿ ತಿಳಿಸಲಾಗಿದೆ.

1. ಅಂಬಾಬಾಯಿ: ಅಂಬಾಬಾಯಿಯವರ ಕೃತಿಗಳು ಸಂಪುಟ–18, ಭಾಗ–3ರಲ್ಲಿ ಪ್ರಕಟವಾಗಿದ್ದರೂ ಅನೇಕ ಕೃತಿಗಳು ಅಪ್ರಕಟಿತವಾಗಿ ಉಳಿದಿವೆ.

   1) ಕಾಂತೇಶ ಕವಚ – 45 ನುಡಿಗಳು

   2) ಕದರಮಂಡಲಗಿ ಪ್ರಾಣದೇವರ ಸ್ತೋತ್ರ 99 ದ್ವಿಪದಿಗಳು

   3) ಸರ್ವಸಿದ್ಧಿ ಪ್ರದಾಯಕ ಸ್ತೋತ್ರ – 61 ನುಡಿಗಳು

   4) ಅನಂತಪದ್ಮನಾಭ ಕಥಾಸಾರ – 36 ಷಟ್ಪದಿಗಳು

   5) ಕಾಣೆನಿಂಥ ಕರುಣ ಗುರುಗಳ – 22 ನುಡಿಗಳು

   6) ಗೋವಿಂದ ಸ್ತುತಿ – 108 ನುಡಿಗಳು

   7) ಶ್ರೀಹರಿ ಗುಣ ಮಾಲೆ – 173 ನುಡಿಗಳು

   8) ಗುರು ಕವಚ – 145 ನುಡಿಗಳು

   9) ನೃಸಿಂಹ ಸ್ತೋತ್ರ – 59 ನುಡಿಗಳು

   10) ತತ್ವ ಸಾರಾಮೃತ – 362 ನುಡಿಗಳು

   11) ಭಾಗವತ ಸಾರೋದ್ಧಾರ – 300 ಸಾಂಗತ್ಯಗಳು

   12) ಚಾಮುಂಡಿ ಸ್ತುತಿ – 200 ಷಟ್ಪದಿಗಳು

   13) ರಾಮಕಥಾಮೃತ ಕಾವ್ಯ – 2516 ನುಡಿಗಳು

2. ಪಿ.ವಿ. ಕೃಷ್ಣಾಬಾಯಿ: ಹಲವಾರು ಕೀರ್ತನೆಗಳು, ಸಂಪ್ರದಾಯದ ಹಾಡುಗಳು, ಕೆಲವು ದೀರ್ಘ ಕೃತಿಗಳು ಎಲ್ಲವೂ ಅಪ್ರಕಟಿತ
3. ಚಂದೂಬಾಯಿ ನಾಯಕ : ಕೀರ್ತನೆಗಳು, ದೀರ್ಘ ಕೃತಿಗಳು
4. ಜಲಜಾ ಗಂಗೂರ : ಕೀರ್ತನೆಗಳು, ದೀರ್ಘ ಕೃತಿಗಳು
5. ಸುಶೀಲ ಕಾಂತರಾವ್: ಸುಮಾರು 2000ಕ್ಕೂ ಮೀರಿದ ಕೃತಿಗಳು, ಕೆಲವು ಬಿಡಿ ಕೀರ್ತನೆಗಳು ಮಾತ್ರ ಪ್ರಕಟವಾಗಿವೆ.

ಅನುಬಂಧ-4 – ಪೀಳಿಗೆಗಳು

ಪರಮ ಪ್ರಿಯ ಸುಬ್ಬರಾಯದಾಸರ ಪೀಳಿಗೆ

ಪಂಗನಾಮ ತಿಮ್ಮಣದಾಸರು (ವೇಣುಗೋಪಾಲ ವಿಠಲ)

↓

ಕಲ್ಲೂರು ಸುಬ್ಬಣ್ಣಾಚಾರ್ಯ (ವ್ಯಾಸ ವಿಠಲ)

- ವೈರಾಗ್ಯಶಾಲಿ ತಮ್ಮಣ್ಣ (ರಘುಪತಿ ವಿಠಲ)
  - ಕೆಂಬಾವಿ ದಾಸಾಚಾರ್ಯ (ಭೂವರಾಹರಘುಪತಿ ವಿಠಲ)
    - ಹರಪನಹಳ್ಳಿ ಶ್ರೀಪತಿದಾಸರು (ಶ್ರೀಪತಿ ವಿಠಲ)
      - ಭುಜಂಗ ದಾಸ (ಗುರುವೆಂಕಟವಿಠಲ)
        - ತಂದೆ ಗುರುವೆಂಕಟ
      - ಹರಪನಹಳ್ಳಿ ವೆಂಕಟದಾಸ (ತಂದೆ ಶ್ರೀಪತಿ ವಿಠಲ)
        - ದೀಪದ ಅಣ್ಣಯ್ಯ (ಶ್ರೀನಿಧಿವಿಠಲ)
          - ಗೋವಿಂದದಾಸ (ತಂದೆ ಶ್ರೀನಿಧಿವಿಠಲ)
          - ಸವದಿರಾಮಚಂದ್ರಪ್ಪ (ಶ್ರೀವರವಿಠಲ
            - ದೊಡ್ಡಬಳ್ಳಾಬಪುರದ ರಾಘವೇಂದ್ರದಾಸ (ಮುದ್ದುಮೋಹನ ವಿಠಲದಾಸರು)
              1. ಅಚಿಂತ್ಯದ್ಭುತವಿಠಲ (ಸುಬ್ಬರಾಯದಾಸರು)
              2. ಜ್ಞಾನದಾಯಕ ವಿಠಲ (ವೆಂಕಟದಾಸರು)
              3. ಬಾಲಕೃಷ್ಣವಿಠಲ (ಬಾಲಕೃಷ್ಣದಾಸರು)
              4. ಕರಿವರವಿಠಲ (ರಾಮದಾಸರು)
              5. ಕರುಣಾಕರ ವಿಠಲ (ರಾಘವೇಂದ್ರದಾಸರು)
              6. ಪರಮಪಾವನ ವಿಠಲ (ಸುಬ್ಬಣ್ಣದಾಸರು)
              7. ತಂದೆ ಮುದ್ದುಮೋಹನ ವಿಠಲ (ಸುಬ್ಬರಾಯದಾಸರ
              8. ವಾಗೀಶ ವಿಠಲ (?)
              9. ವಾಸುಕೀಶಯನವಿಠಲ (ಗುಂಡೂರಾವ್)
              10. ವರದವಿಜಯ ವಿಠಲ (ಶೇಷಾದಾಸರು)
- ಕಲ್ಲೂರು ಭುಜಂಗದಾಸ (ಶ್ರೀನಿವಾಸ ವಿಠಲ)
  - ಕಲ್ಲೂರ ಶ್ರೀನಿವಾಸ ದಾಸ (ತಂದೆ ಶ್ರೀನಿವಾಸ ವಿಠಲ)
    - ತಂದೆ ಕೃಷ್ಣದಾಸ (ಗುರು ಶ್ರೀನಿವಾಸ ವಿಠಲ)

ಸುಬ್ಬರಾಯದಾಸರು
(ತಂದೆ ಮುದ್ದುಮೋಹನ ವಿಠಲ)

- 1. ಅಂಬಾಬಾಯಿ (ಗೋಪಾಲಕೃಷ್ಣ ವಿಠಲ)
  2. ದುರ್ಗದ ಗುಂಡಮ್ಮ (ರುಕ್ಮಿಣೀಶ ವಿಠಲ)
  3. ಸರಸಾಬಾಯಿ (ರಮಾ ವಲ್ಲಭ ವಿಠಲ)

- ಎಸ್.ವಿ. ಹರಿದಾಸ್ (ನಿತ್ಯಾನಂದ ವಿಠಲ)
  1. ಅಂಜಲಿ (ಕಂಜಾಕ್ಷ ರಾಮವಿಠಲ)
  2. ಸುಮಿತ್ರ (ಸುಮಿ) (ಘೃನಿ ನಾಮಕವಿಠಲ)
  3. ಪದ್ಮಜ (ಪದ್ಮಿನೀಪ್ರಿಯವಿಠಲ)

- ಎಂ.ಆರ್. ಗೋವಿಂದರಾಯರು (ಗುರುಗೋವಿಂದ ವಿಠಲ)
  - ಕೆ.ಎಸ್. ವೆಂಕಟೇಶ್
    - ಡಾ॥ ವಿಜಯಲಕ್ಷ್ಮಿ ರಾಘವೇಂದ್ರಾಚಾರ್ಯ (ಮಂಗಳಾಂಗಹರಿ ವಿಠಲ)
  - 1. ರಮಾಬಾ... (ಹರಿತ್ರಿವಿಕ್ರ...
    2. ಉಮಾ ಮಾ... (ವಾಸುಕೀಶ...

ಸಹಾಯಕ ಸಾಹಿತ್ಯ

1. ಅಕ್ಕ ಮಹಾದೇವಿ — ನಂಜನಗೂಡು ತಿರುಮಲಾಂಬಾ
ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, 2009
2. ಅಣ್ಣಿಗೇರಿ ಎಂ.ಎಂ. — ಹರಿದಾಸ ಬೋಧೆ, ಚಾಲುಕ್ಯ ಪ್ರಕಾಶನ, ಧಾರವಾಡ, 1956
3. ಅನಂತ ಪದ್ಮನಾಭರಾವ್ — (1) ಹತ್ತೊಂಬತ್ತನೇ ಶತಮಾನದ ಹರಿದಾಸ ಸಾಹಿತ್ಯ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, 2002
(2) ಸಮಗ್ರ ದಾಸ ಸಾಹಿತ್ಯ, ಅಂಬಾಬಾಯಿಯವರ ಕೀರ್ತನೆಗಳು, ಸಂ–18, ಭಾಗ–3, 2003
(3) ವಿಜಯರಾಮಚಂದ್ರ ವಿಠಲ ಮತ್ತು ಇತರ ಹರಿದಾಸರ ಕೀರ್ತನೆಗಳು, ಸಂ–27, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2003
4. ಅನಂತ ರಂಗಾಚಾರ್ಯ — ಸಂಸ್ಕಾರ ಮಹೋದಧಿಃ, ಅನಂತ ಪ್ರಕಾಶನ, ನಂ:53, ಸಮೀರಪುರ, ಚಾಮರಾಮಪೇಟೆ, ಬೆಂಗಳೂರು, 2008.
5. ಅನಂತ ಸ್ವಾಮಿರಾವ್ ಎ.ಎನ್. — ಸಂ. ಅಂಕಿತ ಪದ ಮುಕ್ತಾವಲಿ, 2009
ಅಂಕಿತ ಸಹಸ್ರ ಶಿಷ್ಯ ನಾಮಾವಳಿ, 2011
ಅಂಕಿತ ಪದ ಮಣಿಮಾಲೆ, 2010
ಕೀರ್ತನ ಚಂದ್ರೋದಯ, 2012
ದಾಸಕೂಟ ಸಭಾ, ದೇವರಾಯನದುರ್ಗ ಮತ್ತು ಗುರುಕೃಪಾ ಗ್ರಂಥ ಮಾಲೆ, ಮೈಸೂರು
6. ಅಪ್ಪಾಜಿಗೌಡ ಅರ್ಜುನಪುರಿ — ನಂಜನಗೂಡು ತಿರುಮಲಾಂಬಾ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, 1995
7. ಅಶ್ವತ್ಥನಾರಾಯಣ ಜಿ. — ದಾಸ ಗಾನ ಸೌರಭ, ಶ್ರೀರಂಗನಾಥ ಪ್ರಕಾಶನ, ಉತ್ತರಹಳ್ಳಿ, ಬೆಂಗಳೂರು, 2012
8. ಅನಂತನಾರಾಯಣ ಎಸ್. — ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ, ಡಿ.ವಿ.ಕೆ. ಮೂರ್ತಿ, ಮೈಸೂರು, 2000
9. ಅರಳುಮಲ್ಲಿಗೆ ಪಾರ್ಥಸಾರಥಿ — ಹರಿದಾಸ ಝೇಂಕಾರ ತರಂಗಿಣಿ, ರಾಘವೇಂದ್ರ ಪ್ರಕಾಶನ, ಬೆಂಗಳೂರು, 1989
10. ಆಲೂರು ವೆಂಕಟರಾವ್ — ಶ್ರೀಮಧ್ವಾಚಾರ್ಯರ ಮೂಲ ಸಿದ್ಧಾಂತ, ಜಿಜ್ಞಾಸ ಮಂಡಲದ ಗ್ರಂಥಮಾಲೆ, ಧಾರವಾಡ, 1946
11. ಇಂದೂಬಾಯಿ ಟಿ.ಕೆ. — ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1987
12. ಇಂದಿರಾಬಾಯಿ ವಾಮನಾಚಾರ್ಯ ಕಟ್ಟಿ — ಹರಿಭಕ್ತಿ ಪದಗಳ ಸಂಗ್ರಹ, ಪವಮಾನ ಮುದ್ರಣಾಲಯ, ಧಾರವಾಡ, 1983

13. ಎಚ್ಚೆಸ್ಕೆ — ಸಂ. ದಾಸ ಸಾಹಿತ್ಯ ದರ್ಶನ, ಸಂ–1, ಮಂಗಳಭಾರತಿ ಪ್ರಕಾಶನ, ಮೈಸೂರು, 1984

ದಾಸ ಸಾಹಿತ್ಯ ದರ್ಶನ, ಸಂ–2, ಸೋಮೇಶ್ವರ ಬಡಾವಣೆ, ಹುಳಿಮಾವು, ಬೆಂಗಳೂರು, 2012

14. ಕಲಮದಾನಿಗುರುರಾಯರು — ಹರಿದಾಸರ ಕಥೆಗಳು, ಸಿಟಿ ಬುಕ್ ಸ್ಟಾಲ್, ಹುಬ್ಬಳ್ಳಿ, 1959

15. ಕೃಷ್ಣದಾಸರು ಮುರಗೋಡು — ಸಂ. ಭಜನ ಚಂದ್ರಿಕಾ, ಗಂಗಾವತಿ, 1945

16. ಕೃಷ್ಣರಾವ್ ಕೆ.ಎಂ. — 1) ದಾಸಸಾಹಿತ್ಯದಲ್ಲಿ ದ್ವೈತ ಪ್ರಮೇಯಗಳು, ದ್ವೈತ ವೇದಾಂತ ಮತ್ತು ಸಂಶೋಧನ ಪ್ರತಿಷ್ಠಾನ, ಬೆಂಗಳೂರು, 1986

2) ಶ್ರೀಜಗನ್ನಾಥದಾಸರು, ಉಷಾ ಸಾಹಿತ್ಯ ಮಾಲೆ, ಮೈಸೂರು, 1956

17. ಕೃಷ್ಣಮೂರ್ತಿ ಮತಿಘಟ್ಟ — ಗೃಹಿಣೀ ಗೀತೆಗಳು, ಇಳಾ ಮುದ್ರಣಾಲಯ, ಕೆಂಪೇಗೌಡನಗರ, ಬೆಂಗಳೂರು, 1982

18. ಕೇಶವದಾಸರು ಬೇಲೂರು — 1) ಶ್ರೀಹರಿದಾಸ ಸಾಹಿತ್ಯ, ಗೀತಾ ಬುಕ್ ಹೌಸ್, ಮೈಸೂರು, 1960

2) ಕರ್ನಾಟಕ ಭಕ್ತ ವಿಜಯ, ಸುಬೋಧ ಪ್ರಕಟಣಾಲಯ, ಬೆಂಗಳೂರು, 1963

19. ಕಾವ್ಯ ಪ್ರೇಮಿ — ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು, ಸಮಾಜ ಪುಸ್ತಕಾಲಯ, ಧಾರವಾಡ, 1976

20. ಕೊರಟಿ ಶ್ರೀನಿವಾಸರಾವ್ — ದಾಸ ಸಾಹಿತ್ಯ ಪ್ರವರ್ತಕರು, ಆನಂದ ನಿಲಯ ಪ್ರಕಾಶನ, 1982

21. ಕೋಲಾರ ಪದ್ಮಾಬಾಯಿ — ಸುಜ್ಞಾನ ಪ್ರಸಾರ ಸುಮಾವಳಿ ಸೌರಭ, ಭಾಗ–1 ಮತ್ತು 2, ಪ್ರ: ಕೋಲಾರ ಜಗನ್ನಾಥರಾವ್ ಮತ್ತು ಸಹೋದರರು, 2009

22. ಕೃಷ್ಣಾಬಾಯಿ ಪಿ.ವಿ. — ಅಪ್ರಕಟಿತ

23. ಗೀತಾಚಾರ್ಯ ನಾ. — ಶ್ರೀವಾಸುದೇವ ಮಹಿಮಾ, ಸದ್ಗುರು ವಾಸುದೇವಾಚಾರ್ಯ ಅಧ್ಯಯನ ಕೇಂದ್ರ, ಬೆಂಗಳೂರು, 2009.

24. ಗೀತಾಚಾರ್ಯ ನಾ. ಮತ್ತು ನೀ.ಕೃ. ರಾಮಶೇಷನ್ — 1) ಯದುಗಿರಿಯಮ್ಮನವರ ಕೀರ್ತನೆಗಳು, ನಾರಾಯಣ ಶರ್ಮ ಸಾಂಸ್ಕೃತಿಕ ಕೇಂದ್ರ, ಬೆಂಗಳೂರು, 2003

2) ಸಮಗ್ರ ದಾಸ ಸಾಹಿತ್ಯ, ಸಂ.18, ಭಾಗ–4, ಯದುಗಿರಿಯಮ್ಮನವರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2003

25. ಗೋಕುಲನಾಥ್ ಕೆ. — 1) ಶ್ರೀವಿಜಯದಾಸರು, 1978

2) ಹರಿದಾಸರ ನಿಂದಾಸ್ತುತಿಗಳು, ಸಿಂಧುಶಯನ ಪ್ರಕಾಶನ, ಬೆಂಗಳೂರು, 1987

26. ಗುಡಿ ಆರ್.ಜಿ. — ದಾಸ ಸಾಹಿತ್ಯ ಒಂದು ಸೈದ್ಧಾಂತಿಕ ಅಧ್ಯಯನ, ಶ್ರೀನಿಧಿ ಪ್ರಕಾಶನ, ವಿದ್ಯಾನಗರ, ಅಥಣಿ, 1994

27. ಗೋದಾವರಿಬಾಯಿ ಕುಲಕರ್ಣಿ; ಸಂ: ವಿಜಯಾ ಕುಲಕರ್ಣಿ — ಭಕ್ತಿ ಗೀತೆಗಳು, ನವೀನ್ ಪ್ರಿಂಟರ್ಸ್, ಮುಂಬೈ, 2010

28. ಗಂಗಾ ಪಾದೇಕಲ್ — ಮುಳಿಯ ಮೂಕಾಂಬಿಕಾ ಅಮ್ಮ, ಉಡುಪಿ ಸಾಹಿತ್ಯ ಪರಿಷತ್ತು, 2007

29. ಜಯಸಿಂಹ — ತಂದೆ ಮುದ್ದುಮೋಹನದಾಸ ದರ್ಶನ, ಪರಿಮಳ ಪ್ರಕಾಶನ, ಬೆಂಗಳೂರು, 2002

30. ಜಯಲಕ್ಷ್ಮೀಮಂಗಳಮೂರ್ತಿ — ಆಧುನಿಕ ದಾಸ ಸಾಹಿತ್ಯ, ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ, 2004

31. ಜ್ಯೋತಿ — ದೊಡ್ಡಿ ಸುಧಾಬಾಯಿಯವರ ಕೀರ್ತನೆಗಳು, ಒಂದು ಅಧ್ಯಯನ, ಎಂ.ಫಿಲ್, ಪ್ರಬಂಧ, ಗುಲ್ಬರ್ಗ ವಿಶ್ವವಿದ್ಯಾಲಯ (ಅಪ್ರಕಟಿತ)

32. ಧಾರವಾಡಕರ ರಾ.ಯ. — ಹೊಸಗನ್ನಡ ಸಾಹಿತ್ಯದ ಉದಯಕಾಲ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1975

33. ನಾಗರತ್ನ ಟಿ.ಎನ್. —
1) ಶ್ರೀವಾದಿರಾಜರ ಕೃತಿಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, 1980
2) ಹರಿದಾಸರ ಭಕ್ತಿ ಸ್ವರೂಪ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, 1986
3) ಶ್ರೀಪಾದರಾಜರು, ಪ್ರಸಾರಾಂಗ, ಹಂಪಿ ವಿಶ್ವವಿದ್ಯಾಲಯ, 2004
4) ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1984
5) ಸಿರಿಗಂಗಾ ಜನಕ ಕೀರ್ತನ ಕುಸುಮಾಂಜಲಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 2002

34. ನಾಗರತ್ನ ಟಿ.ಎನ್. ಅಕ್ಕಮಹಾದೇವಿ —
1) ಹರಪನಹಳ್ಳಿ ಭೀಮವ್ವನ ಕೀರ್ತನೆಗಳು ಸಮಗ್ರದಾಸ ಸಾಹಿತ್ಯ ಸಂಪುಟ–19, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2003

35. ನಾರಾಯಣ ಪ್ರಸಾದ್ ಕೆ. — ಹೊಸಗನ್ನಡ ಕವಿತೆಯ ಛಂದಸ್ಸು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1997

36. ನಾವಡ ಎ.ವಿ. ಗಾಯತ್ರಿ ನಾವಡ — ಸಾವಿರಾರು ಕೀರ್ತನೆಗಳು, ಅಂಕಿತ ಪುಸ್ತಕ, ಗಾಂಧಿಬಜಾರ್, ಬಸವನಗುಡಿ, ಬೆಂಗಳೂರು, 2002

37. ಪವನ್ ಕುಮಾರ್ ಜಿ. — ಹೂವ ಕೊಡೆ ತಾಯಿ, ಇಂದಿರೇಶ ಪ್ರಕಾಶನ, ಗಂಗಾವತಿ, 2002

38. ಪದ್ಮಾಮೂರ್ತಿ ಎಚ್.ಎಸ್. — ಸಮಗ್ರದಾಸ ಸಾಹಿತ್ಯ, ಸಂ:–18, ಭಾಗ–4, ನಾಡಿಗರ ಶಾಂತಿಬಾಯಿ, ಗುಂಡಮ್ಮ, ಸರಸಾಬಾಯಿಯವರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2003

39. ಪಂಚಮುಖಿ ಎಸ್.ಆರ್. — ಕರ್ನಾಟಕ ಹರಿದಾಸ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1952

40. ಪಂಡರೀನಾಥಾಚಾರ್ಯ ಗಲಗಲಿ — ಮಾಧ್ವ ವಾಙ್ಮಯ ತಪಸ್ವಿಗಳು, ತತ್ವವಾದ ಆಫೀಸು, ಗದಗ, 1969

41. ಬಸವಾರಾಧ್ಯ — ಚಂದ್ರಹಾಸನ ಕಥೆ, ಕನ್ನಡ ಸಾಹಿತ್ಯ ಪರಿಷತ್ತು, 1976
42. ಮಧುಮತಿ ದೇಶಪಾಂಡೆ — ಶ್ರೀಮೋಹನದಾಸರು, ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಮಂತ್ರಾಲಯ, 2004
43. ಮುರಳೀಧರ ಎಚ್.ಎನ್. — ಈ ಪರಿಯ ಸೊಬಗು, ಪ್ರಸಾರಾಂಗ, ಹಂಪಿ ವಿಶ್ವವಿದ್ಯಾಲಯ, 2010
44. ಮಂಗಳಾ ಚಿ.ನ. — ನಂಜನಗೂಡು ತಿರುಮಲಾಂಬಾ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2009
45. ಮೀನಾರಾವ್, ನಳಿನಿ ವೆಂಕಟೇಶ್ — ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4 ಸರಸ್ವತಿಬಾಯಿಯವರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2003
46. ಮಂಜುಳಾ ಸುಬ್ಬರಾವ್ — ಸಮಗ್ರ ಕೃತಿಗಳು
47. ರಮಾ ಕಲ್ಲೂರಕರ — ಶ್ರೀಗೊರಬಾಳ ಹನುಮಂತರಾಯರು, ಶ್ರೀರಾಘವೇಂದ್ರ ಸ್ವಾಮಿಗಳವರ ಮಠ, ಮಂತ್ರಾಲಯ, 2007
48. ರಾಮಶೇಷನ್ ನೀ.ಕೃ. — ಹರಿದಾಸ ಆಂದೋಲನ, ತಿರುಪತಿ ತಿರುಮಲ ದೇವಸ್ಥಾನ ದಾಸ ಸಾಹಿತ್ಯ ಪ್ರಾಜೆಕ್ಟ್, 1991
49. ರಾಮಚಂದ್ರರಾವ್ ಸಾ.ಕೃ. — ದಾಸ ಸಾಹಿತ್ಯ ಮತ್ತು ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು, 2003
50. ರುಕ್ಮಿಣಿ ಗಿರಿಮಾಜಿ —
1) ರುಕ್ಮಿಣೀ ವರದ, ಮತ್ತೀಕೆರೆ, ಬೆಂಗಳೂರು, 1984
2) ಸದ್ವೈಷ್ಣವ ಹರಿದಾಸ ಮಹಿಳೆಯರು, ಪ್ರ: ಡಿ.ಎಲ್.ಎನ್. ರಾವ್, ಬೆಂಗಳೂರು, 2008
3) ಸಮಗ್ರ ದಾಸ ಸಾಹಿತ್ಯ, ಸಂ–18, ಭಾಗ–4, ಓರವಾಯಿ ಲಕ್ಷ್ಮೀದೇವಮ್ಮ, ಬಳ್ಳಾರಿ ರಾಧಾಬಾಯಿಯವರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2003
51. ಲಕ್ಷ್ಮೀದೇವಿ ಎಂ.ಆರ್. — ಗಲಗಲಿ ಅವ್ವ, ತಿರುಮಲ ತಿರುಪತಿ ದೇವಸ್ಥಾನದ ಪ್ರಕಟಣೆ, 2011
52. ಲೀಲಾವತಿ ಎಸ್. ರಾವ್ — ಸಮಗ್ರ ದಾಸ ಸಾಹಿತ್ಯ
1) ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು, ಸಂ–18, ಭಾಗ–1
2) ನಿಡಗುರುಕಿ ಜೀವೂಬಾಯಿಯವರ ಕೀರ್ತನೆಗಳು, ಸಂ–18, ಭಾಗ–2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2003

53. ವರದರಾಜರಾವ್ ಜಿ	1) ಹರಿದಾಸ ಸಾಹಿತ್ಯ ಸಮೀಕ್ಷೆ, 1980 2) ಶ್ರೀಪಾದರಾಜರ ಕೃತಿಗಳು, 1987 3) ಹರಿದಾಸ ಸಾಹಿತ್ಯ ಸಾರ, 1987, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ 4) ಹರಿಭಕ್ತಿ ವಾಹಿನಿ, ವಿಶ್ವ ಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ, ಬೆಂಗಳೂರ, 1983
54. ವಸಂತ ಕುಷ್ಟಗಿ	ದಾಸ ಸಾಹಿತ್ಯದ ಹಾದಿಯಲ್ಲಿ, ಶ್ರೀಬತ್ತೇರೇಶ ಪ್ರಕಾಶನ, ಕಲಬುರ್ಗಿ, 1986
55. ವಸಂತ ಭಾರದ್ವಾಜ ಕಬ್ಬಿನಾಲೆ	ಯಕ್ಷಗಾನ ಛಂದಸ್ಸು, ಜಾನಪದ ಕಲೆಗಳ ಅಧ್ಯಯನ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ, 1998
56. ವಾಗೀಶ್ವರಿ ಶಾಸ್ತ್ರಿ	ಹೃದಯ ಸಂಪುಟ, ರಾಷ್ಟ್ರೋತ್ಥಾನ ಮುದ್ರಣಾಲಯ, ಕೆಂಪೇಗೌಡನಗರ, ಬೆಂಗಳೂರು, 1985
57. ವಿಜಯಲಕ್ಷ್ಮಿ ರಾಘವೇಂದ್ರಾಚಾರ್ಯ	ಸಮಗ್ರ ಕೃತಿಗಳು
58. ವಿಷ್ಣು ಭಟ್ಟ ಪಾದೇಕಲ್ಲು	ಯಕ್ಷಗಾನ ಭಾಗವತ ಪ್ರಸಂಗಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006
59. ವಿಜಯ ನಳಿನಿ ರಮೇಶ್	ಯಕ್ಷಗಾನ ಪ್ರಸಂಗಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006
60. ವೇದವ್ಯಾಸಾಚಾರ್ ಎಚ್.ಕೆ.	ಕರ್ನಾಟಕದ ಹರಿದಾಸರು, ಶ್ರೀಪರಿಮಳ ಸಂಶೋಧನ ಮತ್ತು ಪ್ರಕಾಶನ ಮಂದಿರ, ನಂಜನಗೂಡು, 1965
61. ವೆಂಕಟೇಶ ಮೂರ್ತಿ ಎಚ್.ಎಸ್.	1) ಕನ್ನಡದಲ್ಲಿ ಕಥನ ಕವನಗಳು ಕೃತಿ, ತ್ಯಾಗರಾಜನಗರ, ಬೆಂಗಳೂರು, 1987 2) ಕೀರ್ತನಕಾರರು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, 1975
62. ವೆಂಕಟೇಶ್ ಜಿ.	ದಾಸ ಸಾಹಿತ್ಯ ಕೋಶ, ಪ್ರಿಸಂ ಬುಕ್ಸ್ ಪ್ರೈವೇಟ್ ಲಿ., ಬೆಂಗಳೂರು, 2010
63. ವೆಂಕಟಾಚಲ ಶಾಸ್ತ್ರಿ ಟಿ.ವಿ.	ಶಾಸ್ತ್ರೀಯ ಸಂಪುಟ–2, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು, 1999
64. ಶಿವಮೂರ್ತಿ ಶಾಸ್ತ್ರಿ	ಜೈಮಿನಿ ಭಾರತ, ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, 1956
65. ಶಾಸ್ತ್ರಿ ಬಿ.ವಿ.ಕೆ.	ಗಾನ ಕಲಾಮಂಜರಿ, ಸಂ–2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1998
66. ಶ್ರೀನಿವಾಸ ಹಾವನೂರ	ಹೊಸಗನ್ನಡದ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1974

67. ಶ್ರೀಮತಿರಾವ್ ಬಿ.ಕೆ.	1) ಭಕ್ತಿ ಗಂಗಾಲಹರಿ, ಶ್ರೀಗುರುಪ್ರಿಯ ಪ್ರಕಾಶನ ಮಂದಿರ, ಮಂಗಳೂರು, 2010 2) ತೌಳವ ದಾಸ ದರ್ಶನ, ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ. ಕನ್ನಡ, 2008 3) ಹರಿದಾಸ ವಿಜಯ, ಗುರುಕೃಪಾ ಗ್ರಂಥ ಮಾಲೆ, ಮೈಸೂರು, 2008
68. ಸರೋಜಾ ಬಿ.ಎಸ್.	ಸಂಪ್ರದಾಯದ ಹಾಡುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1978
69. ಸರೋಜಿನಿ ಮಹಿಷಿ	ಕರ್ನಾಟಕ ಕವಯತ್ರಿಯರು, ಕರ್ನಾಟಕ ಸರ್ಕಾರಿ ಸಾಹಿತ್ಯ ಸಂಘ, ಧಾರವಾಡ, 1964
70. ಸರಿತಾಕುಸುಮಾಕರ ದೇಸಾಯಿ	ಭೀಮೇಶ ಕೃಷ್ಣ, ರಾಘವೇಂದ್ರ ಪ್ರಕಾಶನ, ಬೆಂಗಳೂರು, 1984
71. ಸರೋಜಾ ಬಾಯಿ (ಗಂಗಾ)	ಶ್ರೀನಿವಾಸ ಕಲ್ಯಾಣ ಮತ್ತು ಇತರ ಕೃತಿಗಳು, ಬನಸಿರಿ ಪ್ರಕಾಶನ, ಶಿವನಗರ, ಬೆಂಗಳೂರು, 2010
72. ಸೀತಾಬಾಯಿ ರಾ. ಪುರೋಹಿತ	ಹರಿಕಡಲಾಮೃತ, ಭಾಗ–1–2, ಶ್ರೀವೆಂಕಟೇಶ್ವರ ಪ್ರಿಂಟರ್ಸ್, ಬೆಂಗಳೂರು–13, 2003
73. ಸುಧಾಬಾಯಿ ದೊಡ್ಡಿ	ಕಪಿಲಾಂತರಂಗ ಸುಧಾ, ವೆಂಕಟಚಂದ್ರ ಬೆಳ್ಳಿ ಪ್ರಕಾಶನ, ಬಳ್ಳಾರಿ, 2003
74. ಸಂಪತ್ಕುಮಾರಾಚಾರ್ಯ ವಿ.ಎಸ್. ರಾಮರತ್ನಂ ವಿ.	ಕರ್ನಾಟಕ ಸಂಗೀತ ದೀಪಿಕೆ, ಡಿ.ವಿ.ಕೆ. ಮೂರ್ತಿ ಕೃಷ್ಣ ಮೂರ್ತಿಪುರಂ, ಮೈಸೂರು, 2000
75. ಹಣಮಂತ ತಾಸಗಾಂವಕರ	1) ಪ್ರಥಮ ಹರಿದಾಸ ಮಹಿಳೆ ಗಲಗಲಿ ಅವ್ವ, ಪುಸ್ತಕ ಶಕ್ತಿ, ಟಾಟಾ ಸಿಲ್ಕ್ ಫಾರ್ಮ್, ಬೆಂಗಳೂರು, 2002 2) ಬಾಗಲಕೋಟೆ ಜಿಲ್ಲೆಯ ಹರಿದಾಸರು, ಸುಧನ್ವ ಪ್ರಕಾಶನ, ಬಾಗಲಕೋಟೆ, 2008 3) ಗಲಗಲಿ ಅವ್ವನವರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2006 4) ಸಮಗ್ರ ದಾಸ ಸಾಹಿತ್ಯ, ಸಂ–7, ಗಲಗಲಿ ಅವ್ವನವರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2003
76. ಹಯವದನ ಪುರಾಣಿಕ	ಲಕ್ಷ್ಮೀ ಶೋಬಾನೆ, ಒಂದು ಅಧ್ಯಯನ, ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು, 1992
77. ಹಾ.ಮಾ. ನಾಯಕ, ಸಿ.ಪಿ. ಕೃಷ್ಣಕುಮಾರ	ಕನ್ನಡ ಛಂದಸ್ಸಿನ ಚರಿತ್ರೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1980
78. ವಿವಿಧ ಲೇಖಕರು: ಸಂ: ಎಂ.ಆರ್. ಲಕ್ಷ್ಮೀದೇವಿ	ಅಜ್ಞಾತ ಕವಯತ್ರಿಯರು, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, 1984

English:

1) A.P. Karamarakar and N.B. Kalamadani — Mystic Teachings of Haridasas of Karnataka, Karnataka Vidya Vardhaka Sangha, Dharward, 1939
2) Dr. M.V. Krishna Rao — Purandaradasa and Haridasa Movement, Karnataka University, Dharwar, 1966

ಲೇಖನಗಳು:

1) ಅನಂತಪದ್ಮನಾಭರಾವ್ — ಯಶೋದೆ ವಿರಚಿತ ಲವಕುಶ ಕಥೆ, ಪ್ರಬುದ್ಧ ಕರ್ನಾಟಕ, ಸಂ–53, ಸಂಚಿಕೆ, 4, 5, 1972
2) ಅನ್ನಪೂರ್ಣ ಎಸ್. ಗಂಗಾಣಿ — ಯದುಗಿರಿಯಮ್ಮ, ಒಂದು ಪರಿಚಯ, ವಿಜಯ ಸಂಪದ, ಮಾರ್ಚ್ 2011
3) ಇತಿಹಾಸ ಕಥನ — ಹೆಳವನಕಟ್ಟೆ ಗಿರಿಯಮ್ಮನ ಕಾಲದ ಮೇಲೆ ಹೊಸ ಬೆಳಕು, ವಿಜಯಸಂಪದ, ಮಾರ್ಚ್ 2006
4) ಡಾ॥ ಕೆ. ಗೋಕುಲನಾಥ್ — ಶ್ರೀವಿಜಯದಾಸರ ಮೃದು ಪಂಚರತ್ನ, ಹರಿದಾಸ ವಾಹಿನಿ, 2012
5) ಸುಮನಾ ಬದರೀನಾಥ್ — ಎಲೆಮರೆಯ ಕಾಯಿ ಶಾಂತಿಬಾಯಿ, ವಿಜಯ ಸಂಪದ, ಜನವರಿ 2011
6) ಸುಮನಾ ಬದರೀನಾಥ — ಹರಿದಾಸಿಯರ ಸಾಹಿತ್ಯ ಸೃಷ್ಟಿ, ಭಾಗ–3, ವಿಜಯಸಂಪದ, ಆಗಸ್ಟ್ 2011
   ಹರಿದಾಸಿಯರ ಸಾಹಿತ್ಯ ಸೃಷ್ಟಿ, ಭಾಗ–4, ವಿಜಯಸಂಪದ, ಸೆಪ್ಟೆಂಬರ್ 2011
7) ಸುಮತೀಂದ್ರ ನಾಡಿಗ — ಸಾಂಪ್ರದಾಯಿಕ ಹಾಡುಗಳು, ಸಿರಿಯಜ್ಜಿ, ಹರಪನಹಳ್ಳಿ ಭೀಮವ್ವ, ವಿಜಯಸಂಪದ, ನವೆಂಬರ್ 2006
8) ಬಿ.ಕೆ. ಶ್ರೀಮತಿ ರಾವ್ — ಕರ್ನಾಟಕ ಮಹಿಳಾ ಹರಿದಾಸರು, ಹರಿದಾಸ ವಾಹಿನಿ, ಫೆಬ್ರವರಿ 2011